ಎ.ಕೆ. ರಾಮಾನುಜನ್ : ಸಾಹಿತ್ಯ, ಸಾಂಸ್ಕೃತಿಕ ಅನುಸಂಧಾನ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿರುವ ಮಹಾಪ್ರಬಂಧ

ಸಂಶೋಧಕರು
ಷಣ್ಮುಖಾನಂದ

ಸಂಶೋಧನಾ ಮಾರ್ಗದರ್ಶಕರು
ಡಾ. ಕರೀಗೌಡ ಬೀಚನಹಳ್ಳಿ
ಎಮಿರಿಟಸ್ ಪ್ರಾಧ್ಯಾಪಕರು
ಭಾಷಾಂತರ ಅಧ್ಯಯನ ವಿಭಾಗ
ಭಾಷಾ ನಿಕಾಯ

ಭಾಷಾನಿಕಾಯ
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬
೨೦೧೭

796

ಎ.ಕೆ. ರಾಮಾನುಜನ್: ಸಾಹಿತ್ಯ, ಸಾಂಸ್ಕೃತಿಕ ಅನುಸಂಧಾನ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿರುವ ಮಹಾಪ್ರಬಂಧ

ಸಂಶೋಧಕರು
ಷಣ್ಮುಖಾನಂದ
ನೋ.ಸಂ. ೧೧೦೨

ಸಂಶೋಧನಾ ಮಾರ್ಗದರ್ಶಕರು
ಡಾ. ಕರೀಗೌಡ ಬೀಚನಹಳ್ಳಿ
ಎಮಿರಿಟಸ್ ಪ್ರಾಧ್ಯಾಪಕರು
ಭಾಷಾಂತರ ಅಧ್ಯಯನ ವಿಭಾಗ
ಭಾಷಾ ನಿಕಾಯ

ಭಾಷಾನಿಕಾಯ
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೧೭

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀ ಷಣ್ಮುಖಾನಂದ ಅವರು **'ಎ. ಕೆ. ರಾಮಾನುಜನ್: ಸಾಹಿತ್ಯ, ಸಾಂಸ್ಕೃತಿಕ ಅನುಸಂಧಾನ'** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಭಾಷಾಂತರ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

(ಡಾ. ಕರೀಗೌಡ ಬೀಚನಹಳ್ಳಿ)
ಎಮಿರಿಟಸ್ ಪ್ರಾಧ್ಯಾಪಕರು
ಭಾಷಾಂತರ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ದಿನಾಂಕ: 31.8.2017
ಸ್ಥಳ: ವಿದ್ಯಾರಣ್ಯ

ಪ್ರಮಾಣ ಪತ್ರ

'ಎ. ಕೆ. ರಾಮಾನುಜನ್: ಸಾಹಿತ್ಯ, ಸಾಂಸ್ಕೃತಿಕ ಅನುಸಂಧಾನ' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು **ಡಾ. ಕರೀಗೌಡ ಬೀಚನಹಳ್ಳಿ**, ಪ್ರಾಧ್ಯಾಪಕರು, ಭಾಷಾಂತರ ಅಧ್ಯಯನ ವಿಭಾಗ, ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

(ಷಣ್ಮುಖಾನಂದ)
ಸಂಶೋಧಕರು
ಭಾಷಾಂತರ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ದಿನಾಂಕ: 31/8/17
ಸ್ಥಳ: ವಿದ್ಯಾರಣ್ಯ

ಕೃತಜ್ಞತೆಗಳು

'ಎ. ಕೆ. ರಾಮಾನುಜನ್: ಸಾಹಿತ್ಯ, ಸಾಂಸ್ಕೃತಿಕ ಅನುಸಂಧಾನ' ಎಂಬ ವಿಷಯದ ಸಂಶೋಧನಾ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಲು ನನಗೆ ತುಂಬಾ ಸಂತೋಷವೆನಿಸುತ್ತಿದೆ. ನನ್ನ ಈ ಸಂಶೋಧನೆಯ ಹಾದಿಯಲ್ಲಿ ಹಾಗೂ ಇಲ್ಲಿವರೆಗು ಸಾಗಿ ಬಂದಿರುವ ಜೀವನ ಹಾದಿಯಲ್ಲಿ ನೆರವಾದವರನ್ನು ಸ್ಮರಿಸುವುದು ನನ್ನ ಆದ್ಯ ಕರ್ತವ್ಯವೆಂದು ಭಾವಿಸುತ್ತೇನೆ.

ನನ್ನ ಸಂಶೋಧನೆಯ ವಿಷಯದಲ್ಲಿ ಪೂರ್ಣಪ್ರಮಾಣದ ಸಹಕಾರ ನೀಡಿದ್ದಲ್ಲದೇ ಸದಾ ಸಂಶೋದನೆಯ ವಿಷಯವನ್ನು ಕುರಿತು ಚರ್ಚಿಸುತ್ತಾ ಬರವಣಿಗೆಯ ಓರೆಕೋರೆಗಳನ್ನು ಬಹು ಮುತುವರ್ಜಿಯಿಂದ ತಿದ್ದಿ ಆತ್ಮೀಯತೆಯಿಂದ ಮಾರ್ಗದರ್ಶನ ಮಾಡಿದ ಕನ್ನಡದ ಖ್ಯಾತ ಕತೆಗಾರರು ಹಾಗೂ ಭಾಷಾಂತರ ಅಧ್ಯಯನ ವಿಭಾಗದ ಪ್ರಾಧ್ಯಾಪಕರೂ ಮತ್ತು ಮಾರ್ಗದರ್ಶಕರೂ ಆದ ಡಾ.ಕರೀಗೌಡ ಬೀಚನಹಳ್ಳಿ ಹಾಗೂ ಅವರ ಪತ್ನಿ ಕತೆಗಾರ್ತಿ ಶ್ರೀಮತಿ ಕುಸುಮಾ ಅಬ್ಲೂರು ಮತ್ತು ಅವರ ಕುಟುಂಬವರ್ಗದವರೆಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಹಂಪಿ ವಿಶ್ವವಿದ್ಯಾಲಯದ ಪ್ರಸ್ತುತ ಕುಲಪತಿಗಳಾದ ಡಾ. ಮಲ್ಲಿಕಾ ಎಸ್. ಘಂಟಿ ಅವರಿಗೂ ಮತ್ತು ಹಿಂದಿನ ಕುಲಪತಿಗಳಾದ ಡಾ. ಹಿ.ಚಿ.ಬೋರಲಿಂಗಯ್ಯ ಅವರಿಗೂ, ಕುಲಸಚಿವರಾದ ಡಾ. ಡಿ.ಪಾಂಡುರಂಗಬಾಬು ಹಾಗೂ ಅಧ್ಯಯನಾಂಗದ ಹಿಂದಿನ ನಿರ್ದೇಶಕರಾದ ಡಾ. ಕೆ.ರವೀಂದ್ರನಾಥ ಮತ್ತು ಇಂದಿನ ನಿರ್ದೇಶಕರಾದ ಡಾ. ಶಿವಾನಂದ ವಿರಕ್ತಮಠ ಅವರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ವಿದ್ಯಾರ್ಥಿಗಳ ಏಳಿಗೆಯ ಬಗ್ಗೆ ಅಪಾರವಾದ ಕಾಳಜಿಯನ್ನು ವಹಿಸುವ ಭಾಷಾಂತರ ಅಧ್ಯಯನ ವಿಭಾಗದ ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರಾದ ಡಾ. ವಿಠಲರಾವ್ ಗಾಯಕ್ವಾಡ್, ಅಂತರಿಕ ವಿಷಯ ತಜ್ಞರಾದ ಪ್ರಾಧ್ಯಾಪಕ ಡಾ. ಎ.ಸುಬ್ಬಣ್ಣ ರೈ ಹಾಗೂ ಭಾಷಾನಿಕಾಯದ ಡೀನ್ ಹಾಗೂ ಪ್ರಾಧ್ಯಾಪಕರಾದ ಡಾ. ಎ.ಮೋಹನ ಕುಂಟಾರ್ ಅವರುಗಳ ಸಲಹೆ ಮತ್ತು ಮಾರ್ಗದರ್ಶನಕ್ಕಾಗಿ ನನ್ನ ವಂದನೆಗಳು. ಭಾಷಾಂತರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಎಂ.ಉಷಾ ಹಾಗೂ ಸಹಪ್ರಾಧ್ಯಾಪಕರಾದ ಡಾ. ಕೆ.ಸಿ.ಶಿವಾರೆಡ್ಡಿ ಅವರಿಗೆ ನನ್ನ ಕೃತಜ್ಞತೆಗಳು.

ಸಾಹಿತ್ಯ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ರಹಮತ್ ತರಿಕೆರೆ, ಡಾ. ಅಮರೇಶ ನುಗಡೋಣಿ, ಜಾನಪದ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಮೊಗಳ್ಳಿ ಗಣೇಶ್, ಇತಿಹಾಸ ವಿಭಾಗದ ಪ್ರಾಧ್ಯಾಪಕರಾದ ಡಾ. ಸಿ.ಆರ್.ಗೋವಿಂದರಾಜು, ಗ್ರಂಥಾಲಯದ ಮುಖ್ಯಸ್ಥರಾದ ಡಾ. ಎಚ್.ನಾಗವೇಣಿ, ಪ್ರಸಾರಾಂಗದ ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನಮೂರ್ತಿ ಇವರುಗಳಿಗೆ ನನ್ನ ಆತ್ಮೀಯ ಕೃತಜ್ಞತೆಗಳು.

ಚಿಕ್ಕಂದಿನಿಂದಲೇ ಈ ಆಧುನಿಕ ಜಗತ್ತಿಗೆ ಹೊಂದಿಕೊಳ್ಳುವಂತೆ ಮಾನಸಿಕವಾಗಿ ಮತ್ತು ದೈಹಿಕವಾಗಿ 'ನನ್ನನ್ನು' ರೂಪಿಸಿದ ನನ್ನ ಮಾವಂದಿರಾದ ಶ್ರೀ ಬಿ.ವಿ.ಸ್ವಾಮಿ ಮತ್ತು ಶ್ರೀ ಬಿ.ಚಂದ್ರಶೇಖರ್ ಅವರಿಗೆ ಹಾಗೂ ಸಾಹಿತ್ಯ ಮತ್ತು ಸಾಂಸ್ಕೃತಿಕ ವಾತಾವರಣಕ್ಕೆ ನನ್ನನ್ನು ಪರಿಚಯಿಸಿ ನನಗೆ ಹೊಸ ಬದುಕನ್ನು ಕಲ್ಪಿಸಿ, ಕಲಿಯುಲು ಅವಕಾಶ ಮಾಡಿಕೊಟ್ಟ ಶ್ರೀಮತಿ ಎನ್. ಲಕ್ಷ್ಮೀ ಶರ್ಮಾ ಮತ್ತು ಶ್ರೀ ಎನ್. ವಿ. ವಾಸುದೇವ ಶರ್ಮಾ ಹಾಗೂ ಇವರ ಪರಿಚಯಕ್ಕೆ ಕಾರಣರಾದ ಶ್ರೀ ವಿಶ್ವವಿನ್ಯಾಸ (ಪ್ರವೀಣ್) ಅವರಿಗೆ ನಾನು ಸದಾ ಋಣಿ.

ನನಗೆ ಹಲವಾರು ಮೌಲಿಕ ವಿಷಯಗಳನ್ನು ಕಲಿಸಿದ ಹಾಗೂ ನಾನು ಈ ಹಿಂದೆ ಕೆಲಸ ಮಾಡಿದ ಪ್ರಕಾಶನ ಸಂಸ್ಥೆಗಳಾದ 'ಬ್ಲೂ ಚಿಪ್ ಪಬ್ಲಿಷಿಂಗ್' ಸಂಸ್ಥೆಯ ಶ್ರೀಮತಿ ಸಂಧ್ಯಾ ಪುರುಶೋತ್ತಮ್, ಶ್ರೀ ಜೆ.ಕೆ. ಪುರುಷೋತ್ತಮ್, 'ದಿ ಪ್ರಿಸಮ್ ಬುಕ್ಸ್ ಪ್ರೈ.ಲಿ.' ಸಂಸ್ಥೆಯ ಶ್ರೀ ಪ್ರಾಣೇಶ್ ಸಿರವರ, ಶ್ರೀ ರವಿ ಸಿರವರ, ಶ್ರೀ ಕೆ.ಎಂ.ಫಣಿರಾಜ್, 'ನುಡಿ ಪುಸ್ತಕ'ದ ಶ್ರೀ ಟಿ.ರಂಗನಾಥನ್ ಇವರುಗಳ ಪ್ರೀತಿ ಪ್ರೋತ್ಸಾಹ ಮತ್ತು ಮಾರ್ಗದರ್ಶನವನ್ನು ಸದಾ ನೆನೆಯುವೆ.

ನನ್ನ ಜೀವನಕ್ಕೆ ಒಂದು ಹೊಸ ತಿರುವು ನೀಡಿದ ಖ್ಯಾತ ನ್ಯೂಕ್ಲಿಯರ್ ಮೆಡಿಸನ್ ತಜ್ಞೆ ಹಾಗೂ ಕನ್ನಡದ ವೈದ್ಯ ಲೇಖಕಿಯಾದ ಡಾ. ಆರ್.ಕೆ.ಸರೋಜ ಹಾಗೂ ಅವರ ಪತಿ ಸಮಾಜವಾದಿ ಚಿಂತಕರು ಹಾಗೂ ವೈದ್ಯರೂ ಆದ ಡಾ. ಎನ್.ಲಕ್ಷ್ಮೀಪತಿ ಬಾಬು, ಕೇಂದ್ರ ಸಾಹಿತ್ಯ ಅಕಾದೆಮಿಯ ಅಂದಿನ ಕಾರ್ಯದರ್ಶಿಗಳಾದ ಹಾಗೂ ಸಂಸ್ಕೃತಿ ಚಿಂತಕರಾದ ಶ್ರೀ ಅಗ್ರಹಾರ ಕೃಷ್ಣಮೂರ್ತಿ ಮತ್ತು ಕೇಂದ್ರ ಸಾಹಿತ್ಯ ಅಕಾದೆಮಿಯ ಇಂದಿನ ಕಾರ್ಯದರ್ಶಿಗಳಾದ ಡಾ. ಕೆ.ಶ್ರೀನಿವಾಸರಾವ್ ಅವರಿಗೆ ನನ್ನ ವಂದನೆಗಳು.

ಶೈಕ್ಷಣಿಕ ಅಧ್ಯಯನದ ಕಡೆಗೆ ನನ್ನನ್ನು ಒತ್ತಾಯಪೂರ್ವಕವಾಗಿ ದೂಡುತ್ತಿದ್ದ ನನ್ನ ಆತ್ಮೀಯ ಗೆಳೆಯ ಡಾ. ಸಿ.ಮಹದೇವಯ್ಯ, ಈ ಸಂಶೋಧನಾ ವಿಷಯವನ್ನು ಆಯ್ಕೆ ಮಾಡಿಕೊಳ್ಳಲು ಸೂಚಿಸಿದ ಇಂಗ್ಲಿಷ್ ಪ್ರಾಧ್ಯಾಪಕರಾದ ಪ್ರೊ. ಟಿ.ವೆಂಕಟೇಶಮೂರ್ತಿ, ನನ್ನ ಈ ಸಂಶೋಧನೆಗೆ ಅಮೂಲ್ಯವಾದ ಆಕರಗಳನ್ನು ಒದಗಿಸಿದ್ದಲ್ಲದೇ ಮಹಾಪ್ರಬಂಧದ ರೂಪುರೇಷೆಯಲ್ಲಿ ಸದಾ ನೆರವಾಗುತ್ತಿದ್ದ ಪ್ರೊ. ಕೆ.ಎಸ್.ಮಧುಸೂದನ, ಭಾಷಾಂತರ ಅಧ್ಯಯನಕ್ಕೆ ಸಂಬಂಧಿಸಿದಂತೆ ನೆರವು ನೀಡಿದ ವಿಮರ್ಶಕರಾದ ಪ್ರೊ.ಸಿ.ಎನ್.ರಾಮಚಂದ್ರನ್, ತಮಿಳು ಸಾಹಿತ್ಯದ ವಿಚಾರವಾಗಿ ಡಾ. ಎಸ್.ಕಾರ್ಲೋಸ್ ಮತ್ತು ಡಾ. ಎ.ಎಸ್.ಇಳಂಗೋವನ್, ತೆಲುಗು ಸಾಹಿತ್ಯದ ವಿಚಾರವಾಗಿ ಪ್ರೊ. ಘಟ್ಟಮರಾಜು ಅಶ್ವತ್ಥನಾರಾಯಣ, ನನ್ನ ಲೇಖನಗಳನ್ನು ಪ್ರಕಟಿಸಿ ಅಧ್ಯಯನಕ್ಕೆ ನೆರವಾದ ಡಾ. ಎನ್.ಗಾಯತ್ರಿ ಮತ್ತು ಜಾನಪದ ವಿಭಾಗದ ಸಹಪ್ರಾಧ್ಯಾಪಕ ಡಾ. ಸಿ.ಟಿ.ಗುರುಪ್ರಸಾದ್, ಗಣಕಯಂತ್ರ ವಿಭಾಗದ ತಂತ್ರಜ್ಞರಾದ ಶ್ರೀ ಎಸ್.ಕೆ.ವಿಜಯೇಂದ್ರ ಅವರಿಗೂ ಮತ್ತು ಹಂಪಿ ವಿಶ್ವವಿದ್ಯಾಲಯದ ಗೆಳೆಯದಾರ ಶ್ರೀ ಲಕ್ಷ್ಮೀಕಾಂತ, ಶ್ರೀ ಲೋಕೇಶ, ಶ್ರೀ ನರಸಿಂಹಮೂರ್ತಿ ಇವರೆಲ್ಲರನ್ನೂ ಪ್ರೀತಿಯಿಂದ ನೆನೆಯುವುದು ನನ್ನ ಕರ್ತವ್ಯ.

ಸಂಶೋಧನೆಗೆ ಪರೋಕ್ಷವಾಗಿ ಮಾರ್ಗದರ್ಶನ ನೀಡಿದ ಜ್ಞಾನಪೀಠ ಪಶಸ್ತಿ ಪುರಸ್ಕೃತರಾದ ಡಾ.ಚಂದ್ರಶೇಖರ ಕಂಬಾರ, ಕವಿ ಡಾ. ಸಿದ್ಧಲಿಂಗಯ್ಯ, ದೆಹಲಿಯ ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಆರ್ಟ್ಸ್ ಅಂಡ್ ಏಸ್ತೆಟ್ಟಿಕ್ ವಿಭಾಗದ ಪ್ರಾಧ್ಯಾಪಕರು ಹಾಗೂ ಕನ್ನಡ ಪ್ರಮುಖ ಕವಿ ಮತ್ತು ನಾಟಕಕಾರರಾದ ಡಾ. ಎಚ್.ಎಸ್.ಶಿವಪ್ರಕಾಶ್, ವಿಮರ್ಶಕರಾದ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಡಾ. ಎಂ.ಎಸ್.ಆಶಾದೇವಿ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಡಾ. ಬಿ.ಗಂಗಾಧರ, ಡಾ. ಹೊನ್ನುಸಿದ್ಧಾರ್ಥ ಇವರುಗಳಿಗೆ, ಪ್ರಾದೇಶಿಕ ಕಾರ್ಯದರ್ಶಿಗಳಾದ ಎಸ್.ಪಿ.ಮಹಾಲಿಂಗೇಶ್ವರ ಮತ್ತು ನನ್ನ ಕಛೇರಿಯ ಎಲ್ಲಾ ನನ್ನ ಮಿತ್ರರ ಸಹಕಾರಕ್ಕೆ ಹಾಗೂ ನನ್ನ ಅಧ್ಯಯನ ಸಮಯದಲ್ಲಿ ಸಹಕರಿಸಿದ ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ, ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥಾಲಯ, ಮದ್ರಾಸು ವಿಶ್ವವಿದ್ಯಾಲಯದ ಗ್ರಂಥಾಲಯ, ದೆಹಲಿಯ ಮತ್ತು ಬೆಂಗಳೂರಿನ ಕೇಂದ್ರ ಸಾಹಿತ್ಯ ಅಕಾದೆಮಿಯ ಗ್ರಂಥಾಲಯದ ಗ್ರಂಥಾಧಿಕಾರಿಗಳಿಗೆ ಆಭಾರಿಯಾಗಿದ್ದೇನೆ. ಆ ಸಂದರ್ಭದಲ್ಲಿ ಉಳಿದುಕೊಳ್ಳಲು ನೆರವಾದ ಸಂಬಂಧಿಸಿದ ವಿಶ್ವವಿದ್ಯಾಲಯಗಳ ಅತಿಥಿಗೃಹಗಳ ಅಧಿಕಾರಿಗಳಿಗೂ ನಾನು ಆಭಾರಿಯಾಗಿದ್ದೇನೆ.

ನನ್ನನ್ನು ಆಡಿಸಿ ಬೆಳೆಸಿ ಅಕ್ಷರಲೋಕದ ಕಡೆ ಆಸಕ್ತಿ ಹುಟ್ಟಿಸಿದ ನನ್ನ ತಾತಂದಿರಿಗೆ ಹಾಗೂ ನನ್ನ ತಂದೆ, ತಾಯಿ, ತಮ್ಮ, ಇವರೆಲ್ಲರ ಪ್ರೋತ್ಸಾಹಕ್ಕೆ ಮತ್ತು ನನ್ನ ಹೆಂಡತಿ ಶ್ರೀಮತಿ ಜ್ಯೋತಿ, ಮಕ್ಕಳು ಚಿ.ಸಮಂತ್, ಚಿ.ಸಿದ್ಧಾಂತ್ ಇವರುಗಳ ಸಹನೆಗೆ, ಭಾಷಾಂತರ ಅಧ್ಯಯನ ವಿಭಾಗದ ಎಲ್ಲಾ ಸಿಬ್ಬಂದಿ ವರ್ಗದವರೆಲ್ಲರಿಗೂ ಹಾಗೂ ಅಧ್ಯಯನಕ್ಕೆ ನೆರವಾದ ನನ್ನ ಆತ್ಮೀಯರೆಲ್ಲರಿಗೂ ನಾನು ಆಭಾರಿಯಾಗಿರುವೆ.

– ಷಣ್ಮುಖಾನಂದ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಸ್ವರೂಪ, ವ್ಯಾಪ್ತಿ, ಉದ್ದೇಶ ಮತ್ತು ಅಧ್ಯಯನದ ಪರಿಕಲ್ಪನೆ

೧.೧. ಸ್ವರೂಪ

೧.೨. ವ್ಯಾಪ್ತಿ

೧.೨.೧. ಕವಿ

೧.೨.೨. ಕಥನಕಾರ

೧.೨.೩. ಜಾನಪದ

೧.೨.೪. ಭಾಷಾಂತರಕಾರ

೧.೨.೫. ಸಂಸ್ಕೃತಿ ಚಿಂತಕ

೧.೩. ಉದ್ದೇಶ

೧.೪. ಸಾಂಸ್ಕೃತಿಕ ಅಧ್ಯಯನದ ಪರಿಕಲ್ಪನೆ

೧.೪.೧. 'ಸಾಹಿತ್ಯ ಸಂಸ್ಕೃತಿ ಅನುಸಂಧಾನ' ಪರಿಕಲ್ಪನೆ

೧.೪.೨. ಅಧ್ಯಯನದ ವಿಧಾನಗಳು

೧.೫. ಸ್ವರೂಪ ಮತ್ತು ಸವಾಲುಗಳು

ಅಧ್ಯಾಯ : ಒಂದು

ಅಧ್ಯಯನದ ಸ್ವರೂಪ, ವ್ಯಾಪ್ತಿ, ಉದ್ದೇಶ ಮತ್ತು ಅಧ್ಯಯನದ ಪರಿಕಲ್ಪನೆ

೧.೧. ಸ್ವರೂಪ

ಭಾರತೀಯ ಸಾಹಿತ್ಯದಲ್ಲಿ ಮತ್ತು ಪಾಶ್ಚಿಮಾತ್ಯ ಸಾಹಿತ್ಯದಲ್ಲಿ ಕೃಷಿ ಮಾಡಿರುವ ಕನ್ನಡದ ಪ್ರಮುಖ ಸಾಹಿತ್ಯ ಚಿಂತಕರಲ್ಲಿ ಎ.ಕೆ.ರಾಮಾನುಜನ್ ಅವರು ಪ್ರಮುಖರು. ಇವರು ಕವಿಯಾಗಿ, ಜಾನಪದತಜ್ಞರಾಗಿ, ಸಂಸ್ಕೃತಿಚಿಂತಕರಾಗಿ, ಭಾಷಾವಿಜ್ಞಾನಿಯಾಗಿ ಮತ್ತು ಭಾಷಾಂತರಕಾರರಾಗಿ ಗುರುತಿಸಿಕೊಂಡವರು. ಕನ್ನಡದ ನವ್ಯಕವಿಗಳಲ್ಲಿ ತಮ್ಮದೇ ಆದ ವಿಶಿಷ್ಟ ಬಗೆಯ ಭಾಷಾಬಳಕೆ ಹಾಗೂ ಅಪರೂಪದ ಪ್ರತಿಮೆಗಳ ಸಂಯೋಜನೆಯನ್ನು ಬಳಸಿ ಕಾವ್ಯದಲ್ಲಿ ತಮ್ಮದೇ ಆದ ಛಾಪು ಮೂಡಿಸಿದವರು. ನಾಲ್ಕು ದಶಕಗಳ ಕಾಲ ಭಾರತದಿಂದ ಹೊರಗೆ ಅಮೆರಿಕದಲ್ಲಿದ್ದು ಅವರು ಮಾಡಿರುವ ಸಾಹಿತ್ಯದ ಕೃಷಿ ಬಹಳ ವಿಭಿನ್ನವಾದದ್ದು ಮತ್ತು ಅನನ್ಯವಾದದ್ದು.

ಕನ್ನಡ ಸಾಹಿತ್ಯ ಪರಂಪರೆಯ ಜೊತೆಯಲ್ಲಿ ರಾಮಾನುಜನ್ ನಡೆಸಿದ ಅನುಸಂಧಾನಕ್ಕೆ ಹಲವು ಆಯಾಮಗಳಿವೆ. ರಾಮಾನುಜನ್ ಅವರು ಕಾಲ ಮತ್ತು ಪರಿಸರದ ಅಗತ್ಯವಾಗಿ ಅದನ್ನು ನೋಡುವುದು ಒಂದು ಆಯಾಮವಾದರೆ ಕನ್ನಡ ಸಾಹಿತ್ಯ ಮತ್ತು ಕನ್ನಡ ಜಗತ್ತಿನ ಮರು ನಿರೂಪಣೆಯ ಹಿನ್ನೆಲೆಯಲ್ಲಿ ರಾಮಾನುಜನ್ ಅವರ ಪ್ರಯತ್ನ ಮತ್ತು ಸಾಧನೆಗಳು ಪಡೆಯುವ ಮಹತ್ವದ ಆಯಾಮ ಇನ್ನೊಂದು ಕಡೆ. ಸಂಸ್ಕೃತ, ನಂತರದ ಇಂಗ್ಲಿಷ್‌ನ ಮೇಲಾಟದಲ್ಲಿ ದೇಶಿ ಭಾಷೆಗಳು ತಮ್ಮ ಅನನ್ಯತೆ ಮತ್ತು ಅಸ್ಮಿತೆಗಾಗಿ ನಡೆಸಿದ ಹೋರಾಟದ ಆಯಾಮವೂ ಇದರಲ್ಲಿದೆ ಎನ್ನುವುದನ್ನು ನಾವು ಮರೆಯಬಾರದು. ಹಾಗೆಯೇ ಈ ಮೂರರ ಜೊತೆಯಲ್ಲಿ ಮತ್ತೊಂದು ಮಹತ್ವದ ಭಿತ್ತಿ ರಾಮಾನುಜನ್ ಅವರ ಒಟ್ಟು ಅನುಸಂಧಾನಗಳಿಗಿದೆ. ಅದೆಂದರೆ ದೇಸೀಯತೆಯ ಪ್ರಶ್ನೆಯದ್ದು.

ಈ ಅಧ್ಯಯನವು ಸ್ಥೂಲವಾಗಿ ಈ ಎಲ್ಲಾ ಆಯಾಮಗಳನ್ನೂ ಚರ್ಚಿಸುವ ಸ್ವರೂಪದ್ದಾಗಿದೆ. ಕವಿ, ವಿಮರ್ಶಕ, ಅನುವಾದಕ ಈ ಎಲ್ಲವನ್ನೂ ನೇಯ್ದ ವಿನ್ಯಾಸವೊಂದು ರಾಮಾನುಜನ್ ಅವರ ಬರಹಗಳಲ್ಲಿ ತಾನೇ ತಾನಾಗಿ ರೂಪುಗೊಂಡಿದೆ. ಮೇಲ್ನೋಟಕ್ಕೆ ಈ ಎಲ್ಲವೂ ಭಿನ್ನವೆನ್ನುವಂತೆ ಕಂಡರೂ ಇವುಗಳ ನಡುವೆ ಇರುವ ಅಂತಃಸಂಬಂಧವೊಂದನ್ನು ಗುರುತಿಸುವುದು ಈ ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶವನ್ನು ರೂಪಿಸಿದೆ.

ಅಪ್ಪಟ ನವ್ಯವೆನ್ನಬಹುದಾದ ಕವಿತೆಗಳನ್ನು ಬರೆದ ರಾಮಾನುಜನ್, ತಮಿಳಿನ ಮೊದಲ ಘಟ್ಟದ ಕಾವ್ಯಗಳನ್ನು, ಕನ್ನಡದ ನಡುಗನ್ನಡದ ಸಾಹಿತ್ಯವನ್ನು ಅನುವಾದಿಸಿದ ರಾಮಾನುಜನ್, ಭಾರತೀಯ ಸಾಹಿತ್ಯದ ತಳಹದಿಯಂತಿರುವ ಜನಪದ ಸಾಹಿತ್ಯವನ್ನು ಅನುವಾದಿಸಿದ ರಾಮಾನುಜನ್, ತಮ್ಮ ಸಮಕಾಲೀನ ಸಂದರ್ಭವನ್ನು ಅಪೂರ್ವವಾಗಿ ಶೋಧಿಸಿದ ಕಥೆಗಳನ್ನು ಬರೆದ ರಾಮಾನುಜನ್... ಈ ಎಲ್ಲದರ ನಡುವೆ ಅಂತಃಸಂಬಂಧ ಇದೆ ಎನ್ನುವುದಾದರೆ ಅದು ಎಲ್ಲಿದ್ದೀತು?

ಇದನ್ನು ಸರಳವಾಗಿ ಮತ್ತು ಸ್ಥೂಲವಾಗಿ ಹೀಗೆ ಒಂದು ಪ್ರಮೇಯದ ಮೂಲಕ ಕಟ್ಟಿಕೊಳ್ಳಬಹುದು. ಮೂಲತಃ ರಾಮಾನುಜನ್ ಅವರದ್ದು 'ಮುಕ್ತಮೀಮಾಂಸೆ' ಅಥವಾ ಇದನ್ನು 'ಸಮಷ್ಟಿಮೀಮಾಂಸೆ' ಎಂದೂ ಗುರುತಿಸಬಹುದು. ವಿಭಿನ್ನ ಸಾಹಿತ್ಯ ಪ್ರಕಾರಗಳು, ವಿಭಿನ್ನ ಕಾಲಘಟ್ಟಗಳು, ವಿಭಿನ್ನ ದೃಷ್ಟಿಕೋನಗಳು ಈ ಎಲ್ಲವೂ ಸೇರಿ ರೂಪುಗೊಳ್ಳುವ 'ಮಾನವ ಮೀಮಾಂಸೆ'ಯೊಂದನ್ನು ಬಹುಶಃ ರಾಮಾನುಜನ್ ಹುಡುಕುತ್ತಿದ್ದರು ಎನ್ನಿಸುತ್ತದೆ. ಯಾವ ಕಾಲಘಟ್ಟದಲ್ಲಿಯೂ ಯಾವುದೇ ಪ್ರಕಾರದಲ್ಲಿಯೂ ಅಭಿವ್ಯಕ್ತಗೊಳ್ಳಬಹುದಾದ ಮತ್ತು ಅಭಿವ್ಯಕ್ತಗೊಳ್ಳುವ ಮಾನವ ಸಮುದಾಯದ ಮತ್ತು ಬದುಕಿನ ಕಾಲಾತೀತ ಎಳೆಗಳನ್ನೆಲ್ಲ ಜೋಡಿಸಿ ನೇಯುವ ನೇಕಾರನ ಹಾಗೆ ರಾಮಾನುಜನ್ ಕಾಣಿಸುತ್ತಾರೆ. 'ಕುಂಟೋಬಿಲ್ಲೆ'ಯಂತಹ ಅಮೂರ್ತ ನವ್ಯ ಕವಿತೆಯನ್ನು ಉತ್ಕಟವಾಗಿ ಬರೆಯಬಲ್ಲ ರಾಮಾನುಜನ್ ವಚನಕಾರರು ಎತ್ತುವ ಸಮಾನ ಪಾತಳಿಯ ಮಾನವೀಯ ಪ್ರಶ್ನೆಗಳನ್ನು ಅಷ್ಟೇ ಉತ್ಕಟವಾಗಿ ಅನುವಾದಿಸುತ್ತಾರೆ. ಸಂಗಂ ಸಾಹಿತ್ಯದ ಭಾವುಕ ಮಾನವೀಯ ಸಂಬಂಧಗಳನ್ನು, ಪ್ರಾಕೃತಿಕ ಪ್ರಶ್ನೆಗಳನ್ನು ಎದುರಾಗುತ್ತಲೇ 'ಅಣ್ಣಯ್ಯನ ಮಾನವಶಾಸ್ತ್ರ'ದಂತಹ ಕತೆಗಳನ್ನು ಭಾರತೀಯ ಮನಸ್ಸು ಎದುರಿಸುವ ದ್ವಂದ್ವ ಮತ್ತು ಆತಂಕಗಳನ್ನು ಅಷ್ಟೇ ತೀವ್ರವಾಗಿ ರಾಮಾನುಜನ್ ಎದುರಾಗುತ್ತಾರೆ. ಇನ್ನೊಂದು ಕಡೆ ಭಾರತೀಯವೆಂಬ ಚಿಂತನಾಕ್ರಮ ಇದೆಯೇ ಎನ್ನುವ ಅತ್ಯಂತ ನಿರ್ಣಾಯಕವಾದ ಪ್ರಶ್ನೆಯನ್ನು ಬಲು ಧೈರ್ಯದಿಂದ ಎದುರಿಸುತ್ತಾರೆ. ಎಂದರೆ ರಾಮಾನುಜನ್ ಒಂದು ತಾತ್ವಿಕತೆಯ ಮೂಲಕ ಸಾಹಿತ್ಯವನ್ನೋ ಬದುಕನ್ನೋ ನೋಡುವ ಜಾಯಮಾನದವರಲ್ಲ. ತೆರೆದ ಮನಸ್ಸಿನಿಂದ ಬದುಕು ಮತ್ತು ಮನುಷ್ಯರನ್ನು ರೂಪಿಸುವ ನಿರ್ದೇಶಿಸುವ, ಕಾಡುವ ಎಲ್ಲಾ ಸಂಗತಿಗಳನ್ನು

ಮುಖಾಮುಖಿಯಾಗಲು ಇವರು ಹಾತೊರೆಯುತ್ತಾರೆ. ಆದ್ದರಿಂದಲೇ ಪರಸ್ಪರ ಹೊಂದಲಾರದ ಸಮಾನಾಂತರ ರೇಖೆಗಳ ಹಾಗೆ ಕಾಣಿಸುವ ಇವರ ಬರವಣಿಗೆಗಳು ಒಳಗೆ ಒಂದನ್ನೊಂದು ಬಿಡಿಸಲಾರದಂತೆ ತಳಕುಹಾಕಿಕೊಂಡಿವೆ.

ರಾಮಾನುಜನ್ ಅವರ ಬರವಣಿಗೆಗಳಿಗೆ ಕೇವಲ ಸಾಹಿತ್ಯಕ ಮೌಲ್ಯ ಮಾತ್ರವಲ್ಲದೆ ಸಾಂಸ್ಕೃತಿಕ ಮೌಲ್ಯವೂ ಇದೇ ಎನ್ನುವುದು ಈ ಅಧ್ಯಯನದ ಮೂಲ ನಂಬಿಕೆಗಳಲ್ಲೊಂದು. ರಾಮಾನುಜನ್ ಅವರ ಬರವಣಿಗೆಗಳನ್ನು ಬಿಡಿಬಿಡಿಯಾಗಿ ಚರ್ಚಿಸುವ ಸಮೀಕ್ಷಿಸುವ ಮತ್ತು ಕೊನೆಯಲ್ಲಿ ಅವುಗಳನ್ನು ಬೇರೆ ಬೇರೆಯಾಗಿ ಇಡುವ ಮೆಥಡಾಲಜಿಯನ್ನು ಈ ಅಧ್ಯಯನ ಒಪ್ಪಿಕೊಂಡಿಲ್ಲ. ಬದಲಿಗೆ ಸಂಯೋಜಿತ ಎನ್ನಬಹುದಾದ ಮೆಥಡಾಲಜಿಯನ್ನು(ಅಧ್ಯಯನ ವಿಧಾನವನ್ನು) ರೂಪಿಸಿಕೊಳ್ಳಲು ಈ ಅಧ್ಯಯನ ಪ್ರಯತ್ನಿಸಿದೆ.

ರಾಮಾನುಜನ್ ಅವರ ಕೆಲವು ಬರವಣಿಗೆಗಳು ಮತ್ತು ಕಾವ್ಯ ಇಂಗ್ಲಿಷ್‌ನಲ್ಲಿವೆ. ಆ ಕಾರಣಕ್ಕಾಗಿ ಮಾತ್ರವಲ್ಲದೆ ಕನ್ನಡ ಜಗತ್ತನ್ನು ಉದ್ದೇಶಿಸಿ ರಾಮಾನುಜನ್ ಎತ್ತುವ ಪ್ರಶ್ನೆಗಳು ಅಖಿಲಭಾರತ ಪ್ರಸ್ತುತತೆಯನ್ನು ಪಡೆದಿವೆ. ಸಮಕಾಲೀನ ಭಾರತೀಯ ಸಂದರ್ಭ ಇಂದು ಗಂಭೀರವಾಗಿ ಚರ್ಚಿಸುತ್ತಿರುವ ಪ್ರಶ್ನೆಗಳಿಗೂ ರಾಮಾನುಜನ್ ಆ ಪ್ರಶ್ನೆಗಳನ್ನು ನಿಭಾಯಿಸಿದ ಪರಿಗೂ ನಿಸ್ಸಂದೇಹವಾಗಿ ಸಂಬಂಧವಿದೆ. ಒಂದನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದಾದರೆ ಇಂದು ಅನುವಾದವನ್ನು ಭಾರತೀಯ ಸಾಹಿತ್ಯ ಕ್ಷೇತ್ರವು ಆತ್ಯಂತಿಕ ಮಹತ್ವದ ಕ್ಷೇತ್ರವನ್ನಾಗಿ ಪರಿಗಣಿಸಿದೆ. ರಾಮಾನುಜನ್ ಬಲು ಹಿಂದೆಯೇ ಅದರ ಮಹತ್ವ, ಸಾಧ್ಯತೆ ಮತ್ತು ಶಕ್ತಿಗಳನ್ನು ಗ್ರಹಿಸಿದ್ದರು. ಅನುವಾದವು ಮುಂದೊಂದು ದಿನ ಜಾಗತಿಕ ಭಾಷೆಯಾಗಬಹುದು ಎನ್ನುವ ದೃಢನಂಬಿಕೆಯಲ್ಲೇ ರಾಮಾನುಜನ್ ಅನುವಾದಗಳನ್ನು ಕೈಗೆತ್ತಿಕೊಂಡರು. ಆ ಸಂದರ್ಭದಲ್ಲಿ ರಾಮಾನುಜನ್ ಅವರ ಅನುವಾದಗಳನ್ನು ಕುರಿತಂತೆ ಅದರ ಮಿತಿಗಳನ್ನೇ ಮತ್ತೆ ಮತ್ತೆ ಚರ್ಚಿಸಲಾಯಿತೇ ಹೊರತು ಅದರ ಕಾಲಾತೀತ ಕೊಡುಗೆಯನ್ನಲ್ಲ. ಹಾಗೆಯೇ ಜನಪದ ಸಾಹಿತ್ಯದ ಅವರ ಸಂಗ್ರಹಗಳಿಗೂ ಸಲ್ಲಬೇಕಾದ ಮನ್ನಣೆ ದೊರಕಲೇ ಇಲ್ಲ. ಅದೊಂದು ಅಭಾರತಿಯರನ್ನು ಅಥವಾ ವಿದೇಶಿಯರನ್ನು ಉದ್ದೇಶಿಸಿದ ಕಾರ್ಯವೆಂದೇ ಪರಿಗಣಿಸಲಾಯಿತು. ಆದರೆ ಇಂದು ಭಾರತೀಯ ಜಾನಪದ ಕತೆಗಳು ಭಾರತದ ಬಹುಮುಖ್ಯ ಸಾಂಸ್ಕೃತಿಕ ಪಠ್ಯಗಳಲ್ಲೊಂದು ಎಂದು ಪರಿಗಣಿಸಲ್ಪಟ್ಟಿವೆ. ಕಾಲಾತೀತವಾದ ಭಾರತೀಯ ಪರಂಪರೆ ಮತ್ತು ಲೋಕಮೀಮಾಂಸೆಯನ್ನು ಕಟ್ಟುವಲ್ಲಿ ಈ ಕೃತಿ ನೆರವು ನೀಡುತ್ತದೆ ಎಂದೇ ಇಂದು ತಜ್ಞರು ಪರಿಗಣಿಸುತ್ತಾರೆ. ಈ ಎಲ್ಲ ಕಾರಣಗಳಿಗಾಗಿ ರಾಮಾನುಜನ್ ಕನ್ನಡದವರು. ಕನ್ನಡದವರು ಮಾತ್ರವಲ್ಲ, ಭಾರತೀಯ ಪ್ರಾದೇಶಿಕ ಮತ್ತು ರಾಷ್ಟ್ರೀಯ ಅಸ್ಮಿತೆಯನ್ನು ಕುರಿತಂತೆ ಇಂದು ಬಹಳ ಚರ್ಚೆ ಮಾಡಲಾಗುತ್ತದೆ. ರಾಮಾನುಜನ್ ಈ ಎರಡು ನೆಲೆಗಳಲ್ಲಿಯೂ ಮಾಡಿದ

ಕೆಲಸ ಅಗಾಧವಾದುದು. ಇದನ್ನೇ ಇನ್ನಷ್ಟು ವಿಸ್ತರಿಸಿ ಹೇಳುವುದಾದರೆ ಸ್ಥಳೀಯ ಮತ್ತು ಜಾಗತಿಕ ಎನ್ನುವುದು ಅಂತಾರಾಷ್ಟ್ರೀಯ ಶೈಕ್ಷಣಿಕ ವಿಧಾನವಾಗಿ ಇಂದು ಒಪ್ಪಿತಗೊಂಡಿದೆ. ರಾಮಾನುಜನ್ ನಾಲ್ಕೈದು ದಶಕಗಳ ಹಿಂದೆಯೇ ಇದನ್ನು ಒಂದು ಮೀಮಾಂಸೆಯಾಗಿ ಕಟ್ಟಿ ಬೆಳೆಸಿದ್ದರು ಎನ್ನುವುದು ನಮಗೊಂದು ಹೆಮ್ಮೆ. ದುರದೃಷ್ಟವಶಾತ್ ರಾಮಾನುಜನ್ ಅವರನ್ನು ಈ ವಿಸ್ತೃತ ನೆಲೆಗಳಲ್ಲಿ ಗಂಭೀರವಾಗಿ ಗುರುತಿಸಿ ಚರ್ಚಿಸಲಾಗಿಲ್ಲ ಎನ್ನುವುದು.

ಹೀಗಾಗಿ ಈ ಅಧ್ಯಯನವು ಈ ಅಂಶಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ರಾಮಾನುಜನ್ ಅವರ ಅನುಸಂಧಾನದ ವಿಭಿನ್ನ ನೆಲೆಗಳನ್ನು ಸ್ಥೂಲವಾಗಿ ಗುರುತಿಸುವ ಉದ್ದೇಶವನ್ನು ಹೊಂದಿದೆ.

ಈ ಅಧ್ಯಯನವು ವಿಶ್ಲೇಷಣಾತ್ಮಕ ಮತ್ತು ಸಂಶ್ಲೇಷಣಾತ್ಮಕ ಅಧ್ಯಯನ ವಿಧಾನವನ್ನು ಒಳಗೊಳ್ಳಲು ಹವಣಿಸಿದೆ. ಅನುವಾದಗಳೂ ಸೇರಿದಂತೆ ಅವರ ಬರವಣಿಗೆಗಳನ್ನು ಸಮಕಾಲೀನ ಸಂದರ್ಭಗಳು ಮತ್ತು ಅಗತ್ಯಗಳ ಹಿನ್ನೆಲೆಯಲ್ಲಿ ಮರುವಿಶ್ಲೇಷಣೆಗೆ ಒಳಗುಮಾಡಲಾಗಿದೆ.

ಎ.ಕೆ. ರಾಮಾನುಜನ್, ಮಾರ್ಚ್ ೧೬, ೧೯೨೯ ರಂದು ಮೈಸೂರಿನಲ್ಲಿ ಜನಿಸಿದರು. ಇವರದು ಮೂಲತಃ ತಮಿಳು ಬ್ರಾಹ್ಮಣ ಕುಟುಂಬ. ಇವರ ಮಾತೃಭಾಷೆ ತಮಿಳು. ತಂದೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಗಣಿತಶಾಸ್ತ್ರದ ಅಧ್ಯಾಪಕರಾಗಿದ್ದರು. ಖಗೋಳಶಾಸ್ತ್ರದಲ್ಲೂ ಅವರಿಗೆ ಸಾಕಷ್ಟು ಪಾಂಡಿತ್ಯವಿತ್ತು. ಸಂಸ್ಕೃತ, ಕನ್ನಡ, ಇಂಗ್ಲಿಷ್, ತಮಿಳು ಭಾಷೆಗಳ ಪುಸ್ತಕಗಳ ಭಂಡಾರವೇ ಇವರ ತಂದೆಯವರ ಬಳಿ ಇದ್ದಿತು. ವಿಶೇಷವೆಂದರೆ ಇವರ ತಂದೆಯವರಿಗೆ ಖಗೋಳಶಾಸ್ತ್ರದಲ್ಲಿ ಇದ್ದಷ್ಟು ಆಸಕ್ತಿ ಜ್ಯೋತಿಷ್ಯದಲ್ಲೂ ಇತ್ತು ಎಂಬುದು. ಭಾಷಾಪಾಂಡಿತ್ಯ, ಗಣಿತ-ಖಗೋಳಶಾಸ್ತ್ರ-ನಂಬಿಕೆ-ಜಾದುಗಾರಿಕೆ ಹೀಗೆ ವೈವಿಧ್ಯಪೂರ್ಣವಾದ ಜ್ಞಾನಸಂಪತ್ತಿನ ನಡುವೆ ಬೆಳೆದವರು ಎ.ಕೆ.ರಾಮಾನುಜನ್.

ರಾಮಾನುಜನ್ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಎಂ.ಎ. ಪದವಿ ಪಡೆದು, ಕೆಲವು ಸಮಯ ದಕ್ಷಿಣ ಭಾರತದ ಕೆಲವು ಕಾಲೇಜುಗಳಲ್ಲಿ(ಬೆಳಗಾಂ, ಲಿಂಗರಾಜ ಕಾಲೇಜು) ಅಧ್ಯಾಪಕರಾಗಿ ಕೆಲಸ ಮಾಡಿದರು. ೧೯೫೮ರಲ್ಲಿ ಪುಣೆಯ ಡೆಕ್ಕನ್ ವಿಶ್ವವಿದ್ಯಾಲಯದಿಂದ 'ಸೈದ್ಧಾಂತಿಕ ಭಾಷಾಶಾಸ್ತ್ರ'(Theoretical Linguistics) ವಿಷಯದಲ್ಲಿ ಡಿಪ್ಲೊಮಾ ಪದವಿ ಗಳಿಸಿ, ನಂತರದಲ್ಲಿ ಉನ್ನತ ವ್ಯಾಸಂಗಕ್ಕೆ ಅಮೆರಿಕಾಗೆ ತೆರಳಿದ ಇವರು ಅಲ್ಲಿನ ಇಂಡಿಯಾನಾ ವಿಶ್ವವಿದ್ಯಾಲಯದಲ್ಲಿ ೧೯೬೩ರಲ್ಲಿ ಭಾಷಾಶಾಸ್ತ್ರದ ವಿಷಯದಲ್ಲಿ ಮಂಡಿಸಿದ ಮಹಾಪ್ರಬಂಧಕ್ಕೆ ಪಿಎಚ್.ಡಿ. ಪದವಿ ಪಡೆದುಕೊಂಡರು.

೧೯೬೧ರಲ್ಲಿ ಷಿಕಾಗೋ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾದ ರಾಮಾನುಜನ್ ನಂತರ ಮಿಷಿಗನ್, ವಿಸ್ಕಾನ್ಸಿನ್, ಹಾರ್ವರ್ಡ್ ವಿಶ್ವವಿದ್ಯಾಲಯಗಳಲ್ಲಿ ಮತ್ತು ಬರ್ಕ್ಲಿಯ

ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ ಹಾಗೂ ಕಾರ್ಲ್‌ಟನ್ ಕಾಲೇಜಿನಲ್ಲಿ ಕೆಲಸ ಮಾಡಿದರು. ಶಿಕಾಗೋ ವಿಶ್ವವಿದ್ಯಾಲಯದಲ್ಲಿ ಸ್ಥಾಪಿತವಾದ 'ದಕ್ಷಿಣ ಏಷ್ಯನ್ ಅಧ್ಯಯನದ ಕೇಂದ್ರ'ದ ಪ್ರಮುಖ ರೂವಾರಿಯಾಗಿದ್ದರು. ಕನ್ನಡ ಮತ್ತು ತಮಿಳು ಭಾಷೆಗಳ ಭಾಷಾಂತರಕ್ಕೆ ಸಂಬಂಧಿಸಿದ ಹಲವಾರು ಗ್ರಂಥಗಳನ್ನು ಇಂಗ್ಲಿಷ್‌ಗೆ ಅನುವಾದ ಮಾಡಿದರು. ಭೌತಿಕವಾಗಿ ತಾಯ್ನಾಡಿನಿಂದ ದೂರವಿದ್ದರೂ ಮಾನಸಿಕವಾಗಿ ಅವರು ಭಾರತ, ಅಮೆರಿಕ ಎರಡೂ ದೇಶಗಳಲ್ಲೂ ಏಕಕಾಲದಲ್ಲಿ ಬದುಕಲು, ಚಿಂತಿಸಲು, ಸೃಜನಶೀಲರಾಗಲು ಸಾಧ್ಯವಾಯಿತು. ಅವರಿಗಿದ್ದ ಇಂಗ್ಲಿಷ್ ಪಾಂಡಿತ್ಯ ಹಾಗೂ ಅವರು ಗಳಿಸಿದ ಪಾಶ್ಚಾತ್ಯ ಜ್ಞಾನದ ಫಲವಾಗಿ ಅವರಿಗೆ ಹೆಚ್ಚು ಪ್ರಿಯವಾಗಿದ್ದ ತಮಿಳಿನ ಪ್ರಾಚೀನ ಕಾವ್ಯ 'ಸಂಗಂ' ಮತ್ತು ಕನ್ನಡದ 'ವಚನ ಸಾಹಿತ್ಯ'ವನ್ನು ಇಂಗ್ಲೀಷ್‌ಗೆ ಅನುವಾದ ಮಾಡಿದರು. ಇವರ ಸಾಹಿತ್ಯ ಕೃಷಿಗಾಗಿ ಭಾರತ ಸರ್ಕಾರ ಇವರಿಗೆ 'ಪದ್ಮಶ್ರೀ' ಪ್ರಶಸ್ತಿ ನೀಡಿತು; ಹಾಗೂ ಇವರಿಗೆ ಮ್ಯಾಕ್ ಅರ್ಥರ್ ಪ್ರಶಸ್ತಿಯ ಫೆಲೋಷಿಪ್ ಕೂಡ ಲಭಿಸಿದೆ. Collected Poems ಎಂಬ ಕೃತಿಗೆ ೧೯೯೯ರಲ್ಲಿ ಕೇಂದ್ರ ಸಾಹಿತ್ಯ ಅಕಾದೆಮಿ ಮರಣೋತ್ತರ ಪ್ರಶಸ್ತಿ ದೊರೆತಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ೧೯೮೩ರಲ್ಲಿ ವಿಶೇಷ ಗೌರವ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿತು. ಹಾಗೆಯೇ ತಮಿಳು ಲೇಖಕರ ಸಂಘವೂ ಅವರಿಗೆ ಚಿನ್ನದ ಪದಕವನ್ನು ಕೊಟ್ಟಿತು. ಅಮೆರಿಕದ ಮೆಕಾರ್ಥರ್ ಫೌಂಡೇಶನ್ ಸಂಸ್ಥೆ 'ಜೀನಿಯಸ್ ಅವಾರ್ಡ್' ಕೊಟ್ಟಿತು(ಇವರು ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಕೆಲವು ಪತ್ರಿಕೆಗಳಿಗೆ 'ಅಕ್ರೂರ' ಎಂಬ ಹೆಸರಿನಿಂದ ಬರೆಯುತ್ತಿದ್ದರು). ಇವರು ಶಸ್ತ್ರಚಿಕಿತ್ಸೆಯ ಸಂದರ್ಭದಲ್ಲಿ ಉಂಟಾದ ಪ್ರತಿಕೂಲದ ಪರಿಣಾಮದಿಂದ ಜುಲೈ ೧೩, ೧೯೯೩ ರಂದು ಚಿಕಾಗೋದಲ್ಲಿ ನಿಧನರಾದರು.

ರಾಮಾನುಜನ್ ಅವರ ಹಿರಿಯ ಗೆಳೆಯರಾದ ಸುಮತೀಂದ್ರ ನಾಡಿಗ ಅವರು ರಾಮಾನುಜನ್ ಅವರಿಗಿದ್ದ ಅಧ್ಯಯನದ ಹಸಿವನ್ನು ಕುರಿತು ಹೀಗೆ ಹೇಳುತ್ತಾರೆ:

> "ಪಟ್ಟಾಗಿ ಕೂತು ಕೆಲಸ ಮಾಡುವುದು ಮತ್ತು ಅಭ್ಯಾಸ ಮಾಡುವುದನ್ನು ರಾಮಾನುಜನ್ ಸಂಕಲ್ಪಬಲದ ಜಾಗರಣೆಯಿಂದ ಸಾಧಿಸಿಕೊಂಡಿದ್ದರು. ಆದ್ದರಿಂದಲೇ ಅವರು ಕನ್ನಡದಲ್ಲಿ ಮೂರು ಮತ್ತು ಇಂಗ್ಲಿಷ್‌ನಲ್ಲಿ ಮೂರು ಕವನಸಂಕಲನಗಳನ್ನು ಪ್ರಕಟಿಸುವುದು ಸಾಧ್ಯವಾಯಿತು. ತಮಿಳಿನಿಂದ ಮತ್ತು ಕನ್ನಡದಿಂದ ಇಂಗ್ಲೀಷಿಗೆ ಅನುವಾದಗಳನ್ನು ಮಾಡುವುದು ಕೂಡ ಅವರಿಗೆ ಸಾಧ್ಯವಾಯಿತು. ಹೀಗೆ ಮನೆಮಾತಾದ ತಮಿಳಿಗೂ, ಪರಿಸರದ ಭಾಷೆಯಾದ ಕನ್ನಡಕ್ಕೂ, ಕಲಿತು ಪರಿಣತಿಯನ್ನು ಪಡೆದ ಇಂಗ್ಲಿಷಿಗೂ ರಾಮಾನುಜನ್ ಅವರು ಮರೆಯಲಾರದ ಕೃತಿಗಳನ್ನು ಕೊಟ್ಟಿದ್ದಾರೆ."
>
> "ಅವರ ತಂದೆ ಗಣಿತಶಾಸ್ತ್ರಜ್ಞರು ಮತ್ತು ಖಗೋಳಶಾಸ್ತ್ರಜ್ಞರೂ ಮತ್ತು ಸಂಸ್ಕೃತವನ್ನು ಚೆನ್ನಾಗಿ ಬಲ್ಲವರೂ ಆಗಿದ್ದರು. ಅದಕ್ಕೇ ರಾಮಾನುಜನ್ ಹೀಗೆ ಹೇಳಿದರು:

'ಸಂಸ್ಕೃತ ಮತ್ತು ಇಂಗ್ಲಿಷ್ ನಮ್ಮ ಪಿತೃಭಾಷೆಯಾಗಿತ್ತು; ಕನ್ನಡ ಮತ್ತು ತಮಿಳು ಮಾತೃಭಾಷೆಯಾಗಿದ್ದವು' ಅಂತ. ಈ ಹಿನ್ನೆಲೆಯಿಂದ ಅಮೆರಿಕಕ್ಕೆ ಹೋದ ರಾಮಾನುಜನ್ನರು ಭಾರತೀಯ ಸಾಹಿತ್ಯದ ಬಗ್ಗೆ ಅಮೆರಿಕನ್ನರ ಅಭಿಪ್ರಾಯವನ್ನು ಬದಲಾಯಿಸುವಷ್ಟು ಪ್ರಭಾವಶಾಲಿಯಾದರು. ಅವರು ಪಾಶ್ಚಾತ್ಯ ವಿದ್ವಾಂಸರ ಗಮನವನ್ನು ಸಂಸ್ಕೃತದಿಂದ ದೇಶೀಯ ಭಾಷೆಗಳ ಕಡೆಗೆ ತಿರುಗಿಸಿದರು ಎಂದು ಹಿಂದೂ ಪುರಾಣಗಳ ಬಗ್ಗೆ ಅಧಿಕೃತವಾಗಿ ಮಾತಾಡಬಲ್ಲ ವೆಂಡಿ ಡೋನಿಗರ್ ಹೇಳುತ್ತಾರೆ."

"ಶಿಕಾಗೋ ಯೂನಿವರ್ಸಿಟಿಯ 'ಡಿಪಾರ್ಟ್‌ಮೆಂಟ್ ಆಫ್ ಸೌತ್ ಏಷ್ಯನ್ ಲ್ಯಾಂಗ್ವೇಜಸ್ ಅಂಡ್ ಸಿವಿಲೈಜೇಶನ್' ನಲ್ಲಿ ಪ್ರೊಫೆಸರ್ ಆಗಿದ್ದ ರಾಮಾನುಜನ್, 'ಡಿಪಾರ್ಟ್‌ಮೆಂಟ್ ಆಫ್ ಲಿಂಗ್ವಿಸ್ಟಿಕ್ಸ್ ಅಂಡ್ ದಿ ಕಮಿಟಿ ಆನ್ ಸೋಷಿಯಲ್ ಥಾಟ್'ನ ಸದಸ್ಯರೂ ಆಗಿದ್ದರು"[7]

ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ರಾಮಾನುಜನ್, ಸುಮತೀಂದ್ರ ನಾಡಿಗ ಮತ್ತು ಕೀರ್ತಿನಾಥ ಕುರ್ತಕೋಟಿಯವರು ಕ್ರಮಾನುಸಾರ ಒಂದೆರಡು ವರ್ಷಗಳ ಕಾಲ ಇಂಗ್ಲಿಷ್ ಅಧ್ಯಾಪಕರಾಗಿ ಕೆಲಸ ಮಾಡಿದರು. ಅನಂತರ ಅವರೆಲ್ಲಾ ಅಲ್ಲಿಂದ ತಮ್ಮ ವೃತ್ತಿಜೀವನವನ್ನು ಹುಡುಕಿಕೊಂಡು ಬೇರೆ ಬೇರೆ ಕಡೆ ಹೋದವರು. ಕುರ್ತಕೋಟಿಯವರು ತಮ್ಮ ಮತ್ತು ರಾಮಾನುಜನ್ ಅವರ ನಡುವಿನ ಸಂಬಂಧವನ್ನು ಹೀಗೆ ವಿವರಿಸುತ್ತಾರೆ:

"ರಾಮಾನುಜನ್ ಬಹಳ ಸೌಮ್ಯಸ್ವಭಾವದ ವ್ಯಕ್ತಿ. ಅವರು ಸಿಟ್ಟಿಗೆದ್ದು ಮಾತಾಡಿದ್ದನ್ನು ನಾನಂತೂ ಕಂಡಿಲ್ಲ. ಬಹುಶಃ ಈ ಸಭ್ಯತೆಯಿಂದಾಗಿಯೇ ಇರಬೇಕು, ಅವರ ಮತ್ತು ನಮ್ಮ ನಡುವೆ ಒಂದು ಅಂತರ ಯಾವಾಗಲೂ ಇರುತ್ತಿತ್ತು. ಪ್ರತಿಭೆಯ ಸ್ವಭಾವವೇ ಇದೇನೋ ಎಂದು ನನಗನಿಸುತ್ತಿತ್ತು. ಪ್ರತಿಭೆಯ ಬಗ್ಗೆ ಇರುವ ಆಕರ್ಷಣೆಯೇ ಅದನ್ನು ನಮ್ಮಿಂದ ದೂರವಾಗಿಸುತ್ತದೆ. ಅವರೊಡನೆ ವೈಯಕ್ತಿಕವಾಗಿ ನಾಲ್ಕು ಮಾತು ಆಡಿಕೊಳ್ಳಲು, ಸುಖ ದುಃಖದ ಯೋಗಕ್ಷೇಮದ ಮಾತಾಡಲು ನನಗೆ ಆಗಲೇ ಇಲ್ಲ. ಅವರ ಬಗ್ಗೆ ಏನಾದರೂ ಕೇಳಿದರೆ ವ್ಯಂಗ್ಯವಾಗಿ ಎರಡು ಮಾತು ಹೇಳಿ ಮುಗಿಸುತ್ತಿದ್ದರು. ಮದುವೆಯಾದ ಮೇಲೆ ಅವರು ಮುಂಬಯಿಗೆ ಬಂದಾಗ ನಾನು ಅಲ್ಲಿಯೇ ಇದ್ದೆ. ಎಸ್.ಪಿ.ಎಂ. ರಸ್ತೆಯಲ್ಲಿಯ 'ಬ್ರಿಸ್ಟಲ್ ಗ್ರಿಲ್' ಹೋಟೆಲಿನಲ್ಲಿ ಹೆಂಡತಿಯೊಡನೆ ಬಂದು ಭೆಟ್ಟಿಯಾದರು. ನಮ್ಮನ್ನು ತಮ್ಮ ಹೆಂಡತಿಗೆ ಪರಿಚಯ ಮಾಡಿಕೊಟ್ಟ ರೀತಿ ಇದು. "My friends are very orthodox Molly. Don't baffle them by your smoking". ಅವರ ಹೆಂಡತಿ ಈ ಮಾತನ್ನು ಕೇಳಿ ನಕ್ಕರು, ನಾವೂ ನಕ್ಕೆವು. ವಾತಾವರಣದಲ್ಲಿಯ ಪರಿಚಯದ ಬಿಗುವು ಸಡಿಲಾಗಿ ಮುಕ್ತ ಮನಸ್ಸಿನಿಂದ ಮಾತಾಡಲು ಅನುಕೂಲವಾಯಿತು. ಇನ್ನೊಂದು ಪ್ರಸಂಗದಲ್ಲಿ ತಮ್ಮ ಹೆಂಡತಿಗೆ ನನ್ನ ಬಗ್ಗೆ ಹೇಳಿದ್ದರು. "He remembers even

my unwritten poems.” ಆದರೆ ಅವರ ಈ ವ್ಯಂಗ್ಯ ವೈಯಕ್ತಿಕ ವಿಷಯಗಳ ಬಗ್ಗೆ ತಮ್ಮ ಕಾವ್ಯರಚನೆಯ ಬಗ್ಗೆ ಕೂಡ ಇದೇ ಹಗುರು ಮನಸ್ಸಿನಿಂದ ಮಾತಾಡುತ್ತಿದ್ದರು.”[೨]

ರಾಮಾನುಜನ್ ಹುಟ್ಟಿ ಬೆಳೆದು ಓದಿದ ಪರಿಸರ ಮೈಸೂರಾದರೂ ಅವರ ಅಧ್ಯಯನ, ಅವರ ಸ್ನೇಹವಲಯ ಮುಖ್ಯವಾಗಿ ಧಾರವಾಡ, ಮನೋಹರ ಗ್ರಂಥಮಾಲಾ, ಜಿ.ಬಿ.ಜೋಶಿ, ಚಂದ್ರಶೇಖರ ಕಂಬಾರ, ಗಿರೀಶ್ ಕಾರ್ನಾಡ್ ಮುಂತಾದವರ ಒಡನಾಟದಲ್ಲಿ ಇದ್ದವರು.

ರಾಮಾನುಜನ್ ಮತ್ತು ಕಾರ್ನಾಡರ ಒಡನಾಟವನ್ನು ಕುರಿತು ಕಾರ್ನಾಡ್ ಅವರು ತಮ್ಮ ಕೃತಿಯಲ್ಲಿ ಹೀಗೆ ವಿವರಿಸುತ್ತಾರೆ:

> “ಸಮ್ಮೇಳನಕ್ಕೆ ಮೂರು ಸುಪ್ರಸಿದ್ಧ ಪ್ರಾಧ್ಯಾಪಕರು ಬಂದಿದ್ದರು. ಜಯಪುರದ ಡಾ.ಸ್ಪಾಕ್, ಅಲಹಾಬಾದದ ಡಾ.ಎಸ್.ಸಿ.ಡೇ ಹಾಗೂ ಪ್ರಾ.ದಸ್ತೂರ. ಸ್ಪಾಕ್ ಮಹಿಳೆಯಾಗಿದ್ದು ಬಣ್ಣಗಳು, ಹೂವು, ಬಟ್ಟೆಯ ಸ್ಪರ್ಶಕತೆಯ ಬಗ್ಗೆ ಅವರಿಗಿದ್ದ ಸಂವೇದನೆ ಬಗ್ಗೆ ಅರೋರಾ ಬಹಳ ದಿನ ನೆನಸಿಕೊಳ್ಳುತ್ತಿದ್ದಳು. ಡೇ ನಿಲುವಂಗಿ, ಧೋತರ ತೊಟ್ಟು ಅಪ್ಪಟ ಅಲಹಾಬಾದಿಗಳಾಗಿದ್ದರೆ, ದಸ್ತೂರ ಸೂಟು–ಬೂಟು ಧರಿಸಿ ಸುಶಿಕ್ಷಿತ ಫಲುಕಿನಿಂದ ಇಂಗ್ಲಿಷ್ ಮಾತನಾಡುತ್ತಿದ್ದರು.
>
> ಸ್ಪಾಕ್ ತಮ್ಮ ಭಾಷಣದಲ್ಲಿ ‘ಭಾರತೀಯರು ಇಂಗ್ಲಿಷಿನಲ್ಲಿ ಕವಿತೆ ಬರೆಯುತ್ತಾರೆ ನಿಜ. ಆದರೆ ಆ ಕವಿತೆಗಳ ಭಾಷೆಯಲ್ಲಿ ಇಂಗ್ಲಿಷಿಗೆ ಸಹಜವಾದ ಫಲಕು, ಲಯ ಇರುವುದಿಲ್ಲ. ಹೀಗಾಗಿ ಇಂಗ್ಲಿಷ್ ಮಾತೃಭಾಷೆಯಿದ್ದವರಿಗೆ ಕವಿತೆಗಳನ್ನೋದುವಾಗ ನಾಲಿಗೆಯೇ ಹೊರಳುವುದಿಲ್ಲ’ ಎಂದು ವಿಧಾನ ಮಾಡಿದರು. ಆಗ ಬೆಳಗಾವಿಯ ಲಿಂಗರಾಜ ಕಾಲೇಜಿನಿಂದ ಪ್ರತಿನಿಧಿಯಾಗಿ ಬಂದ ರಾಮಾನುಜನ್ ಸ್ಪಾಕ್‌ರನ್ನು ಸಂಧಿಸಿ, ತಮ್ಮ ಕವಿತೆಗಳನ್ನು ಓದಿ ತೋರಿಸಿದರು. ಸ್ಪಾಕ್ ರಾಮಾನುಜನ್‌ರ ಇಂಗ್ಲಿಷ್ ಬಳಕೆಯ ನೈಪುಣ್ಯವನ್ನು ಮೆಚ್ಚಿ, ಆ ಬಗ್ಗೆ ಇತರ ಪ್ರತಿನಿಧಿಗಳ ಹತ್ತಿರ ಆಡಿ ಹೊಗಳಿದರು. ಸ್ಪಾಕ್‌ರಿಂದ ಹೊಗಳಿಸಿಕೊಳ್ಳುವುದು ಸಾಮಾನ್ಯ ಮಾತಾಗಿರಲಿಲ್ಲ. ಕೂಡಲೆ ರಾಮಾನುಜನ್‌ರ ಪ್ರತಿಷ್ಠೆ ಮೇಲಕ್ಕೇರಿತು.”[೩]

ಹೀಗೆ ಇಂಗ್ಲಿಷ್ ಮಾತೃಭಾಷೆಯುಳ್ಳ ಓದುಗರಿಗೆ ಇಂಗ್ಲಿಷಿನಲ್ಲಿ ಯಾವ ರೀತಿ ಕವಿತೆಗಳನ್ನು ಬರೆಯಬೇಕೆಂಬ ನೈಪುಣ್ಯವನ್ನು ರಾಮಾನುಜನ್ ಅವರು ಗಳಿಸಿಕೊಂಡಿದ್ದರು. ರಾಮಾನುಜನ್ ಅವರ ಆಸಕ್ತಿಯ ಕ್ಷೇತ್ರಗಳು ಹಲವಾರು. ಗಾದೆಗಳು, ಒಗಟುಗಳು, ಹಾಡುಗಳು ಮತ್ತು ಜನಪದ ಕಥೆಗಳನ್ನು ಹಳ್ಳಿಗಳಿಗೆ ಹೋಗಿ ಸಂಗ್ರಹಿಸಿದರು. ಒಮ್ಮೆ ಚಳ್ಳಕೆರೆ ತಾಲ್ಲೂಕಿನ ಬೆಳಗೆರೆ ಗ್ರಾಮಕ್ಕೆ ಬಿ.ವಿ.ವೈಕುಂಠರಾಜು ಮತ್ತು ಕೃಷ್ಣಮೂರ್ತಿ ಹನೂರು ಇವರೊಡಗೂಡಿ ಹೋಗಿ ಸಿರಿಯಜ್ಜಿಯಿಂದ ಜನಪದ ಸಾಹಿತ್ಯವನ್ನು ಸಂಗ್ರಹಿಸಲು ಬೆಳಗೆರೆ ಕೃಷ್ಣಶಾಸ್ತ್ರಿಗಳ ನೆರವನ್ನು

ಪಡೆಯುತ್ತಾರೆ. ಅಮೆರಿಕರಿಂದ ಬಂದ ಈ ದೊಡ್ಡ ವಿದ್ವಾಂಸರನ್ನು ಕಂಡು ಬೆಳಗೆರೆ ಕೃಷ್ಣಶಾಸ್ತ್ರಿಗಳು ಅಚ್ಚರಿ ಪಡುತ್ತಾರೆ. ಆ ಸಂದರ್ಭವನ್ನು, ಶಾಸ್ತ್ರಿಗಳು ರಾಮಾನುಜನ್ ಅವರ ವ್ಯಕ್ತಿತ್ವನ್ನು ಹೀಗೆ ಚಿತ್ರಿಸಿದ್ದಾರೆ:

> "ಸಾಧಾರಣ ಪ್ಯಾಂಟು, ಷರ್ಟು, ಚಪ್ಪಲಿಗಳು ಕನ್ನಡಕ ಧರಿಸಿದ ಅವರು ಕಾರಿನಿಂದ ಇಳಿಯುತ್ತಿದ್ದಂತೆಯೇ ಒಂದು ಹೆಜ್ಜೆ ಮುಂದೆ ಬಂದು ಎರಡೂ ಕೈಜೋಡಿಸಿ ಶಿರಭಾಗಿ 'ನಮಸ್ಕಾರ, ನಾನು ರಾಮಾನುಜನ್' – ಎಂದಾಗ ಅವರ ಧ್ವನಿಯ ಮಾರ್ದವ, ವಿನಯ, ಸಜ್ಜನಿಕೆ ಹಾಗೂ ಸರಳತೆಗೆ ನಾನು ಮಾರುಹೋದೆ. ಸುಮಾರು ಮುವತ್ತು ವರ್ಷಗಳಿಂದ ಅಮೇರಿಕೆಯ ಬದುಕಿನ ರೀತಿಗೆ ಒಗ್ಗಿದ್ದ ಅವರು ನಮ್ಮ ಗುಡಿಸಿಲಿನ ಚಾಪೆಯ ಮೇಲೆ ಕುಳಿತಿದ್ದು ಒಂದು ಆಶ್ಚರ್ಯ. ಅಲ್ಲಿ ಕೊಟ್ಟ ಉಪ್ಪಿಟ್ಟಿನಲ್ಲಿ ಬೆರಸಿದ ಕಾಳನ್ನು ಗುರುತಿಸಿ "ಇದು ಹಸಿ ಹಲಸಂದೆ' – ಎಂದು ಹೇಳಿದ್ದು, ಅಲ್ಲಿನ ಸಾಧಾರಣ ಜನರೊಂದಿಗೆ ಬೆರೆತು ತಮ್ಮ ವ್ಯಕ್ತಿತ್ವದ ಯಾವ ಎತ್ತರವನ್ನು ತೋರಿಸದೆ ಅವರವರಿಗೆ ಹೊಂದಿಕೊಂಡು ಮಾತನಾಡಿದ್ದು ವ್ಯವಹರಿಸಿದ್ದು ಸೋಜಿಗವನ್ನುಂಟು ಮಾಡಿತು.
>
> ಸಿರಿಯಜ್ಜಿಯನ್ನು ಇಲ್ಲಿಗೆ ಕರೆಸುತ್ತೇನೆಂದಾಗ 'ಬೇಡ, ಬೇಡ ನಾನು ಅಜ್ಜಿಯ ಮನೆಯನ್ನು ನೋಡಬೇಕು, ಆ ಊರು, ಆ ಜನ, ಅಲ್ಲಿನ ಪರಿಸರ, ಅವರ ಜೀವನ ಅಲ್ಲಿನ ಇತರ ವಿಶೇಷಗಳು ಇವೆಲ್ಲವನ್ನು ನೋಡಬೇಕು. ಇಷ್ಟು ದೂರ ಬಂದ ಮೇಲೆ ಇನ್ನೊಂದು ೩–೪ ಕಿಲೋಮೀಟರ್ ದೂರ ಹೋಗುವುದೇನೂ ಹೆಚ್ಚಿನದಲ್ಲ' – ಎಂದರು. ಅವರು ಬಂದ ಕಾರಿನಲ್ಲೇ ಸಿರಿಯಜ್ಜಿಯ ಹಟ್ಟಿಗೆ ಹೋದೆವು." ೪

ಸಾವಿರಾರು ವರ್ಷಗಳ ಆಳವಾದ ಬೇರುಗಳ ಭಾರತದ ಬಹುಸಂಸ್ಕೃತಿಯ ಒಳಗಿದ್ದ ರಾಮಾನುಜನ್ ಪಾಶ್ಚಿಮಾತ್ಯರ ಆಧುನಿಕ ಸಂಸ್ಕೃತಿಗೆ ಮುಖಾಮುಖಿಯಾದ ಸಂದರ್ಭ, ಎರಡು ಸಂಸ್ಕೃತಿಗಳ ಅಧ್ಯಯನದಲ್ಲಿ ತಮಗೆ ಗೋಚರಿಸಿದ ಸತ್ಯದ ಅನ್ವೇಷಣೆ, ಇವರ ಸಾಹಿತ್ಯದಲ್ಲಿ ಕಂಡುಬಂದಂತಹ ಸಂಸ್ಕೃತಿ ಚಿಂತನೆ ಮತ್ತು ಎರಡೂ ಸಂಸ್ಕೃತಿಗಳ ನಡುವಿನ ಪಯಣಗಳನ್ನು ಹಾಗೂ ದ್ವಂದ್ವಗಳನ್ನು ಈ ಅಧ್ಯಯನಕ್ಕೆ ಒಳಪಡಿಸುವುದಾಗಿದೆ. ಅಂತೆಯೇ ಅಂದು ಭಾರತೀಯ ಸಂಸ್ಕೃತಿಯ ಶ್ರೀಮಂತ ಪರಂಪರೆಯನ್ನು ಪಾಶ್ಚಿಮಾತ್ಯರಿಗೆ ಕೊಡುವ ಆವಶ್ಯಕತೆ ಮತ್ತು ಆ ಸಂದರ್ಭದಲ್ಲಿ ಇವರಿಗೆ ಎದುರಾದಂತಹ ಸಾಮಾಜಿಕ ಮತ್ತು ಸಾಂಸ್ಕೃತಿಕ ಬಿಕ್ಕಟ್ಟುಗಳು ಯಾವುವು? ಮತ್ತು ಅವುಗಳನ್ನು ಇವರು ಹೇಗೆ ಸಮರ್ಥಿಸಿಕೊಳ್ಳುತ್ತಾರೆ ಎಂಬುದನ್ನು ಗಂಭೀರವಾದ ಚರ್ಚೆಗೆ ಒಳಪಡಿಸಲಾಗುವುದು. ಭಾರತೀಯ ಚಿಂತನ ಪರಂಪರೆಯ ವೈಶಿಷ್ಟ್ಯತೆಯನ್ನು ಗುರುತಿಸುವ ಅವರ ಯತ್ನವನ್ನು ಗುರುತಿಸುವ ಉದ್ದೇಶವನ್ನೂ ಈ ಅಧ್ಯಯನ ಒಳಗೊಂಡಿದೆ.

ಹಿಂದೆ ಇದ್ದಂತಹ ಭಾರತೀಯ ಸಂಸ್ಕೃತಿ, ಪ್ರಸ್ತುತ ಬದಲಾಗುತ್ತಿರುವ ಆಧುನಿಕ ಸಂಸ್ಕೃತಿ ಎರಡೂ ಮುಖಾಮುಖಿಯಾಗುವ ಸಂದರ್ಭದಲ್ಲಿ ರಾಮಾನುಜನ್ ತಮ್ಮ ಅಧ್ಯಯನಗಳ ಮೂಲಕ ಭಾರತದ ನೈಜ ಬಹುಸಂಸ್ಕೃತಿಯ ಪರಿಚಯವನ್ನು ಆಗಲೇ ಜಗತ್ತಿಗೆ ಪರಿಚಯಿಸಿರುವ ರೀತಿಯನ್ನು ಇಂದು ಅಧ್ಯಯನದಲ್ಲಿ ಗುರುತಿಸಿಕೊಳ್ಳಬೇಕಾಗಿದೆ. ಪ್ರಸ್ತುತದಲ್ಲಿ ಆಧುನಿಕತೆಯ ಕಡೆ ಮುಖಮಾಡಿರುವ ಸಂಸ್ಕೃತಿ ಎಲ್ಲಿ? ಸಂಸ್ಕೃತ ಮೂಲದ ಗ್ರಹಿಕೆಯಲ್ಲಿದ್ದ ಸಂಸ್ಕೃತಿ ಎಲ್ಲಿ? ಅದಕ್ಕಿಂತಲೂ ಪುರಾತನವಾದ ಮೌಖಿಕ ಪರಂಪರೆಯ ಬಹುತ್ವದ ಸಂಸ್ಕೃತಿ ಎಲ್ಲಿ? ಎಂಬ ರಾಮಾನುಜನ್ ಅವರ ಚಿಂತನೆಗಳನ್ನು ಇಲ್ಲಿ ವಿಶ್ಲೇಷಣೆಯ ಮೂಲಕ ಅರ್ಥೈಸಿಕೊಳ್ಳಬೇಕಾಗಿದೆ.

೧.೨. ವ್ಯಾಪ್ತಿ

ರಾಮಾನುಜನ್(೧೯೨೯-೧೯೯೩) ಒಬ್ಬ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳೆರಡರಲ್ಲೂ ಪ್ರಖ್ಯಾತರಾದ ಕವಿ, ಜಾನಪದತಜ್ಞ ಹಾಗೂ ಮಾನವಕುಲಶಾಸ್ತ್ರಜ್ಞ(Ethnographer). ಇವರು ಭಾರತದ ಮೌಖಿಕ ಕಥೆಗಳು, ಗಾದೆಗಳು, ಜೋಗುಳ ಹಾಗೂ ಜನಪದ ಹಾಡುಗಳನ್ನು ಕುರಿತು ಗಂಭೀರವಾದ ಅಧ್ಯಯನಕ್ಕೆ ಒಳಪಡಿಸಿದ ಭಾರತದ ಮೊದಲ ಚಿಂತಕ. ರಾಮಾಯಣ, ಮಹಾಭಾರತ, ವೇದ, ಉಪನಿಷತ್ತುಗಳನ್ನು ಹೊಸ ಆಲೋಚನೆಗೆ, ಸಾಂಸ್ಕೃತಿಕ ಅನುಸಂಧಾನಕ್ಕೆ ಗುರಿ ಮಾಡಿದ ಅಪರೂಪದ ಚಿಂತಕ. ತಮ್ಮ ಸ್ವತಂತ್ರ ಕವಿತೆಗಳಲ್ಲಿ ಪುರಾಣ, ಪರಂಪರೆ, ಆಧುನಿಕತೆಯನ್ನು ಹೊಸ ಬಗೆಯಿಂದ ಶೋಧಿಸಲು, ಅರ್ಥೈಸಲು ಯತ್ನಿಸಿದ ಕವಿ. ಜಾನಪದ ಸಾಹಿತ್ಯದಲ್ಲಿ ಅಭಿವ್ಯಕ್ತವಾಗಿರುವ ವಿಶ್ವದ ಮಹಿಳೆಯರ ಸಮೃದ್ಧತೆಯ ಭಾವನೆಗಳನ್ನು ಕುರಿತು ವಿಶ್ಲೇಷಣೆಗೆ ಗುರಿ ಮಾಡಿದ ಜಾನಪದತಜ್ಞ. ಕನ್ನಡ ಮತ್ತು ತಮಿಳು ಸಾಹಿತ್ಯನ್ನು ಇಂಗ್ಲಿಷಿಗೆ ಅನುವಾದ ಮಾಡಿದ ಪ್ರಬುದ್ಧ ಅನುವಾದಕ. ಬಹುಶಃ ಈ ಕ್ಷೇತ್ರದಲ್ಲಿ ಅನುವಾದ ಮಾಡಿದ ಮತ್ತೊಬ್ಬ ಪರಿಣತ ಭಾರತೀಯ ವಿದ್ವಾಂಸ ಇರಲಾರರು. ಇದಕ್ಕೆಲ್ಲಾ ಮಿಗಿಲಾಗಿ ಅವರು ಒಬ್ಬ ಅಸಾಧಾರಣ ಬೋಧಕ. ಬೋಧನೆಯಲ್ಲಿ ಅವರಿಗಿದ್ದ ಪ್ರೀತಿಯನ್ನು ಅವರ ಅನೇಕ ವಿದ್ಯಾರ್ಥಿಗಳು, ವಿದ್ಯಾರ್ಥಿಗಳಲ್ಲದ ಅವರ ಅಭಿಮಾನಿ ಸ್ನೇಹಿತರೆಲ್ಲಾ ಸ್ಮರಿಸುತ್ತಾರೆ. ಅನೇಕ ದೇಶಿ, ವಿದೇಶಿ ವಿದ್ವಾಂಸರೆಲ್ಲರೂ ಅವರನ್ನು 'ಗುರು' ಸ್ಥಾನದಲ್ಲಿ ಕಂಡಿದ್ದಾರೆ. ಅಡಿಗರಿಗಿಂತ ಸರಿ ಸುಮಾರು ಹತ್ತು ವರ್ಷ ಚಿಕ್ಕವರಾದ ಅವರನ್ನು ಅನಂತಮೂರ್ತಿ, ಲಂಕೇಶ್, ಸುಮತೀಂದ್ರ ನಾಡಿಗ, ಚಂದ್ರಶೇಖರ ಕಂಬಾರ, ಗಿರೀಶ್ ಕಾರ್ನಾಡ, ಕೀರ್ತಿನಾಥ ಕುರ್ತಕೋಟಿ ಮುಂತಾದ ಕಿರಿಯ ಲೇಖಕರೆಲ್ಲಾ ಅವರನ್ನು ಗೌರವ ಭಾವನೆಯಿಂದ ಮತ್ತು ಗುರುವಾಗಿ ಕಂಡಿದ್ದಾರೆ. ಅಡಿಗರ ಕಾವ್ಯ ತುಂಬಾ ಸಂಕೀರ್ಣ, ಅಮೂರ್ತ ಎನ್ನುವಂತಿದ್ದ ಕಾಲದಲ್ಲಿ ರಾಮಾನುಜನ್ ಅವರು ಪ್ರಾಚೀನ ಪರಂಪರೆಯ ಪುರಾಣದ ಪ್ರತಿಮೆ, ರೂಪಕಗಳನ್ನು ಒಡೆದು ಹೊಸದನ್ನು ಕಾಣಿಸಿ ಕಾವ್ಯವನ್ನು ಓದುಗರ ಹತ್ತಿರಕ್ಕೆ ಕೊಂಡೊಯ್ದ ಅಪರೂಪದ ವ್ಯುತ್ಪತ್ತಿಯನ್ನು ಹೊಂದಿದ್ದ ಕವಿ.

ಇಂಗ್ಲಿಷ್ ಕವಿಗಳಾದ ಟಿ.ಎಸ್.ಎಲಿಯಟ್(೧೮೮೮-೧೯೬೫) ಮತ್ತು ಡಬ್ಲ್ಯು.ಎಚ್. ಆಡೆನ್ (೧೯೦೭-೧೯೭೩) ಇವರ ಸಂಪರ್ಕವನ್ನು ರಾಮಾನುಜನ್ ಅವರು ಸಂಪಾದಿಸಿದ್ದರು. ರಾಮಾನುಜನ್ ಇಂಗ್ಲಿಷ್ ಕವಿತೆಗಳು ಆರಂಭದಲ್ಲಿ ಇಂಗ್ಲಿಷ್ ನಿಯತಕಾಲಿಕೆಯಲ್ಲಿ(Illustrated Weekly of India) ಪ್ರಕಟವಾಗಿ ವಿದ್ವಾಂಸರ ಗಮನವನ್ನು ಸೆಳೆದಂತಹವು. ಆ ಸಂದರ್ಭದಲ್ಲಿ ಇಂಗ್ಲಿಷಿನಲ್ಲಿ ಬರೆಯುತ್ತಿದ್ದ ಭಾರತೀಯ ಕವಿಗಳು ಹಿಂದಿನ ಹತ್ತೊಂಬತ್ತನೆಯ ಶತಮಾನದ ಇಂಗ್ಲಿಷ್ ಕಾವ್ಯದ ನುಡಿಗಟ್ಟು(Idiom) ಮತ್ತು ಶಬ್ದಕೋಶ(Vocabulary)ಗಳನ್ನೇ ತಮ್ಮ ಕವಿತೆಗಳಲ್ಲಿ ಬಳಸುತ್ತಿದ್ದರು. ಬಹುಮಟ್ಟಿಗೆ ಅವರೆಲ್ಲಾ ವಿಕ್ಟೋರಿಯನ್ ಯುಗದ ಇಂಗ್ಲಿಷ್ ಕವಿಗಳ ಪ್ರಭಾವಕ್ಕೆ ಒಳಗಾಗಿದ್ದವರು. ಆದರೆ ರಾಮಾನುಜನ್ ಅವರು ಈ ಬಗೆಯ ವಿಕ್ಟೋರಿಯನ್ ಬರಹಗಳಿಗೆ ತೀವ್ರವಾಗಿ ವಿರೋಧ ವ್ಯಕ್ತಪಡಿಸಿ ತಮ್ಮ ಇಂಗ್ಲಿಷ್ ಕವಿತೆಗಳಲ್ಲಿ ಸಮಕಾಲೀನ ಜೀವಂತವಾದ ಭಾಷೆ, ಬಾಯ್ಮಾತು, ಶಬ್ದ, ನುಡಿಗಟ್ಟುಗಳನ್ನು ಬಳಸಿದರು. ಅದರ ಜೊತೆಗೆ ಆಳವಾದ ತಮ್ಮ ಅನುಭವ ಹಾಗೂ ಸ್ವಂತ ಸಮಸ್ಯೆಗಳನ್ನು ಕವಿತೆಗಳಲ್ಲಿ ಕಾಣಿಸಿದರು. ಹೀಗೆ ತಮ್ಮ ಭಾಷಾವಿಜ್ಞಾನದಲ್ಲಿ ಕಲಿತ ಪ್ರೌಢತೆಯನ್ನು ಕಾವ್ಯದಲ್ಲಿ ತೋರಿಸಿದರು. ಆಮೇಲೆ ಇಂಗ್ಲೀಷ್‌ನಲ್ಲಿ ಬರೆಯುವ ಭಾರತೀಯ ಕವಿಗಳೂ ಸಹ ಅವರ ಪ್ರಭಾವಕ್ಕೆ ಒಳಗಾದರು. ರಾಮಾನುಜನ್ ಅವರಿಂದ ತಮ್ಮ ಬಹುಪಾಲು ನಾಟಕಗಳ ವಸ್ತುಗಳಿಗೆ ಪ್ರೇರಣೆ ಪಡೆದ ಗಿರೀಶ್ ಕಾರ್ನಾಡ್ ಅವರು "ರಾಮಾನುಜನ್ ನನಗೆ ಅಕ್ಷಯಪಾತ್ರೆ ಇದ್ದಂತೆ"(Ramanujan was an Akshayapatra to me)[೫] ಎಂದು ಹೇಳಿದ್ದಾರೆ.

ಇನ್ನು ಭಾಷಾಂತರ ಒಂದು ಅಪೂರ್ಣ ಕಲೆ(Translation is a incomplete Art) ಎಂದು ಅವರು ಹೇಳಿದರೂ, ಭಾಷಾಂತರ ಕ್ಷೇತ್ರದಲ್ಲಿ ಅವರು ವಿಶೇಷವಾದ ಸಾಧನೆಯನ್ನು ಮಾಡಿದ್ದಾರೆ. ಭಾಷಾಂತರದ ಬಗ್ಗೆ ಅವರು 'ಕವಿಯಾದವನು ಮಾತ್ರ ಮತ್ತೊಬ್ಬ ಕವಿಯನ್ನು ಭಾಷಾಂತರ ಮಾಡಬಲ್ಲ'(Only a poet can translate another poet) ಎಂದು ಹೇಳುತ್ತಾ ವಚನಗಳನ್ನು, ತಮಿಳು ಕಾವ್ಯವನ್ನು ಇಂಗ್ಲಿಷಿಗೆ ಉತ್ತಮವಾಗಿ ಅನುವಾದ ಮಾಡಿದವರು. ಪ್ರಪಂಚದ ಚರಿತ್ರೆಗೆ, ಸಂಸ್ಕೃತಿಗೆ ಮತ್ತು ಸಾಹಿತ್ಯಕ್ಕೆ ರಾಮಾನುಜನ್ ಅವರ ಕೊಡುಗೆ ಅಪಾರ. ಇವರ ಸಾಹಿತ್ಯ ಮತ್ತು ಸಾಧನೆಯ ವಿಸ್ತಾರವನ್ನು ಕೆಳಕಂಡಂತೆ ವಿಂಗಡಿಸಿ ಅಧ್ಯಯನಕ್ಕಾಗಿ ವಿಂಗಡಿಸಲಾಗಿದೆ.

೧.೨.೧. ಕವಿ

ರಾಮಾನುಜನ್ ಅವರು ಬಹುಮುಖ ಪ್ರತಿಭೆಯ ಕವಿ; ಕನ್ನಡ ನವ್ಯ ಕವಿಗಳಿಂತ ವಿಭಿನ್ನವಾದ ಮಾದರಿಯೊಂದನ್ನು ಕಾವ್ಯದಲ್ಲಿ ಪ್ರಕಟಿಸಿದ ಲೇಖಕ. ಗೋಪಾಲಕೃಷ್ಣ ಅಡಿಗರಷ್ಟೇ ಮುಂದಿನ ಯುವಕವಿಗಳ ಮೇಲೆ ಪ್ರಭಾವ ಬೀರಿದವರು. ಕನ್ನಡ ಕಾವ್ಯಕ್ಷೇತ್ರದಲ್ಲಿ ತಮ್ಮದೇ

ವಿಶಿಷ್ಟ ಚಹರೆಗಳನ್ನು ಸ್ಥಾಪಿಸಿದ್ದಾರೆ. ಅವರು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳೆರಡರಲ್ಲೂ ಒಟ್ಟು ೮ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಕನ್ನಡದಲ್ಲಿ 'ಹೊಕ್ಕುಳಲ್ಲಿ ಹೂವಿಲ್ಲ'(೧೯೬೯), '...ಮತ್ತೂ ಇತರ ಪದ್ಯಗಳು'(೧೯೭೭), 'ಕುಂಟೋಬಿಲ್ಲೆ'(೧೯೯೦) ಎಂಬ ಮೂರು ಕವನ ಸಂಕಲನಗಳು ಪ್ರಕಟವಾಗಿವೆ. ಇಂಗ್ಲಿಷ್‌ನಲ್ಲಿ 'The Striders'(1966), 'Relations'(1971), 'Second Sight'(1986), 'The Black Hen in Collected Poems'(1995), 'Uncollected poems'(2001) ಎಂಬ ಕವನ ಸಂಕಲನಗಳು ಪ್ರಕಟವಾಗಿವೆ.

ರಾಮಾನುಜನ್ ಅವರ ಕಾವ್ಯ ಭಾರತೀಯ ಪರಂಪರೆ ಮತ್ತು ಸ್ಮರಣೆಯ ಆಶಯಗಳಿಂದ ಕೂಡಿದೆ. ಜೊತೆಗೆ ಅವರ ಇಂಗ್ಲಿಷ್ ಕವಿತೆಗಳಲ್ಲೂ ಕೂಡ ಭಾರತೀಯತೆಯ ಬೇರುಗಳು ಕಾಣಿಸಿಕೊಳ್ಳುತ್ತವೆ. ಇವರ ಕಾವ್ಯದ ತಂತ್ರ ಕೂಡ ತಮ್ಮ ಸಮಕಾಲೀನ ಕವಿಗಳಿಗಿಂತ ಭಿನ್ನವಾದುದು. ಕವಿಯು ತನ್ನ ಪ್ರಾಚೀನ ಪರಂಪರೆಯ ಬೇರುಗಳ ಸಂಸ್ಕೃತಿಯಲ್ಲಿ ನೆಲೆಯೂರಿರುವುದು ಕಾಣಿಸುತ್ತದೆ. ಇವರ ಕಾವ್ಯದ ವಸ್ತು ಆಧುನಿಕ ಪರಿಸರಕ್ಕೆ ಸಹಜವಾಗಿ ಸ್ಪಂದಿಸಿದ್ದಾಗಿದೆ. ಮನುಷ್ಯರ ಸಾಮಾನ್ಯ ಗುಣ ಮತ್ತು ಅನುಭವಗಳ ತಿಳಿ ಹಾಸ್ಯ, ನೋವು ಹಾಗೂ ಸಹನೆಯ ಅಭಿವ್ಯಕ್ತಿಯ ಕ್ರಮವನ್ನು ಇವರ 'ಹೊಕ್ಕುಳಲ್ಲಿ ಹೂವಿಲ್ಲ' ಸಂಕಲನದ ಕವಿತೆಗಳಲ್ಲಿ ಮುಂದೆ ಗುರುತಿಸಲಾಗಿದೆ.

ಮಧ್ಯಮವರ್ಗದ ಬುದ್ಧಿಜೀವಿಗಳ ಪ್ರತಿರೋಧ ಮತ್ತು ನೆನಪು ಇವುಗಳ ಚಿತ್ರಣವನ್ನು 'ಮತ್ತು ಇತರ ಪದ್ಯಗಳು' ಸಂಕಲನದ ಪದ್ಯಗಳಲ್ಲಿ ಕಾಣಬಹುದು. ರಾಮಾನುಜನ್‌ರ ಕಾವ್ಯದ ಆಕೃತಿ ಗಟ್ಟಿ ಬೌದ್ಧಿಕತೆಯಿಂದ ಕೂಡಿದ್ದಾಗಿದೆ. ಅಲ್ಲಿ ಭಾವುಕತೆಗೆ, ಅಮೂರ್ತತೆಗೆ ಅವಕಾಶವಿಲ್ಲ. ಭಾರತೀಯ ಮತ್ತು ಪಾಶ್ಚಾತ್ಯ ನೆಲದ ವಾಸ್ತವ ಅಂತಃಸಂಬಂಧಗಳ ಚಿತ್ರಣವನ್ನು ಇವರ ಶ್ರೇಷ್ಠ ಕವನಗಳಲ್ಲಿ ಗುರುತಿಸಬಹುದಾಗಿದೆ. ಈ ದಿಕ್ಕಿನಲ್ಲಿ ಅವರ 'ಕುಂಟೋಬಿಲ್ಲೆ' ಮತ್ತೊಂದು ಮಹತ್ವದ ಕವನ ಸಂಕಲನವಾಗಿದೆ. ಅವರ ನೆನಪುಗಳು ಸಾಂಪ್ರದಾಯಕ್ಕಿಂತ ಭಿನ್ನವಾಗಿ ಆಧುನಿಕತೆಯತ್ತ ಮುಖ ಮಾಡುತ್ತವೆ. ಅವರು ತಮ್ಮ ಕವನಗಳಲ್ಲಿ ಭೂತ ಮತ್ತು ವರ್ತಮಾನ ಇವುಗಳ ಸಂಬಂಧವನ್ನು ಅರ್ಥೈಸುವ ಯತ್ನವನ್ನು ಮಾಡುತ್ತಾರೆ.

ಧರ್ಮನಿರಪೇಕ್ಷ ದೃಷ್ಟಿಯಿಂದ, ಆಧುನಿಕ ಪ್ರಜ್ಞೆಯಿಂದ ಹೊರಡುವ ಇವರ ಕವನಗಳ ರಚನೆ ವಚನಗಳಿಗೆ, ಝೆನ್ ಕಥೆಗಳಿಗೆ, ಜನಪದ ಕಥೆ, ಕಾವ್ಯ, ಒಗಟುಗಳಿಗೆ ಹತ್ತಿರದಲ್ಲಿ ಇವೆ. ಅವರ 'ಕುಂಟೋಬಿಲ್ಲೆ' ಸಂಕಲನದಲ್ಲಿ ವ್ಯಕ್ತಿಸ್ವಾತಂತ್ರ್ಯವನ್ನು, ಬಹುಸಂಸ್ಕೃತಿಯನ್ನು ಮತ್ತು ರಾಜಕೀಯ ನಿಲುವುಗಳನ್ನು ಪ್ರಕಟಿಸುವ ಹಲವಾರು ಕವಿತೆಗಳಿರುವುದನ್ನು ಗುರುತಿಸಬಹುದಾಗಿದೆ.

'The Striders' ಎಂಬ ಅವರ ಇಂಗ್ಲಿಷ್ ಮೊದಲ ಕವನ ಸಂಕಲನಕ್ಕೆ Poetry Book Societyಯ ಪುರಸ್ಕಾರ ದೊರೆತಿದೆ. ಅವರು ಭಾರತಕ್ಕೆ ಮರಳದೆ ಪರದೇಶಿಯಾಗಿದ್ದು

ಶಿಕಾಗೋ ವಿಶ್ವವಿದ್ಯಾಲಯದಲ್ಲಿ ದ್ರಾವಿಡ ಭಾಷಾವಿಜ್ಞಾನವನ್ನು ಬೋಧಿಸುತ್ತಿದ್ದ ಸಂದರ್ಭದಲ್ಲಿ ಈ ಸಂಕಲನ ಹೊರಬರುತ್ತದೆ. ಪ್ರಖ್ಯಾತ ಪ್ರಕಾಶಕ ಜಾನ್ ಸ್ಟಾಲ್‌ವರ್ದಿ ಎಂಬಾತ ರಾಮಾನುಜನ್ ಅವರನ್ನು ಕುರಿತು ಹೀಗೆ ಹೇಳುತ್ತಾನೆ:

> "Ramanujan is already a good poet, and potentially a very good one... His rhythms are sure but relaxed in the approved American style of the moment; his voice, however, is his own and India's."[೬]

ಇವರು ಹೇಳುವ ಹಾಗೆ ರಾಮಾನುಜನ್ ಅವರ ಕಾವ್ಯಧ್ವನಿ ಸ್ವಂತದ್ದಾಗಿದ್ದು, ಇಂಡಿಯಾದ್ದಾಗಿದೆ. ಈ ಕೃತಿಯನ್ನು ಲಂಡನ್ನಿನ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ಪ್ರಕಟಿಸಿದ ಕೂಡಲೇ ರಾಮಾನುಜನ್ ಅವರ ಸ್ಥಾನಮಾನಗಳು ಕೂಡ ಮೇಲಕ್ಕೇರುತ್ತವೆ. ಗಿರೀಶ್ ಕಾರ್ನಾಡ್ ಅವರು ಹೇಳುವಂತೆ:

> "The Stridersನ ಪ್ರಕಾಶನದಿಂದ ರಾಮಾನುಜನ್‌ಗೆ ಇನ್ನೊಂದು ಅನಪೇಕ್ಷಿತ ದಿಕ್ಕಿನಲ್ಲಿ ಲಾಭವಾಯಿತು. ಅವರು ಶಿಕಾಗೋ ವಿಶ್ವವಿದ್ಯಾಲಯದ Department of South Asiaದಲ್ಲಿ ಕೆಲಸ ಮಾಡುತ್ತಿದ್ದು ಅವರಿಗೆ tenure ದೊರೆತು, ನೌಕರಿ ಖಾಯಂ ಆಗಲಿಕ್ಕೆ ಅವರೊಂದು ವಿದ್ವತ್ಪೂರ್ಣ ಪುಸ್ತಕವನ್ನು ಪ್ರಕಟಿಸುವುದು ಅತ್ಯಗತ್ಯವಾಗಿತ್ತು. ಆದರೆ ಅವರು ಇನ್ನೂ ಅಂಥ ಒಂದು ಗ್ರಂಥವನ್ನಾದರೂ ಪ್ರಕಟಗೊಳಿಸಿರಲಿಲ್ಲ. ವಿಶ್ವವಿದ್ಯಾಲಯಕ್ಕೆ ಅವರಿಗೆ tenure ಆದಷ್ಟು ಬೇಗ ಕೊಡಬೇಕೆಂಬ ತವಕ. ಅವರು ಬೇರೆ ಗ್ರಂಥದ ದಾರಿ ಕಾಯದೆ, The Striders ಏ ಸಾಕು ಎಂದು ರಾಮಾನುಜನ್‌ಗೆ tenure ಕೊಟ್ಟುಬಿಟ್ಟರು."[೭]

ಇಂಗ್ಲಿಷ್ ಕವಿತೆಗಳಲ್ಲಿಯೂ ಕೂಡ ರಾಮಾನುಜನ್ ಅವರ ನೆನಪು ಒಂದು ಸೃಜನಾತ್ಮಕ ಪಾತ್ರವಾಗಿ ಅಭಿವ್ಯಕ್ತವಾಗುವುದನ್ನು ಗುರುತಿಸಬಹುದಾಗಿದೆ.

೧.೨.೨. ಕಥನಕಾರ

ರಾಮಾನುಜನ್ ಅವರು ಮೂಲತಃ ಕವಿ, ಚಿಂತಕ. ಆದ್ದರಿಂದ ಸೃಜನಶೀಲ ಕಥನದಲ್ಲಿ ಕೆಲಸ ಮಾಡಿದ್ದು ಕಡಿಮೆ. ಆದರೂ ಅವರ ನಾಲ್ಕು ಸಣ್ಣಕತೆಗಳಾದ, 'ಮಧುರೆಯಲ್ಲಿ ಕಂಡ ತಲೆ', 'ಅಣ್ಣಯ್ಯನ ಮಾನವಶಾಸ್ತ್ರ', 'ಎಲ್ಲರ ಮೂಗಿನ ಕತೆ', 'ಒಂದು ದಿನಚರಿಯ ಕೆಲವು ದಿನಗಳು' ಎಂಬ ಕತೆಗಳು ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ವಿಶಿಷ್ಟತೆಯಿಂದ ಕೂಡಿವೆ. ಇವುಗಳ ಜೊತೆಗೆ 'ಮತ್ತೊಬ್ಬನ ಆತ್ಮಚರಿತ್ರೆ' ಎಂಬ ಆತ್ಮಕಥನ ಪ್ರಧಾನವಾದ ಕಿರುಕಾದಂಬರಿಯನ್ನು ಅವರು ರಚನೆ ಮಾಡಿದ್ದಾರೆ. ಅಲ್ಲದೆ, 'ನಾದಬಿಂದು', 'ಗಾನಪ್ರಿಯ' ಎಂಬ ಎರಡು ಕಿರು

ರೇಡಿಯೊ ನಾಟಕಗಳನ್ನೂ ಬರೆದಿದ್ದಾರೆ. ಮತ್ತು ಕೆಲವು 'ನಗೆ ಬರಹಗಳು' ಮತ್ತು ಕೆಲವು 'ಕಿರುಗತೆ'ಗಳನ್ನು ಕೂಡ ರಚಿಸಿದ್ದಾರೆ. ಇವುಗಳಲ್ಲಿ 'ಅಣ್ಣಯ್ಯನ ಮಾನವಶಾಸ್ತ್ರ' ಕಥೆ ಮತ್ತು 'ಮತ್ತೊಬ್ಬನ ಆತ್ಮಚರಿತ್ರೆ' ಕಾದಂಬರಿಯು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವಿಶಿಷ್ಟವಾದ ಕೃತಿಗಳಾಗಿವೆ.

ಒಟ್ಟಾರೆಯಾಗಿ ರಾಮಾನುಜನ್ ಸಾಹಿತ್ಯ ಪ್ರಕಾರದ ಗದ್ಯದಲ್ಲಿಯೂ ಸಹ ಪದ್ಯದ ಲಯ ಇರುತ್ತದೆ. ಕೆಲವೇ ಕಥೆಗಳಾದರೂ ವೈವಿಧ್ಯತೆಯಿಂದ ಕೂಡಿರುವ ಅನನ್ಯವಾದ ಕಥೆಗಳಾಗಿವೆ. ಸಮಕಾಲೀನ ಬರಹಗಾರರಿಗಿಂತ ಭಿನ್ನವಾದ ಅನನ್ಯ ಶೈಲಿಯ ರಚನೆಯನ್ನು ಕಾಣಬಹುದು. ಗದ್ಯದಲ್ಲಿ ಅನುಭವದ ಗಾಢತೆ, ಆಪ್ತತೆ ಎದ್ದು ಕಾಣುತ್ತದೆ. ಹಾಗೆಯೇ ಅವರ ಪದ್ಯದಂತೆ ಗದ್ಯದಲ್ಲಿಯೂ ಸಹ ಅನಾಥಪ್ರಜ್ಞೆ, ಏಕಾಂಗಿತನ, ಭಾರತೀಯ ಸಂಸ್ಕೃತಿಯ ಮೂಲದ ಹುಡುಕಾಟ ಇವು ಮುಖ್ಯವಾಗಿ ಎದ್ದು ಕಾಣುವ ಅಂಶಗಳಾಗಿವೆ.

೧.೨.೩. ಜಾನಪದ

ಸಂಸ್ಕೃತಿಯ ಅಧ್ಯಯನಕ್ಕೆ ಜಾನಪದವನ್ನು ಬಳಸಿಕೊಂಡ ಹೆಗ್ಗಳಿಕೆ ರಾಮಾನುಜನ್ ಅವರದು. ಭಾರತೀಯ ಪ್ರಾದೇಶಿಕ ಭಾಷೆಗಳ ಜನಪದ ಕಥೆಗಳನ್ನು ಆಯ್ದು ಇಂಗ್ಲಿಷಿಗೆ ಅನುವಾದಿಸಿ 'Folktales from India(೧೯೯೧)' ಕೃತಿಯನ್ನು ಹೊರತಂದಿದ್ದಾರೆ. ಹಾಗೆಯೇ ಕನ್ನಡದ ಜನಪದ ಕಥೆಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ 'A Flowering Tree and Other Stories(೧೯೯೭)' ಎಂಬ ಅವರ ಕೃತಿ ಪ್ರಕಟವಾಗಿದೆ. ಜಾನಪದಕ್ಕೆ ಸಂಬಂಧಿಸಿದ ಹಾಗೆ ಕನ್ನಡದಲ್ಲಿ ಬರೆದ ಅವರ 'ಗಾದೆಗಳು'(೧೯೫೫) ಕಿರು ಪುಸ್ತಿಕೆಯು ಕನ್ನಡದ ಹಾಗೂ ಜಗತ್ತಿನ ಹಲವಾರು ದೇಶಗಳ ಗಾದೆಗಳ ಕುರಿತ ಅಧ್ಯಯನದ ಒಂದು ಮಹತ್ವದ ಪುಸ್ತಕವಾಗಿದೆ. ಗಾದೆಗಳ ಸಾಮಾಜಿಕ ಮತ್ತು ಭಾಷಿಕ ಮಹತ್ವವನ್ನು ಗುರುತಿಸಿದ್ದಾರೆ. ಈ ಕೃತಿಗಳ ಪ್ರಸ್ತಾವನೆಗಳಲ್ಲಿ ಸಂಸ್ಕೃತಿಯ ಅನನ್ಯತೆಯನ್ನು ಕುರಿತು ಚರ್ಚಿಸಿದ್ದಾರೆ. ಮೌಖಿಕ ಪರಂಪರೆಯ ಮಹತ್ವವನ್ನು ಮತ್ತು ಜಾನಪದ ಸಂಸ್ಕೃತಿಯ ಅಖಂಡತೆಯನ್ನು ಅರಿಯಲು ರಾಮಾನುಜನ್ ಅವರ ಅಧ್ಯಯನದ ಮಾದರಿಗಳು ಹೊಸತನದಿಂದ ಕೂಡಿವೆ. ಜಾನಪದದ ಚಿಂತನೆಯಿಂದ ಭಾರತೀಯ ಸಂಸ್ಕೃತಿಯನ್ನು ಪಾಶ್ಚಿಮಾತ್ಯರಲ್ಲಿ ಬೆಳೆಸಿದವರಲ್ಲಿ ಇವರು ಪ್ರಮುಖರೆನಿಸುತ್ತಾರೆ. 'ದಕ್ಷಿಣ ಏಷ್ಯಾ ಅಧ್ಯಯನ ಕೇಂದ್ರ'ದ ಮುಖಾಂತರ ಇಡೀ ಗ್ರಾಮೀಣ ಭಾರತದ ಸಾಹಿತ್ಯದ ಸಾಮಗ್ರಿಗಳನ್ನು ಶೇಖರಿಸಿ ಹೆಚ್ಚಿನ ಅಧ್ಯಯನಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

ರಾಮಾನುಜನ್ ಅವರೇ ಹೇಳುವಂತೆ:

> "ಇಂಗ್ಲಿಷ್ ಮತ್ತು ಭಾಷಾಶಾಸ್ತ್ರ, ಮಾನವಶಾಸ್ತ್ರ ಮತ್ತು ಜಾನಪದ ನನ್ನ ಅನುಭವವನ್ನು ರೂಪಿಸುವ ಭಾಷಾಶಾಸ್ತ್ರ, ಛಂದಸ್ಸು ಮತ್ತು ತರ್ಕ ಮುಂತಾದ

ಹೊರಗಿನ ರೂಪಗಳನ್ನು ಒದಗಿಸಿದರೆ ಭಾರತದಲ್ಲಿ ನಾನು ಕಳೆದ ಮೊದಲ ೩೦ ವರ್ಷಗಳು, ನನ್ನ ಅನೇಕ ಪ್ರವಾಸಗಳು, ಹಲವಾರು ಕ್ಷೇತ್ರಕಾರ್ಯಗಳು, ಕನ್ನಡ, ತಮಿಳು ಮತ್ತು ಶ್ರೇಷ್ಠ ಕೃತಿಗಳು ಮತ್ತು ಜಾನಪದ ಮುಂತಾದವುಗಳೊಂದಿಗೆ ನಾನಿರಿಸಿಕೊಂಡಂತಹ ವೃತ್ತಿಸಂಬಂಧಗಳೆಲ್ಲಾ ನನ್ನ ಕಾವ್ಯದ ಪ್ರತಿಮೆ ಮತ್ತು ಸಂಕೇತಗಳಂಥ ಅಂತರಂಗದ ರೂಪಗಳನ್ನು ಒದಗಿಸುತ್ತವೆ"[೮]

ಎಂದು ಹೇಳಿದ್ದಾರೆ. ಹೀಗೆ ಅವರು ಒಳಗಿನ ಮತ್ತು ಹೊರಗಿನ ಅಧ್ಯಯನ, ಕ್ಷೇತ್ರಕಾರ್ಯದ ಅನುಭವಗಳ ಮೂಲಕವೇ ಬೆಳೆದ ಪ್ರಮುಖ ಲೇಖಕ.

೧.೨.೪. ಭಾಷಾಂತರಕಾರ

ರಾಮಾನುಜನ್ ಅವರು ಇಂಗ್ಲಿಷ್‌ಗೆ ಅನುವಾದಿಸಿದ ಕನ್ನಡ ಕಾವ್ಯ, ೧೨ನೇ ಶತಮಾನದ ಕನ್ನಡದ ವಚನಗಳು, ತಮಿಳಿನ ಭಕ್ತಿಕಾವ್ಯ, ತೆಲುಗಿನ ಭಕ್ತಿಕಾವ್ಯ, ಅನಂತಮೂರ್ತಿ ಅವರ 'ಸಂಸ್ಕಾರ' ಕಾದಂಬರಿ, ಕನ್ನಡ ಹಾಗೂ ಭಾರತೀಯ ಜನಪದ ಕತೆಗಳು ಮುಂತಾದ ಭಾಷಾಂತರ ಕೃತಿಗಳು ದೇಶವಿದೇಶದಲ್ಲಿ ಪ್ರಸಿದ್ಧಿಯನ್ನು ಪಡೆದಿವೆ. The Interior Landscape(1967) - Translations from ancient Tamil Sangam Poetry, Song of the Earth and Other Poems(1968) - Translations of selected poems of Gopalakrishna Adiga - with Dr. M.G.Krishnamurthy., Speaking of Siva(1973) - Translations of selected Vachanas of four Twelfth Century Kannada Vachanakaras - Basavanna, Dasimaiah, Allamaprabhu and Akkamahadevi., Hymns for the Drowning(1981) - Translations from ancient Tamil Nammalvar's compositions., Poems of Love and War(1985) - Translations from Tamil Folk Poetry., Folk Tales from India(1990), Samskara(1976) - Translation of Dr. U.R. Ananthamurthy's Kannada novel, The Epic of Palnadu : A Study of Translation of Palnati Virula Katha, A Telugu Oral Tradition from Andhra Pradesh., A Flowering Tree - and other oral tales from India : A.K. Ramanujan - Edited with a Preface by - Stuart Blackburn and Alan Dundes.

ಇವುಗಳೇ ಅಲ್ಲದೆ, ಅವರು ಬೇರೆ ಬೇರೆ ಅನುವಾದಕರ ಜೊತೆಗೂಡಿ, ಕೆಲವು ಮಹತ್ತರವಾದ ಕೃತಿಗಳನ್ನು ಅನುವಾದ ಮಾಡಿದ್ದಾರೆ. ಅವುಗಳೆಂದರೆ; The Literatures of India(1974), Another Harmony(1986), The Oxford Anthology of Modern Indian Poetry(1994).

ಶೌರಿ ಅವರ ಅಪ್ರಕಟಿತ ಇಂಗ್ಲಿಷ್ ಕೃತಿಯನ್ನು 'ಹಳದಿ ಮೀನು' ಎಂದು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ರಾಮಾನುಜನ್ ಅವರು ಭಾಷಾಶಾಸ್ತ್ರದಲ್ಲಿ ಪ್ರಾವೀಣ್ಯತೆ ಹೊಂದಿದ್ದಂತೆಯೇ ಭಾಷಾಂತರದಲ್ಲಿಯೂ ಜಗತ್ತಿನ ಅತ್ಯುತ್ತಮ ಭಾಷಾಂತರಕಾರರಲ್ಲಿ ಒಬ್ಬರಾಗಿದ್ದಾರೆ.

೧.೨.೫. ಸಂಸ್ಕೃತಿ ಚಿಂತಕ

ರಾಮಾನುಜನ್ ಅವರು ಭಾಷಾಂತರಗಳ ಮೂಲಕ ಭಾರತೀಯ ಮತ್ತು ಪಾಶ್ಚಾತ್ಯ ದೇಶಗಳಲ್ಲಿದ್ದ ವಿದ್ವಾಂಸರ ನಂಬಿಕೆಗಳನ್ನು, ಚಿಂತನೆಗಳನ್ನು ಪಲ್ಲಟಗೊಳಿಸಿದರು. ಓರಿಯಂಟಲಿಸ್ಟ್ ವಿದ್ವಾಂಸರು ಆಲೋಚನೆ ಮಾಡುತ್ತಿದ್ದ ಕಲ್ಪನೆ, ಚಿಂತನೆಯನ್ನು ಸಹ ಬದಲಾಯಿಸಿದರು. ಭಾರತದ ಸಂಸ್ಕೃತಿ ಎಂದರೆ ರಾಮಾಯಣ, ಮಹಾಭಾರತ, ವೇದ-ಉಪನಿಷತ್ತು, ಕಾಳಿದಾಸ, ಸಂಸ್ಕೃತ ಇವಿಷ್ಟೇ ಅಧ್ಯಯನಕ್ಕೆ ಆಕರಗಳೆಂಬುದು ಓರಿಯಂಟಲಿಸ್ಟರ ಕಲ್ಪನೆಯಾಗಿತ್ತು. ಆದರೆ ರಾಮಾನುಜನ್ ಅವರು ಈ ಎಲ್ಲಾ ಹಳೆಯ ವಸ್ತುಗಳನ್ನು ಹೊಸ ಚಿಂತನೆಯ ಮೂಲಕ ಅಧ್ಯಯನ ಮಾಡಿ ವಿಚಾರಗಳನ್ನು ಮಂಡಿಸಿ ಓರಿಯಂಟಲಿಸ್ಟ್ ವಿದ್ವಾಂಸರ ಅಧ್ಯಯನದ ಕಲ್ಪನೆಯನ್ನು ವಿಸ್ತರಿಸಿದರು. ಇದಕ್ಕಾಗಿ ಅಭಿಜಾತ ಕಾವ್ಯಪರಂಪರೆಗಳಷ್ಟೇ ಅಲ್ಲದೆ ಕನ್ನಡದ ವಚನಗಳು, ತಮಿಳಿನ ಸಂಗಂ ಕಾವ್ಯ, ಆಳ್ವಾರ್ ಕಾವ್ಯ, ಭಾರತದ ಜನಪದ ಕಥೆಗಳು, ಭಕ್ತಿ ಕಾವ್ಯಗಳು ಮುಂತಾದ ಆಕರಗಳನ್ನು ಬಳಸಿಕೊಂಡು ಹೊಸ ಚಿಂತನೆಗಳನ್ನು ಕಟ್ಟಿದ ಅಂತಾರಾಷ್ಟ್ರೀಯ ಮಟ್ಟದ ಚಿಂತಕರಲ್ಲಿ ರಾಮಾನುಜನ್ ಅವರು ಪ್ರಮುಖರಾಗಿದ್ದಾರೆ.

ರಾಮಾನುಜನ್ ಅವರು ಬರೆದ ಇಂಗ್ಲಿಷ್ ಲೇಖನಗಳ ಸಂಕಲನವನ್ನು ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರಕಟಿಸಿದೆ. ಡಾ.ಕರೀಗೌಡ ಬೀಚನಹಳ್ಳಿಯವರು ಈ ಪ್ರಬಂಧ ಸಂಕಲನದ ಬಗ್ಗೆ ತಮ್ಮ 'ಕತೆ ಮತ್ತು ಹಾಡು' ಕೃತಿಯ ಪ್ರಸ್ತಾವನೆಯಲ್ಲಿ ಹೀಗೆ ಬರೆಯುತ್ತಾರೆ:

> "ಎ.ಕೆ.ರಾಮಾನುಜನ್ ಅವರು ಸುಮಾರು ನಾಲ್ಕು ದಶಕಗಳ ಕಾಲ ಭಾಷೆ, ಸಾಹಿತ್ಯ, ಸಂಸ್ಕೃತಿ, ಜಾನಪದ ಕುರಿತು ಬರೆದಿರುವ ಅವರ ಪ್ರಬಂಧಗಳು ಅವರ ವಿಸ್ತಾರವಾದ ಓದು, ಅನುಭವ, ಸೃಜನಾತ್ಮಕವಾದ ಪ್ರತಿಫಲನಕ್ಕೆ ಸಾಕ್ಷಿಯಾಗಿವೆ. ರಾಮಾನುಜನ್ ಅವರು ೧೩.೭.೧೯೯೩ರಂದು ತೀರಿಕೊಂಡ ಮೇಲೆ, ಅವರು ಅಮೆರಿಕಾ, ಯುರೋಪ್, ಇಂಡಿಯಾ ಮುಂತಾದ ರಾಷ್ಟ್ರಗಳಲ್ಲಿ ಮಾಡಿದ್ದ ಉಪನ್ಯಾಸಗಳು ಮತ್ತು ಅವರು ಹಿಂದೆ ಸಂಪಾದಿಸಿದ ಕೃತಿಗಳಿಗೆ ಬರೆದ ಪ್ರಸ್ತಾವನೆಗಳು – ಇವುಗಳನ್ನೆಲ್ಲಾ ಒಂದೆಡೆ ಸಂಕಲಿಸಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಿಂದ ವಿನಯ ಧಾರವಾಡಕರ ಅವರ ಪ್ರಧಾನ ಸಂಪಾದಕತ್ವದಲ್ಲಿ 'The collected Essays of A.K.Ramanujan' ಎಂಬ ಶೀರ್ಷಿಕೆಯಲ್ಲಿ ಗ್ರಂಥ ಪ್ರಕಟವಾಗಿದೆ. ಸುಮಾರು

೬೫೦ ಪುಟಗಳ ಈ ಬೃಹತ್ ಇಂಗ್ಲಿಷ್ ಸಂಪುಟದಲ್ಲಿ ರಾಮಾನುಜನ್ ಅವರ ಪ್ರಬಂಧಗಳನ್ನು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಕೃತಿಯ ಕೊನೆಯಲ್ಲಿ ಟಿಪ್ಪಣಿ ಹಾಗೂ ಆಧಾರ ಗ್ರಂಥಗಳ ಪಟ್ಟಿಯನ್ನು ನೀಡಲಾಗಿದೆ. ಇದನ್ನು ಅಚ್ಚುಕಟ್ಟಾಗಿ ಶಾಸ್ತ್ರೀಯವಾದ ಗ್ರಂಥವನ್ನಾಗಿ ರೂಪಿಸಲಾಗಿದೆ. ಈ ಗ್ರಂಥದಲ್ಲಿ ಒಟ್ಟು ೩೦ ಪ್ರಬಂಧಗಳಿವೆ. ಇವುಗಳಲ್ಲಿ ಮೊದಲನೆಯ ಭಾಗದಲ್ಲಿ 'ಸಾಹಿತ್ಯ ಮತ್ತು ಸಂಸ್ಕೃತಿ' ಕುರಿತು ಬರೆದ ಅವರ ಆರು ಪ್ರಬಂಧಗಳಿವೆ; ಸಾಹಿತ್ಯದಲ್ಲಿನ ವಿಶ್ವಾತ್ಮಕ ಮೌಲ್ಯಗಳನ್ನು ಈ ಪ್ರಬಂಧಗಳಲ್ಲಿ ಶೋಧಿಸಲಾಗಿದೆ. ಎರಡನೆಯ ಭಾಗದಲ್ಲಿ 'ಅಭಿಜಾತ ಸಾಹಿತ್ಯ' ಕುರಿತು ಬರೆದ ಅವರ ಆರು ಪ್ರಬಂಧಗಳಿವೆ. ಇವುಗಳಲ್ಲಿ ರಾಮಾಯಣ, ಮಹಾಭಾರತ, ತಮಿಳು ಕಾವ್ಯ, ಭಕ್ತಿ ಕಾವ್ಯ ಕುರಿತು ಚರ್ಚಿಸಲಾಗಿದೆ. ಮೂರನೆಯ ಭಾಗದಲ್ಲಿ 'ಭಕ್ತಿ ಮತ್ತು ಆಧುನಿಕ ಕಾವ್ಯ' ಕುರಿತು ಬರೆದ ಅವರ ಮುಖ್ಯವಾದ ಆರು ಪ್ರಬಂಧಗಳಿವೆ. ನಾಲ್ಕನೆಯ ಭಾಗದಲ್ಲಿ 'ಜಾನಪದ' ಕುರಿತು ಬರೆದ ಮುಖ್ಯವಾದ ಹನ್ನೆರಡು ಪ್ರಬಂಧಗಳಿವೆ. ಈ ಗ್ರಂಥದ ಸುಮಾರು ಅರ್ಧಭಾಗವನ್ನು ಜಾನಪದ ಕ್ಷೇತ್ರದ ಕಥೆಗಳನ್ನು ಕುರಿತು ಬರೆದ ಅವರ ಪ್ರಬಂಧಗಳು ಆವರಿಸಿವೆ. ರಾಮಾನುಜನ್ ಅವರ ಪ್ರಧಾನವಾದ ಆಸಕ್ತಿ, ಶ್ರದ್ಧೆ, ಕುತೂಹಲ ಜಾನಪದ ಕ್ಷೇತ್ರವೇ ಆಗಿತ್ತು. ಹಾಗಾಗಿ ಅವರು ಈ ಕ್ಷೇತ್ರದಲ್ಲಿ ಮಾಡಿರುವ ಅಧ್ಯಯನ ಹಾಗೂ ಬರೆದಿರುವ ಲೇಖನಗಳು ಹೆಚ್ಚು ಪಾಲನ್ನು ತೆಗೆದುಕೊಂಡಿವೆ. ಅದರಲ್ಲೂ ಅವರು ಜನಪದ ಕಥೆ, ಗಾದೆ, ಒಗಟು, ಪುರಾಣ, ಆಚರಣೆ ಇವುಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿ ಬರೆದ ಪ್ರಬಂಧಗಳು ಇವಾಗಿವೆ."[೯]

೧.೩. ಉದ್ದೇಶ

ಎ. ಕೆ. ರಾಮಾನುಜನ್ ಅವರ ಒಟ್ಟು ಸಾಹಿತ್ಯ ಇಂಗ್ಲಿಷ್, ತಮಿಳು, ತೆಲುಗು ಮುಂತಾದ ಭಾಷೆಗಳನ್ನೊಳಗೊಂಡಂತೆ ಸುಮಾರು ೫ ಸಾವಿರ ಪುಟಗಳಿಗೂ ಮೀರಿದೆ. ಈ ವ್ಯಾಪ್ತಿಯ ವಾಙ್ಮಯವನ್ನು ಅವರು ೧೯೫೫ರಿಂದ ೧೯೯೩ರವರೆಗೆ ಸುಮಾರು ೪೦ ವರ್ಷಗಳ ಕಾಲ ನಿರಂತರವಾಗಿ ರಚಿಸಿದ್ದಾರೆ. ರಾಮಾನುಜನ್ ಅವರ ಸಾಹಿತ್ಯ ಜೀವನದ ಕಾಲಘಟ್ಟವು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅತ್ಯಂತ ಚಲನಶೀಲವಾದ ಮತ್ತು ಮಹತ್ವದ ಕಾಲಘಟ್ಟ, ಸಾಹಿತ್ಯದ ಆಶಯ ಮತ್ತು ಅಭಿವ್ಯಕ್ತಿಕ್ರಮಗಳಲ್ಲಿ ಅತ್ಯಂತ ಅರ್ಥಪೂರ್ಣವಾದ ಬದಲಾವಣೆಗಳ ಮತ್ತು ಜಾಗತಿಕ ಹಂತ ಮತ್ತು ಕನ್ನಡ ಸಂದರ್ಭಗಳಲ್ಲಿಯೂ ಆಗುತ್ತಿದ್ದ ನಿರ್ಣಾಯಕ ಸಂದರ್ಭದ ಕಾಲಘಟ್ಟ. ಇತರ ಕನ್ನಡ ಕವಿಗಳ ಅಧ್ಯಯನದ ವಿಧಾನಕ್ಕೂ ರಾಮಾನುಜನ್ ಅವರು ಸಾಹಿತ್ಯ ಅಭ್ಯಾಸದ ರೀತಿಗೂ ಸಾಕಷ್ಟು ವ್ಯತ್ಯಾಸವಿರಲೇಬೇಕು.

ರಾಮಾನುಜನ್ ಅವರು ಬಹುಸಂಸ್ಕೃತಿಯ ಮತ್ತು ಬಹುಭಾಷಿಕ ಲೇಖಕರು. ಅವರ ಕೃತಿಗಳ ಅಧ್ಯಯನದ ವಿಧಾನಗಳಲ್ಲಿ ನಾವು 'ಸ್ಥಳೀಯ ಅಥವಾ ಕನ್ನಡದ ನೆಲೆ', 'ರಾಷ್ಟ್ರೀಯ ನೆಲೆ'

ಹಾಗೂ 'ಜಾಗತಿಕ ನೆಲೆ'ಗಳ ಹಿನ್ನೆಲೆಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಅಡಿಗರ ನೇತೃತ್ವದಲ್ಲಿ ವಿಭಿನ್ನವಾಗಿ ಸಾಹಿತ್ಯ ರಚಿಸಿದ ಅಂದಿನ ಕಾಲಘಟ್ಟದ ಇತರ ಮಹತ್ವದ ಲೇಖಕರಾದ ಚಂದ್ರಶೇಖರ ಕಂಬಾರ, ಗಿರೀಶ್ ಕಾರ್ನಾಡ್, ಎಂ.ಎಸ್.ಪ್ರಭಾಕರ, ಯು.ಆರ್.ಅನಂತಮೂರ್ತಿ, ಪಿ.ಲಂಕೇಶ್, ಯಶವಂತ ಚಿತ್ತಾಲ, ಗಿರಿ, ಶಂಕರ ಮೊಕಾಶಿ ಮುಂತಾದವರಿಗಿಂತ ರಾಮಾನುಜನ್ ಅವರು ವಿಶಿಷ್ಟವೂ, ಅನನ್ಯವೂ, ವಿಭಿನ್ನವೂ ಆದ ರೀತಿಯಲ್ಲಿ ಬರೆದವರು. ಸಾಹಿತ್ಯದ ವಿವಿಧ ಪ್ರಕಾರಗಳನ್ನು ಕುರಿತು ರಾಮಾನುಜನ್ ಅವರ ಪರಿಕಲ್ಪನೆಗಳು ಸಾಂಪ್ರದಾಯಕವಾದ, ತಾಂತ್ರಿಕವಾದ ಸ್ವರೂಪಕ್ಕಿಂತ ಚಲನಶೀಲ ಹಾಗೂ ಜೀವಂತಿಕೆಯ ಅಂಶಗಳನ್ನು ಒಳಗೊಂಡಿದುದ್ದಾಗಿದೆ. ಉದಾಹರಣೆಗೆ ಕಾವ್ಯವನ್ನು ಕುರಿತು ಬಹು ವಿಮರ್ಶಕರು ಅದು ಭಾವನಾತ್ಮಕತೆಯನ್ನು ಒಳಗೊಂಡ ಒಂದು ಸ್ಥಿತಿ ಎಂದು ಭಾವಿಸಿದರೆ, ರಾಮಾನುಜನ್ ಅವರ ಪಾಲಿಗೆ ಕಾವ್ಯ ಒಂದು ಬೌದ್ಧಿಕ ಜೀವಂತ ಕಸರತ್ತು ಕೂಡ. ಅಷ್ಟೇ ಅಲ್ಲದೆ ಏಕಕಾಲಕ್ಕೆ ರಾಮಾನುಜನ್ ಅವರು ಕವಿ, ವಿಮರ್ಶಕ, ಕತೆಗಾರ, ಜಾನಪದತಜ್ಞ, ಸಮಾಜಶಾಸ್ತ್ರಜ್ಞ, ಭಾಷಾವಿಜ್ಞಾನಿ, ಚಿಂತಕ ಇತ್ಯಾದಿಗಳಾಗಿರುವುದರಿಂದ ಇತರರ ಸಾಹಿತ್ಯದ ಅಧ್ಯಯನದ ಅಭ್ಯಾಸಕ್ಕಿಂತ ಇವರ ಸಾಹಿತ್ಯಾಧ್ಯಯನದ ಸ್ವರೂಪವು ಸಹಜವಾಗಿಯೇ ವಿಭಿನ್ನವಾಗಿದೆ. ಜೊತೆಗೆ ಅನೇಕ ಭಾಷೆಗಳ ಉತ್ತಮ ಅಂಶಗಳನ್ನು ತಾವು ಬರೆಯುತ್ತಿರುವ ಭಾಷೆಯ ಸಾಹಿತ್ಯಕ್ಕೆ ಅವರು ಸಹಜವಾಗಿ ವರ್ಗಾವಣೆ ಮಾಡಿದ್ದಾರೆ. ಹೀಗಾಗಿ ಇವರ ವಿಚಾರಗಳನ್ನು ಕುರಿತು ಚರ್ಚಿಸುವಾಗ ವಿಮರ್ಶಕನೊಬ್ಬನಿಗೆ ಬಹುಭಾಷಿಕ ಸಾಹಿತ್ಯಗಳ ಸ್ವರೂಪದ ಅಧ್ಯಯನಗಳ ಪರಿಚಯವಿರಬೇಕಾಗುತ್ತದೆ. ಒಟ್ಟಾರೆಯಾಗಿ ರಾಮಾನುಜನ್ ಅವರ ಸಾಹಿತ್ಯವನ್ನು ಕುರಿತ ಅಧ್ಯಯನಗಳ ಮೂಲಕ ಹೊರಹೊಮ್ಮುವ ಚಿಂತನಾಕ್ರಮಗಳು ಸಾಹಿತ್ಯಾಧ್ಯಯನಕಾರರಿಗೆ ಸವಾಲಾಗುತ್ತದೆ.

ಇವರ ಒಟ್ಟು ಸಾಹಿತ್ಯವನ್ನು ವಿಮರ್ಶಿಸುವ ಸಂದರ್ಭದಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ಹಲವಾರು ವಿಮರ್ಶಾಕ್ರಮಗಳನ್ನು ಬಳಸಿಕೊಳ್ಳುವುದರ ಜೊತೆಗೆ ಈ ಸಾಂಪ್ರದಾಯಕವಾದ ಕ್ರಮಗಳನ್ನು ಮೀರುವ ಅವರ ಸಾಹಿತ್ಯ ರಚನೆಯ ಅನನ್ಯತೆಗಳಿಗೆ ತನ್ನದೇ ಆದ ಒಂದು ಸೈದ್ಧಾಂತಿಕ ನೆಲೆಯನ್ನು ಕಲ್ಪಿಸುವ ಸಂದರ್ಭ ಬಹುಮುಖ್ಯವಾದುದು. ಭಾಷಾವಿಜ್ಞಾನ ಮತ್ತು ಜಾನಪದ ಮೇಲ್ನೋಟಕ್ಕೆ ತದ್ವಿರುದ್ಧವಾದಂತೆ ಕಾಣಿಸಿದರೂ ರಾಮಾನುಜನ್ ಅವರ ಸೂಕ್ಷ್ಮದೃಷ್ಟಿಗೆ ಅವೆರಡೂ ಜ್ಞಾನಶಿಸ್ತುಗಳ ನಡುವೆ ಇರುವ ಅಂತಃಸಂಬಂಧ ಮತ್ತು ಏಕಸೂತ್ರತೆಯನ್ನು ನೋಡುವಲ್ಲಿ ಒಳಸೂಕ್ಷ್ಮತೆಗಳು ಕಂಡುಬರುತ್ತವೆ. ಹಾಗೆಯೇ ಸೃಜನಶೀಲ ಭಾವತೀವ್ರತೆಯ ಆಕರಗಳಾದ ಕಾವ್ಯ, ಕಥೆಗಳು ಮತ್ತು ಬೌದ್ಧಿಕ ಕಸರತ್ತಿನ ಆಯಾಮಗಳನ್ನೊಳಗೊಂಡ ಅನುವಾದ ಇವೆರಡನ್ನೂ ಫಲಪ್ರದವಾಗುವಂತೆ ದುಡಿಸಿಕೊಳ್ಳುವ ಗಟ್ಟಿತನ ರಾಮಾನುಜನ್ನರ ಬರವಣಿಗೆಗಿದೆ. ಉದಾಹರಣೆಗೆ ಅವರು ಮೊದಲು ಬರೆದ 'ಗಾದೆಗಳು' ಪುಸ್ತಕದ ವ್ಯಾಪ್ತಿ

ವಿಸ್ಮಯ ಹುಟ್ಟಿಸುವಂತಹದು. ಇಲ್ಲಿ ಮೇಲೆ ಹೇಳಿದಂತಹ ಸ್ಥಳೀಯ, ರಾಷ್ಟ್ರೀಯ ಹಾಗೂ ಜಾಗತಿಕ ನೆಲೆಯು ಮುಪ್ಪುರಿಗೊಂಡು ಹೋಗುವ ರೀತಿಯೊಳಗೆ ಅಧ್ಯಯನದ ಗೊತ್ತು ಗುರಿಗಳನ್ನು ನಿರ್ದಿಷ್ಟಪಡಿಸಿಕೊಳ್ಳಬೇಕಾಗುತ್ತದೆ. ಕೇವಲ ಸಾಹಿತ್ಯಿಕ ತತ್ವಸಿದ್ಧಾಂತಗಳ ಮಾನದಂಡಗಳ ಮೂಲಕ ಮಾತ್ರ ರಾಮಾನುಜನ್ ಅವರ ಸಾಹಿತ್ಯವನ್ನು ಮೌಲ್ಯ ಮಾಡಲಾಗುವುದಿಲ್ಲ. ಅನಿವಾರ್ಯವಾಗಿ ಅಂತರ್‌ಶಿಸ್ತೀಯ ತತ್ವಗಳ ಮಾನದಂಡಗಳನ್ನು ಇಲ್ಲಿ ಬಳಸಿಕೊಂಡು ಮೌಲ್ಯಮಾಪನ ಮಾಡಬೇಕಾಗುತ್ತದೆ.

ಉದಾಹರಣೆಗೆ 'ಅಣ್ಣಯ್ಯನ ಮಾನವಶಾಸ್ತ್ರ' ಇಡೀ ಕನ್ನಡ ಕಥಾಜಗತ್ತಿನಲ್ಲಿ ಅತ್ಯಂತ ಸೂಕ್ಷ್ಮವೂ, ವಿಶಿಷ್ಟವೂ ಆದ ಕಥೆ. ಆ ಕಥೆಯು ಕೇವಲ ಕಥಾಚಿತ್ರಣ, ಪಾತ್ರಗಳು, ಭಾಷೆ, ಸಂದೇಶ ಇಂತಹ ಸರಳವಾದ ಸೂತ್ರಗಳ ಅನ್ವಯಿಗಳಿಗೆ ದಕ್ಕುವುದೇ ಇಲ್ಲ. ಇದಕ್ಕೆ ಮಾನವಶಾಸ್ತ್ರ, ಮಾನವಿಕ ಶಾಸ್ತ್ರ, ಸಮಾಜಶಾಸ್ತ್ರ, ಪುರಾತತ್ವ ಶಾಸ್ತ್ರ ಇವುಗಳ ಪರಿಚಯದ ಅಗತ್ಯವಿರಬೇಕಾಗುತ್ತದೆ. ಒಂದು ದೃಷ್ಟಿಯಿಂದ ರಾಮಾನುಜನ್ ಅವರು ತೇಜಸ್ವಿಯ ಹಾಗೆ ಸಿದ್ಧಾಂತಗಳನ್ನು ಮೀರಿ ಬರೆದಿದ್ದಾರೆ. ಆದ್ದರಿಂದ ಬಹು ಆಯಾಮದ ಮಜಲುಗಳ ಹಿನ್ನೆಲೆಯಲ್ಲಿಯೇ ಇವರ ಕೃತಿಗಳ ಅಧ್ಯಯನ ನಡೆಯಬೇಕಾದ್ದು ಅನಿವಾರ್ಯ. ಹೀಗಾಗಿ ಸಹಜವಾಗಿಯೇ ರಾಮಾನುಜನ್ ಅವರ ಸಾಹಿತ್ಯದ ಅಧ್ಯಯನ ಮಾರ್ಗಗಳು ಅತ್ಯಂತ ಸಂಕೀರ್ಣದ್ದಾಗಿರುತ್ತದೆ. ಸಾಹಿತ್ಯತತ್ವಗಳ ಜೊತೆಗೆ ವೈಜ್ಞಾನಿಕ ವಿಧಾನ, ಚಾರಿತ್ರಿಕ ಹಾಗೂ ರಾಜಕೀಯ ಆಯಾಮಗಳ ಅಂಚಿನ ಸೀಮೆಗೆ ಇವರ ಬರಹಗಳನ್ನು ಅಳವಡಿಸಿಕೊಳ್ಳಬಹುದು. ಇಷ್ಟೇ ಅಲ್ಲದೆ ಅವರ ಬರಹಗಳಲ್ಲಿ 'ವ್ಯಷ್ಟಿ ಮತ್ತು ಸಮಷ್ಟಿ', ಗ್ರಾಮ ಮತ್ತು ನಗರ, ರಾಷ್ಟ್ರ ಮತ್ತು ಜಗತ್ತು, ಗಂಡು ಮತ್ತು ಹೆಣ್ಣು, ಕೀಳರಿಮೆ ಮತ್ತು ಮೇಲರಿಮೆ, ಮೈಸೂರು ಮತ್ತು ಅಮೆರಿಕ ಈ ದ್ವಂದ್ವಗಳ ವಿಚಿತ್ರ ಮುಖಾಮುಖಿ ಬರುತ್ತದೆ. ಇಂತಹವುಗಳ ಮೌಲ್ಯಮಾಪನಕ್ಕೆ ಹೊಸ ತಾತ್ವಿಕ ನೆಲೆಗಳ ಚೌಕಟ್ಟುಗಳನ್ನು ಸೃಷ್ಟಿಸಿಕೊಳ್ಳಬೇಕಾಗುವ ಸಂದರ್ಭ ಕೂಡ ಬರಬಹುದು.

ರಾಮಾನುಜನ್ ಅವರ ಒಟ್ಟು ಸಾಹಿತ್ಯ ಮತ್ತು ಸಂಸ್ಕೃತಿ ಅಧ್ಯಯನ ಕುರಿತು ಅಲ್ಲಲ್ಲಿ ಬಿಡಿ ಬಿಡಿ ವಿಮರ್ಶಾ ಲೇಖನಗಳು ಮಾತ್ರ ಬಂದಿವೆ. ಅವೂ ಕೂಡ ಸಾಂದರ್ಭಿಕ ಹಾಗೂ ಅವರು ತೀರಿಕೊಂಡ ಸಮಯದಲ್ಲಿ ಅವರ ಗೆಳೆಯರು ಬರೆದ ನೆನಪಿನ ಲೇಖನಗಳು. ಕನ್ನಡದ, ಭಾರತದ ಮತ್ತು ಭಾಷಾಂತರದ ಸಂಸ್ಕೃತಿಯ ಸಂದರ್ಭದಲ್ಲಿ ಇಡಿಯಾಗಿ ಸಾಂಸ್ಕೃತಿಕವಾಗಿ ಅಧ್ಯಯನ ಮಾಡುವುದು ಈ ನಿಬಂಧದ ಮುಖ್ಯ ಉದ್ದೇಶವಾಗಿದೆ. ಅಂತೆಯೇ ಮುಖ್ಯವಾಗಿ ರಾಮಾನುಜನ್ ಅವರ ಚಿಂತನೆಗಳನ್ನು ಸಾಂಸ್ಕೃತಿಕ ಅಧ್ಯಯನ ಮಾಡಲು ಪ್ರಸ್ತುತ ನಿಬಂಧದಲ್ಲಿ ಉದ್ದೇಶ ಹೊಂದಲಾಗಿದೆ.

೧.೪. ಸಾಂಸ್ಕೃತಿಕ ಅಧ್ಯಯನದ ಪರಿಕಲ್ಪನೆ

ಸಾಂಸ್ಕೃತಿಕ ಅಧ್ಯಯನವನ್ನು ಮೊದಲಿಗೆ ಬ್ರಿಟಿಷ್ ವಿದ್ವಾಂಸರು ೨೦ನೇ ಶತಮಾನದ ೫, ೬, ೭ನೇ ದಶಕಗಳಲ್ಲಿ ಒಂದು ಶೈಕ್ಷಣಿಕ ಅಧ್ಯಯನದ ಶಿಸ್ತನ್ನಾಗಿ ರೂಪಿಸಿದರು. ತದನಂದರತದಲ್ಲಿ ಈ ಅಧ್ಯಯನದ ಪರಿಕಲ್ಪನೆಗಳು ಹಲವಾರು ಶಿಸ್ತುಗಳನ್ನು ಕುರಿತು ಅಧ್ಯಯನ ಮಾಡಲು ಪ್ರಪಂಚದಾದ್ಯಂತ ವಿದ್ವಾಂಸರು ಆಸಕ್ತಿ ತಳೆದರು. ಈ ವಿದ್ವಾಂಸರು ಈ ರೀತಿಯ ಅಧ್ಯಯನದ ಮೂಲಕ ಸಾಮಾಜಿಕವಾಗಿ ಸಂಘಟಿತರಾಗಿ, ಸಮಾಜಮುಖಿಯಾದ ಚಿಂತನೆಗಳನ್ನು ಒಗ್ಗೂಡಿಸಿ ಅಧ್ಯಯನಕ್ಕೆ ತೊಡಗಿಸಿಕೊಳ್ಳುವಲ್ಲಿ ಮತ್ತು ದಿನನಿತ್ಯದ ಜೀವನವನ್ನು ರೂಪಿಸಿಕೊಳ್ಳುವಲ್ಲಿ ಯಶಸ್ಸನ್ನು ಪಡೆದರು.

ಈ ಸಾಂಸ್ಕೃತಿಕ ಅಧ್ಯಯನ ಪ್ರಧಾನವಾಗಿ ಅಂತರ್‌ಶಿಸ್ತೀಯ ಅಧ್ಯಯನ ನೆಲೆಯಿಂದ ರೂಪುಗೊಂಡಂತಹದ್ದು. ವ್ಯಕ್ತಿಯ ಅನುಭವ, ಅವನ ದೈನಂದಿನ ಬದುಕು, ಅವನ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧಗಳು ಇವುಗಳನ್ನೆಲ್ಲಾ ಕುರಿತು ಅಧ್ಯಯನ ಮಾಡುವ ಒಂದು ಆವಿಷ್ಕಾರಕವಾದ(ಇನ್ನೋವೇಟಿವ್) ಹಾಗೂ ಸೂಕ್ಷ್ಮವಾದ ವಿಧಾನ.

ರಾಮಾನುಜನ್ ಅವರ ಬರಹಗಳನ್ನು ಅಧ್ಯಯನ ಮಾಡುವಾಗ ಈ ಬಗೆಯ ಅಂತರ್‌ಶಿಸ್ತೀಯ ಅಧ್ಯಯನದ ನೆಲೆಯಲ್ಲಿಯೇ ಅನುಸಂಧಾನ ನಡೆಸಬೇಕಾಗುತ್ತದೆ. ಏಕೆಂದರೆ ಅವರು ನಡೆಸಿರುವ ಅನುಸಂಧಾನ ಮುಖ್ಯವಾಗಿ ಸಾಹಿತ್ಯ, ಜಾನಪದ, ಭಾಷಾಶಾಸ್ತ್ರ, ಭಾಷಾಂತರ ಮತ್ತು ಸಂಸ್ಕೃತಿಯ ಜೊತೆ ನಡೆಸಿದ್ದಾಗಿದೆ. ಅವರ ಬರಹಗಳನ್ನು ಅರ್ಥ ಮಾಡಿಕೊಳ್ಳುವಾಗ ಈ ಬಗೆಯ ಅಂತರ್‌ಶಿಸ್ತೀಯ ಅಧ್ಯಯನದ ನೆಲೆ ಒಂದು ಬಹುಮುಖ್ಯ ಅಧ್ಯಯನದ ದೃಷ್ಟಿಕೋನವಾಗಿದೆ. ಇಂದು ಕನ್ನಡದಲ್ಲಿಯೂ ಈ ಬಗೆಯ ಸಾಂಸ್ಕೃತಿಕ ಅಧ್ಯಯನ ಹೆಚ್ಚಾಗಿ ನಡೆಯುತ್ತಿದೆ. ಇದು ಒಂದು ಬಗೆಯಲ್ಲಿ ಬಹುಶಿಸ್ತೀಯ ಅಧ್ಯಯನವೂ ಹೌದು. ಹಾಗಾಗಿ ಈ ಅಧ್ಯಯನದ ಪರಿಕಲ್ಪನೆಗೆ ವ್ಯಾಪಕವಾದ ವಿಸ್ತಾರತೆ ಮತ್ತು ಅರ್ಥವಂತಿಕೆ ಇದೆ.

ಸಮಕಾಲೀನ ಅಧ್ಯಯನ ಮಾದರಿಗಳಲ್ಲಿ ಮುಂಚೂಣಿಯಲ್ಲಿರುವುದು ಅಂತರ್‌ಶಿಸ್ತೀಯ ಮತ್ತು ಬಹುಶಿಸ್ತೀಯ ಅಧ್ಯಯನ ವಿಧಾನಗಳು. ಅಂತರ್‌ಶಿಸ್ತೀಯ ಅಧ್ಯಯನವೆಂದರೆ ಎರಡು ಅಥವಾ ಹಲವಾರು ಅಧ್ಯಯನದ ಶಿಸ್ತುಗಳನ್ನು ಒಳಗೊಂಡು ನಡೆಸುವ ವಿಸ್ತೃತ ಅಧ್ಯಯನ.

> "ಎರಡು ಭಿನ್ನ ಶಿಸ್ತುಗಳನ್ನು ಒಟ್ಟಿಗೆ ಅಧ್ಯಯನ ಮಾಡಿ ಅವುಗಳ ಪರಸ್ಪರ ಪ್ರಭಾವ, ಪೂರಕತೆಗಳನ್ನು ವಿಶ್ಲೇಷಿಸುವುದು ಆ ಮೂಲಕ ವ್ಯಕ್ತವಾಗುವ ಹೊಸ ಸತ್ಯವನ್ನು ಶೋಧಿಸುವುದು ಇದರ ಗುರಿಯಾಗಿದೆ."[೧೦]

ಈ ಹೊಸ ಜ್ಞಾನವು ಎರಡು ಅಧ್ಯಯನಗಳ ಶಿಸ್ತಿಗೂ ಪರಸ್ಪರ ಸಹಕಾರಿ. ಆಧುನಿಕ ಸಂದರ್ಭದಲ್ಲಿ ಸಂಶೋಧನೆಯ ಅಧ್ಯಯನಗಳು ಹೊಸ ಹೊಸ ಆಯಾಮಗಳನ್ನು ಪಡೆಯುತ್ತಾ

ಬಂದಿವೆ. ಇದರ ಮೂಲ ಉದ್ದೇಶವೆಂದರೆ ಸಂಶೋಧನೆಗಳನ್ನು ಶುದ್ಧ ಶೈಕ್ಷಣಿಕ ಚೌಕಟ್ಟಿನಿಂದ ಹೊರತರುವ ಮತ್ತು ಸಮುದಾಯದ ಚರ್ಚೆಗಳಿಗೆ ಅನುವಾಗುವಂತಹ ಭಿತ್ತಿಯನ್ನು ಸೃಷ್ಟಿಸಿಕೊಳ್ಳುವುದು. ಹಿಂದಿನ ಕಾಲದಲ್ಲಾದರೆ ಮಾನವನ ಅಗತ್ಯಗಳಿಗೆ ಇತಿಮಿತಿ ಇದ್ದುದರಿಂದ ಯಾವುದೇ ಅಧ್ಯಯನದ ಶಿಸ್ತಿಗೂ ಇತಿಮಿತಿ ಇರುತ್ತಿತ್ತು. ಆದರೆ ಸಮಕಾಲೀನ ಪರಿಸ್ಥಿತಿಯಲ್ಲಿ ಸಮಾಜವು ಸಂಕೀರ್ಣವಾಗಿ ಬೆಳೆದಿರುವುದರಿಂದ ಪ್ರತಿಯೊಂದು ಅಧ್ಯಯನದ ಶಿಸ್ತು ಕಾಲದಿಂದ ಕಾಲಕ್ಕೆ ಹೆಚ್ಚು ವ್ಯಾಪಕವೂ ಸಮಕಾಲೀನವೂ ಆಗಿರಬೇಕಾಗುತ್ತದೆ. ಈ ನಿಟ್ಟಿನಲ್ಲಿ ಸಂಶೋಧನೆಯ ಅಧ್ಯಯನಗಳಿಗೆ ಅಂತರ್‌ಶಿಸ್ತೀಯ ಮತ್ತು ಬಹುಶಿಸ್ತೀಯ ಅಧ್ಯಯನಗಳು ಮತ್ತು ಅಧ್ಯಯನ ವಿಧಾನಗಳು ಅತ್ಯಂತ ಅಪೇಕ್ಷಣೀಯ.

೧.೪.೧. 'ಸಾಹಿತ್ಯ ಸಂಸ್ಕೃತಿ ಅನುಸಂಧಾನ' ಪರಿಕಲ್ಪನೆ

ಸೃಜನ ಸಾಹಿತ್ಯ, ಅಭಿಜಾತ ಸಾಹಿತ್ಯ, ಮೌಖಿಕ ಸಾಹಿತ್ಯ, ಜನಪ್ರಿಯ ಸಾಹಿತ್ಯ, ಸಂಸ್ಕೃತಿ ಇವುಗಳಿಗೆ ಇರುವ ಪರಸ್ಪರ ಪ್ರಭಾವ–ಪೂರಕ ಸಂಬಂಧಗಳು ವಿಭಿನ್ನವಾದುದು. ಇವುಗಳನ್ನು ಒಂದರಿಂದ ಒಂದನ್ನು ಬೇರ್ಪಡಿಸಿ ನೋಡುವುದು ಕಷ್ಟ. ಇವುಗಳ ಒಟ್ಟು ಅನುಸಂಧಾನ ಪ್ರಕ್ರಿಯೆಯು ರಾಮಾನುಜನ್ ಅವರ ವಿಶಿಷ್ಟ ಚಿಂತನೆಯಾಗಿದೆ. ಇವುಗಳ ಒಟ್ಟು ವಾಙ್ಮಯವನ್ನು ಹಿಡಿದಿಡುವ, ಬಹುತ್ವದ ನೆಲೆಯಲ್ಲಿ ತೌಲನಿಕವಾಗಿ ಇವುಗಳನ್ನು ವಿಶ್ಲೇಷಿಸುವ ಅನುಸಂಧಾನ ಕ್ರಿಯೆ ರಾಮಾನುಜನ್ ಅವರ ಒಂದು ಅದ್ಭುತ ರೂಪಕವಾಗಿದೆ ಎನ್ನಬಹುದು. ಇಂಗ್ಲಿಷ್, ತಮಿಳು, ಕನ್ನಡ, ವಿಜ್ಞಾನ, ಭಾಷಾವಿಜ್ಞಾನ ಹೀಗೆ ಬಹುಭಾಷಿಕ ಪರಿಸರದಲ್ಲಿ ಬಾಲ್ಯದಿಂದಲೂ ಬೆಳೆದ ರಾಮಾನುಜನ್ ಅವರು ಸಂಸ್ಕೃತಿ ಚಿಂತನೆ ಮತ್ತು ಸಾಹಿತ್ಯ ವಿಶ್ಲೇಷಣೆಯ ಅಧ್ಯಯನವನ್ನು 'ಅಗಂ–ಪುರಂ'(Akam-Puram), 'ಸಂದರ್ಭನಿಷ್ಠ – ಸಂದರ್ಭಮುಕ್ತ', 'ಹಿರಿಯ ಪರಂಪರೆ – ಕಿರಿಯ ಪರಂಪರೆ(Greater Tradition - Little Tradition), 'ಪಠ್ಯದ ಅನುವಾದ – ಓದುಗನ ಅನುವಾದ', ಮುಂತಾದ ಸ್ವೋಪಜ್ಞ ಹಾಗೂ ಅರ್ಥಪೂರ್ಣ ಪರಿಕಲ್ಪನೆಗಳ ನೆಲೆಯಲ್ಲಿ ಅನುಸಂಧಾನ ನಡೆಸಿದವರು. ಅವರ ಈ ಪರಿಕಲ್ಪನೆಗಳು 'ಅಭಿಜಾತ', 'ಜನಪ್ರಿಯ', 'ಜನಪದ', 'ಭಾಷಾಂತರ' ಕ್ಷೇತ್ರಗಳನ್ನೆಲ್ಲಾ ಪ್ರಭಾವಿಸಿವೆ. ಇದೇ ಹಿನ್ನೆಲೆಯಲ್ಲಿ 'ಜನಪದ–ಭಾಷಾಂತರ' ಅಧ್ಯಯನದ ನೆಲೆಯಲ್ಲಿ ಬಂದ ಅವರ ಅತ್ಯುತ್ತಮ ಸಂಶೋಧನಾತ್ಮಕ ಲೇಖನಗಳಲ್ಲಿ ಒಂದಾದ 'ಮುನ್ನೂರು ರಾಮಾಯಣಗಳು' ಎಂಬ ಸೋಪಜ್ಞ (Seminal) ಲೇಖನ ಇಂದಿಗೂ ಪ್ರಸ್ತುತ. ಇದರಲ್ಲಿ ಅವರ ಸಾಹಿತ್ಯ ಹಾಗೂ ಚಿಂತನೆಯ ಹೊಸ ಒಳನೋಟಗಳು ಅಭಿವ್ಯಕ್ತವಾಗಿವೆ. ಈ ಪರಿಕಲ್ಪನೆಗಳು ಅವರ ಒಟ್ಟು ಬರಹಗಳಲ್ಲಿ ಪ್ರಮುಖ ಚಿಂತನೆಯಾಗಿ, ಪರಿಕಲ್ಪನೆಯಾಗಿ ಕಾಣಿಸಿಕೊಂಡಿರುವುದನ್ನು ಅವರ ಬರಹಗಳಿಂದ ಗುರುತಿಸಲಾಗುತ್ತದೆ. ಆದರೆ ಈ ಪರಿಕಲ್ಪನೆಗಳು ಹೊಸ ಪರಂಪರೆಯನ್ನು ಹುಟ್ಟುಹಾಕದಿದ್ದರೂ. 'ಸಾಹಿತ್ಯ ಸಂಸ್ಕೃತಿ'

ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ಸ್ವೋಪಜ್ಞತೆಯಿಂದ ಕೂಡಿದ ಅವರ ಚಿಂತನೆಗಳಾಗಿವೆ. ಈ ಚಿಂತನೆಗಳನ್ನು ಅವರ ಯಾವ ಸಾಹಿತ್ಯ ಪ್ರಕಾರಗಳಿಂದಲೂ, ಅಧ್ಯಯನ ಕೃತಿಗಳಿಂದಲೂ ಬೇರ್ಪಡಿಸಿ ನೋಡಲಾಗದಂತಹ ಪರಿಕಲ್ಪನೆಯಾಗಿದೆ. ಮುಂದಿನ ಅಧ್ಯಾಯಗಳಲ್ಲಿ ಅವರ ಈ ವಿಚಾರಗಳನ್ನು, ಚಿಂತನೆಗಳನ್ನು ಅವರ ಎಲ್ಲಾ ಬರಹಗಳಲ್ಲಿಯೂ ಗುರುತಿಸುವ ಪ್ರಯತ್ನವನ್ನು ಮಾಡಲಾಗುತ್ತದೆ. ಹಾಗಾಗಿ ಈ 'ಸಾಹಿತ್ಯ ಸಂಸ್ಕೃತಿ ಅನುಸಂಧಾನ' ಪರಿಕಲ್ಪನೆಯು ರಾಮಾನುಜನ್ ಅವರ ಒಂದು ವಿಶಿಷ್ಟವಾದ ಚಿಂತನಕ್ರಮವಾಗಿದೆ.

೧.೪.೨. ಅಧ್ಯಯನದ ವಿಧಾನ

ಬಹುಶಿಸ್ತೀಯ ಅಧ್ಯಯನವೆಂದರೆ ಯಾವುದೇ ಒಂದು ನಿರ್ದಿಷ್ಟ ಸಂಶೋಧನಾ ಅಧ್ಯಯನಗಳಿಗೆ ಒಂದು ಅಥವಾ ಇನ್ನೂ ಹೆಚ್ಚು ಇತರ ಶಿಸ್ತುಗಳ ಅಧ್ಯಯನ ವಿಧಾನ ಮತ್ತು ದೃಷ್ಟಿಕೋನಗಳನ್ನು ಬಳಸಿಕೊಂಡು ಅಧ್ಯಯನ ಕ್ರಮವನ್ನು ವಿಸ್ತರಿಸುವುದು.

ಆಧುನಿಕ ಕಾಲದಲ್ಲಿ ಮಾನವಿಕ ಕಲೆಗಳು, ಸಾಹಿತ್ಯ ಮತ್ತು ಸಂಸ್ಕೃತಿಗಳ ವಿವೇಚನೆ ಶುದ್ಧ ವಿಜ್ಞಾನ ಮತ್ತು ತಂತ್ರಜ್ಞಾನಗಳ ಉನ್ನತ ಅಧ್ಯಯನ ಇವುಗಳನ್ನು ಹೆಚ್ಚು ಸಾರ್ಥಕವಾಗುವಂತೆ ಮಾಡಲು ಈ ಎಲ್ಲ ಕ್ಷೇತ್ರಗಳಿಗೂ ಅಂತರ್‌ಶಿಸ್ತೀಯ ಮತ್ತು ಬಹುಶಿಸ್ತೀಯ ಅಧ್ಯಯನದ ಮಾದರಿಗಳ ಮಾನದಂಡಗಳನ್ನು ಜಗತ್ತಿನಾದ್ಯಂತ ವಿಶ್ವವಿದ್ಯಾನಿಲಯಗಳಲ್ಲೂ, ಖಾಸಗಿ ಹಾಗೂ ಸಾರ್ವಜನಿಕ ಸಂಶೋಧನಾ ಸಂಸ್ಥೆಗಳಲ್ಲೂ ಅನ್ವಯಿಸಿಕೊಳ್ಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಅಧ್ಯಯನದ ಮಾರ್ಗದಲ್ಲಿ ಈ ರೀತಿಯ ಆನ್ವಯಿಕ ವಿಧಾನವನ್ನು ಅಳವಡಿಸದಿದ್ದರೆ ನಮ್ಮ ಸಂಶೋಧನೆಯ ಕ್ಷೇತ್ರದ ಸಮಕಾಲೀನತೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಈಗ ನಾವು ಅನಿವಾರ್ಯವಾಗಿ ಬಹುಶಿಸ್ತೀಯ ಹಾಗೂ ಅಂತರ್‌ಶಿಸ್ತೀಯ ಅಧ್ಯಯನದ ಅನ್ವಯಗಳಿಗೆ ಮೊರೆ ಹೋಗಲೇಬೇಕಾಗುತ್ತದೆ.

'ತೌಲನಿಕ ಅಧ್ಯಯನ'ದ ಮುಂದುವರಿದ ಭಾಗವಾಗಿಯೂ ಅಂತರ್‌ಶಿಸ್ತೀಯ ಅಧ್ಯಯನಗಳನ್ನು ನೋಡಲು ಸಾಧ್ಯವಿದೆ. ಕನ್ನಡ ಸಾಹಿತ್ಯದ ವಿವಿಧ ಅಧ್ಯಯನದ ಶಾಖೆಗಳು ಆಳವಾದ ಪರಿವೀಕ್ಷಣೆಗೆ ಈಡಾದಂತೆ ಅವುಗಳ ಮೇಲೆ ಅನ್ಯಶಿಸ್ತುಗಳ ಪ್ರಭಾವ ಹಾಗೂ ಅಂತರ್‌ಶಿಸ್ತೀಯ ಅಧ್ಯಯನಗಳ ಅವಲಂಬನೆಗಳೂ ಸಾಮಾನ್ಯ. ಸಾಹಿತ್ಯದೊಂದಿಗೆ ನೇರ ಸಂಬಂಧ ಹೊಂದಿರುವ ಭಾಷಾ ವಿಜ್ಞಾನ, ಶಾಸನಶಾಸ್ತ್ರ, ಜಾನಪದ, ಕಾವ್ಯಮೀಮಾಂಸೆ, ಅಲಂಕಾರ ಶಾಸ್ತ್ರ, ವಿಮರ್ಶೆ, ಛಂದಸ್ಸು, ಗ್ರಂಥಸಂಪಾದನೆ, ಹಸ್ತಪ್ರತಿಶಾಸ್ತ್ರ, ನಿಘಂಟುವಿಜ್ಞಾನ ಮುಂತಾದ ಸಾಹಿತ್ಯ ಪೂರಕ ವಿಷಯಗಳ ಜೊತೆಗೆ, ಸಾಹಿತ್ಯದೊಂದಿಗೆ ನೇರ ಸಂಬಂಧ ಹೊಂದದೇ ಇರುವಂತಹ ಅರ್ಥಶಾಸ್ತ್ರ, ಇತಿಹಾಸ, ಮನೋವಿಜ್ಞಾನ, ಆರೋಗ್ಯಶಾಸ್ತ್ರ, ವಿವಿಧ ಕಲೆಗಳು ಮುಂತಾದ ಶಿಸ್ತುಗಳು ಸಾಹಿತ್ಯದ

ಮೇಲೆ ಹೇಗೆ ಪ್ರಭಾವ ಬೀರಿದೆ ಎಂಬುದರ ಅಧ್ಯಯನವು ಕೂಡ ಅಂತರ್‌ಶಿಸ್ತೀಯ ಮತ್ತು ಬಹುಶಿಸ್ತೀಯ ವಿಚಾರಗಳ ಅಧ್ಯಯನದ ಕಕ್ಷೆಯೊಳಗೇ ಬರುತ್ತದೆ.

ನಿದರ್ಶನಕ್ಕಾಗಿ ಒಂದು ಸಂಶೋಧನೆಯ ಮೇಲೆ ಹೇಗೆ ಅನ್ಯಶಿಸ್ತೀಯ ಅಧ್ಯಯನಗಳು ನೆರವು ನೀಡಬಹುದು ಎಂಬುದನ್ನು ಗಮನಿಸೋಣ. ಭಾರತ ದೇಶಕ್ಕೆ ಈರುಳ್ಳಿಯು ೧೭ನೇ ಶತಮಾನದಲ್ಲಿ ಬಂದಿತು ಎಂಬ ಸಸ್ಯಶಾಸ್ತ್ರೀಯ ಸಂಶೋಧನೆ ಚಾಲ್ತಿಯಲ್ಲಿತ್ತು. ಆದರೆ ಪ್ರಸಿದ್ಧ ಸಸ್ಯವಿಜ್ಞಾನಿಗಳಾದ ಬಿ.ಜಿ.ಎಲ್.ಸ್ವಾಮಿ ಅವರು ಕನ್ನಡ ಸಾಹಿತ್ಯದ ವಿಚಾರವೊಂದನ್ನು ತಮ್ಮ ಸಸ್ಯಶಾಸ್ತ್ರದ ಸಂಶೋಧನೆಗೆ ಬಳಸಿಕೊಂಡರು. ಇದರ ಪ್ರತಿಫಲ ಎಂದರೆ ಭಾರತಕ್ಕೆ ಈರುಳ್ಳಿಯು ಪ್ರವೇಶಿಸಿದ್ದು ೧೩ನೇ ಶತಮಾನದಲ್ಲಿ ಎಂಬುದೇ ಆಗಿದೆ. ಇಲ್ಲಿ ಸ್ವಾಮಿಯವರು ೧೩ನೇ ಶತಮಾನದ ಹರಿಹರನ 'ಬಸವರಾಜ ದೇವರ ರಗಳೆ'ಯಲ್ಲಿ ಪ್ರಸ್ತಾಪಿತವಾಗಿರುವ ಈರುಳ್ಳಿಯ ಮೆರವಣಿಗೆಯನ್ನು ತಮ್ಮ ಈ ಹೊಸ ಶೋಧಕ್ಕೆ ಆಧಾರವನ್ನಾಗಿರಿಸಿಕೊಂಡರು. ಹೇಗೆಂದರೆ ಒಂದು ಶುದ್ಧವಿಜ್ಞಾನದ ಸಂಶೋಧನೆಯ ಪ್ರತಿಫಲಕ್ಕೆ ಕನ್ನಡ ಸಾಹಿತ್ಯದ ಕೃತಿಯೊಳಗೆ ಬರುವ ವಿಚಾರವೊಂದು ಹೇಗೆ ಪೂರಕವಾಯಿತು ಎಂಬುದೇ ಆಗಿದೆ. ಬಹುಶಃ ಅಂತರ್‌ಶಿಸ್ತೀಯ ಮತ್ತು ಬಹುಶಿಸ್ತೀಯ ಅಧ್ಯಯನ ವಿಧಾನಕ್ಕೆ ಇದೊಂದು ಒಳ್ಳೆಯ ನಿದರ್ಶನ.

ಹಾಗೆಯೇ 'ಪಂಪಭಾರತ'ದಲ್ಲಿ ಒಂದು ಪ್ರಸಂಗ ಬರುತ್ತದೆ. ಸುಭದ್ರೆಯು ಅರ್ಜುನನ ಚಿತ್ರಪಟವನ್ನು ಗಮನಿಸುತ್ತಿರುತ್ತಾಳೆ. ಆಗ ಕವಿ ಪಂಪ ಚಿತ್ರಕಲೆಯನ್ನು ಕುರಿತು 'ಸಮತಟ್ಟಾದ ಒಂದು ಪದಾರ್ಥದ ಮೇಲೆ ಕೇವಲ ಗೆರೆಗಳ ಮೂಲಕ ಹೇಗೆ ಚಿತ್ರಕಾರ ಆಳ, ಎತ್ತರ, ಉಬ್ಬು, ತಗ್ಗುಗಳನ್ನು ಅನುಭವಕ್ಕೆ ಬಂದಂತೆ ಮಾಡುತ್ತದೆ ಈ ಚಿತ್ರಕಲೆ' ಎಂದು ಉದ್ಗಾರ ತೆಗೆಯುತ್ತಾನೆ. ವಾಗ್ರೂಪದ ಕಲೆಯಾದ ಸಾಹಿತ್ಯಕೃತಿಯಲ್ಲಿ ಚಿತ್ರಕಲೆಯ ಈ ಸೂಕ್ಷ್ಮ ವಿಷಯ ಹೇಗೆ ಹೊಂದಾಣಿಕೆಯಾಯಿತು ಮತ್ತು ಔಚಿತ್ಯಪೂರ್ಣವಾಯಿತು ಎಂಬುದಕ್ಕೆ ಅಂತರ್‌ಶಿಸ್ತೀಯ ಮತ್ತು ಬಹುಶಿಸ್ತೀಯ ಅಧ್ಯಯನ ಹೇಗೆ ಅನಿವಾರ್ಯವಾಗುತ್ತದೆ ಎಂಬುದನ್ನು ಈ ಪ್ರಸಂಗದಿಂದ ತಿಳಿದುಕೊಳ್ಳಬಹುದು. ಇಲ್ಲಿ "ಕನ್ನಡ ಸಂಶೋಧನೆಯ ಆಯಾಮಗಳು ವಿಸ್ತರಿಸುತ್ತಿದ್ದಂತೆ ಭಾಷಾಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಜಾನಪದ ಮುಂತಾದವುಗಳ ನೆರವು ಪಡೆಯುವುದು ಅಧಿಕವಾಗಿದೆ. ಸಾಹಿತ್ಯ ಸಂಶೋಧಕರು ಇತಿಹಾಸವನ್ನು ಸಾಹಿತ್ಯಕ್ಕೆ ಅನ್ವಯಿಸಿ ಅಧ್ಯಯನ ಮಾಡುವುದು ಹೆಚ್ಚಾಗಿದೆ. ಅದರ ಜೊತೆಗೆ ಇತರ ಅಧ್ಯಯನ ವಿಭಾಗಗಳ ಸಹಯೋಗದೊಂದಿಗೆ ಅಂತರ್‌ವಿಭಾಗೀಯ ಸಂಶೋಧನೆಯನ್ನೂ ಕೈಗೊಳ್ಳುತ್ತಿದ್ದಾರೆ. ಇದು ಕನ್ನಡ ಸಂಶೋಧನೆಯಲ್ಲಿ ಹೊಸ ತಿರುವು ಪಡೆಯುವುದರಲ್ಲಿ ಸಂಶಯವಿಲ್ಲ".[೧೧]

ಸಾಹಿತ್ಯವು ಒಟ್ಟು ಮನುಕುಲದ ಉತ್ಪಾದನೆಯಾದುದರಿಂದ ಮತ್ತು ಮನುಕುಲಕ್ಕೆ ಏನೆಲ್ಲಾ ವಿಷಯಗಳು ಅಗತ್ಯವೋ ಅವೆಲ್ಲವೂ ಸಾಹಿತ್ಯಕ್ಕೂ ಪೂರಕವಾಗಿಯೇ ಇರುತ್ತದೆ. ಸಾಹಿತ್ಯದ ಸ್ವರೂಪವನ್ನು ಗಮನಿಸಿದರೆ ಅದರಲ್ಲಿ ನಾವು ಎರಡು ಅಂಶಗಳನ್ನು ಪರಿಭಾವಿಸಬಹುದು.

೧. ಸಾಹಿತ್ಯವು ಸೌಂದರ್ಯಾನುಭವವನ್ನು ನೀಡಬೇಕು, ೨. ಸಾಹಿತ್ಯವು ಸಾಮಾಜಿಕವಾಗಿ ಪ್ರಸ್ತುತವಾಗಿರಬೇಕು. ಆದರೆ ಇಲ್ಲಿ ಕೆಲವು ಸಾಹಿತ್ಯ ರೂಪಗಳು ಕೇವಲ ಸೌಂದರ್ಯಾನುಭವವನ್ನು ನೀಡುತ್ತವೆ. ಇನ್ನು ಕೆಲವು ಸಾಹಿತ್ಯ ರೂಪಗಳು ಸೌಂದರ್ಯಾನುಭವವನ್ನು ನೀಡದೆ ಕೇವಲ ಸಾಮಾಜಿಕ ಸಮಸ್ಯೆಗಳನ್ನು ಕುರಿತ ಕಾಳಜಿಯನ್ನು ಮಾತ್ರ ತೋರುತ್ತದೆ. ವಾಸ್ತವವಾಗಿ ಸಾಹಿತ್ಯವು ಈ ಎರಡು ಅಂಶಗಳನ್ನು ಅತ್ಯಂತ ಔಚಿತ್ಯಪೂರ್ಣ ಪ್ರಮಾಣದಲ್ಲಿ ಒಳಗೊಂಡಿರಬೇಕಾಗುತ್ತದೆ. ಹೀಗಾಗಿ ಒಂದು ದೃಷ್ಟಿಯಿಂದ ಅಂತರ್‌ಶಿಸ್ತೀಯ ಹಾಗೂ ಬಹುಶಿಸ್ತೀಯ ಅಧ್ಯಯನಗಳ ವಿಧಿವಿಧಾನಗಳ ಅನ್ವಯವನ್ನು ಸಾಹಿತ್ಯಕ್ಕೆ ಅಳವಡಿಸುವುದು ತೀರಾ ಅನಿವಾರ್ಯವೇ ಸರಿ. ಏಕೆಂದರೆ ಸೌಂದರ್ಯಾನುಭವದ ವಿಭಾಗದಲ್ಲಿ ಅಲಂಕಾರಶಾಸ್ತ್ರ, ಸೌಂದರ್ಯಶಾಸ್ತ್ರ, ಕಾವ್ಯಮೀಮಾಂಸೆ, ವಿಮರ್ಶೆ, ಛಂದಸ್ಸು ಮುಂತಾದ ಶಾಸ್ತ್ರಗಳ ಆಳವಾದ ತಿಳುವಳಿಕೆ ಕೃತಿಯ ವಿವೇಚನೆಗೆ ತೀರಾ ಅಗತ್ಯ. ಹಾಗೆಯೇ ಸಾಹಿತ್ಯದಲ್ಲಿ ಬರುವ ಸಾಮಾಜಿಕ ಕಾಳಜಿಗಳ ವಿವೇಚನೆಗೆ ಒಂದು ರಾಷ್ಟ್ರದ ಸ್ವರೂಪ, ಅದರ ಇತಿಹಾಸ, ಅಲ್ಲಿನ ಜನರ ಸಂಸ್ಕೃತಿ ಮೀಮಾಂಸೆ, ಆ ಸಮಾಜದವರು ನಂಬಿಕೊಂಡಿದ್ದ ವಿವಿಧ ಧರ್ಮಗಳು, ಆಚರಣೆಗಳು, ಅಂದಂದಿನ ಕಾಲದ ಜನರ ಅಪೇಕ್ಷೆಗಳಿಗೆ ಪೂರಕವಾಗಿ ಬರುವ ಯಾವುದೇ ವಿಚಾರಗಳು ಇವೆಲ್ಲವುಗಳ ತತ್ವದ ಆನ್ವಯವನ್ನು ಸಾಹಿತ್ಯದ ಒಡಲಿಗೆ ತಳಕುಹಾಕಿ ವಿಮರ್ಶೆ ಮಾಡಲೇಬೇಕಾಗುತ್ತದೆ. ಇದು ಯಾವುದೇ ಒಂದು ಸಂಸ್ಕೃತಿಯ ಅರ್ಥಪೂರ್ಣವಾದ ಅಧ್ಯಯನಕ್ಕೆ ಪೂರಕ ಆಕರವಾಗುತ್ತದೆ. ಈ ರೀತಿಯ ಹೊಸ ನೋಟದ ಅಧ್ಯಯನವೇ ಅಂತರ್‌ಶಿಸ್ತೀಯ ಹಾಗೂ ಬಹುಶಿಸ್ತೀಯ ಅಧ್ಯಯನ.

ಈ ಅಂತರ್‌ಶಿಸ್ತೀಯ ಹಾಗೂ ಬಹುಶಿಸ್ತೀಯ ಅಧ್ಯಯನದ ಬೆಳವಣಿಗೆಯ ದೃಷ್ಟಿಯಿಂದ ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಡಾ.ಅಮರೇಶ ನುಗಡೋಣಿ ಅವರ ಸಂಪಾದಕತ್ವದಲ್ಲಿ 'ಕನ್ನಡ ಸಂಶೋಧನೆಯ ವೈಧಾನಿಕತೆಗಳು' ಎಂಬ ಪುಸ್ತಕವನ್ನು ಹೊರತಂದಿದೆ. ರಹಮತ್ ತರೀಕೆರೆ, ಎಚ್.ಎಸ್.ರಾಘವೇಂದ್ರರಾವ್, ಮೊಗಳ್ಳಿ ಗಣೇಶ್, ಬಂಜಗೆರೆ ಜಯಪ್ರಕಾಶ್ ಮುಂತಾದ ವಿಮರ್ಶಕರು ಈ ಹೊಸ ಶಿಸ್ತಿನ ವಿವಿಧ ಮಾನದಂಡಗಳ ಆನ್ವಯಿಕತೆಯ ತತ್ವ ಚಿಂತನೆಗಳನ್ನು ದೃಷ್ಟಾಂತಗಳೊಂದಿಗೆ ನಿರೂಪಿಸಿದ್ದಾರೆ. ಉದಾಹರಣೆಗೆ ಒಂದು ಸಾಹಿತ್ಯ ಕೃತಿಯ ಅಧ್ಯಯನವನ್ನು ಮಹಿಳಾ ಅಧ್ಯಯನದ ದೃಷ್ಟಿಕೋನದಿಂದ ಹೇಗೆ ಪರಿಭಾವಿಸಬಹುದು ಎಂಬ ಚಿಂತನೆಗಳನ್ನು ಎಚ್.ಎಸ್.ರಾಘವೇಂದ್ರರಾವ್ ಅವರ 'ಸಾಹಿತ್ಯಾಧ್ಯಯನ ಮತ್ತು ಮಹಿಳಾ ಅಧ್ಯಯನ' ಎಂಬ ಲೇಖನದಲ್ಲಿ ಗಮನಿಸಬಹುದು. ಇಲ್ಲಿ ಸ್ತ್ರೀವಾದದ ಹಿನ್ನೆಲೆಯಲ್ಲಿ ತೇಜಸ್ವಿಯವರ 'ಕಿರಗೂರಿನ ಗಯ್ಯಾಳಿಗಳು' ಕಥಾಸಂಕಲನ ಹೇಗೆ ಇನ್ನೂ ಗಟ್ಟಿಯಾದ ಕೃತಿಯಾಗಿ ಹೊರಹೊಮ್ಮುತ್ತದೆ ಎನ್ನುವ ರೀತಿಯಲ್ಲೂ ಆಲೋಚನೆಗಳನ್ನು ಮಾಡಬಹುದು. ಇದು ಅಂತರ್‌ಶಿಸ್ತೀಯ ಹಾಗೂ ಬಹುಶಿಸ್ತೀಯ ಅಧ್ಯಯನಗಳ ಪ್ರಯೋಜನ. ತೇಜಸ್ವಿಯವರ ಒಟ್ಟು ಬರಹಗಳನ್ನು ವಿಜ್ಞಾನ,

ಪ್ರಾಣಿಶಾಸ್ತ್ರ, ಛಾಯಾಚಿತ್ರ ವಿಚಾರಗಳು, ಸಸ್ಯವಿಜ್ಞಾನ, ಪರಿಸರ, ಪ್ರಕೃತಿಶಾಸ್ತ್ರ ಇವುಗಳನ್ನು ಹೊರತುಪಡಿಸಿ ವಿಶ್ಲೇಷಣೆಗೆ ಒಳಪಡಿಸಿ ನೋಡಲು ಬರುವುದಿಲ್ಲ. ಎಂದರೆ ಒಂದು ಸಾಹಿತ್ಯ ಪರಂಪರೆಯ ಯಾವುದೇ ಕಾಲಘಟ್ಟದ ಒಬ್ಬ ಮಹತ್ವದ ಲೇಖಕನ ಪೂರ್ಣದರ್ಶನವಾಗಬೇಕಾದರೆ ಕೇವಲ ಸಾಹಿತ್ಯ, ಶಾಸ್ತ್ರ ಮಾತ್ರ ಸಾಕಾಗುವುದಿಲ್ಲ.

ಇನ್ನು ಹಳಗನ್ನಡ ನಡುಗನ್ನಡ ಕವಿಗಳ ವಿಚಾರಕ್ಕೆ ಬಂದರೆ ಅಂದಿನ ಸಮಾಜದಲ್ಲಿ ರೂಢಿಯಲ್ಲಿದ್ದ ಹಲವಾರು ಶಾಸ್ತ್ರಗಳ ಸ್ವರೂಪದ ಬಗ್ಗೆ ಖಚಿತ ಜ್ಞಾನವನ್ನು ಪಡೆದುಕೊಂಡಿರುವುದು ಒಳ್ಳೆಯದು. ನಯಸೇನನಂತಹ ಕವಿಯ 'ಧರ್ಮಾಮೃತ'ದಲ್ಲಿ ಅಂದಿನ ಸಮಾಜದ ಹಲವಾರು ಸಾಮಾಜಿಕ ವಿಚಾರಗಳು ಬರುತ್ತವೆ. ಉದಾಹರಣೆಗೆ ಅವನು ಸಂಸ್ಕೃತ ಕನ್ನಡದ ಅನಗತ್ಯ ಮಿಶ್ರಣವನ್ನು ಕುರಿತು "ತಕ್ಕುದೇ ಬೆರೆಸಲ್ಕೆ ಘೃತಮುಮಂ ತೈಲಮುಮಂ" ಎನ್ನುತ್ತಾನೆ. ಇಲ್ಲಿ ಸಂಸ್ಕೃತ ಮತ್ತು ಕನ್ನಡವನ್ನು ಅನಗತ್ಯವಾಗಿ ಬೆರಸಬಾರದು ಎಂಬ ಕೇವಲ ಭಾಷಾವಿಚಾರವನ್ನು ಮಾತ್ರ ನಾವು ಗಮನಿಸಬಾರದು. ನಯಸೇನನ ಕಾಲದ ಸಮಾಜದಲ್ಲಿ ವ್ಯಾಪಾರಿಗಳು ತುಪ್ಪಕ್ಕೆ ಎಣ್ಣೆಯನ್ನು ಬೆರೆಸುತ್ತಿದ್ದರು ಎಂದು ತಿಳಿಯುತ್ತದೆ. ಈ ಒಂದು ಸಣ್ಣ ಉದಾಹರಣೆಯ ವಿಚಾರದಲ್ಲೇ ಸಹೃದಯರು ವ್ಯಾಪಾರಧರ್ಮದ ಬಗ್ಗೆ ತಿಳಿದುಕೊಂಡಿರಲೇ ಬೇಕಾಗುತ್ತದೆ.

ಹಾಗೆಯೇ 'ಪಂಪಭಾರತ'ದಲ್ಲಿ ಬರುವ ಯುದ್ಧದ ಚಿತ್ರಣಗಳು ಬಹಳ ಕುತೂಹಲಕಾರಿಯಾಗಿವೆ. ಯುದ್ಧಾನಂತರ ರಾತ್ರಿಯಲ್ಲಿ ಸೈನಿಕರ ಬಿಡಾರಗಳಲ್ಲಿ ಔಷಧೋಪಚಾರಗಳ ಪ್ರಸ್ತಾಪವು ಬರುತ್ತದೆ. ಒಬ್ಬ ಸೈನಿಕನ ಮಾಂಸಖಂಡದೊಳಗೆ ಸಿಕ್ಕಿಹಾಕಿಕೊಂಡಿದ್ದ ಆಯುಧದ ಚೂರೊಂದನ್ನು ತೆಗೆಯಲು ಬಹಳ ಪ್ರಯತ್ನಪಟ್ಟರೂ ಅದು ಹೊರಕ್ಕೆ ಬರುವುದಿಲ್ಲ. ಆಗ ಒಬ್ಬ ನಾಟಿ ವೈದ್ಯನು ಆ ಭಾಗದ ಮಾಂಸಖಂಡದ ಹತ್ತಿರ ಒಂದು ದೊಡ್ಡ ಅಯಸ್ಕಾಂತವನ್ನು ಹಿಡಿಯುತ್ತಾನೆ. ಆಗ ಸಹಜವಾಗಿಯೇ ಆಯುಧದ ಚೂರು ಅಯಸ್ಕಾಂತಕ್ಕೆ ಸಿಕ್ಕಿಹಾಕಿಕೊಳ್ಳುತ್ತದೆ. ಲೋಹಶಾಸ್ತ್ರದ ಈ ವಿಚಾರವು ಅಂದು ಜನರಿಗೆ ಗೊತ್ತಿತ್ತು ಎಂಬುದನ್ನು ತಿಳಿದುಕೊಳ್ಳಲು ಈ ಹೊಸ ಅಧ್ಯಯನದ ಶಿಸ್ತಿನ ಅರಿವು ಇರಬೇಕಾಗುತ್ತದೆ. ಕನ್ನಡದ ಮಹತ್ವದ ಲೇಖಕರಾದ ಕುವೆಂಪು ಅವರ ಕೃತಿಗಳನ್ನು ಅರ್ಥೈಸುವಾಗ ಭಾರತೀಯ ತತ್ವಶಾಸ್ತ್ರ, ವಿಜ್ಞಾನ, ಮೆಟಾಫಿಸಿಕ್ಸ್, ಸಾಮಾಜಿಕ ಅಧ್ಯಯನಗಳು, ಚರಿತ್ರೆಯ ಆಳವಾದ ತಿಳಿವಳಿಕೆ, ವರ್ಣಾಶ್ರಮದ ವಿವರಗಳು, ಪಾಶ್ಚಾತ್ಯ ಸಾಹಿತ್ಯ ಪರಿಸರ ಇವುಗಳ ಅಂತರ್‌ಸಂಬಂಧದ ಆಳವಾದ ತಿಳುವಳಿಕೆ ಅಗತ್ಯ. ಕನ್ನಡದ ಇನ್ನೊಬ್ಬ ಮಹತ್ವದ ಕವಿ ಬೇಂದ್ರೆಯವರ ಸಾಹಿತ್ಯದ ವಿರಾಟ್ ಸ್ವರೂಪದ ದರ್ಶನ ಮಾಡಿಕೊಳ್ಳಬೇಕಾದರೆ ಭಾರತೀಯ ದರ್ಶನಶಾಸ್ತ್ರ, ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆ, ಅರವಿಂದರ ವಿಚಾರಧಾರೆಗಳು, ಸಂಖ್ಯಾಶಾಸ್ತ್ರ, ವ್ಯವಸಾಯ, ವಿಜ್ಞಾನ ಇನ್ನೂ ಮುಂತಾದ ಹಲವು ಶಾಸ್ತ್ರಗಳ ತಿಳಿವಳಿಕೆ ಅತ್ಯವಶ್ಯಕ.

ನವ್ಯ ಮತ್ತು ನವ್ಯದ ನಂತರ ಬಂದ ಬಂಡಾಯ ಹಾಗೂ ದಲಿತ ಸಾಹಿತ್ಯಗಳ ಗ್ರಹಿಕೆಗಂತೂ ಸಮಾಜೋ-ಸಾಂಸ್ಕೃತಿಕ ವಿಚಾರಧಾರೆಗಳು, ಗಾಂಧಿ, ಲೋಹಿಯಾ ಮತ್ತು ಅಂಬೇಡ್ಕರರ ಪ್ರಖರ ಚಿಂತನೆಗಳ ಆಳವಾದ ಅಧ್ಯಯನ ಆವಶ್ಯ. ದೇವನೂರು ಮಹಾದೇವ, ಸಿದ್ಧಲಿಂಗಯ್ಯ, ಎಲ್.ಹನುಮಂತಯ್ಯ, ಕೆ.ಬಿ.ಸಿದ್ದಯ್ಯ, ಎನ್.ಕೆ.ಹನುಮಂತಯ್ಯ ಮುಂತಾದವರ ಕೃತಿಗಳಲ್ಲಿ ಸಾಮಾಜಿಕ ಹಾಗೂ ಮಾನವಿಕ ವಿಜ್ಞಾನಗಳ ಫಲಿತಗಳು ಅಪಾರವಾದ ಪ್ರಮಾಣದಲ್ಲಿ ಹಾಸುಹೊಕ್ಕಾಗಿರುತ್ತವೆ. ಈ ದಿಶೆಯಲ್ಲಿ ಬಹುಶಃ ಇಂದಿನ ಸಾಹಿತ್ಯಾಧ್ಯಯನಕ್ಕೆ ಅಂತರ್‌ಶಿಸ್ತೀಯ ಮತ್ತು ಬಹುಶಿಸ್ತೀಯ ಅಧ್ಯಯನಗಳು ಹೆಚ್ಚು ಪ್ರಖರತೆಯನ್ನು ನೀಡುತ್ತವೆ. ಹಾಗೆಯೇ ರಾಮಾನುಜನ್ ಅವರ ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ಅನುಸಂಧಾನ ಮಾಡುವಾಗ ಈ ಬಗೆಯ ಬಹುಶಿಸ್ತೀಯ ಅಧ್ಯಯನ ಅತ್ಯವಶ್ಯ.

೧.೫. ಸ್ವರೂಪ ಮತ್ತು ಸವಾಲುಗಳು

ಅಂತರ್‌ಶಿಸ್ತೀಯ ಮತ್ತು ಬಹುಶಿಸ್ತೀಯ ಅಧ್ಯಯನಗಳ ಆನ್ವಯಿಕತೆಯು ಹೊಸ ಹೊಸ ರೀತಿಯ ಸಮಸ್ಯೆಗಳ ಸೃಷ್ಟಿಗೂ ಕಾರಣವಿರಬಹುದು ಎಂಬ ಎಚ್ಚರ ಸಹೃದಯನ ಮನಸ್ಸಿನಲ್ಲಿ ಸದಾ ಜಾಗೃತವಾಗಿರಬೇಕು. ಒಂದು ಸಾಹಿತ್ಯಕೃತಿ ಪ್ರಮಾಣದ ದೃಷ್ಟಿಯಿಂದ ಹೆಚ್ಚು ಹೆಚ್ಚು ಸಾಮಾಜಿಕವಾದಷ್ಟೂ ಈ ಅಧ್ಯಯನದ ಶಿಸ್ತುಗಳ ಹೆಚ್ಚು ಹೆಚ್ಚು ಅನ್ವಯ ಔಚಿತ್ಯವಾಗಿರುತ್ತದೆ. ಆದರೆ ರಸನಿಷ್ಠಕೇಂದ್ರಿತ ಸಾಹಿತ್ಯದ ಅಧ್ಯಯನಗಳಿಗೆ ಈ ಶಿಸ್ತನ್ನು ಬಳಸಬೇಕಾಗದೇ ಇರಬಹುದು. ಇನ್ನು ಯಾವುದೋ ಒಂದು ಕಾವ್ಯ ಭಾಗದ ನಿರ್ದಿಷ್ಟ ಪ್ರಸಂಗದ ವಿಶ್ಲೇಷಣೆಗೆ ಯಾವ ಶಿಸ್ತಿನ ಯಾವ ಭಾಗ ಎಷ್ಟರಮಟ್ಟಿಗೆ ಅನ್ವಯ ಎಂಬುದೂ ಮುಖ್ಯ. ಉದಾಹರಣೆಗೆ ಗೋಪಾಲಕೃಷ್ಣ ಅಡಿಗರ 'ಮಿದುಳು ಬಚ್ಚಲ ಹಂಡೆಯಲಿ ಬೇಯುವ ಆಮೆ' ಎಂಬ ಸಾಲಿನ ಗ್ರಹಿಕೆಗೆ ಮತ್ತು ವಿಮರ್ಶೆಗೆ ಮಿದುಳು ಶಬ್ದವಿದೆ ಎಂಬ ಕಾರಣಕ್ಕೆ ವೈದ್ಯಶಾಸ್ತ್ರವೂ ಬಚ್ಚಲಿನ ಪ್ರಸ್ತಾಪ ಬರುವುದರಿಂದ ಕಟ್ಟಡ ಶಾಸ್ತ್ರವೂ, ಆಮೆ ಬರುವುದರಿಂದ ಪ್ರಾಣಿಶಾಸ್ತ್ರವೂ ಇಲ್ಲಿ ಅಗತ್ಯವೇನಲ್ಲ. ಇಲ್ಲಿ ಕವಿ ಆಧುನಿಕ ಕಾಲದ ಅಸಹಾಯಕತೆ ಮತ್ತು ಬೇಸರಗಳನ್ನು ಪ್ರತಿಪಾದಿಸಲು ಈ ಶಬ್ದಗಳನ್ನು ಸಾಂಕೇತಿಕವಾಗಿ ಬಳಸುತ್ತಿದ್ದಾನಷ್ಟೆ ಆದ್ದರಿಂದ ಅಂತರ್‌ಶಿಸ್ತೀಯ ಮತ್ತು ಬಹುಶಿಸ್ತೀಯ ಅಧ್ಯಯನದ ಅನ್ವಯ ಎಲ್ಲಿ ಎಷ್ಟರ ಮಟ್ಟಿಗೆ ಅವಶ್ಯ ಎಂಬ ಸೂಕ್ಷ್ಮತೆ ಇತ್ಯಾದಿಗಳ ಅರಿವು ಪ್ರಧಾನ ಪಾತ್ರ ವಹಿಸುತ್ತದೆ.

ಅನಗತ್ಯವಾಗಿ ಮತ್ತು ಅಸಂಬದ್ಧವಾಗಿ ಒಂದು ಅಧ್ಯಯನದ ಶಿಸ್ತಿಗೆ ಮತ್ತೊಂದು ಅಧ್ಯಯನದ ಶಿಸ್ತಿನ ಮಾನದಂಡವನ್ನು ಬಳಸಿದಾಗ ರಸಾನುಭವಕ್ಕೆ ಬದಲು ಗ್ರಹಿಕೆಗೆ ತೊಡಕಾಗುವ ಅಪಾಯದ ಸಾಧ್ಯತೆಗಳಿವೆ ಎಂಬ ಪ್ರಜ್ಞೆ ಅಧ್ಯಯನಕಾರರ ಮನಸ್ಸಿನಲ್ಲಿರಬೇಕು. ಈ ಶಿಸ್ತಿನ ಸೂಕ್ಷ್ಮವಾದ ಔಚಿತ್ಯಪೂರ್ಣವಾದ ಅನ್ವಯವು ಒಂದು ಸಾಹಿತ್ಯ ಕೃತಿಯನ್ನು ಸಮಗ್ರವಾಗಿ ಆಸ್ವಾದಿಸಲು ನೆರವು ನೀಡುತ್ತದೆ.

ಇದರ ಅತ್ಯುತ್ತಮ ಭಾರತೀಯ ಮಾದರಿ ಎಂದರೆ ರಾಮಮನೋಹರ ಲೋಹಿಯಾ. ರಾಜಕಾರಣ, ಸಂಸ್ಕೃತಿ ಅಧ್ಯಯನ, ಸಮಾಜಶಾಸ್ತ್ರೀಯ ತಿಳುವಳಿಕೆ, ಜನಪರ ಪ್ರಭುತ್ವದ ಪರಿಕಲ್ಪನೆ, ಶುದ್ಧ ಲೌಕಿಕನೊಬ್ಬನ ಸಹಜ ಆಕಾಂಕ್ಷೆಗಳು ಈ ಎಲ್ಲವನ್ನೂ ಬೆರೆಸಿದ ಅಪರೂಪದ ನಾಗರಿಕ ವ್ಯಕ್ತಿಯ ಮಾದರಿಯೊಂದನ್ನು ಕಟ್ಟಲು ಯತ್ನಿಸಿ ಗೆದ್ದವರು ಲೋಹಿಯಾ. ಕನ್ನಡದಲ್ಲಿ ಪೂರ್ಣಚಂದ್ರ ತೇಜಸ್ವಿ ಅವರು ಲೋಹಿಯಾ ಅವರ ಕನ್ನಡ ಅನುವಾದದಂತೆಯೇ ಕಾಣಿಸುತ್ತಾರೆ. ಸಂಶೋಧನ ಮತ್ತು ಅಧ್ಯಯನ ಕ್ಷೇತ್ರದಲ್ಲಿ ಕೀರ್ತಿನಾಥ ಕುರ್ತಕೋಟಿ, ಜಿ.ಎಸ್.ಆಮೂರ, ಸಿ.ಎನ್.ರಾಮಚಂದ್ರನ್, ಕಿ.ರಂ.ನಾಗರಾಜ, ಕೆ.ವಿ.ನಾರಾಯಣ, ಡಿ.ಆರ್.ನಾಗರಾಜ್, ಬಸವರಾಜ ಕಲ್ಗುಡಿ, ನಟರಾಜ ಹುಳಿಯಾರ್, ರಹಮತ್ ತರೀಕೆರೆ ಮುಂತಾದವರೆಲ್ಲರೂ ಅಂತರ್‌ಶಿಸ್ತೀಯ ಮತ್ತು ಬಹುಶಿಸ್ತೀಯ ಅಧ್ಯಯನ ವಿಧಾನಗಳಿಗೆ ಅತ್ಯುತ್ತಮ ಮಾದರಿಗಳನ್ನು ಒದಗಿಸಿದವರೇ ಆಗಿದ್ದಾರೆ.

ಎ.ಕೆ. ರಾಮಾನುಜನ್ ಅವರ ಸಾಹಿತ್ಯವನ್ನೂ ಸಹ ಯಾವುದೇ ಒಂದು ಶಿಸ್ತಿನ ಅಧ್ಯಯನದಲ್ಲಿ ನೋಡುವುದು ಕಷ್ಟದ ಕೆಲಸ. ಸಾಹಿತ್ಯ, ಭಾಷಾಶಾಸ್ತ್ರ, ಜಾನಪದ, ತತ್ತ್ವಶಾಸ್ತ್ರ ಮತ್ತು ಹಲವು ಮಾನವಿಕ ಶಾಸ್ತ್ರಗಳ ಆಳವಾದ ತಿಳುವಳಿಕೆಯಿಂದ ಇವರು ಭಾರತೀಯ ಮತ್ತು ಪಾಶ್ಚಿಮಾತ್ಯ ಸಾಹಿತ್ಯ ಚಿಂತನೆಗೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಕರ್ನಾಟಕ ಮತ್ತು ಭಾರತದಲ್ಲಷ್ಟೇ ಅಲ್ಲದೆ ಅಮೆರಿಕಾದಂತಹ ಮುಂದುವರಿದ ರಾಷ್ಟ್ರಗಳಲ್ಲಿ ಇವರ ಸಾಹಿತ್ಯ ಜ್ಞಾನದ ಕೊಡುಗೆ ಅಪಾರವಾಗಿದೆ.

ಆಧುನಿಕ ಹಾಗೂ ಪ್ರಸ್ತುತ ಸಂದರ್ಭದಲ್ಲಿ ಬರೆಯುತ್ತಿರುವ ಲೇಖಕರು ಈ ಅಂತರ್‌ಶಿಸ್ತೀಯ ಮತ್ತು ಬಹುಶಿಸ್ತೀಯ ಅಧ್ಯಯನಗಳ ಮಾದರಿಗಳನ್ನು ಬಳಸಿಕೊಂಡೇ ಸಾಹಿತ್ಯದ ಕೃಷಿಯಲ್ಲಿ ಮುಂದುವರಿಸುತ್ತಿದ್ದಾರೆ ಎಂಬ ಸಂಗತಿಯು ಕಣ್ಣಿಗೆ ಕಟ್ಟುವಷ್ಟು ಗಟ್ಟಿಯಾಗಿ ನಮಗೆ ಕಾಣುತ್ತಿದೆ. ರಾಜೀವ ತಾರಾನಾಥ್(ಸಾಹಿತ್ಯ ಮತ್ತು ಸಂಗೀತ), ಪಿ.ಲಂಕೇಶ್(ಸಾಹಿತ್ಯ ಮತ್ತು ಸಿನೆಮಾ), ಪ್ರಸನ್ನ(ಸಾಹಿತ್ಯ ಮತ್ತು ರಂಗಭೂಮಿ), ಕೆ.ವಿ.ಸುಬ್ಬಣ್ಣ(ಸಾಹಿತ್ಯ, ಕೃಷಿ, ಸಂಘಟನೆ) ಈ ಎಲ್ಲ ಲೇಖಕರಲ್ಲೂ ಅನ್ಯ ಕ್ಷೇತ್ರಗಳ ತಿಳುವಳಿಕೆ ಮತ್ತು ಆಸಕ್ತಿ ಇತರ ಕ್ಷೇತ್ರಗಳಲ್ಲಿನ ಅವರ ಪ್ರಯೋಗಗಳನ್ನು ಹೆಚ್ಚು ಸಮೃದ್ಧವಾಗಿಸಿರುವುದನ್ನು ನೋಡಬಹುದು. ಐಟಿ/ಬಿಟಿ ಕ್ಷೇತ್ರದ ವಸುಧೇಂದ್ರ, ವಿಕ್ರಮ್‌ಸಂಪತ್, ವೈದ್ಯಕೀಯ ಕ್ಷೇತ್ರದ ಗುರುಪ್ರಸಾದ್ ಕಾಗಿನೆಲೆ, ಸಸ್ಯಶಾಸ್ತ್ರ ವಿಭಾಗದ ಕೆ.ಎನ್.ಗಣೇಶಯ್ಯ ಇನ್ನೂ ವಿವಿಧ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರು ಸದ್ಯದಲ್ಲಿ ಬರವಣಿಗೆಯಲ್ಲಿ ತೊಡಗಿರುವ ಸ್ಥಿತಿಯಲ್ಲಿ ಹೇಗೆ ಈ ಅಂತರ್‌ಶಿಸ್ತೀಯ ಮತ್ತು ಬಹುಶಿಸ್ತೀಯ ಅಧ್ಯಯನಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ ಎಂಬುದು ಗಮನ ಸೆಳೆಯುತ್ತಿದೆ.

ಬಹುಮುಖಿ ಚಿಂತನೆಯ ರಾಮಾನುಜನ್ ಅವರ ಅಧ್ಯಯನದ ಸ್ವರೂಪ, ವ್ಯಾಪ್ತಿ ಕಾಲ, ದೇಶಗಳನ್ನು ಮೀರಿದ ಒಂದು ಜಾಗತಿಕ ಸ್ವರೂಪದ ಚಿಂತನೆಯಾಗಿದೆ. ಹಲವಾರು ಜ್ಞಾನಶಿಸ್ತುಗಳ

ಅಧ್ಯಯನಗಳನ್ನು ಮಾಡಿರುವ ಅವರು ಮತ್ತು ಭಾರತೀಯ ಚಿಂತನೆ ಎಂಬುದು ಬಹುಮುಖಿಯಾಗಿರುವಂತಹದ್ದು ಎಂಬ ಕಲ್ಪನೆಯನ್ನು ಕೊಟ್ಟಿದ್ದಾರೆ. ಆದುದರಿಂದ ಇವರ ಅಧ್ಯಯನ ಅಂತರ್‌ಶಿಸ್ತೀಯ ಅಧ್ಯಯನವನ್ನು ಮೀರಿದ ಒಂದು ಬಹುಶಿಸ್ತೀಯತೆಯನ್ನು ಒಳಗೊಳ್ಳುವ ನೆಲೆಯಲ್ಲಿ ಇವರ ಬರಹಗಳು ಬರುವುದರಿಂದ ಅವುಗಳನ್ನು ಕುರಿತು ಪ್ರಸ್ತುತ ಅಧ್ಯಯನದಲ್ಲಿ ವಿವರಿಸುವ ವಿಶ್ಲೇಷಿಸುವ ಮತ್ತು ಅರ್ಥೈಸುವ ಪ್ರಯತ್ನವನ್ನು ಮಾಡಲಾಗುತ್ತದೆ.

ಆಧುನಿಕ ಪರಿಕಲ್ಪನೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿರುವ ಹಲವಾರು ಜ್ಞಾನಶಿಸ್ತುಗಳನ್ನು ಅಂದರೆ, ಬಹುಸಂಸ್ಕೃತಿಯ ಚಿಂತನೆ, ಹಲವಾರು ಜ್ಞಾನಶಿಸ್ತುಗಳನ್ನು ಒಟ್ಟುಗೂಡಿಸಿ ಜಾಗತೀಕರಣದ ಪ್ರಭಾವದಿಂದಾಗಿ ಇಂದು ಪ್ರಚಲಿತದಲ್ಲಿರುವ ಸಾಮೂಹಿಕ ಚಿಂತನೆಗಳ ಅಧ್ಯಯನವನ್ನು ರಾಮಾನುಜನ್ ಅವರು ಸುಮಾರು ೫೦-೬೦ ವರ್ಷಗಳ ಹಿಂದೆಯೇ ಸಮರ್ಥವಾಗಿ ನಡೆಸಿದ್ದರು. ರಾಮಾನುಜನ್ ಅವರ ಬರಹಗಳ ಮೂಲಕ ಈ ಬಹುಮುಖಿ ಚಿಂತನೆಯ ಗ್ರಹಿಕೆಗಳನ್ನು ಗುರುತಿಸುವ ಯತ್ನವನ್ನು ಇಲ್ಲಿ ಮಾಡಲಾಗುವುದು. ಕನ್ನಡ ಸಂಸ್ಕೃತಿಯ ನೆಲೆ, ಭಾರತೀಯ ಸಂಸ್ಕೃತಿಯ ನೆಲೆ, ಭಾಷಾಂತರದ ನೆಲೆ ಹೀಗೆ ವಿವಿಧ ನೆಲೆಗಳಲ್ಲಿ ರಾಮಾನುಜನ್ ಅವರ ಒಟ್ಟು ಬರಹಗಳನ್ನು ಪ್ರಸ್ತುತ ನಿಬಂಧ ರಚನೆಗೆ ಬಳಸಿಕೊಂಡು ಅಧ್ಯಯನ ಮಾಡುವ ಗುರಿಯನ್ನು ಹೊಂದಲಾಗಿದೆ.

ಅಡಿಟಿಪ್ಪಣಿ

೧. ಇನ್ನೊಂದು ಸಾಹಿತ್ಯ ಚರಿತ್ರೆ, ಸುಮತೀಂದ್ರ ನಾಡಿಗ್, ಕರ್ನಾಟಕ ಬುಕ್ ಏಜೆನ್ಸಿ, ಗಾಂಧಿನಗರ, ಬೆಂಗಳೂರು, ೧೯೯೯ ಪು. ೫೩-೫೪.

೨. ಭಾಷೆ ಮತ್ತು ಸಂಸ್ಕೃತಿ, ಕೀರ್ತಿನಾಥ ಕುರ್ತಕೋಟಿ, ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ. ೨೦೦೮, ಪು. ೧೫೧-೧೫೨.

೩. ಆಡಾಡತ ಆಯುಷ್ಯ, ಗಿರೀಶ ಕಾರ್ನಾಡ್, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೧, ಪು. ೮೨-೮೩.

೪. ಮರೆಯಲಾದೀತೆ?..., ಬೆಳಗೆರೆ ಕೃಷ್ಣಶಾಸ್ತ್ರಿ, ಅಭಿನವ ಪ್ರಕಾಶನ, ಬೆಂಗಳೂರು, ೨೦೦೬, ಪು. ೨೫೪-೨೫೫.

೫. A.K.Ramanujan Memorial Lecture, Ramjas College, University of Delhi, on 21st March 2012.

೬. ಆಡಾಡತ ಆಯುಷ್ಯ, ಗಿರೀಶ ಕಾರ್ನಾಡ್, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೧, ಪು. ೧೮೧.

೭. ಆಡಾಡತ ಆಯುಷ್ಯ, ಗಿರೀಶ ಕಾರ್ನಾಡ್, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೧, ಪು. ೧೮೩.

೮. ಕತೆ ಮತ್ತು ಹಾಡು, ಅನು:ಡಾ.ಕರೀಗೌಡ ಬೀಚನಹಳ್ಳಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩, (ಪ್ರಸ್ತಾವನೆ)

೯. ಕತೆ ಮತ್ತು ಹಾಡು, ಅನು:ಡಾ.ಕರೀಗೌಡ ಬೀಚನಹಳ್ಳಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩, ಪ್ರಸ್ತಾವನೆ ಪು. ೨೩-೨೪.

೧೦. ಅಂತರ್‌ಶಿಸ್ತೀಯ ಸಂಶೋಧನ ವಿಧಿವಿಧಾನಗಳು, ಸಂ.ನಾ.ಗೀತಾಚಾರ್ಯ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ. ಬೆಂಗಳೂರು, ೧೯೯೯, ಪೀಠಿಕೆ ಪು. xiv

೧೧. ಆರ್.ವಿ.ಎಸ್.ಸುಂದರಂ, 'ಅಂತರ್ ವಿಭಾಗೀಯ ಸಂಶೋಧನೆ', ಶ್ರೀಮುಖ- ಟಿ.ವಿ.ವೆಂಕಟಾಚಲಶಾಸ್ತ್ರಿ ಅಭಿನಂದನಾ ಗ್ರಂಥ, ಟಿ.ವಿ.ವಿ. ಗೆಳೆಯರು ಮತ್ತು ಅಭಿಮಾನಿಗಳ ಬಳಗ, ೧೯೯೭, ಪು.೫೮೨.

ಅಧ್ಯಾಯ : ಎರಡು

ಎ.ಕೆ.ರಾಮಾನುಜನ್ ಅವರ ಸಾಹಿತ್ಯವನ್ನು ಕುರಿತ ಅಧ್ಯಯನಗಳ ಸಮೀಕ್ಷೆ

೧. Indian Poetry in English(೧೯೮೦); ೨. Modern Poetry in English(೧೯೮೭); ೩. ಎ.ಕೆ. ರಾಮಾನುಜನ್ ಹೆಜ್ಜೆಗುರುತುಗಳು(೧೯೯೩); ೪. ಎ.ಕೆ.ರಾಮಾನುಜನ್ ನೆನಪಿನ ಸಂಪುಟ (೧೯೯೩); ೫. ಪುಸ್ತಕ ಪ್ರೀತಿ(೧೯೯೩); ೬. ಭಾರತೀಯ ಜನಪದ ಕಥೆಗಳು(೨೦೦೦); ೭. ಸ್ಮೃತಿ ಕಿಣಾಂಕಂ(೨೦೦೦); ೮. ಕಥೆ ಮತ್ತು ಹಾಡು(೨೦೦೩); ೯. ಭಾರತೀಯ ಇಂಗ್ಲೀಷ್ ಸಾಹಿತ್ಯ ಚರಿತ್ರೆ (೨೦೦೫); ೧೦. ನೂರು ಮರ ನೂರು ಸ್ವರ(೧೯೯೮); ೧೧. ಭಾಷೆ ಮತ್ತು ಸಂಸ್ಕೃತಿ(೨೦೦೬); ೧೨. ಪುಸ್ತಕ ಸಮಯ (೨೦೦೧); ೧೩. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ (೨೦೦೩); ೧೪. ಆಡಾಡತಾ ಆಯುಷ್ಯ (೨೦೧೧); ೧೫. ಆರು ಕವನ ಸಂಕಲನಗಳು (೨೦೧೦); ೧೬. ಕಾವ್ಯ ಪ್ರೀತಿ (೨೦೧೩); ೧೭. ಎ.ಕೆ.ರಾಮಾನುಜನ್ ಸಮಗ್ರ (೨೦೧೧); ೧೮. ಎ.ಕೆ.ರಾಮಾನುಜನ್ ಅಯ್ದ ಪ್ರಬಂಧಗಳು(೨೦೧೨); ೨೦. ೪೩ ಕವನಗಳು; ೨೧. ವ್ಯಷ್ಟಿ ಸಮಷ್ಟಿ (೨೦೦೭); ೨೨. ವಿಮುಕ್ತ (೨೦೧೨); ೨೩. ಪ್ರತಿಭಾ ನಂದಕುಮಾರ್ ಅವರ ಆಯ್ದ ಕವಿತೆಗಳು (೨೦೦೭); ೨೪. ಅಕ್ಷರ ಹೊಸ ಕಾವ್ಯ (೧೯೭೦); ೨೫. ಕನ್ನಡ ಸಣ್ಣ ಕಥೆಗಳು (೧೯೭೪); ೨೬. Indian Literature, No.254, November/ December 2009; ೨೭. ಹೊಸಗನ್ನಡ ಕವಿತೆ (೧೯೮೫); ೨೮. ಶತಮಾನದ ಕಾವ್ಯ (೨೦೦೧); ೨೯. ಭಾಷಾಂತರ: ಸೈದ್ಧಾಂತಿಕ ಹಾಗೂ ಆನ್ವಯಿಕ ನೆಲೆಗಳು (೨೦೧೫); ೩೦. Tribute to Ramanujan 2016; ೩೧. When Mirrors are Windows - A View of A.K.RamAnujan's Poetics 2016; ೩೨. ವಿಚಾರ ಸಂಕಿರಣಗಳು

ಅಧ್ಯಾಯ : ಎರಡು

ಎ. ಕೆ. ರಾಮಾನುಜನ್ ಅವರ ಸಾಹಿತ್ಯವನ್ನು ಕುರಿತ ಅಧ್ಯಯನಗಳ ಸಮೀಕ್ಷೆ

ಭಾರತದಿಂದ ಅಮೆರಿಕದ ವಿಶ್ವವಿದ್ಯಾಲಯಗಳಿಗೆ ಹೋದ ಬಹುಪಾಲು ಲೇಖಕರು ಅಲ್ಲಿಯ ಇಂಗ್ಲಿಷ್ ವಿಭಾಗ ಅಥವಾ ಸೃಜನಾತ್ಮಕ ಬರಹಗಳ ಇಂಗ್ಲಿಷ್ ವಿಭಾಗದಲ್ಲಿ ತೊಡಗಿರುವುದುಂಟು. ಇಂತಹ ಲೇಖಕರ ಸಾಲಿನಲ್ಲಿ ಎ.ಕೆ.ರಾಮಾನುಜನ್ ಅವರು ಅಮೆರಿಕದ ಚಿಕಾಗೋ ವಿಶ್ವವಿದ್ಯಾಲಯದ ದ್ರಾವಿಡ ಭಾಷಾವಿಭಾಗದಲ್ಲಿ ೧೯೬೨ರಿಂದ ೧೯೯೩ರವರೆಗೆ ಪ್ರಾಧ್ಯಾಪಕರಾಗಿದ್ದರು. ಇವರು ಕರ್ನಾಟಕ ಹಾಗೂ ಭಾರತದಿಂದ ೪ ದಶಕಗಳ ಕಾಲ ಹೊರದೇಶದಲ್ಲಿಯೇ ಇದ್ದು ಸಾಹಿತ್ಯವನ್ನು ರಚನೆ ಮಾಡಿದ್ದ ಕಾರಣದಿಂದಲೋ ಏನೋ ಅವರು ಕನ್ನಡದ ಸಂದರ್ಭದಲ್ಲಿ ಹೆಚ್ಚು ವಿಮರ್ಶೆಗೆ ಒಳಗಾಗಿಲ್ಲ. ಹಾಗಾಗಿ ಅವರ ಸಾಹಿತ್ಯವನ್ನು ಕುರಿತು ಕನ್ನಡದಲ್ಲಿ ಸಮಗ್ರವಾಗಿ ಅಧ್ಯಯನ ಮಾಡಿದ ಯಾವ ಕೃತಿಯೂ ಪ್ರಕಟವಾಗಿಲ್ಲ. ಆದರೆ ಹಲವಾರು ಸಂದರ್ಭಗಳಲ್ಲಿ ಅಲ್ಲಲ್ಲಿ ಅವರ ಸ್ನೇಹಿತರೋ ಅಥವಾ ವಿಮರ್ಶಕರೋ ಕೆಲವಾರು ಬಿಡಿ ಲೇಖನಗಳನ್ನು ಬರೆದಿರುವುದುಂಟು. ಅವು ಕೂಡ ಹೆಚ್ಚಾಗಿ ಅವರ ಕಾವ್ಯವನ್ನೇ ಕುರಿತ ಲೇಖನಗಳು. ಅವರ ಇನ್ನಿತರೆ ಸಾಹಿತ್ಯ ಕೃತಿಗಳನ್ನು ಕುರಿತು ಬರೆದದ್ದು ಕಡಿಮೆ ಅಥವಾ ಇಲ್ಲವೇ ಇಲ್ಲ ಎನ್ನಬಹುದು. ಆದರೆ ಅವರ ಸಂಸ್ಕೃತಿ ಚಿಂತನೆ ಕುರಿತ ಕೆಲವಾರು ಲೇಖನಗಳು ಈಚೆಗೆ ಕನ್ನಡಕ್ಕೆ ಅನುವಾದಗೊಂಡು ಹೊಸಚಿಂತನೆಯನ್ನು ಚರ್ಚೆಯನ್ನು ಹುಟ್ಟು ಹಾಕಿರುವುದುಂಟು. ಪ್ರಸ್ತುತ ಅಧ್ಯಾಯದಲ್ಲಿ ರಾಮಾನುಜನ್ ಅವರ ಸಾಹಿತ್ಯವನ್ನು ಕುರಿತು ಬಂದಿರುವ ವಿಮರ್ಶೆಗಳನ್ನು ಕುರಿತು ಇಲ್ಲಿ ಸಮೀಕ್ಷಿಸಲಾಗುವುದು.

೨.೧. Indian Poetry in English(೧೯೮೦)

ವಸಂತ ಸಹಾನೆ ಮತ್ತು ಎಂ.ಶಿವರಾಮಕೃಷ್ಣ ಅವರು ಸಂಪಾದಿಸಿರುವ 'Indian Poetry in English(೧೯೮೦)' ಎಂಬ ಕೃತಿಯಲ್ಲಿ ಇಂಗ್ಲಿಷ್‌ನಲ್ಲಿ ಬರೆಯುವ ಇಂಡಿಯಾದ ಲೇಖಕರುಗಳಾದ ಕೆ.ಎನ್.ದಾರೂವಾಲ, ಕಮಲಾದಾಸ್, ಅರುಣ್ ಕೊಲಾಟ್ಕರ್, ಶಿವ್.ಕೆ.ಕುಮಾರ್, ಜಯಂತ್ ಮಹಾಪಾತ್ರ, ಆರ್.ಪಾರ್ಥಸಾರಥಿ, ಗೀವಿ ಪಟೇಲ್ ಮತ್ತು ರಾಮಾನುಜನ್ ಅವರ ಕಾವ್ಯವನ್ನು ಕುರಿತು ಭಾರತದ ಪ್ರಖ್ಯಾತ ವಿಮರ್ಶಕರಾದ ಎಂ.ಶಿವರಾಮಕೃಷ್ಣ, ಜಿ.ಎಸ್.ಆಮೂರ, ಟಿ.ಜಿ.ವೈದ್ಯನಾಥನ್, ಕೆ.ಅಯ್ಯಪ್ಪ ಪಣಿಕ್ಕರ್ ಮುಂತಾದವರು ಬರೆದಿರುವ ಲೇಖನಗಳು ಇವೆ. ಥಾಕಿ ಹಾಲಿ ಮಿರ್ಜಾ ಅವರು ಬರೆದಿರುವ 'Particular Hell' ಎಂಬ ಇಲ್ಲಿನ ಲೇಖನದಲ್ಲಿ ರಾಮಾನುಜನ್ ಅವರ ಹಲವು ಇಂಗ್ಲಿಷ್ ಪದ್ಯಗಳನ್ನು ಕುರಿತು ಚರ್ಚಿಸಲಾಗಿದೆ. ಅವುಗಳಲ್ಲಿ ಮುಖ್ಯವಾಗಿ ರಾಮಾನುಜನ್ ಅವರ Relations, The Striders, The last of the Princess, Prayers to Lord Murugan, History ಈ ಕವಿತೆಗಳನ್ನು ಕುರಿತು ಮಿರ್ಜಾ ಅವರು ಈ ಲೇಖನದಲ್ಲಿ ವಿಶ್ಲೇಷಿಸಿದ್ದಾರೆ. ಇದರಲ್ಲಿ ವಿಶೇಷವಾಗಿ ರಾಮಾನುಜನ್ ಅವರ ಚರಿತ್ರೆಯ ಸಂವೇದನೆ, ನಿರ್ದಿಷ್ಟ ಸಂಸ್ಕೃತಿಯ ಭಾವನೆ ಮತ್ತು ಅವರ ಕಾವ್ಯಾತ್ಮಕವಾದ ಕುಸುರಿ ಕಲೆಯನ್ನು ಗುರುತಿಸಿದ್ದಾರೆ.[೧]

೨.೨. Modern Poetry in English(೧೯೮೭)

ಬ್ರೂಸ್ ಕಿಂಗ್ ಎಂಬ ವಿದ್ವಾಂಸರು 'Modern Poetry in English'(೧೯೮೭) ಎಂಬ ಕೃತಿಯಲ್ಲಿ ಭಾರತದಲ್ಲಿ ಇಂಗ್ಲಿಷಿನಲ್ಲಿ ಬರೆಯುವ ಲೇಖಕರ ಕಾವ್ಯವನ್ನು ಕುರಿತು ನಡೆದಿರುವ ಚರ್ಚೆಗಳನ್ನು ಸಂಗ್ರಹಿತ ರೂಪದಲ್ಲಿ ಕೊಟ್ಟಿದ್ದಾರೆ. ಎಜ್ಜಿಕಿಲ್, ದಾರೂವಾಲ, ಪಟೇಲ್, ಶಿವ್.ಕೆ.ಕುಮಾರ್, ಡಿಸೋಜಾ, ಶೆಟ್ಟಿ, ಕೊಲಾಟ್ಕರ್, ಮಹಾಪಾತ್ರ, ಪಾರ್ಥಸಾರಥಿ, ಜಸ್ಸುವಾಲಾ, ಶರತ್‌ಚಂದ್ರ, ಶೇಟ್, ರಾಮಾನುಜನ್ ಮುಂತಾದವರ ಕಾವ್ಯದ ಬಗ್ಗೆ ನಡೆದಿರುವ ಚರ್ಚೆಯನ್ನಿಟ್ಟುಕೊಂಡು ಈ ಕೃತಿಯನ್ನು ಬ್ರೂಸ್ ಅವರು ರೂಪಿಸಿದ್ದಾರೆ. ಇದಕ್ಕೆ ಆಧುನಿಕ ಭಾರತದ ಇಂಗ್ಲಿಷ್ ಮತ್ತು ಭಾಷೆಯ ಕಾವ್ಯದ ಬಗ್ಗೆ ಒಂದು ಉತ್ತಮವಾದ ಪ್ರಸ್ತಾವನೆಯನ್ನು ಬರೆದಿರುತ್ತಾರೆ. ರಾಮಾನುಜನ್ ಅವರ The Striders ಮತ್ತು Relations ಕವನ ಸಂಕಲನದಲ್ಲಿರುವ ಕವಿತೆಗಳಲ್ಲಿ ಭಾರತದ ಅನುಭವ ಮತ್ತು ಸಂವೇದನೆ ವ್ಯಕ್ತವಾಗಿರುವುದನ್ನು ಇವರು ಗುರುತಿಸುತ್ತಾರೆ. ಕುಟುಂಬಗಳ ನೆನಪು, ಸ್ಥಳಗಳ ಮಹಿಮೆ, ಪ್ರತಿಮೆ, ನಂಬಿಕೆ ಮತ್ತು ಚರಿತ್ರೆಯ ಪ್ರಜ್ಞೆಗಳನ್ನು ರಾಮಾನುಜನ್ ಅವರು ತಮ್ಮ ಈ ಕವಿತೆಗಳಲ್ಲಿ ಅಭಿವ್ಯಕ್ತಿಸಿರುವ ರೀತಿಯನ್ನು ಗುರುತಿಸುತ್ತಾರೆ. ಭಾರತದ ಪರಂಪರೆ ಹಾಗೂ ತಮಿಳು ಬ್ರಾಹ್ಮಣ ಸಮಾಜದ ಜೊತೆ ರಾಮಾನುಜನ್ ಅವರಿಗೆ ಇರುವ ನೆನಪುಗಳನ್ನು ಕುರಿತು ಇಲ್ಲಿ ಪರಿಶೀಲಿಸುತ್ತಾರೆ.

‘ಎಕ್ಸೈಲ್’(ಹೊರನಾಡು) ಎಂಬ ಲೇಖನದಲ್ಲಿ A River, Love Poems for Wife First, Snakes, Small-Scale Reflections and Greate House, Prayers to Lord Murugan ಮುಂತಾದ ರಾಮಾನುಜನ್ ಅವರ ಕವಿತೆಗಳಲ್ಲಿರುವ ಕೌಟುಂಬಿಕ ಸಂಬಂಧಗಳು, ತಮಿಳು ಬ್ರಾಹ್ಮಣ ಸಮಾಜದ ಸಂಕೀರ್ಣತೆಗಳನ್ನು ಗುರುತಿಸುತ್ತಾರೆ. ಈ ವಿಷಯಗಳನ್ನು ರಾಮಾನುಜನ್ ಅವರು ಪ್ರತಿಮಾ ರೂಪದಲ್ಲಿ ಹಿಡಿದಿಡುವ ಅವರ ವಿಶೇಷತೆಯನ್ನು ಇದರಲ್ಲಿ ಗುರುತಿಸಲಾಗಿದೆ.[೨]

೨.೩. ಎ. ಕೆ. ರಾಮಾನುಜನ್ ಹೆಜ್ಜೆಗುರುತುಗಳು(೧೯೯೩)

ಡಿ.ವಿ.ಪ್ರಹ್ಲಾದ್ ಮತ್ತು ಎನ್.ಎಸ್.ಶ್ರೀಧರಮೂರ್ತಿ ಅವರ ಸಂಪಾದಕತ್ವದಲ್ಲಿ ‘ಎ.ಕೆ. ರಾಮಾನುಜನ್ ಹೆಜ್ಜೆಗುರುತುಗಳು’(೧೯೯೩) ಎಂಬ ಪುಸ್ತಕ ಪ್ರಕಟವಾಗಿದೆ. ರಾಮಾನುಜನ್ ಅವರ ನಿಧನದ ನಂತರ ಅವರ ಬಗ್ಗೆ ಅವರ ಆತ್ಮೀಯರು ಮತ್ತು ಅಭಿಮಾನಿಗಳು ಬರೆದ ೮ ಲೇಖನಗಳ ಸಂಕಲನ ಇದು. ಬೆಳಗೆರೆ ಕೃಷ್ಣಶಾಸ್ತ್ರಿಗಳು ರಾಮಾನುಜನ್ ಅವರ ಜೊತೆ ಹೊಂದಿದ್ದ ಸಂಬಂಧದ ಬಗ್ಗೆ ಇಲ್ಲಿ ತಮ್ಮ ಲೇಖನದಲ್ಲಿ ನೆನಪಿಸಿಕೊಳ್ಳುತ್ತಾರೆ. ಎಲ್.ಸಿ.ನಾಗರಾಜು ಅವರು ರಾಮಾನುಜನ್ ಅವರ ‘ಕುಂಟೋಬಿಲ್ಲೆ’ ಕವಿತೆಯ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಎಚ್.ಎಸ್.ಶಿವಪ್ರಕಾಶ್ ಅವರು ರಾಮಾನುಜನ್ ಅವರ ಕಾವ್ಯದ ವಿಶೇಷತೆಯನ್ನು ಗುರುತಿಸಿದ್ದಾರೆ. ‘ಕಥೆಗಳ ಕಣ್ಣಿಂದ ಭಾರತವ ಕಂಡವರು’ ಎಂದು ರಾಮಾನುಜನ್ ಅವರ ಬಗ್ಗೆ ಇಂಗ್ಲಿಷ್‌ನಲ್ಲಿ ಜೆಮ್ ಕೆಲ್ವಿನ್ ಅವರು ಬರೆದ ಲೇಖನವನ್ನು ಎಸ್.ಭಾಗ್ಯಶ್ರೀ ಅವರು ಇಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಇದರಲ್ಲಿ ಕೆಲ್ವಿನ್ ಅವರು ರಾಮಾನುಜನ್ ಅವರ ಜಾನಪದ, ಭಾಷಾಶಾಸ್ತ್ರ, ಸಂಸ್ಕೃತ – ಇಂಗ್ಲಿಷ್ ಹಾಗೂ ತಮಿಳು – ಕನ್ನಡ ಭಾಷೆಗಳ ಬಗ್ಗೆ ಹೊಂದಿದ್ದ ಸಂಬಂಧವನ್ನು ವಿವರಿಸುತ್ತಾರೆ. ಶಿಕಾಗೋ ವಿಶ್ವವಿದ್ಯಾಲಯದಲ್ಲಿ ಬೆಂಗಾಲಿ, ಹಿಂದಿ, ತಮಿಳು, ತೆಲುಗು, ಕನ್ನಡ ಭಾಷೆಗಳಲ್ಲೂ ಶ್ರೀಮಂತ ಸಾಹಿತ್ಯ ಇದೆ ಎಂದು ಅನುವಾದಗಳ ಮೂಲಕ ಅಮೆರಿಕನ್ನರಿಗೆ ತೋರಿಸಿಕೊಟ್ಟ ರಾಮಾನುಜನ್ ಅವರ ಶಕ್ತಿಯನ್ನು ಕೆಲ್ವಿನ್ ಗುರುತಿಸುತ್ತಾರೆ. ಸಂಸ್ಕೃತಿಯ ವಿವಿಧ ಮಗ್ಗುಲುಗಳನ್ನು ತಮ್ಮ ವಿಶಿಷ್ಟವಾದ ಯೋಚನಾ ಕ್ರಮದಿಂದ ಅಧ್ಯಯನ ಮಾಡಿದ ರೀತಿಯನ್ನು ಈ ಲೇಖನದಲ್ಲಿ ಗುರುತಿಸಲಾಗಿದೆ. ಎನ್.ಎಸ್. ಶ್ರೀಧರಮೂರ್ತಿಯವರು ತಮ್ಮ ಲೇಖನದಲ್ಲಿ ರಾಮಾನುಜನ್ ಕಾವ್ಯದ ಸಂರಚನೆಯ ವಿಧಾನವನ್ನು ಗುರುತಿಸಲು ಯತ್ನಿಸಿದ್ದಾರೆ. ಶಬ್ದಗಳನ್ನು ಕತ್ತರಿಸಿ ಮುರಿದು ಮರುಕಟ್ಟುವ ಕ್ರಿಯೆ ಮತ್ತು ಕಾವ್ಯದಲ್ಲಿ ಪರಿಣಾಮವನ್ನು ತರುವ ಪ್ರತಿಭೆ ರಾಮಾನುಜನ್‌ರಿಗೆ ಇತ್ತು ಎಂದು ಶ್ರೀಧರಮೂರ್ತಿ ಅವರು ಇಲ್ಲಿ ಅಭಿಪ್ರಾಯ ಪಡುತ್ತಾರೆ.

ಭಾಷಾಂತರದ ಬಗ್ಗೆ ರಾಮಾನುಜನ್ ಅವರ ಚಿಂತನೆಗಳು ಯಾವ ಬಗೆಯಲ್ಲಿ ತಾತ್ವಿಕವಾಗಿ ಮತ್ತು ಪ್ರಾಯೋಗಿಕವಾಗಿ ಅಭಿವ್ಯಕ್ತವಾಗಿವೆ ಎಂಬುದನ್ನು ವನಮಾಲ ವಿಶ್ವನಾಥ ಅವರು ತಮ್ಮ ಇಲ್ಲಿನ ಲೇಖನದಲ್ಲಿ ಗುರುತಿಸಿದ್ದಾರೆ. ವಚನಗಳನ್ನು, ತಮಿಳು ಕಾವ್ಯಗಳನ್ನು ಇಂಗ್ಲಿಷ್‌ಗೆ ಅನುವಾದ ಮಾಡುವಾಗ ರಾಮಾನುಜನ್ ಅವರು ಎದುರಿಸಿದ ಸಮಸ್ಯೆಗಳನ್ನು ಅವರು ಈ ಲೇಖನದಲ್ಲಿ ಗುರುತಿಸಿದ್ದಾರೆ. ಭಾಷಾಂತರದಲ್ಲಿ ಸಾಧನೆ ಮಾಡಿದ ರಾಮಾನುಜನ್ ಅವರ ಅನನ್ಯತೆಯ ಬಗ್ಗೆ ವನಮಾಲ ಅವರು ಮೆಚ್ಚುಗೆ ಸೂಚಿಸಿದ್ದಾರೆ. ರಾಮಚಂದ್ರ ದೇವ ಅವರು ತಮ್ಮ 'ಭಾರತೀಯ ಈಡಿಪಸ್' ಎಂಬ ಲೇಖನದಲ್ಲಿ ಪಾಶ್ಚಾತ್ಯ ಸಾಹಿತ್ಯದಲ್ಲಿ ಕಂಡುಬರುವ 'ಈಡಿಪಸ್ ಕಾಂಪ್ಲೆಕ್ಸ್' ಅನ್ನು ಭಾರತೀಯ ಸಾಹಿತ್ಯದಲ್ಲಿಯೂ ರಾಮಾನುಜನ್ ಗುರುತಿಸಲು ಮಾಡಿರುವ ಪ್ರಯತ್ನವನ್ನು ಕುರಿತು ಚರ್ಚೆ ಮಾಡಿದ್ದಾರೆ. ಇಂಗ್ಲಿಷಿನಲ್ಲಿ ದಾರೂವಾಲ ಅವರು ಬರೆದ 'ರಾಮಾನುಜನ್: ಹೊರನಾಡ ಸ್ಥಳೀಯ' ಎಂಬ ಲೇಖನವನ್ನು ವಿ.ಶೈಲಜಾ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಇದರಲ್ಲಿ ಅವರು ರಾಮಾನುಜನ್ ಅವರ ಭಾಷಾಂತರ ಮತ್ತು ಕೆಲವು ಇಂಗ್ಲಿಷ್ ಕವಿತೆಗಳನ್ನು ಕುರಿತು ವಿಶ್ಲೇಷಿಸಿದ್ದಾರೆ.[೩]

೨.೪. ಎ. ಕೆ. ರಾಮಾನುಜನ್ ನೆನಪಿನ ಸಂಪುಟ(೧೯೯೩)

ಟಿ.ಪಿ.ಅಶೋಕ ಅವರು ಸಂಪಾದಿಸಿರುವ 'ಎ.ಕೆ.ರಾಮಾನುಜನ್ ನೆನಪಿನ ಸಂಪುಟ'(೧೯೯೩) ರಾಮಾನುಜನ್ ಅವರ ನಿಧನದ ನಂತರ ಹೊರಬಂದ ಒಂದು ಮುಖ್ಯ ಕೃತಿಯಾಗಿದೆ. ಇದರಲ್ಲಿ ರಾಮಾನುಜನ್ ಅವರ ವ್ಯಕ್ತಿತ್ವ, ಅವರ ಕಾವ್ಯದ ವಿಶೇಷತೆ ಮತ್ತು ಸಾಧನೆಗಳನ್ನು ಕುರಿತು ವಿವಿಧ ವಿದ್ವಾಂಸರು ಮತ್ತು ಅವರ ಒಡನಾಡಿಗಳು ಬರೆದ ಲೇಖನಗಳಿವೆ. ರಾಮಾನುಜನ್ ಅವರ ಜೀವನ ಮತ್ತು ಸಾಹಿತ್ಯ ಕುರಿತು ಬರೆಯುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಇಲ್ಲಿ ಈ ಹಿಂದೆ ಬೇರೆ ಬೇರೆ ಸಂದರ್ಭಗಳಲ್ಲಿ ಕೆಲವು ವಿದ್ವಾಂಸರು ರಾಮಾನುಜನ್ ಅವರನ್ನು ಕುರಿತು ಬರೆದ ಪ್ರಕಟಿತ ಲೇಖನಗಳನ್ನೂ ಇಲ್ಲಿ ಸೇರಿಸಲಾಗಿದೆ. ಆದರೆ ಸಂಪಾದಕರು ಹೇಳುವಂತೆ ರಾಮಾನುಜನ್ ಅವರ ಬರಹಗಳ ಕುರಿತು ಬಂದಂತಹ ಹಲವಾರು ಬರಹಗಳನ್ನು ಇಲ್ಲಿ ಸೇರಿಸಲಾಗಿಲ್ಲ. ಸಾಕ್ಷಿ, ಪ್ರಜಾಮತ, ಪ್ರಜಾವಾಣಿ ಮುಂತಾದ ಪತ್ರಿಕೆಗಳಲ್ಲಿ ಬಂದಂತಹ ಪ್ರಮುಖ ಬರಹಗಾರರಾದ ಯು.ಆರ್.ಅನಂತಮೂರ್ತಿ, ಪಿ.ಲಂಕೇಶ್, ವೈ.ಎನ್.ಕೆ., ಹಾ.ಮಾ.ನಾಯಕ, ಶಾಂತಿನಾಥ ದೇಸಾಯಿ, ಕೀರ್ತಿನಾಥ ಕುರ್ತಕೋಟಿ, ಡಿ.ಆರ್.ನಾಗರಾಜ್, ಟಿ.ಪಿ.ಅಶೋಕ, ಜಿ.ಎಚ್.ನಾಯಕ ಮುಂತಾದವರ ಕೆಲವು ಕನ್ನಡದ ಲೇಖನಗಳು ಮತ್ತು ಗಿರೀಶ್ ಕಾರ್ನಾಡ್, ಪುಪುಲ್ ಜಯಕರ್, ಎಸ್.ಕೃಷ್ಣನ್, ಜಿ.ರಾಜಶೇಖರ್, ಬಿ.ವಿ.ಐತಾಳ ಮುಂತಾದವರು ಇಂಗ್ಲಿಷ್‌ನಲ್ಲಿ ಬರೆದ ಲೇಖನಗಳ ಕನ್ನಡ ಅನುವಾದಗಳನ್ನು ಸಂಪಾದಕರು ಇಲ್ಲಿ ನೀಡಿದ್ದಾರೆ. ರಾಮಾನುಜನ್ ನಿಧನರಾದ ನಂತರ ಪ್ರಕಟವಾದ ಈ ಕೃತಿ ಒಂದು ಉತ್ತಮ ಕೃತಿಯಾಗಿದೆ.[೪]

೨.೫. ಪುಸ್ತಕ ಪ್ರೀತಿ(೧೯೯೩, ೨೦೧೦)

ಇದು ಟಿ.ಪಿ.ಅಶೋಕ ಅವರ ವಿಮರ್ಶಾ ಕೃತಿ. ರಾಮಾನುಜನ್ ಅವರ 'ಕುಂಟೋಬಿಲ್ಲೆ' ಕವನ ಸಂಕಲನವನ್ನು ಕುರಿತು ೧೯೯೧ರಲ್ಲಿ ಟಿ.ಪಿ. ಅಶೋಕ ಅವರು ಬರೆದ ಲೇಖನ ಇಲ್ಲಿದೆ. ಈ ಲೇಖನದಲ್ಲಿ ರಾಮಾನುಜನ್ ಅವರ ಕಾವ್ಯದ ಸ್ವರೂಪ, ಅವರ ಮನೋಧರ್ಮ, ಅವರ ಕಾವ್ಯದ ಲಯ ಮುಂತಾದ ವಿಷಯಗಳನ್ನು ಕುರಿತು ಚರ್ಚಿಸಲಾಗಿದೆ. ಈ ಸಂಕಲನದ ಕವಿತೆಗಳಾದ 'ಇರಾನಿನಲ್ಲಿ ಬರೆದಿರಬಹುದಾದ ಪದ್ಯ', 'ಧ್ಯಾನ ಫಲಿಸಿದರೆ', 'ಕುಂಟೋಬಿಲ್ಲೆ', 'ಪಕ್ಕದ ಮನೆಯಲಿ ಉಪನಿಷತ್ತು', 'ಜಿಗುಪ್ಸೆ', 'ಪದ್ಯದ ಮಾತು ಬೇರೆ' ಈ ಕವಿತೆಗಳಲ್ಲಿ ಕಂಡುಬರುವ ದ್ವಂದ್ವ, ಮೀಮಾಂಸೆ, ಆತ್ಮಾವಲೋಕನ ಮುಂತಾದ ವಿಷಯಗಳನ್ನು ಕುರಿತು ಅಶೋಕ ಅವರು ವಿವರವಾಗಿ ಚರ್ಚಿಸಿದ್ದಾರೆ.[೫]

೨.೬. ಭಾರತೀಯ ಜನಪದ ಕಥೆಗಳು(೨೦೦೦)

ರಾಮಾನುಜನ್ ಅವರ 'Folktales from India'(೧೯೯೧) ಎಂಬ ೨೨ ಭಾಷೆಗಳಿಂದ ಆಯ್ದ ೧೧೦ ಜನಪದ ಕಥೆಗಳ ಇಂಗ್ಲಿಷ್ ಸಂಕಲನವನ್ನು ಮಹಾಬಲೇಶ್ವರ ರಾವ್ ಅವರು 'ಭಾರತೀಯ ಜನಪದ ಕತೆಗಳು'(೨೦೦೦) ಎಂಬ ಹೆಸರಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಕೃತಿಗೆ ರಾಮಾನುಜನ್ ಅವರು ಇಂಗ್ಲಿಷ್‌ನಲ್ಲಿ ಬರೆದಿರುವ ಸುಮಾರು ೫೦ ಪುಟಗಳ ದೀರ್ಘವಾದ 'ಪ್ರಸ್ತಾವನೆ'ಯನ್ನೂ ಮಹಾಬಲೇಶ್ವರ ಅವರು ಅನುವಾದಿಸಿ ನೀಡಿದ್ದಾರೆ. ಈ ಪ್ರಸ್ತಾವನೆಯಲ್ಲಿ ರಾಮಾನುಜನ್ ಅವರು ಮೌಖಿಕ ಪರಂಪರೆಯ ಭಾರತದ ಸಾಮಾಜಿಕ ವ್ಯವಸ್ಥೆಯನ್ನು ತಮ್ಮ ಅಧ್ಯಯನದಲ್ಲಿ ಗುರುತಿಸುತ್ತಾರೆ. ಇದರಿಂದ ಆಡುಭಾಷೆಗಳ ಪ್ರಾಮುಖ್ಯತೆಯನ್ನು ಮೌಖಿಕ ಪರಂಪರೆಯ ವಿಶಿಷ್ಟತೆಯನ್ನು ರಾಮಾನುಜನ್ ಅವರು ಈ ಪ್ರಸ್ತಾವನೆಯಲ್ಲಿ ದೀರ್ಘವಾಗಿ ಚರ್ಚಿಸಿದ್ದಾರೆ. ರಾಬರ್ಟ್ ರೆಡ್‌ಫೀಲ್ಡ್ ಎಂಬ ಮಾನವಶಾಸ್ತ್ರಜ್ಞರಿಂದ ಪ್ರಭಾವಿತರಾದ ಮಾನವಶಾಸ್ತ್ರಜ್ಞರು ಭಾರತೀಯ ಪರಂಪರೆಯಲ್ಲಿ ಸಂಸ್ಕೃತ ಅಧಾರಿತ, ಪ್ರಾಚೀನ ಹಾಗೂ ರಾಷ್ಟ್ರೀಯ ಪರಂಪರೆಯನ್ನು 'ಹಿರಿಯ ಪರಂಪರೆ'(Great Tradition) ಎಂದು ಮತ್ತು ಪ್ರಾದೇಶಿಕ ಅನಕ್ಷರಸ್ಥ ಮೌಖಿಕ ಪರಂಪರೆಯನ್ನು 'ಕಿರಿಯ ಪರಂಪರೆ'(Little Tradition) ಎಂದು ವಿಭಾಗಿಸಿ ಅಧ್ಯಯನ ಮಾಡಿ ಅವರೆಲ್ಲ ಹಿರಿಯ ಪರಂಪರೆಗೆ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಿದವರು. ಆದರೆ ರಾಮಾನುಜನ್ ಅವರು ತಾವು ಕರೆಯುವ ಬಾಯ್ಮಾತಿನ ಸಾಹಿತ್ಯ ಅಥವಾ ಅನಕ್ಷರಸ್ಥ ಸಾಹಿತ್ಯ ಅಥವಾ ಮೌಖಿಕ ಸಾಹಿತ್ಯ ಎಂದು ಕರೆಯುವ ಮೌಖಿಕ ಪರಂಪರೆಗಳೇ ಭಾರತದ ಇತರ ಎಲ್ಲಾ ಸಾಹಿತ್ಯಗಳ ಅಡಿಪಾಯ ಎಂದು ಪ್ರತಿಪಾದಿಸಿದ್ದಾರೆ. ಅವರು ಮೌಖಿಕ ಪರಂಪರೆಗಳನ್ನು 'ಭಾರತೀಯ ಪಿರಮಿಡ್ಡಿನ ವಿಶಾಲ, ಭದ್ರ ಬುನಾದಿ' ಎಂದೂ ಕರೆದಿದ್ದಾರೆ. ಸಾಹಿತ್ಯ ವಿಮರ್ಶೆ, ತತ್ವಶಾಸ್ತ್ರ ಎರಡರಲ್ಲೂ ಪಠ್ಯಪದ್ಧತಿಯಿಂದ ಪ್ರಭಾವಿತರಾದ

ರಾಮಾನುಜನ್ ಪಠ್ಯಗಳ ನಡುವಿನ ಚಲನಶೀಲ ಸಂಬಂಧದ ಬಗ್ಗೆ ಹೆಚ್ಚಿನ ಹೊತ್ತು ನೀಡುವ ಮೂಲಕ 'ಪಠ್ಯ' ಎಂಬ ಪದಕ್ಕೆ ಹೆಚ್ಚು ವಿಶಾಲ ಅರ್ಥ ನೀಡಲು ಪ್ರಯತ್ನಿಸಿದ್ದಾರೆ.

"ಮೌಖಿಕ ಪರಂಪರೆಗಳು ಅನೇಕ ಪಠ್ಯಗಳನ್ನು ಸೃಷ್ಟಿಸುತ್ತವೆ. ಒಂದು ಅರ್ಥದಲ್ಲಿ ಪ್ರತಿ ಸಾಂಸ್ಕೃತಿಕ ಪ್ರಕ್ರಿಯೆಯೂ ಒಂದು ಪಠ್ಯವಾಗಿರುತ್ತದೆ" ಎಂದು ರಾಮಾನುಜನ್ ಅವರು ಹೇಳುತ್ತಾರೆ. ದೃಷ್ಟಿಹೀನರು, ಹಕ್ಕಿಲ್ಲದವರು ಎಂದು ಕರೆಸಿಕೊಳ್ಳುವ ಹೆಂಗಸರು, ಮಕ್ಕಳು, ದಲಿತರು, ಅನಕ್ಷರಸ್ಥರು, ಬಡವರು ಇವರಿಗೆಲ್ಲಾ ಧ್ವನಿ ನೀಡುವ ಪರಂಪರೆಗಳೆಂದರೆ ಮೌಖಿಕ ಪರಂಪರೆಗಳಾಗಿವೆ. ಈ ಮೌಖಿಕ ಪರಂಪರೆಗಳು ಸ್ವಾತಂತ್ರ್ಯ ಹಾಗೂ ಪ್ರತಿರೋಧದ ನೆನಹುಗಳಾಗಿವೆ ಎಂದು ಅವರು ಅಭಿಪ್ರಾಯ ಪಡುತ್ತಾರೆ. ರಾಮಾನುಜನ್ ಅವರು ತಮ್ಮ ಈ ಪ್ರಸ್ತಾವನೆಯಲ್ಲಿ ಈ ಎಲ್ಲಾ ವಿಚಾರಗಳನ್ನು ಚಿಂತನಾಪ್ರಧಾನವಾಗಿ ಮಂಡಿಸಿದ್ದಾರೆ. ಇಂತಹ ನೆಲೆಗಳನ್ನು ಇವರು ಸ್ತ್ರೀ ಕೇಂದ್ರಿತ ಎಂದು ಕರೆಯುವ ಜನಪದ ಕಥೆಗಳ ಮೂಲಕ ಅಧ್ಯಯನ ಮಾಡಿದ್ದಾರೆ. ಈ ಸಂಕಲನದಲ್ಲಿ ಇರುವ ಅನೇಕ ಕಥೆಗಳು ಸ್ತ್ರೀಧ್ವನಿಗೆ ಸಾಕ್ಷಿಯಾಗಿವೆ. ಸ್ತ್ರೀಕೇಂದ್ರಿತ ಕತೆಗಳಲ್ಲಿ, ಗಂಡಸರು, ತಲೆಹಿಡಿಕರು. ತಾಯಿ, ಸವತಿ, ಹೆಂಡತಿಯ ಕೈಗೊಂಬೆಯಾಗಿರುವವರಾಗಿದ್ದಾರೆ. ರಾಮಾನುಜನ್ ಅವರು ತಮ್ಮ ೨೦-೨೫ನೇ ವಯಸ್ಸಿನ ಸುಮಾರಿನಲ್ಲಿ ಜಾನಪದ ಕಥೆಗಳನ್ನು ಕ್ರಮಬದ್ಧವಾಗಿ ಅವರಿವರಿಂದ ಹಾಗೂ ಅಜ್ಜಿಯರಿಂದ ಸಂಗ್ರಹಿಸಿದವರು. ಜಾನಪದ ಸಂಸ್ಕೃತಿಯ ಅಧ್ಯಯನಕ್ಕೆ ಈ ಜನಪದ ಕಥೆಗಳು ಮತ್ತು ಇವರ ಪ್ರಸ್ತಾವನೆ ತುಂಬಾ ಉಪಯುಕ್ತವಾಗಿದೆ.[೬]

೨.೭. ಸ್ಮೃತಿ ಕಿಣಾಂಕಂ(೨೦೦೦)

ತೆಲುಗಿನ ವಿದ್ವಾಂಸರಾದ ಚೇಕೂರಿ ರಾಮರಾವ್ ಅವರು ತಮ್ಮ 'ಸ್ಮೃತಿ ಕಿಣಾಂಕಂ(೨೦೦೦)' ಎಂಬ ಕೃತಿಯಲ್ಲಿ 'ನಿರಾಡಂಬರದ ಮೇಧಾವಿ, ಭಾಷಾ ಸಾಹಿತ್ಯದ ಮೇರು: ಎ.ಕೆ. ರಾಮಾನುಜನ್' ಎನ್ನುವ ಅವರ ಲೇಖನದಲ್ಲಿ ರಾಮಾನುಜನ್ ಅವರ ಕಾವ್ಯ ಮತ್ತು ಭಾಷಾಂತರ ಕುರಿತು ಚರ್ಚಿಸಿದ್ದಾರೆ. ಇದರಲ್ಲಿ ರಾಮಾನುಜ್ ಅವರ ಬಾಲ್ಯ, ವಿದ್ಯಾಭ್ಯಾಸ ಮತ್ತು ವೃತ್ತಿ ಹಾಗೂ ಅವರ ಸಾಧನೆಯನ್ನು ಕುರಿತು ವಿವರಿಸಿದ್ದಾರೆ. ಈ ಪ್ರಬಂಧದಲ್ಲಿ ಪ್ರಮುಖ ಭಾಷಾಶಾಸ್ತ್ರಜ್ಞರಾದ ಚೇಕೂರಿ ರಾಮಾರಾವು ಅವರು ರಾಮಾನುಜನ್ ಅವರ ಪರಿಚಯವನ್ನು ಮತ್ತು ಭಾಷಾಶಾಸ್ತ್ರಕ್ಕೆ ನೀಡಿದ ಅವರ ಕೊಡುಗೆಯನ್ನು ಪರಿಶೀಲಿಸಿದ್ದಾರೆ. ಅಲ್ಲದೇ ರಾಮಾನುಜನ್ ಅವರ ಇಂಗ್ಲಿಷ್ ಪದ್ಯದ ಭಾಗಗಳನ್ನು ಕೊಟ್ಟು ತೆಲುಗಿನಲ್ಲಿ ಅನುವಾದಿಸಿ ಆ ಕವನಗಳ ವೈಶಿಷ್ಟ್ಯವನ್ನು ವಿವರಿಸಿದ್ದಾರೆ. ಚೇಕೂರಿ ರಾಮಾರಾವು ಅವರು ರಾಮಾನುಜನ್ ಅವರನ್ನು ಶಿಕಾಗೋ ಯೂನಿವರ್ಸಿಟಿ ನಡೆಸಿದ ಗ್ರೀಷ್ಮಕಾಲೀನ ಭಾಷಾಶಾಸ್ತ್ರದ ಕಮ್ಮಟದಲ್ಲಿ ೧೯೬೬ ಜೂನ್‌ನಲ್ಲಿ ಭೇಟಿ ಮಾಡಿದ್ದರು. ರಾಮಾರಾವು ಗುರುಗಳಾದ ಪ್ರೊ. ಜರಾಲ್ಡ್ ಕೆಲ್ಲಿ(೧೯೨೮-೮೭) ಇವರನ್ನು ರಾಮಾನುಜನ್ ಅವರಿಗೆ ಪರಿಚಯಿಸಿದರು. ತದನಂತರ ಇಬ್ಬರ ಮಧ್ಯೆ ಪರಿಚಯ ಗಾಢವಾಗಿ ಸ್ನೇಹರೂಪ

ತಾಳಿತು. ರಾಮಾರಾವು ಅವರು ರಾಮಾನುಜನ್ ಅವರ ಭಾಷಾಶಾಸ್ತ್ರದ ಪಾಂಡಿತ್ಯಕ್ಕೆ ಮತ್ತು ಪರಿಶೀಲನೆಗೆ ಬಹಳ ಪ್ರಭಾವಿತರಾದರು. ೧೯೬೬ರಲ್ಲಿ ಪ್ರಕಟಿತವಾದ ರಾಮಾನುಜನ್ ಅವರ ಪ್ರಥಮ ಕವಿತಾ ಸಂಕಲನ 'ದಿ ಸ್ಟ್ರೈಡರ್ಸ್' ಓದಿ ಅದರ ಮಾಂತ್ರಿಕ ಪ್ರಭಾವಕ್ಕೆ ಒಳಗಾದರು. ಇವರು ರಾಮಾನುಜನ್ ಅವರನ್ನು ಭಾರತೀಯ ಆಂಗ್ಲ ಕವಿಗಳಲ್ಲಿ ಒಬ್ಬ 'ಮ್ಯಾಜಿಕಲ್ ನೇಮ್' ಅಂದು ನಂಬಿದ್ದರು.[೬]

೨.೮. ಕಥೆ ಮತ್ತು ಹಾಡು(೨೦೦೩)

ಎ.ಕೆ.ರಾಮಾನುಜನ್ ಅವರ 'A Flowering Tree and Other Oral Tales from India' (೧೯೯೭) ಎಂಬ ೭೭ ಜನಪದ ಕಥೆಗಳನ್ನು ಕರೀಗೌಡ ಬೀಚನಹಳ್ಳಿಯವರು 'ಕಥೆ ಮತ್ತು ಹಾಡು'(೨೦೦೩) ಎಂಬ ಹೆಸರಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಇಲ್ಲಿರುವ ಎಲ್ಲಾ ಜನಪದ ಕಥೆಗಳು ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿವೆ. ಇವುಗಳನ್ನು ರಾಮಾನುಜನ್ ಅವರು ೫೦ರ ದಶಕದಲ್ಲಿಯೇ ಬಿಜಾಪುರ, ಬೆಳಗಾಂ, ಧಾರವಾಡ ಮುಂಬೈ ಕರ್ನಾಟಕದ ಈ ಪ್ರದೇಶಗಳಲ್ಲಿ ಸಂಗ್ರಹಿಸಿದವುಗಳು. ಆದರೆ ಅವೆಲ್ಲವೂ ಕನ್ನಡದಲ್ಲಿ ಪ್ರಕಟವಾಗುವುದಕ್ಕೆ ಮುಂಚೆಯೇ ಇಂಗ್ಲಿಷ್‌ಗೆ ಅನುವಾದಗೊಂಡು ಪ್ರಕಟಣೆಗೆ ಸಿದ್ಧವಾಗಿದ್ದ ಸಂದರ್ಭದಲ್ಲಿ ರಾಮಾನುಜನ್ ಅವರ ಆಕಸ್ಮಿಕ ನಿಧನದಿಂದಾಗಿ ಅವು ಕೃತಿರೂಪದಲ್ಲಿ ಪ್ರಕಟವಾಗಿರಲಿಲ್ಲ. ಅವರ ನಿಧನದ ನಂತರ ಅವರ ಸಹೋದ್ಯೋಗಿ ಸ್ನೇಹಿತರಾದ ಅಲ್ಲೆನ್ ಡಂಡಸ್ ಮತ್ತು ಸ್ಟಾರ್ಟ್ ಬ್ಲಾಕ್‌ಬರ್ನ್ ಅವರ ಸಂಪಾದಕತ್ವದಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಿಂದ ೧೯೯೭ರಲ್ಲಿ ಈ ಕೃತಿಯು ಇಂಗ್ಲಿಷಿನಲ್ಲಿ ಹೊರಬಂದಿದೆ. ಇಲ್ಲಿಯ ಕಥೆಗಳು ಬಹುಮಟ್ಟಿಗೆ ಪ್ರಕೃತಿ ಮತ್ತು ಸ್ತ್ರೀಕೇಂದ್ರಿತ ಕಥೆಗಳಾಗಿವೆ. ಈ ಅನುವಾದಿತ ಜನಪದ ಕಥೆಗಳ ಬಗ್ಗೆ ಜಾನಪದ ವಿದ್ವಾಂಸರಾದ ಎಚ್.ಜೆ.ಲಕ್ಕಪ್ಪಗೌಡರು ಮುನ್ನುಡಿಯಲ್ಲಿ ಹೀಗೆ ಬರೆಯುತ್ತಾರೆ:

> "ಇತ್ತೀಚೆಗೆ ಆರಂಭವಾದರೂ ವಿಸ್ಮಯಕಾರಿ ವೇಗದಲ್ಲಿ ತನ್ನ ವ್ಯಾಪ್ತಿಯನ್ನು ಅಭಿವರ್ಧನೆಗೊಳಿಸಿಕೊಂಡ ಕನ್ನಡ ಜಾನಪದ ಲೋಕದ ಸಾಧನೆಗಳ ಬಗ್ಗೆ ಪ್ರಪಂಚದ ಗಮನವನ್ನು ಸೆಳೆಯುವ ತೀವ್ರತರ ಪ್ರಯತ್ನಗಳು ಆಗಿಲ್ಲ. ಇಂತಹ ವಿಷಣ್ಣಮಯ ಸನ್ನಿವೇಶದಲ್ಲಿ ಕನ್ನಡದ, ಭಾರತದ ಅಗ್ರಮಾನ್ಯ ವಿದ್ವಾಂಸರಲ್ಲಿ ಒಬ್ಬರಾದ ದಿ.ಪ್ರೊ.ಎ.ಕೆ.ರಾಮಾನುಜನ್ ಅವರು ಕನ್ನಡ ಭಾಷೆಯ ಸುಸೂಕ್ಷ್ಮ ವೈವಿಧ್ಯತೆಗಳ ಬಗ್ಗೆ ಜನಪದ ಸಾಹಿತ್ಯದ ಕನ್ಯಾಸತ್ವದ ಬಗ್ಗೆ ಆಳವಾದ ಅಧ್ಯಯನವನ್ನು ಅತ್ಯಂತ ಪ್ರೀತಿ, ಮತ್ತು ಅಭಿಮಾನಗಳಿಂದ ಕೈಗೊಂಡು ಅದರ ಕೆಲವು ಮುಖಗಳನ್ನು ಇಂಗ್ಲಿಷ್ ಲೋಕಕ್ಕೆ ಪರಿಚಯಿಸಿಕೊಡುವ ಮೂಲಕ ಕನ್ನಡ ಜಾನಪದಕ್ಕೆ ಒಂದು ಅಮೂಲ್ಯ ಬೆಳಕಿಂಡಿಯನ್ನು ಕೊರೆದರು. ಇವರ ಪ್ರಯತ್ನದಿಂದಾಗಿ ದೇಶ

ವಿದೇಶಗಳಲ್ಲಿ ನಮ್ಮ ಜಾನಪದದ ಬಗ್ಗೆ ಆಸಕ್ತಿ, ಕುತೂಹಲ ಮತ್ತು ಮೆಚ್ಚಿಕೆಗಳು ಕಣ್ಣುಬಿಟ್ಟವು. ಕನ್ನಡ ಸಾಹಿತ್ಯ ಮತ್ತು ಜಾನಪದಕ್ಕೆ ವರವಾಗಿ ಪರಿಣಮಿಸಿದವು ಎಂಬುದರಲ್ಲಿ ಎರಡು ಮಾತಿಲ್ಲ. ತಾವು ಕನ್ನಡದಲ್ಲಿ ಓದಿದ, ಮೆಚ್ಚಿದ ಮತ್ತು ಹಲವು ಮುಖಗಳಿಂದ ಅನನ್ಯವೆಂದು ಭಾವಿಸಿದ ಜನಪದ ಕಥೆಗಳನ್ನು ಕನ್ನಡದ ವಿವಿಧ ಪ್ರಾದೇಶಿಕ ಜಾನಪದ ನೆಲೆಗಳಿಂದ ಆಯ್ದು ಇಂಗ್ಲೀಷ್‌ಗೆ ಪರಿವರ್ತಿಸುವ ಮೂಲಕ ಜನಪದ ಕಥೆಗಳ ಪ್ರಪಂಚ ಪರ್ಯಟನಕ್ಕೆ ಅವರು ಅರ್ಥಪೂರ್ಣ ದಾರಿಯೊಂದನ್ನು ತೆರೆದರು. ಹೀಗೆ ಕನ್ನಡದಿಂದ ಇಂಗ್ಲೀಷ್‌ಗೆ ಪ್ರೊ.ರಾಮಾನುಜನ್ ಅವರಿಂದ ಅನುವಾದಗೊಂಡ ಜನಪದ ಕಥೆಗಳಲ್ಲಿ ಕೆಲವು ಕನ್ನಡ ಜನಪದ ಕಥೆಗಳ ಸಂಪುಟದಿಂದ ಆಯ್ದುವುಗಳು. ಇನ್ನು ಹಲವು ಕಥೆಗಳನ್ನು ಪ್ರೊ.ರಾಮಾನುಜನ್ ಅವರು ನೇರವಾಗಿ ವಕ್ತೃಗಳಿಂದ ಸ್ವತಃ ಸಂಗ್ರಹಿಸಿದ್ದಾರೆ. ಆದ್ದರಿಂದ ಇಲ್ಲಿನ ಎಷ್ಟೋ ಕಥೆಗಳು ಮೊದಲ ಬಾರಿಗೆ ನಮಗೆ ಪರಿಚಯವಾಗುತ್ತವೆ. ಇಂತಹ ಕತೆಗಳು ಈ 'ಕಥೆ ಮತ್ತು ಹಾಡು' ಸಂಪುಟದಲ್ಲಿವೆ. ಇದೊಂದು ರೀತಿಯಲ್ಲಿ ಕನ್ನಡ ಜನಪದ ಕಥೆಗಳ ಮರುಪಯಣ."

ಇಲ್ಲಿನ ಕಥೆಗಳನ್ನು ಕತೆಗಾರ ಕರೀಗೌಡ ಬೀಚನಹಳ್ಳಿ ಅವರು ಸಮರ್ಥವಾಗಿ ಕನ್ನಡಕ್ಕೆ ಅನುವಾದಿಸಿಕೊಟ್ಟಿದ್ದಾರೆ.

ಈ ಸಂಕಲನವನ್ನು ರಾಮಾನುಜನ್ ಅವರೇ ಪ್ರಕಟಿಸಿದ್ದರೆ ಇದಕ್ಕೆ ಮಹತ್ವವಾದ ಪ್ರಸ್ತಾವನೆ, ಟಿಪ್ಪಣಿ ಬರೆಯುವುದರ ಮೂಲಕ ಕನ್ನಡ ಜನಪದ ಕಥೆಗಳ ಅಧ್ಯಯನ ಕ್ಷೇತ್ರದಲ್ಲಿ ಒಂದು ಹೊಸ ಆಲೋಚನೆಯನ್ನು ಹುಟ್ಟು ಹಾಕುವ ಸಾಧ್ಯತೆ ಇತ್ತು. ಇಲ್ಲಿನ ಕಥೆಗಳು ವಸ್ತು, ಜೀವನದೃಷ್ಟಿ, ಪರಿಸರ, ಸಾಹಸ, ಬುದ್ಧಿಶೀಲತೆ, ತಂತ್ರಗಾರಿಕೆಗೆ, ಲೋಕನೀತಿ, ರೂಪಾಂತರ, ಸ್ತ್ರೀಕೇಂದ್ರಿತ ವಸ್ತುಗಳನ್ನು ಒಳಗೊಂಡಿವೆ. ಈ ಕೃತಿಗೆ ಕರೀಗೌಡ ಬೀಚನಹಳ್ಳಿ ಅವರು ಬರೆದಿವರುವ 'ಪ್ರಸ್ತಾವನೆ'ಯಲ್ಲಿ ರಾಮಾನುಜನ್ ಅವರ ಒಟ್ಟು ಸಾಹಿತ್ಯವನ್ನು ಕುರಿತು ಪರಿಚಯ ಮಾಡಿಕೊಟ್ಟಿರುವುದರ ಜೊತೆಗೆ ಭಾಷಾಂತರದ ಪರಿಕಲ್ಪನೆಯ ಬಗ್ಗೆ ಹೊಸ ಒಳನೋಟಗಳನ್ನು ನೀಡಿದ್ದಾರೆ.[೮]

೨.೯. ಭಾರತೀಯ ಇಂಗ್ಲಿಷ್ ಸಾಹಿತ್ಯ ಚರಿತ್ರೆ(೨೦೦೫)

ಎಂ.ಕೆ.ನಾಯಕ್ ಅವರು ಇಂಗ್ಲಿಷ್‌ನಲ್ಲಿ ಬರೆದ 'A History of Indian English literature' (೧೯೮೯) ಎಂಬ ಸಾಹಿತ್ಯ ಚರಿತ್ರೆಯನ್ನು ಬಸವರಾಜ ನಾಯ್ಕರ್ ಅವರು 'ಭಾರತೀಯ ಇಂಗ್ಲಿಷ್ ಸಾಹಿತ್ಯ ಚರಿತ್ರೆ'(೨೦೦೫) ಎಂಬ ಹೆಸರಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ.

ಇಂಗ್ಲಿಷ್‌ನಲ್ಲಿ ಬರೆಯುವ ಭಾರತದ ಲೇಖಕರ ಸಾಹಿತ್ಯ ಚರಿತ್ರೆ ಇದು. ಇದರಲ್ಲಿ ಎಂ.ಕೆ.ನಾಯಕ್ ಅವರು ರಾಮಾನುಜನ್ ಅವರ ಕಾವ್ಯ, ಅನುವಾದ, ಜಾನಪದ ಹಾಗೂ ಅವರ ವಿಶಿಷ್ಟ ದೃಷ್ಟಿಧೋರಣೆಗಳನ್ನು ಕುರಿತು ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ.[೯]

೨.೧೦. ನೂರು ಮರ ನೂರು ಸ್ವರ(೧೯೯೮)

ಕೀರ್ತಿನಾಥ ಕುರ್ತಕೋಟಿ ಅವರು ತಮ್ಮ 'ನೂರು ಮರ ನೂರು ಸ್ವರ'(೧೯೯೮) ಕೃತಿಯಲ್ಲಿ 'ಎ.ಕೆ.ರಾಮಾನುಜನ್' ಎಂಬ ಲೇಖನದ ಹೆಸರಿನಲ್ಲಿ ಅವರ ಕಾವ್ಯವನ್ನು ಕುರಿತು ವಿಶ್ಲೇಷಣೆ ಮಾಡಿದ್ದಾರೆ. ಅದರಲ್ಲಿ ಮುಖ್ಯವಾಗಿ 'ಕುಂಟೋಬಿಲ್ಲೆ' ಮತ್ತು 'ಹೊಕ್ಕುಳಲ್ಲಿ ಹೂವಿಲ್ಲ' ಸಂಕಲನದಲ್ಲಿ ಬರುವ 'ಪಕ್ಕದ ಮನೆಯಲಿ ಉಪನಿಷತ್ತು', 'ಪಂಚ ಭೂತಗಳಲಿ ಒಂದು', 'ಕೆಲವರ ಪುನರ್ಜನ್ಮ', 'ಸಂಶಯ ಭಕ್ತಿ' ಕವಿತೆಗಳನ್ನು ಕುರಿತು ವಿಶ್ಲೇಷಣೆ ಮಾಡಿದ್ದಾರೆ. ರಾಮಾನುಜನ್ ಅವರ ದ್ವಿಭಾಷಿಕ ಅಥವಾ ತ್ರಿಭಾಷಿಕ ಸಂವೇದನೆಯನ್ನು ಈ ಕವಿತೆಗಳಲ್ಲಿ ಕುರ್ತಕೋಟಿ ಅವರು ಗುರುತಿಸಿದ್ದಾರೆ.[೧೦]

೨.೧೧. ಭಾಷೆ ಮತ್ತು ಸಂಸ್ಕೃತಿ(೨೦೦೬, ೨೦೦೮)

ಕೀರ್ತಿನಾತ ಕರ್ತಕೋಟಿ ಅವರು ತಮ್ಮ 'ಭಾಷೆ ಮತ್ತು ಸಂಸ್ಕೃತಿ'(೨೦೦೬) ಎಂಬ ವಿಮರ್ಶಾ ಕೃತಿಯ ಲೇಖನದಲ್ಲಿ ರಾಮಾನುಜನ್ ಅವರ 'ಮತ್ತೊಬ್ಬನ ಆತ್ಮಚರಿತ್ರೆ' ಎಂಬ ಕಾದಂಬರಿಯನ್ನು ಕುರಿತು ವಿಶ್ಲೇಷಣ ಮಾಡಿದ್ದಾರೆ. ಕಥಾನಾಯಕನ ನೆನಪುಗಳನ್ನು, ದ್ವಂದ್ವಗಳನ್ನು ಇಲ್ಲಿ ವಿವರಿಸಿದ್ದಾರೆ. ಜೊತೆಗೆ ರಾಮಾನುಜನ್ ಅವರ ಭಾಷಾಂತರ ಕೃತಿಗಳನ್ನು ಸಹ ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ. ರಾಮಾನುಜನ್ ಅವರ ಕವಿತೆಗಳ ಬಗ್ಗೆ ಇನ್ನೂ ವಿವರವಾದ ಚರ್ಚೆಯ ಆವಶ್ಯಕತೆ ಇದೆ ಎಂದು ಸೂಚಿಸಿದ್ದಾರೆ.[೧೧]

೨.೧೨. ಪುಸ್ತಕ ಸಮಯ(೨೦೧೧)

ಟಿ.ಪಿ.ಅಶೋಕ ಅವರು ತಮ್ಮ ವಿಮರ್ಶೆಯ ಬರಹಗಳ ಸಂಕಲನ 'ಪುಸ್ತಕ ಸಮಯ' (೨೦೦೧) ಎಂಬ ಕೃತಿಯಲ್ಲಿ ರಾಮಾನುಜನ್ ಅವರ 'ಆಯ್ದ ಬರಹಗಳು' ಮತ್ತು 'ಆಯ್ದ ಕವಿತೆಗಳು' ಕೃತಿಗಳನ್ನು ಕುರಿತು ಪರಿಶೀಲನೆ ಮಾಡಿದ್ದಾರೆ. ಕೆ.ವಿ. ಸುಬ್ಬಣ್ಣನವರು ಅನುವಾದಿಸಿದ ರಾಮಾನುಜನ್ ಅವರ 'ಭಾರತೀಯವೆನ್ನುವ ಒಂದು ಚಿಂತನಾಕ್ರಮ ಇದೆಯೇ?' ಎಂಬ ಲೇಖನ, ಮಹಾಬಲೇಶ್ವರ ರಾವ್ ಅನುವಾದಿಸಿರುವ 'ಮುನ್ನೂರು ರಾಮಾಯಣಗಳು: ಅನುವಾದದ ಕುರಿತು ಮೂರು ವಿಚಾರಗಳು–ಐದು ಉದಾಹರಣೆಗಳೊಂದಿಗೆ', ಹಾಗೂ ಜಿ.ರಾಜಶೇಖರ ಅವರು ಅನುವಾದಿಸಿರುವ 'ಕಿಟಕಿಗಳು ಕನ್ನಡಿಗಳೂ ಆದರೆ: ಪ್ರತಿಬಿಂಬಗಳ ಒಂದು ಸಂಕಲನದ

ಪ್ರಯತ್ನ' ಎಂಬ ಈ ಲೇಖನಗಳನ್ನೊಳಗೊಂಡ 'ಎ.ಕೆ.ರಾಮಾನುಜನ್ ಅವರ ಆಯ್ದ ಬರಹಗಳು' ಎಂಬ ಕೃತಿಯಲ್ಲಿರುವ ಈ ಲೇಖನಗಳನ್ನು ಕುರಿತು ಅಶೋಕ ಅವರು ವಿಮರ್ಶಿಸಿದ್ದಾರೆ. ರಾಮಾನುಜನ್ ಅವರ ಬಹು ಮುಖ್ಯವಾದ ಚಿಂತನಾಪ್ರಧಾನವಾದ ಲೇಖನಗಳನ್ನು ಈ ಎಲ್ಲಾ ಅನುವಾದಕರು ಕನ್ನಡಕ್ಕೆ ಸಮರ್ಥವಾಗಿ ಅನುವಾದಿಸಿಕೊಟ್ಟಿದ್ದಾರೆ. ರಾಮಾನುಜನ್ ಅವರ ಸಂಸ್ಕೃತಿಯ ಬಗೆಗಿನ ಮನೋಧರ್ಮವನ್ನು ಅರಿಯಲು ಈ ಲೇಖನಗಳು ಉತ್ತಮ ಮಾದರಿಗಳಾಗಿವೆ. ಅಶೋಕ ಅವರು ತಮ್ಮ ಮತ್ತೊಂದು ಲೇಖನದಲ್ಲಿ ಕನ್ನಡ ನವ್ಯಕಾವ್ಯದ ಸಂದರ್ಭದಲ್ಲಿ ರಾಮಾನುಜನ್ ಅವರ ಅನನ್ಯತೆಯನ್ನು ಗುರುತಿಸಿದ್ದಾರೆ.[೨]

೨.೧೩. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ(೨೦೦೩)

ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟ ಮಾಡುತ್ತಿದ್ದ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ ೮೧, ಸಂಚಿಕೆ ೧, ೨೦೦೩ರಲ್ಲಿ ಡಾ.ಚಕ್ಕೆರೆ ಶಿವಶಂಕರ್, ಪ್ರೊ.ಜಿ.ಅಬ್ದುಲ್ ಬಷೀರ್ ಸಂಪಾದಿಸಿರುವ ಕೃತಿಯಲ್ಲಿ 'ಒಂದು ಕೊಡೆ, ಒಂದು ವಾಚು-ಕೆಲ ಅನಿಸಿಕೆಗಳು' ಎಂಬ ಲೇಖನದಲ್ಲಿ ಪ್ರೊ.ಕೆ.ಎಸ್.ಮಧುಸೂಧನ ಅವರು ಈ ಕವಿತೆಯಲ್ಲಿ ತಮ್ಮ ಗ್ರಹಿಕೆಗೆ ಬಂದಂತಹ ಕೆಲವು ವಿಚಾರಗಳನ್ನು ಮಂಡಿಸಿದ್ದಾರೆ. ಮುಖ್ಯವಾಗಿ ಈ ಕವಿತೆಯಲ್ಲಿ ಕಂಡು ಬರುವ ಹಾಸ್ಯ, ಗಂಭೀರತೆ, ಸಂಕೀರ್ಣತೆ, ಅರ್ಥಗರ್ಭಿತತೆ ಮುಂತಾದ ವಿಚಾರಗಳನ್ನು ಕುರಿತು ಇಲ್ಲಿ ಚರ್ಚಿಸಿದ್ದಾರೆ. ಕವಿತೆಯ ಸಾರಾಂಶ, ಪಾತ್ರಗಳು, ಹಾಸ್ಯದ ಆಯಾಮ, ತಲೆಮಾರುಗಳ ಪರಿಚಯ, ಪಾತ್ರಗಳ ಕ್ರಿಯಾಶೀಲತೆ, ಕೊಡೆ ಮತ್ತು ವಾಚು ಇವುಗಳ ಸೂಕ್ಷ್ಮ ಮತ್ತು ಸಂಕೀರ್ಣತೆ ಇವುಗಳನ್ನು ಕುರಿತು ವಿಸ್ತಾರವಾಗಿ ಸೂಕ್ಷ್ಮ ದೃಷ್ಟಿಕೋನದಲ್ಲಿ ನೋಡಿದ್ದಾರೆ. ಈ ಲೇಖನ ರಾಮಾನುಜನ್ ಅವರ ಇತರ ಕವಿತೆಗಳನ್ನೂ ಹೀಗೇ ವಿಸ್ತಾರವಾಗಿ, ಆಳವಾಗಿ, ಗಂಭೀರವಾಗಿ ಚರ್ಚೆಗೆ ಒಳಪಡಿಸಿ ಅಧ್ಯಯನ ಮಾಡಬೇಕು ಎಂದು ತೋರಿಸುತ್ತದೆ.[೧೩]

೨.೧೪. ಆಡಾಡತಾ ಆಯುಷ್ಯ(೨೦೧೧)

ಗಿರೀಶ್ ಕಾರ್ನಾಡ್ ಅವರು ತಮ್ಮ ಅತ್ಮಕಥನ 'ಆಡಾಡತಾ ಆಯುಷ್ಯ'(೨೦೧೧) ಕೃತಿಯಲ್ಲಿ ತಮಗೂ ಮತ್ತು ರಾಮಾನುಜನ್ ಅವರಿಗೂ ಇದ್ದ ಸಂಬಂಧವನ್ನು ಕುರಿತು ವಿವರಿಸಿದ್ದಾರೆ. ರಾಮಾನುಜನ್ ಅವರಿಗಿದ್ದ ಆಸಕ್ತಿ ಕ್ಷೇತ್ರಗಳ ಅಸಾಮಾನ್ಯ ಹರವಿನ ಬಗ್ಗೆ ಕಾರ್ನಾಡರು ಬರೆಯುತ್ತಾ ಗಾದೆಗಳು, ಒಗಟುಗಳು, ಆಟದಲ್ಲಿ ಬಳಕೆಯಾಗುವ ಹಾಡುಗಳು, ಹಾಗೂ ಅವರೇ ಹಳ್ಳಿಗಳಿಗೆ ಹೋಗಿ ವಯೋವೃದ್ಧರನ್ನು ಭೇಟಿ ಮಾಡಿ ಸಂಗ್ರಹಿಸಿದ ಅಜ್ಜೀ ಕತೆಗಳು, ಜಾನಪದ ಸಾಹಿತ್ಯ ಇವುಗಳ ಬಗ್ಗೆ ರಾಮಾನುಜನ್ ಅವರಿಗಿದ್ದ ಒಲವು ಮತ್ತು ನಮಗೂ ಸಾಹಿತ್ಯಕ್ಕೂ ಸಂಬಂಧವೇ ಇಲ್ಲದಂತೆ ತೋರುವ ಹಾಗೂ ಎಲಿಯಟ್, ಪೌಂಡ್

ಇವರುಗಳ ಸಂದರ್ಭದಲ್ಲಿ ಅರ್ಥಹೀನವೆನಿಸುವ ಸಾಂಸ್ಕೃತಿಕ ಪ್ರಕ್ರಿಯೆಗಳ ಬಗ್ಗೆ ಅವರಿಗೆ ಆಳವಾಗಿ ಇದ್ದ ಆಸ್ಥೆಯ ಬಗ್ಗೆ ತುಂಬಾ ಕುತೂಹಲಕರವಾಗಿ ತಮ್ಮ ಈ ಕೃತಿಯಲ್ಲಿ ದಾಖಲಿಸುತ್ತಾರೆ. ಸಮಕಾಲೀನ ಪಾಶ್ಚಾತ್ಯ ಲೇಖಕರ ಬಗ್ಗೆ ರಾಮಾನುಜನ್ ಅವರಿಗಿದ್ದ ನಿಲುವು ಮತ್ತು ಪಾಶ್ಚಾತ್ಯ ಲೇಖಕರನ್ನು ಹೊಗಳುವಾಗಲೇ ಅವರ ದೋಷಗಳನ್ನೂ ಸಹ ಗುರುತಿಸುವ ವಸ್ತುನಿಷ್ಠತೆಯ ಬಗ್ಗೆ ಕೂಡ ಇಲ್ಲಿ ದಾಖಲಿಸುತ್ತಾರೆ. ರಾಮಾನುಜನ್ ಅವರಿಂದ ತಾವು ಪ್ರಭಾವಿತರಾದ ಸಂದರ್ಭವನ್ನು ಮತ್ತು ರಾಮಾನುಜನ್ ಅವರು ಅಮೆರಿಕೆಗೆ ಹೋದ ಮೇಲೆ ಅವರ ಕಾವ್ಯ ಪ್ರತಿಭೆ ವಿಕಸನಗೊಂಡ ರೀತಿಯನ್ನು ಕಾರ್ನಾಡರು ಆಪ್ತವಾಗಿ ಹೇಳಿಕೊಂಡಿದ್ದಾರೆ.[೧೪]

೨.೧೫. ಆರು ಕವನ ಸಂಕಲನಗಳು(೨೦೧೦, ೨೦೧೨)

ಸುಮತೀಂದ್ರ ನಾಡಿಗ ಅವರ 'ಆರು ಕವನ ಸಂಕಲನಗಳು'(೨೦೧೦) ಸಮಗ್ರ ಕಾವ್ಯ-೧ ಇದರಲ್ಲಿ ನಾಡಿಗರು 'ರಾಮಾನುಜನ್ ಕಾವ್ಯ' ಎಂದು ರಾಮಾನುಜನ್ ಅವರ ಬಗ್ಗೆ ಬರೆದ ಒಂದು ಕವಿತೆ ಇದೆ. ಅದರಲ್ಲಿ ನಾಡಿಗರು ಹಿರಿಯ ಸ್ನೇಹಿತರು ಗುರುಗಳು ಹಿತೈಷಿಗಳು ಆದ ಅಡಿಗರು ಮೂರು ಬೆರಳಲ್ಲಿ ನಾಲ್ಕಾರು ಒಣ ದ್ರಾಕ್ಷಿ ಬಾಯಿಗೆ ಹಾಕಿ ತಿನ್ನುವುದನ್ನು ನೋಡಿದ್ದೆ. ಕೆಲವರು ಇಡಿ ಇಡಿ ಮಂಗನ ಹಾಗೆ ಮುಕ್ಕುವುದನ್ನು ಕಂಡಿದ್ದೆ. ಆದರೆ ರಾಮಾನುಜನ್ ಅವರು ದ್ರಾಕ್ಷಿಗೆ ಸೂಜಿ ಚುಚ್ಚಿ ಸೂಜಿ ತುದಿಯನ್ನು ನಾಲಿಗೆ ಮೇಲಿಟ್ಟು ಚೀಪಿದ್ದನ್ನು ಕಂಡು ಬೆರಗಾದೆ. ಅವರು ದ್ರಾಕ್ಷಿ ತಿನ್ನುವ ರೀತಿಯೇ ಹೀಗೆ ಎಂಬ ರೂಪಕದ ಮೂಲಕ ರಾಮಾನುಜನ್ ಕಾವ್ಯದ ವಿಶಿಷ್ಟತೆಯನ್ನು ಈ ಸಣ್ಣ ಪದ್ಯದಲ್ಲಿ ಚಿತ್ರಿಸಿದ್ದಾರೆ.[೧೫]

೨.೧೬. ಕಾವ್ಯ ಪ್ರೀತಿ(೨೦೧೩)

ಟಿ.ಪಿ.ಅಶೋಕ ಅವರ ಮತ್ತೊಂದು ವಿಮರ್ಶಾ ಕೃತಿ 'ಕಾವ್ಯ ಪ್ರೀತಿ'(೨೦೧೩) ಎಂಬ ಕನ್ನಡ ಕವಿತೆಗಳ ಕುರಿತ ವಿಮರ್ಶೆಯ ಸಂಕಲನದಲ್ಲಿ ರಾಮಾನುಜನ್ ಅವರ 'ಕಲೆ ಮತ್ತು ಜೀವನ ಸೌಂದರ್ಯ' ಎಂಬ ಕವಿತೆಯನ್ನು ಕುರಿತು ವಿಶ್ಲೇಷಿಸಿದ್ದಾರೆ. ಈ ಲೇಖನದಲ್ಲಿ ರಾಮಾನುಜನ್ ಅವರ 'ಅಣ್ಣಯ್ಯನ ಮಾನವಶಾಸ್ತ್ರ' ಕಥೆಯನ್ನು ಕೂಡ ಕುರಿತು ವಿವರಿಸಿದ್ದಾರೆ. ಒಟ್ಟಾರೆ ಕವಿತೆ ಮತ್ತು ಕಥೆಯಲ್ಲಿ ವ್ಯಕ್ತವಾಗುವ ರಾಮಾನುಜನ್ ಅವರ ಸೌಂದರ್ಯಾನ್ವೇಷಣೆ ಮತ್ತು ಬೌದ್ಧಿಕ ಕುತೂಹಲಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ.[೧೬]

೨.೧೭. ಎ.ಕೆ.ರಾಮಾನುಜನ್ ಸಮಗ್ರ(೨೦೧೧)

ಎಸ್. ದಿವಾಕರ್ ಅವರು 'ಎ.ಕೆ.ರಾಮಾನುಜನ್ ಸಮಗ್ರ'(೨೦೧೧) ಎಂಬ ಸಮಗ್ರ ಕೃತಿಯಲ್ಲಿ ರಾಮಾನುಜನ್ ಅವರ ಮೂರು ಕವನ ಸಂಕಲನಗಳು, ಐದು ಬಿಡಿ ಕವಿತೆಗಳು,

ಅವರ ಕಾದಂಬರಿ, ನಾಲ್ಕು ಸಣ್ಣ ಕಥೆಗಳು, ಎರಡು ರೇಡಿಯೋ ನಾಟಕಗಳು, ಗಾದೆಗಳು ಕೃತಿ, ಏಳು ನಗೆಬರಹಗಳು, ಹನ್ನೊಂದು ಅಪ್ರಕಟಿತ ಕಾವ್ಯ, ಹನ್ನೆರಡು ಅಪ್ರಕಟಿತ ಗದ್ಯ- ಹೀಗೆ ಅವರ ಎಲ್ಲಾ ಸಾಹಿತ್ಯವನ್ನು ಸಂಕಲಿಸಿದ್ದಾರೆ. ಈ ಸಮಗ್ರ ಸಂಕಲನಕ್ಕೆ ಎಸ್.ದಿವಾಕರ್ ಅವರು ಉಪಯುಕ್ತವಾದ ಮುನ್ನುಡಿಯನ್ನು ಬರೆದಿದ್ದಾರೆ. ಮುನ್ನುಡಿಯಲ್ಲಿ ಅವರ ಕಾವ್ಯ, ಕಥೆ, ಕಾದಂಬರಿಯಲ್ಲಿನ ವಿಶೇಷತೆಯನ್ನು ಗುರುತಿಸಿದ್ದಾರೆ.[೧೭]

೨.೧೮. ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು(೨೦೧೨)

ಓ.ಎಲ್.ನಾಗಭೂಷಣ ಸ್ವಾಮಿ ಅವರು 'ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು' ಎಂಬ ಕೃತಿಯಲ್ಲಿ ರಾಮಾನುಜನ್ ಅವರ ಚಿಂತನಾಪ್ರಧಾನ ಪ್ರಬಂಧಗಳಿಂದ ಆಯ್ದ ೧೧ ಪ್ರಬಂಧಗಳನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟಿದ್ದಾರೆ. ಅವುಗಳಲ್ಲಿ ಕನ್ನಡಿಗಳೇ ಕಿಟಕಿಗಳಾಗಿರುವಲ್ಲಿ, ಭಾರತೀಯ ವಿಚಾರಧಾರೆ ಎಂಬುದಿದೆಯೇ?, ೩೦೦ ರಾಮಾಯಣಗಳು, ಅಲ್ಲಮನ ಕವಿತೆ ಯಾಕೆ ಒಗಟಲ್ಲ?, ಭಕ್ತಿ ವೈವಿಧ್ಯ, ಹೂ ಬಿಡುವ ಮರ, ಒಬ್ಬ ಹೆಂಗಸಿನ ಕತೆ, ಕನ್ನಡ ಜನಪದದ ೨ ವರ್ತುಲಗಳು, ಕತೆ ಹೇಳುವುದು, ಮಹಾಭಾರತದಲ್ಲಿ ಪುನರುಕ್ತಿ, ಪ್ರತಿ ವ್ಯವಸ್ಥೆಯತ್ತ: ಹೆಂಗಸರ ಕಥೆಗಳು ಮತ್ತು ಸ್ಪೀಕಿಂಗ್ ಆಫ್ ಶಿವ ಅನುವಾದ ಕೃತಿಯಲ್ಲಿನ ಮುನ್ನುಡಿ- ಈ ಪ್ರಬಂಧಗಳನ್ನು ನಾಗಭೂಷಣಸ್ವಾಮಿ ಅವರು ಕನ್ನಡಕ್ಕೆ ಸಮರ್ಥವಾಗಿ ಅನುವಾದಿಸಿಕೊಟ್ಟಿದ್ದಾರೆ. ಸಂರಚನಾವಾದಕ್ಕೆ, ಪಠ್ಯದ ನಿಕಟ ಓದಿಗೆ ಮತ್ತು ವಿಶ್ಲೇಷಣೆಗೆ ರಾಮಾನುಜನ್ ಬದ್ಧರಾದವರು. ಸಾಹಿತ್ಯ ಚಿಂತನೆ, ಕ್ಲಾಸಿಕಲ್ ಸಾಹಿತ್ಯ, ಜಾನಪದ, ಹೆಣ್ಣುಭಾಷೆ ಮತ್ತು ಕಥನದ ಲಕ್ಷಣ, ಅನುವಾದ, ಸಂಸ್ಕೃತಿ ಚರ್ಚೆ, ತೌಲನಿಕ ಅಧ್ಯಯನ ಈ ಕ್ಷೇತ್ರಗಳಿಗೆ ರಾಮಾನುಜನ್ ಅವರ ಕೊಡುಗೆ ಅಪಾರ ಎಂದಿದ್ದಾರೆ ನಾಗಭೂಷಣಸ್ವಾಮಿ ಅವರು. ಈ ಅನುವಾದಿತ ಪ್ರಬಂಧಗಳು ರಾಮಾನುಜನ್ ಅವರ ಒಟ್ಟು ಸಾಂಸ್ಕೃತಿಕ ಅಧ್ಯಯನದ ಸಂದರ್ಭದಲ್ಲಿ ಪ್ರಮುಖ ಆಕರಗಳಾಗಬಲ್ಲವು.[೧೮]

೨.೧೯. ೪೩ ಕವನಗಳು

ಧಾರವಾಡದ ಮನೋಹರ ಗ್ರಂಥಮಾಲೆಯಲ್ಲಿ '೪೩ ಕವನಗಳು' ಎಂಬ ಹೆಸರಿನಿಂದ ಬಂದಿರುವ ಕವನ ಸಂಕಲನದಲ್ಲಿ ಕನ್ನಡದ ೪೩ ಕವಿಗಳ ತಲಾ ಒಂದೊಂದು ಕವಿತೆ ಸೇರಿದೆ. ಶಾಂತಕವಿಗಳಿಂದ ಹಿಡಿದು ಕೀರ್ತಿನಾಥ ಕುರ್ತಕೋಟಿ ಅವರವರೆಗೂ ಕವನಗಳು ಇಲ್ಲಿವೆ. ಇದರಲ್ಲಿ ರಾಮಾನುಜನ್ ಅವರ 'ಇದೂ ಒಂದು ಕವನ' ಎಂಬ ಪ್ರಾತಿನಿಧಿಕವಾದ ಮತ್ತು ದೀರ್ಘವಾದ ಒಂದು ಕವಿತೆ ಇದೆ. ಇದರಲ್ಲಿ ಕವಿತೆ ಬರೆಯುವ ಕಷ್ಟವನ್ನು ಕುರಿತು ಹೇಳಲಾಗಿದೆ. ರಾಮಾನುಜನ್ ಅವರ ಕಾವ್ಯದ ಮತ್ತೊಂದು ಮುಖವನ್ನು ಅರ್ಥ ಮಾಡಿಕೊಳ್ಳಲು ಇದೊಂದು ಪ್ರಮುಖ ಕವಿತೆಯಾಗಿದೆ.[೧೯]

೨.೨೦. ವ್ಯಷ್ಟಿ ಸಮಷ್ಟಿ(೧೯೯೨, ೨೦೦೭)

ಡಾ.ಕರೀಗೌಡ ಬೀಚನಹಳ್ಳಿ ಅವರ 'ವ್ಯಷ್ಟಿ ಸಮಷ್ಟಿ' (೧೯೯೨, ೨೦೦೭) ಎಂಬ ವಿಮರ್ಶಾ ಗ್ರಂಥದಲ್ಲಿ ಎ.ಕೆ.ರಾಮಾನುಜನ್ ಅವರ 'ಅಣ್ಣಯ್ಯನ ಮಾನವಶಾಸ್ತ್ರ' ಕಥೆಯನ್ನು ಕುರಿತು ವಿವರವಾಗಿ ವಿಶ್ಲೇಷಣೆ ಮಾಡಲಾಗಿದೆ. ಹಿಂದೂ ಸಂಸ್ಕೃತಿಯ ಅರ್ಥಪೂರ್ಣತೆಯನ್ನು ವಿಮರ್ಶಾತ್ಮಕ ವಿವೇಚನೆಯಿಂದ ರಾಮಾನುಜನ್ ಅವರು ಪರಿಭಾವಿಸುವ ರೀತಿಯನ್ನು ಶ್ರೀಯುತರು ಇದರಲ್ಲಿ ಗುರುತಿಸಿದ್ದಾರೆ.[೨೦]

೨.೨೧. ವಿಮುಕ್ತ(೨೦೧೨)

ಜಿ.ವೀರಭದ್ರಗೌಡ ಅವರು ಓಲ್ಗಾ ಅವರ 'ವಿಮುಕ್ತ'(೨೦೧೨) ಎಂಬ ಕೃತಿಯಲ್ಲಿ ಎ.ಕೆ.ರಾಮಾನುಜನ್ ಅವರ 'ಮುನ್ನೂರು ರಾಮಾಯಣಗಳು: ಅನುವಾದದ ಕುರಿತು ಮೂರು ವಿಚಾರಗಳು, ಐದು ಉದಾಹರಣೆಗಳೊಂದಿಗೆ' ಈ ಲೇಖನವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇದು ದೇಶದಾದ್ಯಂತ ಚರ್ಚೆ, ವಾಗ್ವಾದಗಳನ್ನು ಹುಟ್ಟುಹಾಕಿದ ಪ್ರಬಂಧವಾಗಿದೆ.[೨೧]

೨.೨೨. ಪ್ರತಿಭಾ ನಂದಕುಮಾರ್ ಅವರ ಆಯ್ದ ಕವಿತೆಗಳು(೨೦೦೭)

ಪ್ರತಿಭಾ ನಂದಕುಮಾರ್ ಅವರ 'ಆಯ್ದ ಕವಿತೆಗಳು' (೨೦೦೭) ಸಂಕಲನದಲ್ಲಿ ರಾಮಾನುಜನ್ ಅವರ ಬಗ್ಗೆ 'ಎಕೆಆರ್' ಎಂದು ಬರೆದ ಅವರ ಒಂದು ಕವಿತೆ ಇದೆ. ಈ ಕವಿತೆಯಲ್ಲಿ ಎಂದಿನಂತೆ ಭೇಟಿಯಾಗುತ್ತಿದ್ದ ರಾಮಾನುಜನ್ ಅವರು ತೀರಿಕೊಂಡ ಮೇಲೆ, ಅವರ ಭೇಟಿ ಇಲ್ಲದೆ ಏಕಾಂತವನ್ನು ಒಂದು ಬಗೆಯ ಅನಾಥಪ್ರಜ್ಞೆಯನ್ನು ಅನುಭವಿಸುವ ಕವಯಿತ್ರಿಯ ಭಾವ ಈ ಕವಿತೆಯಲ್ಲಿದೆ. ಕಳೆದು ಹೋದ ಮಗುವಿನಂತೆ ಅಳುತ್ತಾ, ಹುಡುಕುತ್ತಾ, ಬಿಕ್ಕುತ್ತಾ, ಕರೆಯುತ್ತಾ, ಪಂಚಭೂತಗಳ ಯಾಚಿಸುತ್ತಾ ಪರಿತಪಿಸುವ ಸ್ತ್ರೀ ದನಿಯೊಂದು ಇಲ್ಲಿ ಕಾಣಿಸುತ್ತದೆ. ಇತ್ತೀಚಿಗೆ ಬಂದ ಪ್ರತಿಭಾ ನಂದಕುಮಾರ್ ಅವರು ತಮ್ಮ 'ಅನುದಿನದ ಅಂತರಗಂಗೆ' ಎಂಬ ಆತ್ಮಕಥನವನ್ನು ರಾಮಾನುಜನ್ ಅವರಿಗೆ ಅರ್ಪಿಸಿರುವುದನ್ನು ಇಲ್ಲಿ ಸ್ಮರಿಸಬಹುದು. ಆತ್ಮಕಥನದ ಈ ಶೀರ್ಷಿಕೆ ಕೂಡ ರಾಮಾನುಜನ್ ಅವರ ಕವಿತೆಯ ಒಂದು ಸಾಲಾಗಿದೆ.[೨೨]

೨.೨೩. ಅಕ್ಷರ ಹೊಸ ಕಾವ್ಯ(೧೯೭೦)

ಪಿ.ಲಂಕೇಶ್ ಅವರು ಸಂಪಾದಿಸಿದ 'ಅಕ್ಷರ ಹೊಸ ಕಾವ್ಯ'(೧೯೭೦) ಎಂಬ ಐತಿಹಾಸಿಕ ಕವಿತೆಗಳ ಸಂಗ್ರಹದಲ್ಲಿ ೫೦ ಜನ ಕವಿಗಳಿದ್ದಾರೆ. ಪ್ರತಿಯೊಬ್ಬ ಕವಿಯಿಂದ ಕನಿಷ್ಠ ಒಂದರಿಂದ ಹಿಡಿದು ಹನ್ನೊಂದರ ಗರಿಷ್ಠವರೆಗೆ ಕವಿತೆಗಳನ್ನು ಆಯ್ಕೆ ಮಾಡಿದ್ದರೆ. ರಾಮಾನುಜನ್ ಅವರಿಗೆ ಮಾತ್ರ ಅವರ ಕಾವ್ಯದಿಂದ ೧೬ ಕವಿತೆಗಳನ್ನು ಲಂಕೇಶ್ ಅವರು ಆಯ್ಕೆ ಮಾಡಿರುವುದನ್ನು

ನೋಡಿದರೆ ಅವರ ಕಾವ್ಯದ ಶಕ್ತಿ ಮತ್ತು ವೈಶಿಷ್ಟ್ಯ ಅರ್ಥವಾಗುತ್ತದೆ. ರಾಮಾನುಜನ್ ಅವರ ಮುಖ್ಯವಾದ 'ಕಲೆ ಮತ್ತು ಜೀವನ ಸೌಂದರ್ಯ, ಬುದ್ಧಿವಂತರಿಗೆ ಕನಸು ಬಿದ್ದರೆ, ಜಪಾನಿ ಶೈಲಿಯ ಋತುಸಂಹಾರದಿಂದ, ಅದರಲ್ಲಿ ಇದು, ಅಪ್ಪ-ಮಗ, ಕಾಮ, ವಲಸೆ ಬಂದ ಕಾಡು, ಆ ಹಕ್ಕಿ ಬೇಕಾದರೆ, ವಾಸನೆ, ಕುಂಟೋಬಿಲ್ಲೆ, ಜಿನ್, ಪಕ್ಕದ ಮನೆಯಲ್ಲಿ ಉಪನಿಷತ್ತು, ಒಂದು ಕ್ಷಣ, ಉಳಿದದ್ದು, ಧ್ಯಾನ ಫಲಿಸಿದರೆ, ನಿಮಗೂ ಗೊತ್ತು ಇಂಥಾ ಜನ' ಎಂಬಂತಹ ಮಹತ್ವದ ಕವಿತೆಗಳು ಇಲ್ಲಿ ಸೇರಿವೆ. ಈ ಸಂಕಲನಕ್ಕೆ ಲಂಕೇಶ್ ಅವರು ಬರೆದಿರುವ 'ಹೊಸ ಕವಿ, ಹೊಸ ಕಾವ್ಯ', ಎಂಬ ದೀರ್ಘವಾದ 'ಪ್ರಸ್ತಾವನೆ' ಇದೆ. ಈ ಪ್ರಸ್ತಾವನೆಯಲ್ಲಿ ಕೆ.ಎಸ್.ನರಸಿಂಹಸ್ವಾಮಿ, ಗೋಪಾಲಕೃಷ್ಣ ಅಡಿಗ, ಗಂಗಾಧರ ಚಿತ್ತಾಲ, ರಾಮಚಂದ್ರ ಶರ್ಮ, ಜಿ.ಎಸ್.ಶಿವರುದ್ರಪ್ಪ, ಚನ್ನವೀರ ಕಣವಿ, ಎ.ಕೆ.ರಾಮಾನುಜನ್, ಯು.ಆರ್.ಅನಂತಮೂರ್ತಿ, ಲಂಕೇಶ್, ನಾಡಿಗ, ನಿಸಾರ್ ಅಹಮದ್, ಚಂಪಾ, ಶ್ರೀಕೃಷ್ಣ ಆಲನಹಳ್ಳಿ, ವೈದೇಹಿ, ಸರ್ವಮಂಗಳ, ಅಗ್ರಹಾರ, ಶಿವಪ್ರಕಾಶ್, ಪ್ರತಿಭಾ, ಜಯಂತ್ ಕಾಯ್ಕಿಣಿ, ಸಿದ್ಧಲಿಂಗಯ್ಯ, ಅಬ್ದುಲ್ ರಶೀದ್ ಮುಂತಾದವರ ವರೆಗೆ ಅಂದರೆ ೧೯೫೦ನೇ ಇಸವಿಯಿಂದ ಈಚೆಗೆ ಕನ್ನಡ ಕಾವ್ಯ ಬೆಳೆದು ಬಂದ ಬಗೆ, ಅದರ ವೈವಿಧ್ಯತೆ ಹಾಗೂ ಅದರ ಸೂಕ್ಷ್ಮತೆಗಳನ್ನೆಲ್ಲಾ ಲಂಕೇಶ್ ಅವರು ಸಮರ್ಥವಾಗಿ ಈ ಪ್ರಸ್ತಾವನೆಯಲ್ಲಿ ಗುರುತಿಸಿದ್ದಾರೆ. ಶೈಲಿ ಮತ್ತು ಚಿತ್ತಾರಕ್ಕಿಂತ ವಸ್ತುವಿನ ಮೇಲೆ ಹೆಚ್ಚು ಗಮನವಿಟ್ಟು ಕವಿತೆಗಳನ್ನು ಕಟ್ಟಿದ ಎ.ಕೆ.ರಾಮಾನುಜನ್ ಅವರ ಕಾವ್ಯ ಕುತೂಹಲಕರವಾದದ್ದು ಎಂದು ಲಂಕೇಶ್ ಅವರು ಅಭಿಪ್ರಾಯ ಪಡುವುದನ್ನು ಇಲ್ಲಿ ನೋಡಬಹುದಾಗಿದೆ.[೨೩]

೨.೨೪. ಕನ್ನಡ ಸಣ್ಣಕಥೆಗಳು(೧೯೭೪)

ಜಿ.ಎಚ್.ನಾಯಕ ಅವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ 'ಕನ್ನಡ ಸಣ್ಣ ಕಥೆಗಳು' (೧೯೭೪), ಕಥಾ ಸಂಕಲನದಲ್ಲಿ ಪಂಜೆ ಮಂಗೇಶರಾಯರಿಂದ ಹಿಡಿದು ದೇವನೂರು ಮಹಾದೇವ ಅವರ ತನಕ ೨೫ ಕಥೆಗಳಿವೆ. ಇವುಗಳಲ್ಲಿ ಎ.ಕೆ.ರಾಮಾನುಜನ್ ಅವರ ಪ್ರಾತಿನಿಧಿಕ ಹಾಗೂ ವಿಶಿಷ್ಟ ಕಥೆಯಾದ 'ಅಣ್ಣಯ್ಯನ ಮಾನವಶಾಸ್ತ್ರ' ಕಥೆಯೂ ಸೇರಿದೆ. ನಾಯಕ್ ಅವರು ಈ ಕೃತಿಗೆ ಬರೆದಿರುವ ತಮ್ಮ ಪ್ರಸ್ತಾವನೆಯಲ್ಲಿ ಪ್ರತಿಯೊಬ್ಬ ಕಥೆಗಾರನ ಬಗ್ಗೆಯೂ ಒಂದು ಸಣ್ಣ ಟಿಪ್ಪಣಿಯನ್ನು ಬರೆದಿದ್ದಾರೆ. ರಾಮಾನುಜನ್ ಅವರ ಕಥೆಯ ಬಗ್ಗೆ ಬರೆಯುತ್ತಾ "ಈ ಕಥೆ ಸುಸಂಬದ್ಧ ನಿರೂಪಣೆಯ ಗತಿಯಲ್ಲಿಯೇ ಒಂದು ಅಸಂಬದ್ಧ ಸ್ಥಿತಿಯನ್ನು ಸಮರ್ಥವಾಗಿ ಎದುರು ನಿಲ್ಲಿಸುತ್ತದೆ" ಎಂಬ ನಾಯಕರ ವಿಮರ್ಶೆಯ ತಮ್ಮ ಮಾತುಗಳಿಂದ ಈ ಕಥೆಯ ಮೌಲ್ಯವನ್ನು ಅವರು ಗುರುತಿಸಿದ್ದಾರೆ.[೨೪]

೨.೨೫. Indian Literature, No.254, November/December 2009

೧೯೮೨ರಲ್ಲಿ ಮಲಯಾಳಂನ ಪ್ರಸಿದ್ಧ ಕವಿ ಶ್ರೀ ಅಯ್ಯಪ್ಪ ಪಣಿಕ್ಕರ್ ಅವರ ಜೊತೆ ಚಿಕಾಗೋದಲ್ಲಿ ನಡೆಸಿದ ಬಹು ಸುದೀರ್ಘವಾದ ಸಂದರ್ಶನವನ್ನು ಕೇಂದ್ರ ಸಾಹಿತ್ಯ ಅಕಾದೆಮಿ, ತಮ್ಮ ದ್ವಿ–ಮಾಸಿಕ 'Indian Literature, No.254, November/December 2009' ದಲ್ಲಿ ಪ್ರಕಟಿಸಿದೆ. ಈ ಎರಡು ಸಾಹಿತ್ಯ ದಿಗ್ಗಜರ ಸಂದರ್ಶನದಲ್ಲಿ ಬಹಳ ಮುಖ್ಯವಾಗಿ ಕನ್ನಡ, ಭಾರತೀಯ ಮತ್ತು ಪಾಶ್ಚಿಮಾತ್ಯ ಸಾಹಿತ್ಯ, ಕಲೆ, ಸಂಸ್ಕೃತಿ, ಚಿಂತನಾಕ್ರಮ, ಆಧುನಿಕ ಪ್ರಪಂಚದೆಡೆಗೆ ಮುಖ ಮಾಡಿರುವ ನಮ್ಮ ಸಾಹಿತ್ಯದ ಚಿಂತನೆ ಈ ಎಲ್ಲಾ ವಿಚಾರಗಳನ್ನು ಕುರಿತು ಬಹು ದೀರ್ಘವಾಗಿ ಚರ್ಚಿಸಲಾಗಿದೆ. ರಾಮಾನುಜನ್ ಅವರ ಎರಡೂ ನೆಲೆಯ ಚಿಂತನಾ ಬರಹಗಳು ಭಾರತದಲ್ಲಿ ಮತ್ತು ಪಾಶ್ಚಿಮಾತ್ಯರಲ್ಲಿ ಎಷ್ಟು ಪ್ರಸ್ತುತವಾಗಿವೆ ಎಂಬುದನ್ನು ಚರ್ಚಿಸಲಾಗಿದೆ. ಅಯ್ಯಪ್ಪ ಪಣಿಕ್ಕರ್ ಅವರ ಹಲವಾರು ಧಾರ್ಮಿಕ ನೆಲೆಯ ಪ್ರಶ್ನೆಗಳಿಗೆ ಮತ್ತು ಜನಪದ ನೆಲೆಯ ಪ್ರಶ್ನೆಗಳಿಗೆ ಹೆಚ್ಚು ಚಿಂತನೆಗೆ ಒಳಪಡಿಸಬಹುದಾದ ಉತ್ತರಗಳನ್ನು ನೀಡಿದ್ದಾರೆ. ಸಂಸ್ಕೃತ, ಕನ್ನಡ, ಇಂಗ್ಲಿಷ್ ಭಾಷೆಯ ರಚನೆ ಮತ್ತು ಆ ಭಾಷೆಗಳಲ್ಲಿ ಆಗಿರುವ ಸಾಹಿತ್ಯ ರಚನೆಯನ್ನು ಕುರಿತು ಹೆಚ್ಚು ಚರ್ಚಿಸಲಾಗಿದೆ. ರಾಮಾನುಜನ್ ಅವರ ವ್ಯಕ್ತಿತ್ವ ಮತ್ತು ಸಾಹಿತ್ಯವನ್ನು ಅರ್ಥ ಮಾಡಿಕೊಳ್ಳಲು ಈ 'ಸಂದರ್ಶನ' ಒಂದು ಮುಖ್ಯವಾಗಿ ಸಹಾಯಕವಾಗಬಲ್ಲದು.[೨೫]

೨.೨೬. ಹೊಸಗನ್ನಡ ಕವಿತೆ(೧೯೮೫)

ಜಿ.ಎಚ್.ನಾಯಕರ ಸಂಪಾದಕತ್ವದಲ್ಲಿ ಬಂದಿರುವ 'ಹೊಸಗನ್ನಡ ಕವಿತೆ'(೧೯೮೫) ಆಯ್ದ ಬೃಹತ್ ಕವನಗಳ ಸಂಗ್ರಹದಲ್ಲಿ ರಾಮಾನುಜನ್ ಅವರ 'ಅಂಗುಲ ಹುಳುವಿನ ಪರಕಾಯ ಪ್ರವೇಶ', 'ಒಂದು ಕೊಡೆ ಒಂದು ವಾಚು', '...ಮತ್ತೂ ಇತರ ಪದ್ಯ'ಗಳಿಂದ ಆಯ್ದ ನಾಲ್ಕು ಕವಿತೆಗಳು 'ಕನಸನಲ್ಲಿ ಹಳದಿ ಷರಟಿನ ತಲೆ ಕೆದರಿದ ಕಳ್ಳ ಒಬ್ಬ', 'ಅಲ್ಲ ಇಷ್ಟು ವಯಸ್ಸಾದರೂ ಬೇಕು...' 'ಅಮೆರಿಕಕ್ಕೆ ಬಂದಾಗಲೇ...' 'ಮಾತು ಮುಗಿಯುವ ಮೊದಲು...' ಎಂಬ ಕವನಗಳು ಸೇರಿವೆ. ಇಪ್ಪತ್ತನೆಯ ಶತಮಾನದ ಅರವತ್ತರರಿಂದ ಎಂಬತ್ತರ ದಶಕದವರೆಗೆ ನಡೆದುಬಂದ ಕನ್ನಡ ಕಾವ್ಯದ ವಿಹಂಗಮ ನೋಟವಿದೆ. ಹೊಸಗನ್ನಡ ಕಾವ್ಯದ ವಿವಿಧ ಮಜಲುಗಳನ್ನು ಪ್ರತಿನಿಧಿಸುವ ಕವಿಗಳ ಕವನಗಳ ಸಂಕಲನ ಇದು. ಹೊಸಗನ್ನಡ ಕಾವ್ಯದ ಮಾರ್ಗ, ಪ್ರಯೋಗ, ಭಾವ, ಭಾಷೆ, ವಸ್ತು, ತಂತ್ರ, ಧೋರಣೆಗಳನ್ನು ಇಲ್ಲಿ ಕಾಣಬಹುದು. ನವ್ಯಕಾವ್ಯದ ಸಂದರ್ಭದಲ್ಲಿ ಚಿಂತನಪರವಾದ ಕಾವ್ಯದಲ್ಲಿ ಭಾಷೆಯ ಅರ್ಥಶಕ್ತಿಯು ನಾದಶಕ್ತಿಯನ್ನು ನಿಯಂತ್ರಿಸುವುದನ್ನು ಕಾಣುತ್ತೇವೆ. ಇಲ್ಲಿ ಬುದ್ಧಿಶಕ್ತಿಯು ಕಲ್ಪನಾಶಕ್ತಿಯನ್ನು ದುಡಿಸಿಕೊಳ್ಳುತ್ತದೆ. ಈ ಬಗೆಯ ಚಿಂತನ ಪರವಾದ ಮತ್ತು ಕಾವ್ಯಾನುಭವ ಸಂಕೀರ್ಣತೆಯನ್ನು ರಾಮಾನುಜನ್ ಅವರ ಕವಿತೆಗಳಲ್ಲಿ ಗುರುತಿಸಬಹುದು. ಈ ದೃಷ್ಟಿಯಿಂದ ನಾಯಕ್ ಅವರು ರಾಮಾನುಜನ್ ಅವರ ಕಾವ್ಯವನ್ನು

ಈ ಬಗೆಯ ಹೊಸಗನ್ನಡದ ಚಿಂತನ ಪರವಾದ ಕಾವ್ಯವೆಂದು ಹೇಳಬಹುದೆಂದು ನವ್ಯ ಮಾರ್ಗದ ಗುಂಪಿಗೆ ಸೇರಿಸಬಹುದೆಂದು ಜಿ.ಎಚ್.ನಾಯಕ್ ಅವರು ತಮ್ಮ ಪ್ರಸ್ತಾವನೆಯಲ್ಲಿ ಅಬಿಪ್ರಾಯಪಟ್ಟಿದ್ದಾರೆ. ವ್ಯಾವಹಾರಿಕವಾದ ಭಾಷೆಯಲ್ಲಿಯೇ ಅರ್ಥಶಕ್ತಿಯನ್ನು ಹೊಂದಿಸುವ ಶಕ್ತಿ ರಾಮಾನುಜನ್ ಅವರ ಕವಿತೆಗಳಲ್ಲಿದೆ.[೨೬]

೨.೨೭. ಶತಮಾನದ ಕಾವ್ಯ(೨೦೦೧)

ಎಚ್.ಎಸ್.ವೆಂಕಟೇಶಮೂರ್ತಿ ಅವರು ಸಂಪಾದಿಸಿರುವ 'ಶತಮಾನದ ಕಾವ್ಯ'(೨೦೦೧) ಎಂಬ ಬೃಹತ್ ಸಂಪುಟದಲ್ಲಿ ರಾಮಾನುಜನ್ ಅವರ ನಾಲ್ಕು ಕವಿತೆಗಳು ಸೇರಿವೆ. ಅವರ ಅಂಗುಲ ಹುಳುವಿನ ಪರಕಾಯ ಪ್ರವೇಶ, ಆ ಹಕ್ಕಿ ಬೇಕಾದರೆ, ತಿರುಗಿ ಬಂದೆ, ಕುಂಟೋಬಿಲ್ಲೆ, ಈ ಕವಿತೆಗಳು ಈ ಸಂಕಲನದಲ್ಲಿವೆ. ಪಂಜೆ, ಗೋವಿಂದ ಪೈ, ಬಿಎಂಶ್ರೀ, ಡಿವಿಜಿ, ಮಾಸ್ತಿ, ಕುವೆಂಪು, ಬೇಂದ್ರ, ಪುತಿನ, ಅಡಿಗ, ಶರ್ಮ, ಗೋಕಾಕ್, ಕಂಬಾರ, ರಾಮಾನುಜನ್ ಮುಂತಾದ ಹಿರಿಯ ಕವಿಗಳಿಂದ ಹಿಡಿದು ಸಿದ್ಧಲಿಂಗಯ್ಯ, ಮೂಡ್ನಾಕೂಡು, ಎಲ್.ಹನುಮಂತಯ್ಯ, ಪ್ರತಿಭಾ ನಂದಕುಮಾರ್, ಎಂ.ಆರ್. ಕಮಲ, ಲಕ್ಷ್ಮೀಪತಿ ಕೋಲಾರ, ಹೆಚ್.ಎಸ್.ಶಿವಪ್ರಕಾಶ್ ಮುಂತಾದ ಕವಿಗಳ ಮುಖ್ಯ ಕವಿತೆಗಳು ಈ ಸಂಕಲನದಲ್ಲಿವೆ. ೨೦ನೇ ಶತಮಾನದ ಕಾವ್ಯ ಜಗತ್ತಿನ ಬೆಳವಣಿಗೆಯನ್ನು ಪ್ರತಿನಿಧಿಸುವ ಪ್ರಾತಿನಿಧಿಕವಾದ ಕವನಗಳ ಸಂಕಲನ ಇದಾಗಿದೆ. ತೃತೀಯ ಜಗತ್ತಿನ ಮನುಷ್ಯ ಸಂಬಂಧಗಳ ಆತ್ಮಘಾತಕವಾದ ಕ್ಷೋಭೆಗಳಿಗೆ ರಾಮಾನುಜನ್ ಅವರ ಕವಿತೆಗಳು ತೀವ್ರವಾಗಿ ಸ್ಪಂದಿಸಿರುವುದನ್ನು ವೆಂಕಟೇಶಮೂರ್ತಿ ಅವರು ತಮ್ಮ ಮುನ್ನುಡಿಯಲ್ಲಿ ಸೂಚ್ಯವಾಗಿ ತಿಳಿಸಿದ್ದಾರೆ. ಇಂತಹ ಅಪೂರ್ವವಾದ ಶತಮಾನದ ಕಾವ್ಯಸಂಕಲನದಲ್ಲಿ ರಾಮಾನುಜನ್ ಅವರ ಬಹುಮುಖ್ಯವಾದ ನಾಲ್ಕು ಕವಿತೆಗಳು ಸೇರಿರುತ್ತವೆ.[೨೭]

೨.೨೮. ಭಾಷಾಂತರ: ಸೈದ್ಧಾಂತಿಕ ಹಾಗೂ ಆನ್ವಯಿಕ ನೆಲೆಗಳು(೨೦೧೫)

ಭಾಷಾಂತರ ಸಿದ್ಧಾಂತ, ಆನ್ವಯಿಕ ನೆಲೆ ಹಾಗೂ ತೌಲನಿಕ ಸಾಹಿತ್ಯದ ಅಧ್ಯಯನದ ಬಗ್ಗೆ ಲೇಖನ, ಪುಸ್ತಕಗಳನ್ನು ಬರೆದು ಭಾಷಾಂತರ ಪ್ರಕ್ರಿಯೆ, ಸ್ವರೂಪ, ನಿಯೋಗಗಳ ಬಗ್ಗೆ ಒಂದು ತಾತ್ವಿಕ ಸ್ವರೂಪವನ್ನು ರೂಪಿಸುತ್ತಿರುವ ವಿದ್ವಾಂಸರ ಸಾಲಿನಲ್ಲಿ ಸಿ.ಎನ್.ರಾಮಚಂದ್ರನ್ ಅವರೂ ಒಬ್ಬರು. ಅವರು ತಮ್ಮ ಇತ್ತೀಚಿನ 'ಭಾಷಾಂತರ: ಸೈದ್ಧಾಂತಿಕ ಹಾಗೂ ಆನ್ವಯಿಕ ನೆಲೆಗಳು' (೨೦೧೫) ಕೃತಿಯಲ್ಲಿ ಕೆಲವು ಸೈದ್ಧಾಂತಿಕ ಧಾರೆಗಳನ್ನು ಪರಿಚಯಿಸಿದ್ದಾರೆ. ಈ ಕೃತಿಯು ಭಾಷಾಂತರದ ಬಗೆಗಿನ ಸೈದ್ಧಾಂತಿಕ ನೀತಿಗಳು, ಭಾಷಾಂತರದ ಬಗ್ಗೆ ಪಾಶ್ಚಿಮಾತ್ಯರ ಚಿಂತನೆ, ಆನ್ವಯಿಕ ನೆಲೆಗಳು ಮುಂತಾದ ಸುಮಾರು ಒಂಬತ್ತು ಅಧ್ಯಾಯಗಳಲ್ಲಿ ಭಾಷಾಂತರದ ಸಿದ್ಧಾಂತ ಹಾಗೂ ಅದರ ಆನ್ವಯಿಕ ನೆಲೆಗಳನ್ನು ಕುರಿತು ವಿವರವಾಗಿ ತಿಳಿಸುತ್ತದೆ.

ಈ ಕೃತಿಯ 'ಭಾರತೀಯ ಚಿಂತನೆ' ಎಂಬ ಮೂರನೆಯ ಅಧ್ಯಾಯದಲ್ಲಿ ಎ.ಕೆ. ರಾಮಾನುಜನ್, ಸುಜೀತ್ ಮುಖರ್ಜಿ, ತೇಜಸ್ವಿನಿ ನಿರಂಜನ, ಗಾಯತ್ರಿ ಚಕ್ರವರ್ತಿ ಸ್ಪಿವಾಕ್, ಗಣೇಶ್ ದೇವಿ, ಹರೀಶ್ ತ್ರಿವೇದಿ ಇವರು ಭಾಷಾಂತರದ ಚರಿತ್ರೆ, ಸಿದ್ಧಾಂತ ಹಾಗೂ ಆನ್ವಯಿಕ ನೆಲೆಗಳ ಬಗ್ಗೆ ನಡೆಸಿರುವ ಚರ್ಚೆ, ಚಿಂತನೆ ಹಾಗೂ ಅವರ ಬರಹಗಳನ್ನು ಕುರಿತು ರಾಮಚಂದ್ರನ್ ಅವರು ಇಲ್ಲಿ ದೀರ್ಘವಾಗಿ ಪರಿಚಯಿಸಿದ್ದಾರೆ. ಈ ಎಲ್ಲಾ ಭಾರತೀಯ ವಿದ್ವಾಂಸರ ಭಾಷಾಂತರದ ಬಗೆಗಿನ ಭಿನ್ನ ಭಿನ್ನ ಸೈದ್ಧಾಂತಿಕ ನೆಲೆಗಳನ್ನು ರಾಮಚಂದ್ರನ್ ಅವರು ವಸ್ತುನಿಷ್ಠವಾಗಿ ವಿವರಿಸಿದ್ದಾರೆ. ಈ ಅಧ್ಯಾಯದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಬರೆದ ಭಾಷಾಂತರ ಅಧ್ಯಯನಕಾರರನ್ನೂ ಕುರಿತು ಚರ್ಚಿಸಿದ್ದಾರೆ. ಹಾಗೆಯೇ ಎ.ಕೆ.ರಾಮಾನುಜನ್ ಅವರ ಭಾಷಾಂತರದ ಬಗೆಗಿನ ಪರಿಕಲ್ಪನೆ, ಚಿಂತನೆ ಹಾಗೂ ಭಾಷಾಂತರ ಕಾರ್ಯವನ್ನು ಕುರಿತು ಪರಿಚಯಿಸಿದ್ದಾರೆ.

ರಾಮಾನುಜನ್ ಅವರ ಅನುವಾದದ ಬಗ್ಗೆ ಸಿ.ಎನ್.ಆರ್. ಅವರು ಇಲ್ಲಿ ಹೀಗೆ ಬರೆಯುತ್ತಾರೆ:

> "ತಾತ್ವಿಕ ಹಾಗೂ ಆನ್ವಯಿಕ ನೆಲೆಯಲ್ಲಿ ಭಾಷಾಂತರ ಕ್ಷೇತ್ರಕ್ಕೆ ರಾಮಾನುಜನ್ ಅವರ ಕೊಡುಗೆ ಅಪಾರ, ವಿಶಿಷ್ಟ ಹಾಗೂ ಪ್ರಭಾವಿ. ಸುಮಾರು ನಾಲ್ಕು ದಶಕಗಳ ಕಾಲ ಅನುವಾದ ಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ರಾಮಾನುಜನ್ ಪ್ರಾಚೀನ ತಮಿಳು ಸಂಗಂ ಕಾವ್ಯ, ೧೨ನೇ ಶತಮಾನದ ಕನ್ನಡ ವಚನ ಸಾಹಿತ್ಯ, ಮಧ್ಯಕಾಲೀನ ತೆಲುಗು ಜಾನಪದ ಕಾವ್ಯ, ಭಾರತೀಯ ಮೌಖಿಕ ಪರಂಪರೆಯ ಗದ್ಯ ಕಥೆಗಳು ಇವುಗಳನ್ನು ಇಂಗ್ಲಿಷ್‌ಗೆ ಅನುವಾದಿಸಿ ಆ ಮೂಲಕ ಕನ್ನಡ–ತಮಿಳು–ತೆಲುಗು ಭಾಷೆ – ಸಾಹಿತ್ಯಗಳಷ್ಟೇ ಅಲ್ಲದೆ ಇಡೀ ದ್ರಾವಿಡ ಸಾಹಿತ್ಯ ಸಂಸ್ಕೃತಿಗಳಿಗೆ ಅಂತಾರಾಷ್ಟ್ರೀಯ ಮನ್ನಣೆ ದೊರಕುವಂತೆ ಶ್ರಮಿಸಿದರು."[೨೮]

ಎಂದು ಸರಿಯಾಗಿಯೇ ರಾಮಾನುಜನ್ ಅವರ ಭಾಷಾಂತರದ ಅನುವಾದ ಚಿಂತನೆಗಳನ್ನು ಸಿ.ಎನ್.ಆರ್. ಗುರುತಿಸಿದ್ದಾರೆ. ರಾಮಾನುಜನ್ ಅವರ ಭಾಷಾಂತರ ಕಾರ್ಯದ ಬಗ್ಗೆ ತಿಳಿಯಲು ಇದೊಂದು ಉತ್ತಮ ಭಾಗವಾಗಿದೆ.

೨.೨೯. Tribute to Ramanujan 2016

ಕನ್ನಡ ನಾಡಿನ ಪ್ರಸಿದ್ಧ ಕಲಾವಿದ ಎಸ್.ಜಿ.ವಾಸುದೇವ್ ಅವರು ರಾಮಾನುಜನ್ ಅವರ ಒಡನಾಡಿಯಾಗಿದ್ದರು. ಇವರೇ ಹೇಳುವಂತೆ ಇವರನ್ನು ರಾಮಾನುಜನ್ ಅವರಿಗೆ ಗಿರೀಶ್ ಕಾರ್ನಾಡರು ಮದ್ರಾಸಿನಲ್ಲಿ ಇವರನ್ನು ಪರಿಚಯಿಸಿದರು. ರಾಮಾನುಜನ್ ಅವರು ತಮ್ಮ ಕವನ ಸಂಕಲನಕ್ಕೆ ಮುಖಪುಟ ರಚಿಸಲು ಕೇಳಿದ್ದರು. ರಾಮಾನುಜನ್ ಅವರ ಮೊದಲ ಕವನ

ಸಂಕಲನ ಹಾಗೂ ಇನ್ನೂ ಎರಡು ಕವನ ಸಂಕಲನಕ್ಕೆ ವಾಸುದೇವ್ ಅವರು ರೇಖಾಚಿತ್ರಗಳನ್ನು ಮುಖಪುಟಗಳನ್ನು ರಚಿಸಿದ್ದಾರೆ. ರಾಮಾನುಜನ್ ಅವರ ಕಾವ್ಯದ ವಸ್ತುವನ್ನು ರೇಖಾಚಿತ್ರದಲ್ಲಿ ಸೆರೆ ಹಿಡಿಯುವುದು ಎಷ್ಟು ಕಷ್ಟಸಾಧ್ಯ ಮತ್ತು ಅವುಗಳನ್ನು ಅರ್ಥ ಮಾಡಿಕೊಳ್ಳುವುದ್ದೂ ಸಹ ತಮ್ಮ ಬೌದ್ಧಿಕ ಮಟ್ಟವನ್ನು ಮೀರಿದ್ದು ಎಂಬುದನ್ನು ಈ ಕೃತಿಯಲ್ಲಿ ತಮ್ಮ ಮಾತುಗಳಲ್ಲೇ ಹೇಳಿದ್ದಾರೆ. ರಾಮಾನುಜನ್ ಅವರ ನೆನಪಿಗಾಗಿ ಅವರ ಕಾವ್ಯಗಳಿಗೆ ರಚಿಸಿದ್ದ ರೇಖಾಚಿತ್ರಗಳ ಪ್ರದರ್ಶನವನ್ನು ಬೆಂಗಳೂರಿನಲ್ಲಿ ದಿನಾಂಕ ೧೩, ಜುಲೈನಿಂದ ಆಗಸ್ಟ್ ೧೯, ೨೦೧೬ರವರೆಗೆ ಪ್ರದರ್ಶನವನ್ನು ಏರ್ಪಡಿಸಿದ್ದರು. ಅದೇ ಸಂದರ್ಭದಲ್ಲಿ ಈ ಕೃತಿಯನ್ನೂ ಸಹ ಬಿಡುಗಡೆ ಮಾಡಿದ್ದರು. ರಾಮಾನುಜನ್ ಅವರ ಸೃಜನಶೀಲ ಕಾವ್ಯಗಳಿಗೆ ಹಾಗೂ ಅನುವಾದ ಕವಿತೆಗಳಿಗೆ ತಾವು ರಚಿಸಿದ ಹಲವಾರು ರೇಖಾಚಿತ್ರಗಳನ್ನು ಪ್ರದರ್ಶನದಲ್ಲಿ ಇಡಲಾಗಿತ್ತು. ಈ ಕೃತಿಯಲ್ಲಿಯೂ ಸಹ ರಾಮಾನುಜನ್ ಅವರ ನಿಧನದ ನಂತರವೂ ಸಹ ಅವರ ಹಲವಾರು ಕಾವ್ಯಗಳಿಗೆ ಚಿತ್ರಗಳನ್ನು ಬಿಡಿಸಿರುವುದನ್ನು ಹೇಳಿದರು ಮತ್ತು ಅವುಗಳನ್ನು ಪುಸ್ತಕರೂಪದಲ್ಲಿ ಹೊರತಂದಿರುವುದನ್ನೂ ಸಹ ಹಂಚಿಕೊಂಡರು.

ರಾಮಾನುಜನ್ ಅವರ ಕವನ ಸಂಕಲನಕ್ಕೆ ರಚಿಸಿದ ಮುಖಪುಟದ ಕುರಿತಾದ ಒಂದು ಘಟನೆಯನ್ನೂ ಸಹ ಇಲ್ಲಿ ನೆನಪಿಸಿಕೊಳ್ಳುತ್ತಾರೆ. ಹೇಗೆ ಬಣ್ಣವಿಲ್ಲದೆ ರಾಮಾನುಜನ್ ಅವರ ಕಾವ್ಯದ ವಸ್ತುವನ್ನು ಮತ್ತು ಕಾವ್ಯದ ಅಭಿವ್ಯಕ್ತಿಯನ್ನು ರೇಖಾಚಿತ್ರದ ಮೂಲಕವೇ ಹೇಗೆ ತೋರಿಸಬಹುದೆಂಬುದನ್ನು ಇಲ್ಲಿ ಹೇಳಿದ್ದಾರೆ.

> "He asked me if I would design the book jacket for his first collection of poems, Hokkulalli Hoovilla(No Flower in Navel). I did a cover design using letters from the Kannada alphabet in white on a dark gray background. I also reproduced a hand-written-version of one of his poems on the back cover, in the process in a way illustrating it. He asked me: 'Don't you want to use any more colour?' I said, 'No. I can only conceive of your poems in black and white."

ಎಸ್. ಕೃಷ್ಣನ್ ಅವರು ಈ ಕೃತಿಗೆ 'Through an artist's eye' ಎಂದು ಹೇಳುತ್ತಾ ಅರ್ಥವತ್ತಾದ ಮುನ್ನುಡಿಯನ್ನು ಮತ್ತು ರಾಮಾನುಜನ್ ಹಾಗೂ ವಾಸುದೇವ್ ಅವರ ಒಡನಾಟವನ್ನೂ ಇಲ್ಲಿ ಕಟ್ಟಿಕೊಟ್ಟಿದ್ದಾರೆ. ಅಂತೆಯೇ ಪ್ರತಿಭಾ ನಂದಕುಮಾರ್ ಅವರೂ ಸಹ 'The Absent Presence' ಎಂದು ಬರೆಯುತ್ತಾ 'ಇಲ್ಲದ' ರಾಮಾನುಜನ್ ಅವರ 'ಇರುವಿಕೆ'ಯನ್ನು ಬಹಳ ವಿಶೇಷವಾಗಿ ಇಲ್ಲಿ ಚರ್ಚಿಸಿದ್ದಾರೆ. ಕಾವ್ಯ ಮತ್ತು ಕಲೆ ಹೇಗೆ ಒಂದನ್ನೊಂದು ಬೆರೆತು ಕಾವ್ಯಶಕ್ತಿಯನ್ನು ಇಮ್ಮಡಿಗೊಳಿಸಿದೆ ಎಂಬುದನ್ನು ತಿಳಿಸಿದ್ದಾರೆ.[೨೯]

೨.೩೦. When Mirrors are Windows - A View of A.K.Ramanujan's Poetics 2016

ಇದು ಒಂದು ರಾಮಾನುಜನ್ ಅವರ ಕುರಿತ ಮಹಾಪ್ರಬಂಧ. ಸ್ಪೇನ್ ದೇಶದ ಸಂಶೋಧಕರಾದ Guillermo Rodriguez ಅವರು ಸುಮಾರು ಎರಡು ದಶಕಗಳಿಗೂ ಹೆಚ್ಚು ಕಾಲ ಭಾರತ ದೇಶದಲ್ಲಿ ನೆಲೆಸಿ ರಾಮಾನುಜನ್ ಅವರ ಜೀವನ ಮತ್ತು ಸಾಧನೆ ಹಾಗೂ ಸಾಹಿತ್ಯ ರಚನೆಯ ಕುರಿತಾದ ಬಹು ದೀರ್ಘವಾದ ಸಂಶೋಧನೆ ನಡೆಸಿದವರು. ಇವರು ಭಾರತದ ಉದ್ದಗಲಕ್ಕೂ ಅಲೆದು ರಾಮಾನುಜನ್ ಅವರ ಸಾಹಿತ್ಯವನ್ನು ಬಹು ಆಳವಾಗಿ ಅಧ್ಯಯನ ನಡೆಸಿದವರು. ಅದಲ್ಲದೆ ಪ್ರಪಂಚದಾದ್ಯಂತ ರಾಮಾನುಜನ್ ಅವರು ಬೋಧಿಸಿದ ಮತ್ತು ಅವರು ಇದ್ದ ಎಲ್ಲಾ ದೇಶಗಳು ಹಾಗೂ ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿ ಹಲವಾರು ಮಹತ್ತರವಾದ ದಾಖಲೆಗಳನ್ನು ಸಂಗ್ರಹಿಸಿದ್ದಾರೆ. ರಾಮಾನುಜನ್ ಅವರು ಬಹುಶಿಸ್ತಿನ ಅಧ್ಯಯನಕಾರ ಎಂಬುದನ್ನು ಈ ಕೃತಿಯಲ್ಲಿ ಸಮಗ್ರವಾಗಿ ಕಟ್ಟಿಕೊಟ್ಟಿದ್ದಾರೆ. ರಾಮಾನುಜನ್ ಅವರ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳನ್ನೂ ಸಹ ಸಂಗ್ರಹಿಸಿ ಆಳವಾಗಿ ಅಧ್ಯಯನ ನಡೆಸಿ ಮಹಾಪ್ರಬಂಧ ರಚಿಸಿದ್ದಾರೆ. ೨೦೧೬ರಲ್ಲಿ ಈ ಕೃತಿಯನ್ನು ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ಪ್ರಕಟಿಸಿದೆ. ಈ ಕೃತಿಗೆ ಕನ್ನಡದ ಖ್ಯಾತ ನಾಟಕಕಾರ ಗಿರೀಶ್ ಕಾರ್ನಾಡ್ ಅವರು ಮುನ್ನುಡಿಯನ್ನು ಬರೆದಿದ್ದಾರೆ. ಮುನ್ನುಡಿಯಲ್ಲಿ ಪ್ರಾರಂಭದಲ್ಲಿಯೇ ರಾಮಾನುಜನ್ ಅವರನ್ನು ಕುರಿತು: "There is no other figure like A.K.Ramanujan on the intellectual landscape of India" ಎನ್ನುವ ಪ್ರಬುದ್ಧವಾದ ಮಾತುಗಳನ್ನಾಡಿದ್ದಾರೆ. ಇದು ರಾಮಾನುಜನ್ ಭಾರತ ಅಷ್ಟೇ ಅಲ್ಲದೆ ಜಾಗತಿಕ ಮಟ್ಟದ ಬುದ್ಧಿಶಾಲಿ ಎಂಬುದನ್ನು ಅಧಿಕೃತಗೊಳಿಸುತ್ತದೆ.[೩೦]

೨.೩೧. ವಿಚಾರಸಂಕಿರಣಗಳು

ದಿನಾಂಕ ೧೭.೮.೨೦೧೩ರಲ್ಲಿ ಸುಚಿತ್ರಾ ಸಿನಿಮಾ ಅಕಾಡೆಮಿ ನಡೆಸಿದ 'ಸಾಹಿತ್ಯ ಸಂಜೆ' ಕಾರ್ಯಕ್ರಮದಲ್ಲಿ ಪ್ರೊ.ಓ.ಎಲ್.ನಾಗಭೂಷಣಸ್ವಾಮಿ ಅವರು ಎ.ಕೆ.ರಾಮಾನುಜನ್ ಅವರನ್ನು ಕುರಿತ ಉಪನ್ಯಾಸವನ್ನು ನೀಡಿದರು. ನಾಗಭೂಷಣ ಸ್ವಾಮಿ ಅವರು ಈ ಕಾರ್ಯಕ್ರಮದಲ್ಲಿ ರಾಮಾನುಜನ್ ಅವರ ಜೀವನ, ಸಾಹಿತ್ಯ ಮತ್ತು ಸಂಸ್ಕೃತಿಗೆ ಅವರು ನೀಡಿರುವ ಕೊಡುಗೆಯನ್ನು ಸ್ಮರಿಸಿದರು. ಕವನ, ಗದ್ಯ, ಕಾದಂಬರಿ, ಅನುವಾದ ಹೀಗೆ ರಾಮಾನುಜನ್ ಅವರ ಬಹುಮುಖಿ ಚಿಂತನೆಯ ಹಾಗೂ ಸೃಜನಶೀಲ ಸಾಹಿತ್ಯವನ್ನು ಕುರಿತು ಮಾತನಾಡಿದರು. ಅವರು ತಮ್ಮ ಉಪನ್ಯಾಸದಲ್ಲಿ ರಾಮಾನುಜನ್ ಅವರು ೧೯೯೨ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆದ ಭಾಷಾಂತರ ಕಮ್ಮಟಕ್ಕೆ ಬಂದಿದ್ದ ಸಂದರ್ಭವನ್ನು ನೆನಪಿಸಿಕೊಂಡರು. ರಾಮಾನುಜನ್

ಅವರ ಪದ್ಯ ಬುದ್ಧಿಮೂಲವಾದ ಕೆಲಸ ಎಂದು ವಿಮರ್ಶಿಸುತ್ತಾ ಅವರ 'ಅಂಗುಲ ಹುಳುವಿನ ಪರಕಾಯ ಪ್ರವೇಶ' ಎಂಬ ಪದ್ಯವನ್ನು ಓದಿ 'ಮುಖ್ಯಧಾರೆಯ ಹೊರಗಿರುವ ಜನಪದವನ್ನು ಅಮೆರಿಕನ್ನರಿಗೆ, ಪಶ್ಚಿಮದ ಅಳತೆಗೆ ಅಳೆದು ತೋರಿಸಬೇಕು, ಅದಕ್ಕೆ ಅಂಗುಲ ಹುಳ ಆಗಿರಬೇಕು, ರಾಮಾನುಜನ್ ಅವರು ಮಾಡಿದ್ದು ಒಂದು ರೀತಿಯ ಅಂಗುಲ ಹುಳುವಿನ ಕೆಲಸ. ಪಾಶ್ಚಾತ್ಯ ಪಟ್ಟಿಗೆ ಅನುಗುಣವಾಗಿ ಜಾನಪದ, ಅನುವಾದ, ವಚನ ಹೀಗೆ ಎಲ್ಲವನ್ನೂ ಅಳೆದು ತೋರಿಸಿದರು', ಎಂದು ವಿವರಿಸಿದರು.

ದಿನಾಂಕ ೨೮.೧.೨೦೧೫ರಂದು ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ವಿದ್ಯಾಲಯ ಕನ್ನಡ ವಿಭಾಗ, ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ರೀಸರ್ಚ್ ಫೌಂಡೇಶನ್ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ 'ಡಾ.ಎ.ಕೆ.ರಾಮಾನುಜನ್ ಸಾಹಿತ್ಯ ಚಿಂತನೆ' ಎಂಬ ಒಂದು ದಿನದ ವಿಚಾರ ಸಂಕಿರಣ ಏರ್ಪಡಿಸಿ ನಡೆಸಿತು.

ಈ ವಿಚಾರ ಸಂಕಿರಣಕ್ಕೆ ಆಗಮಿಸಿದ್ದ ವಿದ್ವಾಂಸರಾದ ಡಾ. ಬಂಜಗೆರೆ ಜಯಪ್ರಕಾಶ್ ಅವರು ರಾಮಾನುಜನ್ ಅವರ 'ಮುನ್ನೂರು ರಾಮಾಯಣ'ಗಳನ್ನು ಕುರಿತು ಮಾತನಾಡಿದರು. ಪ್ರಪಂಚದ ಹಲವಾರು ದೇಶದಲ್ಲಿ ಪ್ರಚಲಿತವಿರುವ ರಾಮಾಯಣಗಳ ಬಗೆ ಅವರು ಮಾತನಾಡುತ್ತ ಹೇಗೆ ಪ್ರತಿಯೊಂದು ದೇಶದ ರಾಮಾಯಣದಲ್ಲಿಯೂ ರಾಮ, ಸೀತೆ, ಹನುಮಂತ ನಾಯಕ ನಾಯಕಿಯರಾಗಿದ್ದಾರೆ ಎಂದು ಹೇಳಿದರು. ಅಂದು ಪ್ರೊ. ಓ.ಎಲ್.ನಾಗಭೂಷಣ ಸ್ವಾಮಿ ಅವರು ರಾಮಾನುಜನ್ ಅವರ ಅನುವಾದಗಳನ್ನು ಕುರಿತು ಮಾತನಾಡುತ್ತಾ ಕಾವ್ಯ, ವಚನ, ಕಾದಂಬರಿ ಹಾಗೂ ಜಾನಪದವನ್ನು ಅನುವಾದಗಳ ಮೂಲಕ ಜಗತ್ತಿಗೆ ಪರಿಚಯಿಸಿದ ರೀತಿಯ ಬಗ್ಗೆ ತಿಳಿಸಿದರು ಮತ್ತು ಆ ಸಂದರ್ಭದಲ್ಲಿ ರಾಮಾನುಜನ್ ಅವರಿಗೆ ಇದ್ದ ಹಲವಾರು ತೊಡಕುಗಳನ್ನು ಸಹ ವಿವರಿಸಿದರು. ಡಾ.ಹನೂರು ಕೃಷ್ಣಮೂರ್ತಿ ಅವರು ಜಾನಪದಕ್ಕೆ ರಾಮಾನುಜನ್ ಅವರ ಅನನ್ಯ ಕೊಡುಗೆಯನ್ನು ಸ್ಮರಿಸಿದರು. ದೇಸಿ ಮತ್ತು ಮಾರ್ಗ ಎರಡನ್ನೂ ಸೇರಿಸಿ ಹೊಸದೊಂದು ಮಾರ್ಗವನ್ನು ಸೃಷ್ಟಿಸಿದರು ಎಂದು ಅವರು ಹೇಳಿದರು. ರಾಮಾನುಜನ್ ಅವರ ಒಡನಾಟವನ್ನು ಸ್ಮರಿಸುತ್ತಾ ಅವರ ಕ್ಷೇತ್ರಕಾರ್ಯದ ಬಗ್ಗೆ ಇದ್ದ ಕಾಳಜಿಯನ್ನು, ಮಾಹಿತಿಯನ್ನು ಸಂಗ್ರಹಿಸುವ ರೀತಿ ಹಾಗೂ ದಾಖಲಿಸುವ ಕಲೆಯನ್ನು ಹೇಗೆ ಕರಗತ ಮಾಡಿಕೊಂಡಿದ್ದರು ಎಂಬುದನ್ನು ಹನೂರು ತಿಳಿಸಿದರು. ಪ್ರಾಧ್ಯಾಪಕರಾದ ಶ್ರೀ ಟಿ.ಎಲ್ಲಪ್ಪ ಅವರು ರಾಮಾನುಜನ್ ಅವರ ಕಾವ್ಯದ ಬಗ್ಗೆ ಮಾತನಾಡಿದರು; ರಾಮಾನುಜನ್ ಅವರ ಕಾವ್ಯದಲ್ಲಿ ಹಸಿಬಿಸಿ, ಬೇರುಕಿತ್ತ ಪರಕೀಯ ಪ್ರಜ್ಞೆ, ಮುಕ್ತ ಲೈಂಗಿಕ ಚಿಂತನೆ, ಏಕತಾನತೆಯನ್ನು ಮುರಿಯುವುದು, ವೈನೋದಿಕತೆ ಹಾಗೂ ವೈದಿಕ ಪರಂಪರೆಯನ್ನು ಹೊರತುಪಡಿಸಿದ ಹಲವಾರು ವಿಚಾರಗಳನ್ನು ಕಾಣಬಹುದು ಎಂದು ಎಲ್ಲಪ್ಪ ಹೇಳಿದರು. ಜೊತೆಗೆ ರಾಮಾನುಜನ್ ಅವರ

ಕೆಲವು ಕವಿತೆಗಳನ್ನು ಅವರು ವಾಚಿಸಿದರು. ಡಾ.ಕೆ. ಸತ್ಯನಾರಾಯಣ ಅವರು ರಾಮಾನುಜನ್ ಅವರ ಗದ್ಯಪ್ರಕಾರದ ಬಗ್ಗೆ ಮಾತನಾಡಿದರು. ಕಥೆ, ಕಾದಂಬರಿ ಹಾಗೂ ಗಾದೆಗಳನ್ನು ಕುರಿತು ವಿಶೇಷವಾದ ಹಾಗೂ ತಾತ್ವಿಕವಾದ ವಿಚಾರವನ್ನು ಮಂಡಿಸಿದರು. 'ಮತ್ತೊಬ್ಬನ ಆತ್ಮಚರಿತ್ರೆ' ಒಬ್ಬರದಲ್ಲ ಇಬ್ಬರ ಆತ್ಮಕತೆ, ಹಾಗೂ ಎಲ್ಲರ ಆತ್ಮಕತೆ ಎಂದು ಸತ್ಯನಾರಾಯಣ ಅವರು ಹೇಳಿದರು.

ರಾಮಾನುಜನ್ ಬದುಕಿದ್ದಾಗ ಹೇಗೆ ಯಾರಿಗೂ ದಕ್ಕದ, ಆದರೆ ದಕ್ಕಿದ್ದಾರೇನೋ ಎಂಬ ಭ್ರಮೆ ಹುಟ್ಟಿಸುವ ಬಗೆಯನ್ನುಂಟು ಮಾಡಿದ್ದರು. ಅವರ ಸಾಹಿತ್ಯವನ್ನು ಕುರಿತ ಅಧ್ಯಯನಗಳೂ ಕೂಡ ಸಮಗ್ರವಾಗಿ ಆದಾಗ ಅದು ನಾವು ರಾಮಾನುಜನ್ ಅವರಿಗೆ ಒದಗಿಸುವ ನ್ಯಾಯ. ಒಂದು ದೊಡ್ಡ ಸಾಹಿತ್ಯ ಪರಂಪರೆಯಲ್ಲಿ ಅದರ ಚಲನಶೀಲತೆಗೆ ಮೊನಚು ತೀವ್ರತೆ ವೇಗ ಶಕ್ತಿ ಈ ಮುಂತಾದುವನ್ನು ಉಂಟು ಮಾಡಿದ ಕೀರ್ತಿ ರಾಮಾನುಜನ್ ಅವರದು. ಸಹಜವಾಗಿಯೇ ಅವರ ಸಾಹಿತ್ಯದ ಸಾಂಸ್ಕೃತಿಕ ಅನುಸಂಧಾನ ಕೂಡ ಅದೇ ರೀತಿಯದ್ದಾಗಿರಬೇಕಾಗುತ್ತದೆ.

ಹೀಗೆ ರಾಮಾನುಜನ್ ಅವರ ಸಾಹಿತ್ಯದ ಒಂದು ಭಾಗವಾದ ಕಾವ್ಯವನ್ನು ಕುರಿತು ಬಿಡಿಬಿಡಿಯಾದ ಚರ್ಚೆ ನಡೆದಿದೆ. ಅವರ ಕವಿತೆಗಳನ್ನು ಕುರಿತು ಸಾಂದರ್ಭಿಕವಾದ ವಿಮರ್ಶೆಯನ್ನು ಮಾಡಲಾಗಿದೆ. ಇವುಗಳೇನಿದ್ದರೂ ರಾಮಾನುಜನ್‌ರ ಅಧ್ಯಯನದ ಒಂದು ಆಂಶಿಕ ರೂಪ ಮಾತ್ರ. ಒಟ್ಟಾರೆ ರಾಮಾನುಜನ್ ಅವರ ಸಾಹಿತ್ಯ ಹಾಗೂ ಚಿಂತನೆಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದ ಅಧ್ಯಯನಗಳು ಇಲ್ಲ. ಮುಂದಿನ ನನ್ನ ಅಧ್ಯಾಯಗಳಿಗೆ ಈ ಚರ್ಚೆಗಳು ಪೂರಕವಾಗಬಲ್ಲವು ಎಂದು ಭಾವಿಸಿದ್ದೇನೆ. ರಾಮಾನುಜನ್ ಅವರ ಎಲ್ಲಾ ಸೃಜನಶೀಲ ಬರವಣಿಗೆಗಳನ್ನು ಮೂಲ ಪ್ರಾಥಮಿಕ ಆಕರವನ್ನಾಗಿಯೂ (ಪ್ರೈಮರಿ ಸೋರ್ಸ್) ಮತ್ತು ಅವರ ಸಾಹಿತ್ಯವನ್ನು ಕುರಿತು ಬಂದಿರುವ ಇತರೆ ವಿಮರ್ಶೆಗಳನ್ನು ಪೂರಕ ಆನುಷಂಗಿಕ ಆಕರಗಳನ್ನಾಗಿಯೂ (ಸೆಕೆಂಡರಿ ಸೋರ್ಸ್) ಮುಂದಿನ ಅಧ್ಯಾಯಗಳಲ್ಲಿ ಬಳಸಿಕೊಳ್ಳಲಾಗುವುದು.

ಅಡಿಟಿಪ್ಪಣಿ

೧. Indian Poetry in English-A Critical Assessment, Ed.Vasant A Shahane, M.Sivaramakrishna, The Macmillan Company of India Limited, 1980.

೨. Modern Indian Poetry in English, Ed.Bruce King, Oxford Universitry Press, Delhi, Ed.1,1987, Ed.2,1989.

೩. ಎ.ಕೆ.ರಾಮಾನುಜನ್ ಹೆಜ್ಜೆಗುರುತು, ಸಂ.ಡಿ.ವಿ.ಪ್ರಹ್ಲಾದ್, ಎನ್.ಎಸ್. ಶ್ರೀಧರಮೂರ್ತಿ, ಪ್ರ.ಸಂಚಯ, ಬೆಂಗಳೂರು, ೧೯೯೩.

೪. ಎ.ಕೆ.ರಾಮಾನುಜನ್ ನೆನಪಿನ ಸಂಪುಟ, ಸಂ.ಟಿ.ಪಿ.ಅಶೋಕ, ಕರ್ನಾಟಕ ಸಂಘ, ಪುತ್ತೂರು, ೧೯೯೩.

೫. ಪುಸ್ತಕ ಪ್ರೀತಿ–ಎಂಬತ್ತೇಳು ಪುಸ್ತಕಗಳ ಅವಲೋಕನ, ಸಂ.ಟಿ.ಪಿ.ಅಶೋಕ, ವಸಂತ ಪ್ರಕಾಶನ, ಬೆಂಗಳೂರು, ೧೯೯೩, ೨೦೧೦.

೬. ಭಾರತೀಯ ಜನಪದ ಕತೆಗಳು, ಇಪ್ಪತ್ತರಡು ಭಾಷೆಗಳಿಂದ ಆಯ್ದ ಬಾಯ್ಮಾತಿನ ಕತೆಗಳು, ಸಂ.ಎ.ಕೆ.ರಾಮಾನುಜನ್, ಅನು. ಮಹಾಬಲೇಶ್ವರ ರಾವ್, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ಹೊಸ ದೆಹಲಿ, ೨೦೦೦ (Folktales from India- A selection of Oral Tales from Twenty-two Languages, Selected and Edited by A.K.Ramanujan, Penguin Books, New Delhi, 2009.)

೭. Smrti Kinankam, A collecteion of essays on literature and literary personalities by Chekuri Ramarao, Chera Publishers, Hyderabad, 2000.

೮. ಕಥೆ ಮತ್ತು ಹಾಡು, ಇಂಗ್ಲಿಷ್ ಸಂಗ್ರಹ ಮತ್ತು ಸಂಪಾದನೆ: ಎ.ಕೆ.ರಾಮಾನುಜನ್, ಅನು. ಕರೀಗೌಡ ಬೀಚನಹಳ್ಳಿ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೩ (A Flowering Tree - And other oral tales from India : A.K. Ramanujan - Edited with a Preface by - Stuart Blackburn and Alan Dundes, Penguin Books, 1997.)

೯. ಭಾರತೀಯ ಇಂಗ್ಲೀಷ್ ಸಾಹಿತ್ಯ ಚರಿತ್ರೆ, ಲೇ.ಎಂ.ಕೆ.ನಾಯಕ್, ಅನು.ಬಸವರಾಜ ನಾಯ್ಕರ, ಸಾಹಿತ್ಯ ಅಕಾದೆಮಿ, ೨೦೦೫.

೧೦. ನೂರು ಮರ, ನೂರು ಸ್ವರ, ಸಂ.ಕೀರ್ತಿನಾಥ ಕುರ್ತಕೋಟಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೮

೧೧. ಭಾಷೆ ಮತ್ತು ಸಂಸ್ಕೃತಿ, ಕೀರ್ತಿನಾಥ ಕುರ್ತಕೋಟಿ, ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ, ೨೦೦೬, ೨೦೦೮.

೧೨. ಪುಸ್ತಕ ಸಮಯ, ವಿಮರ್ಶೆಯ ಬರಹಗಳು, ಸಂ.ಟಿ.ಪಿ. ಅಶೋಕ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೧೧.

೧೩. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ ೮೧, ಸಂಚಿಕೆ ೧: ಕನ್ನಡ ಸಾಹಿತ್ಯ ಪರಿಷತ್ತು ಸಂ.ಡಾ.ಚಕ್ಕೆರೆ ಶಿವಶಂಕರ, ಪ್ರೊ.ಜಿ.ಅಬ್ದುಲ್ ಬಷೀರ್, ಬೆಂಗಳೂರು, ೨೦೦೩.

೧೪. ಆಡಾಡತ ಆಯುಷ್ಯ(ಆತ್ಮಕಥೆ), ಗಿರೀಶ ಕಾರ್ನಾಡ, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೧.

೧೫. ಆರು ಕವನ ಸಂಕಲನಗಳು, ಸುಮತೀಂದ್ರ ನಾಡಿಗ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೦, ೨೦೧೨.

೧೬. ಕಾವ್ಯ ಪ್ರೀತಿ, ಕನ್ನಡ ಕವಿತೆಗಳನ್ನು ಕುರಿತ ಐವತ್ತು ಲೇಖನಗಳ ಸಂಕಲನ, ಟಿ.ಪಿ.ಅಶೋಕ, ಅಶೋಕ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೧೩.

೧೭. ಎ.ಕೆ.ರಾಮಾನುಜನ್ ಸಮಗ್ರ, ಸಂ.ಎಸ್.ದಿವಾಕರ್, ಡಾ.ರಮಾಕಾಂತ ಜೋಶಿ, ಮನೋಹರ ಗ್ರಂಥಮಾಲಾ, ಧಾರವಾಡ. ೨೦೧೧.

೧೮. ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು, ಅನು.ಓ.ಎಲ್.ನಾಗಭೂಷಣಸ್ವಾಮಿ, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೨.

೧೯. ೪೩ ಕವನಗಳು, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ.

೨೦. ವೃಷ್ಟಿ ಸಮಷ್ಟಿ, ಡಾ.ಕರೀಗೌಡ ಬೀಚನಹಳ್ಳಿ, ಅಜಂತ ಪ್ರಕಾಶನ, ಬೆಂಗಳೂರು, ೧೯೯೨, ೨೦೦೭.

೨೧. ಓಲ್ಗಾ, ವಿಮುಕ್ತ, ತೆಲುಗು ಕಥಾಜಗತ್ತಿನ ಜೊತೆಗೊಂದು ಮಾತುಕಥೆ. ಕನ್ನಡಕ್ಕೆ, ಜಿ.ವೀರಭದ್ರಗೌಡ, ಅಭಿನವ, ಬೆಂಗಳೂರು, ೨೦೧೨.

೨೨. ಪ್ರತಿಭಾ ನಂದಕುಮಾರ್ ಅವರ ಆಯ್ದ ಕವಿತೆಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೭.

೨೩. ಅಕ್ಷರ ಹೊಸ ಕಾವ್ಯ, ಸಂ:ಪಿ.ಲಂಕೇಶ್, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೭೦

೨೪. ಕನ್ನಡ ಸಣ್ಣ ಕಥೆಗಳು, ಸಂ:ಜಿ.ಎಚ್.ನಾಯಕ್, ನ್ಯಾಷನಲ್ ಬುಕ್ ಟ್ರಸ್ಟ್, ಹೊಸ ದೆಹಲಿ, ೧೯೭೮, ೧೯೯೧.

೨೫. Indian Literature, Bi-Monthly Journal(254), Sahitya Akademi, November/ December 2009.

೨೬. ಹೊಸಗನ್ನಡ ಕವಿತೆ, ಸಂ:ಜಿ.ಎಚ್.ನಾಯಕ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫.

೨೭. ಶತಮಾನದ ಕಾವ್ಯ, ಸಂ:ಎಚ್.ಎಸ್.ವೆಂಕಟೇಶಮೂರ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಪ್ರಕಟಣೆ, ೨೦೦೧.

೨೮. ಭಾಷಾಂತರ: ಸೈದ್ಧಾಂತಿಕ ಹಾಗೂ ಆನ್ವಯಿಕ ನೆಲೆಗಳು, ಸಿ.ಎನ್.ರಾಮಚಂದ್ರನ್, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೫.

೨೯. Tribute to Ramanujan, S.G. Vasudev, Galerie De'Arts, Bangalore, July-Aug 9, 2016.

೩೦. When Mirrors are Windows-A View of A.K.Ramanujan's Poetics, Guillermo Rodrigues, Oxford University Press, New Delhi, 2016.

ಅಧ್ಯಾಯ : ಮೂರು

ರಾಮಾನುಜನ್ ಅವರ ಕಾವ್ಯ ಮತ್ತು ಸಾಂಸ್ಕೃತಿಕ ಅನುಸಂಧಾನ

೩.೧ ರಾಮಾನುಜನ್ ಅವರ ಕಾವ್ಯ

೩.೨ ಹೊಕ್ಕುಳಲ್ಲಿ ಹೂವಿಲ್ಲ

೩.೨.೧. ಒಂದು ಕೊಡೆ, ಒಂದು ವಾಚು; ೩.೨.೨ ಅಪ್ಪ, ಮಗ; ೩.೨.೩. ಕಲೆ ಮತ್ತು ಜೀವನ ಸೌಂದರ್ಯ; ೩.೨.೪. ಅದರಲ್ಲಿ ಇದು; ೩.೨.೫. ಪಂಚಭೂತಗಳಲ್ಲಿ ಒಂದು; ೩.೨.೬. ಅಂಗುಲ–ಹುಳುವಿನ ಪರಕಾಯ ಪ್ರವೇಶ; ೩.೨.೭. ಸಹಜ; ೩.೨.೮. ಕೆಲವರ ಪುನರ್ಜನ್ಮ; ೩.೨.೯. ಆ ಹಕ್ಕಿ ಬೇಕಾದರೆ; ೩.೨.೧೦. ಅವಳಿ ಜವಳಿ;

೩.೩. ...ಮತ್ತೂ ಇತರ ಪದ್ಯಗಳು

೩.೩.೧. ಅಲ್ಲ ಇಷ್ಟು ವಯಸ್ಸಾದರೂ ಬೇಕು; ೩.೩.೨. ಇವನು ಹಕ್ಕಿ ನೋಡಿ; ೩.೩.೩. ಮಾತು ಮುಗಿಯುವ ಮೊದಲು; ೩.೩.೪. ಸ್ವಿಟ್ಸರ್ಲೆಂಡಿನ ಮಂಜಿನಲ್ಲಿ; ೩.೩.೫. ಅಮ್ಮ ಎಲ್ಲೋ ಬೆಂಗಳೂರಲ್ಲಿ; ೩.೩.೬. ಮಹಾರಾಜರ ಅರಮನೆ

೩.೪. ಕುಂಟೋಬಿಲ್ಲೆ

೩.೪.೧. ಬ್ರಹ್ಮ ಜ್ಞಾನ ಒಂದು ನಿಶ್ಶಬ್ದ ಸಾನೆಟ್ಟು; ೩.೪.೨. ಕುಂಟೋಬಿಲ್ಲೆ; ೩.೪.೩. ಎರಡು ಕವಿತೆಗಳು; ೩.೪.೪. ಹಳೆಯದೊಂದು ಮತ್ತೆ ಮನೆ ಬಂದಾಗ; ೩.೪.೫. ತಿಳಿಯದ ಬಗ್ಗಡ; ೩.೪.೬. ಪಕ್ಕದ ಮನೆಯಲ್ಲಿ ಉಪನಿಷತ್ತು; ೩.೪.೭. ಅಪ್ರಕಟಿತ ಕಾವ್ಯ

ಅಧ್ಯಾಯ : ಮೂರು

ಎ.ಕೆ. ರಾಮಾನುಜನ್ ಅವರ ಕಾವ್ಯ ಮತ್ತು ಸಾಂಸ್ಕೃತಿಕ ಅನುಸಂಧಾನ

I write in both languages(English and Kannada), but I have not written much in Kannada. The last thing I did was a short novel in Kannada. It is called in Kannada *'Another Man's Autobiography'*. In 1961 I wrote *Hokkulalli Huvilla*, which literally means "no lotus in the navel." It is taken from a sixteenth century Kannada work about Padmanabha. When Drupadi sees Krishna, she says in Kannada *hokkulalli huvilla*. I was very taken with the way the absence of the lotus was put into Kannada. You see, that is the theme, no longer mythical, the presence of a god without a lotus. It is particularly good because it was a kind of entirely mythic character being ordinary. Putting it into Kannada was the right thing to have done. My book of poems is about demythologization, so I made it *Hokulalli huvilla*. It is also about the presence of whatever one calls "divine" in our ordinary life, that is, the experience that is slightly different from it."[1]

೧೯೮೨ರಲ್ಲಿ ಚಿಕಾಗೋದಲ್ಲಿ ಅಯ್ಯಪ್ಪ ಪಣಿಕ್ಕರ್ ಅವರು ಎ.ಕೆ.ರಾಮಾನುಜನ್ ಅವರನ್ನು "ನೀವು ಈಗಲೂ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಯಲ್ಲಿಯೂ ಬರೆಯುತ್ತೀರಾ?"

(Do you still write in both languages(English and Kannada)?) ಎಂದು ಕೇಳಿದ ಪ್ರಶ್ನೆಗೆ ರಾಮಾನುಜನ್ ಅವರು ಕೊಟ್ಟ ಮೇಲಿನ ಉತ್ತರ ಇದಾಗಿದೆ. ಅವರ ಈ ಸಂದರ್ಶನದಲ್ಲಿ ರಾಮಾನುಜನ್ ಅವರು ಕನ್ನಡದಲ್ಲಿ ನಾನು ಹೆಚ್ಚಿಗೆ ಬರೆದಿಲ್ಲ ಎಂದು ಹೇಳಿದರೂ ಅವರು ಬರೆದಿರುವ ಕನ್ನಡದ ಬರಹಗಳು ತುಂಬಾ ಮೌಲಿಕವಾಗಿವೆ. ರಾಮಾನುಜನ್ ಅವರು ಮೊದಲು ಬರೆಯುವುದನ್ನು ಶುರು ಮಾಡಿದ್ದು, ಇಂಗ್ಲಿಷಿನಲ್ಲಿಯೇ. ೧೯೫೫ರಲ್ಲಿ ಅವರು ಬರೆದ ಇಂಗ್ಲಿಷ್ ಕವಿತೆ(The Illustrated Weekly) ಪ್ರಕಟವಾದಂತಹದ್ದು. ಅವರು ಅಮೆರಿಕಾಕ್ಕೆ ಹೋದ ಮೇಲೆಯೇ ಕನ್ನಡದ ಕವಿತೆಗಳನ್ನು ರಚಿಸಿದ್ದು. ಅದರ ಜೊತೆ ಜೊತೆಗೇ ಇಂಗ್ಲಿಷ್ ಕವಿತೆಗಳನ್ನು ಬರೆದದ್ದು. ಕನ್ನಡ, ಕವಿತೆ, ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಗಹನವಾಗಿ ವಿಚಾರ ಮಾಡಿದ್ದು. ಪುರಾಣ ಕಲ್ಪನೆಗಳನ್ನು ಛಿದ್ರಗೊಳಿಸಿ ಹೊಸ ಪುರಾಣಗಳನ್ನು ಹೊಸ ಕಾಲದ ಆವಶ್ಯಕತೆಗಳಿಗೆ ಅನುಗುಣವಾಗಿ ಕಾವ್ಯವನ್ನು ಕಟ್ಟಬೇಕೆಂಬ ಕಲಾತ್ಮಕವಾದ ಹಟ, ಛಲ ಅವರ ಇಲ್ಲಿನ ಮಾತುಗಳಲ್ಲಿ ಕಂಡುಬರುತ್ತದೆ. ಅದಕ್ಕೆ ಅನುಗುಣವಾಗಿಯೇ ಅವರು ತಮ್ಮ ಈ ಚಿಂತನೆಗೆ ಕಾವ್ಯವನ್ನು ಅಭಿವ್ಯಕ್ತಿ ಮಾಧ್ಯಮವನ್ನಾಗಿ ದುಡಿಸಿಕೊಂಡಿದ್ದಾರೆ. ತಮ್ಮ ಇದೇ ಸಂದರ್ಶನದಲ್ಲಿ ಅಯ್ಯಪ್ಪ ಪಣಿಕ್ಕರ್ ಅವರು 'ಕಾವ್ಯವೆನ್ನುವುದು ಭಾಷೆ ಅಥವಾ ಸಂಸ್ಕೃತಿಯ ಭಾಗವೇ?'(Is poetry part of language or culture?) ಎಂದು ಕೇಳುವ ಪ್ರಶ್ನೆಗೆ ರಾಮಾನುಜನ್ ಅವರು ಕೊಡುವ ಉತ್ತರ:

> "I think it's somewhere between the two. You use a language to express a culture. Culture is also like a language; culture is exactly like a second language, exactly signifiers, or the things that express elements. The expressive elements are not necessarily words in a culture; they can be clothing, they can be certain kinds of ideas, motifs, mythological things, certain conceptions of characters, these are all parts of our language, but language not in the original linguistic sense. Because it's between the two of them that we get our entire repertoire of expression, between language and culture"[2]

ರಾಮಾನುಜನ್ ಅವರು ಸಂಸ್ಕೃತಿಯ ಅಭಿವ್ಯಕ್ತಿಗೆ ಭಾಷೆ ಅನಿವಾರ್ಯ, ಜೊತೆಗೆ ಸಂಸ್ಕೃತಿಯೇ ಭಾಷೆಯೂ ಹೌದು ಎಂದು ಹೇಳುತ್ತಾರೆ. ಜೊತೆಗೆ ಕಾವ್ಯದ ಅಭಿವ್ಯಕ್ತಿಗೆ ಭಾಷೆ ಮತ್ತು ಸಂಸ್ಕೃತಿ ಇವುಗಳೆರಡರ ಸಂಬಂಧ ಬಹಳ ಮುಖ್ಯ ಎಂದು ಅವರು ಒಪ್ಪಿಕೊಳ್ಳುತ್ತಾರೆ. ಪಣಿಕ್ಕರ್ ಅವರು 'ಕನ್ನಡ ನಿಮ್ಮ ಮಾತೃಭಾಷೆ ಅಲ್ಲ ಅಲ್ಲವೇ?' ಎಂದು ಕೇಳುವ ಮತ್ತೊಂದು

ಪ್ರಶ್ನೆಗೆ ರಾಮಾನುಜನ್ ಅವರು ಕೊಡುವ ಉತ್ತರ 'ಅದು ನಿಜವಾಗಿಯೂ ನನಗೆ ಸಮಸ್ಯೆ ನಿಜ. ತಮಿಳು ನನ್ನ ಮಾತೃಭಾಷೆ, ಕನ್ನಡ ನನ್ನ ಪ್ರಾದೇಶಿಕ ಭಾಷೆ, ಜೊತೆಗೆ ಅದು ನನ್ನ ಬಾಲ್ಯದ ಭಾಷೆಯೂ ಹೌದು' ಎಂದು ಹೇಳುತ್ತಾರೆ. ಕತೆ ಮತ್ತು ಕವಿತೆಯ ನಡುವೆ ಅಂತಹ ವ್ಯತ್ಯಾಸವೇನೂ ಇಲ್ಲ. ಕತೆ ಕೂಡ ಕಾವ್ಯಕ್ಕೆ ಸಮಾನವಾದದ್ದು ಎಂಬುದು ರಾಮಾನುಜನ್ ಅವರ ನಿಲುವು. ರಾಮಾನುಜನ್ ಅವರ ಈ ವಿಚಾರಗಳು ಅವರ ಕಾವ್ಯವನ್ನು ಅರ್ಥ ಮಾಡಿಕೊಳ್ಳಲು ಮತ್ತು ಅವರ ಚಿಂತನೆಗಳನ್ನು ಅರ್ಥೈಸಿಕೊಳ್ಳಲು ಸಹಕಾರಿಯಾಗಬಲ್ಲವು.

ಕನ್ನಡದ ಮತ್ತು ಭಾರತದ ಹಾಗೂ ಭಾರತದಾಚೆಗಿನ ಸಾಹಿತ್ಯಕಾರರಲ್ಲಿ ಚಿರಸ್ಥಾಯಿಯಾಗಿ ಉಳಿಯುವ ಹೆಸರು ಎ.ಕೆ.ರಾಮಾನುಜನ್ ಅವರದು. ಅವರ ಸಮಕಾಲೀನ ಸಾಹಿತ್ಯ ರಚನೆಕಾರರಿಗೆ ಹೋಲಿಸಿದರೆ ಇವರು ಅವರುಗಳಷ್ಟು ಹೆಚ್ಚಿಗೆ ಬರೆದವರಲ್ಲ ನಿಜ; ಆದರೆ ಇವರು ಬರೆದ ಎಲ್ಲ ಬರಹಗಳ ವಸ್ತುವಿಷಯಗಳು ಬಹಳ ಗಂಭೀರ ಹಾಗೂ ಹೆಚ್ಚು ಚರ್ಚಾರ್ಹ ವಿಷಯಗಳಾಗಿವೆ. ಬಹುಭಾಷೆಯ ಮತ್ತು ಬಹುಸಂಸ್ಕೃತಿಯ ಇವರ ಒಡನಾಟ ಮತ್ತು ತಮಿಳು, ಕನ್ನಡ, ಇಂಗ್ಲಿಷ್ ಭಾಷೆಯ ಉತ್ತಮ ತಿಳುವಳಿಕೆ ಹಾಗೂ ಪ್ರೌಢಿಮೆ ಇವರ ಬರಹದ ಆಳವನ್ನು, ಗಾಂಭೀರ್ಯವನ್ನು ಪ್ರತಿಫಲಿಸುತ್ತವೆ.

ರಾಮಾನುಜನ್ ಮತ್ತು ಅವರ ಸಮಕಾಲಿನ ಭಾರತೀಯ ಸಾಹಿತಿಗಳು ಮೊದಲು ಬರೆಯಲು ಪ್ರಾರಂಭಿಸಿದ್ದು ಇಂಗ್ಲಿಷಿನಲ್ಲೇ ಎಂದು ಹೇಳುವುದರ ಜೊತೆಗೆ ತಮ್ಮ ಮಾತೃಭಾಷೆಯಲ್ಲಿ ಬರೆದದ್ದು ಬಹಳ ಕಡಿಮೆ ಎಂದು ಎಸ್. ದಿವಾಕರ್ ಅವರು ಅಭಿಪ್ರಾಯ ಪಡುತ್ತಾ ಈ ಕೆಳಗಿನ ಮಾತನ್ನು ಹೇಳಿದ್ದಾರೆ:

> "ಇನ್ನೊಬ್ಬರು ಅದ್ವಿತೀಯ ಭಾಷಾವಿಜ್ಞಾನಿ, ವಿದ್ವಾಂಸ, ಭಾಷಾಂತರಕಾರ ಪ್ರೊ. ಎ.ಕೆ.ರಾಮಾನುಜನ್. ಕನ್ನಡ ಕಾವ್ಯಕ್ಕೆ ಹೊಸ ನೀರು ಹಾಯಿಸಿದ ಈ ಪ್ರತಿಭಾವಂತ ಕವಿ ಕನ್ನಡದಲ್ಲಿ ಬರೆದದ್ದು ಕೆಲವು ಕವನ ಸಂಕಲನಗಳು, ನಾಲ್ಕು ಸಣ್ಣಕತೆಗಳು, ಒಂದು ಕಾದಂಬರಿ, ಕೆಲವು ರೇಡಿಯೋ ನಾಟಕಗಳು ಮತ್ತು ಗಾದೆಗಳನ್ನು ಕುರಿತ ಒಂದು ಪುಸ್ತಕ, ಇಷ್ಟೆ. ಆದರೆ ಅವರು ತಮ್ಮ ಆಳವಾದ ಆಧ್ಯಯನದಿಂದ, ಅಪೂರ್ವ ಒಳನೋಟಗಳಿಂದ ಭಾರತೀಯ ಚಿಂತನಾಕ್ರಮವನ್ನೇ ಬದಲಾಯಿಸುವಂಥ ಸಂಶೋಧನ ಪ್ರಬಂಧಗಳನ್ನು ಬರೆದದ್ದು ಇಂಗ್ಲೀಷಿನಲ್ಲಿ."[೩]

ಭಾರತೀಯ ಚಿಂತನಾಕ್ರಮದಲ್ಲಿ ಹೊಸ ತಿಳಿವಳಿಕೆಯನ್ನು, ಅನನ್ಯತೆಯನ್ನು ಹುಟ್ಟುಹಾಕಿದ ಚಿಂತಕ. ಇವರ ಈ ಬಗೆಯ ವಿಶಿಷ್ಟ ಸಂಶೋಧನ ಪ್ರಬಂಧಗಳನ್ನು ಕುರಿತು ಮುಂದಿನ ಅಧ್ಯಾಯವೊಂದರಲ್ಲಿ ದೀರ್ಘವಾಗಿ ಚರ್ಚಿಸಲಾಗುವುದು.

೩.೧. ರಾಮಾನುಜನ್ ಅವರ ಕಾವ್ಯ

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ನವ್ಯ ಪಂಥದ ಚಳುವಳಿಯು ಕನ್ನಡ ಸಾಹಿತ್ಯಕ್ಕೆ ಜರೂರಾಗಿ ಅಗತ್ಯವಿದ್ದ ಚಿಕಿತ್ಸಕ ಮನೋಧರ್ಮ, ಆತ್ಮನಿರೀಕ್ಷಣೆ, ಹಿಂದಿನ ಪಂಥಗಳನ್ನು ಕುರಿತ ನಿಷ್ಠುರ ವಿಮರ್ಶೆ, ವ್ಯಾಪಕವಾದ ಓದು ಇವನ್ನೆಲ್ಲಾ ಕಲಿಸಿಕೊಟ್ಟಿತು. ಗೋಪಾಲಕೃಷ್ಣ ಅಡಿಗ, ರಾಮಾನುಜನ್, ಚಂದ್ರಶೇಖರ ಕಂಬಾರ, ಯು.ಆರ್.ಅನಂತಮೂರ್ತಿ, ಪಿ.ಲಂಕೇಶ್, ಯಶವಂತ ಚಿತ್ತಾಲ ಮುಂತಾದವರ ಓದಿನ ವ್ಯಾಪ್ತಿಯನ್ನು ಗಮನಿಸಿದರೆ ಇದು ಅರ್ಥವಾದೀತು. ಜೊತೆಗೆ ಪಾಶ್ಚಾತ್ಯ ದೇಶಗಳಲ್ಲಿ ಆ ಕಾಲಘಟ್ಟಕ್ಕೆ ಆಗಿಹೋಗಿದ್ದ 'ಮಾಡ್ರನ್ ಲಿಟರೇಚರ್'ನ ಪರಿಕಲ್ಪನೆಗಳನ್ನು ಕನ್ನಡ ಸಾಹಿತ್ಯಕ್ಕೆ ನಿಧಾನವಾಗಿ ಬಿಟ್ಟುಕೊಳ್ಳಲಾಯಿತು. ಯೂಂಗ್‌ನ ಮನೋವಿಜ್ಞಾನದ ಸಿದ್ಧಾಂತಗಳು, ಯುರೋಪಿನಲ್ಲಾದ ಕೈಗಾರಿಕಾ ಕ್ರಾಂತಿಯ ಪರಿಣಾಮಗಳು, ವಿಶ್ವ ಮಹಾಯುದ್ಧದಿಂದ ಉಂಟಾದ ಬಿಕ್ಕಟ್ಟುಗಳು, ಹಿಂದಿನ ಸಾಹಿತ್ಯ ಪಂಥಗಳಲ್ಲಿ ಅಂತರ್ಗತವಾಗಿದ್ದ ಪೊಳ್ಳುತನ, ರಮ್ಯವಾದ ಇವುಗಳನ್ನೆಲ್ಲಾ ಪ್ರಶ್ನಿಸುವ ಈ ಹಿನ್ನೆಲೆಯಲ್ಲಿ ಕನ್ನಡದಲ್ಲಿ ನವ್ಯಸಾಹಿತ್ಯ ಹುಟ್ಟಿಕೊಂಡಿತು. ಹೀಗಾಗಿ ಅಡಿಗರ ನೇತೃತ್ವದಲ್ಲಿ ನವ್ಯ ಸಾಹಿತ್ಯದಲ್ಲಿ ಒಂದು ಹೊಸ ಗಾಳಿ ಬೀಸಿತು. ನವ್ಯ ಲೇಖಕರಲ್ಲಿ ಕಂಡುಬಂದ ತೀಕ್ಷ್ಣವಾದ ಪ್ರತಿಕ್ರಿಯೆ, ಆತ್ಮಶೋಧನೆ ವಿಸ್ಮಯವನ್ನುಂಟುಮಾಡುತ್ತದೆ. ಅಡಿಗರ 'ಪ್ರಾರ್ಥನೆ' ಪದ್ಯ ಕನ್ನಡ ಸಾಂಪ್ರದಾಯಕ ಓದುಗರಲ್ಲಿ ಗಾಬರಿಯನ್ನೂ ಹೊಸ ತಲೆಮಾರಿನ ವಾಚಕರಲ್ಲಿ ವಿದ್ಯುತ್ ಸಂಚಲನವನ್ನೂ ಮೂಡಿಸಿತು. ಈ ಹಿನ್ನೆಲೆಯೊಳಗೆ ರಾಮಾನುಜನ್ ಅವರ 'ಹೊಕ್ಕುಳಲ್ಲಿ ಹೂವಿಲ್ಲ' ಕವನ ಸಂಕಲನ ಪ್ರಾಮುಖ್ಯತೆಯನ್ನು ಪಡೆದಿದೆ. ಪುರಾಣದ ಪರಿಕಲ್ಪನೆಯನ್ನು ಮರುಮೌಲ್ಯಮಾಪನ ಮಾಡಿದ ಕಾವ್ಯ ಇದು.

೧೯೬೦ರ ದಶಕದ ಕೊನೆಯಲ್ಲಿ ಕನ್ನಡ ನವ್ಯಕಾವ್ಯ ವಿಕಾಸದ ಹಂತದಲ್ಲಿದ್ದಾಗ, ಗೋಪಾಲಕೃಷ್ಣ ಅಡಿಗರ ನೇತೃತ್ವದಲ್ಲಿ ಪಿ.ಲಂಕೇಶ್, ಯು.ಆರ್.ಅನಂತಮೂರ್ತಿ, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಶಂಕರ ಮೊಕಾಶಿ ಪುಣೇಕರ ಮುಂತಾದವರ ಒಂದು ಯುವ ಸಾಹಿತಿಗಳ ಪಡೆ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಒಂದು ಹೊಸ ಸಂಚಲನವನ್ನು ಉಂಟುಮಾಡಿತು. ಈ ಎಂಟು–ಹತ್ತು ಯುವ ಲೇಖಕರಿಗಿಂತ ಭಿನ್ನವಾದ ಹೊಸ ದನಿಯೊಂದು ತನ್ನ ಅನನ್ಯತೆಯಿಂದಾಗಿ ಕನ್ನಡ ಓದುಗರ ಗಮನ ಸೆಳೆಯಿತು. ಅದೇಂದರೆ ಕರ್ನಾಟಕದಿಂದ ದೂರದ ಅಮೆರಿಕದಲ್ಲಿದ್ದ ಎ.ಕೆ.ರಾಮಾನುಜನ್ ಅವರ ದನಿ. ೧೯೬೯ರಲ್ಲಿ ಅವರ 'ಹೊಕ್ಕುಳಲ್ಲಿ ಹೂವಿಲ್ಲ' ಎಂಬ ಅಸಾಧಾರಣವಾದ ಕವಿತಾ ಸಂಕಲನ ಪ್ರಕಟಗೊಂಡು ಸಾಹಿತ್ಯಾಸಕ್ತರ ಗಮನವನ್ನು ಸೆಳೆಯಿತು. ಇದು ಕನ್ನಡ ಸಂಸ್ಕೃತಿಯಲ್ಲಿ ಹೊಸ ಅನುಸಂಧಾನವನ್ನು ಹುಟ್ಟುಹಾಕಿತು.

ಮೇಲಿನ ಎಲ್ಲಾ ಕವಿಗಳಿಗಿಂತ ವಸ್ತು, ಅಭಿವ್ಯಕ್ತಿ ಕ್ರಮ, ಮನೋಧರ್ಮ, ಪುರಾಣವನ್ನು ಒಡೆದು ಕಟ್ಟುವ ಹೊಸ ಸೃಷ್ಟಿ, ಭಾಷೆಯನ್ನು ಮುರಿದು ಕಟ್ಟುವ ಹೊಸ ರೀತಿಯ ಲಯ

– ಈ ಎಲ್ಲಾ ಅಂಶಗಳಲ್ಲೂ ಒಂದು ಹೊಸ ತಾಜಾತನದಿಂದ ಕಂಗೊಳಿಸುತ್ತಿದ್ದ ಕವನ ಸಂಕಲನ ಇದು. ಸುಮಾರು ಐದು ವರ್ಷಗಳ ಕಾಲ ಸಾಹಿತ್ಯಾಸಕ್ತರಲ್ಲಿ, ವಿಚಾರ ಸಂಕಿರಣಗಳಲ್ಲಿ, ಸಾಹಿತ್ಯ ಪತ್ರಿಕೆಗಳಲ್ಲಿ ಗಂಬೀರವಾಗಿ ಚರ್ಚೆಗೊಳಗಾದ ಒಂದು ಮಹತ್ವದ ಸಂಕಲನ ಇದು.

೩.೨. ಹೊಕ್ಕುಳಲ್ಲಿ ಹೂವಿಲ್ಲ

ಶೀರ್ಷಿಕೆಯನ್ನು ಕುರಿತು: ಸುಮಾರು ನಾಲ್ಕುವರೆ ದಶಕಗಳ ಹಿಂದೆ ಈ ಹೆಸರು ಕನ್ನಡ ಸಾಹಿತ್ಯಾಸಕ್ತರಲ್ಲಿ ಒಂದು ಸಂಚಲನದ ಅಲೆಗಳನ್ನು ಮೂಡಿಸಿದ್ದು ನಿಜ. ಕನ್ನಡ ಸಾಹಿತ್ಯ ಪರಂಪರೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದವರಿಗೆ ಅದರೊಳಗೆ ಪ್ರಧಾನಧಾರೆಯಾಗಿ ಸನಾತನ ಧರ್ಮದೊಳಗಿನ ಬೇರೆ ಬೇರೆ ಪ್ರಕಾರಗಳು ಪ್ರಧಾನವಾಗಿ ಸೇರಿಕೊಂಡಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಕನ್ನಡದ ಎರಡು ಶ್ರೇಷ್ಠ ಕಾವ್ಯಗಳಾದ ಪಂಪನ 'ವಿಕ್ರಮಾರ್ಜುನ ವಿಜಯಂ' ಮತ್ತು ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾಮಂಜರಿ' – ಈ ಎರಡರಲ್ಲಿಯೂ ಸಾಕಷ್ಟು ಪ್ರಮಾಣದಲ್ಲಿ ಕೃಷ್ಣನ ಪಾತ್ರ ಬರುತ್ತದೆ. ಕೃಷ್ಣ ದಶಾವತಾರಗಳಲ್ಲಿ ಪ್ರಧಾನ ವ್ಯಕ್ತಿ. ಸನಾತನಧರ್ಮದ ಒಳಗೆ ದಶಾವತಾರದ ಪರಿಕಲ್ಪನೆ ಕೇಂದ್ರಬಿಂದು. ಕೃಷ್ಣನನ್ನು ಪಂಪನು 'ಕಮಲನಾಭ' ಎಂದು ಹೇಳಿದ್ದರೆ, ಕುಮಾರವ್ಯಾಸನು 'ಪೊಡೆಯಲರಾತ' ಎಂದು ನಿರ್ದೇಶಿಸುತ್ತಾನೆ. 'ಪೊಡೆಯಲರಾತ' ಶಬ್ದವನ್ನು ವಿಗ್ರಹವಾಕ್ಯ ಮಾಡಿದರೆ ಪೊಡೆ+ಅಲರ್+ಆತ ಎಂದಾಗುತ್ತದೆ. ಪೊಡೆ ಎಂದರೆ ಹೊಟ್ಟೆ ಅರ್ಥಾತ್ ಹೊಕ್ಕುಳು, ಅಲರ್ ಎಂದರೆ ಹೂ. ಕುಮಾರವ್ಯಾಸನ ಈ ಪರಿಕಲ್ಪನೆ – ಹೊಕ್ಕುಳಲ್ಲಿ ಹೂವುಳ್ಳಾತ = ಕೃಷ್ಣ – ಇದು ಭಾರತೀಯರ ಮನಸ್ಸಿನಲ್ಲಿ ಅಚ್ಚಳಿಯದೆ ಕೂತಿರುವ ಚಿತ್ರ. ರಾಮಾನುಜನ್ ಅವರು ೬೦ರ ದಶಕದಲ್ಲಿ ಇದ್ದಕ್ಕಿದಂತೆ ಹಠತ್ತಾಗಿ ಕೃಷ್ಣನನ್ನು ಕುರಿತ ಈ ಸುಂದರ ಕಲ್ಪನೆಗೆ ಪ್ರತಿರೋಧವಾಗಿ ಈ ಪರಿಕಲ್ಪನೆಯನ್ನು ಮುರಿದು ತದ್ವಿರುದ್ಧವಾದ 'ಹೊಕ್ಕುಳಲ್ಲಿ ಹೂವಿಲ್ಲ' ಎಂಬ ಹೊಸ ಪ್ರತಿಪರಿಕಲ್ಪನೆಯೊಂದನ್ನು ಕಟ್ಟಿಕೊಟ್ಟು ನವೋದಯ ಕಾಲ ಸಂದರ್ಭದ ಸಹೃದಯ ಸಮೂಹವು ಬೆಚ್ಚಿಬೀಳುವಂತೆ ಮಾಡಿದರು.

ಈ ಸಂಕಲನದಲ್ಲಿ ವಿಶೇಷವಾಗಿ ಗುರುತಿಸಬೇಕಾದ ಸಂಗತಿಯೊಂದಿದೆ: ಅದೆಂದರೆ ೪೦ ಕವಿತೆಗಳಿರುವ ಈ ಸಂಕಲನದಲ್ಲಿ 'ಹೊಕ್ಕುಳಲ್ಲಿ ಹೂವಿಲ್ಲ' ಎಂಬ ಶೀರ್ಷಿಕೆಯ ಕವಿತೆಯೇ ಇಲ್ಲದಿರುವುದು ಮತ್ತು ಎಲ್ಲಿಯೂ ಈ ಪದ ಬಳಕೆಯಾಗದೇ ಇರುವುದು. ಅಷ್ಟೇ ಅಲ್ಲ ಕೃಷ್ಣನಿಗೆ ಸಂಬಂಧಿಸಿದ ಯಾವುದೇ ಮನೋಧರ್ಮದ ಕವಿತೆಯು ನಾಪತ್ತೆಯಾಗಿರುವುದು. ಇದು ಬಹುಶಃ ಆಧುನಿಕ ಕನ್ನಡ ಸಾಹಿತ್ಯದ ಆಶ್ಚರ್ಯಗಳಲ್ಲಿ ಒಂದು. ಅಷ್ಟೇ ಅಲ್ಲ 'ಸಹಜ' ಎಂಬ ಕವಿತೆಯಲ್ಲಿ ಹೋಮ ಹವನಾದಿಗಳ ಪರಿಭಾಷೆಯನ್ನು ಬಳಸಿ ದುಡಿಯುವ ಜನರ ದಿನನಿತ್ಯದ ಬದುಕಿನ ಪ್ರತಿಯೊಂದು ಚಟುವಟಿಕೆಗಳನ್ನು ಆಧ್ಯಾತ್ಮಿಕ ಅಂಶಗಳನ್ನು ಒಳಗೊಂಡಂತೆ ಅನನ್ಯ ರೀತಿಯಲ್ಲಿ ಕಾವ್ಯಾತ್ಮಕವಾಗಿ ನಿರೂಪಿಸಿರುವುದು ಇಲ್ಲಿ ಒಂದು ವಿಶೇಷ. ಇದು

ವಾಸ್ತವವಾಗಿ ಶಂಕರ ಪ್ರಣೀತ ಅದ್ವೈತದ ಪರಿಕಲ್ಪನೆಗೆ ಪರ್ಯಾಯವಾದ ಪ್ರತಿರೋಧ. ಕುತೂಹಲಕಾರಿಯಾದ ಅಂಶವೆಂದರೆ ನಂತರದ ತಲೆಮಾರಿನ ಕನ್ನಡದ ಬಂಡಾಯ ಕವಿಗಳಲ್ಲೊಬ್ಬರಾದ ರಂಜಾನ್ ದರ್ಗಾ ಅವರು ತಮ್ಮ ಕವನಸಂಕಲನವೊಂದಕ್ಕೆ 'ಹೊಕ್ಕುಳಲ್ಲಿ ಹೂವಿದೆ' ಎಂದು ಹೆಸರಿಟ್ಟಿರುವುದು. ಇದು ರಾಮಾನುಜನ್ನರ ಕಾವ್ಯದ ಅನನ್ಯತೆಯ ಮುಂದುವರಿಕೆಗೆ ನಿದರ್ಶನ.

ಒಟ್ಟು ಈ ಸಂಕಲನ ಹೀಗೆ ವೈದಿಕಧರ್ಮದ ಪ್ರಧಾನಧಾರೆಗೆ ತಣ್ಣಗೆ ಪ್ರತಿರೋಧವನ್ನು ತೋರುತ್ತ, ಪರ್ಯಾಯ ಸಂಸ್ಕೃತಿಯನ್ನು ಹೊಸ ರೀತಿಯಲ್ಲಿ ಕಟ್ಟಿಕೊಡುವ, ಸ್ಥಾಪಿತ ಮೌಲ್ಯಗಳನ್ನು ಪ್ರಶ್ನಿಸುವ ಕ್ರಮದಲ್ಲಿದೆ. ಆದ್ದರಿಂದಲೇ ಕೆಲವರು ರಾಮಾನುಜನ್ ಅವರನ್ನು 'ನವ್ಯದೊಳಗಿನ ಬಂಡಾಯ ಕವಿ' ಎನ್ನುವುದು. ಇಷ್ಟಾದರೂ ರಾಮಾನುಜನ್ ಭಾರತೀಯತೆಯನ್ನು ಒಳಗೊಳ್ಳದ ಕವಿ ಎಂದು ಹೇಳಲಾಗುವುದಿಲ್ಲ. ಏಕೆಂದರೆ ಅವರು–

ನೂರಾರು
ಶ್ಲೋಕ ಷಟ್ಪದಿ ವೃತ್ತ
ಗಳ ನಡುವೆ
ಕಡೆಗೂ
ಕಂಡಿತು

ಚಿಗುರು
ಮಾವಿನೆಲೆ
ಮೂರು

ಎಂಬ ಸಾಲುಗಳನ್ನು ಪ್ರಸ್ತಾಪಿಸುತ್ತಾರೆ, ಇಲ್ಲಿ ಮಾವಿನೆಲೆ, ಎಂಥಾ ಮಾವಿನೆಲೆ, ಎಷ್ಟು ಮಾವಿನೆಲೆ, ಎಂದು ಲೆಕ್ಕಾಚಾರ ಹಾಕಿದಾಗ ನೂರಾರು ಮತ್ತು ಮೂರುಗಳ ಮುಖಾಮುಖಿ ತಟಕ್ಕನೆ ವಿಭಿನ್ನ ಕಾಲಮಾನಗಳ ಅಂತರವನ್ನು ಅತ್ಯದ್ಭುತವಾದ ರೀತಿಯಲ್ಲಿ ಪ್ರಕಟಿಸುತ್ತದೆ.

ಇದರ ಬಗ್ಗೆ ಪಿ.ಲಂಕೇಶ್ ಅವರು–

> "ಇಲ್ಲಿ ಒಂದು ಸ್ಥಿತಿಯನ್ನು ವಿವರಿಸುವುದರ ಜೊತೆಗೆ ಮೌಲ್ಯದ ಮೇಲೂ ಒತ್ತು ಬೀಳುತ್ತದೆ; ಯಾವುದು ಮುಖ್ಯ, ಯಾವುದು ಅಮುಖ್ಯ ಎಂಬುದೂ ಖಚಿತವಾಗುತ್ತದೆ. ಈ ಕೆಲಸ ಮಾಡಲು ರಾಮಾನುಜನ್ ಅವರು ತೆಗೆದುಕೊಳ್ಳುವ ಧೋರಣೆಯೂ ಗಮನಕ್ಕೆ ಯೋಗ್ಯ. ಇದು ಸಂಯಮದ್ದು ಮತ್ತು ತಿಳಿಹಾಸ್ಯದ್ದು. ಪ್ರತಿಯೊಂದು ಮಾತನ್ನು ಎಚ್ಚರದಿಂದ ಬಳಸುವಾಗಲೂ ರಾಮಾನುಜನ್ ಅವರ ತುಟಿಯ ಮೇಲೆ ನಗೆ ಇದೆ; ಶ್ಲೋಕ ಷಟ್ಪದಿ ವೃತ್ತ ಬಳಸುವ ಭರದಲ್ಲಿ ಯಾವ

ಜೀವವೂ ಬೆಳೆಯಗೊಡದ ಜನರು ಮಾಡಿದ ತಪ್ಪನ್ನೇ ಅದೇ ಮಾತು, ಮಾತಿನ ಮತ್ತಿನಲ್ಲಿ ತಾವೂ ಮಾಡಬಾರದೆಂಬ ಎಚ್ಚರವಿದೆ. ಜೊತೆಗೆ, ಈ ವೈಜ್ಞಾನಿಕ ಯುಗದಲ್ಲಿ ಹೇಳುವುದನ್ನು ಸಂಭಾವ್ಯ, ನಿಜ ಎಂದು ನಂಬಿಸಲು ನೇರ, ಖಚಿತ ರೀತಿಯೇ ಸರಿಯೆಂಬ ತಿಳಿವಳಿಕೆ ಇದೆ"೪

ಎಂಬ ನಿಲುವನ್ನು ತಳೆದಿದ್ದಾರೆ.

ಈ ಮಾದರಿಯ ಪದ್ಯಗಳನ್ನು ಅದ್ಭುತವಾದ ಕಾಣ್ಕೆಯೊಂದಿಗೆ ರಾಮಾನುಜನ್ ಅವರು ಬರೆಯಬಲ್ಲರು. 'ಶ್ಲೋಕ' 'ಷಟ್ಪದಿ' 'ವೃತ್ತ' ಇವೆಲ್ಲವೂ ಭಾರತೀಯ ಮತ್ತು ಕನ್ನಡದ ಪ್ರಾಚೀನ ಸಾಹಿತ್ಯ ರಚನಾ ಪರಂಪರೆಯನ್ನು ಸೂಚಿಸಿದರೆ 'ಚಿಗುರು ಮಾವಿನೆಲೆ ಮೂರು' ಇದು ಆಧುನಿಕ ಕನ್ನಡ ಸಾಹಿತ್ಯ ಪರಂಪರೆಯ 'ನವೋದಯ, ನವ್ಯ ಮತ್ತು ಪ್ರಗತಿಶೀಲ / ದಲಿತ – ಬಂಡಾಯ ಸಾಹಿತ್ಯ ಪ್ರಕಾರಗಳನ್ನು ಸೂಚಿಸುತ್ತದೆ. ಮಾತ್ರವಲ್ಲ ಆ ಕಾಲಘಟ್ಟದೊಳಗೆ ನಿಜವಾಗಿ ಅವರು 'ಭಾರತೀಯತೆ' ಎಂದು ಹೇಳಬಹುದಾದ ಎಲ್ಲಾ ಅಂಶಗಳನ್ನು ಸಮಗ್ರವಾಗಿ ಸಮತೋಲನದಿಂದ ಬರೆಯಬಲ್ಲವರಾಗಿದ್ದ ಧೀಮಂತರು. 'ಚಿಗುರು ಮಾವಿನೆಲೆ' ಕೂಡ ಭಾರತೀಯ ಸಾಂಸ್ಕೃತಿಕ ಆಚರಣೆಗಳ ಸಂದರ್ಭದಲ್ಲಿ ಉಪಯೋಗಿಸಲ್ಪಡುವ ಜೀವಂತ ವಸ್ತು. ರಾಮಾನುಜನ್ನರು ದಲಿತ-ಬಂಡಾಯಗಳನ್ನು ಕೂಡ ಭಾರತೀಯ ಕಾವ್ಯಪರಂಪರೆಯ ಮುಂದುವರಿಕೆಯ ಜೀವಂತಧಾರೆಯಾಗಿ ನೋಡಬಲ್ಲ ಸಮಗ್ರದೃಷ್ಟಿಕೋನವನ್ನುಳ್ಳವರು.

ರಾಮಾನುಜನ್ ಅವರು ೬೦ನೇ ದಶಕದ ಅಂತ್ಯದಲ್ಲಿ ಮತ್ತು ೭೦ನೇ ದಶಕದ ಆರಂಭದಲ್ಲಿ ಇಂತಹ ಒಂದು ಮಹತ್ತರ ಕವನ ಸಂಕಲನವನ್ನು ಕೊಟ್ಟು ನವ್ಯಕಾವ್ಯ ಪರಂಪರೆಗೆ ಒಂದು ಹೊಸ ದಿಕ್ಕನ್ನು ಸೂಚಿಸಿದರು ಎಂದರೆ ತಪ್ಪಾಗಲಾರದು. ಯಾರ ಹೊಕ್ಕುಳಲ್ಲಿ ಹೂವಿದೆ? ಅದರ ಹಿಂದಿರುವ ಪೌರಾಣಿಕ ಮತ್ತು ಧಾರ್ಮಿಕ ಹಿನ್ನೆಲೆಗಳು, ನಂಬಿಕೆಗಳು ಏನು? ಯಾವ ಹೂ? ಹೂವಿನಲ್ಲಿರುವ ವ್ಯಕ್ತಿ ಯಾರು? ಅವನ ಪರಿಚಯ ಪೌರಾಣಿಕ ಹಿನ್ನೆಲೆಯೊಳಗೆ ಹೇಗೆ ಆಗಿದೆ? ಇದರ ಪರ-ವಿರೋಧದ ಕವನಗಳು ಯಾವುವು ಎಂಬ ಇತ್ಯಾದಿ ಚರ್ಚೆಗಳು ನಡೆದಿದೆ. ಹೀಗಿದ್ದೂ ಸಹ ತಮ್ಮ ಮೊದಲ ಕವನ ಸಂಕಲನಕ್ಕೆ 'ಹೊಕ್ಕುಳಲ್ಲಿ ಹೂವಿಲ್ಲ' ಎಂಬ ಶೀರ್ಷಿಕೆಯನ್ನು ಕೊಟ್ಟು ನವೋದಯ ಸಾಹಿತ್ಯದ ರಚನೆಕಾರರಿಗೆ ಮತ್ತು ನವ್ಯ ಸಾಹಿತ್ಯದ ಆರಂಭಿಕರಿಗೆ ಇಬ್ಬರಿಗೂ ಹೊಸ ಸಂಚಲನವನ್ನು ಮೂಡಿಸಿದರು.

'ಹೊಕ್ಕುಳಲ್ಲಿ ಹೂವಿಲ್ಲ' ಎಂದು ಹೆಸರಿಟ್ಟು, ಸಂಸ್ಕೃತ ಮೂಲ ಭಾರತೀಯ ಸಂಸ್ಕೃತಿಯ ಪರಿಧಿಯಿಂದ ಹೊರಬರುವ ಸೂಚನೆ ಇದಾಗಿದೆ. ಮೌಖಿಕ ಪರಂಪರೆಯ ಭಾರತೀಯ ಮೂಲದ ಜಾನಪದ ಸಂಸ್ಕೃತಿಯ ಹುಡುಕಾಟದ ಹಂತದಲ್ಲಿ ಮೂಡಿದ ಇವರ 'ಹೂವಿದೆ' ಎನ್ನುವ ಪರಿಕಲ್ಪನೆಯಲ್ಲಿ ಕಾವ್ಯ ನಿರ್ಮಾಣದ ಪ್ರಕ್ರಿಯಾ ಸಂದರ್ಭದ ರಚನೆಯಲ್ಲಿ ಆ

ಕಾವ್ಯದ ಪರಿಣಾಮ ಹಾಗೂ ಪ್ರಭಾವ ಕನ್ನಡದ ಮತ್ತು ಭಾರತೀಯ ಸಂಸ್ಕೃತಿ ಹಾಗೂ ಕಲೆ ಇವರ ಕಾವ್ಯದೊಳಗೆ ಹೇಗೆ ಒಡಮೂಡಿರುತ್ತಿತ್ತು ಎನ್ನುವುದು ಚಾರಿತ್ರಿಕವಾಗಿ ಮುಖ್ಯ ಸಂಗತಿಯಾಗಿದೆ.

ಮೊದಲೇ ಹೇಳಿದಂತೆ ೪೦ ಕವಿತೆಗಳುಳ್ಳ ಈ ಸಂಕಲನದಲ್ಲಿರುವ ಕೆಲವು ಅತ್ಯುತ್ತಮ ಕವಿತೆಗಳಾದ 'ಒಂದು ಕೊಡೆ, ಒಂದು ವಾಚು', 'ಅಪ್ಪ, ಮಗ', 'ಕಲೆ ಮತ್ತು ಜೀವನ ಸೌಂದರ್ಯ', 'ಅದರಲ್ಲಿ ಇದು', 'ಪಂಚಭೂತಗಳಲ್ಲಿ ಒಂದು', 'ಅಂಗುಲ-ಹುಳುವಿನ ಪರಕಾಯ ಪ್ರವೇಶ', 'ಸಹಜ', 'ಕೆಲವರ ಪುನರ್ಜನ್ಮ' ಹಾಗೂ 'ಆ ಹಕ್ಕಿ ಬೇಕಾದರೆ' ಇವುಗಳನ್ನು ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಬಹುದಾಗಿದೆ.

೩.೨.೧. ಒಂದು ಕೊಡೆ, ಒಂದು ವಾಚು

ಮೂರು ತಲೆಮಾರುಗಳ ವಿಭಿನ್ನ ಮನೋಧರ್ಮಗಳು ಮುಖಾಮುಖಿಯಾದಾಗ ಉಂಟಾಗುವ ತಲ್ಲಣಗಳ ಸ್ವರೂಪದ ವಿಶೇಷತೆಯೇ ರಾಮಾನುಜನ್ ಅವರ 'ಒಂದು ಕೊಡೆ, ಒಂದು ವಾಚು' ಕವಿತೆಯ ವಸ್ತು.

ಜಡ್ಡುಗಟ್ಟಿದ ಸಾಂಪ್ರದಾಯಿಕ ಕುಟುಂಬಗಳಲ್ಲಿ ವ್ಯವಸ್ಥಿತ ರೀತಿ ರಿವಾಜುಗಳ ವಿರುದ್ಧ ಹುಟ್ಟುವ ಸೂಕ್ಷ್ಮ ಪ್ರತಿಭಟನೆಯನ್ನು ಈ ಕವಿತೆ ಅತ್ಯಂತ ವಿಡಂಬನಾತ್ಮಕವಾಗಿ ನಿರೂಪಿಸುತ್ತದೆ. ಅಪ್ಪ, ಮಕ್ಕಳು, ಅಮ್ಮ, ಅಜ್ಜಿ ಈ ಮುಂತಾದ ವಿಭಿನ್ನ ಕಾಲಘಟ್ಟದ, ವಿಭಿನ್ನ ಮನೋಧರ್ಮದ ಸ್ತ್ರೀ-ಪುರುಷ ಪಾತ್ರಗಳ ಅಸ್ಮಿತೆಗಳು ಅಪೂರ್ವವಾದ ರೀತಿಯಲ್ಲಿ ಇಲ್ಲಿ ಅನಾವರಣಗೊಂಡಿವೆ. ಹಲವಾರು ದೃಷ್ಟಿಕೋನಗಳಿಂದ ರಾಮಾನುಜನ್ ಅವರ ಅತ್ಯಂತ ಶ್ರೇಷ್ಠ ಕವಿತೆಗಳಲ್ಲಿ ಇದು ಒಂದು:

ತಂದೆಯ ಕೊಡೆಯ ಕೆಳಗೆ ಮಗ ಹೋಗುವಾಗ ಮಗನಿಗೆ-
ಹೋಗುವಾಗ
ಎಡಗಡೆ ಒದ್ದೆ, ಬರುವಾಗ ಬಲಗಡೆ
ಒದ್ದೆ.
ಅವರ ಗಿರಿಗಾಂ ಚಪ್ಪಲಿ
ಹೆಜ್ಜೆಹೆಜ್ಜೆಗೂ ಹಾರಿಸಿದ ಕೆಸರಿನ ತುಂತುರು
ಕಾಲಿನಿಂದ ತಲೆವರೆಗೆ.
ಕೊಡೆ ಕಡ್ಡಿಗಳಿಂದ
ಮಳೆ ನಿಂತ ಮೇಲೂ ತೊಟ್ಟುತೊಟ್ಟಾಗಿ ಮಳೆ
ನನ್ನ ತಲೆ ಮೇಲೆ.

೧೯೭೦ರಲ್ಲಿ ಶಾಂತಿನಾಥ ದೇಸಾಯಿ ಅವರು ಬರೆದ 'ಕನ್ನಡ ಕಾವ್ಯಕ್ಕೊಂದು ಹೊಸ ಕಣ್ಣು: ರಾಮಾನುಜನ್ ಅವರ ಹೊಕ್ಕುಳಲ್ಲಿ ಹೂವಿಲ್ಲ' ಎಂಬ ಲೇಖನದಲ್ಲಿ ರಾಮಾನುಜನ್ ಅವರ 'ಒಂದು ಕೊಡೆ ಒಂದು ವಾಚು', ಕವಿತೆಯ ಬಗ್ಗೆ ಈ ರೀತಿ ಪಡುವ ಅಭಿಪ್ರಾಯ ಸಹಜವಾಗಿದೆ.

> "ಹೀಗೆ ಒಟ್ಟಾರೆಯಾಗಿ ಮಗನಿಗೇ ತೊಂದರೆಯೇ ಹೊರತು ಸುಖವಿಲ್ಲ. ಕುಳ್ಳನ ಹಾಗೆ ಬಗ್ಗಿ ನಡೆಯಲು ಯತ್ನಿಸುವ ಅಪ್ಪನಿಗೂ ಸ್ವಲ್ಪ ಕಷ್ಟದ ಕೆಲಸ. ಆದುದರಿಂದ ಇಬ್ಬರಿಗೂ ಹಿತವಾದ ಯೋಜನೆಯೆಂದರೆ ಇಬ್ಬರಿಗೂ ಬೇರೆ ಬೇರೆ ಕೊಡೆಗಳಿರಬೇಕು."[೫]

ಈ ಕವಿತೆಯ ಪ್ರತಿಮಾನಿಷ್ಠತೆಯನ್ನು ದೇಸಾಯಿ ಅವರು ಸೂಕ್ತವಾಗಿ ಗುರುತಿಸಿದ್ದಾರೆ.

ಅಂದರೆ ಮನುಷ್ಯ ಸ್ವಭಾವದಲ್ಲಿ ಅಪ್ಪನಿಂದ ಮಗನಿಗಾಗಬಹುದಾದ ಮತ್ತು ಮಗನಿಂದ ಅಪ್ಪನಿಗಾಗಬಹುದಾದ ಸಮಸ್ಯೆಗಳನ್ನು ಕುರಿತಾದ ಚಿತ್ರಣ ಇಲ್ಲಿದೆ. ಒಂದರ್ಥದಲ್ಲಿ ಇಬ್ಬರಿಗೂ ಸ್ವತಂತ್ರವಾಗಿ ಇರುವ ನಡೆಯುವ ಇಚ್ಛೆ ಇದ್ದರೂ ಸಹ ಎಷ್ಟೇ ಸಮಸ್ಯೆಗಳು ಉದ್ಭವಿಸಿದರೂ ಭಾರತೀಯ ಸಂಸ್ಕೃತಿಯ ಹಿನ್ನೆಲೆಯಂತೆ ಅಪ್ಪ-ಮಕ್ಕಳ ಸಂಬಂಧ ಎಷ್ಟು ಗಾಢವಾದದ್ದು ಎಂದು ಹೇಳುವುದೂ ಕೂಡ ಇಲ್ಲಿ ವ್ಯಕ್ತವಾಗುತ್ತದೆ. ಮಾನವೀಯ ಸಂಬಂಧಗಳ ಮನೋಭಾವನೆಯ ಹಿನ್ನೆಲೆಯಲ್ಲಿ ರಚಿತವಾಗಿರುವ ಎಷ್ಟೋ ಕವಿತೆಗಳಲ್ಲಿ ರಾಮಾನುಜನ್ ಅನುಭವಿಸಿರಬಹುದಾದ ಏಕಾಕಿತನ, ಸಂಬಂಧಗಳನ್ನು ಕಳಚಿಕೊಂಡು ಹೋಗಿ ದೂರದ ಪಾಶ್ಚಿಮಾತ್ಯ ಸಂಸ್ಕೃತಿಯೊಳಗೆ ತಮ್ಮನ್ನು ತಾವು ಹುಡುಕಾಡುವ ಪರಿಸ್ಥಿತಿಗಳ ಚಿತ್ರಣ ಬಿಂಬಿತವಾಗಿದೆ. ಇಲ್ಲಿ ಬರುವ ಅಜ್ಜಿ, ಅಪ್ಪ ಮತ್ತು ಮಗ ಮೂರು ತಲೆಮಾರನ್ನು ಸೂಚಿಸುತ್ತದೆ. ಆಶ್ಚರ್ಯವೆಂದರೆ ಅಪ್ಪ ಮತ್ತು ಮಗನಿಗಿಂತ ಜೀವನದ ಬಗ್ಗೆ ಅಜ್ಜಿಗೆ ಇರುವ ಆರೋಗ್ಯಕರ ಧೋರಣೆ ಗಮನಾರ್ಹ.

ಈ ಕವಿತೆಯನ್ನು ಬೇರೆ ಬೇರೆ ಆಯಾಮಗಳಿಂದ ನೋಡುವ ಕ್ರಮಗಳಿವೆ. ಇಲ್ಲಿ ಬರುವ ಕೆಲವು ಗಟ್ಟಿಯಾದ ಕೆಲವು ಸಂಕೇತಗಳಿವೆ. 'ಕೊಟ್ಟಣ' ಅಜ್ಜಿಯದು ಮತ್ತು ಅದು ಭೂತಕಾಲವನ್ನು ಪ್ರತಿಬಿಂಬಿಸಿದರೆ, ಅಪ್ಪನ ಕೊಡೆ ವರ್ತಮಾನವನ್ನು ಪ್ರತಿನಿಧಿಸುತ್ತದೆ. ಮಗ ಸದ್ಯದ, ಪ್ರಸ್ತುತ ಮತ್ತು ಭವಿಷ್ಯವನ್ನು ಸಂಕೇತಿಸುತ್ತದೆ. ಮೇಲ್ನೋಟಕ್ಕೆ ಕೊಡೆ ಹಾಗೂ ವಾಚನ್ನು ಹಾಳು ಮಾಡುವುದು ವಿನಾಶವನ್ನು ಸೂಚಿಸಿದರೂ ಪ್ರಗತಿಯು ಅನೇಕ ವಿನಾಶಗಳ ನಂತರದ ಹಂತ ಎಂಬುದೂ ಇಲ್ಲಿ ನಿಜ. ಎಲ್ಲಾ ಕಾಲಘಟ್ಟಗಳಲ್ಲಿಯೂ ಮುಂದುವರಿಯುವ ಜೀವದ್ರವ್ಯದ ಸಂಕೇತವಾಗಿ ಕವಿ ಇಲ್ಲಿ 'ಪುಳ್ಳಂಗಾಯುಂಡೆ'ಯನ್ನು ವಸ್ತುಪ್ರತಿರೂಪವಾಗಿ ಅತ್ಯಂತ ಔಚಿತ್ಯಪೂರ್ಣವಾಗಿ ಬಳಸಿಕೊಂಡಿರುತ್ತಾರೆ.

೩.೨.೨. ಅಪ್ಪ, ಮಗ

'ಅಪ್ಪ, ಮಗ' ಎನ್ನುವ ಒಂದು ನಾಲ್ಕು ಸಾಲಿನ ಕಿರುಪದ್ಯ ಅಗಾಧಶಕ್ತಿಯನ್ನು ಒಳಗೊಂಡಿದೆ:

ಬಚ್ಚಲು ಮನೆ ಗಂಗಾಳದಲ್ಲಿ
ಅಪ್ಪ ಮರೆತ ಹೊಸ ಹಲ್ಲು ಸ್ವತಂತ್ರವಾಗಿ
ಹಲ್ಲುಕಿರಿಯಿತು.
ನಾನು ನೋಡಿದೆ.

"ಇಂಥ 'ವಿಚಿತ್ರ' ಕಾವ್ಯ ಕನ್ನಡಕ್ಕೆ ಹೊಚ್ಚ ಹೊಸದು. ಇಲ್ಲಿರುವುದು ಒಂದೇ ಒಂದು ಚಿತ್ರ, ಕಾಣಿಸಲು ತೀರಾ ಸರಳ, ಅದರಲ್ಲಿ ಅರ್ಥವೇನಾದರೂ ಇದೆಯೇ ಎಂದು ಸಂಶಯ ಹುಟ್ಟಿಸುವಷ್ಟು ಸರಳ..... ಗಂಗಾಳದಲ್ಲಿಯ ಹಲ್ಲು ಅಪ್ಪನದಾದರೂ ಅದಕ್ಕೆ ಸ್ವತಂತ್ರವಾದ ಅಸ್ತಿತ್ವವಿದ್ದಂತೆ. ಮಗ ಅಪ್ಪನಿಗೆ ಸಂಬಂಧಿತನಾದರೂ ಅವನಿಗೆ ಸ್ವತಂತ್ರ್ಯವಾದ ವ್ಯಕ್ತಿತ್ವವಿದೆ ಎಂಬ ಒಂದು ಅರ್ಥ ಧ್ವನಿತವಾದರೆ, ಇನ್ನೊಂದು ಅರ್ಥ ಮಗನ ತಲೆಯಲ್ಲಿ ಬಂದಿರಬಹುದಾದ ಅಪ್ಪನ ಮೃತ್ಯುವಿನ ವಿಷಯಕ್ಕೆ ಸಂಬಂಧಿಸಿಯೋ ಏನೋ ಎಂಬ ಸಂಶಯ ಉತ್ಪನ್ನವಾಗುತ್ತದೆ.... ಇಂಥ ನಿಚ್ಚಳ ಪ್ರತಿಮಾನಿಷ್ಠ ಕಾವ್ಯ ಕನ್ನಡದಲ್ಲಿ ಬಂದದ್ದು ಬಹುಶಃ ಇದೇ ಮೊದಲಿರಬೇಕು"[೬]

ಎಂಬ ಶಾಂತಿನಾಥ ದೇಸಾಯಿ ಅವರ ಈ ಮಾತು ಅರ್ಥಪೂರ್ಣವಾಗಿದೆ. ರಾಮಾನುಜನ್ ಅವರು ಕಾವ್ಯ ಪ್ರತಿಮೆಗಳನ್ನು(poetic image) ಕನ್ನಡ ಕಾವ್ಯಕ್ಕೆ ತಂದುಕೊಟ್ಟ ಅಗ್ರಗಣ್ಯ ಕವಿ.

ಈ ಕವಿತೆಯೊಳಗೆ ಮಾನವೀಯ ಸಂಬಂಧಗಳ ಸೂಕ್ಷ್ಮತೆಗಳು ಹಾಗೂ ವ್ಯಕ್ತಿತ್ವಗಳ ಹಿಡಿತದಿಂದ ಪಾರಾಗಿ ಸ್ವಾತಂತ್ರ್ಯವನ್ನು ಅನುಭವಿಸುವ ಕ್ಷಣಗಳಿವೆ. ಸಾಕ್ಷಾತ್ಕಾರದ ಗಳಿಗೆಗಳು ಮನೋಜ್ಞವಾಗಿ ಹರಳುಗೊಂಡಿವೆ. ಕವಿತೆ ಎಂಬುದು 'ಆ ಕ್ಷಣದ ಚಲನಶೀಲ ಸ್ಮಾರಕ'(A moments monument) ಎಂಬ ಪಾಶ್ಚಾತ್ಯ ವಿದ್ವಾಂಸರೊಬ್ಬರ ಹೇಳಿಕೆಗೆ ಈ ಕವಿತೆ ನಿದರ್ಶನದಂತಿದೆ.

ರಾಮಾನುಜನ್‌ರ ಅನೇಕ ಕವಿತೆಗಳಲ್ಲಿ ಅವರ ಅನಾಥಪ್ರಜ್ಞೆ, ಭಾರತದಿಂದ ದೂರವಿರುವ ಏಕಾಂಗಿತನ, ವೇದನೆ, ಮೈಸೂರನ್ನು ಕುರಿತ ಅವರ ಆಪ್ತ ಮಧುರ ಭಾವಗಳು ಮತ್ತು ಭಾವರಹಿತವಾದ ಕೇವಲ ಪೂರ್ಣಪ್ರಮಾಣದ ವಿವೇಕ ಇವು ದಟ್ಟವಾಗಿ ಈ ಕವಿತೆಯಲ್ಲಿ ಹರಡಿಕೊಂಡಿವೆ.

೩.೨.೩. ಕಲೆ ಮತ್ತು ಜೀವನ ಸೌಂದರ್ಯ

'ಕಲೆ ಮತ್ತು ಜೀವನಸೌಂದರ್ಯ' ತೀರಾ ಭಿನ್ನವಾದ ರಾಮಾನುಜನ್ ಅವರ ಮತ್ತೊಂದು ಮುಖ್ಯ ಕವನ. ಇಲ್ಲಿ ಕವಿ ಉಳ್ಳವರ ಮತ್ತು ಉಳ್ಳದವರ ಭಾರತೀಯ ಸಮಾಜದ ಸ್ಪಷ್ಟವಾದ

ಅಂತರವನ್ನು ಅತ್ಯಂತ ಪಾರದರ್ಶಕವಾಗಿ ಬಿಂಬಿಸುತ್ತಾರೆ. ಈ ಕವಿತೆ ೬೦-೭೦ರ ದಶಕದ ಅತ್ಯುತ್ತಮವಾದ ಕವಿತೆ ಎಂಬುದು ಬಹುಪಾಲು ವಿದ್ವಾಂಸರ ಗ್ರಹಿಕೆಯಾಗಿದೆ. ಜೀವನ ಮತ್ತು ಕಲೆಯ ಬಗ್ಗೆ ಅಮೆರಿಕದಲ್ಲಿ ನಿರೂಪಕನು ಮಾಡಿದ ಉಪನ್ಯಾಸದ ರೀತಿಯಲ್ಲಿರುವುದು ಈ ಕವಿತೆಯ ತಂತ್ರ. ಇಲ್ಲಿ ಮಧುರೆಯ ದೇವಾಲಯದ ಒಳಗಿನ ಕಲೆ ಮತ್ತು ದೇವಸ್ಥಾನದ ಆವರಣದ ಪಕ್ಕದಲ್ಲಿಯೇ ಇರುವ ಭಾರತದ ಇನ್ನೊಂದು ಕರಾಳ ಮುಖ - ಇವೆರಡೂ ಪರಸ್ಪರ ಮುಖಾಮುಖಿಯಾಗಿವೆ. ಇಲ್ಲಿರುವ ವ್ಯಂಗ್ಯ ಇಲ್ಲಿನ ಕಟು ವಾಸ್ತವದ ಪ್ರಜ್ಞೆಯ ಸೂಕ್ಷ್ಮ ಒಳನೋಟಗಳ ಗ್ರಹಿಕೆಯಾಗಿದೆ. ಒಬ್ಬರ ನೋವು ಮತ್ತೊಬ್ಬರಿಗೆ ಸುಖ. ಇಂತಹ ಭಾರತೀಯ ಪೀಡಕ ಮನೋಭಾವದ ಪೊಳ್ಳುತನವನ್ನು ಈ ಕವಿತೆ ಆತ್ಮಶೋಧನೆಯ ಮೂಲಕ ಬಹಿರಂಗಗೊಳಿಸುತ್ತದೆ. ಇಲ್ಲಿ ನಿರೂಪಕನ ಉಪನ್ಯಾಸವನ್ನು ಸುಶಿಕ್ಷಿತ ಸಮಾಜ ಮೆಚ್ಚಿಕೊಂಡ ಅಂಶಕ್ಕಿಂತ ಮಧುರೆಯ ಧೂಳು ಬೀದಿಯಲ್ಲಿ ಯಾತನಾಮಯವಾಗಿ ಬಿದ್ದಿದ್ದ ಕುಷ್ಠ ಗಂಡಸಿನ ಚಿತ್ರ ವಾಚಕರ ಮನಸ್ಸಿನಲ್ಲಿ ಉಳಿದುಬಿಡುತ್ತದೆ. ಇಲ್ಲಿನ ಅಭಿವ್ಯಕ್ತಿ ಕ್ರಮದಲ್ಲಿ ಕವಿ ವಿಕೃತಿ ಮತ್ತು ಸೌಂದರ್ಯಗಳನ್ನು ಏಕಕಾಲದಲ್ಲಿ ಸಮಾನಾಂತರವಾಗಿ ಈ ವೈರುಧ್ಯವನ್ನು ನಿರೂಪಿಸುತ್ತಾ ಹೋಗುತ್ತಾನೆ. ಇದನ್ನು ದೃಢಪಡಿಸಲು ಇಡೀ ಕವಿತೆಯನ್ನು ಇಲ್ಲಿ ಉದ್ಧರಿಸುತ್ತೇನೆ:

ಮಧುರೆಯ ಧೂಳುಬೀದಿಯಲ್ಲಿ
ಕುಷ್ಠ ಈ ಗಂಡಸಿನ
ಮುಖ ಮರಿದಿದೆ.
   ಮುಖಕ್ಕೆ ಮೂಗಿಲ್ಲ,
ಹಸ್ತಕ್ಕೆ ಬೆರಳಿಲ್ಲ,
   ಕಾಲಿಗೆ ಹಿಮ್ಮಡಿ
ಇಲ್ಲ.
ಕಣ್ಣುಸುತ್ತ ಆ ಕಿಸುರು ಪಾಯಸ
ಕ್ಕೆ ಸೊಳ್ಳೆ,
ಹುಣ್ಣು ನವಿಲುಬಣ್ಣದ ನೊಣಗಳಿಗೆ
ನಾಗಮುರಿ ಹೂವು.
ಪಕ್ಕದಲ್ಲಿ ಹೆಂಡತಿ ಕತ್ತಿನಲ್ಲಿ ಹೊಸ
ತಾಳಿ.
ಅವನ ಹಿಂದೆ ಶತಶತಮಾನದ ಗುಡಿ-
ಬಾಗಿಲ ಅಪ್ಸರೆ.
   ಮುರಿದ ಮೂಗಿನ
ಕೆಳಗೆ ಶಿಲ್ಪಶಾಸ್ತ್ರದ ಮೂವತ್ತರಡನೆ ಸೂತ್ರ

ಹೇಳಿದ ಮಂದಹಾಸ.
   ಕಾಲ ಖಿಲ್ಜಿಯ ಮೊಮ್ಮಗ
ಮುರಿದ ತೊಡೆಯಲ್ಲೂ ತ್ರಿಭಂಗ.
   ತೊಡೆ ನಡುವಿನ ಬಿಲ್ಲೆ
ಮೇಲೆ ತಮಿಳು ಪೋಕರಿಗಳ
ಸಂಸ್ಕೃತ.

ನಾನು ಇವೆರಡನ್ನೂ ನೆನಸಿಕೊಂಡು
ಜೀವನ ಮತ್ತು ಕಲೆಯ ಬಗ್ಗೆ ಅಮೆರಿಕದಲ್ಲಿ
ಭಾಷಣ ಮಾಡಿದೆ.
ಎಲ್ಲರೂ ಬಹಳ ಮೆಚ್ಚಿಕೊಂಡರು.

ಇಲ್ಲಿ ದೇವಸ್ಥಾನದ ಆವರಣದೊಳಗಿನ ನಮ್ಮ ಭಾವತೀವ್ರತೆಗಳನ್ನು ಉದ್ದೀಪಿಸುವ ಶಿಲ್ಪಶಾಸ್ತ್ರದ ವಿವಿಧ ಭಂಗಿಗಳು ಮತ್ತು ಇದಕ್ಕೆ ತದ್ವಿರುದ್ಧವಾಗಿ ದೇವಸ್ಥಾನದ ಹೊರಗಿನ ಪರಿಸರದಲ್ಲಿ ಕಾಣಬರುವ ಕಟುವಾಸ್ತವ ಬದುಕಿನ ವಿಕೃತಿಗಳು ಸಮಾನಾಂತರವಾಗಿ ಉಳಿದುಕೊಂಡು, ಕವಿತೆಯ ನಾಯಕನು ಇದನ್ನು ಕುರಿತು ಅಮೆರಿಕದಲ್ಲಿ ಗಂಭೀರವಾಗಿ ಉಪನ್ಯಾಸ ಮಾಡಿದಾಗ ಅಮೆರಿಕನ್ನರು ಮೆಚ್ಚಿಕೊಂಡ ಸಂಗತಿಯ ನಿರೂಪಣೆಯಲ್ಲಿರುವ ಮಾರ್ಮಿಕವಾದ ಮೊನಚನ್ನು ಗಮನಿಸಬಹುದು. ಇಂತಹ ಬದುಕಿನ ವ್ಯಂಗಳನ್ನು ಕುರಿತ ಆತ್ಮನಿರೀಕ್ಷಣೆಯ ಅಂಶಗಳು ರಾಮಾನುಜನ್ ಕವಿತೆಗಳಲ್ಲಿ ಹೇರಳವಾಗಿ ಬರುತ್ತವೆ. ಪೂರ್ವ ಮತ್ತು ಪಶ್ಚಿಮಗಳ ವಿಚಾರಧಾರೆಗಳು, ಮೀಮಾಂಸೆಗಳು ನೇರವಾಗಿ ಮುಖಾಮುಖಿಯಾಗುವ ಸಂದರ್ಭದ ಅಂಶಗಳನ್ನೊಳಗೊಂಡ ಈ ಬಗೆಯ ಅನೇಕ ಕವಿತೆಗಳು ಇಲ್ಲಿ ಬರುತ್ತವೆ. ಜೀವನದ ವಿಕೃತಿಯನ್ನು ಕಾಲ್ಪನಿಕ ಕಲೆಯ ಚೌಕಟ್ಟಿನೊಳಗೆ ಮೆಚ್ಚಿಕೊಳ್ಳುವ ಅಮೆರಿಕನ್ನರನ್ನು ಕವಿತೆಯು ವ್ಯಂಗ್ಯದ ಧಾಟಿಯಲ್ಲಿ ಛೇಡಿಸುತ್ತದೆ.

'ಕಲೆ ಮತ್ತು ಜೀವನ ಸೌದರ್ಯ' ಎನ್ನುವ ಈ ಕವಿತೆ, ಒಂದು ಅಪ್ಪಟ ನವ್ಯ ಕವಿತೆ. ನವ್ಯ ಕಾವ್ಯದ ಆಶಯ ಮತ್ತು ಆಕೃತಿಗಳನ್ನು ಕುರಿತ, ಬಂಧವನ್ನು ಕುರಿತ ವಿಚಾರಗಳನ್ನು ಒಳಗೊಂಡಿದೆ. ಈ ಇಡೀ ಪದ್ಯದಲ್ಲಿ ಚರಿತ್ರೆ, ಶಿಲ್ಪಶಾಸ್ತ್ರ, ವಾತ್ಸ್ಯಾಯನ ಇವುಗಳ ನಡುವಣ ವಿಚಿತ್ರವಾದ ಸಂಬಂಧಗಳ ಹೆಣಿಗೆಯನ್ನು ಗಮನಿಸಬಹುದು. ವಿಪರ್ಯಾಸವೆಂದರೆ, ಜಗತ್ತಿನ ಅತ್ಯಂತ ದೊಡ್ಡ ವಿಸ್ತಾರವಾದ ದೇವಾಲಯವಿರುವ ಮದುರೆಯ ಧೂಳಿನ ಬೀದಿಯ ಒಂದು ದೃಶ್ಯ ಇಲ್ಲಿ ಬರುತ್ತದೆ. ವಾಸ್ತವ ಜೀವನ ಮತ್ತು ಕಾಲ್ಪನಿಕ ಕಲೆ ಇವೆರಡರ ನಡುವಣ ಅಜಗಜಾಂತರ ವ್ಯತ್ಯಾಸ ಮತ್ತು ವಿಕೃತಿಯೂ ಕೂಡ ಸೌಂದರ್ಯದ ಇನ್ನೊಂದು ಮುಖ ಎನ್ನುವ ಉದಾತ್ತ ಚಿಂತನೆಯ ಎಳೆಯೊಂದನ್ನು ಇಲ್ಲಿ ಗಮನಿಸಬಹುದು. ನವ್ಯ ಕಾವ್ಯದ ಅತ್ಯುತ್ತಮ ಮಾದರಿಗಳಿಗೆ ಇಂತಹ ಪದ್ಯಗಳು ಸಾಕ್ಷಿಯಾಗಿವೆ.

೩.೨.೪. ಅದರಲ್ಲಿ ಇದು

ಕಾಡು ಮರಗಳ ಮಧ್ಯ
   ಮನೆ.
ಸಿಮೆಂಟು ಬಿರುಕಿನ
ಹುಲ್ಲು.
   ಅಮೆರಿಕನ್ ಮಾರ್ಕೆಟ್ಟಿನಲ್ಲಿ
ಹಚ್ಚಗೆ ಕೊಯ್ದ ಕೊತ್ತಂಬರಿ
ಸೊಪ್ಪು.

ಈ ಕವಿತೆ ಆಧುನಿಕ, ಯಾಂತ್ರಿಕ ಬದುಕಿನ ನಡುವೆ ಕೂಡ ಸೃಜನಶೀಲ ಕಲೆಗಳು ಹೇಗೆ ಅರಳಿಕೊಳ್ಳುತ್ತವೆ ಎಂಬುದಕ್ಕೆ ದ್ಯೋತಕ. ಇಲ್ಲಿ ಕವಿ 'ಅಮೆರಿಕನ್ ಮಾರ್ಕೆಟ್ಟಿನಲ್ಲಿ ಹಚ್ಚಗೆ ಕೊಯ್ದ ಕೊತ್ತಂಬರಿ ಸೊಪ್ಪು' ಅವರಿಗೆ ಇದ್ದಕ್ಕಿದಂತೆ ತಮ್ಮ ತಾಯಿನಾಡಾದ ಭಾರತದ ಆಪ್ತ ನೆನಪುಗಳನ್ನು ತರುತ್ತದೆ. ಇದು ವಿದೇಶದಲ್ಲಿ ಲೋಕಾಂತದಲ್ಲಿಯೇ ಏಕಾಂತವನ್ನು ಕಾಣುವ ಕವಿಯ ಭಾರತೀಯ ಮನಸ್ಸಿನ ಸ್ಫುರಣೆ.

ಕೊತ್ತಂಬರಿ ಸೊಪ್ಪು ಭಾರತೀಯರ ದಿನನಿತ್ಯದ ಜೀವನದ ಸಾಂಸ್ಕೃತಿಕ ಬದುಕಿಗೆ ಸಂಕೇತ. ಇದರ ಹಚ್ಚ ಹಸುರು ಮತ್ತು ಸಿಮೆಂಟು ಬಿರುಕಿನ ಭಯಾನಕತೆಯ ಯಾಂತ್ರಿಕತೆ ಎರಡೂ ವಿರುದ್ಧ ದ್ರುವಗಳು. ಸಿಮೆಂಟು ಬಿರುಕು ವಿನಾಶದ ಸೂಚನೆಯನ್ನು ನೀಡಿದರೆ, ಹಚ್ಚಗೆ ಕೊಯ್ದ ಕೊತ್ತಂಬರಿ ಸೊಪ್ಪು ಸೃಜನಶೀಲತೆ ಎಂದೂ ವಿನಾಶಗೊಳ್ಳದ ಜೀವಂತ ಕ್ರಿಯೆ ಎಂಬುದನ್ನು ಆಪ್ಯಾಯಮಾನವಾಗಿ ಮನದಟ್ಟು ಮಾಡಿಸುತ್ತದೆ. ಇಂತಹ ಅಪೂರ್ವ ರೀತಿಯ 'ತಗುಳ್ಚುವಿಕೆ' (ಪಂಪನ ಮಾತು) ರಾಮಾನುಜನ್ ಕಾವ್ಯದ ಮೂಲದ್ರವ್ಯ. ಪ್ರಸ್ತುತದ ಸಂದರ್ಭದಲ್ಲಿ ಭಾರತದ ಬೇರುಗಳನ್ನು ಕಳಚಿಕೊಂಡಿರುವ ಅಮೆರಿಕದಲ್ಲಿರುವ ಅನಿವಾಸಿ ಭಾರತೀಯ ಯುವ ಜೀವಂತ ಪೀಳಿಗೆಯನ್ನು 'ಹಚ್ಚಗೆ ಕೊಯ್ದ ಕೊತ್ತಂಬರಿ ಸೊಪ್ಪು' ನೆನಪಿಗೆ ತರುತ್ತದೆ.

ವಿಕ್ಷಿಪ್ತತೆ, ಅನಾಥಪ್ರಜ್ಞೆ, ಜೀವನದ ಅತ್ಯಂತ ನಿರ್ಣಾಯಕ ಸಂದರ್ಭಗಳಲ್ಲಿ ಉಂಟಾಗುವ ದ್ವಂದ್ವ ಹಾಗೂ ಬಿಕ್ಕಟ್ಟುಗಳು ಆಧುನಿಕ ಜೀವನಶೈಲಿಯ ಯಾಂತ್ರಿಕತೆ ಮತ್ತು ಕ್ರೌರ್ಯ ಇವು ಆಧುನಿಕತೆಯ ಹೆಸರಿನಲ್ಲಿ ನಮ್ಮನ್ನು ಸಮಗ್ರವಾಗಿ ಆವರಿಸಿಕೊಂಡು ನಮ್ಮ ಒಳನೋಟಗಳನ್ನು, ಸೂಕ್ಷ್ಮದೃಷ್ಟಿಯನ್ನು ಹರಾಜು ಹಾಕಿರುವುದನ್ನು ರಾಮಾನುಜನ್ ಕವಿತೆಗಳು ಸೂಕ್ಷ್ಮವಾಗಿ ತಿಳಿಸಿಕೊಡುತ್ತವೆ. ಆಧುನಿಕತೆಯ ಪ್ರತಿನಿಧಿಯ ಹಾಗೆ ಎಲ್ಲರಿಗೂ ಗೋಚರವಾಗುತ್ತಿರುವ ಅಮೆರಿಕದ ಮಾರ್ಕೆಟ್ಟಿನಲ್ಲಿ ಐಶಾರಾಮಿ ವೈಭವದ ತುತ್ತ ತುದಿಯ ಸಂಕೇತವೆನ್ನಿಸಿಕೊಂಡಿರುವ ಅಲ್ಲಿ 'ಹಚ್ಚಗೆ ಕೊಯ್ದ ಕೊತ್ತಂಬರಿ ಸೊಪ್ಪು' ಕವಿಗೆ ಆಹ್ಲಾದಕತೆಯನ್ನು ಉಂಟುಮಾಡುತ್ತದೆ.

ಆಧುನಿಕ ಯಾಂತ್ರಿಕ ಹಾಗೂ ಜಟಿಲ ಸ್ವರೂಪದ ನಡುವೆಯೂ ಇಲ್ಲಿ ಕವಿ ಮುಗ್ಧರಾಗಿ ಹಸಿರಿಗೆ ಮಾರಿಹೋಗಿರುವುದನ್ನು ಗಮನಿಸಬಹುದು. ಇಂತಹ ಎಡೆಗಳಲ್ಲಿ ರಾಮಾನುಜನ್ ಅವರ ಸೃಜನಶೀಲತೆಯ ಸೂಕ್ಷ್ಮ ಕುಸುರಿ ಕಲೆ ದಟ್ಟವಾಗಿ ಪ್ರಕಟವಾಗುತ್ತದೆ.

೩.೨.೫. ಪಂಚಭೂತಗಳಲ್ಲಿ ಒಂದು

ಕಲೆ, ಸೌಂದರ್ಯ, ಪುನರ್‌ಜನ್ಮ, ಅಪ್ಪ-ಮಗ, ರಕ್ತಸಂಬಂಧ ಮುಂತಾದ ಸಂಸ್ಕೃತಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಜಿಜ್ಞಾಸೆ ನಡೆಸುವ ರಾಮಾನುಜನ್ ಅವರು 'ಪಂಚಭೂತಗಳಲ್ಲಿ ಒಂದು' ಎಂಬ ಈ ಕವಿತೆಯಲ್ಲಿ ನೀರಿನ ಶುದ್ಧತೆ-ಅಶುದ್ಧತೆ, ಪವಿತ್ರ-ಅಪವಿತ್ರ, ಮಡಿ-ಮೈಲಿಗೆ, ಮುಂತಾದ ಮೌಲ್ಯದ ಬಗ್ಗೆ ವಿವೇಚನೆ ಮಾಡಿದ್ದಾರೆ. ಈ ಕವಿತೆ ಪ್ರಾರಂಭವಾಗುವುದು ಹೀಗೆ:

> ಶಾಂತಿಯ ಪಚ್ಚೆ ಪಾಚಿ ಮುಚ್ಚಿದ
> ತಾವರೆ ಕೆರೆ: ಕುಡಿದರೆ ಕಾಲರ.
> ಜೀವ ನದಿ: ಆ ದಡದಲ್ಲಿ
> ಹೇತ ತೇಂಗೊಳಲು ಚಕ್ಕಲಿ ಮುಟ್ಟು-
> ಸ್ನಾದ ಸೋಪುನೀರೆಲ್ಲ ಹೊತ್ತು ಹರಿಯುವ
> ನಿರ್ಲಿಪ್ತ ಜೀವ.

ಹೀಗೆ ಇರುವ ನೀರು, ಅಂದರೆ ಪಂಚಭೂತಗಳಲ್ಲಿ ಅತಿ ಮುಖ್ಯವಾದ ವಸ್ತುವು ಹೀಗೆ ಮಲಿನವಾಗಿಬಿಟ್ಟರೆ, ಇದನ್ನು ಬಳಸುವುದಾದರೂ ಹೇಗೆ ಎಂಬ ಪ್ರಶ್ನೆ ಕವಿತೆಯಲ್ಲಿ ಉದ್ಭವವಾಗುತ್ತದೆ.

ಕೀರ್ತಿನಾಥ ಕುರ್ತಕೋಟಿ ಅವರು ಈ ಕವಿತೆಯನ್ನು ಕುರಿತು ಹೀಗೆ ವಿಶ್ಲೇಷಿಸುತ್ತಾರೆ:

> "ಅಂದಮೇಲೆ ಈ ನೀರನ್ನು ಕುಡಿದಾಗ ಕಾಲರ ಬೇನೆ ಹಬ್ಬಿಕೊಳ್ಳಲು ತಡವಾಗುವುದಿಲ್ಲ. ಪಂಚಭೂತಗಳಲ್ಲಿ ಒಂದಾದ ನೀರು ನಮ್ಮ ಸಂಸ್ಕೃತಿಯ ದುರ್ಲಕ್ಷ್ಯದಿಂದಾಗಿ ಕೆಟ್ಟು ಹೊಗುತ್ತದೆ. ಅದನ್ನು ಆಧುನಿಕ ಯಂತ್ರೋಪಕರಣಗಳ ಮೂಲಕ ಶುದ್ಧಗೊಳಿಸಿ ಕೊಳಾಯಿಗಳ ಮೂಲಕ ವಿತರಿಸಿದರೂ ಅದಕ್ಕೆ ಅಂಟಿರುವ ಆಸ್ಪತ್ರೆಯ ಕ್ಲೋರಿನ್ ಘಾಟು ತಪ್ಪುವುದಿಲ್ಲ. ಅದು 'ತಾತನ ಶ್ರಾದ್ಧಕ್ಕೆ ಅಶೌಚ'ವಾಗುತ್ತದೆ"[೬]

ನಿಂತ ನೀರು ಕಲುಷಿತಗೊಂಡು ಹಲವಾರು ಕಾಯಿಲೆಗಳಿಗೆ ಎಡೆ ಮಾಡಿಕೊಡುತ್ತದೆ. ಅಲ್ಲದೆ ತಾತನ ಶ್ರಾದ್ಧಕ್ಕೂ ಕೂಡ ಅದು ಒಪ್ಪುವುದಿಲ್ಲ. ಅಂತಹ ನೀರನ್ನು ಬಳಸುವುದಕ್ಕೆ

ಯೋಗ್ಯವಲ್ಲದ್ದಾಗಿರುತ್ತದೆ. ಈ ಕವಿತೆಯನ್ನು ರಾಮಾನುಜನ್ ಅವರು ಸುಮಾರು ೪೦ ವರ್ಷಗಳ ಹಿಂದೆಯೇ ಬರೆದಿದ್ದಾರೆ.

ಶುದ್ಧವೇನೋ ನಿಜ.
ಆದರೆ ಬಾಯಲ್ಲಿ ಕಹಿ, ತಾತನ ಶ್ರಾದ್ಧಕ್ಕೆ
ಇದು ಅಶೌಚ, ಮೀನು
ಇದರಲ್ಲಿ ಬದುಕುವುದಿಲ್ಲ.
ಅನ್ನ ಸಾರೆಲ್ಲ
ಆಸ್ಪತ್ರೆ ಕ್ಲೋರೀನು ಘಾಟು.

ಪ್ರಸ್ತುತದಲ್ಲಿ ಇದು ಜಾಗತಿಕ ಮಟ್ಟದ ಸಮಸ್ಯೆಯಾಗಿ ಕಾಣಿಸುತ್ತಿರುವುದು ಮತ್ತು ಆ ಸಮಸ್ಯೆಗಳಿಗೆ ವೈಜ್ಞಾನಿಕವಾಗಿ ಆಧುನಿಕ ಯಂತ್ರೋಪಕರಣಗಳನ್ನು ಉಪಯೋಗಿಸಿ ಶುದ್ಧಗೊಳಿಸಲು ಪಡುತ್ತಿರುವ ಹರಸಾಹಸಗಳನ್ನು ಇಲ್ಲಿ ನೋಡಬಹುದಾಗಿದೆ.

ಕುರ್ತಕೋಟಿ ಅವರು ಬರೆದ 'ರಾಮಾನುಜನ್‌ರ ಕಾವ್ಯ' ಎಂಬ ಲೇಖನದಲ್ಲಿ ರಾಮಾನುಜನ್ ಅವರ 'ಪಂಚಭೂತಗಳಲ್ಲಿ ಒಂದು' ಎಂಬ ಕವನವನ್ನು ಅನಂತರ ಬರೆದ ಚಂದ್ರಶೇಖರ ಕಂಬಾರ ಅವರ 'ಗಂಗಾಮಾಯಿ' ಎಂಬ ಕವಿತೆಯೊಂದಿಗೆ ಹೋಲಿಸುತ್ತಾ ಹೀಗೆ ಹೇಳುತ್ತಾರೆ:

> "ರಾಮಾನುಜನ್ ಅವರ 'ಪಂಚಭೂತಗಳಲ್ಲಿ ಒಂದು' ಮತ್ತು ಚಂದ್ರಶೇಖರ ಕಂಬಾರರ 'ಗಂಗಾಮಾಯಿ' ಈ ಎರಡು ಕವಿತೆಗಳ ವಿಷಯ ಹೆಚ್ಚು ಕಡಿಮೆ ಒಂದೇ ಆಗಿವೆ. ನಿರೂಪಣೆಯ ರೀತಿಯಂತೂ ಆಶ್ಚರ್ಯಗೊಳಿಷುವಷ್ಟು ವಿಭಿನ್ನವಾಗಿದೆ. 'ಪಂಚಭೂತಗಳಲ್ಲಿ ಒಂದು ಹೀಗಾಗಿಬಿಟ್ಟರೆ ಏನು ಮಾಡುವುದು ಹೇಳಿ?' ಎಂಬ ಸಾಲಿನ ವ್ಯಂಗ್ಯ ರಾಮಾನುಜನ್‌ರ ನಿರ್ಲಿಪ್ತತೆಯನ್ನು ಎತ್ತಿ ತೋರಿಸುವಂತೆ ಕಂಬಾರರ ಅನುಭವದ ಅಸಹಾಯಕತೆ ತೋರಿಸುವುದಿಲ್ಲ. ಕಂಬಾರರ ಕವಿತೆಯಲ್ಲಿ ಅನುಭವ ಮೈಯ ತೊಗಲಿನಂತೆ ಅಂಟಿಕೊಂಡದ್ದಾಗಿದೆ; ಕವಿಯ ಸಿಟ್ಟಿಗೆ ಅದೇ ಕಾರಣವಾಗುತ್ತದೆ. ಆದರೆ ಕವಿಯ ಸಿಟ್ಟೇ ಅವನನ್ನು ಅನುಭವದೊಂದಿಗೆ ಪ್ರತ್ಯೇಕವಾಗಿಸುತ್ತದೆ. ಅನುಭವದ ಆತ್ಮೀಯತೆ ಮತ್ತು ಪರಕೀಯತೆಗಳ ಸಂಘರ್ಷ ಕವಿತೆಯ ಶಿಲ್ಪವನ್ನು ನಿರ್ಮಿಸುತ್ತದೆ. ಕಂಬಾರರ ಕವಿತೆಯನ್ನು ಕೀಳುಗಳೆಯಲು ಅದನ್ನಿಲ್ಲಿ ಚರ್ಚಿಸಿಲ್ಲ. ಆದರೆ ರಾಮಾನುಜನ್‌ರ ಕವಿತೆ ಹೇಗೆ ಉಳಿದ ಕಾವ್ಯಕ್ಕಿಂತ ಭಿನ್ನವಾಗಿದೆಯೆಂಬುದು ಇದರಿಂದ ಹೆಚ್ಚು ಗೊತ್ತಾಗುತ್ತದೆ." [೮]

ರಾಮಾನುಜನ್ ಅವರ ಕಾವ್ಯದ ಭಿನ್ನತೆ ಮತ್ತು ವಿಶಿಷ್ಟತೆಯನ್ನು ಕುರ್ತಕೋಟಿ ಅವರು ಹೀಗೆ ಗುರುತಿಸುತ್ತಾರೆ. ಬಹುಶಃ ರಾಮಾನುಜನ್ ಅವರ ಈ ಕವಿತೆಯು ಚಂದ್ರಶೇಖರ ಕಂಬಾರರ 'ಗಂಗಾಮಾಯಿ' ಕವಿತೆಯ ರಚನೆಗೆ ಪ್ರೇರಣೆಯಾಗಿರಬಹುದು.

೩.೨.೬. ಅಂಗುಲ ಹುಳುವಿನ ಪರಕಾಯ ಪ್ರವೇಶ

ತನ್ನ ಕಾಲಘಟ್ಟದವರೆಗೆ ಹಲವಾರು ಕವಿಗಳು ಯಾಂತ್ರಿಕವಾಗಿ ಅಭಿವ್ಯಕ್ತಿಸಿದ್ದಕ್ಕಿಂತ ಸಂಪೂರ್ಣ ಭಿನ್ನ ಮಾದರಿಯ ಒಂದು ಕವಿತೆ 'ಅಂಗುಲ ಹುಳುವಿನ ಪರಕಾಯ ಪ್ರವೇಶ'. ಇಲ್ಲಿ ಮೇಲ್ನೋಟಕ್ಕೆ ತೆಳುಹಾಸ್ಯದಿಂದ ಕೂಡಿದ ಕವಿತೆ ಎಂಬ ಭ್ರಮೆಯನ್ನುಂಟು ಮಾಡಿದರೂ ಇದು ಒಂದು ವಿರಳವಾದ ರೀತಿಯ ಅಪರೂಪದ ಕವಿತೆ. ಇಲ್ಲಿ ಕವಿ ಕಾವ್ಯವನ್ನು ಒಳಗೊಂಡಂತೆ ಎಲ್ಲಾ ಲಲಿತಕಲೆಗಳೂ ನಿರ್ಮಾಣಗೊಳ್ಳುವ ಹಂತದಲ್ಲಿನ ನಿಗೂಢತೆಯನ್ನು ಗಾಢವಾಗಿ ವಿಶ್ಲೇಷಿಸುತ್ತಾರೆ. ವಸ್ತು ಸೌಕರ್ಯಗಳ ಅಗಾಧತೆಯ ಹಣಕೇಂದ್ರಿತ ಮೌಲ್ಯಗಳ ಈ ಸಮಾಜದಲ್ಲಿ ಅತ್ಯಂತ ಸೂಕ್ಷ್ಮವೂ ಹೃದಯಂಗಮವೂ ಆದ ಕಲೆಗಳು ಸೂಕ್ಷ್ಮತೆ ಇಲ್ಲದ ಮಂದಮತಿಗಳಿಗೆ ದಕ್ಕುವಂತಹ ವಸ್ತುವಲ್ಲ ಎಂಬುದನ್ನು ಹಾಸ್ಯ, ವಿಡಂಬನೆಗಳೊಂದಿಗೆ ಕವಿ ನಿರೂಪಿಸುತ್ತಾರೆ.

'ಒಂದು ಅಂಗುಲ ಹುಳ' ಒಂದು ಹಕ್ಕಿಯ ಕೊಕ್ಕು, ಮೂಗು, ರೆಕ್ಕೆ, ಪುಕ್ಕ, ಮುಖ, ಮುಂತಾದ ಅದರ ಎಲ್ಲಾ ಅಂಗಗಳನ್ನೂ ಅಂಗುಲಂಗುಲವಾಗಿ ಅಳೆಯಬಹುದು. ಆದರೆ ಸಹೃದಯರನ್ನು ರಸಾನುಭವದ ತುತ್ತತುದಿಗೆ ಪರಾಕಾಷ್ಠತೆಯ ಸ್ಥಿತಿಗೆ ತಲುಪಿಸುವ ಹಕ್ಕಿಯ ಇಂಪಾದ ಹಾಡನ್ನು ಅಳೆಯಲು ಸಾಧ್ಯವಿಲ್ಲ ಎಂಬುದರ ಮೂಲಕ ಕಲಾವಿಮರ್ಶಕನೊಬ್ಬನ ಸಂಪೂರ್ಣ ಇತಿಮಿತಿಗಳನ್ನು ಸೂಚಿಸಲಾಗಿದೆ. ಬದುಕಿನ ಸಕಲ ದ್ರವ್ಯಗಳನ್ನು ಧಾರೆ ಎರೆದು ತನ್ನ ವ್ಯಾಪಕ ಹಾಗೂ ಗಾಢವಾದ ಅನುಭವಗಳ ಜೀವಸಹಸ್ರವನ್ನು ಜೀವಂತವಾಗಿ ಕಟ್ಟಿಕೊಡುವ ಸೂಕ್ಷ್ಮ ಕಲಾಪ್ರಕಾರಗಳನ್ನು ನಿಮಿಷ ಮಾತ್ರದಲ್ಲಿ ಟೀಕೆ ಮಾಡಿಬಿಡುವ ವಿಮರ್ಶಕನಿಗಿಂತ, ಸೃಜನಶೀಲ ಕಲೆಯ ನಿರ್ಮಿತಿ ಬಹುದೊಡ್ಡದು ಎಂಬುದು ಈ ಕವಿತೆಯ ಆಶಯ. ಈ ಆಶಯಕ್ಕೆ ತಕ್ಕ ಆಕೃತಿ ಈ ಕವಿತೆಯದು. ಈ ರೀತಿಯ ಆಶಯವನ್ನೊಳಗೊಂಡ ಅಭಿವ್ಯಕ್ತಿ ಕ್ರಮ ಆ ಕಾಲಘಟ್ಟದಲ್ಲಿ ತೀರಾ ಹೊಸದು:

> ಅಮೆರಿಕದಲ್ಲಿ ಕೇಳಿದ ಮಕ್ಕಳ ಕತೆ ಒಂದರಲ್ಲಿ
> ಒಂದು ದಿನ
> ಗುಬ್ಬಚ್ಚಿ ಬೇರೆಲ್ಲೋ ನೋಡುತ್ತಿದ್ದಾಗ
> ಅಂಗುಲದ ಹುಳ ಕಣ್ಣಿಗೆ ಬಿತ್ತು.
>
> ಒಂದಂಗುಲದ ಹುಳ–
> ಹಸಿಮೈ ಹಸಿರು,
> ಮೂಗು ಕೆಂಪು ಮೂಗುತಿ,
> ಮುಖ ಒತ್ತಿ
> ಬೆನ್ನೆಳೆದು

ಮಾ

ಕ ನಾ

ಗಿ ಮೈ ಮಡಿಸಿ

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು, ಪದ್ಯದ ರಚನೆ. ಇಲ್ಲಿ ರಾಮಾನುಜನ್ನರ ಮುಖ್ಯ ಕಾವ್ಯಾಸ್ತ್ರಗಳೆಲ್ಲ ಇವೆ. ಗಿಡ್ಡ, ಉದ್ದ, ಸಾಮಾನ್ಯ ಇತ್ಯಾದಿ ಸಾಲುಗಳು. ಸ್ಪಷ್ಟ, ನಿಖರವಾದ ಚಿತ್ರಗಳು, ಕತೆ ಹೇಳುವ ಮಾತಾಡುವ ಶೈಲಿ, ಪದ ವಿಭಜನೆ, ಒಂದಕ್ಷರದ ಒಂದು ಸಾಲು, ಎರಡಕ್ಷರದ ಇನ್ನೊಂದು, ಒಂದು ಸಾಲಿನಿಂದ ಇನ್ನೊಂದು ಸಾಲಿಗೆ ಅರ್ಥಕ್ಕೋಸ್ಕರ ಕುಪ್ಪಳಿಸಬೇಕಾದ ಸಹಜವಾದ ತಾಂತ್ರಿಕ ಕೌಶಲವಿದೆ. ರಾಮಾನುಜನ್ ಅವರು ಭಾವನೆಗಳನ್ನು ಭಾಷೆಯಲ್ಲಿ ಇಂದ್ರಿಯಗೋಚರವಾಗುವಂತೆ ರಚಿಸುವುದರಲ್ಲಿ ನಿಸ್ಸೀಮ ಕವಿ:

ಬೆನ್ನೆಳೆದು

ಮಾ

ಕ ನಾ

ಗಿ ಮೈ ಮಡಿಸಿ

ಎಂಬ ಚಾಕ್ಷುಕರೀತಿಯಲ್ಲಿ ಇರಿಸಿರುವುದು ಆ ಕಾಲಕ್ಕೆ ಹೊಸತು. ಇದು ಪ್ರಾಚೀನ ಸಂಸ್ಕೃತ ಕವಿಗಳ ಚಿತ್ರಕವಿತೆಯ ಮಾದರಿಯನ್ನು ನೆನಪಿಗೆ ತರುತ್ತದೆ. ಅದೇ ಕವಿತೆ –

ಅಂಗುಲ ಅಂಗುಲ ಅಂಗುಲ ಅಳೆಯಿತು
ಅಳೆದು ಅಳೆದು
ಮರಗಿಡದ ಕಾಡ ನಡುವೆ ಹಾಡು
ಮುಗಿಯುವುದರೊಳಗೆ
ಸದ್ದಿಲ್ಲದೆ
ಗುರುತಿಲ್ಲದೆ
ಹೆಸರಿಲ್ಲದೆ
ಕಣ್ಮರೆಯಾಯಿತು.

ಈ ಕವಿತೆ ಹೀಗೆ ಕೊನೆಗೊಂಡಿದೆ.

ಪರದೇಶವಾಸಿ, ಸೃಜನಶೀಲ ಸಾಹಿತಿಯೊಬ್ಬನ ಅಲ್ಲಿ ಇಲ್ಲಿ ಬದುಕಿಗೆ ಈ ಕವನ ಒಂದು ಸಂಕೇತವೆಂದು ಪರಿಗಣಿಸಬಹುದೆ? 'ಹೆಸರಿಲ್ಲದೆ' ಎನ್ನವುದನ್ನು ಬಿಟ್ಟುಬಿಟ್ಟರೆ– ರಾಮಾನುಜನ್ ಬೇಕಾದಷ್ಟು ಹೆಸರು ಮಾಡಿದರು ಅದಕ್ಕೆ– ಅಂಗುಲ ಹುಳುವಿನ ಹಾಗೇ ಅಂಗುಲದಿಂದ

ಹಿಡಿದು ಸಾವಿರಾರು ಮೈಲು ಪಯಣ ಮಾಡಿದ, ಅನ್ವೇಷಿಸಿದ ರಾಮಾನುಜನ್, ಅಂಗುಲದ ಹುಳುವಿನ ಹಾಗೆಯೇ 'ಮರಗಿಡದ ಕಾಡ ನಡುವೆ' 'ಕಣ್ಮರೆಯಾದರು' ಎನ್ನಬಹುದೆ? ಕೋಗಿಲೆಯ ಹಾಡನ್ನು ಅಳೆಯಲು ಬೇಕಾದ ಅಮರತ್ವ ಯಾರಿಗೆ ತಾನೇ ಸಾಧ್ಯ? ಈ ಕವಿತೆಯನ್ನು ಓದುವಾಗ ಸಹೃದಯನಿಗೆ ಈ ಎಲ್ಲಾ ಪ್ರಶ್ನೆಗಳು ಎದುರಾಗಬಹುದು.

ಓ.ಎಲ್.ನಾಗಭೂಷಣ ಸ್ವಾಮಿ ಅವರು ಇತ್ತೀಚಿನ ಒಂದು ಸಭೆಯಲ್ಲಿ ಎ.ಕೆ.ರಾಮಾನುಜನ್ ಅವರ 'ಅಂಗುಲದ ಹುಳು' ಕವನದ ಬಗ್ಗೆ ಮಾತನಾಡುತ್ತ:

> "ನಿಜಕ್ಕೂ ರಾಮಾನುಜನ್ ಅವರು ಮಾಡಿದ್ದು ಅಂಗುಲಹುಳುವಿನ ಕೆಲಸವನ್ನೇ; ಇಂಚು, ಇಂಚು ಅಳೆಯುವ ಪ್ರಯತ್ನವನ್ನೇ; ಹೇಗೆಂದರೆ ಅವರು ಪಾಶ್ಚಾತ್ಯ ಅಳತೆಪಟ್ಟಿಗೆ ಅನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಇಟ್ಟು ಅಳೆದುನೋಡುವ ಕೆಲಸವನ್ನು ಮಾಡಿದರು. ಇವರು ಮುಖ್ಯಧಾರೆಯ ಹೊರಗಿರುವ ಭಾರತೀಯ ಜನಪದವನ್ನು ಅಮೆರಿಕನ್ನರಿಗೆ, ಪಶ್ಚಿಮದ ಅಳತೆಗೆ ಅಳೆದು ತೋರಿಸಬೇಕು; ಇದಕ್ಕೆ 'ಅಂಗುಲದ ಹುಳು' ಆಗಿರಬೇಕು. ಇದಿಷ್ಟೇ ಅಲ್ಲದೆ ಅವರ ಎಲ್ಲಾ ಪ್ರಕಾರದ ಸಾಹಿತ್ಯದಲ್ಲಿ ಅರ್ಥಾತ್ ಜಾನಪದ, ಅನುವಾದ, ವಚನ ಸಾಹಿತ್ಯ ಎಲ್ಲವನ್ನೂ ಪಾಶ್ಚಾತ್ಯರ ಪರಿಕಲ್ಪನೆಯ ಇಂಚುಪಟ್ಟಿಗೆ ಅನುಗುವಣವಾಗಿ ಅಳೆದು ತೋರಿಸಿದ ಮಹಾನ್ ಚಿಂತಕ."[೯]

ಎಂದು ಹೇಳಿದ ನಾಗಭೂಷಣಸ್ವಾಮಿ ಅವರ ಅಭಿಪ್ರಾಯ ಸೂಕ್ತವಾಗಿಯೇ ಇದೆ. ಇದು ಸ್ಥೂಲವಾಗಿ ಕವಿತೆಯ ಕತೆ. ಇಲ್ಲಿ ಒಂದು ಕಲಾಕೃತಿಯಲ್ಲಿ ಗುಣಗ್ರಹಣ ಮಾಡದೆ ದೋಷಗಳನ್ನೇ ಎತ್ತಿ ತೋರಿಸುವ ಪೀಡಕ ಮನೋಭಾವದ ಕು-ವಿಮರ್ಶಕರನ್ನೂ ತೀಕ್ಷ್ಣವಾಗಿ ವಿಡಂಬಿಸಲಾಗಿದೆ ಎಂದು ಊಹಿಸಬಹುದಾಗಿದೆ. ಒಂದು ಶ್ರೇಷ್ಠ ಕಲಾಕೃತಿಯ ಸೃಜನಶೀಲತೆಯನ್ನು ಯಾವುದೇ ರೀತಿಯ ಅಳತೆ, ತೂಕ, ಮೌಲ್ಯಮಾಪನ ಮುಂತಾದ ತಾಂತ್ರಿಕ ಇಕ್ಕಟ್ಟುಗಳಿಗೆ ಸಿಕ್ಕಿಸಲಾಗುವುದಿಲ್ಲ.

೩.೨.೭. ಸಹಜ

ಈ ಕವಿತೆಯಲ್ಲಿ ಕವಿ ರಾಮಾನುಜನ್ ನಿರೂಪಿಸಿರುವುದು ಕೇವಲ ಶಂಕರ ನಿರೂಪಿತ ಅದ್ವೈತವನ್ನಲ್ಲ. ಒಟ್ಟು ಮಾನವನ ಜೀವನದ ಪ್ರತಿಯೊಂದು ಘಟನೆಗಳಲ್ಲಿಯೂ ಅದ್ವೈತ ತತ್ವ ಅಡಗಿದೆ ಎಂಬುದನ್ನು ಹೇಳಿ, ತತ್ವಜ್ಞಾನಿಯೊಬ್ಬನ ತತ್ವಕ್ಕಿಂತ ಇಹಲೋಕದ ವಾಸ್ತವ ಬದುಕು ಬಹು ಮುಖ್ಯ ಎಂಬುದರ ಕಡೆ ಒತ್ತು ಕೊಟ್ಟಿರುವುದನ್ನು ಗುರುತಿಸಬಹುದಾಗಿದೆ:

೧. ಸ್ವಾಹಾ ಎಂದು ಹಸಿದು ಮುಕ್ಕಿದ್ದೆಲ್ಲ
ಹವಿಸ್ಸು ಸ್ವಾಮೀ

೨. ದಣಿದೋ ಕುಡಿದೋ ಬಿದ್ದು ಮಲಗಿದ್ದೇ
ಸಾಷ್ಟಾಂಗ

೩. ಅವಸರದಲ್ಲೋಡಿ ಮಾಡಿದ ಕಕ್ಕಸೇ
ನೈವೇದ್ಯ ಬಿಟ್ಟ ನೀರೇ ಧಾರೆ

ಮೇಲಿನ ಈ ಮೂರು ರೀತಿಯ ಅದ್ವೈತವನ್ನು ಕುರಿತ ಕವಿಯ ಪ್ರತಿಕ್ರಿಯೆಯು ಸಾಂಪ್ರದಾಯಿಕ ಮನುಪ್ರಣೀತ ವೈದಿಕ ಮನಸ್ಸುಗಳಿಗೆ ಶಾಕ್ ಉಂಟುಮಾಡಿದ ಹೊಸ ಅಭಿವ್ಯಕ್ತಿ ಕ್ರಮ ಇದು. ಈ ಸಂದರ್ಭದಲ್ಲಿ 'ನಾಟ್ಯೋತ್ಸವ' ಕವಿತೆಯನ್ನು ಬರೆದ ಮುಕ್ತ ಮನಸ್ಸಿನ ಪೇಜಾವರ ಸದಾಶಿವ ರಾಯರನ್ನು ನೆನಪಿಸುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಇಬ್ಬರೂ ಕವಿಗಳು ವೈದಿಕ ಪರಂಪರೆಯವರಾಗಿದ್ದು ಭಾರತದ ಬೇರುಗಳನ್ನು ಕಳಚಿಕೊಂಡು ಅನಾಥಪ್ರಜ್ಞೆಗೆ ಈಡಾಗಿ ಭಾರತೀಯರಾಗಿ ಉಳಿದುಕೊಂಡು ಆರ್ಷೇಯ ಧರ್ಮಕ್ಕೆ ಪ್ರಬಲವಾಗಿ ಪ್ರತಿರೋಧವನ್ನು ತೋರಿಸಿದ್ದಾಗಿದೆ.

ವಿಶಿಷ್ಟಾದ್ವೈತದ ವ್ಯಾಪಕ ಪ್ರಗತಿಶೀಲ ಪ್ರಭಾವದಿಂದ ಬೆಳೆದ ಈ ಕವಿ, ಜಗತ್ತಿನ ಪ್ರತಿಯೊಂದು ಕ್ರಿಯೆಗಳಲ್ಲೂ ನಮ್ಮ ಸಾಂಪ್ರದಾಯಿಕ ಮೋಕ್ಷ ಪಡೆಯುವ ಮಾರ್ಗಕ್ಕೆ ಮಾಧ್ಯಮವಾದ ಹೋಮ ಹವನಗಳ ಪ್ರಕ್ರಿಯೆಯನ್ನು ಕಾಣುತ್ತಾರೆ. ಸಹಜ ಎಂಬ ಕವಿತೆಯು ಅತ್ಯಂತ ತೀಕ್ಷ್ಣವಾಗಿ ವಿಡಂಬನಾತ್ಮಕವಾಗಿ ಈ ಅಂಶವನ್ನು ನಿರೂಪಿಸುತ್ತದೆ. ಹಸಿದು ತಿಂದದ್ದೆಲ್ಲ ಹವಿಸ್ಸು, ಉಸಿರಾಡುವ ಪ್ರಕ್ರಿಯೆಯೇ ಮಂತ್ರ, ವ್ಯವಹಾರಕ್ಕೋಸ್ಕರ ಅಲೆದಾಡುವುದೇ ಪ್ರದಕ್ಷಿಣೆ, ದಣಿದೋ, ಕುಡಿದೋ ಬಿದ್ದದ್ದೇ ಸಾಷ್ಟಾಂಗ, ಹೆಣ್ಣಿನ ಜೊತೆಯ ಸರಸವೇ ಆಹ್ವಾಹನೆ, ಸಹಜವಾದ ಮಲಮೂತ್ರ ವಿಸರ್ಜನೆ ನೈವೇದ್ಯ ಮತ್ತು ತೀರ್ಥ, ಬಿದ್ದಾಗ ಮೋಕ್ಷ, ಎದ್ದಾಗ ಪುನರ್‌ಜನ್ಮ ಈ ನಡುವಣ ಪ್ರಕ್ರಿಯೆಗಳೇ ಜನ್ಮಾಂತರಗಳು.

ಈ ರೀತಿಯ ವಸ್ತು ಮತ್ತು ಭಾಷಿಕ ರಚನೆ ಕನ್ನಡಲೋಕದ ಸಾಂಪ್ರದಾಯಿಕ ಓದುಗವರ್ಗಕ್ಕೆ ಶಾಕ್ ನೀಡಿ ಬೆಚ್ಚಿ ಬೀಳಿಸಿತು. ಆದರೆ ಇದರ ಪ್ರಭಾವ ಮುಂದಿನ ಯುವ ಕವಿಗಳ ಮೇಲೆ ನಿರ್ಭಿಡೆಯಿಂದ ಮುಕ್ತವಾಗಿ ಬರೆಯುವಂತೆ ಮಾಡಿತು. ಈ ದೃಷ್ಟಿಯಿಂದ ರಾಮಾನುಜನ್ ಅವರು ಗೋಪಾಲಕೃಷ್ಣ ಅಡಿಗರಷ್ಟೇ ಮುಖ್ಯ ಮಾರ್ಗಪ್ರವರ್ತಕ ನವ್ಯಕವಿ ಎಂದರೆ ಉತ್ಪ್ರೇಕ್ಷೆಯಾಗಲಾರದು.

೩.೨.೮. ಕೆಲವರ ಪುನರ್ಜನ್ಮ

ಈ ಕವಿತೆಯಲ್ಲಿ ಪುನರ್‌ಜನ್ಮವು ಧಾರ್ಮಿಕ ನಂಬಿಕೆಯಂತೆ, ಗೀತೆಯ ಉಪದೇಶದಂತೆ, ಚೀನಾದವರು ಹೇಳುವ ಹಾಗೆ ತಾಳ್ಮೆ ಇದ್ದರೆ ಸಾಕು ಎಂದು ನಂಬಿರುವ ಹಾಗೆ, ಪುನರ್‌ಜನ್ಮ

ಆಗುತ್ತದೆ ಎಂದು ತಿಳಿದಿರುವ ಹಾಗೆ ಈ ಕವಿತೆಯಲ್ಲಿ ಇಲ್ಲ. ಬೆಕ್ಕಿನ ಆಕಸ್ಮಿಕ ಸಾವನ್ನು ನೆನೆದು ರೂಮಿಂದ ರೂಮಿಗೆ ಓಡಾಡಿದರೂ, ಹೆಂಡತಿ ಸೀರೆ ಬದಲಾಯಿಸಿದರೂ, ಮಗ-ಮಗಳಿಗೆ ಚಿಟ್ಟೆ ತೋರಿಸಿದರೂ ಪುನರ್‌ಜನ್ಮ ಎನಿಸಲಿಲ್ಲ. ಈ ಕವಿತೆಯಲಿ ರಾಮಾನುಜನ್ ಅವರು ಪುನರ್‌ಜನ್ಮದ ಬಗ್ಗೆ ನಂಬಿಕೆಯನ್ನು ಒಪ್ಪುವುದೂ ಇಲ್ಲ. ನಿರಾಕರಿಸುವುದೂ ಇಲ್ಲ. ಓದುಗನ ಜಿಜ್ಞಾಸೆಗೆ ಅದರ ತಿರ್ಮಾನವನ್ನು ಬಿಟ್ಟುಬಿಡುತ್ತಾರೆ. ಇದರ ಪರಿಣಾಮ ಕವಿತೆಯ ನಾಯಕನ ಮೇಲೆ ಕೊನೆಗೆ ಏನಾಯಿತು ಎಂಬುದರ ಬಗ್ಗೆ ತಿಳಿಯುವುದಿಲ್ಲ. ಇದು ಸಂದಿಗ್ಧತೆಗೆ ಎಡೆಯಾಗುತ್ತದೆ. ಆದರೆ ಬೆಕ್ಕಿನ ಸಾವು ಮಾತ್ರ ಒಂದು ವಾಸ್ತವ ಸಂಗತಿಯಾಗುತ್ತದೆ:

ನಮ್ಮ ಬೆಕ್ಕಿನ ಮರಿ
ಕಾರಿಗೆ ಸಿಕ್ಕಿ ಅದರ ಹೂರಣವೆಲ್ಲ ಹೊರಗೆ ಬಂದು
ರಕ್ತ ಮಾಂಸಕ್ಕೆ ಬಾಲ ಬೆಕ್ಕಿನ ತಲೆ ಮಾತ್ರ
ಅಂಟಿಕೊಂಡು ಅಪ್ಪಚ್ಚಿಯಾದಾಗ
ರೂಮಿನಿಂದ ರೂಮಿಗೆ
ಸ್ವಸ್ಥವಿಲ್ಲದೆ ಅಲೆದೆ.

ನಾಯಕನ ಪುನರ್‌ಜನ್ಮದ ಬಗೆಗಿನ ನಂಬಿಕೆಯ ದ್ವಂದ್ವ ಸ್ಥಿತಿಯನ್ನು ಕವಿತೆಯು ಹೀಗೆ ವಿವರಿಸುತ್ತದೆ. ಇಷ್ಟೆಲ್ಲಾ ಆಗಿಯೂ ಕೊನೆಗೆ ನಾಯಕ 'ಇದೆಲ್ಲಾ ಪುನರ್‌ಜನ್ಮ ಅನಿಸಲಿಲ್ಲ, ಗೀತೆಯ ಕೊಟೇಶನ್ ಕೂಡ ಜ್ಞಾಪಕಕ್ಕೆ ಬರಲಿಲ್ಲ' ಎಂಬ ಸ್ಥಿತಿಯನ್ನು ಮುಟ್ಟುತ್ತಾನೆ. ಒಟ್ಟಾರೆ ಪುನರ್‌ಜನ್ಮದ ಸತ್ಯವನ್ನು ಅನುಭವಕ್ಕೆ ತಂದುಕೊಳ್ಳುವುದು ಹೇಗೆ ಎಂಬುದನ್ನು ಕವಿತೆ ಚಿಂತಿಸುತ್ತದೆ. ಗೀತೆಯ ಸ್ಮೃತಿಯ ಸಾಲೂ ನಾಯಕನಿಗೆ ವಿಸ್ಮೃತಿಯ ಅನುಭವವನ್ನು ಉಂಟುಮಾಡುತ್ತದೆ. ಕೊನೆಗೂ ಅವನಿಗೆ ಪುನರ್‌ಜನ್ಮದ ಅನುಭವ ಆಗುವುದೇ ಇಲ್ಲ.

೩.೨.೯. ಆ ಹಕ್ಕಿ ಬೇಕಾದರೆ

ಅವರು ಅಂದಿನ ಕಾಲಘಟ್ಟದಲ್ಲಿ ಕಾವ್ಯರಚನೆಗೆ ಸಂಬಂಧಿಸಿದಂತೆ ರಾಮಾನುಜನ್ ಅವರು ಹಲವಾರು ನವೀನ ಪ್ರಯೋಗಗಳನ್ನು ಕೂಡ ಮಾಡಿದ್ದಾರೆ. ಸಾಲುಗಳನ್ನು ಜೋಡಿಸುವ ವಿಶಿಷ್ಟ ವಿನ್ಯಾಸದ ಕ್ರಮವೇ ಅಚ್ಚರಿ ತರುವಷ್ಟು ನೂತನವಾಗಿದೆ. ಉದಾಹರಣೆಗೆ 'ಆ ಹಕ್ಕಿ ಬೇಕಾದರೆ' ಎಂಬ ಕವಿತೆಯಲ್ಲಿ ಮಂಗೋಲಿಯದ ಒಂದು ಜಾನಪದ ಕಥೆಯ ಎಳೆಯೊಂದನ್ನು ಎಳೆದು ಮೂಲತಃ ಮನುಷ್ಯನ ಪ್ರವೃತ್ತಿಯಲ್ಲಿ ದಮನಕಾರಿ, ಆಕ್ರಮಣಶೀಲ, ಹಿಂಸಾಪ್ರವೃತ್ತಿಯು ಹೇಗೆ ಅಡಗಿದೆ ಎಂಬುದರ ಜೊತೆಗೆ ಅವನ ಎಲ್ಲವನ್ನೂ ತನ್ನದಾಗಿಸಿಕೊಳ್ಳಬೇಕು ಎಂಬ ಸ್ವಾರ್ಥದ ಹಂಬಲವನ್ನು ಕೂಡ ಹೇಳಲು ಯತ್ನಿಸುತ್ತಾರೆ. ಇಷ್ಟಾಗಿಯೂ ಕಥಾನಾಯಕನಾದ ಮಂಗೋಲಿಯದ ರಾಜ ಮನೆಗೆ ಹಿಂತಿರುಗದ ವಿಷಾದದ ಧ್ವನಿಯೊಂದಿಗೆ ಕವಿತೆ ಅಂತ್ಯಗೊಳ್ಳುತ್ತದೆ.

ಸಾಮ್ರಾಜ್ಯ ವಿಸ್ತರಣೆಯ ಆಮಿಷದಲ್ಲಿ ಮಂಗೋಲಿಯದ ರಾಜನು ಸಫಲನಾದರೂ – 'ಮನೆಗೆ ಹೋಗಲಿಲ್ಲ'.

ಇದ್ದ ಬಿದ್ದ ಆನೆ ಕುದುರೆ ರಥ
ಸೈನ್ಯ ಎಲ್ಲ ಕೂಡಿಸಿ
ಇಡೀ ರಾಜ್ಯವನ್ನೆಲ್ಲಾ ಗೆದ್ದು
ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡು
ಮನೆಗೇ ಹೋಗಲಿಲ್ಲ

ಈ ಕವಿತೆ, ಬದುಕಿನೊಳಗೆ ಒಂದು ಪದಾರ್ಥ ಬೇಕಾದರೆ ಹೇಗೆ ಅದಕ್ಕೆ ವ್ಯಾಪಕವಾದ ಸಂಬಂಧಗಳು ಇರುತ್ತವೆ ಎನ್ನುವುದನ್ನು ಹಾಸ್ಯ ಹಾಗೂ ಗಾಂಭೀರ್ಯಗಳ ಸಮಬೆರಕೆಯ ಮೂಲಕ ವ್ಯಕ್ತಗೊಳಿಸುತ್ತದೆ. ಇಲ್ಲಿ ಅಂತರಂಗವನ್ನು ತಟ್ಟುವ ಆಹ್ಲಾದಕ ಹೊಸ ಹಕ್ಕಿಯ ಹಾಡನ್ನು ಕೇಳಲು ಆಸೆಯಾದ ಒಬ್ಬ ರಾಜ ಆ ಹಕ್ಕಿ ವಾಸಿಸುವ ಇಡೀ ಸಾಮ್ರಾಜ್ಯವನ್ನು ಯುದ್ಧದ ಮೂಲಕ ಗೆದ್ದು, ಕೊನೆಗೆ ಹಕ್ಕಿಯ ಹಾಡನ್ನು ಕೇಳಲಾರದೆ ಕೊನೆಗೆ ಬದುಕಿ ಮನೆಗೆ ಹೋಗದ ವಿಚಿತ್ರ ಸ್ಥಿತಿಯನ್ನು ಮಾರ್ಮಿಕವಾಗಿ ಅನುಭವಿಸುತ್ತಾನೆ. ಜಗತ್ತಿನ ಪ್ರತಿಯೊಂದು ವಸ್ತುವಿಗೂ ಒಂದು ಸರಣಿ ರೀತಿಯ ಕೊಂಡಿ ಇರುತ್ತದೆ ಎಂಬುದಕ್ಕೆ ಈ ಚಿತ್ರಣ ಒಳ್ಳೆಯ ನಿದರ್ಶನವಾಗಿದೆ.

ಇದನ್ನು 'ಇರುವ ಭಾಗ್ಯವ ನೆನೆದು ಬಾರೆನೆಂಬುದನು ಬಿಡು' ಎಂಬ ಡಿ.ವಿ.ಜಿ ಅವರ ಕವಿತೆಯ ಭಾವವನ್ನು ಇದು ನೆನಪಿಗೆ ತರುತ್ತದೆ.

ಇಂಗ್ಲಿಷ್, ರಷ್ಯನ್, ಜಪಾನ್, ಫ್ರೆಂಚ್ ಹಾಗೂ ಭಾರತೀಯ ಸಾಹಿತ್ಯದ ಆಳವಾದ ಅಧ್ಯಯನದಿಂದ ಪ್ರೇರಿತವಾಗಿ ರಚನೆಯಾದ ಹಲವಾರು ಪದ್ಯಗಳು ಈ ಸಂಕಲನದಲ್ಲಿವೆ. ಈ ಸಂಕಲನದಲ್ಲಿ ಅಭಿವ್ಯಕ್ತಿಗೊಂಡಿರುವ ವಸ್ತುವಿಷಯಗಳು ಭಾರತೀಯ ಮಹಾಕಾವ್ಯಗಳಿಂದ ಮೊದಲುಗೊಂಡು ಆಧುನಿಕ ಪರಿಕಲ್ಪನೆಯ ಸಾಹಿತ್ಯದ ಪ್ರಕಾರಗಳವರೆಗೂ ಹರಡಿಕೊಂಡಿದೆ. ಅನುಭಾವದ ವ್ಯಾಪ್ತಿಯ ವಿಭಿನ್ನ ಆಯಾಮಗಳನ್ನು ಸಹೃದಯ ವರ್ಗಕ್ಕೆ ಪರಿಚಯಿಸುತ್ತದೆ.

ಸ್ವಭಾವತಃ ಕವಿತೆ ರೂಪಕ(Metophor) ಗಳನ್ನು ಒಳಗೊಂಡಿರುವಂತಹದ್ದು. ಈ ಕವಿತೆಯನ್ನು ಎಷ್ಟು ಬಾರಿ ಓದಿದರೂ ಪ್ರತಿ ಸಲವೂ ಒಂದೊಂದು ಹೊಸ ಹೊಸ ವಿಚಾರಗಳಿಗೆ ಮತ್ತು ಹೊಸ ಚಿಂತನೆಗಳಿಗೆ ನಮ್ಮನ್ನು ಹಚ್ಚಿಬಿಡುತ್ತದೆ. ಉತ್ತಮವಾದ ಕವಿತೆ ತನ್ನ ಅರ್ಥಗಳನ್ನು ಒಂದೇ ಸಲಕ್ಕೆ ಬಿಟ್ಟುಕೊಡುವುದಿಲ್ಲ. ಇದಕ್ಕೆ ರಾಮಾನುಜನ್ ಅವರ ಬಹುಪಾಲು ಕವಿತೆಗಳು ನಿದರ್ಶನಗಳಾಗಿವೆ. ರಾಮಾನುಜನ್ ಅವರ ಕಾವ್ಯವನ್ನು ಯಾವುದೇ ಒಂದು ಕಾಲಘಟ್ಟಕ್ಕೆ, ವಸ್ತುವಿಷಯಕ್ಕೆ, ಪ್ರದೇಶಕ್ಕೆ, ಧರ್ಮ–ಜಾತಿಗೆ ಸೀಮಿತಗೊಳಿಸಿ ನೋಡಲು

ಸಾಧ್ಯವೇ ಇಲ್ಲ. ಪಶ್ಚಿಮದಲ್ಲಿ ಕುಳಿತು ಅವರಿಗಾಗಿ, ಅವರ ಭಾಷೆಯಲ್ಲಿ, ಅವರ ಭಾವನೆಗಳಿಗೆ ಸ್ಪಂದಿಸುವಂತೆ ಬರೆಯುತ್ತಿದ್ದರೂ ಅದು ಭಾರತೀಯ ಮನಸ್ಸಿನ ಒಂದು ಚಿಂತನಾಕ್ರಮವೇ ಆಗಿರುತ್ತದೆ. ಭಾರತದ ಕಲೆ, ಸಂಸ್ಕೃತಿ, ಜಾನಪದ ಅಧ್ಯಯನ ಇವೆಲ್ಲವನ್ನೂ ಪಾಶ್ಚಾತ್ಯರಿಗೆ ಕೊಡುವಾಗಲೂ ಸಹ ಎಲ್ಲಿಯೂ ಅವರು ಭಾರತೀಯತೆಯನ್ನು ಬಿಟ್ಟುಕೊಟ್ಟಿಲ್ಲ.

ರಾಮಾನುಜನ್ ಅವರ ಕಾವ್ಯದ ರಚನಾಕ್ರಮ ನವೋದಯದ ಅಂತ್ಯದ ವಿಚಾರಗಳನ್ನು ಒಳಗೊಂಡಿದ್ದರೂ, ನವ್ಯದಲ್ಲಿ ಜೀವಂತವಾಗಿ ನೆಲೆಸಿ, ಪ್ರಗತಿಪರ ಮತ್ತು ದಲಿತ-ಬಂಡಾಯದ ಆಶಯಗಳಿಗೆ ಪೂರಕವಾಗಿ ಹಾಗೂ ಪ್ರಬಲಶಕ್ತಿಯಾಗಿ ನಿಲ್ಲುವಂತಹದ್ದು. ಇವರ ಕವನಗಳು ಕೇವಲ ಕಾವ್ಯ ಪ್ರತಿಮೆ, ರೂಪಕಗಳಷ್ಟೇ ಅಲ್ಲ 'ರೂಪಕಗಳ ಗೊಂಚಲು' ಎಂದು ಹೇಳಬಹುದು. ಪ್ರತಿಗೊಂಚಲಿನ ಹಣ್ಣುಗಳು ಒಂದೇ ರೀತಿ ಕಂಡರೂ ಅವು ಭಿನ್ನವಾದ ರುಚಿ, ಆಸ್ವಾದನೆಯನ್ನು ಒಳಗೊಂಡಿರುತ್ತವೆ.

ಸಂಸ್ಕೃತ ಮೂಲದ ಭಾರತದ ಕಲ್ಪನೆಯ ಜೊತೆಗೆ ಅದಕ್ಕಿಂತಲೂ ಹಿಂದಿನ ಮೌಖಿಕ ಪರಂಪರೆಯ ಜಾನಪದ ಮೂಲದ ಭಾರತವನ್ನು ಪರಿಚಯಿಸಿಕೊಡುವ ಇವರ ಪ್ರಯತ್ನ ಸಫಲವಾಗಿ, ಪಾಶ್ಚಾತ್ಯ ಸಾಹಿತ್ಯಾಸಕ್ತರಲ್ಲಿ ಭಾರತೀಯ ಸಂಸ್ಕೃತಿಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅಧ್ಯಯನ ಮಾಡುವಂತೆ ಪ್ರೇರೇಪಿಸಿರುವುದಕ್ಕೆ ಅನೇಕ ದೃಷ್ಟಾಂತಗಳಿವೆ.

ರಾಮಾನುಜನ್ ಅವರು ಕವಿತೆಯನ್ನು ಕಟ್ಟುವ ಕ್ರಮ, ಆಶಯ ಮತ್ತು ಆಕೃತಿಗಳ ಸಂಶ್ಲೇಷಣೆ, ಭಾಷೆಯನ್ನು ಮುರಿದು ಕಟ್ಟುವ ಮತ್ತು ಕಟ್ಟಿ ಮುರಿಯುವ ಅಭಿವ್ಯಕ್ತಿ ಕ್ರಮ, ವಸ್ತುವಿನ ಆಯ್ಕೆ, ಕವಿತೆಗಳ ಶಿರೋನಾಮೆ, ಸಂಕಲನದ ಶೀರ್ಷಿಕೆ, ಕಟ್ಟಿಕೊಡುವ ಚಿತ್ರಗಳು, ಕನ್ನಡ ಭಾಷೆಯ ಜಾಯಮಾನಕ್ಕೆ ಒಗ್ಗುವ ರೀತಿಯಲ್ಲಿ ಆಡುಮಾತಿಗೆ ಕಲೆಯ ಸೂಕ್ಷ್ಮ ಕುಸುರಿಯನ್ನು ದಕ್ಕಿಸುವುದು, ಬಳಸಿದ ರೂಪಕಗಳು, ಪ್ರತಿಮೆಗಳು, ನಿರೂಪಣೆಯ ವಿವಿಧ ಮಾದರಿಗಳು ಹಾಗೂ ಅರ್ಥಾಭಿವ್ಯಕ್ತಿಯ ವೈರುಧ್ಯ ಹಾಗೂ ವೈವಿಧ್ಯಮಯ ಆಯಾಮಗಳ ನಾವೀನ್ಯ- ಹೀಗೆ ಕಾವ್ಯ ನಿರ್ಮಾಣ ಕ್ರಿಯೆಯ ವಿವಿಧ ಅಂಗಗಳ ಪ್ರತಿಯೊಂದು ಸೂಕ್ಷ್ಮಗಳಲ್ಲಿಯೂ ಅವರು ಕಲೆಗಾರಿಕೆಯ ಅಂಶವನ್ನು ಸಹಜವಾಗಿ ಆವಾಹನೆಯನ್ನಾಗಿಸಿರುವುದು ಈ ಸಂಕಲನವನ್ನು ಆ ಕಾಲಘಟ್ಟದ ಇತರ ತಮ್ಮ ಓರಗೆಯ ಕವಿಗಳ ಕೃತಿಗಳಿಗಿಂತ ಭಿನ್ನವಾಗಿಸಿದೆ, ಅನನ್ಯವನ್ನಾಗಿಸಿದೆ.

ರಾಮಾನುಜನ್ ಅವರ ಕಾವ್ಯದಲ್ಲಿ ಭಾಷೆಯ ಬಳಕೆ ಅನನ್ಯವಾಗಿದೆ. ಅದುವರೆಗೆ ಕನ್ನಡ ಕಾವ್ಯ ಕಂಡರಿಯದ ರೀತಿಯಲ್ಲಿ ಭಾಷೆಯನ್ನು ಮುರಿದು ಕಟ್ಟುವ ವಿಶಿಷ್ಟ ಸೃಜನಶೀಲತೆಯ ಅಂಶ ಇಲ್ಲಿದೆ. ಚಿತ್ರಕಾವ್ಯದ ರೀತಿಯಲ್ಲಿ ಕಮಾನಾಗಿ ಎಂದು ಬಳಸುವುದು, ಹೆಂಡತಿ ಎಂಬ ಶಬ್ದವನ್ನು 'ಹೆಂಡ' ಒಂದು ಸಾಲಿನಲ್ಲಿ 'ತಿ'ಯನ್ನು ಮುಂದಿನ ಸಾಲಿನಲ್ಲಿ ಬಳಸಿ ಆ ಶಬ್ದಕ್ಕೆ ಇರುವ ಸಾಧ್ಯತೆಗಳನ್ನು ತೋರಿಸುವುದು. ಕೇವಲ ಶಬ್ದಗಳಿಲ್ಲದೆ ಛಂದಶ್ಶಾಸ್ತ್ರದ ರೀತಿಯಲ್ಲಿ

ಕವಿತೆಗಳಿಗೆ ಪ್ರಸ್ತಾರ ಹಾಕುವ ಲಘು–ಗುರುಗಳ ಸಂಕೇತರೂಪದಲ್ಲಿ ಪದ್ಯವನ್ನಿಡುವುದು ಮುಂತಾದ ಅನೇಕ ಭಾಷಾಪ್ರಯೋಗಗಳನ್ನು ಕೂಡ ರಾಮಾನುಜನ್ ಮಾಡಿದ್ದಾರೆ. ಅವರ ಸಂಕಲನಗಳಲ್ಲಿ ಪದ್ಯಗಳನ್ನು ಅಚ್ಚು ಮಾಡಿರುವ ಕ್ರಮವನ್ನು ನೋಡಿದಾಗ ಈ ಸೂಕ್ಷ್ಮಗಳು ಅರ್ಥವಾಗುತ್ತದೆ.

ಈ ಸಂಕಲನವನ್ನು ರಾಮಾನುಜನ್ ಅವರು ತಮ್ಮ ಓರಗೆಯ ಮತ್ತು ತಮ್ಮ ಪ್ರಭಾವ ಬೀರಿದ ಸಮಕಾಲೀನ ಕನ್ನಡದ ಲೇಖಕರಿಗೆ 'ಕಲಿಸದೇ ಕಲಿಸಿದ ಅಡಿಗ, ಜಿ.ಬಿ.ಜೋಶಿ, ಎಂ.ಜಿ.ಕೆ, ಕೀರ್ತಿನಾಥ ಕುರ್ತಕೋಟಿ, ಚಂದ್ರಶೇಖರ ಕಂಬಾರ, ಗಿರೀಶ ಕಾರ್ನಾಡ ಮತ್ತು ತಮ್ಮ ಪತ್ನಿ ಮಾಲಿ ಇವರಿಗೆ' ಅರ್ಪಿಸಿರುವುದು ಅರ್ಥಪೂರ್ಣವಾಗಿದೆ. ತಮ್ಮ ಮೇಲೆ ಇವರೆಲ್ಲರ ಅವ್ಯಕ್ತವಾದ ಪ್ರಭಾವ ಉಂಟಾಗಿರುವುದನ್ನು ಕವಿ ತಮ್ಮೊಳಗೇ ಗುರುತಿಸಿದ್ದಾರೆ. ಇಲ್ಲಿ ಹೆಚ್ಚು ಕಡಿಮೆ ಇವರಲ್ಲಿ ಬಹುಪಾಲು ಜನ ಅಮೆರಿಕಕ್ಕೆ ಹೋಗಿ ಬಂದವರು ಎಂಬುದನ್ನು ಗಮನಿಸಬೇಕು. ಅಷ್ಟೇ ಅಲ್ಲದೆ, ಇವರೆಲ್ಲರೂ ಆಧುನಿಕ ಕನ್ನಡ ಸಾಹಿತ್ಯದ ವಿವಿದ ಮಗ್ಗುಲುಗಳನ್ನು ಪ್ರತಿನಿಧಿಸಿದವರು. ಅಡಿಗರು, ಕಂಬಾರರು ಕವಿಗಳಾದರೆ, ಗಿರೀಶ್ ಮತ್ತು ಜೋಶಿ ಅವರು ನಾಟಕಕಾರರು, ಎಂ.ಜಿ.ಕೆ. ಮತ್ತು ಕುರ್ತಕೋಟಿ ಅವರು ವಿಮರ್ಶಕರು – ಹೀಗೆ ಕನ್ನಡದ ಸಮಗ್ರಪ್ರಜ್ಞೆಗೆ ಎ.ಕೆ.ಆರ್. ಅವರು ಆಭಾರಿಯಾಗಿರುವುದು ಕೂಡ ಅರ್ಥಪೂರ್ಣವಾಗಿದೆ.

೩.೨.೧೦. ಅವಳಿ ಜವಳಿ

ರಾಮಾನುಜನ್ ಪ್ರಪಂಚದ ಹೆಸರಾಂತ ಅನುವಾದಕರಲ್ಲಿ ಒಬ್ಬರಾಗಿ ಗುರುತಿಸಿಕೊಂಡಿದ್ದರೂ ಸಹ ಅವರು ಅವರ ಅನುವಾದಗಳ ಬಗ್ಗೆ ಗಾಂಭೀರ್ಯದ ಜೊತೆಗೆ ವ್ಯಂಗ್ಯ ವಿನೋದದ ರೂಪದಲ್ಲಿ ಪ್ರತಿಕ್ರಿಯಿಸುತ್ತಾ ತಮ್ಮ 'ಅವಳಿ ಜವಳಿ' ಕವನದಲ್ಲಿ ಹೀಗೆ ಅಭಿಪ್ರಾಯ ಪಡುತ್ತಾರೆ:

ದೊಡ್ಡವರು ಮಾಡಿದರೆಂದು
ಅವಳ ತೊಡಿಗೆ ಇವಳಿಗಿಟ್ಟು
ಇವಳ ತೊಡಿಗೆ ಅವಳಿಗಿಟ್ಟು
ಹಾಡ ಬಯಸಿದೆ.
ಏನಾಯಿತು ಗೊತ್ತೇ?
ಅವಳ ಸೀರೆ ಇವಳು ಹರಿದು
ಇವಳ ಸೀರೆ ಅವಳು ಹರಿದು
ಓಡ ಬಯಸಿದೆ

ಇದು ಕನ್ನಡದ ಕಣ್ವ ಬಿ.ಎಂ.ಶ್ರೀ. ಅವರ ಇಂಗ್ಲಿಷ್ ಕಾವ್ಯವನ್ನು ಕನ್ನಡೀಕರಣ ಮಾಡಿಕೊಳ್ಳಬೇಕೆಂಬ ನಿಲುವಿಗೆ ಕಾವ್ಯದಲ್ಲಿ ನೀಡಿದ ಸೃಜನಾತ್ಮಕ ಪ್ರತಿಕ್ರಿಯೆ. ಬಿ.ಎಂ.ಶ್ರೀ. ಅವರು ಬರೆದ ಕವಿತೆಯ ಸಾಲುಗಳು –

ಅವಳ ಉಡುಗೆ ಇವಳಿಗಿಟ್ಟು ಹಾಡಬಯಸಿದೆ
ಇವಳ ಉಡುಗೆ ಅವಳಿಗಿಟ್ಟು ನೋಡಬಯಸಿದೆ

ಬಿ.ಎಂ.ಶ್ರೀ. ಅವರ ಅನುವಾದ ಪ್ರಕ್ರಿಯೆಯನ್ನು ಈ ರೀತಿ ರಾಮಾನುಜನ್ ಅವರು ಅಣಕಕ್ಕೆ ಗುರಿ ಮಾಡುತ್ತಾರೆ. ವ್ಯಂಗ್ಯ ನವ್ಯಕಾವ್ಯದ ಒಂದು ಅಭಿವ್ಯಕ್ತಿ. ಇದು ರಾಮಾನುಜನ್ ಅವರ ಕಾವ್ಯದಲ್ಲಿ ಸಮರ್ಥವಾಗಿ ಅಭಿವ್ಯಕ್ತಿ ಪಡೆದಿದೆ. ಅವರ ಮತ್ತೊಂದು 'ಅಪ್ಪ-ಮಗ ಕವಿತೆಯಲ್ಲಿ ಕೂಡ ವ್ಯಂಗ್ಯ ಅಸಾಧ್ಯವಾದ ಹರಿತದಲ್ಲಿ ವ್ಯಕ್ತವಾಗಿದೆ. ಇಲ್ಲಿ ರಾಮಾನುಜನ್ ಅವರು ಬಿ.ಎಂ.ಶ್ರೀ. ಅವರನ್ನು ಕನ್ನಡ ನವೋದಯ ಕಾವ್ಯದ ಆಚಾರ್ಯರೆಂದು ಅಂಗೀಕರಿಸಿಯೂ ಕೂಡ ಅವರ 'ಮೊದಲ ಕಾಣಿಕೆ' ಎಂಬ ಶ್ರೀ ಅವರ ಸ್ವತಂತ್ರ ಕವಿತೆಯನ್ನು ವಿಡಂಬಿಸುವುದರ ಮೂಲಕ ರಾಮಾನುಜನ್ ಆ ಕವಿತೆಗೆ ಮತ್ತೊಂದು ಆಯಾಮವನ್ನು ನೀಡುತ್ತಾರೆ. ಈ ಕವಿತೆಯಲ್ಲಿ ದೊಡ್ಡವರು ಎಂದರೆ ಬಿ.ಎಂ.ಶ್ರೀ. ಅವರೇ; ಬಿ.ಎಂ.ಶ್ರೀ. ಅವರು ತಮ್ಮ ಕವಿತೆಯಲ್ಲಿ ಇಂಗ್ಲಿಷ್ ಮತ್ತು ಕನ್ನಡಗಳನ್ನು 'ಅವಳು' ಮತ್ತು 'ಇವಳು' ಎಂದು ನಿರ್ದೇಶಿಸಿದ್ದಾರೆ. ಆದರೆ ರಾಮಾನುಜನ್ ಆ ರೂಪಕಾರ್ಥವನ್ನು ಬಿಟ್ಟು ಅವಳು-ಇವಳುಗಳ ವಾಚ್ಯಾರ್ಥವನ್ನೇ ಸ್ವೀಕರಿಸಿದ್ದಾರೆ. ಇಲ್ಲಿ ಕನ್ನಡ ಇಂಗ್ಲಿಷ್‌ಗಳು ಮುಖಾಮುಖಿಯಾಗಿರುವುದನ್ನು, ಆ ಮುಖಾಮುಖಿಯು ಕೇವಲ ಹಸಿ-ಬಿಸಿಯಾದಾಗ ಆಗಬಹುದಾದ ಅನರ್ಥವನ್ನು ಹಾಸ್ಯದೊಂದಿಗೆ ಹೇಳಲು ಪ್ರಯತ್ನ ಪಟ್ಟಿದ್ದಾರೆ. 'ಅವಳಿ ಜವಳಿ' ಕವಿತೆಯ ಕೊನೆಯೊಳಗೆ ಕವಿ ತನ್ನನ್ನು ತಾನೇ:

ಕೆಟ್ಟ ಜನರು
ಕಿಟಕಿಯಲ್ಲಿ ಇಣಕಿ ನೋಡಿ
ರಸಿಕನೆಂದು ಗೇಲಿ ಮಾಡಿ
ಸಂತೆ ಕೂಡಿತು
ಪೋ-
ಲೀಸು ಪಡೆಯು ಬಂದು
ನನ್ನ ಶೀಲ ತನಿಖೆ ಆಗಿ
ದಂಡ ತೆತ್ತೆನು

ಎಂದು ವಿಡಂಬನೆಗೆ ಈಡು ಮಾಡಿಕೊಳ್ಳುವುದು ಅವರ ಮನಸ್ಸಿನ ಸಮನ್ವಯ ಸ್ಥಿತಿಯನ್ನು ಹೇಳುತ್ತದೆ.

ತ್ರಿಭಾಷಾ ಕವಿಯಾದ ರಾಮಾನುಜನ್ ಅವರ ಕಾವ್ಯದ ವೈಶಿಷ್ಟ್ಯವನ್ನು ವಿಮರ್ಶಕರಾದ ಕೆ. ನರಸಿಂಹಮೂರ್ತಿ ಅವರು ಬರೆದ 'ಉಭಯ ಭಾಷಾ ಕವಿ' ಎಂಬ ಲೇಖನದಲ್ಲಿ ಅವರು ತಮ್ಮ ಮಾತುಗಳಲ್ಲಿ ಈ ರೀತಿ ಹೇಳುತ್ತಾರೆ:

> "ಆಧುನಿಕ ಕನ್ನಡ ನವ್ಯ ಕಾವ್ಯದಲ್ಲಿ ಅಡಿಗರಿಗಿಂತ ಭಿನ್ನವಾದ ಒಂದು ಹೊಸ ಮಾರ್ಗವನ್ನೇ ರಾಮಾನುಜನ್‌ರ ಅನನ್ಯವೂ, ವಿಶಿಷ್ಟವೂ ಆದ ಪ್ರತಿಭೆ ತೆರೆಯಿತು. ಸೂಕ್ಷ್ಮ ವಿಚಿಕಿತ್ಸಕ ವಿವೇಕವೇ ಪ್ರಧಾನವಾದ ಅವರ ಕಾವ್ಯ ಆದಷ್ಟೂ ಕಡಿಮೆ ಶಬ್ದಗಳಲ್ಲಿ, ಆದಷ್ಟು ಕೆಳದನಿಯಲ್ಲಿ, ತುಂಬಾ ಸಾಮಾನ್ಯವೆನಿಸುವಂತಹ ಸಂಗತಿಗಳ, ತೀರಾ ವೈಯಕ್ತಿಕ ಎನಿಸುವಂತಹ ಅನುಭವಗಳ ಮಾರ್ಮಿಕ ವಿಶ್ಲೇಷಣೆಯಿಂದಲೂ, ವಿಚಾರ ವಿಸ್ತರಣೆಯಿಂದಲೂ ಮಾನವ ಸ್ವಭಾವದ ನಿಗೂಢಗಳ ಮೇಲೆಯೂ, ವೈಚಿತ್ರ್ಯಗಳ ಮೇಲೆಯೂ, ಪ್ರಖರ ಬೆಳಕು ಚೆಲ್ಲುತ್ತದೆ. ಆಡುಮಾತಿಗೂ ಗದ್ಯಕ್ಕೂ ನಿಕಟ ಸಂಬಂಧವುಳ್ಳ ಅವರ ಶೈಲಿ ತನ್ನದೇ ಆದ ಅಪೂರ್ವ ಲಯವನ್ನೂ ಸಾಧಿಸಿಕೊಳ್ಳುತ್ತದೆ. ಭಾಷಾ ಶಾಸ್ತ್ರಜ್ಞರಾದ ಅವರ ಕೈಯಲ್ಲಿ ಶಬ್ದಗಳು ಆವಶ್ಯಕವಾದೆಡೆಗಳಲ್ಲಿ ತಮ್ಮ ಜನ್ಮರಹಸ್ಯವನ್ನೂ ಸ್ಫೋಟಗೊಳಿಸುತ್ತ ಉದ್ದೇಶಿತ ವ್ಯಂಗ್ಯಾರ್ಥವನ್ನು ಸಮರ್ಥವಾಗಿ ಧ್ವನಿಸುತ್ತವೆ."[೧೦]

೩.೩. ...ಮತ್ತು ಇತರ ಪದ್ಯಗಳು

ರಾಮಾನುಜನ್ ಅವರ ೨ನೇ ಕವನ ಸಂಕಲನ ಇದು. ೧೯೭೭ರಲ್ಲಿ ಮನೋಹರ ಗ್ರಂಥಮಾಲಾ ಈ ಕೃತಿಯನ್ನು ಪ್ರಕಟಿಸಿತು. ಈ ಸಂಕಲನವನ್ನು ಕವಿ ತಮ್ಮ 'ಕಣ್ಮರೆಯ ಸ್ನೇಹಿತ ಎಂ.ಜಿ.ಕೃಷ್ಣಮೂರ್ತಿ' ಅವರಿಗೆ ಅರ್ಪಿಸಿದ್ದಾರೆ. ನವ್ಯಕಾವ್ಯದಲ್ಲಿ ಪ್ರಧಾನವಾಗಿ ಕಂಡುಬರುವ ಸಂಕೀರ್ಣತೆ, ದ್ವಂದ್ವ, ಅನಾಥಪ್ರಜ್ಞೆ, ತಬ್ಬಲಿತನ ಮತ್ತು ವ್ಯಂಗ್ಯ ಈ ಅಭಿವ್ಯಕ್ತಿಗಳು ರಾಮಾನುಜನ್ ಅವರಲ್ಲಿ ಮತ್ತೆ ಮತ್ತೆ ಸಮರ್ಥವಾಗಿ ಕಾಣಿಸಿಕೊಳ್ಳುತ್ತವೆ. ಇಷ್ಟಿದ್ದಾಗ್ಯೂ, ರಾಮಾನುಜನ್ ಏಕಾಂತದಲ್ಲಿ ಲೋಕಾಂತವನ್ನು ಕಂಡವರು. '...ಮತ್ತು ಇತರ ಪದ್ಯಗಳ' ಕೆಲವು ಕವನಗಳಲ್ಲಿ ಈ ಪರಿಕರಗಳ ಮೂಲಕ ಸಂಸ್ಕೃತಿಯ ಅರ್ಥವನ್ನೂ ಮತ್ತು ಬದುಕಿನ ಆ ಸಂಕೀರ್ಣತೆಯನ್ನೂ ವ್ಯಂಗ್ಯದ ದಾಟಿಯಲ್ಲಿ ಧ್ವನ್ಯಾತ್ಮಕವಾಗಿ ಹಿಡಿದಿಡುವುದನ್ನು ಕಾಣಬಹುದು.

ಇಲ್ಲಿಯ ಕವನಗಳಲ್ಲಿಯೂ ಹಿಂದಿನ ಕಾವ್ಯದ ಧೋರಣೆಯೇ ಪ್ರಾಯೋಗಿಕ ನೆಲೆಯಲ್ಲಿ ಮುಂದುವರಿಯುತ್ತದೆ. ಈ ಸಂಕಲನದ ಶೀರ್ಷಿಕೆಯಲ್ಲಿಯೇ ಈ ಸಂಕಲನದ ಪ್ರಯೋಗಶೀಲತೆ ಕಂಡುಬರುತ್ತದೆ. ಇವರ ಕಾವ್ಯದ ಆಶಯ ಪ್ರಜಾಸತ್ತಾತ್ಮಕವಾದ ತುಡಿತಗಳನ್ನು ಮತ್ತು ಜಪಾನಿನ ಝೆನ್ ಕಾವ್ಯದ ಮಾದರಿಯ ಶಕ್ತಿಯನ್ನು ಒಳಗೊಂಡಿದೆ. ಈ ಹಿನ್ನೆಲೆಯಲ್ಲಿ ಕೆಲವು ಕವಿತೆಗಳನ್ನು ಪರಿಶೀಲಿಸಲಾಗಿದೆ.

ಈ ಸಂಕಲನದಲ್ಲಿ ಒಟ್ಟು ೪೦ ಕವಿತೆಗಳಿದ್ದು ಹಿಂದಿನ ಸಂಕಲನವಾದ 'ಹೊಕ್ಕುಳಲ್ಲಿ ಹೂವಿಲ್ಲ' ನಂತರ ೯ ವರ್ಷಗಳ ಅಂತರದಲ್ಲಿ ಇದು ಪ್ರಕಟಗೊಂಡಿದೆ. ಸುಮಾರು ಒಂದು ದಶಕದ ನಂತರ ಇದು ಪ್ರಕಟವಾಗಿರುವುದರಿಂದ ಸಹಜವಾಗಿಯೇ ಹಿಂದಿನ ಸಂಕಲನಕ್ಕಿಂತ

ಇಲ್ಲಿನ ಪದ್ಯಗಳು ಹೆಚ್ಚು ಪ್ರಬುದ್ಧವಾಗಿವೆ. ಈ ಸಂಕಲನದಲ್ಲಿ ಗಮನಿಸಬೇಕಾದ ಮುಖ್ಯಾಂಶವೆಂದರೆ ಕವಿತೆಗಳ ಭಾಷಿಕ ರಚನೆಯ ವಿಶಿಷ್ಟತೆ. ಕವಿತೆಯಲ್ಲಿ ಎರಡು ಸಾಲುಗಳು, ಮೂರು ಸಾಲುಗಳು, ನಾಲ್ಕು ಸಾಲುಗಳು, ಆರು ಸಾಲುಗಳ ಘಟಕಗಳು ಸ್ಥಾಯಿಯಾಗಿ ಬರುತ್ತವೆ. ಇದು ರಾಮಾನುಜನ್ ಅವರಿಗೆ ಕಾವ್ಯಭಾಷೆಯ ಮೇಲೆ ಸಿಕ್ಕಿರುವ ಹಿಡಿತವನ್ನು ಸೂಚಿಸುತ್ತದೆ. ಈ ಸಂಕಲನದಲ್ಲಿ ಮೊಟ್ಟ ಮೊದಲನೆಯ ಬಾರಿಗೆ ರಾಮಾನುಜನ್ ಅವರು ಅನುಭವಿಸುವ ಏಕಾಕಿತನದ ದುಗುಡ ತುಂಬಾ ತೀಕ್ಷ್ಣವಾಗಿ ಪ್ರಕಟಗೊಂಡಿದೆ. ಅನೇಕ ಪದ್ಯಗಳಲ್ಲಿ ಅಮೆರಿಕಾ ಮತ್ತು ಮೈಸೂರುಗಳ ಪ್ರಸ್ತಾಪ ಬರುತ್ತದೆ. ಈ ಸಂಕಲನದ ವಿಶೇಷವೆಂದರೆ ಕವಿತೆಯ ಶೀರ್ಷಿಕೆ, ಆ ಕವಿತೆಯ ಮೊದಲ ಸಾಲು. ಇದು ಕೂಡ ಆ ಕಾಲಕ್ಕೆ ಒಂದು ನೂತನವಾದ ಪರಿಕಲ್ಪನೆ. 'ಅಮೆರಿಕಾಕ್ಕೆ ಬಂದಾಗಲೇ', 'ಅಮ್ಮಾ ಎಲ್ಲೋ ಬೆಂಗಳೂರಲ್ಲಿ', 'ಸ್ವಿಟ್ಸರ್ಲ್ಯಾಂಡ್‌ನ ಮಂಜಿನಲ್ಲಿ', 'ಮಹಾರಾಜರ ಅರಮನೆ', 'ಅಮ್ಮನ ಅಜ್ಜಿ ಹೇಳಿದ ಕತೆ', 'ಬಸವನಗುಡಿ ಮೂಲೆ' ಈ ಕವಿತೆಗಳ ಶೀರ್ಷಿಕೆಗಳೇ ರಾಮಾನುಜನ್ ಅವರ ಮನಸ್ಸಿನಲ್ಲಿ ಕಾಡುತ್ತಿದ್ದ ಎರಡು ಸಂಸ್ಕೃತಿಗಳ ಘರ್ಷಣೆಯ ದ್ವಂದವನ್ನು ಸೂಚಿಸುತ್ತವೆ:

ಕನಸಿನಲ್ಲಿ ಹಳದಿಷರಟಿನ ಕೆದರಿದ ಕಳ್ಳ ಒಬ್ಬ
ತಪ್ಪಿಸಿಕೊಂಡು ಪೋಲಿಸು ಕಾರು ಸೈಕಲ್ಲು ಮಾರ್ಕೆಟ್ಟಿನ
ಜನ ಒಂದು ಮೆರೆವಣಿಗೆ ಬ್ಯಾಂಡು ಎಲ್ಲ ತೂರಿ
ಚದರಿಸುತ್ತ ಓಡುತ್ತಿದ್ದಾಗ ಬೀದಿಲೈಟಿನ ಕೆಳಗೆ
ನಿಂತಿದ್ದ ಬಿಳಿಷರಟಿನ ಗೃಹಸ್ಥ ನೀಡಿದ ಕೈ
ಝಾಡಿಸಿ ಕೊಡವಿ, "ಬಿಡೋ ನಿನ್ನ..." ಅಂತ ಬೈದು
ಗೋಡೌನ್ ಓಣಿಯೊಳಕ್ಕೆ ಓಡಿದ.

ರಾಮಾನುಜನ್ ಅವರು 'ಹೊಕ್ಕುಳಲ್ಲಿ ಹೂವಿಲ್ಲ' ಈ ಕವನದಲ್ಲಿ ತಮಗೆ ಬಿದ್ದ ಕನಸಿಗೂ ವಾಸ್ತವಕ್ಕೂ ನಡುವೆ ನಡೆಯುವ ಚಿತ್ರಣವನ್ನು ಇಲ್ಲಿ ಚಿತ್ರಿಸಿದ್ದಾರೆ. ಆತ ವಾಸ್ತವದಲ್ಲಿ ನಡೆದ ಘಟನೆ ಕನಸಿನಲ್ಲಿ ನಿಜವೋ ಸುಳ್ಳೋ ಎಂಬ ದ್ವಂದ್ವಕ್ಕೆ ಒಳಗಾಗುತ್ತಾನೆ. ತಾನು ಹಿಂದಿನ ದಿನ ಮಾರುಕಟ್ಟೆಯಲ್ಲಿ ಕೊಂಡು ತಂದ ಶರ್ಟುಗಳನ್ನು ಈ ದಿನ ಮಾರುಕಟ್ಟೆಯ ಕಳ್ಳನೊಬ್ಬ ಕದ್ದು ಓಡುತ್ತಿರುವಾಗ ತನ್ನವೆಂದು ಭ್ರಮಿಸಿ ಮನೆಗೆ ಬಂದು ಪರಿಶೀಲಿಸಿದಾಗ ಅವು ತನ್ನವಲ್ಲವೆಂದು ಸಮಾಧಾನ ಪಡುತ್ತಾನೆ. ತನ್ನ ಹೊಸ ಷರ್ಟ್‌ಗಳು ಮತ್ತು ಶಿಕಾಗೊದಲ್ಲಿ ಬಳಸಿದ ನೀಲಿ ಪಟ್ಟೆ ಪಟ್ಟೆ ಹಳೆಯ ಷರ್ಟ್ ಎಲ್ಲವೂ ಅಲ್ಲೇ ಇರುವುದನ್ನು ಖಚಿತಪಡಿಸಿಕೊಳ್ಳುತ್ತಾನೆ. ಹೀಗೆ ಕವಿಯ ಕನಸಿನಲ್ಲಿ ಹಳದಿ ಷರ್ಟ್‌ನ ತಲೆಕೆದರಿದ ಕುಳ್ಳನ ಬಗ್ಗೆ ಪಟ್ಟ ಅನುಮಾನವು ವಾಸ್ತವದಲ್ಲಿ ಸ್ಪಷ್ಟವಾದಾಗ ಕವಿ ಸಮಾಧಾನಗೊಳ್ಳುತ್ತಾನೆ.

೩.೩.೧. ಅಲ್ಲ ಇಷ್ಟು ವಯಸ್ಸಾದರೂ ಬೇಕು

'ಅಲ್ಲ ಇಷ್ಟು ವಯಸ್ಸಾದರೂ ಬೇಕು' ಎಂದು ಪ್ರಾರಂಭವಾಗುವ ಕವನದಲ್ಲಿ ಮಾನವ ಸಹಜವಾದ ಹಲವಾರು ಬಯಕೆಗಳನ್ನು ಹಿಡಿದಿಡುವ ಪ್ರಯತ್ನವನ್ನು ಮಾಡುತ್ತಾರೆ. ಕಾಯಿಲೆ ಇರುವ ಮನುಷ್ಯನಾದರೂ, ೩೨ ಮೊಮ್ಮಕ್ಕಳ ಮುದುಕನಾದರೂ, ಪ್ರೀತಿ, ಪ್ರೇಮ, ಕಾಮ ಪ್ರಣಯದ ಬಗ್ಗೆ "ಅಲ್ಲಾ ಇಷ್ಟು ವಯಸ್ಸಾದರೂ ಬೇಕು, ಇನ್ನೂ ಹಾಲು, ಮೊಲೆ, ಬಾಟಲು ಬಗ್ಗೆ ಆಸಕ್ತಿ". ಜೊತೆಗೆ ಮರ್ಯಾದೆಯನ್ನು ಮುಚ್ಚಿಟ್ಟುಕೊಂಡು ಬದುಕುವ ವ್ಯಕ್ತಿತ್ವ, ರಾತ್ರಿಯಾದ ಕೂಡಲೇ ಹೊರಗೆ "ಬೀದಿಯ ನೀಲಿಲೈಟು ಥಟ್ಟಂತ ಆರಿದಾಗ ಕೋಟು ಹಾಕಿಕೊಂಡ ಗುಮ್ಮನ ನೆರಳಿ"ನ ಹಾಗೆ ದೇಹದ ಬಯಕೆಗಳನ್ನು ಪೂರೈಸಲು ಹುಡುಕುತ್ತಾ ಹೋಗಲು ಬಯಸುತ್ತಾನೆ. ಮನುಷ್ಯನ ಮೂಲಪ್ರವೃತ್ತಿ ಎಲ್ಲಾ ನೈಸರ್ಗಿಕ ಬಯಕೆಗಳನ್ನು ಅನುಭವಿಸಬೇಕು ಎಂದು ಬಯಸಿದರೂ ಸಹ ವಯೋಮಾನದ ದೈಹಿಕ ಮತ್ತು ಮಾನಸಿಕ ಶಕ್ತಿಗೆ ಪೂರಕವಾಗಿ ಸ್ಪಂದಿಸದೆ, ಕೊನೆಗೆ ಒಂದು ಮಗುವಿನ ಮನಸ್ಥಿತಿಗೆ ತಲುಪುವುದನ್ನು ರಾಮಾನುಜನ್ ತಮ್ಮ ಈ ಕವನದಲ್ಲಿ ಅಭಿವ್ಯಕ್ತಿಸಿದ್ದಾರೆ.

ಈ ಕವಿತೆಯು ಒಂದು ಅನನ್ಯವಾದ ಚಹರೆಯನ್ನು ನೀಡುತ್ತದೆ. ಅಪ್ಪಟ ಇಹಲೋಕದ ಬದುಕನ್ನು ಶೇಖಡ ೧೦೦ರಷ್ಟು ಅನುಭವಿಸಬೇಕೆಂಬ, ಜೀವನದ ಐಷಾರಾಮಿ ಅನುಭವಗಳನ್ನು ಸಾಕ್ಷಾತ್ತಾಗಿ ಪಡೆಯಬೇಕೆನ್ನುವ ವ್ಯಕ್ತಿಯ ಭಯಕೆಗಳು ಇಲ್ಲಿ ಕಾಣಿಸಿಕೊಂಡಿವೆ. ನಡುವೆಯೇ ಗತಿಸಿಹೋದ ತಂದೆ ತಾಯಿಯರ ನೆನಪು ಆತನಿಗೆ ಪದೇ ಪದೇ ಕಾಡುತ್ತದೆ. ಹೀಗೆ ಹಲವು ಹತ್ತು ಭಾವಗಳ ಗೋಜಲುಗಳಿಂದ ಕೂಡಿದ ಕವಿತೆಯ ನಾಯಕ ಹೆಣ್ಣನ್ನು ತಾಯಿಯಾಗಿ, ಪ್ರೇಯಸಿಯಾಗಿ, ಹಲವು ಬಗೆಗಳಲ್ಲಿ ನೋಡಿರುವ ಆಯಾಮಗಳು ಇಲ್ಲಿವೆ. ೭೦ರ ದಶಕದ ಒಂದು ಅಪ್ಪಟ ನವ್ಯಕವಿತೆಗೆ ಈ ಕವಿತೆಯು ನಿದರ್ಶನದಂತಿದೆ. ನವ್ಯತೆ ಅನುಭವದ ಸಾಂದ್ರತೆ, ಏಕಾಕಿತನ, ಅಳಲು ತೀವ್ರವಾದ ಅನಾಥಪ್ರಜ್ಞೆಯ ಅನುಭವಗಳು ಈ ಕವಿತೆಗೆ ತೀಕ್ಷ್ಣ ಮೊನಚನ್ನು ತಂದೊಡ್ಡಿವೆ.

೩.೩.೨. ಇವನು ಹಕ್ಕಿ ನೋಡಿ

'ಇವನು ಹಕ್ಕಿ ನೋಡಿ' ಎನ್ನುವ ಕವಿತೆ ಸ್ವಾತಂತ್ರ್ಯ ಮತ್ತು ಬಂಧನದ ಮುಖಾಮುಖಿಯಾಗಿರುವುದನ್ನು ಸಮರ್ಥವಾಗಿ ಅಭಿವ್ಯಕ್ತಿಸಿದೆ. ಕವಿತೆಯ ನಾಯಕನಿಗೆ ತಾನು ಹಕ್ಕಿಯ ಹಾಗೆ ರೆಕ್ಕೆ ಕಟ್ಟಿಕೊಂಡು ಹಾರುವ ಹಂಬಲ. ಈ ಪದ್ಯದಲ್ಲಿ ಹಲವಾರು ವಿಜ್ಞಾನದ ಪಾರಿಭಾಷಿಕ ಶಬ್ದಗಳು, ಇಂಗ್ಲಿಷ್ ಶಬ್ದರೂಪಗಳು ಧಾರಾಳವಾಗಿ ಬಳಸಲ್ಪಟ್ಟಿವೆ. ಶುರು ಎನ್ನುವ ಪದ ಬಳಕೆಯಂತೂ ಮಾಸ್ತಿಯಂತವರು ಮಾತ್ರ ಬಳಸಬಹುದಾದ ಶಬ್ದ. 'ಅಶರೀರಿ

/ ಅಪಸ್ವರ / ದಾಕಾಶ / ವಾಣಿ / ಅಂತರಿಕ್ಷ / ಅಲೆ ಅಲೆ / ಯುವ' ಎಂಬ ಸಾಲು ಕವಿ ಶಬ್ದಗಳೊಂದಿಗೆ ಸಲೀಸಾಗಿ ಆಟ ಆಡುವ ವೈಖರಿಯನ್ನು ಸೂಚಿಸುತ್ತದೆ.

ರಾಮಾನುಜನ್ ಅವರ ಕಾವ್ಯದಲ್ಲಿ ನೆನಪು ಮತ್ತೆ ಮತ್ತೆ ತಲೆ ಹಾಕುತ್ತದೆ. ಆದರೆ ಅದು ಸಾಂಪ್ರದಾಯಿಕವಾದ ನೆನಪಲ್ಲ. ಅದು ಹೆಚ್ಚು ಸಮಕಾಲೀನವಾಗಿದ್ದು ಕನ್ನಡ ಭಾಷೆ, ಕನ್ನಡ ಕಾವ್ಯ, ಕನ್ನಡ ಬದುಕು, ಮೈಸೂರು ಇವು ಅವರನ್ನು ಮತ್ತೆ ಮತ್ತೆ ಕಾಡುತ್ತವೆ. ಆದರೆ ಅದು ಪರಕೀಯ ಪ್ರಜ್ಞೆ ಅಲ್ಲ. ಅದರ ಬಗ್ಗೆ ಅವರಿಗೆ ಇರುವ ಪ್ರೀತಿ ಮತ್ತು ಶ್ರದ್ಧೆ. ಇದಕ್ಕೆ ಉದಾಹರಣೆಯಾಗಿ ಈ ಪದ್ಯವನ್ನು ಗಮನಿಸಬಹುದು:

ಅಮೆರಿಕಕ್ಕೆ ಬಂದಾಗಲೇ
ಕನ್ನಡ, ಪದ್ಯ.
ಮೈಸೂರಿನಲ್ಲಿ ಬರಿ ಮಾತು.
ಕೆಲವರಿಗೆ ಹೀಗೇ ಸ್ವಂತ
ಮನೆಯಲ್ಲಿ ಬೆಣ್ಣೆ ಕೈಯೆಣ್ಣೆ
ಹಚ್ಚಿದರೂ ನಿರ್ಲಿಪ್ತ.

ಮೈಸೂರಿನಲ್ಲಿ ಇದ್ದಾಗ ಕನ್ನಡದ ಬಗ್ಗೆ, ಕನ್ನಡ ಕವಿತೆಯ ಬಗ್ಗೆ ಮತ್ತು ಕನ್ನಡ ಸಂಸ್ಕೃತಿಯ ಬಗ್ಗೆ ಕವಿಗೆ ಬರಿ ಮಾತು, ಹರಟೆ. ಆದರೆ ಅಮೆರಿಕಕ್ಕೆ ಬಂದಾಗ ಅವುಗಳ ನೆನಪು ತೀವ್ರವಾಗುತ್ತದೆ. ಇವರ 'ಅಣ್ಣಯ್ಯನ ಮಾನವಶಾಸ್ತ್ರ' ಕತೆಯ ವಸ್ತು ಕೂಡ ಇದೇ ಆಗಿದೆ. ಮಾನವಶಾಸ್ತ್ರವನ್ನು ಅಧ್ಯಯನ ಮಾಡಲು ಭಾರತದಿಂದ ಅಮೆರಿಕಕ್ಕೆ ಹೋದ ಅಣ್ಣಯ್ಯನಿಗೆ ಅಲ್ಲಿ ನೆನಪಾಗುವುದು ಮೈಸೂರಿನ ಸಂಗತಿಗಳೇ. ಕಾಬೂಲಿನಲ್ಲಿ ಕಿಬ್ಬೊಟ್ಟೆ ತೋರಿಸುವ ಬುರಕಿ ಹೆಣ್ಣುಗಳ ಮಧ್ಯೆ ಆಸೆಯಾದರೂ ತನ್ನ ಹೆಂಡತಿಯ ನೆನಪಾಗಿ ಸಮಾಧಾನ ತಂದುಕೊಳ್ಳುವ ಚಿತ್ರ ಕೂಡ ಈ ಕವಿತೆಯಲ್ಲಿ ಬರುತ್ತದೆ. ರಾಮಾನುಜನ್ ಅವರ ಮನಸ್ಸನ್ನು ಗಾಢವಾಗಿ ಕಾಡುವ ಎರಡು ಕಿಂಡಿಗಳೆಂದರೆ ಒಂದು ಅಮೆರಿಕ, ಮತ್ತೊಂದು ಮೈಸೂರು. ಮೈಸೂರಿನ ನೆನಪು ಅವರಿಗೆ ನಾಸ್ಟಾಲ್ಜಿಯಾ. ಆ ನೆನಪೆಂದರೆ ಮನಸ್ಸು ಹಸನಾಗಿ ಮಾಗಿ ಬಾಗುತ್ತದೆ. ಒಂದು ಮಧುರ ಭಾವ, ಆಹ್ಲಾದಕತೆ ಇವು ಉಂಟಾಗುತ್ತವೆ.

೩.೩.೩. ಮಾತು ಮುಗಿಯುವ ಮೊದಲು

ರಾಮಾನುಜನ್ ಅವರು ತಮ್ಮ ಮತ್ತೊಂದು 'ಮಾತು ಮುಗಿಯುವ ಮೊದಲು' ಪದ್ಯದಲ್ಲಿ

ಪ್ರೀತಿಯ ವಿಷಯದಲ್ಲಾದರೂ
ವಕ್ರೋಕ್ತಿ ಔಚಿತ್ಯ ವಿಚಾರ

ಎಲ್ಲ ಕಳೆದು
ಐರನಿ ಕಳಚಿ
ಮೈ ಮುಟ್ಟಿದ ಹಾಗೆ
ಮನಸ್ಸು ಮುಟ್ಟಿಸಬಾರದೆ?

ಮನುಷ್ಯನ ಸ್ವಭಾವವನ್ನು ಹೀಗೆ ಕವಿತೆ ಹಿಡಿದಿಟ್ಟಿದೆ. ಈ ಭಾವನೆಗಳನ್ನೆಲ್ಲಾ ಮನುಷ್ಯ ಕಳಚಿಕೊಳ್ಳಬೇಕೆಂಬುದನ್ನು ಈ ಕವಿತೆಯಲ್ಲಿ ರಾಮಾನುಜನ್ ಹೇಳುತ್ತಾರೆ. ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಬರುವ ಈ ಕಟ್ಟಳೆಗಳನ್ನೆಲ್ಲಾ ಕಳಚಿಕೊಂಡು ಹೊರಬರಬೇಕೆಂಬುದು ರಾಮಾನುಜನ್ ಅವರ ಕಾವ್ಯದ ಒಳ ಅರ್ಥ. ಈ ಕಟ್ಟಳೆಗಳನ್ನು ಕಳಚಿಕೊಂಡು ಬರಬೇಕಾದರೆ ಮೊದಲು ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಬರುವ ಪಾರಿಭಾಷಿಕ ಶಬ್ದಗಳಾದ ಸ್ವಭಾವೋಕ್ತಿ, ವಕ್ರೋಕ್ತಿ, ಔಚಿತ್ಯ ವಿಚಾರ ಇವುಗಳನ್ನು ಅರ್ಥ ಮಾಡಿ ಅರಗಿಸಿಕೊಂಡು ನಂತರ ಅದರಿಂದ ಪಾರಾಗುವ ಸಹಜ ಮಾರ್ಗವನ್ನು ಕಂಡುಕೊಳ್ಳಬೇಕು. ಹಾಗೆಯೇ ಪಾಶ್ಚಾತ್ಯ ಕಾವ್ಯಮೀಮಾಂಸೆಯಲ್ಲಿ ಬರುವ ಐರನಿ ಮುಂತಾದ ಅಂಶಗಳನ್ನೂ ಕೂಡ ಅರ್ಥ ಮಾಡಿ ಅರಗಿಸಿಕೊಂಡು ಅದರಿಂದ ಪಾರಾಗಿ ಕವಿತೆಯಲ್ಲಿ ಭಾವದ ಸ್ವಭಾವವನ್ನು ತೋರಬೇಕು. ಹೀಗೆ ಇಲ್ಲಿ ಕವಿ ಹಳೆಯದನ್ನು ಬಿಡದೆ ಹೊಸದನ್ನು ಪಡೆಯಬೇಕೆಂಬ ಸುವರ್ಣ ಮಾಧ್ಯಮದ ನೆಲೆಗೆ ತಲುಪುತ್ತಾರೆ.

೩.೩.೪. ಸ್ವಿಟ್ಸರ್ಲೆಂಡಿನ ಮಂಜಿನಲ್ಲಿ

ಕನ್ನಡ ನಾಡಿನ ವಿವಿಧ ಭಾಗಗಳಾದ ತಲಕಾಡು, ಮಲೆನಾಡು ಇತ್ಯಾದಿಗಳಲ್ಲಿ ಕವಿಯ ಮನಸ್ಸು ಲೀನವಾಗಿರುವ ಸ್ಥಿತಿಯಲ್ಲಿ 'ಸ್ವಿಟ್ಸರ್ಲೆಂಡಿನ ಮಂಜಿನಲ್ಲಿ' ಎನ್ನುವ ಕವಿತೆಯನ್ನು ರಚಿಸಿದ್ದಾರೆ. ಈ ಕವಿತೆಯಲ್ಲಿ ಮೈಸೂರಿನ ದೋಸೆ ಕಾಫಿಗಳನ್ನು ನೆನೆಸಬಾರದು ಎಂದು ಸಖಿಗೆ ಹೇಳಿದರೂ ಕೂಡ ಆ ಅಂಶಗಳು ಕವಿಗೆ ಮೈಸೂರಿನ ನೆನಪನ್ನು ತಂದಿದೆ. ಕವಿ ಅಮೆರಿಕದ ಯಾವುದೇ ಮದುವೆಗೆ ಹೋದರೂ ಅಲ್ಲಿ ಅವರಿಗೆ ಭಾರತೀಯ ಸಂಪ್ರದಾಯದ ಮದುವೆಯೊಂದಿಗೆ ಸಂಬಂಧ ಹೊಂದಿರುವ ಎಲೆ ಅಡಿಕೆ ಅರಿಸಿನ ಕುಂಕುಮ ನೆನಪಿಗೆ ಬಂದೇ ಬರುತ್ತವೆ. ಇದನ್ನು ನೆನಪಿಸಿಕೊಳ್ಳಬಾರದು ಎಂದು ಸಖಿಗೆ ಹೇಳುತ್ತಿದ್ದರೂ ಕವಿ ಅದರ ನೆನಪಿನಿಂದಾಚೆಗೆ ಬಂದಿಲ್ಲ.

೩.೩.೫. ಅಮ್ಮ ಎಲ್ಲೋ ಬೆಂಗಳೂರಲ್ಲಿ

'ಅಮ್ಮ ಎಲ್ಲೋ ಬೆಂಗಳೂರಲ್ಲಿ' ಎನ್ನುವ ಕವನ ತುಂಬಾ ಕುತೂಹಲವನ್ನು ಹುಟ್ಟಿಸುವ ಕವಿತೆ. ಇದರಲ್ಲಿ ಮೂರು ತಲೆಮಾರುಗಳ ಚಲನಶೀಲತೆಯನ್ನು ಗಮನಿಸಬಹುದು. ಈ ಕವಿತೆಯನ್ನು ಓದಿದ ತಕ್ಷಣ 'ಒಂದು ಕೊಡೆ, ಒಂದು ವಾಚು' ಕವಿತೆ ನೆನಪಾಗುತ್ತದೆ. ಅಲ್ಲಿ

ಕವಿತೆಯು ಕಾಲ ಮತ್ತು ಪ್ರದೇಶಗಳನ್ನು ರೂಪಕಾತ್ಮಕವಾಗಿ ಧ್ವನಿಸುತ್ತದೆ. ಇಲ್ಲಿ ಕೂಡ ರಿಸ್ಟ್ ವಾಚು ತಲೆಮಾರುಗಳ ಚಲನಶೀಲ ಮುಂದುವರಿಕೆಯನ್ನು ಧ್ವನಿಸುತ್ತದೆ. ಕವಿತೆಯೊಳಗೆ ಸೂಕ್ಷ್ಮವಾಗಿ ಗಮನಿಸಿದರೆ ತಾಯಿಯನ್ನು ಕಳೆದುಕೊಂಡ ಮಗನೊಬ್ಬನ ಸೂಕ್ಷ್ಮ ತಬ್ಬಲಿತನದ ವಿಷಾದದ ಎಳೆಯನ್ನು ಗುರುತಿಸಬಹುದು. 'ಟಿಕ್, ಟಿಕ್, ಕತ್ತಲಾದರೆ ರೇಡಿಯಂ, ಢವ ಢವ ಕೈನಾಡಿ' ಎನ್ನುವ ಶಬ್ದಗಳು ಮೂಡಿಸುವ ವಿಷಾದದ ಧ್ವನಿ ಗಮನಾರ್ಹ. ಆದರೆ ತಲೆಮಾರಿನ ಮುಂದುವರಿಕೆಗೆ ಪ್ರಸ್ತುತ ತಲೆಮಾರಿನ ಜನರ ಚಲನಶೀಲತೆ, ಕ್ರಿಯಾಶೀಲತೆ ಹಾಗೂ ಶ್ರಮಗಳು ಮುಖ್ಯ. ಅದನ್ನು ಕವಿ ದಿನಾ ಬೆಳಗ್ಗೆ ಕೀ ಕೊಡಬೇಕು ಎಂಬ ಮಾತುಗಳಲ್ಲಿ ಸೂಚಿಸಿದ್ದಾರೆ:

ಅಹೋರಾತ್ರಿ
ಟಿಕ್ ಟಿಕ್ ಅಂತ
ಸಣ್ಣಗೆ ಕತ್ತರಿಸುತ್ತ
ಕತ್ತಲಾದರೆ ರೇಡಿಯಂ
ಅಂಕಿ
ಕೈಕಾಲು
ಮಿನುಗಿಸುತ್ತ
ನನ್ನ ಮಗ ಮಗಳ
ಡವಡವ ಕೈ ನಾಡಿ
ಅಪ್ಪಿ
ತಪ್ಪದೆ ನಡೆಯುತ್ತಿದೆ

ಎನ್ನುವ ಸಾಲುಗಳು ಈ ಕವಿತೆಯ ನಿಗೂಢತೆ, ಅಸ್ಪಷ್ಟತೆ ಹಾಗೂ ಗೊಂದಲಗಳನ್ನು ಸೂಚಿಸುವುದರ ಜೊತೆಗೆ ಸಾವಿನ ನೆರಳಿನ ನೋವಿನ ಪರಿಸರವನ್ನು ಜೀವಂತವಾಗಿ ಅನುಭವಕ್ಕೆ ತರುತ್ತದೆ. ತಲೆಮಾರುಗಳು ಮುಂದುವರಿದಂತೆ ಒಂದು ತಲೆಮಾರಿನವರು ತಮ್ಮ ಹಿಂದಿನ ತಲೆಮಾರಿನವರನ್ನು ಮರೆಯದೆ ಮುಂದುವರಿಯುವ ಒಂದು ಪರಂಪರೆಯನ್ನು ಈ ಕವಿತೆಯು ಚೆನ್ನಾಗಿ ಪ್ರಕಟಿಸುತ್ತದೆ.

೩.೩.೬. ಮಹಾರಾಜರ ಅರಮನೆ

'ಮಹಾರಾಜರ ಅರಮನೆ' ಕವಿತೆಯು ಆಗಿ ಹೋದ ಭವ್ಯ ಪರಂಪರೆಯ ಅವನತಿಯನ್ನು ನೋವಿನೊಂದಿಗೆ ಸೂಚಿಸುತ್ತದೆ. ಇಲ್ಲಿ ಬರುವ ರೂಪಕಗಳೆಲ್ಲಾ ಹಕ್ಕಿಯದು. ಅದರಲ್ಲೂ ಮುಖ್ಯವಾಗಿ ಗೃಧ್ರ=ರಣಹದ್ದು ಪಕ್ಷಿಯದು. ರಣಹದ್ದು ಶುಭಸೂಚನೆಯೇನಲ್ಲ. ಅದು ಒಂದು ಭವ್ಯ ಘಟನೆಯೂ ಆಗಿ ಹೋದಾಗ ಅದರ ಅವಶೇಷ ಚರಿತ್ರೆಯ ಭಾಗವಾಗಿ ಉಳಿದುಕೊಳ್ಳುತ್ತದೆ.

ಈ ಅಂಶವನ್ನು ಕವಿ 'ಮಹಾರಾಜರ ಅರಮನೆ । ಲಕ್ಷದೀಪದ ಬಲ್ಬೆಲ್ಲಾ ಒಡೆದು'॥ ಎಂಬ ಸಾಲುಗಳಲ್ಲಿ ಸೂಚಿಸುತ್ತಾರೆ. ಇಲ್ಲಿ 'ಬಿಳಿ ಹೊಟ್ಟೆ । ಬಟ್ಟ ತಲೆ ಗೃದ್ರ'॥ 'ಗಾಳಿಯಲ್ಲಿ ರಪ ರಪ ಸದ್ದು' । 'ಕಣ್ಣ ಪಾಪೆ'॥ ಎನ್ನುವ ಸಾಲುಗಳು ಮ್ಯೂಸಿಯಂನ ಪ್ರಸ್ತಾಪವು ಒಂದು ಗತವೈಭವವನ್ನು ಸೂಕ್ಷ್ಮವಾಗಿ ಗೋಚರಗೊಳಿಸುತ್ತದೆ.

'ಅಜ್ಜಿ ಹೇಳಿದ ಕತೆ', 'ಬಸವನಗುಡಿ ಮೂಲೆ ಸಂಪಿಗೆ ಮರ', 'ಕಾಮ ಪೀಡಿತ ಜೈನ ಶ್ರವಣ ಸನ್ಯಾಸಿ', 'ನಮ್ಮನೆ ಬೆಕ್ಕು', 'ಯಕ್ಷ–ಯಕ್ಷಿಣಿ', 'ವರಮಹಾಲಕ್ಷ್ಮಿ ವೃತ', 'ಕೋಳಿಮರಿ', 'ಕುರುಬ', 'ಕೃಷ್ಣ–ರಾಧೆ', 'ಆಡು–ಕುರಿ', 'ಮಹಾಭಾರತ', 'ರಾಮನವಮಿ', 'ಬುಗುರಿ', 'ಸತ್ಯ–ಶಿವ–ಸೌಂದರ್ಯ', 'ಅಶ್ವಮೇಧ', 'ಪುಷ್ಪವೃಷ್ಟಿ' 'ವಿಷವೃಕ್ಷ' ಮುಂತಾದ ಕನ್ನಡ ಸಂಸ್ಕೃತಿಯ ಪರಿಕಲ್ಪನೆಗಳನ್ನು ರಾಮಾನುಜನ್ ಅವರು ತಮ್ಮ ಕಾವ್ಯದಲ್ಲಿ ಮತ್ತೆ ಮತ್ತೆ ನೆನಪಿಗೆ ತರುತ್ತಾರೆ.

ಡಿ.ಆರ್. ನಾಗರಾಜ್ ತಮ್ಮ ವಿಮರ್ಶಾ ಕೃತಿಯಲ್ಲಿನ 'ಎ.ಕೆ.ರಾಮಾನುಜನ್: ... ಮತ್ತು ಇತರ ಪದ್ಯಗಳು' ಎಂಬ ಲೇಖನದಲ್ಲಿ ರಾಮಾನುಜನ್ ಅವರ ಕಾವ್ಯದ ಬಗ್ಗೆ ಹೀಗೆ ಬರೆಯುತ್ತಾರೆ:

> "ರಾಮಾನುಜನ್ನರ ಕಾವ್ಯ ಮಧ್ಯಮವರ್ಗದ ಬುದ್ಧಿಜೀವಿಯೊಬ್ಬನ ಕಾವ್ಯ. ಆದರೆ, ವಸಾಹತುಗಳ ಮೂಲದ ಬುದ್ಧಿಜೀವಿಗಳಿಗೆ ಸುಲಭವಾಗಿ ಸಾಧ್ಯವಾಗುವ ಸಿದ್ಧಮಾನಸಿಕ ಸ್ಥಿತಿಗಳನ್ನು ರಾಮಾನುಜನ್ ಒಪ್ಪಿಕೊಂಡಿರಲಿಲ್ಲ. ಕನ್ನಡ ನವ್ಯಕಾವ್ಯದ ಇತಿಹಾಸದಲ್ಲಿ ರಾಮಾನುಜನ್ನರಿಗೆ ವಿಶಿಷ್ಟ ಸ್ಥಾನವಿರುವುದು ಇದೇ ಕಾರಣಕ್ಕಾಗಿ. ಸುಳ್ಳು ದುಃಖದ, ನಿರರ್ಥಕತೆಯ ಪೋಸುಗಳನ್ನು ರಾಮಾನುಜನ್ ಎಂದೂ ಹಾಕುವುದಿಲ್ಲ. ಸುಲಭವಾಗಿ ಸಾಧ್ಯವಾಗುವ ಯಾವ ವ್ಯಕ್ತಿವಾದೀ ಕಾಳಜಿಯನ್ನೂ ರಾಮಾನುಜನ್ ಒಪ್ಪಿಕೊಂಡಿಲ್ಲ. ಮರೆತು ಕೂಡಾ ಮಾಸ್ಟರ್ ಐಡಿಯಾಲಜಿಯ ಪ್ರಭಾವಕ್ಕೆ ಬೀಳದ ಕಾವ್ಯ ಇವರದು"[೧೧]

ಎಂದು ಹೇಳುವ ಅವರ ಅಭಿಪ್ರಾಯ ಸೂಕ್ತವಾಗಿದೆ.

೩.೪. ಕುಂಟೋಬಿಲ್ಲೆ

ರಾಮಾನುಜನ್ ಅವರ ೩ನೇ ಕವನ ಸಂಕಲನ ಇದು. ೧೯೯೦ರಲ್ಲಿ ಮನೋಹರ ಗ್ರಂಥಮಾಲಾ ಈ ಕೃತಿಯನ್ನು ಪ್ರಕಟಿಸಿತು. '...ಮತ್ತೂ ಇತರ ಪದ್ಯಗಳು' ಸಂಕಲನ ಬಂದ ಹದಿಮೂರು ವರ್ಷಗಳ ನಂತರ ಈ ಕೃತಿ ಪ್ರಕಟವಾಗಿರುವುದನ್ನು ನೋಡಿದರೆ ಕವಿತಾ ರಚನೆಯ ವಿಷಯದಲ್ಲಿ ರಾಮಾನುಜನ್ ಅವರ ಸಂಯಮ ಅರ್ಥವಾಗುತ್ತದೆ. ಅನುಭವ ಮಾಗಿ, ಭಾವವಾಗಿ, ಭಾಷೆಗೆ ಹೊಸ ಹೊಳಪು ಬಂದು ಕವಿತೆ ರಚಿತವಾದಾಗ ಅದು ಅರ್ಥಗರ್ಭಿತವಾಗಿರುತ್ತದೆ. ಕನ್ನಡದ ನವ್ಯ ಬರಹಗಾರರಾದ ಲಂಕೇಶ್, ಶರ್ಮ, ಅನಂತಮೂರ್ತಿ,

ಚಿತ್ತಾಲ ಸೋದರರು, ದೇಸಾಯಿ, ಪುಣೇಕರ, ಕಾಮರೂಪಿ ಮುಂತಾದವರಲ್ಲಿಯೂ ಈ ರೀತಿಯ ಬರವಣಿಗೆಯ ಸಂಯಮ ಹಾಗೂ ಅನುಭವದ ಪ್ರಬುದ್ಧತೆ ಮತ್ತು ಭಾವತೀವ್ರತೆಗಳನ್ನು ಪಡೆದುಕೊಂಡಿದ್ದನ್ನು ಗಮನಿಸಬಹುದು. ಈ ಲೇಖಕರ ಪೈಕಿ ಹೆಚ್ಚಿನ ಸಂಯಮವನ್ನು ನಾವು ಗಮನಿಸುವುದು ಕಾಮರೂಪಿ ಹಾಗೂ ರಾಮಾನುಜನ್ ಅವರಲ್ಲಿ. ಇದಕ್ಕೆ ಕಾರಣ ಬಹುಶಃ ಇವರಿಬ್ಬರೂ ಉಳಿದ ಲೇಖಕರಿಗಿಂತ ಕರ್ನಾಟಕದಿಂದ ಮಾತ್ರವಲ್ಲದೆ ಭಾರತದಿಂದ ಹೊರಗೆ ಇದ್ದದ್ದೇ ಆಗಿದೆ.

೩.೪.೧. ಬ್ರಹ್ಮಜ್ಞಾನ ಒಂದು ನಿಶ್ಶಬ್ದ ಸಾನೆಟ್ಟು

'ಕುಂಟೋಬಿಲ್ಲೆ' ಎನ್ನುವ ಶಬ್ದದ ಬಳಕೆಯೇ ಬಾಲ್ಯದ ಮಧುರವಾದ ಸ್ನೇಹಿತರೊಂದಿಗಿನ ಆಟದ ನೆನಪುಗಳನ್ನು ಸಿಹಿಯಾಗಿಸುತ್ತದೆ. ಈ ರೀತಿಯ ಸಂಯಮ ಆ ಕಾಲದ ಸಾಹಿತ್ಯ ಪರಂಪರೆಯಲ್ಲಿ ಅಪೂರ್ವವಾದದ್ದು ಹಾಗೂ ನವೋದಯ ಬರಹಗಾರರ ಹೆಚ್ಚಿನ ಕೃತಿಗಳ ಪದ್ಧತಿಗೆ ವಿರುದ್ಧವಾದದ್ದು. ಈ ಸಂಕಲನದಲ್ಲಿ ಒಟ್ಟು ೪೩ ಕವಿತೆಗಳಿವೆ. ಈ ಸಂಕಲನದ ಕೊನೆಯ ಕವಿತೆಯಾದ 'ಬ್ರಹ್ಮಜ್ಞಾನ ಒಂದು ನಿಶ್ಶಬ್ದ ಸಾನೆಟ್ಟು' ಎನ್ನುವ ಪದ್ಯ ಭಾಷಾ ರಚನೆಯನ್ನು ಒಳಗೊಂಡಿಲ್ಲ. ಅದರಲ್ಲಿ ನಾಲ್ಕು ಸಾಲಿನ ಎರಡು ಘಟಕಗಳು ಹಾಗೂ ಮೂರು ಸಾಲಿನ ತ್ರಿಪದಿಯ ಎರಡು ಘಟಕಗಳು, ಛಂದಸ್ಸಿನಲ್ಲಿ ಬರುವ ಲಘು–ಗುರುಗಳ ಪ್ರಸ್ತಾರ ರೂಪದಲ್ಲಿದ್ದು ರಚನೆಯು ಮಾತ್ರ 'ಪೆಟ್ರಾರ್ಕನ್' ಶೈಲಿಯ ಸಾನೆಟ್ಟನ್ನು ಹೋಲುತ್ತದೆ. ಇಲ್ಲಿ ಬ್ರಹ್ಮಜ್ಞಾನ ಎನ್ನುವುದು ಅಮೂರ್ತವಾದ ಪರಿಕಲ್ಪನೆ, ಸರ್ವಜ್ಞನು ಕೂಡ ಬ್ರಹ್ಮಜ್ಞಾನವನ್ನು ಅರಿತವನು ಸುಮ್ಮನಿರಬೇಕೆಂದು, ಇಲ್ಲದಿದ್ದಲ್ಲಿ ಅವನ ಪರಿಸ್ಥಿತಿಯು 'ಕದಿಯಲು ಹೋಗಿ ಕೆಮ್ಮಿದ ಕಳ್ಳನಂತಾಗುವುದೆಂದು' ಹೇಳಿದ್ದಾನೆ. ಈ ಭಾರತೀಯ ತತ್ವಜಿಜ್ಞಾಸೆಗಳ ಪರಿಕಲ್ಪನೆಯಲ್ಲಿ ಬರುವ ಅಮೂರ್ತವಾದ ಬ್ರಹ್ಮಜ್ಞಾನವನ್ನು ಕುರಿತ ವಿಡಂಬನೆ ಇದು. ಹಾಗೆಯೇ ಈ ಕವಿತೆಯು ಓದುಗರನ್ನು ಸುಲಭವಾಗಿ ತಲುಪಲು ವಿಫಲವಾದ ನವ್ಯಕಾವ್ಯದ ವಿಡಂಬನೆಯನ್ನು ಕೂಡ ಮಾಡುತ್ತದೆ.

ಸಂಕಲನದ ಕೊನೆಯ ಕವಿತೆಯಾದ 'ಬ್ರಹ್ಮಜ್ಞಾನ ಒಂದು ನಿಶ್ಶಬ್ದ ಸಾನೆಟ್', ಎನ್ನುವ ಕವಿತೆ, ಭಾರತೀಯ ಸಾಂಪ್ರದಾಯಕ ಕವಿಗಳ ಅಧ್ಯಾತ್ಮವನ್ನು ಕುರಿತ ವಿವರಣೆಗಳ ಒಂದು ಸಮರ್ಥ ವಿಡಂಬನೆ. ನಮ್ಮ ದೇಶದ ಯಾವ ಕವಿಯಾದರೂ ಬ್ರಹ್ಮಜ್ಞಾನವನ್ನು ಕುರಿತು ಕಡ್ಡಾಯವಾಗಿ ಕವಿತೆಯನ್ನು ರಚಿಸಿಯೇ ತೀರುತ್ತಾನೆ. ಕವಿತೆ ಸರಳವೂ ಸಲೀಸು ಆದಾಗ ತನ್ನ ಅರ್ಥವಂತಿಕೆಯನ್ನು ಕಳೆದುಕೊಂಡು ಬಿಡುತ್ತದೆ. ಈ ಸಂಗತಿಯನ್ನು ಈ ಕವಿತೆ ಬಹಳ ಚೆನ್ನಾಗಿ ನಿರೂಪಿಸಿದೆ. ಈ ಕವಿತೆಯಲ್ಲಿ ಹೆಸರೇ ಹೇಳುವಂತೆ ಶಬ್ದಗಳೇ ಇಲ್ಲ. ಕವಿತೆಯನ್ನು ಉಚ್ಚಾರಣೆ ಮಾಡುವಾಗ ಬರುವ ಹ್ರಸ್ವ ದೀರ್ಘಗಳ ಗುರುತಾದ ಲಘು – ಗುರು ಗಳಲ್ಲಿಯೇ

ಇಡೀ ಕವಿತೆ ಇದೆ. ಕವಿತೆಯ ಕೊನೆಯಲ್ಲಿ ಎ.ಕೆ. ರಾಮಾನುಜನ್ ಎನ್ನುವ ಕವಿಯ ಹೆಸರನ್ನು ಕೂಡ ಲಘು – ಗುರುಗಳಲ್ಲಿಯೇ ನಿರ್ದೇಶಿಸಲಾಗಿದೆ. ಇದು ಕೂಡ ಒಂದು ವ್ಯಂಗ್ಯ. ಈ ಸಾನೆಟ್‌ನಲ್ಲಿ ಎಲ್ಲ ರೀತಿಯ ಮಾತ್ರಾ ಗಣಗಳ ಮಾದರಿಗಳಿವೆ. – ೩, ೪, ೫ ಮಾತ್ರೆಯ ಗಣಗಳು. ಕೇವಲ ಲಘು – ಗುರು ಸಂಕೇತಗಳ ಗಣಗಳಿಗೆ ಬದಲು ಯಾರು ಏನನ್ನು ಬೇಕಾದರೂ ತುಂಬಿಕೊಳ್ಳುವ ಅವಕಾಶವನ್ನು ಕವಿ ಇಲ್ಲಿ ಕಲ್ಪಿಸಿಕೊಟ್ಟಿದ್ದಾರೆ. ಇಲ್ಲಿ ಯಾರು ಬೇಕಾದರೂ ಬ್ರಹ್ಮಜ್ಞಾನಿಗಳಾಗಬಹುದು ಎನ್ನುವ ವ್ಯಂಗ್ಯ ಢಾಳಾಗಿ ಕಾಣುತ್ತದೆ.

ರಾಮಾನುಜನ್ ಅವರ ಸಂವೇದನೆ ಸಮಕಾಲೀನವಾದದ್ದು. ಅದು ಸುಶಿಕ್ಷಿತ ನಗರಕೇಂದ್ರಿತ ಮಧ್ಯಮವರ್ಗದ ಮಾನವರ ಅನುಭವಗಳ ಅಭಿವ್ಯಕ್ತಿ. ಈ ಕವಿಯ ಪ್ರಜ್ಞೆ ತುಂಬಾ ಸೂಕ್ಷ್ಮವಾದದ್ದು. ಅದು ವೈಯಕ್ತಿಕ ನೆಲೆಯಲ್ಲಿಯೇ ಸಾರ್ವಕಾಲಿಕವಾದ ಮೌಲ್ಯಗಳನ್ನು ಹಿಡಿಯುವಂಥದ್ದು. ತಾನು ಕಂಡದ್ದು, ಕೇಳಿದ್ದು, ಅನುಭವಿಸಿದ್ದು, ಚಿಂತಿಸಿದ್ದು ಎಲ್ಲವೂ ಅವರ ಕಾವ್ಯದಲ್ಲಿ ಸಂಬಂಧಗಳನ್ನು ಪಡೆದುಕೊಳ್ಳುತ್ತವೆ. ಹಾಗಾಗಿ ಅವರ ಕಾವ್ಯ ಒಂದು ಅನನ್ಯವಾದ ಅಭಿವ್ಯಕ್ತಿ ಪ್ರಕಾರವಾಗಿದೆ. ತಮಗಾದ ಅನುಭವವನ್ನು ತಮ್ಮದೇ ಆದ ಧಾಟಿಯಲ್ಲಿ ಸೂಕ್ಷ್ಮವಾಗಿ ಕವನವನ್ನಾಗಿ ಕಟ್ಟುತ್ತಾರೆ. ಅವರ ಕಾವ್ಯದ ಲಯ ಗದ್ಯಕ್ಕೆ ಸಮೀಪವಾದದ್ದು. ವಚನಗಳಿಗೆ, ಝೆನ್ ಕತೆ, ಕಾವ್ಯ, ಗಾದೆ, ಒಗಟು ಪ್ರಸಂಗಗಳ ಮಾದರಿಗೆ ಹತ್ತಿರವಾದದ್ದು. ಅವರು ತಮ್ಮ ಕಾವ್ಯಕ್ಕೆ ವಸ್ತುವನ್ನು ಹುಡುಕಿಕೊಂಡು ಹೋಗುವುದಿಲ್ಲ. ಅದು ಅವರ ವ್ಯಕ್ತಿತ್ವದ ಒಳಗಿನಿಂದಲೇ, ಅವರ ಅನುಭವಲೋಕದಿಂದಲೇ ಹುಟ್ಟುತ್ತದೆ. ಹೀಗೆ ಹುಟ್ಟಿದ ವೈಯಕ್ತಿಕವಾದ ಕಾವ್ಯವನ್ನು ಸಮಾಜೀಕರಣಗೊಳಿಸಿ ಅದಕ್ಕೊಂದು ವಿಶ್ವಾತ್ಮಕವಾದ ಮೌಲ್ಯವನ್ನು ತಂದುಕೊಡುತ್ತಾರೆ.

೩.೪.೨. ಕುಂಟೋಬಿಲ್ಲೆ

ಸಂಕಲನದ ಆರಂಭದ ಕವಿತೆ 'ಕುಂಟೋಬಿಲ್ಲೆ' ಕವಿಗೆ ತನ್ನ ಬಾಲ್ಯದ ನೆನಪುಗಳ ಬುತ್ತಿಯನ್ನು ಬಿಚ್ಚುವ ಒಂದು ಬುಟ್ಟಿ. ಚಿಕ್ಕ ಬಾಲಕ ಬಾಲಕಿಯರು ಮೈ ಮರೆತು ಈ ಕುಂಟೋಬಿಲ್ಲೆ ಆಟ ಆಡುತ್ತಾ ಆಡುತ್ತಾ ತಲ್ಲೀನರಾಗಿ ಬಾಲಕರು ಗಂಡಸುತನ, ಬಾಲಕಿಯರು ಮೈ ನೆರೆಯುವ ಪ್ರಕ್ರಿಯೆ ಇವೆಲ್ಲವೂ ಕುಂಟೋಬಿಲ್ಲೆ ಆಟದ ಚೌಕಟ್ಟಿನೊಳಗೆ ಬರಬಹುದಾದ ಘಟನೆಗಳು ಎನ್ನುವ ರಾಮಾನುಜನ್ ಅವರ ಪರಿಕಲ್ಪನೆ ಆ ಕಾಲಕ್ಕೆ ಹೊಸತು. ಚದುರಂಗವಲ್ಲದ ಸರಳವಾದ ಆಟ ಕುಂಟೋಬಿಲ್ಲೆಯಾದರೂ ಈ ಆಟ ಸಂಕೀರ್ಣವಾದ, ಜಟಿಲವಾದ ಬದುಕಿನ ಜಂಜಾಟವನ್ನು ಧ್ವನಿಸುತ್ತದೆ. ಹೊರಟಲ್ಲಿಗೇ ಮತ್ತೆ ತವರಿಗೆ ಬಂದು ಸೇರುವ ಆಟದ ಕ್ರಿಯೆ ಇತಿಹಾಸವು ಮರುಕಳಿಸುವ ವರ್ತುಲ ಚಕ್ರಾಕಾರದ ಸಂಸ್ಕೃತಿಯನ್ನು ಸೂಚಿಸುತ್ತದೆ.

ರಾಮಾನುಜನ್ ಅವರ ಕಾವ್ಯದ ಬೆಳವಣಿಗೆ 'ಕುಂಟೋಬಿಲ್ಲೆ' ಕವನ ಸಂಕಲನದ ಹಲವಾರು ಪ್ರಮುಖ ಕವಿತೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅವರ ಜೀವನದೃಷ್ಟಿ ಇಲ್ಲಿ ಹೆಚ್ಚು ಖಚಿತವಾಗಿ

ಮತ್ತು ಮಾಗಿದ ಅಭಿವ್ಯಕ್ತಿಯಾಗಿದೆ. 'ಕುಂಟೋಬಿಲ್ಲೆ' ಕವನ ಅದರ ಹೆಸರೇ ಹೇಳುವಂತೆ ಒಂದು ಜನಪದ ಆಟ. ಈ ಆಟದಲ್ಲೇ ಒಂದು ಜೀವನದೃಷ್ಟಿಯನ್ನು ಇದು ಹೊಳೆಯಿಸುತ್ತದೆ. ಇದರಲ್ಲಿ ವೃತ್ತಾಕಾರದ ಚಲನೆ ಇದೆ. ಜೊತೆಗೆ ಕವಿಯ ಆತ್ಮಚರಿತ್ರೆಯ ಅಂಶಗಳೂ ಸೇರಿಕೊಂಡಿವೆ. 'ಎಲ್ಲಿ ಬದುಕಿದ್ದರೂ ಕೊನೆಗೆ ಇಷ್ಟೇನೇ?' ಎಂಬ ಪ್ರಶ್ನೆ ಕವಿಗೇ ಎದುರಾಗುತ್ತದೆ.

ಆಚೆ ದಡ ಮುಟ್ಟಿ ಒಂದು ಗಳಿಗೆ ಮಾತ್ರ
ಎರಡೂಕಾಲು ಊರಿ ವಿರಾಮ ಕಂಡು
ಥಟ್ಟಂತ ತಿರುಗಿ ಒಂಟಿ ಕಾಲಿನಲ್ಲಿ
    ಹೊರಟಲ್ಲಿಗೇ ಮತ್ತೆ ತವರಿಗೆ

ಬಂದು ಸೇರುವ–ಗಂಡಸ್ತನ
ಬಲಿಯುವ ಮೊದಲು ಗಂಡು
    ಮಕ್ಕಳು ಕೂಡ ಮೈಮರೆತು
ಆಡುವ–ಹೆಣ್ಣುಮಕ್ಕಳ
ಮೈನೆರೆಯುವಾಟ

ಇದು ಚದುರಂಗದ ಆಟ ಅಲ್ಲ. ಕನ್ನಡ ಸಂಸ್ಕೃತಿಯಲ್ಲಿನ ಮನೆ ಹಿಂದಿನ ಸಂದಿಯಲ್ಲಿ ಗಂಡು ಮತ್ತು ಹೆಣ್ಣುಮಕ್ಕಳು ಒಟ್ಟಿಗೆ ಮೈಮರೆತು ಆಡುವ ಆಟ. ಈ ಸಾಲುಗಳನ್ನು ಇದಕ್ಕೆ ನಿದರ್ಶನವಾಗಿ ಗಮನಿಸಬಹುದು. ಕುಂಟೋಬಿಲ್ಲೆಯಂತಹ ಬಾಲಕರು ಆಡಬಹುದಾದ, ಸರಳವಾದ ಆಟದ ಮೂಲಕ–

ಚಿಕ್ಕಂದು ಮುಕ್ಕಿದ ಬೀದಿಮಣ್ಣಲ್ಲಿ ವಿಶ್ವ
ರೂಪ ಕಂಡ ಹಾಗಾಗಿ ಒಂದು ನಿಮಿಷ
ತಬ್ಬಿಬ್ಬಾಯಿತು

ಎಂದು ಹೇಳುವ ಕವಿ ಇಡೀ ಜಗತ್ತನ್ನೆಲ್ಲಾ ಸುತ್ತಿ ಪಡೆದ ಜ್ಞಾನದ ಸಂಸ್ಕೃತಿಯ ಸಂದರ್ಭದಲ್ಲಿ ಈ ಆಟವನ್ನು ಇಟ್ಟು ನೋಡಿದಾಗ ಕವಿಗೆ ಅದು 'ವಿಶ್ವರೂಪ ದರ್ಶನ'ವಾಗಿ ಕಾಣಿಸುತ್ತದೆ. ಹೀಗೆ ಒಂದು ಹುಡುಗಾಟದ ಆಟವನ್ನು ಗಂಭೀರವಾದ ಕವಿತೆಯೊಂದರಲ್ಲಿ ವಿಶ್ವಾತ್ಮಕ ರೂಪಕವನ್ನಾಗಿ ಮಾರ್ಪಡಿಸಿರುವುದು ರಾಮಾನುಜನ್ ಅವರ ಕಲೆಗಾರಿಕೆಯ ದ್ಯೋತಕ.

ರಾಮಾನುಜನ್ ಬಹುಸಂಖ್ಯಾತ ಕವಿತೆಗಳಿಗೆ ಅರ್ಥದ ಹಲವಾರು ಆಯಾಮಗಳು ಇರುತ್ತವೆ. ಏಕಕಾಲದಲ್ಲಿ ಕವಿತೆಯು ಹಾಸ್ಯ, ಗಾಂಭೀರ್ಯ, ಗಹನತೆ, ಅಧ್ಯಾತ್ಮ ಹಾಗೂ ಸಾಮಾಜಿಕತೆಗಳನ್ನು ಪ್ರತಿಪಾದಿಸುವ ಹಲವಾರು ಕವಿತೆಗಳಿವೆ. ಈಗಾಗಲೇ 'ಒಂದು ಕೊಡೆ ಒಂದು ವಾಚು' ಎನ್ನುವ ಕವಿತೆಯನ್ನು ವಿಶ್ಲೇಷಿಸಿರುವಲ್ಲಿ ಈ ಅಂಶವನ್ನು ಗಮನಿಸಲಾಗಿದೆ. 'ಅಂಗುಲ ಹುಳುವಿನ...' ಕವಿತೆಯಲ್ಲಿ ಕೂಡ ಇದನ್ನು ಗುರುತಿಸಲಾಗಿದೆ.

೩.೪.೩. ಎರಡು ಕವಿತೆಗಳು

ರಾಮಾನುಜನ್ ಅವರ ಕಾವ್ಯದಲ್ಲಿ ರಾಜಕೀಯ ನಿಲುವುಗಳು ಪ್ರಕಟವಾಗುವ ಕವಿತೆಗಳೂ ಇವೆ. 'ಇರಾನಿನಲ್ಲಿ ಬರೆದಿರಬಹುದಾದ ಪದ್ಯ' ಇದಕ್ಕೆ ಉದಾಹರಣೆಯಾಗಿದೆ. ಹಾಗೆಯೇ 'ಧ್ಯಾನ ಫಲಿಸಿದರೆ' ಎಂಬ ಮತ್ತೊಂದು ಕವಿತೆಯು ಆಧುನಿಕ ಮನಸ್ಸಿನ ದ್ವಂದ್ವವನ್ನು ವಿನೋದದಿಂದ ಚಿತ್ರಿಸುತ್ತದೆ:

ನಿನ್ನ ಕನಸಿನಲ್ಲಿ ನಾನೊಂದು ಕರಿಯ ಹೆಣ್ಣು ಕುರಿ
ಯಾಗಿ ಬಂದು
ಕಾಲು ನಡುಗುತ್ತ ನಿನ್ನ ಸಿಂಹಾಸನದ ಹತ್ತಿರ
ಬಂದು ನಿಂತು
ಕೇಳುತ್ತೇನೆ ನಿನ್ನ: ಬಾದಷಹ. ಊಟ ಆಯಿತೆ?
ತೃಪ್ತಿ ಆಯಿತೆ?

ಎಂಬ 'ಇರಾನಿನಲ್ಲಿ ಬರೆದಿರಬಹುದಾದ ಪದ್ಯ'ದಲ್ಲಿ ಬರುವ ಈ ಸಾಲುಗಳು ರಾಮಾನುಜನ್ ಅವರ ರಾಜಕೀಯ ಚಿಂತನೆಯನ್ನು ಬಿಂಬಿಸುತ್ತವೆ. ಪ್ರಕೃತಿಯು ಸಂಸ್ಕೃತಿಯಾಗುವ ಪ್ರಕ್ರಿಯೆಯನ್ನು ಒಂದು ಪ್ರತಿಮೆ ಮೂಲಕ 'ಧ್ಯಾನ ಫಲಿಸಿದರೆ' ಕವಿತೆಯಲ್ಲಿ ತಂದಿದ್ದಾರೆ:

ಇಡೀ ದಿನ ನಾನು ಒಂದು ಮರ
ನಾನೂ ಒಂದು ಕರಿಯ ವಾಲ್ನಟ್ ಮರ ಅಂತ
ಧ್ಯಾನ ಮಾಡಿದೆ.
ಸಂಜೆಹೊತ್ತಿಗೆ ಮೂರನೇ ಮನೆಯ ಬಿಳಿಜೂಲುನಾಯಿ
ಮೂಸುತ್ತ ಬಂದು ಹಿಂಗಾಲೆತ್ತಿ ನನ್ನ ಕಾಲಮೇಲೆ
ಬೆಚ್ಚಗೆ
ಒಂದ ಮಾಡಿತು.

ಹೀಗೆ ಪ್ರಾರಂಭವಾಗುವ ಈ ಕವಿತೆಯು ಒಂದು ಕನ್ನಡದ ಅಪರೂಪದ ಕವಿತೆಯಾಗಿದೆ. ರಾತ್ರಿ ಬಿದ್ದ ಮಳೆ ಗಾಳಿಗೆ ಬುಡಸಮೇತ ಮರವೊಂದು ಉರುಳುತ್ತದೆ. ಬೆಳಗ್ಗೆ ಅದನ್ನು ಮುನಿಸಿಪಾಲಿಟಿಯವರು ಗರಗಸದಿಂದ ಕತ್ತರಿಸಿ ಲಾರಿಯಲ್ಲಿ ತುಂಬಿಕೊಂಡು ಹೋಗುತ್ತಾರೆ. ಅದನ್ನು ಬಡಗಿ ತನಗೆ ಗೊತ್ತಿರುವ ಕಲೆಯಿಂದ ಮೇಜು ಕುರ್ಚಿಯನ್ನು ಮಾಡುತ್ತಾನೆ. ಆ ಮರದಲ್ಲಿ ಉಳಿದಿದ್ದ ಎಲೆ, ತೊಗಟೆ, ನಾರು ಇದನ್ನೆಲ್ಲಾ ಪೇಪರ್ ಕಾರ್ಖಾನೆ ಕಾಗದ ಮಾಡುತ್ತದೆ. ಕೊನೆಗೆ ಕವಿ ಇದನ್ನು ತಮ್ಮ ಅನುಭವವನ್ನಾಗಿ ಕಂಡು ಹೀಗೆ ಹೇಳುತ್ತಾರೆ:

ಈಗ ಇಲ್ಲಿ ಕುರ್ಚಿಯ ಮೇಲೆ ಕೂತು
ಮೇಜಿನ ಮೇಲೆ ಕಾಗದ ಹರಡಿ ಇದನ್ನೆಲ್ಲ
 ಬರೆಯುತ್ತಿರುವುದು
ನಾನು ನನ್ನ ರುಂಡಮುಂಡದ ಮೇಲೆ.
ಅದೇನೋ ಕಾಲೆ ಕಂಬ ಶಿರವೇ ಕಲಶ
ಅಂದರಲ್ಲ ಹಾಗೆ ಆಗಿಬಿಟ್ಟಿದೆ.

ಸಮಕಾಲೀನವಾದ ಅನುಭವವನ್ನು ಹಿಂದಿನ ವಚನಕಾರರ ಪರಿಕಲ್ಪನೆಯ ಜೊತೆ ಸಮೀಕರಿಸಿ ಅದಕ್ಕೊಂದು ಐತಿಹಾಸಿಕ ನೆನಪನ್ನು ತಂದುಕೊಡುವುದು ರಾಮಾನುಜನ್ ಅವರ ಒಂದು ವಿಶಿಷ್ಟ ಚಿಂತನೆಯಾಗಿದೆ. ಈ ಕವಿತೆಯಲ್ಲಿ ಕವಿ ಮರವನ್ನು ಧ್ಯಾನ ಮಾಡುತ್ತ ತಾನೇ ಮರವಾಗಿಬಿಡುತ್ತಾನೆ. ಸಂಜೆ ಆ ಮರಕ್ಕೆ ಬಿಳಿ ಜೂಲು ನಾಯಿ ಹಿಂಗಾಲೆತ್ತಿ ಒಂದಾ ಮಾಡಿಬಿಡುತ್ತದೆ. ರಾತ್ರಿ ಬಿರುಗಾಳಿಗೆ ಮರ ಉರುಳಿಹೋಗುತ್ತದೆ. ಮುನಿಸಿಪಾಲಿಟಿಯವರು ಮರವನ್ನು ಕತ್ತರಿಸಿ ಲಾರಿಯಲ್ಲಿ ತುಂಬಿಕೊಂಡು ಹೋಗುತ್ತಾರೆ. ಬಡಗಿ ಮೇಜು ಕುರ್ಚಿ ಮಾಡುತ್ತಾನೆ. ಕಾರ್ಮಿಕರು ಎಲೆ ಸೊಪ್ಪು ಸದೆಯನ್ನು ಪೇಪರ್ ಕಾರ್ಖಾನೆಗೆ ಹಾಕಿ ಕಾಗದ ತಯಾರು ಮಾಡುತ್ತಾರೆ. ಕವಿ ಈ ಮರದಿಂದ ಮಾಡಿದ ಕುರ್ಚಿಯ ಮೇಲೆ ಕೂತು ಅದರಿಂದಲೇ ತಯಾರಾದ ಮೇಜಿನ ಮೇಲೆ ಆ ಮರದ ಎಲೆಗಳಿಂದ ಸಿದ್ಧವಾದ ಕಾಗದ ಹರಡಿ ಪ್ರಸ್ತುತ ಕವಿತೆಯನ್ನು ಬರೆದಿದ್ದಾರೆ. ಇಂತಹ ಅನೂಹ್ಯ ಕಲ್ಪನೆಗಳು ರಾಮಾನುಜನ್ ಅವರಲ್ಲಿವೆ. ಇದನ್ನು ನಿರೂಪಿಸುವಾಗ ಕವಿಗೆ 'ಕಾಲೇ ಕಂಬ ಶಿರವೇ ಕಲಶ' ಎಂಬ ವಚನ ಚಳುವಳಿಯ ಸೂಕ್ತಿ ನೆನಪಿಗೆ ಬರುತ್ತದೆ. ತೀರಾ ವಿಭಿನ್ನವಾದ ರೀತಿಯ ಕವಿತೆ ಇದು. ಇಲ್ಲಿ ಕವಿಯು ಎಂತಹ ಧ್ಯಾನಸ್ಥ ಸ್ಥಿತಿಯನ್ನು ತಲುಪುತ್ತಾನೆ ಎಂದರೆ ತಾನೇ ಮರವಾಗಿಬಿಡುತ್ತಾನೆ. ಹಾಗೂ ಮರವು ಯಾವ ಒಂದು ರೀತಿಯ ಪ್ರಕ್ರಿಯೆಗೆ ಒಳಗಾಗುತ್ತದೆಯೋ ಅಂತಹ ಎಲ್ಲಾ ಪ್ರಕ್ರಿಯೆಗಳಿಗೆ ತಾನೂ ಒಳಗಾಗುತ್ತಾನೆ.

೩.೪.೪. ಹಳೆಯದೊಂದು ಮತ್ತೆ ಮನೆ ಬಂದಾಗ

'ಹಳೆಯದೊಂದು ಮತ್ತೆ ಮನೆ ಬಂದಾಗ' ಎನ್ನುವ ಕವಿತೆಯು ರಾಮಾನುಜನ್ ಅವರ ಅತ್ಯಂತ ಶ್ರೇಷ್ಠಕವಿತೆಗಳಲ್ಲಿ ಒಂದು. ಏಕೆಂದರೆ ಇಲ್ಲಿ ಅವರ ನೆಚ್ಚಿನ ಭಾವಲೋಕದ ಕೇಂದ್ರವಾದ ಮೈಸೂರು, ಬೌದ್ಧಿಕ ವಿಚಾರಗಳ ಆಗರವಾದ ಅಮೆರಿಕ ಎರಡೂ ಮುಖಾಮುಖಿಯಾಗುತ್ತವೆ. ಈ ಕವಿತೆಯಲ್ಲಿ ನಾಲ್ಕು ಭಾಗಗಳಿವೆ; ಮೊದಲನೆಯ ಭಾಗದಲ್ಲಿ ಈ ಕವಿತೆ ಬರೆಯಲು ಪೂರ್ವದಲ್ಲಿ ಕವಿ ಅಮೆರಿಕನ್ ಕವಿ ರಸ್ಸಲ್ ಎಡಿಸನ್‌ನ ಅಮೆರಿಕನ್ ಪದ್ಯ ಓದುತ್ತಿರಬೇಕಾದರೆ ಉಂಟಾದ ಭಾವನೆಗಳನ್ನು ಪ್ರಸ್ತಾಪಿಸಿದ್ದಾರೆ. ಅಮೆರಿಕ ಎಂದರೆ ಅದು ಒಂದು ಅಹಂಕಾರ.

ಮದ. ಅಮೆರಿಕನ್ ಪದ್ಯ ಓದುವುದೂ ಕೂಡ ಆನೆ ಸೊಂಡಿಲೆತ್ತಿ ಬಂದು ಮನೆಯನ್ನು ಮುರಿದು ಧ್ವಂಸ ಮಾಡಿದ ಹಾಗೆ ಎನ್ನುವ ಕಲ್ಪನೆ. ಇದು ಬೃಹತ್ ಶಕ್ತಿಯಾಗಿರುವ ಅಮೆರಿಕಕ್ಕೆ ಇರುವ ಇತರ ದೇಶಗಳನ್ನು ಹತ್ತಿಕ್ಕುವ ಆರ್ಭಟವನ್ನು ಸೂಚಿಸುತ್ತದೆ. ಆದರೆ ಈ ಮದಿಸಿದ ಅಮೆರಿಕನ್ ಆನೆಗೆ ಪ್ರತಿಯಾಗಿ ಎರಡನೇ ಭಾಗದಲ್ಲಿ ಮೈಸೂರಿನ ಕರೋಟಿಯ ಆನೆ ಮರಿಯ ಭಾವಕವಿಗೆ ಪುಲಕವನ್ನುಂಟು ಮಾಡುತ್ತದೆ. ಅದರೊಂದಿಗೆ ಚಿಕ್ಕಂದಿನಲ್ಲಿ ಮಕ್ಕಳೊಂದಿಗೆ ಚಕ್ಕಂದ ಆಡಿದ ಅರಮನೆ, ಮಗಳ ಮದುವೆ, ಚಪ್ಪರದ ಬಾಳೆಗೊನೆ ಇವೆಲ್ಲ ಕವಿಯ ನೆನಪಿಗೆ ಬರುತ್ತದೆ. ಆದರೆ ದೂರದ ಅಮೆರಿಕೆಯ ವಾಸ ಅದೇ ಆನೆ ಮರಿಯು ಐವತ್ತು ವರ್ಷದ ಕರಿ ಸಲಗನಾಗಿ ಬಂದು ಚಪ್ಪರದ ಬಾಳೆಗೊನೆ ಹರಿದ ಹಾಗೆ ಭಾಸವಾಗುತ್ತದೆ. ಮೂರನೇ ಭಾಗದಲ್ಲಿ ಕವಿ ಭಾರತದ ಪ್ರತಿನಿಧಿಯಾದ ಮೈಸೂರಿನ ತುಂಬುಜೀವನವನ್ನು ಚಿತ್ರಿಸುತ್ತಾರೆ.

ಬೆಳೆದ ಮನೆ
ಇವತ್ತಿಗೂ ಸಾಕು
ಮಕ್ಕಳು ಮರಿ
ಮೊಮ್ಮಕ್ಕಳು
ಷಡ್ಡಕರು ಅಳಿಯಂದಿರು
ಎಲ್ಲ ಅದರೊಳಗೆ
ಹೇಗೋ ಅಡಕ.

ಭಾರತದಲ್ಲಿ ಚಿಕ್ಕ ಮನೆಯೊಳಗೆ ಬಂಧು ಬಾಂಧವರೆಲ್ಲಾ ಸಂತೋಷವಾಗಿ ಧಾರಾಳದಿಂದ ಕಾಲ ಕಳೆಯಬಹುದು. ಆದರೆ ಅಮೆರಿಕದಲ್ಲಿ ಹಾಗಲ್ಲ. ದೊಡ್ಡ ಬಂಗಲೆಗಳಲ್ಲಿ ಎಲ್ಲರೂ ಒಂಟಿತನದ ಭಯಾನಕ ಸ್ಥಿತಿಯನ್ನು ಅನುಭವಿಸಬೇಕಾಗಿದೆ. ಈ ವ್ಯತ್ಯಾಸವನ್ನು ಸ್ಪಷ್ಟವಾಗಿ ಈ ಕವಿತೆಯಲ್ಲಿ ಹೇಳಲಾಗಿದೆ. ಕವಿತೆಯ ಕೊನೆಯಲ್ಲಿ ಕವಿ ಬಾಲ್ಯವನ್ನು ನೆನಪಿಸಿಕೊಂಡು ಆನೆಯ ಮಾವಟಿಗನಿಗೆ ಐದು ರೂಪಾಯಿ ಇನಾಮು ಕೊಟ್ಟದ್ದು, ಅದೇ ಆನೆಗೆ ರಸಬಾಳೆಯ ಚಿಪ್ಪು ತರಿಸಿಕೊಟ್ಟದ್ದು ಹಾಗೂ ತನ್ನ ಹಳೆಯ ಮನೆಯೊಳಗೆ ಬಂದು ಸೇರಿಕೊಂಡದ್ದರ ಪ್ರಸ್ತಾಪ ಬಂದಿದ್ದು ವ್ಯಕ್ತಿಯೊಬ್ಬನಿಗೆ ತನ್ನದೇ ಆದ ದೇಶ, ಪ್ರದೇಶ ಎಷ್ಟು ಮಹತ್ವದ್ದು ಎಂಬುದನ್ನು ತಿಳಿಸುತ್ತದೆ. ಹೆಚ್ಚು ಕಡಿಮೆ ರಾಮಾನುಜನ್ ಅವರ ಬಹುಪಾಲು ಕವಿತೆಗಳಲ್ಲಿರುವ ಅನಾಥಪ್ರಜ್ಞೆಯೇ ಇಲ್ಲಿಯೂ ಸ್ಥಾಯಿಭಾವವಾಗಿ ಮುಂದುವರಿಯುತ್ತದೆ.

ಈ ಕವಿತೆಯಲ್ಲಿ ಆನೆಯು ಅಮೆರಿಕನ್ ಅಹಂಕಾರಕ್ಕೆ ರೂಪಕವಾಗಿ ಸಮರ್ಥವಾಗಿ ಬಳಸಲ್ಪಟ್ಟಿದೆ. ಅಮೆರಿಕದ ವೇಗದ ಅತ್ಯಾಧುನಿಕ ತಂತ್ರಜ್ಞಾನದ ಯಾಂತ್ರಿಕ ಜೀವರಹಿತ ಜಗತ್ತು ಮತ್ತು ಅರಮನೆಯ ಸಂಭ್ರಮದ ಮೈಸೂರಿನ ಜೀವದುಂಬಿದ ತುಂಬುಬದುಕಿನ ಉತ್ಸಾಹದ

ಜಗತ್ತು. ಇವೆರಡರ ಅನುಸಂಧಾನ ಈ ಕವಿತೆಯಲ್ಲಿ ಆಗಿದೆ. ಮನೆ ತುಂಬ ಮಕ್ಕಳು, ಮದುವೆಯ ಸಂಭ್ರಮ, ಚಪ್ಪರ, ಬಾಳೆಗೊನೆ ಇವೆಲ್ಲ ಭಾರತೀಯತೆಯ ಸಂಕೇತವಾದರೆ ಆನೆಯ ಮದ ಮತ್ತು ಪೊಗರು ಅದರ ವಿನಾಶಕಾರಿ ಬುದ್ಧಿ ಅಮೆರಿಕವನ್ನು ಪ್ರತಿನಿಧಿಸುತ್ತದೆ. ಆದರೆ–

> ಆನೆಗೊಂದು ಚಿಪ್ಪು
> ರಸಬಾಳೆ ತರೆಸಿಕೊಟ್ಟು
> ಕಳಿಸಿ ಥಟ್ಟಂತ ಸಣ್ಣ
> ಗಾಗಿದ್ದ ನನ್ನ ಹಳೆಯ ಮನೆ
> ಯೊಳಗೆ ಬಂದು

ಸೇರಿಕೊಳ್ಳುವ ನಾಜೂಕು ಕವಿಗಿದೆ. ಇಲ್ಲಿ ಅಮೆರಿಕದ ದೈತ್ಯಶಕ್ತಿ ಭಾರತೀಯ ಭಾವನೆಗಳಿಗೆ ಬಾಗುವ ಬಗೆಯನ್ನು ಗಮನಿಸಿಬಹುದು.

ರಾಮಾನುಜನ್ ಅವರು ತೀವ್ರವಾಗಿ ಗೋಪಾಲಕೃಷ್ಣ ಅಡಿಗರ ಪ್ರಭಾವಕ್ಕೆ ಒಳಗಾಗಿದ್ದ ಕವಿ. ಅವರ ನೆಚ್ಚಿನ ಕವಿ ಕೂಡ. ಅಡಿಗರ 'ಯಾವ ಮೋಹನ ಮುರಳಿ' ಎನ್ನುವ ಅಸಾಧಾರಣ ಕವಿತೆಯ ಮರುಲೇಖವೇ ರಾಮಾನುಜನ್ ಅವರ 'ಮತ್ತೆ, ಯಾವ ಮೋಹನ ಮುರಳಿ?'. ಇದು ಪಾಶ್ಚಾತ್ಯ ಕವಿಯಾದ ರಿಲ್ಕನ್‌ನ 'ಸಾನೆಟ್ಸ್ ಟು ಆರ್ಫಿಯಸ್ ೧' ಎನ್ನುವ ಸಾನೆಟ್ ಅನುಸರಿಸಿ ಬರೆದ ಒಂದು ಸಾನೆಟ್. ಇದರಲ್ಲಿ ಅಡಿಗರು ಬಳಸಿದ ರೀತಿಯ ಭಾಷೆಯ ಮಾದರಿಯನ್ನು ಗಮನಿಸಬಹುದು. ಅಡಿಗರ ಸಾನೆಟ್ ೭ ದ್ವಿಪದಿಗಳಿಂದ ಕೂಡಿದ್ದರೆ ಇವರ ಸಾನೆಟ್‌ನಲ್ಲಿ ಎರಡು ಚೌಪದಿಗಳು ಹಾಗೂ ಎರಡು ತ್ರಿಪದಿಗಳು ಸೇರಿ ಒಟ್ಟು ೧೪ ಸಾಲುಗಳಿವೆ. ಅಡಿಗರ ಕವಿತೆಯು ಸೂಕ್ಷ್ಮವಾದ ನಾಜೂಕಾದ ನಯವಾದ ಆಹ್ಲಾದಕರ ಅನುಭವವನ್ನು ಉಂಟು ಮಾಡುವ ಪದಗಳಿಂದ ತುಂಬಿದ್ದರೆ, ರಾಮಾನುಜನ್ ಅವರ ಪದ್ಯದಲ್ಲಿ ಗುಟುರು, ಘರ್ಜನೆ, ಬೊಗುಳಾಟ, ಕಿಲಾಡಿತನ, 'ಕಸ' 'ಕಡ್ಡಿ' ಗೇಟು ಮುಂತಾದ ಪ್ರಾಕೃತಿಕ ಶಬ್ದಗಳು ವಿಜೃಂಭಿಸುತ್ತವೆ. ಕವಿತೆಯ ಶೀರ್ಷಿಕೆಗೆ ಪ್ರಶ್ನೆ ಇರುವುದು ಹಿಂದಿನ ತಲೆಮಾರನ್ನು ಪ್ರತಿಭಟಿಸುವ ಸಂಕೇತವಾಗಿದೆ.

೩.೪.೫. ತಿಳಿಯದ ಬಗ್ಗಡ

'ತಿಳಿಯದ ಬಗ್ಗಡ' ಎನ್ನುವ ಒಂದು ಚಿಕ್ಕ ಪದ್ಯ ಕೂಡ ಒಂದು ದೃಷ್ಟಿಯಿಂದ ಸಾನೆಟ್. ನಾಲ್ಕು ತ್ರಿಪದಿಗಳು ಮತ್ತು ಕೊನೆಯಲ್ಲಿ ಒಂದು ದ್ವಿಪದಿ ಇದ್ದು ಈ ಕವಿತೆಯ ವಸ್ತು ಅಮೆರಿಕನ್ ಸಂಸ್ಕೃತಿಯ ವೈವಿಧ್ಯ ಹಾಗೂ ಸಂಕೀರ್ಣತೆಗಳನ್ನು ತಿಳಿಸುತ್ತದೆ. ಅಮೆರಿಕ ಎಂದರೆ ಹೊಟೇಲ್, ಹೊಟೇಲ್ ಎಂದರೆ ಮನೆ, ವ್ಯತ್ಯಾಸವಿಲ್ಲ. ಅದು ಕೇವಲ ವಿಳಾಸವಿರುವ ಸಂಖ್ಯೆಗಳ

ಮೊತ್ತ. 'ತಿಳಿಯದ ಬಗ್ಗಡ' ಎನ್ನುವಾಗ ತಿಳಿಯದ ಎಂದರೆ ತಿಳಿಯಾದ ಮತ್ತು ಅರ್ಥವಾಗದ ಹಾಗೂ ತಿಳಿಯಾಗದ ಎನ್ನುವ ಮೂರು ಅರ್ಥಗಳಿವೆ. ಈ ಮೂರೂ ಅರ್ಥಗಳು ಇಲ್ಲಿ ಸಲ್ಲುತ್ತದೆ. ಇಲ್ಲಿ ನಲ್ಲಿ ತಿರುಗಿಸಿದಾಗ ಬರುವ ನೀರು ಕೇವಲ ವ್ಯಾವಹಾರಿಕವಾದದ್ದು. ಭಾವಪೂರ್ಣವೂ ಜೀವಪೂರ್ಣವೂ ಅಲ್ಲ. ರಾಮಾನುಜನ್ ಅವರಿಗೆ ಎಲ್ಲೋ ಒಂದೆಡೆ ಮನಸ್ಸಿನಲ್ಲಿ ಭಾರತವು ಆಹ್ಲಾದಕ ಆಕರ್ಷಣೆಯ ನಾಡೆಂದು, ಅಮೆರಿಕ ಬುದ್ಧಿವಂತಿಕೆಯ ಯಂತ್ರಜ್ಞಾನದ ಯಾಂತ್ರಿಕತೆಯ ಹಾಗೂ ಚಾಣಾಕ್ಷತೆಯ ಸಂಕೇತ ಎನ್ನುವ ಭಾವನೆ ಇದ್ದು ಅಮೆರಿಕದೊಳಗಿನ, ಅಮೆರಿಕನ್ನನಲ್ಲದ ಭಾರತೀಯನಾಗಿಯೇ ಉಳಿದುಕೊಂಡಿರುವ ಅನಾಥಪ್ರಜ್ಞೆ ಹಾಗೂ ತಬ್ಬಲಿತನ ನಿರಂತರವಾಗಿ ಕಾಡುತ್ತಿರುವಂತಿದೆ. ಇದು ಕವಿತೆಯ ಕೊನೆಯ 'ನೀರು ತಿಳಿಯಾಗಲಿ ಅಂತ/ ಬಹಳ ಹೊತ್ತು ಕಾದೆ/ ಇನ್ನೂ ಕಾಯುತ್ತಲೇ ಇದ್ದೇನೆ' ಎನ್ನುವ ಸಾಲುಗಳಲ್ಲಿ ವ್ಯಕ್ತವಾಗುತ್ತದೆ. ಎಲ್ಲರಿಗೂ ಗೊತ್ತಿರುವಂತೆ ಕಾಯುವುದು ರೇಜಿಗೆಯ ಬೇಸರದ ಕ್ರಿಯೆ. ಭಾರತ ಹಾಗಲ್ಲ ಎನ್ನುವ ಇನ್ನೊಂದು ಅರ್ಥವೂ ಇಲ್ಲಿ ಹಿನ್ನೆಲೆಯಲ್ಲಿದೆ.

೩.೪.೬. ಪಕ್ಕದ ಮನೆಯಲ್ಲಿ ಉಪನಿಷತ್ತು

'ಪಕ್ಕದ ಮನೆಯಲ್ಲಿ ಉಪನಿಷತ್ತು' ಎನ್ನುವುದು ಎರಡು ಸಾಲಿನ ಒಂದು ಚಿಕ್ಕ ಕವಿತೆ. ಇಲ್ಲಿ ಪಕ್ಕದ ಮನೆಯ ಗಂಡ ಹೆಂಡತಿಯ ಒಂದು ಪುಟ್ಟ ಸಂಸಾರವನ್ನು ಸೀಬೇ ಮರದ ಎರಡು ಕವಲುಗಳ ಮೇಲೆ ಕುಳಿತಿರುವ ಎರಡು ಹಕ್ಕಿಗಳಿಗೆ ಹೋಲಿಸಲಾಗಿದೆ. ಆದರೆ ಮನುಷ್ಯ ಪ್ರಪಂಚದ ಅಸಮಾನತೆಯ ಪರಿಕಲ್ಪನೆ ಇಲ್ಲಿಯೂ ಆವರಿಸಿದೆ. ಒಂದು ಹಕ್ಕಿ ದಾಹ ಹಸಿವುಗಳಿಂದ ಹಣ್ಣು ಕುಕ್ಕಿ ಹೆಕ್ಕಿ ತಿನ್ನುತ್ತಿದೆ. ಬಹುಶಃ ಇದು ಗಂಡು ಹಕ್ಕಿ. ದಾಹ ಮತ್ತು ಹಸಿವು ಕಾಮದ ಸಂಕೇತ; ಪುರುಷಪ್ರಧಾನ ಪ್ರಪಂಚದ ಆವರಣವನ್ನು ಇಲ್ಲಿ ಗಮನಿಸಬಹುದು. ಮೈಯೆಲ್ಲಾ ಕಣ್ಣಾಗಿರುವ ಸುಮ್ಮನೆ ಕೂತು ನೋಡುತ್ತಿರುವ ಹಕ್ಕಿ ಹೆಣ್ಣು, ಅದು ಅಸಹಾಯಕ. ಈ ಕವಿತೆ 'ಪುರಾಣ ಓದುವುದಕ್ಕೆ ಬದನೆ ತಿನ್ನುವುದಕ್ಕೆ' ಎಂಬ ಕನ್ನಡದ ಪ್ರಸಿದ್ಧ ಗಾದೆಯನ್ನು ನೆನಪಿಸುತ್ತದೆ. ಒಟ್ಟಿನಲ್ಲಿ ಇದು ಒಂದು ಅಚ್ಚುಕಟ್ಟಾದ ಕವಿತೆ. ಇಲ್ಲಿ ಬಳಸಲಾಗಿರುವ ಸೀಬೆ ಮರ, ಕೊಂಬೆಯ ಕವಲು, ಹಕ್ಕಿ, ಹಣ್ಣು, ಗಂಡ ಹೆಂಡತಿ ಮತ್ತು ಸಂಸಾರ ಇವು ಸ್ಥಳೀಯ ಕನ್ನಡದ ಸಾಂಸ್ಕೃತಿಕ ಪರಿಸರವನ್ನು ಸೂಚಿಸುತ್ತದೆ. ಇಲ್ಲಿ ಪಕ್ಕದ ಮನೆ ಎಂಬುದು ಅಕ್ಕಪಕ್ಕದ ಮನೆಗಳು ಹಾಗೂ ಅವುಗಳ ಅಕ್ಕಪಕ್ಕದ ಮನೆಗಳು ಇತ್ಯಾದಿ ಎಲ್ಲಾ ಮನೆಗಳನ್ನು ಪ್ರತಿನಿಧಿಸುತ್ತದೆ.

'ಜೆನ್ ೧' ಎಂಬ ಕವಿತೆ ಒಂದು ಅಪೂರ್ವವಾದ ಪ್ರಣಯಗೀತೆ; ಇಲ್ಲಿ 'ಬೆಟ್ಟ ಬೆಟ್ಟ ನದಿ ನದಿ' ಎಂಬ ದ್ವಿರುಕ್ತಿಯನ್ನು ಅತ್ಯಂತ ಶಕ್ತಿಪೂರ್ಣವಾಗಿ ಬಳಸಲಾಗಿದೆ. ಬಹುಶಃ ಹರಿಹರನ ನಂತರ ಈ ರೀತಿಯ ದ್ವಿರುಕ್ತಿಯ ಶಕ್ತಿಪೂರ್ಣ ಬಳಕೆಯನ್ನು ರಾಮಾನುಜನ್ ಅವರಲ್ಲಿ ಕಾಣುತ್ತೇವೆ. ಪದ್ಯ ಹೀಗಿದೆ:

ಮೊದಲು
ಈ ಬೆಟ್ಟ ಬೆಟ್ಟ
ಈ ನದಿ ನದಿ
ಮೈಗೆ ಮೈ ಮುಟ್ಟಿದಾಗ
ಬೆಟ್ಟ ಬೆಟ್ಟವಲ್ಲ
ನದಿ ನದಿಯಲ್ಲ
ಮತ್ತೆ
ಬೆಟ್ಟ ಬೆಟ್ಟ
ನದಿ ನದಿ

ಇಲ್ಲಿ ಬೆಟ್ಟ ಮತ್ತು ನದಿಗಳು ಗಂಡು ಹೆಣ್ಣಿನ ಸಂಕೇತ. ಬೆಟ್ಟವು ಸ್ಥಿರತೆಯನ್ನು ಸಂಕೇತಿಸಿದರೆ ನದಿಯು ಚಂಚಲತೆಯನ್ನು ಸಂಕೇತಿಸುತ್ತದೆ. ಬೆಟ್ಟ ಗಂಡು ಮತ್ತು ನದಿ ಹೆಣ್ಣು. ಗಂಡು ಹೆಣ್ಣಿನ ಪ್ರಣಯಪೂರ್ವದ ಪ್ರಣಯದ ಹಾಗೂ ಪ್ರಣಯಾನಂತರದ ಗತಿಸ್ಥಿತಿಯನ್ನು ಇಲ್ಲಿ ಸೊಗಸಾಗಿ ಅಭಿವ್ಯಕ್ತಗೊಳಿಸಲಾಗಿದೆ. ಮೊದಲನೆಯ ಪದ್ಯವೃಂದ "ಮೊದಲು / ಈ ಬೆಟ್ಟ ಬೆಟ್ಟ / ಈ ನದಿ ನದಿ" ಪ್ರಣಯ ಪೂರ್ವಸ್ಥಿತಿಯನ್ನು, ಎರಡನೆಯ ಚರಣ "ಮೈಗೆ ಮೈ ಮುಟ್ಟಿದಾಗ / ಬೆಟ್ಟ ಬೆಟ್ಟವಲ್ಲ / ನದಿ ನದಿಯಲ್ಲ" ಪ್ರಣಯದ ಸ್ಥಿತಿಯನ್ನು ಮತ್ತು ಮೂರನೆಯ ಚರಣ "ಮತ್ತೆ / ಬೆಟ್ಟ ಬೆಟ್ಟ / ನದಿ ನದಿ" ಪ್ರಣಯಾನಂತರದ ಸ್ಥಿತಿಯನ್ನು ಸೂಚಿಸುತ್ತದೆ. ಈ ಸುಂದರ ಕವಿತೆಯನ್ನು ಓದಿದಾಗ ಪುತಿನ ಅವರ "ನನ್ನೊಳು ನಾ, ನಿನ್ನೊಳು ನೀ, ಒಲಿವ ಮುಂತ್ತಿಂತೆ ನಾನೀ / ನಿನ್ನೊಳು ನಾ ನನ್ನೊಳು ನೀ ಒಲಿದ ಮೇಲಿಂತೆ ನಾನಿ / ಇದೇ ಒಲವಿನ ಸರಿಗಮ ಪದನಿ" ಎನ್ನುವ ಪದ್ಯದ ಸಾಲುಗಳು ನೆನಪಿಗೆ ಬರುತ್ತವೆ.

೩.೪.೭. ಅಪ್ರಕಟಿತ ಕಾವ್ಯ

ರಾಮಾನುಜನ್ ಅವರ ಯಾವುದೇ ೩ ಕವನ ಸಂಕಲನದಲ್ಲಿ ಸೇರದ ಹಾಗೂ ಯಾವುದೇ ಸಾಹಿತ್ಯಿಕ ಪತ್ರಿಕೆಗಳಲ್ಲಿ ಪ್ರಕಟವಾಗದ 'ಅಪ್ರಕಟಿತ ಕಾವ್ಯ' ಎಂಬ ಶೀರ್ಷಿಕೆಯಡಿ ರಮಾಕಾಂತ ಜೋಶಿ ಮತ್ತು ಎಸ್. ದಿವಾಕರ್ ಸಂಪಾದಿಸಿರುವ ಎ.ಕೆ.ರಾಮಾನುಜನ್ ಸಮಗ್ರ ಕೃತಿಯಲ್ಲಿ ೧೧ ಕವಿತೆಗಳಿವೆ. ಇದು ಪ್ರಕಟವಾದದ್ದು ೨೦೧೧ರಲ್ಲಿ ಇದರಲ್ಲಿ ಮೊದಲನೆಯದಾದ 'ಒನಕೆಯ ಹಾಡುಗಳು' ಶೀರ್ಷಿಕೆಯಡಿ ೮ ಪದ್ಯಗಳಿವೆ. ಇದನ್ನು ವಿಶ್ಲೇಷಿಸುವುದಕ್ಕೆ ಮೊದಲು 'ಒನಕೆ ಹಾಡು' ಎಂದರೇನೆಂಬುದನ್ನು ತಿಳಿದುಕೊಳ್ಳಬೇಕು. 'ಕವಿರಾಜಮಾರ್ಗ' ಪೂರ್ವದಲ್ಲಿ ಓವನಿಗೆ ಒನಕೆವಾಡು ಎಂಬ ಕಾವ್ಯರೂಪಗಳಿದ್ದವೆಂದು, ಸೈಗೊಟ್ಟ ಶಿವಮಾರನೆಂಬ ಗಂಗರಾಜನು

ರಚಿಸಿರುವ 'ಗಜಾಷ್ಟಕವು' ಓವನಿಗೆ ಒನಕೆವಾಡು ಎಂದು ಒಂದು ಶಾಸನದಲ್ಲಿ ಹೇಳಲಾಗಿದೆ. 'ಕ್ರಿ.ಶ. ೮೦೦ರ ಇದೇ ಶಾಸನದಲ್ಲಿ-

> ಏವೇಳ್ವುದೋ ಶಿವಮಾರಮ।
> ಹೀವಳಯಾಧಿಪನ ಸುಭಗಕವಿತಾಗುಣಮಂ॥
> ಭೂವಳಯದೋಳ್ ಗಜಾಷ್ಟಕ।
> ಮೋವನಿಗೆಯುಮೊನಕೆವಾಡುಮಾದುದ ಪೇಳ್ಗುಂ॥[೨]

ಎನ್ನುವ ಪದ್ಯದ ಮೂಲಕ ಮೇಲಿನ ಅಂಶವು ತಿಳಿಯುತ್ತದೆ.

ಇದೇ ಸಂದರ್ಭದಲ್ಲಿ ಪ್ರಾಚೀನ ಮರಾಠಿ ಸಾಹಿತ್ಯದಲ್ಲಿ ಬಹಳ ಪ್ರಚುರವಾಗಿದ್ದ ತ್ರಿಪದಿಗಿಂತ ಭಿನ್ನವಾದ ಛಂದೋರೂಪ 'ಓವಿ' ಎಂಬುದು; ಒಂದು ಹಾಡು ಎಂಬ ಅಂಶದ ಕಡೆಗೆ ಡಾ.ಎಂ.ಚಿದಾನಂದ ಮೂರ್ತಿ ಅವರು 'ಒನಕೆವಾಡು - ಒಂದು ವಿವೇಚನೆ' ಎಂಬ ಲೇಖನದಲ್ಲಿ ಸಾಹಿತ್ಯಾಸಕ್ತರ ಗಮನ ಸೆಳೆಯುತ್ತಾರೆ(ಸಂಶೋಧನ ತರಂಗ, ಸಂಪುಟ ೨, ಪುಟ. ೧೩೮-೧೪೦). ಸೋಮೇಶ್ವರನು ರಚಿಸಿರುವ ಸಂಸ್ಕೃತದ 'ಮಾನಸೋಲ್ಲಾಸ' ಎಂಬ ಕೃತಿಯಲ್ಲಿ ಈ ಒನಕೆಯ ಹಾಡನ್ನು 'ಉವಿ', ಓವಿಕ ಎಂಬ ಹೆಸರುಗಳಿಂದ ಸೂಚಿಸಿರುವುದು ಕುತೂಹಲಕಾರಿಯಾಗಿದೆ.

ಇದರಿಂದಾಗಿ ಒನಕೆವಾಡು ಜನಪದ ಸಾಹಿತ್ಯದ ಪ್ರಕಾರವಿರಬೇಕು. ಬಹುಶಃ ಬೀಸುವ, ಕುಟ್ಟುವ, ಮುಖ್ಯವಾಗಿ ಒರಳಿನಲ್ಲಿ ಧಾನ್ಯವನ್ನು ಒನಕೆಯಿಂದ ಕುಟ್ಟುವ ಸಂದರ್ಭದಲ್ಲಿ ಹುಟ್ಟಿದ ಹಾಡುಗಳು ಒನಕೆವಾಡು / ಓವನಿಗೆ ಆಗಿರಬೇಕೆಂದು ಈ ಒನಕೆವಾಡಿನ ಮುಂದುವರಿದ ರೂಪವೇ ಪ್ರಸ್ತುತ ಕವಿಯ ಒನಕೆಯ ಹಾಡುಗಳು ಆಗಿರಬೇಕು ಎಂದು ರಂ.ಶ್ರೀ ಮುಗಳಿಯವರು ಹೇಳಿದ್ದಾರೆ(ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ : ಸಂಪುಟ-೨, ಭಾಗ-೨, ಪುಟ. ೩೦೪, ೨೦೧೩, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು). ಈಗ ಈ ಅಂಶದ ಮೂಲಕ ಕ್ರಿ.ಶ.೮೦೦ರ 'ಗಜಾಷ್ಟಕ'ದ ನಂತರದ ರಾಮಾನುಜನ್ ಅವರ ಈ ಒನಕೆ ಹಾಡುಗಳು ಸುಮಾರು ೧೨೦೦ ವರ್ಷಗಳ ನಂತರ ಕಾಣಿಸಿಕೊಂಡಿರುವುದು ಅನನ್ಯವೇ ಸರಿ. ಗಜಾಷ್ಟಕದಲ್ಲಿಯೂ ೮ ಪದ್ಯಗಳಿವೆ, ಇಲ್ಲಿಯೂ ೮ ಪದ್ಯಗಳಿವೆ. ಇದು ಆಕಸ್ಮಿಕವೇನಲ್ಲ. ಅಷ್ಟೇ ಅಲ್ಲ, ರಾಮಾನುಜನ್ ಅವರು ಜಾನಪದಶಾಸ್ತ್ರದಲ್ಲಿ ವಿಶೇಷ ಅಧ್ಯಯನಗಳನ್ನು ನಡೆಸಿದ್ದವರಾದ್ದರಿಂದ ಈ ಒನಕೆವಾಡಿನ ಬಗ್ಗೆಯೂ ಅವರು ಸಾಕಷ್ಟು ಸಂಶೋಧನೆಗಳನ್ನು ಮಾಡಿರುವ ಸಾಧ್ಯತೆಗಳಿವೆ ಎಂಬುದಕ್ಕೆ ಈ ಒನಕೆಯ ಹಾಡುಗಳು ಸಾಕ್ಷಿ. ಶೀರ್ಷಿಕೆಯ ನಂತರ ಕವಿ ಆವರಣ ಚಿಹ್ನೆಯಲ್ಲಿ(Some exercise in the folk style) ಎಂದು ಸೂಚನೆ ನೀಡಿರುವುದು ಕೂಡ ಮೇಲಿನ ಅಂಶಕ್ಕೆ ಪೂರಕವಾಗಿದೆ.

ರಾಮಾನುಜನ್ ಅವರ ಈ ಒನಕೆಯ ಹಾಡುಗಳ ಭಾಷಿಕ ರಚನೆಯ ಸ್ವರೂಪ ಕುತೂಹಲಕಾರಿಯಾಗಿದೆ. ಎರಡು ಸಾಲಿನ, ಮೂರು ಸಾಲಿನ, ನಾಲ್ಕು ಸಾಲಿನ, ಐದು ಸಾಲಿನ ಪದ್ಯಗಳು ಇಲ್ಲಿದ್ದು ಒನಕೆಯ ಹಾಡುಗಳು ಹೇಗೆ ಫ್ಲೆಕ್ಸಿಬಲ್ ಆಗಿದ್ದವು ಎಂಬುದನ್ನು ಹೇಳುತ್ತದೆ. ಒನಕೆಯ ಹಾಡುಗಳ ಆಶಯದಲ್ಲಿ ಸಾಮಾನ್ಯವಾಗಿ ಅದು ಸುಂದರವಾದ ಜನಪ್ರಿಯವಾದ ಹಾಗೂ ತುಸು ಹಾದರ, ಲೈಂಗಿಕತೆ ಇತ್ಯಾದಿಗಳನ್ನು ಕುರಿತು ಅರೆರೋಚಕತೆಯೂ ಇರುತ್ತದೆ. ರಾಮಾನುಜನ್ ಅವರ ಈ ಒನಕೆಯ ಹಾಡುಗಳ ಆಶಯವೂ ಕೂಡ ಇದೇ ಆಗಿದೆ. ರಾಮಾನುಜನ್ ಅವರ ವ್ಯಾಪಕವಾದ ಅಧ್ಯಯನ, ಕನ್ನಡ ಸಾಹಿತ್ಯದ ಎಲ್ಲಾ ಕಾಲದ ಚಟುವಟಿಕೆಗಳ ಬಗ್ಗೆ ಇರುವ ತಿಳುವಳಿಕೆಯಿಂದ ಮಾತ್ರ ಇಂತಹ ಪದ್ಯಗಳು ಹುಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಒರಳಿನಲ್ಲಿ ಒನಕೆಯಿಂದ ಧಾನ್ಯವನ್ನು ಕುಟ್ಟುವ ಪ್ರಕ್ರಿಯೆಯು ಲೈಂಗಿಕತೆಯ ಸಂಕೇತ. ಉದಾಹರಣೆಗೆ:

ಗುಂಡೀಗೆ ಒರಳಲ್ಲಿ ಕುಟ್ಟೀದೆ ಜೀವ
ಕುಟ್ಟೀದೆ ಜೀವ
ಕುಟ್ಟೀದೆ ಜೀವ
ಪ್ರೀತಿಯ ಒನಕೆ ಕುಟ್ಟೀದ ಹಾಗೇ

ಎರಡನೇ ಪದ್ಯದಲ್ಲಿ ಹೆಣ್ಣೊಬ್ಬಳು ಈ ಕ್ರಿಯೆಗೆ ಒಳಗಾಗಿ ಬಸುರಿಯಾಗಿ ಬಯಕೆಗೆ ಒಳಗಾಗುವ ಸಂಗತಿ ಇದೆ.

ನೆನಸೀದ ಒಡನೆ ಬೀಮನಸೀಯಾಗಿ
ಬಸುರೀಯ ಬಯಕೆ

ಎಂಬುದು ಇದನ್ನು ಸೂಚಿಸುತ್ತದೆ.

ಹೀಗೆಯೇ ಉಳಿದ ಆರು ಒನಕೆಯ ಹಾಡು ಪದ್ಯಗಳಲ್ಲಿಯೂ ಲೈಂಗಿಕ ಕ್ರಿಯೆಯು ನಿಧನಿಧಾನವಾಗಿ, ವಿಧವಿಧವಾಗಿ ತೀವ್ರವಾಗುತ್ತ, ತೀಕ್ಷ್ಣವಾಗುತ್ತ ಹೋಗುವ ಪದ್ಯಗಳಿವೆ. ಜನಪದರು ಆರೋಗ್ಯಕರವಾದ ಲೈಂಗಿಕತೆಯನ್ನು ಎಂದೂ ತಿರಸ್ಕರಿಸಿರಲಿಲ್ಲ. ಗೌರವ ಹಾಗೂ ಉತ್ಸಾಹದಿಂದ ಅದನ್ನು ಆಹ್ವಾನಿಸುತ್ತಿದ್ದರು. ಈ ಎಂಟು ಪದ್ಯಗಳಲ್ಲಿ ಕವಿ ಲೈಂಗಿಕತೆಯ ವಿವಿಧ ರೂಪಗಳನ್ನು ನಿರೂಪಿಸಿದ್ದಾರೆ. ಜನಪದರು ಅಂಗೀಕರಿಸಿರುವ ಈ ಆರೋಗ್ಯಕರ ಲೈಂಗಿಕ ಮನೋಧರ್ಮ ಭಾರತದ ದೇವಾಲಯಗಳನ್ನೂ ಒಳಗೊಂಡ ಎಲ್ಲಾ ಬಗೆಯ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಅಭಿವ್ಯಕ್ತಗೊಂಡಿದೆ.

'ಒಂದು ಪಟ್ಟಿ' ಎನ್ನುವ ಕವಿತೆಯಲ್ಲಿ ಮೂರು ಭಾಗಗಳಿವೆ. ಕವಿತೆ ಆರಂಭವಾಗುವುದೇ

ನನಗೆ ಇವೆಲ್ಲ
ಕಂಡರೆ
ಆಗುವುದಿಲ್ಲ

ಎನ್ನುವ ಒಂದು ಸಾಮಾನ್ಯ ಹೇಳಿಕೆಯ ಮೂಲಕ; ಕವಿತೆಯ ಮೂರೂ ಭಾಗಗಳಲ್ಲಿ ಇವುಗಳ ಪಟ್ಟಿ ಇದೆ. ಅರ್ಥಹೀನವಾದ, ಉಪಯುಕ್ತವಲ್ಲದ, ಕೆಲಸಕ್ಕೆ ಬಾರದ, ಸುಳ್ಳುಗಳಿಂದ ಕೂಡಿದ ತೊಂದರೆಯನ್ನು ನೀಡುವ ಯಾವ ಅಂಶಗಳೂ ಕವಿತೆಯ ನಾಯಕನಿಗೆ ಇಷ್ಟವಾಗುವುದಿಲ್ಲ ಎಂಬುದನ್ನು ಮನೋಜ್ಞವಾಗಿ ನಿರೂಪಿಸಲಾಗಿದೆ. ನಾಟಕ ಜೀವನದ ಅರ್ಥಪೂರ್ಣತೆಯನ್ನು ಹೇಳಬೇಕೇ ಹೊರತು ಕೇವಲ ನಾಟಕವಾಗಿರಬಾರದು. ಮನೆ ಮನೆಯಾಗಿರಬೇಕೇ ಹೊರತು ಕಟ್ಟಡವಾಗಿರಬಾರದು, ಚರಿತ್ರೆ ಜಿಯಾಗ್ರಫಿಯಾಗಿರಬಾರದು, ಪದ್ಯದಲ್ಲಿ ತುಂಬಿದ ಅರ್ಥವಿರಬೇಕೇ ಹೊರತು, ಪದ ಪದ ಬರೀ ಪದಗಳಿರಬಾರದು. ಪಂಚಭೂತವೆಲ್ಲಾ ಪಂಚೆ ಬಿಚ್ಚಿದ ಭೂತವಾಗಬಾರದು – ಹೀಗೆ ಸಾಗುತ್ತದೆ ಪದ್ಯ. ಮೂರನೆಯ ಭಾಗದಲ್ಲಿ –

ಜನ್ಮದ ಕೊನೆ
ಯಿಂದ ತುದಿವರೆಗೆ
ವರ್ಷಗಟ್ಟಲೆ ನಿಧಾನವಾಗಿ
ಒಳಗೇ ಕೊಳೆತು ಒಂದು ದಿನ
ಬಾಯಿ ಬಿಟ್ಟು ಊರೆಲ್ಲಾ ನಾರುವ
ಶವ ಸತ್ತೆಮ್ಮೆ
ತುಂಬ
ಕೊಳೆತು ಹುಟ್ಟಿದ
ತಲೆ ಕಾಲಿಲ್ಲದ
ಉಳ

ನನಗೆ ಇವೆಲ್ಲ ಕಂಡರೆ ಆಗುವುದಿಲ್ಲ ಎನ್ನುವ ಹೇಳಿಕೆಗೆ ಕಳಶದೋಪಾದಿಯಲ್ಲಿ ಮೇಲಿನ ಪದ್ಯಭಾಗ ಕಂಡುಬರುತ್ತದೆ. ಕವಿಗೆ ಯಾವುದೂ ವರ್ಜ್ಯವಲ್ಲ ವ್ಯರ್ಥವಲ್ಲ, ಎಲ್ಲವೂ ಉಪಯುಕ್ತ ಅರ್ಥಪೂರ್ಣ ಸತ್ವಯುತ ಅನುಭವಗಳಾಗಿ ಜೀವಂತಿಕೆಯಿಂದ ತುಂಬಿರಬೇಕು ಎನ್ನುವ ಮಹತ್ವಪೂರ್ಣವಾದ ಸಂದೇಶವನ್ನು ಈ ಕವಿತೆ ಸಹೃದಯರಿಗೆ ಸಮರ್ಥವಾಗಿ ರವಾನಿಸುತ್ತದೆ.

'ಅಪ್ರಕಟಿತ ಕಾವ್ಯ'ದಲ್ಲಿ ಒಂದು ಕವಿತೆ ಸಹೃದಯರ ಗಮನ ಸೆಳೆಯುತ್ತದೆ; ಆ ಕವಿತೆಗೆ ಹೆಸರಿಲ್ಲ, ಅದನ್ನು ಒಂದು ದೃಷ್ಟಿಯಿಂದ(Punctuation) ವಿರಾಮಚಿಹ್ನೆಯ ಪದ್ಯ ಎಂದು

ಕರೆಯಬಹುದು. ಇಡೀ ಪದ್ಯದಲ್ಲಿ ಅನೇಕ ಅವ್ಯಯಗಳನ್ನು ಬಳಸಲಾಗಿದೆ. + – _ () ಬೋಲ್ಡ್, ಇಂಗ್ಲಿಷ್ ಶಬ್ದದ ಬಳಕೆ ಇವೆಲ್ಲ ಒಟ್ಟಿಗೆ ಬಳಕೆಯಾಗಿರುವ ಒಂದು ಪ್ರಯೋಗಶೀಲ ಕವಿತೆ ಇದು. ಬದುಕೇ ಒಂದು ನಿಗೂಢವಾದ ಅನ್ವೇಷಣೆಯಾದ್ದರಿಂದ ಕವಿತೆಯೂ ಕೂಡ ಬದುಕಿನ ಪ್ರತಿಬಿಂಬವಾದ್ದರಿಂದ ಅಲ್ಲಿಯೂ ಹೊಸ ಹೊಸ ರೀತಿಯ ಅನ್ವೇಷಣೆಗಳು ನಡೆಯುತ್ತಿರುತ್ತವೆ. ಇದನ್ನು ವ್ಯಾಖ್ಯಾನ ಮಾಡುವುದಕ್ಕಿಂತ, ನೋಡಿ ಓದಿ ಕೇಳಿ ಅನುಭವಿಸುವುದು ಒಳ್ಳೆಯದು. ಮುದ್ರಿತ ಕವಿತಾಸಂಕಲನಗಳ ಆವೃತ್ತಿಗಳ ಹಾಗೆ ರಾಮಾನುಜನ್ ಅವರ ಅಪ್ರಕಟಿತ ಕಾವ್ಯವೂ ಕೂಡ ೩೪ ಪುಟಗಳ ಒಂದು ಕವನ ಸಂಕಲನದ ಆವೃತ್ತಿಯೆಂದೇ ಭಾವಿಸಬೇಕಿದೆ.

ಯಾವುದೇ ಕವನ ಸಂಕಲನದಲ್ಲಿ ಸೇರದ ಆದರೆ ವಿವಿಧ ನಿಯತಕಾಲಿಕೆಗಳಲ್ಲಿ ಪ್ರಕಟವಾದ ೫ ಬಿಡಿ ಕವನಗಳ ಗುಚ್ಛವನ್ನು ರಾಮಾನುಜನ್ ಅವರ ಸಮಗ್ರದಲ್ಲಿ ಗಮನಿಸಬಹುದು. ಇಂತಹ ೫ ಕವಿತೆಗಳಿವೆ. ಅವುಗಳಲ್ಲಿ ೪ ಕವಿತೆಗಳು ಅಡಿಗರ ಸಂಪಾದಕತ್ವದ 'ಸಾಕ್ಷಿ'ಯ ವಿವಿಧ ಸಂಪುಟಗಳಲ್ಲಿ ಪ್ರಕಟವಾಗಿವೆ. ಒಂದು ಪದ್ಯ ಮನೋಹರ ಗ್ರಂಥಮಾಲೆಯು ಪ್ರಕಟಿಸಿರುವ 'ನಡೆದುಬಂದ ದಾರಿ'ಯೊಳಗೆ ಪ್ರಕಟವಾಗಿದೆ. ಈ ಕವಿತೆಗಳಲ್ಲಿಯೂ ಕೂಡ ರಾಮಾನುಜನ್ ಅವರ ಪ್ರಯೋಗಶೀಲತೆ, ಅನಾಥಪ್ರಜ್ಞೆ, ವ್ಯಕ್ತಿ ವಿಶಿಷ್ಟತೆ ಇತ್ಯಾದಿಗಳು ಕಂಡುಬರುತ್ತವೆ. ನ್ಯೂಯಾರ್ಕಿನಲ್ಲಿ ಗಾಳಿ, ಕೆಲವು ರೀತಿಯ ನೆರಳು, ಅಗೋ ನಾನು, ಬಣ್ಣ, ಇದೂ ಒಂದು ಕವನ– ಎಂಬ ಶೀರ್ಷಿಕೆಯ ಮೂಲಕವೇ ಇದನ್ನು ಭಾವಿಸಬಹುದು.

'ಇದೂ ಒಂದು ಕವನ' ಕವಿತೆಯೇ ಆವರಣ ಚಿಹ್ನೆಗಳಲ್ಲಿ ಹೇಳದಿದ್ದರೆ ತಿಳಿಯಲಾರದೆಂಬ ಆಧುನಿಕ ಶಂಕೆಯಿಂದ ಹೇಳಿಬಿಟ್ಟಿದ್ದೇನೆ ಕ್ಷಮಿಸಿ ಎನ್ನುವ ಸೂಚನೆ ಇದೆ. ಈ ರೀತಿಯ ಸೂಚನೆಗಳು ಕವಿತೆಗೆ ಅಡಿಟಿಪ್ಪಣಿಗಳು, ಹಿಂಬರಹ ಮುಂಬರಹಗಳು ಇವುಗಳನ್ನು ನೀಡಿದವರು ಇಡೀ ಕನ್ನಡ ಸಾಹಿತ್ಯದಲ್ಲಿ ಗೋವಿಂದ ಪೈ ಗಳನ್ನು ಬಿಟ್ಟರೆ ಎ.ಕೆ.ರಾಮಾನುಜನ್ ಮಾತ್ರ. ಇತರ ಕವಿಗಳು ಬರೆಯುವುದು ಕಷ್ಟ ಎಂದರೆ ರಾಮಾನುಜನ್ ಬರೆಯುವುದಕ್ಕಿಂತ ಬರೆಯದಿರುವುದೇ ಕಷ್ಟ ಎನ್ನುತ್ತಾರೆ. ಇದೇ ಕವಿತೆಯಲ್ಲಿ

ಪಿಂಗಾಣಿ ಹೂಜಿಯ ನೆನಪು
ಸುಂದರಿಯ ಮುಂಗೈಯ ನುಣುಪು

ಎನ್ನುವಂತಹ ತುಂಬ ಕೋಮಲವಾದ ಸಾಲುಗಳೂ ಇವೆ. ಒಟ್ಟಾರೆಯಾಗಿ ಹೇಳುವುದಾದರೆ ರಾಮಾನುಜನ್ ಅವರ ಕಾವ್ಯದಲ್ಲಿ ಬದುಕಿನ ಏನೆಲ್ಲಾ ಅಂಶಗಳು ಮತ್ತು ವೈವಿಧ್ಯಮಯ ರೀತಿಯ ವಸ್ತುಗಳು, ಚಿತ್ರವಿಚಿತ್ರ ರಾಗದ್ವೇಷಭಾವ– ಹೀಗೆ ಹಲವು ಹನ್ನೆರಡು ಭಾವಗಳು ಹಾಗೂ ಅತ್ಯಂತ ವ್ಯಾಪಕವಾದ ಆಳವಾದ ಬದುಕಿನ ಧರ್ಮಸೂಕ್ಷ್ಮಗಳು ನಿಗೂಢವಾದ ರೀತಿಯಲ್ಲಿ ಗಾಢವಾಗಿ ಹರಳುಗಟ್ಟಿಕೊಳ್ಳುತ್ತವೆ. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಚಲನಶೀಲಗೊಳಿಸುತ್ತವೆ.

ಅಡಿಟಿಪ್ಪಣಿ

೧. Indian Literature, Sahitya Akademi's Bi-Monthly Journal, Nov-Dec 2009 (254) Sahitya Akademi, New Delhi. 2009, P.171

೨. Indian Literature, Sahitya Akademi's Bi-Monthly Journal, Nov-Dec 2009 (254) Sahitya Akademi, New Delhi. 2009, P.173

೩. ಎಸ್. ದಿವಾಕರ್, ಪ್ರಧಾನ ಸಂಪಾದಕರ ಮಾತು, ಕೆ.ವಿ.ಸುಬ್ಬಣ್ಣ ಅವರ ಬೆಲೆಬಾಳುವ ಬರಹಗಳು, ಸಂ:ಟಿ.ಪಿ.ಅಶೋಕ, ವಸಂತ ಪ್ರಕಾಶನ, ಬೆಂಗಳೂರು. ೨೦೧೫

೪. ಎ.ಕೆ.ರಾಮಾನುಜನ್: ಹೊಕ್ಕುಳಲ್ಲಿ ಹೂವಿಲ್ಲ, ಎ.ಕೆ.ರಾಮಾನುಜನ್ ನೆನಪಿನ ಸಂಪುಟ, ಸಂ.ಟಿ.ಪಿ.ಅಶೋಕ, ಕರ್ನಾಟಕ ಸಂಘ, ಪುತ್ತೂರು, ೧೯೯೩. ಪು. ೫೩ (ಪ್ರಸ್ತುತ ೧೯೭೦).

೫. ಕನ್ನಡ ಕಾವ್ಯಕ್ಕೊಂದು ಹೊಸ ಕಣ್ಣು: ರಾಮಾನುಜನ್ನರ ಹೊಕ್ಕುಳಲ್ಲಿ ಹೂವಿಲ್ಲ, ಎ.ಕೆ.ರಾಮಾನುಜನ್ ನೆನಪಿನ ಸಂಪುಟ, ಸಂ.ಟಿ.ಪಿ.ಅಶೋಕ, ಕರ್ನಾಟಕ ಸಂಘ, ಪುತ್ತೂರು, ೧೯೯೩. ಪು. ೪೯ (ನವ್ಯ ಸಾಹಿತ್ಯ ದರ್ಶನ ೧೯೭೦).

೬. ಕನ್ನಡ ಕಾವ್ಯಕ್ಕೊಂದು ಹೊಸ ಕಣ್ಣು: ರಾಮಾನುಜನ್ನರ ಹೊಕ್ಕುಳಲ್ಲಿ ಹೂವಿಲ್ಲ, ಎ.ಕೆ.ರಾಮಾನುಜನ್ ನೆನಪಿನ ಸಂಪುಟ, ಸಂ.ಟಿ.ಪಿ.ಅಶೋಕ, ಕರ್ನಾಟಕ ಸಂಘ, ಪುತ್ತೂರು, ೧೯೯೩. ಪು. ೪೮ (ನವ್ಯ ಸಾಹಿತ್ಯ ದರ್ಶನ ೧೯೭೦).

೭. ಎ.ಕೆ.ರಾಮಾನುಜನ್, ನೂರು ಮರ, ನೂರು ಸ್ವರ, ಸಂ.ಕೀರ್ತಿನಾಥ ಕುರ್ತಕೋಟಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೮. ಪು. ೩೧೬

೮. ರಾಮಾನುಜನ್‌ರ ಕಾವ್ಯ, ಎ.ಕೆ.ರಾಮಾನುಜನ್ ನೆನಪಿನ ಸಂಪುಟ, ಸಂ.ಟಿ.ಪಿ.ಅಶೋಕ, ಕರ್ನಾಟಕ ಸಂಘ, ಪುತ್ತೂರು, ೧೯೯೩. ಪು. ೬೬-೬೭(೧೯೭೧ರಲ್ಲಿ 'ಸಾಕ್ಷಿ(೧೦)'.

೯. ದಿನಾಂಕ ೧೭.೮.೨೦೧೩ರಲ್ಲಿ ಸುಚಿತ್ರಾ ಸಿನಿಮಾ ಅಕಾಡೆಮಿ ನಡೆಸಿದ 'ಸಾಹಿತ್ಯ ಸಂಜೆ' ಕಾರ್ಯಕ್ರಮದಲ್ಲಿ ಪ್ರೊ.ಓ.ಎಲ್.ನಾಗಭೂಷಣಸ್ವಾಮಿ ಅವರು ಎ.ಕೆ.ರಾಮಾನುಜನ್ ಅವರನ್ನು ಕುರಿತ ಉಪನ್ಯಾಸವನ್ನು ನೀಡಿದರು.

೧೦. ಉಭಯ ಭಾಷಾ ಕವಿ, ಎ.ಕೆ.ರಾಮಾನುಜನ್ ನೆನಪಿನ ಸಂಪುಟ, ಸಂ:ಟಿ.ಪಿ.ಅಶೋಕ, ಕರ್ನಾಟಕ ಸಂಘ, ಪುತ್ತೂರು, ೧೯೯೩. ಪು. ೧೦೧.(ದಿನಾಂಕ ೨೫.೭.೧೯೯೩ರ 'ಕನ್ನಡಪ್ರಭ' ದಿನಪತ್ರಿಕೆಯಲ್ಲಿ).

೧೧. ಎ.ಕೆ.ರಾಮಾನುಜನ್: ...ಮತ್ತು ಇತರ ಪದ್ಯಗಳು, ಎ.ಕೆ.ರಾಮಾನುಜನ್ ನೆನಪಿನ ಸಂಪುಟ, ಸಂ:ಟಿ.ಪಿ.ಅಶೋಕ, ಕರ್ನಾಟಕ ಸಂಘ, ಪುತ್ತೂರು, ೧೯೯೩. ಪು.೭೯(೧೯೮೩ರಲ್ಲಿ ಬಂದ 'ಅಮೃತ ಮತ್ತು ಗರುಡ').

೧೨. ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ: ಸಂಪುಟ-೨, ಭಾಗ-೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. ೨೦೧೩, ಪುಟ. ೩೦೩.

ಅಧ್ಯಾಯ : ನಾಲ್ಕು

ರಾಮಾನುಜನ್ ಅವರ ಕಥನಸಾಹಿತ್ಯ ಮತ್ತು ಸಾಂಸ್ಕೃತಿಕ ಅನುಸಂಧಾನ

೪.೧ ಕಥೆಗಳು

೪.೧.೧. ಮಧುರೆಯಲ್ಲಿ ಒಂದು ತಲೆ

೪.೧.೨. ಅಣ್ಣಯ್ಯನ ಮಾನವಶಾಸ್ತ್ರ

೪.೧.೩. ಎಲ್ಲರ ಮೂಗಿನ ಕತೆ

೪.೧.೪. ಒಂದು ದಿನಚರಿಯ ಕೆಲವು ದಿನಗಳು

೪.೨ ಮತ್ತೊಬ್ಬನ ಆತ್ಮಚರಿತ್ರೆ

೪.೩ ರೇಡಿಯೋ ನಾಟಕಗಳು

೪.೩.೧. ನಾದಬಿಂದು

೪.೩.೨. ಗಾನಪ್ರಿಯ

ಅಧ್ಯಾಯ : ನಾಲ್ಕು

ರಾಮಾನುಜನ್ ಅವರ ಕಥನಸಾಹಿತ್ಯ ಮತ್ತು ಸಾಂಸ್ಕೃತಿಕ ಅನುಸಂಧಾನ

ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತಿಯ ಅಧ್ಯಯನದಲ್ಲಿ ಎ.ಕೆ. ರಾಮಾನುಜನ್ ಅವರು ಪ್ರಮುಖರಾಗಿ ಕಾಣುತ್ತಾರೆ. ಬಹುಮುಖ ಪ್ರತಿಭೆಯ ಇವರು ಹಲವಾರು ಸಾಹಿತ್ಯ ಪ್ರಕಾರಗಳಲ್ಲಿ ತಮ್ಮ ಛಾಪು ಮೂಡಿಸಿರುವ ವ್ಯಕ್ತಿ. ಕವನ, ಕಥೆ, ಕಾದಂಬರಿ, ಪ್ರಬಂಧಗಳು, ನಾಟಕ, ಅನುವಾದ, ಭಾಷಾಶಾಸ್ತ್ರ, ಮಾನವಶಾಸ್ತ್ರ ಮತ್ತು ಜಾನಪದ ಅಧ್ಯಯನ ಕ್ಷೇತ್ರದಲ್ಲಿ ಇವರು ಅಂತಾರಾಷ್ಟ್ರೀಯ ಮಟ್ಟದ ವಿದ್ವಾಂಸರು. ಪ್ರಸ್ತುತ ಅಧ್ಯಾಯದಲ್ಲಿ ಅವರ ಕಥನಸಾಹಿತ್ಯ ಮತ್ತು ಕನ್ನಡದ ಸಾಂಸ್ಕೃತಿಕ ಅನುಸಂಧಾನವನ್ನು ಕುರಿತು ಪರಿಶೀಲಿಸಲಾಗುವುದು.

೪.೧. ಕಥೆಗಳು

ರಾಮಾನುಜನ್ ಅವರು ಬಹುಮುಖ ಪ್ರತಿಭೆ ಮತ್ತು ಬಹುಶಿಸ್ತೀಯ ಅಧ್ಯಯನದ ವ್ಯಕ್ತಿ. ಅವರು ಬರೆದ ಕಥೆಗಳು ನಾಲ್ಕೇ ಆದರೂ ಮತ್ತು ಕಾದಂಬರಿ ಒಂದೇ ಆದರೂ ಅವು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಕ್ಷೇತ್ರದಲ್ಲಿ ವಿಶಿಷ್ಟವೂ ವಿಭಿನ್ನವೂ ಆಗಿ ನಿಲ್ಲುತ್ತವೆ. ಅವುಗಳ ಮೂಲಕ ಅವರು ಎತ್ತುವ ಪ್ರಶ್ನೆಗಳು ಮತ್ತು ಸಮಸ್ಯೆಗಳು ಕನ್ನಡ ಸಂಸ್ಕೃತಿಯ ಸಂದರ್ಭದಲ್ಲಿ ಸಾಂಸ್ಕೃತಿಕವಾಗಿ ಬಹುದೊಡ್ಡ ಚರ್ಚೆಯನ್ನೇ ಹುಟ್ಟುಹಾಕಿವೆ. ಅವು ಎತ್ತುವ ಸಾಂಸ್ಕೃತಿಕವಾದ ಪ್ರಶ್ನೆಗಳನ್ನು ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗುವುದು. ರಾಮಾನುಜನ್ ಒಬ್ಬ ಕವಿಯಾಗಿ, ಭಾಷಾಂತರಕಾರರಾಗಿ, ಚಿಂತಕರಾಗಿ ಗುರುತಿಸಿಕೊಂಡಷ್ಟು ಒಬ್ಬ ಕಥೆಗಾರರಾಗಿ ಗುರುತಿಸಿಕೊಂಡದ್ದು ಕಡಿಮೆ. ಆದರೂ ಅವರು ಬರೆದಿರುವ ಕಥನ ಸಾಹಿತ್ಯ ಸಾಂಸ್ಕೃತಿಕವಾಗಿ ಮತ್ತು ಸಾಹಿತ್ಯಿಕವಾಗಿ ಅಧ್ಯಯನ ಯೋಗ್ಯ. ಮೊದಲಿಗೆ ಅವರ ನಾಲ್ಕು ಕಥೆಗಳನ್ನು ಇಲ್ಲಿ ಪರಿಶೀಲಿಸಲಾಗುವುದು:

೪.೧.೧. ಮಧುರೆಯಲ್ಲಿ ಒಂದು ತಲೆ

'ಮಧುರೆಯಲ್ಲಿ ಒಂದು ತಲೆ'ಯಲ್ಲಿ ಒಂದು ನಗರಜೀವನ, ಅಲ್ಲಿನ ಪರಿಸರ, ಜನ ಸಂಸ್ಕೃತಿ ಮತ್ತು ಆಚಾರ ವಿಚಾರಗಳನ್ನು ಹೇಳುವುದರ ಜೊತೆಗೆ ಅದು ಒಂದು ಮನೋವೈಜ್ಞಾನಿಕ ಕಥೆಯಾಗಿಯೂ ಸಹ ಕಾಣಿಸುತ್ತದೆ. ಕೊಳ, ಕಲ್ಯಾಣಿಯಲ್ಲಿ ಅಚಾನಕ್ಕಾಗಿ ಕಂಡ, ತೇಲುವ ತಲೆಯನ್ನು ನೋಡಿ ಲೇಖಕನಲ್ಲಿ ಮೂಡಬಹುದಾದ ಹಲವಾರು ಭಾವನೆಗಳನ್ನು, ಚಿಂತನೆಗಳನ್ನು ಇಲ್ಲಿ ಮನೋಜ್ಞವಾಗಿ ಹೇಳಲಾಗಿದೆ. ಸಾಹಿತ್ಯದ ಅಧ್ಯಯನದ ದೃಷ್ಟಿಯಿಂದ ನೋಡಿದಾಗ ಕಥೆಯ ರಚನೆ, ಬಳಸಿರುವ ಸಂಭಾಷಣಾ ಶೈಲಿ, ಕಟುವಾದ, ವಿಡಂಬನೆಯ ಮತ್ತು ಮೊನಚಾದ ಮಾತುಗಳು ಗಮನಾರ್ಹವಾಗಿವೆ. ಸಂಸ್ಕೃತಿಯ ದೃಷ್ಟಿಯಲ್ಲಿ ತಾನು ಜೀವಿಸುತ್ತಿರುವ ಪರಿಸರದಲ್ಲಿ ಪುರಾತನ ಸಂಸ್ಕೃತಿ ಬೇರು ಬಿಟ್ಟಿರುವ ಒಂದು ನಗರಪ್ರದೇಶದಲ್ಲಿ ತುಂಬಾ ಸುಸಂಸ್ಕೃತರು ಎಂದು ಹೇಳಿಕೊಳ್ಳುವ ಜನರ ಮಾತುಗಳಲ್ಲಿರುವ ಅಸಂಸ್ಕೃತ ಚಿಂತನೆಗಳನ್ನು ಇಲ್ಲಿ ವಿಡಂಬನೆಯಾಗಿ ಚಿತ್ರಿಸಿದ್ದಾರೆ. ಕೀರ್ತಿನಾಥ ಕುರ್ತಕೋಟಿಯವರು ಈ ಕಥೆಯನ್ನು ಕುರಿತು ಹೀಗೆ ಹೇಳುತ್ತಾರೆ:

> "ದೇವಸ್ಥಾನದ ಪುಷ್ಕರಿಣಿಯ ನೀರಿನಲ್ಲಿ ಮುಳುಗಿ, ಬಾಳೆಯ ಎಲೆಯ ಕೆಳಗೆ ಮರೆಯಾಗಿದ್ದರೂ ಮತ್ತೆ ಮತ್ತೆ ಎದ್ದು ಕಾಣುವ ಮನುಷ್ಯನ ತಲೆ ಒಂದು ಶಕ್ತಿಯುತವಾದ ಸಂಕೇತವಾಗಿದೆ. ಕತೆಯ ನಾಯಕ ಅದನ್ನು ಒಮ್ಮೆ ಮಾತ್ರ ನೋಡಿದ್ದಾನೆ. ಆದರೆ ಅದನ್ನು ಮರೆಯುವುದು ಅವನಿಂದ ಸಾಧ್ಯವಾಗಿಲ್ಲ. ಬಸ್ಸಿನಲ್ಲಿ ಕುಳಿತು ಅದನ್ನು ಮತ್ತೊಮ್ಮೆ ಖಾತ್ರಿ ಮಾಡಿಕೊಳ್ಳಬೇಕೆಂದು ಹೊರಟಾಗ, ಮಧುರೆಯಂಥ ನಗರದ ಜನಜಂಗುಳಿಯ ವರ್ಣ-ಸಮುದಾಯದಲ್ಲಿ, ರಾಮಚಂದ್ರರಾಯರಂಥ ಸಂಸ್ಕೃತ ರಸಿಕರ ಸರಸಸಂಭಾಷಣೆಯಲ್ಲಿ ಈ ತಲೆಯ ನೆನಪು ಮತ್ತೆ ಮತ್ತೆ ಅವನಿಗೆ ಬರುತ್ತದೆ. ಈ ಸಂಗತಿ ಅಷ್ಟೇನೂ ವಾಡಿಕೆಯದಲ್ಲವಾದರೂ ಮಧುರೆಯಲ್ಲಿ ಇಂಥ ಸಂಗತಿ ನಡೆಯುವುದೇನೂ ಅಸಂಭವವಲ್ಲವೆನ್ನುವಂತೆ, ಕತೆಯ ಪ್ರಾರಂಭಕ್ಕೆ ಮಧುರೆಯ ವರ್ಣನೆ ಇದೆ. ರಹಸ್ಯಮಯವಾದ ಸಂಗತಿಗಳ, ಅಪರೂಪವಾದ ವಸ್ತುಗಳ, ಕಲಬೆರಕೆಯ ಭಾಷೆಯನ್ನಾಡುವ ಜನರ ತವರೂರಾಗಿದೆ ಮಧುರೆ. ಮುಳುಗಿದ ತಲೆಯ ನೆನಪಿನ ಎಳೆ ಹಿಡಿದು ಹೊರಟ ನಾಯಕನ ಕುತೂಹಲ ತನಗೆ ಅಷ್ಟೇನೂ ಪ್ರಿಯನಲ್ಲದ ವೇದಾಂತಂನ(ಹೆಸರೂ ಧ್ವನಿಪೂರ್ಣವಾಗಿದೆ) ತಲೆಗೆ ಸಾವಿನ ಸಂಬಂಧವನ್ನು ಕಲ್ಪಿಸುತ್ತದೆ. ನೀರಿನಲ್ಲಿ ಮುಳುಗೇಳುವ ತಲೆಗೆ ನಾಯಕನ ಸುಪ್ತಚಿತ್ತದಲ್ಲಿ ಮುಳುಗೇಳುವ ವೇದಾಂತಂನ ತಲೆಯ ಬಣ್ಣ ತಾನಾಗಿ ಬಂದುಬಿಡುತ್ತದೆ. ವೇದಾಂತಂನ ಜೀವನದ ಅಪ್ರಿಯವಾದ ನೆನಪುಗಳು... ಹರಕು ಬನಿಯನ್, ತಮಿಳು ಕಾದಂಬರಿ, ಬೋಳು ತಲೆಯ ಮುದುಕಿ ಮೊದಲಾದವುಗಳು.... ನಾಯಕನ ಮನಸ್ಸಿನ ಅಡಕಲ ಕೋಣೆಯಲ್ಲಿ ಸಂಗ್ರಹವಾಗಿದ್ದು ಅವನ ಒಂದು ದುಷ್ಟ ಆಸೆ ಈಡೇರುವ ಹೊತ್ತು ಬಂದಂತಾಗುತ್ತದೆ. ಕೊನೆಯಲ್ಲಿ ಉಳಿಯುವುದು ಅನಿವಾರ್ಯವಾದ ಅಪರಿಹಾರ್ಯವಾದ ಸಾವೇ ಹೊರತು (ಸತ್ತವನು ಯಾರೆಂಬುದು ಗೊತ್ತಾಗುವುದಿಲ್ಲ)

ನಾಯಕನ ಅಹಂಭಾವವಲ್ಲ. ಕಂದಸ್ವಾಮಿ ನೀರಿನಲ್ಲಿಯ ತಲೆಗೆ ಕೋಲು ಚುಚ್ಚಿದಾಗಲೇ ಇವನ ಅಹಂಕಾರವನ್ನೂ ಚುಚ್ಚುತ್ತಾನೆ. ತಲೆ ಇನ್ನೊಬ್ಬರದಾಗಿ, ವೇದಾಂತಂ ಲೈಬ್ರರಿಯಲ್ಲಿ ನೆರಳಾಗಿ ನಿಂತಾಗ ಇವನಿಗೆ ನಿರಾಶೆಯಾಗುತ್ತದೆ. ಹೀಗೆ ವಸ್ತುನಿಷ್ಠವಾದ ಸತ್ಯದ ಗೆಲುವು ಕತೆಯ ಎದ್ದುಕಾಣುವ ವೈಶಿಷ್ಟ್ಯವಾಗಿದೆ. ನೀರಿನಲ್ಲಿ ಮುಳುಗಿದ ತಲೆ ಮತ್ತು ವೇದಾಂತಂನ ನೆರಳು ಇವು ಮನಸ್ಸಿಗೆ ಮಾಟ ಹಾಕುವ ಸತ್ಯ ಮತ್ತು ಆಭಾಸಗಳ ಪ್ರತೀಕಗಳಾಗಿವೆ. ರಾಮಚಂದ್ರರಾಯರ ಸಂಭಾಷಣೆ ಮತ್ತು ಬಸ್ಸು ಹಾಯುವ ಬೀದಿಗಳ ನೋಟ ಇವು ಜೀವನಾನುಭವಗಳ ಅಸಂಬದ್ಧತೆಯ ಪದರುಗಳಾಗಿವೆ. ನಿರೂಪಣೆ ಸಾಮಾನ್ಯ-ವಿಶೇಷಗಳನ್ನು ವಿಚಿತ್ರವಾದ ರೀತಿಯಲ್ಲಿ ಬೆಳಗಿಸುತ್ತ, ಒಂದು ಎಳೆಯಿಂದ ಇನ್ನೊಂದು ಎಳೆಯನ್ನು ಬಿಗಿಗೊಳಿಸುವ ಹೆಣಿಕೆಯ ರೀತಿಯಂತೆ ಒಂದು ಪ್ರತಿಮೆಯಿಂದ ಇನ್ನೊಂದು ಪ್ರತಿಮೆಗೆ ಸಮತೂಕವನ್ನು ಸಾಧಿಸುತ್ತ ನಡೆಯುತ್ತದೆ. ಎಲ್ಲಕ್ಕೂ ಹೆಚ್ಚಾಗಿ ಯಾವ ಬಗೆಯ ಭಾವಸಂಕರಕ್ಕೂ ಎಡೆಗೊಡದಂತೆ ಭಾಷೆ ಅರ್ಥವನ್ನು ನಿಚ್ಚಳವಾಗಿ ಪ್ರತಿಫಲಿಸುತ್ತದೆ."[೧]

ನಮ್ಮ ಸುತ್ತಮುತ್ತಲಿನಲ್ಲಿ ನಡೆಯುವ, ಅಚಾನಕ್ಕಾಗಿ ಘಟಿಸುವ ಎಷ್ಟೋ ಸಂಗತಿಗಳು ನಮ್ಮ ತಲೆಯಲ್ಲಿ ಹಲವಾರು ರೀತಿಯ ಚಿಂತನೆಗಳನ್ನು ಮೂಡಿಸುತ್ತವೆ. ಕೆಲವು ಘಟನೆಗಳು ನಮ್ಮ ವ್ಯಕ್ತಿತ್ವಕ್ಕೆ ಮತ್ತು ಚಿಂತನೆಗೆ ಪೂರಕವಾಗಿ ತೋರುತ್ತವೆ, ಕೆಲವು ವಿರುದ್ಧವಾಗಿ ಕಾಣಿಸುತ್ತವೆ. ಒಂದು ದಿನನಿತ್ಯದ ಸಾಮಾನ್ಯ ಸಂಗತಿ ಕೆಲವು ಸಲ ತನ್ನ ಹುಟ್ಟಿನಿಂದ ಹಿಡಿದು ಸಾವಿನ ವರೆಗೂ ಚಿಂತನೆಗೆ ಹಚ್ಚಿಬಿಡುತ್ತದೆ. ಹಲವಾರು ಗೊಂದಲಗಳನ್ನು ಸೃಷ್ಟಿಸಿಬಿಡುತ್ತವೆ. ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬಹು ದೀರ್ಘಕಾಲದ ಸಂಸ್ಕೃತಿಯೊಳಗೆ ಬದುಕುತ್ತಿರುವ ಜನಸಾಮಾನ್ಯನ ಮನಸ್ಸು ಸೂಕ್ಷ್ಮತೆಯಿಂದ ಗಾಢತೆಯವರೆಗೆ ಹೇಗೆ ಹರಡಿಕೊಳ್ಳುತ್ತದೆ ಎಂಬುದು ಈ ಕಥೆಯಲ್ಲಿ ಕಂಡುಬರುವ ಬಹುಮುಖ್ಯವಾದ ಅಂಶವಾಗಿದೆ.

೪.೧.೨. ಅಣ್ಣಯ್ಯನ ಮಾನವಶಾಸ್ತ್ರ

ಇವರ ಮತ್ತೊಂದು ಮಹತ್ತರವಾದ ಕಥೆ 'ಅಣ್ಣಯ್ಯನ ಮಾನವಶಾಸ್ತ್ರ'. ಬೇರುಗಳನ್ನು ಕಳಚಿ ಸಾವಿರಾರು ಮೈಲಿಗಳ ಆಚೆ ಇದ್ದರೂ ಸಹ ಭಾರತೀಯ ಸಂಸ್ಕೃತಿಯು ಅವರನ್ನು ಹೇಗೆ ಕಾಡುತ್ತಿತ್ತು ಎಂಬುದು ಇಲ್ಲಿ ಬಹಳ ಮುಖ್ಯ ವಿಚಾರವಾಗಿದೆ. ಆಧುನಿಕ ಸಂಸ್ಕೃತಿಯೊಳಗೆ ಜೀವನ ನಡೆಸುತ್ತಿರುವಾಗ ಎದುರಿಸಬಹುದಾದ ಸವಾಲುಗಳು ಸಮಸ್ಯೆಗಳನ್ನು ಇಲ್ಲಿ ನೋಡಬಹುದು. ಎರಡು ಭಿನ್ನ ಸಂಸ್ಕೃತಿಯೊಳಗೆ ತನ್ನನ್ನು ತಾನು ಕಂಡುಕೊಳ್ಳುವ ತುಡಿತ, ಸಂಪ್ರದಾಯವನ್ನು ಮೀರಿ, ಜ್ಞಾನಾರ್ಜನೆಗೆಂದೋ ಅಥವಾ ಇನ್ನಾವ ಕಾರಣಕ್ಕೋ ಪಶ್ಚಿಮದ ಕಡೆ ಮುಖ ಮಾಡಿ ನಿಂತಿರುವ ನಮ್ಮ ಜನರ ಮನಸ್ಥಿತಿಯನ್ನು ಇಲ್ಲಿ ನೋಡಬಹುದಾಗಿದೆ. ಪಾಶ್ಚಾತ್ಯ ಸಂಸ್ಕೃತಿಯ ಚಿಂತಕನೊಬ್ಬ ಭಾರತೀಯ ಸಂಸ್ಕೃತಿಯನ್ನು ಅಧ್ಯಯನ ಮಾಡಿ ಪ್ರಖ್ಯಾತನಾಗುವ

ಸಂದರ್ಭದಲ್ಲಿ ನಮ್ಮದನ್ನು ನಮ್ಮವರು ಹೇಳಿದಾಗ ಒಪ್ಪಿಕೊಳ್ಳಲು ಒಲ್ಲದ ಮನಸ್ಸು ಅದೇ ವಿಷಯವನ್ನು ಬೇರೊಬ್ಬರು ಹೇಳಿದಾಗ ಅಂತರ್ಗತ ಮಾಡಿಕೊಳ್ಳುವ ಮನಸ್ಸು ಇಲ್ಲಿ ಬಹಳ ದ್ವಂದವಾಗಿ ಕಾಣುತ್ತದೆ:

> "ಹಿಂದೂ ದೇಶದ ವಿಷಯ ಕಲಿಯಬೇಕಾದರೆ ಫಿಲಿಡೆಲ್ಫಿಯ ಬರ್ಕ್ಲಿ, ಚಿಕಾಗೋ, ಅಂಥ ಜಾಗಕ್ಕೆ ಬರಬೇಕು. ನಮಗೆಲ್ಲಿದೆ ಇವರ ಆಸ್ಥೆ? ವಿವೇಕಾನಂದರು ಕೂಡ ಚಿಕಾಗೋವಿಗೆ ಬರಲಿಲ್ಲವೆ? ಅವರು ನಮ್ಮ ಧರ್ಮದ ಮೇಲೆ ಕೊಟ್ಟ ಮೊದಲ ಭಾಷಣ ಇಲ್ಲೇ." "ಈ ಪಶ್ಚಿಮದಲ್ಲಿ ಈ ಪೂರ್ವ ಬಂದು ಮುಟ್ಟಿತು." [೨]

ಅನಾಥಪ್ರಜ್ಞೆ, ಬೇರುಗಳ ಹುಡುಕಾಟ, ಪೂರ್ವಜರ ಚಿಂತನೆಗಳು, ಧರ್ಮ, ಸಂಸ್ಕೃತಿ, ಆಚಾರ ವಿಚಾರಗಳು, ದೂರದಲ್ಲಿ, ಏಕಾಂಗಿಯಾಗಿದ್ದಾಗ ಕಾಡುವುದು ಹೆಚ್ಚು. ನಮ್ಮ ಪಕ್ಕದಲ್ಲೇ ಅಪಾರವಾದ ಜ್ಞಾನಸಂಪತ್ತು ಇದ್ದರೂ ಅದರ ಕಡೆ ಮುಖಮಾಡಿಯೂ ನೋಡುವುದಿಲ್ಲ. ಒಂದನ್ನು ಬಿಟ್ಟು ಇನ್ನೊಂದನ್ನು ಅಪ್ಪಿಕೊಳ್ಳುವ ಸಾಹಸದಲ್ಲಿ ಯಾವುದನ್ನು ಕಳೆದುಕೊಂಡಿದ್ದೇವೆ. ಯಾವುದನ್ನು ಸಂಪಾದಿಸಿದ್ದೇವೆ ಎಂಬುದೂ ತಿಳಿಯುವುದಿಲ್ಲ. ಸಂಪಾದಿಸಿದ್ದಕ್ಕಿಂತ ಕಳೆದುಕೊಂಡದ್ದೇ ಪ್ರಮುಖವಾಗುತ್ತದೆ. ಆಳವಾದ ಬೇರುಬಿಟ್ಟ ಸಂಸ್ಕೃತಿಯ ಅವನತಿ ಬಹಳ ಕಷ್ಟಸಾಧ್ಯ. ಈ ಕಥೆಯ ಬಗ್ಗೆ ಜಿ.ಎಚ್.ನಾಯಕ ಅವರು ಹೇಳುವ ಮಾತುಗಳು ಸೂಕ್ತವಾಗಿವೆ:

> "'ಅಣ್ಣಯ್ಯನ ಮಾನವಶಾಸ್ತ್ರ'ದ ಬರವಣಿಗೆಯ ರೀತಿ ಕನ್ನಡಕ್ಕೆ ವಿಶಿಷ್ಟವಾದದ್ದು. ಕಥೆ ಸುಸಂಬದ್ಧ ನಿರೂಪಣೆಯ ಗತಿಯಲ್ಲಿಯೇ ಒಂದು ಅಸಂಬದ್ಧ ಸ್ಥಿತಿಯನ್ನು ಸಮರ್ಥವಾಗಿ ಎದ್ದು ನಿಲ್ಲಿಸುತ್ತದೆ. ಅಣ್ಣಯ್ಯನ ಅಪ್ಪನ ಸಾವು ಹಿಂದೂಧರ್ಮದ ಸತ್ತ ಸ್ಥಿತಿಯನ್ನು ಧ್ವನಿಸಿದರೆ, ಆತನ ತಾಯಿಯ ವೈಧವ್ಯದ ಚಿತ್ರ ಆ ಸತ್ತದ್ದನ್ನು ನಂಬಿ ಬದುಕುತ್ತಿರುವ ವಾಸ್ತವಸ್ಥಿತಿಯ ಕ್ರೌರ್ಯವನ್ನೂ ಅದರ ಅಸಂಬದ್ಧ ಸ್ಥಿತಿಯನ್ನೂ ಧ್ವನಿಸುತ್ತದೆ. ಜೊತೆಗೆ ಆತನ ತಾಯಿಯ ವೈಧವ್ಯದ ಸ್ಥಿತಿಗೂ, ಹಿಂದೂಧರ್ಮದ ಅರ್ಥ ಕಳೆದುಕೊಂಡ ಧರ್ಮಸೂತ್ರಗಳ ಅಧ್ಯಯನದಲ್ಲಿ ಚಿಕಾಗೋದಲ್ಲಿ ತೊಡಗಿರುವ ಅಣ್ಣಯ್ಯನ ಸ್ಥಿತಿಗೂ ಸಂಬಂಧ ಏರ್ಪಡಿಸುವ ಒಳದನಿಯೂ ಇರುವಂತಿದೆ. ಸುಂದರರಾಯನಿಗೆ ಹಿಂಧೂಧರ್ಮ ಮಾರಾಟದ ಸಾಮಗ್ರಿ. ಸುಂದರರಾಯನ ವ್ಯಾಪಾರಿಬುದ್ಧಿಗೆ ಅಣ್ಣಯ್ಯ ರೋಸಿ ಹೋಗುತ್ತಾನೆ. ಆದರೆ ಅಣ್ಣಯ್ಯನೂ ಸುಂದರರಾಯನಿಂದ ಮೂಲಭೂತವಾಗಿ ಭಿನ್ನವಾದವನಲ್ಲ. ಸುಂದರರಾಯ ಹಿಂದೂ ಧರ್ಮವನ್ನು ಮಾರಿದರೆ ಅಣ್ಣಯ್ಯ ಬೇರೊಂದು ಅರ್ಥದಲ್ಲಿ ಇಲ್ಲಿ ಖರೀದಿಸುತ್ತಿದ್ದಾನೆ. ಎಂಜಲು, ಮಲ ಇತ್ಯಾದಿಗಳು ಮೈಲಿಗೆ ಎಂದು ಧರ್ಮಸೂತ್ರ ಓದುತ್ತಿರುವ ಅಣ್ಣಯ್ಯನಿಗೆ ಫರ್ಗುಸನನ ವ್ಯಾಖ್ಯಾನವೂ ಎಂಜಲು ಎಂಬುದು ಹೊಳೆಯುವುದಿಲ್ಲ. ಈ ಎಂಜಲು, ಮಲಗಳ ಬಗ್ಗೆ ವಿಚಿಕಿತ್ಸಕ ಬುದ್ಧಿಯನ್ನು ತೋರುವ ಆತ ಎಂಜಲು ಚಪ್ಪರಿಸುತ್ತಿರುವ ತನ್ನ ಸ್ಥಿತಿಯನ್ನು ಕುರಿತಂತೆ ಅದನ್ನು ತೋರಿಸುವುದಿಲ್ಲ. ಅಲ್ಲಿ ವ್ಯಂಗ್ಯವಿದೆ." [೩]

ರಾಮಾನುಜನ್ ಅವರು ಈ ಕಥೆ ಬರೆದು ನಾಲ್ಕು ದಶಕಗಳೇ ಕಳೆದಿವೆ. ಪ್ರಸ್ತುತದಲ್ಲಿ ಭಾರತೀಯ ಸಂಸ್ಕೃತಿಯು ಪಶ್ಚಿಮದಲ್ಲಿ ವ್ಯಾಪಾರದ ಸರಕಾಗಿರುವುದು ನಿಜಕ್ಕೂ ಆಶ್ಚರ್ಯದ ಸಂಗತಿಯಾಗಿದೆ. ೫೦-೬೦ ವರ್ಷಗಳಲ್ಲಿ ಬೆಳವಣಿಗೆಯಾಗದ ಆಧುನಿಕ ಸಂಸ್ಕೃತಿ ಕೇವಲ ೧೦-೧೫ ವರ್ಷಗಳಿಂದೀಚೆಗೆ ಬಹಳಷ್ಟು ವೇಗವಾಗಿ ಬದಲಾಗುತ್ತಿದೆ. ತಂತ್ರಜ್ಞಾನ ಎಷ್ಟೇ ಪ್ರಬಲವಾಗಿ ಬೆಳೆಯುತ್ತಿದ್ದರೂ ಸಹ ಪಾಶ್ಚಿಮಾತ್ಯರಲ್ಲಿ ಭಾರತೀಯ ಸಂಸ್ಕೃತಿಯ ಅಧ್ಯಯನಕ್ಕೆ ಹೆಚ್ಚು ಒತ್ತುಕೊಟ್ಟಂತೆ ಕಾಣುತ್ತಿದೆ.

ಎ.ಕೆ.ರಾಮಾನುಜನ್ ಅವರು ಬರೆದ ನಾಲ್ಕು ಕಥೆಗಳಲ್ಲಿ ಎರಡು ಕಥೆಗಳು ಹಿಂದೂ ದರ್ಮದ ಹಾಗೂ ಬ್ರಾಹ್ಮಣ ಸಂಪ್ರದಾಯದ ಹಿನ್ನೆಲೆಯನ್ನು ಉಳ್ಳ ವಸ್ತುವನ್ನು ಹೇಳುವಂತಹವುಗಳಾಗಿವೆ. ಈ ಎರಡೂ ಕಥೆಗಳು ಕೂಡ ಹಿಂದೂಧರ್ಮದ ಹಿನ್ನೆಲೆಯಲ್ಲಿಯೇ ಬರೆದ ಕಥೆಗಳು. ಆದರೆ ಅವರ 'ಅಣ್ಣಯ್ಯನ ಮಾನವಶಾಸ್ತ್ರ' ಕಥೆಯ ಬರವಣಿಗೆಯ ವಿಧಾನ ಕನ್ನಡಕ್ಕೆ ವಿಶಿಷ್ಟವಾದದ್ದು. ಆಕರ್ಷಕವಾದ ನುಡಿಗಟ್ಟುಗಳಿಂದ, ವಸ್ತುವಿನಿಂದ ಓದುಗನನ್ನು ಕ್ಷಣ ಮೋಡಿ ಹಾಕಿ ನಿಲ್ಲಿಸುವ ಆಕರ್ಷಕವಾದ ಶಕ್ತಿ ಈ ಭಾಷೆಯಲ್ಲಿದೆ. ಧಾರ್ಮಿಕ ಶ್ರದ್ಧೆಯ ಸವಕಲು ಸ್ಥಿತಿಯನ್ನು, ಅದರ ಅಸಂಗತೆಯನ್ನು ಸುಸಂಬದ್ಧವಾದ ನಿರೂಪಣೆಯಲ್ಲಿ ಸಮರ್ಥವಾಗಿ ನಮ್ಮೆದುರಿಗೆ ತಂದು ನಿಲ್ಲಿಸುತ್ತದೆ ಇದು. ಅಣ್ಣಯ್ಯ ಹುಟ್ಟಿನಿಂದ ಬ್ರಾಹ್ಮಣ. ಮೈಸೂರಿನಿಂದ ಅಮೆರಿಕಾದ ಚಿಕಾಗೋ ನಗರಕ್ಕೆ ಹೋಗಿದ್ದಾನೆ. ಅಲ್ಲಿ ಪುಸ್ತಕ ಭಂಡಾರವೊಂದರಲ್ಲಿ ಕುಳಿತು ಸ್ಟೀವನ್ ಫರ್ಗುಸನ್ ಬರೆದ 'ಹಿಂದೂ ಧರ್ಮದ ಸಂಪ್ರದಾಯಗಳು ಮತ್ತು ಆಚರಣೆಗಳು' ಎಂಬ ಇಂಗ್ಲಿಷ್ ಕೃತಿಯನ್ನು ಕುರಿತು ಅವಲೋಕಿಸುತ್ತಿರುವಾಗ ತನಗೆ ಹಿಂದೂಧರ್ಮದ ಬಗ್ಗೆ ತಿಳಿಯದೆ ಇರುವ ಎಷ್ಟೋ ವಿವರಗಳನ್ನು ಅಲ್ಲಿ ಆತ ಆ ಪುಸ್ತಕದಲ್ಲಿ ಓದಿ ಬೆರಗಾಗುತ್ತಾನೆ. ತಾನು ಮೈಸೂರಿನಲ್ಲಿದ್ದಾಗ ಯೂನಿವರ್ಸಿಟಿ ಲೈಬ್ರರಿಗೆ ಹೋದದ್ದೂ ಹೋದದ್ದೇ. ತನ್ನ ತಂದೆ ಗೀತೆ ಪಾರಾಯಣ ಮಾಡು ಅಂದರೆ ತಾನು ಮಾಡಲೇ ಇಲ್ಲ. ಆದರೆ ಅಣ್ಣಯ್ಯ ಈಗ ಇಲ್ಲಿ ಕೂತು ಭಾರತದ ಸಂಪ್ರದಾಯ, ಆಚರಣೆಯ ಬಗ್ಗೆ ಅದೂ ಪಾಶ್ಚಾತ್ಯ ವಿದ್ವಾಂಸ ಬರೆದ ಪುಸ್ತಕದಿಂದ ತಿಳಿಯಬೇಕಾಗಿ ಬಂದ ಅಸಂಬದ್ಧತೆಯ ಬಗ್ಗೆ ಚಿಂತಿಸುತ್ತಾನೆ ಮತ್ತು ತುಂಬಾ ಡಿಸ್ಟರ್ಬ್ ಆಗುತ್ತಾನೆ.

೪.೧.೩. ಎಲ್ಲರ ಮೂಗಿನ ಕತೆ

ಮತ್ತೊಂದು ಸಹಜವಾದ ಮತ್ತು ಸಾಮಾನ್ಯವಾದ ಸಂಗತಿಯನ್ನು ವಿವರಿಸುವಂತಹ ಕಥೆ 'ಎಲ್ಲರ ಮೂಗಿನ ಕತೆ'. ಮನುಷ್ಯನ ಸಹಜ ಅಂಗಾಂಗಗಳಲ್ಲಿ ಒಂದಾದ ಮೂಗಿನ ಬಗ್ಗೆ ಈ ಕಥೆ ಹೇಳುತ್ತದೆ. ಮನುಷ್ಯನ ಮುಖದಲ್ಲಿ ಪ್ರಧಾನವಾಗಿ ಕಾಣುವ ಮೂಗು ಎಷ್ಟು ಮುಖ್ಯವಾದುದು, ಅದರ ಓರೆಕೋರೆಗಳಿಂದಾಗಬಹುದಾದ ಮುಜುಗರ, ಅವಮಾನ, ನಿರಾಸೆ ಮುಂತಾದ ಮನುಷ್ಯ ಸ್ವಭಾವದ ಹಲವಾರು ಮುಖಗಳನ್ನು ಇಲ್ಲಿ ನೋಡಬಹುದು. ಮೂಗುಗಳ ಆಕಾರಗಳು ಚಪ್ಪೆ,

ಚೂಪು, ಕೆಂಪು, ಹಳದಿ, ಉದ್ದ, ಮೋಟಾ... ಹೀಗೆ ಹಲವಾರು ಮೂಗುಗಳನ್ನು ಇಲ್ಲಿ ಒಂದು ಬದಲಾಗುತ್ತಿರುವ ಸಂಸ್ಕೃತಿಯೊಳಗೆ ಮನುಷ್ಯ ಜನ್ಮಜಾತವಾಗಿ ಬಂದಂತಹ ದೇಹದ ಬಾಗಗಳನ್ನು ಆಧುನಿಕ ತಂತ್ರಜ್ಞಾನದಿಂದ ಬದಲು ಮಾಡಿಕೊಳ್ಳುವ ಮನಸ್ಥಿತಿಯನ್ನು ಇದು ಚಿತ್ರಿಸುತ್ತದೆ. ಮೂಗನ್ನು ಸಂಸ್ಕೃತಿಯ ಪ್ರತೀಕವಾಗಿಯೂ ನೋಡಬಹುದು. ಹುಟ್ಟಿನಿಂದ ಬಂದಂತಹ ಅಷ್ಟಾಗಿ ಸುಂದರವಾಗಿಲ್ಲದಂತಹ ಮೂಗು, ಮೇಲ್ನೋಟಕ್ಕೆ ಬಹು ಸುಂದರವಾಗಿ ಕಾಣಿಸುತ್ತಿರುವ ಆಧುನಿಕ ಸಂಸ್ಕೃತಿಯೊಳಗೆ ಬದುಕಲು ಎಷ್ಟು ಕಷ್ಟ ಪಡುತ್ತದೆ ಎಂಬುದು ಕುತೂಹಲಕರವಾದುದು. ಹಾಗೆಯೇ ಅಸ್ತವ್ಯಸ್ತವಾದ ಏಕರೂಪದ್ದಲ್ಲದ ಬಹುಸಂಸ್ಕೃತಿಯ ಬೇರುಗಳಾಗಿರುವ ಮೌಖಿಕ ಸಂಸ್ಕೃತಿಯನ್ನು ಒಂದು ಶಿಸ್ತುಬದ್ಧ ಅಧ್ಯಯನದಲ್ಲಿಟ್ಟು ನೋಡುವುದು ಸೂಕ್ತವಾಗಲಾರದು. ಜಾನಪದಕ್ಕೆ ಎಷ್ಟೇ ಆಧುನಿಕ ಸ್ಪರ್ಶವನ್ನು ಕೊಟ್ಟರೂ ಅದು ಮೂಲವನ್ನು ಕಳೆದುಕೊಳ್ಳುವುದಿಲ್ಲ. ಪ್ರಸ್ತುತದ ಅಧ್ಯಯನಗಳು ಈ ನಿಟ್ಟಿನಲ್ಲೇ ನಡೆಯುತ್ತಿರುವುದನ್ನು ಕಾಣುತ್ತಿದ್ದೇವೆ.

೪.೧.೪. ಒಂದು ದಿನಚರಿಯ ಕೆಲವು ದಿನಗಳು

ಪ್ರಸ್ತುತ ಕಥೆಯ ಹೆಸರೇ ವಿಚಿತ್ರವಾಗಿದೆ. ಇದು ದಿನಚರಿಯ ಮಾದರಿಯಲ್ಲಿ ಬರೆದ ನಿರೂಪಕನ ಕೆಲವು ಅನುಭವಗಳ ಮತ್ತು ಓದಿದ ಸಂಗತಿಗಳ ಘಟನಾವಳಿಯಂತಿದೆ. ಇದು ಪೂರ್ಣವಾದ ದಿನಚರಿಯೇನಲ್ಲ. ಆದರೆ ಪೂರ್ಣವಾದ ದಿನಚರಿಯೂ ಇರಲಾರದು. ಇದರ ಘಟನೆಗಳ ವಸ್ತುಗಳನ್ನು ನೋಡಿದಾಗ ಇವು ರಾಮಾನುಜನ್ ಅವರ ಅನುಭವಗಳಾಗಿರಬಹುದು. ಬೇರೆಯವರು ಅಂದರೆ ಜನಸಾಮಾನ್ಯನ ಅನುಭವವೂ ಆಗಬಹುದು. ಅವರ 'ಮತ್ತೊಬ್ಬನ ಆತ್ಮಚರಿತ್ರೆ' ಕಾದಂಬರಿಯ ಅಭಿವ್ಯಕ್ತಿ ಕೂಡ ಈ ಬಗೆಯದೇ. ಈ ಕಥೆಯ ಆರಂಭದ ಘಟನೆ ಶುರುವಾಗುವುದು ಮೇ ೮, ೧೯೨೯. ಆದರೆ ರಾಮಾನುಜನ್ ಅವರ ಹುಟ್ಟಿದ ವರ್ಷವೂ ೧೯೨೯ ಆಗಿದೆ. ಈ ಕಥೆಯನ್ನು ನೋಡಿದರೆ ರಾಮಾನುಜನ್ ಅವರು ದಿನಚರಿಯ ಪರಿಕಲ್ಪನೆಯನ್ನೇ ಅದಲು ಬದಲು ಮಾಡುವಂತಿದೆ. ಈ ಕಥೆ ೧೯೨೯ನೇ ವರ್ಷದ ಮೇ ತಿಂಗಳಲ್ಲಿ ಬೇರೆ ಬೇರೆ ೪ ದಿನಾಂಕಗಳಲ್ಲಿ, ಜೂನ್ ತಿಂಗಳಲ್ಲಿ ಬೇರೆ ಬೇರೆ ೪ ದಿನಾಂಕಗಳಲ್ಲಿ, ಜುಲೈ ತಿಂಗಳಲ್ಲಿ ೩ ದಿನಾಂಕಗಳಲ್ಲಿ, ಆಗಸ್ಟ್ ತಿಂಗಳಲ್ಲಿ ೨ ದಿನಾಂಕಗಳಲ್ಲಿ, ಸೆಪ್ಟಂಬರ್ ತಿಂಗಳಲ್ಲಿ ೩ ದಿನಾಂಕಗಳಲ್ಲಿ, ಅಕ್ಟೋಬರ್ ತಿಂಗಳಲ್ಲಿ ೩ ದಿನಾಂಕಗಳಲ್ಲಿ, ನವೆಂಬರ್ ತಿಂಗಳಲ್ಲಿ ೨ ದಿನಾಂಕಗಳಲ್ಲಿ, ಡಿಸೆಂಬರ್ ತಿಂಗಳಲ್ಲಿ ೨ ದಿನಾಂಕಗಳಲ್ಲಿ ಮತ್ತು ಜನವರಿ ೩, ೧೯೩೦ನೇ ಇಸವಿಯಲ್ಲಿ ಮುಗಿಯುತ್ತದೆ. ಹೀಗೆ ೯ ತಿಂಗಳ ಅವಧಿಯಲ್ಲಿ ಒಟ್ಟು ೨೪ ದಿನಗಳ ಘಟನೆಗಳನ್ನು ಕಥೆಯ ರೂಪದಲ್ಲಿ ದಾಖಲಿಸಲಾಗಿದೆ.

ಈ ಘಟನೆಗಳಿಗೆ ನಿರಂತರತೆ ಅಷ್ಟಾಗಿ ಇಲ್ಲ. ಆದರೆ ಈ ಘಟನೆಗಳಲ್ಲಿ ಪ್ರಾಣಿಗಳನ್ನು ಅತಿಯಾಗಿ ಪ್ರೀತಿಸುವ ಮೇಂ ಸಾಹೀಬ್, ಲೂಸಿ, ಹಕೀಮ, ನೀಲಿ ಮುಂತಾದ ಪಾತ್ರಗಳು ಈ ಘಟನೆಗಳಲ್ಲಿ ಮತ್ತೆ ಮತ್ತೆ ಬಂದು ಹೋಗುತ್ತಾರೆ. ಮೇಮ್ ಸಾಹೀಬರ ಜೀವನಗಾಥೆ

ಸಂಕೀರ್ಣವಾಗಿದೆ. ಕೆಲವು ಐತಿಹಾಸಿಕ ಘಟನೆಗಳನ್ನು ಮತ್ತು ಕೆಲವು ಸಂಪ್ರದಾಯಗಳನ್ನು ನೆನಪಿಸುವ ಕೆಲವು ಸಂಗತಿಗಳನ್ನು ಇಲ್ಲಿ ಉದಾಹರಿಸಬಹುದಾಗಿದೆ. ದಿನಚರಿಯ ಆ ಘಟನೆಗಳು ತುಂಬ ವಿಚಾರಪೂರ್ಣವಾಗಿವೆ.

ಜೂನ್ ೧, ೧೯೨೫:

> "ಸ್ನೇಹಿತರೊಬ್ಬರು ದೇಶ ಬಿಡುತ್ತಿದ್ದಾರೆ. ವರುಷಗಟ್ಟಲೆ ಕೂಡಿಸಿದ್ದ ಮನೆ ಸಾಮಾನೆಲ್ಲ ಹರಾಜಾಯಿತು. ಸೊಗಸಾದ ಸಾಗುವಾನಿ, ಕುಸುರಿ ಕೆಲಸ, ದಂತಗಳು ಕಾಲುಬೆಲೆಗೆ ಹೋಯಿತು. ನಾವೂ ಅವರೊಂದಿಗೆ ಸೇರಿ ಹಳೆಯ ಸೋಫಾ, ಕುರ್ಚಿಗಳನ್ನು ಮಾರಿಬಿಟ್ಟೆವು, ಈ ಹವದಲ್ಲಿ ತುಂಬ ಫರ್ನಿಚರ್ ಇದ್ದರೆ ಅನನುಕೂಲ ... ತುಂಬ ಸೊಳ್ಳೆ ಸೇರಿಕೊಳ್ಳುತ್ತವೆ. ಕೆಲವು ಸಾರಿ ಸಣ್ಣ ಹಾವು ಕೂಡ. ಈ ಹರಾಜಿನಲ್ಲಿ ಸೊಗಸಾದ ಇಂಗ್ಲಿಷ್ ಸಾಹಿತ್ಯದ ಪುಸ್ತಕಗಳು ಕರು ಚರ್ಮದಲ್ಲಿ ಬೈಂಡ್ ಮಾಡಿದ್ದು, ಎರಡೆರಡು ಕಾಸಿಗೆ ಹೋದವು. ಸಂಕಟವಾಯಿತು. ಯುರೋಪಿಯನ್ನರು ಮಾತ್ರ ಅಲ್ಲ, ಒಬ್ಬಿಬ್ಬರು ಹಿಂದೂಗಳು ಮುಸ್ಲಿಮರು ಕೂಡ ಈ ಇಂಗ್ಲಿಷ್ ಪುಸ್ತಕವನ್ನು ಆಸೆಯಿಂದ ಕೊಂಡುಕೊಂಡರು." [೪]

ಯುರೋಪಿಯನ್ನರು, ಹಿಂದೂಗಳು, ಮುಸ್ಲಿಮರು ತಮ್ಮ ತಮ್ಮ ಜಾತಿ ಧರ್ಮ, ಪಂಥವನ್ನು ಮೀರಿ ಜ್ಞಾನದ ಹಸಿವಿನಿಂದ ಇಂಗ್ಲಿಷ್ ಪುಸ್ತಕಗಳನ್ನು ಕೊಂಡುಕೊಳ್ಳುವ ಚಿತ್ರ ಒಂದು ಜಾತ್ಯತೀತತೆಯ ವ್ಯವಸ್ಥೆಯನ್ನು ಸಂಕೇತಿಸುತ್ತದೆ. ಕರು ಚರ್ಮದಲ್ಲಿ ಬೈಂಡ್ ಮಾಡಿದ ಪುಸ್ತಕಗಳನ್ನು ಯುರೋಪಿಯನ್ನರು ಮುಸ್ಲಿಮರು ಕೊಂಡುಕೊಳ್ಳುವುದರಲ್ಲಿ ವಿಶೇಷತೆ ಇಲ್ಲದಿದ್ದರೂ ಹಿಂದೂಗಳು ಜ್ಞಾನಕ್ಕಾಗಿ ಭೇದವನ್ನೂ ಮರೆತು ಪುಸ್ತಕ ಕೊಂಡುಕೊಳ್ಳುವ ಚಿತ್ರವನ್ನು ಈ ಸಣ್ಣ ಘಟನೆಯಿಂದ ಲೇಖಕರು ಅಪೂರ್ವವಾಗಿ ಕಟ್ಟಿಕೊಟ್ಟಿದ್ದಾರೆ.

ಮತ್ತೊಂದು ಸಂಗತಿಯನ್ನು ಉದಾಹರಿಸುವುದಾದರೆ:

ಜೂನ್ ೧೪:

> "ನೆನ್ನೆ ನಮ್ಮ ಹಸು ಕರೆಯುವ ಹೆಂಗಸು ಕಿವಿಯಲ್ಲಿ ದೊಡ್ಡ ಹೂವಿನ ವಾಲೆ ಹಾಕಿಕೊಂಡಿದ್ದಳು. ಏನೋ ಹಬ್ಬ. ತಂತಿಯಲ್ಲಿ ಅಕೇಲಿಯನ್ ಮಲ್ಲಿಗೆ ಪೋಣಿಸಿ ತೋಳಿನವರೆಗೆ ಇಳಿಬಿಟ್ಟ ವಾಲೆ, ಅದರ ವಾಸನೆ ಬಹಳ ಪ್ರಬಲ, ನನಗೆ ಹತ್ತಿರ ಇರುವುದೂ ಕಷ್ಟವಾಗುತ್ತಿತ್ತು. ಮೆಣಸಿನಕಾಯಿ ಪುಡಿ ಹುರಿದಾಗ ಕುಟ್ಟಿದಾಗ ಅದರ ಘಾಟು ಸಹಿಸಬಲ್ಲೆ. ಆದರೆ ಈ ಹೂಗಳ ಕಂಪು ಸಹಿಸುವುದು ಕಷ್ಟವಾಗಿದೆ." [೫]

ಇಲ್ಲಿ ನಿರೂಪಕನಿಗೆ ಆಗುವ ಅನುಭವವನ್ನು ವಿವರಿಸುವುದು ಅನವಶ್ಯಕ. ಆದರೆ ರಾಮಾನುಜನ್ ಅವರ ಗದ್ಯ ನೀರಸವಾದುದಲ್ಲ. ಅವರ ಗದ್ಯಕ್ಕೆ ಕಾವ್ಯದ ಶಕ್ತಿ ಇದೆ. ಹಾಗಾಗಿ

ಈ ಕಂಡಿಕೆಯ ವಾಕ್ಯಗಳನ್ನು ಕುತೂಹಲಕ್ಕಾಗಿ ಒಡೆದು ಪದ್ಯದ ರೀತಿಯಲ್ಲಿ ಪ್ರತ್ಯೇಕವಾಗಿ ಇಟ್ಟರೆ ಒಂದು ಸೊಗಸಾದ ಪದ್ಯದ ರೀತಿಯೇ ಕಾಣಿಸುತ್ತದೆ:

ನೆನ್ನೆ ನಮ್ಮ ಹಸು
ಕರೆಯುವ ಹೆಂಗಸು
ಕಿವಿಯಲ್ಲಿ ದೊಡ್ಡ ಹೂವಿನ
ವಾಲೆ ಹಾಕಿಕೊಂಡಿದ್ದಳು.
ಏನೋ ಹಬ್ಬ.
ತಂತಿಯಲ್ಲಿ ಅಕೇಲಿಯನ್ ಮಲ್ಲಿಗೆ
ಪೋಣಿಸಿ ತೋಳಿನವರೆಗೆ
ಇಳಿಬಿಟ್ಟ ವಾಲೆ, ಅದರ
ವಾಸನೆ ಬಹಳ ಪ್ರಬಲ,
ನನಗೆ ಹತ್ತಿರ ಇರುವುದೂ
ಕಷ್ಟವಾಗುತ್ತಿತ್ತು.
ಮೆಣಸಿನಕಾಯಿ ಪುಡಿ ಹುರಿದಾಗ
ಕುಟ್ಟಿದಾಗ
ಅದರ ಘಾಟು ಸಹಿಸಬಲ್ಲೆ.
ಆದರೆ
ಈ ಹೂಗಳ ಕಂಪು ಸಹಿಸುವುದು
ಕಷ್ಟವಾಗಿದೆ.

ಈ ಒಂದು ಸಣ್ಣ ಘಟನೆಯಲ್ಲಿ ಹಸು, ಹೆಂಗಸು, ನಿರೂಪಕ, ಇವು ಸಾಮಾನ್ಯ ವಸ್ತುಗಳೇ. ಆದರೆ, ಆಕೇಲಿಯನ್ ಮಲ್ಲಿಗೆ ಬಹುಶಃ ವಿದೇಶದ ಒಂದು ಹೂ. ಮೆಣಸಿನಕಾಯಿ ಭಾರತದ ಒಂದು ಆಹಾರಪದ್ಧತಿಯ ಪದಾರ್ಥ. ಹೀಗೆ ಹೂ ಮತ್ತು ಮೆಣಸಿನಕಾಯಿಯ ಹೋಲಿಕೆಯ ಮೂಲಕ ಅವುಗಳ ಸ್ವಭಾವವನ್ನೂ ಹೇಳುತ್ತಲೇ ಎರಡು ಸಂಸ್ಕೃತಿಗಳ ವೈರುಧ್ಯವನ್ನೂ ಈ ಸಣ್ಣ ಒಂದು ಘಟನೆಯಲ್ಲಿ ಕಟ್ಟಿ ಕೊಡುತ್ತಾರೆ. ಹಾಗಾಗಿ ರಾಮಾನುಜನ್ ಅವರ ಕಥೆಗಳನ್ನು ಕಥನಕ್ಕಾಗಿ ಓದಬೇಕಾಗಿಲ್ಲ; ಅವುಗಳಿಂದ ಹೊರಡುವ ಸಂಸ್ಕೃತಿಯ ವೈರುಧ್ಯ, ವಿಚಾರ, ಚಿಂತನೆಗಳು ಮನುಷ್ಯನನ್ನು ಆಲೋಚನೆಗೆ ಒಡ್ಡುತ್ತವೆ.

ಜುಲೈ ೧೦:

"ಸಾಹೇಬರು ಮತ್ತೆ ಸರ್ಕೀಟು ಹೋಗಿದ್ದಾರೆ. ಕಲ್ಕತ್ತೆಯ ಗವರ್ನರ್ ಜನರಲ್ ಬೆಂಟಿಂಕರನ್ನು ನೋಡುತ್ತಾರೆಂತೆ. ಬೆಂಟಿಂಕ್ ಸಾಹೇಬರಿಗೆ ಈ ದೇಶದಲ್ಲಿ ವಿಧವೆಯರನ್ನು ಸತ್ತ ಗಂಡನೊಂದಿಗಿಟ್ಟು ಸುಡುವ ಸತೀ ಪದ್ಧತಿ ಅಂದರೆ ಬಹಳ

ಕೋಪ, ಅಸಹ್ಯ. ಅದನ್ನು ನಿರ್ಮೂಲ ಮಾಡುವ ಪಣ ತೊಟ್ಟಿದ್ದಾರೆ. ನಮ್ಮ ಸಾಹೇಬರಿಗೆ ಇದೆಲ್ಲ ಅಲ್ಲಸಲ್ಲದ ಸುಧಾರಣೆ, ನಮಗೆ ಯಾಕೆ ಈ ಊರಿನವರ ತಂಟೆ? ಇವರೆಲ್ಲ ಮೂಢನಂಬಿಕೆಯ ಕಾಡುಜನ ಅನ್ನುತ್ತಾರೆ. ಗವರ್ನರ್ ಜನರಲ್ ಮಾತ್ರ ಮೀಟಿಂಗ್ ಕರೆದು ಹೊಸ ಕಾನೂನು ತರಬೇಕು ಅಂತ ಎಲ್ಲರನ್ನೂ ಕರೆಸಿದ್ದಾರೆ."[೬]

ಈ ಒಂದು ಸಣ್ಣ ಘಟನೆಯನ್ನು ದಾಖಲಿಸುವ ಮೂಲಕ ರಾಮಾನುಜನ್ ಅವರು ಭಾರತದಲ್ಲಿ ಇದ್ದಂತಹ ಅನಿಷ್ಟ ಪದ್ಧತಿಯಾದ 'ಸತೀ ಸಹಗಮನ'ದಂತಹ ಮೂಢನಂಬಿಕೆಯ ಬಗ್ಗೆ ಗಮನ ಸೆಳೆಯುತ್ತಾರೆ. ಈ ಘಟನೆಯನ್ನು ಬರೆಯುವುದಕ್ಕೆ ೧೦೦ ವರ್ಷಗಳ ಮೊದಲೇ ಅಂದರೆ ೧೮೨೯ರಲ್ಲೇ ಬ್ರಿಟೀಷ್ ಅಧಿಕಾರಿ ಬೆಂಟಿಂಕನು ಈ ಸತಿಪದ್ಧತಿಯ ಬಗ್ಗೆ ಕೋಪ ಮತ್ತು ಅಸಹನೆಯಿಂದ ನಿರ್ಮೂಲನಕ್ಕಾಗಿ ಪಣ ತೊಟ್ಟು ಕಠಿಣ ಕಾನೂನೊಂದನ್ನು ಜಾರಿಗೆ ತರಲು ಸಿದ್ಧನಾಗುತ್ತಾನೆ. ಅದಕ್ಕಾಗಿ ಅಧಿಕಾರಿಗಳನ್ನೆಲ್ಲ ಕರೆದು ಮೀಟಿಂಗ್ ಮಾಡುತ್ತಾನೆ. ರಾಮಾನುಜನ್ ಅವರ ಈ ದಿನಚರಿಯ ಕಥೆ ೧೯೨೯ರಲ್ಲಿ ದಾಖಲಿಸುತ್ತಿದೆ. ಈ ಘಟನೆಯಿಂದ ಭಾರತೀಯರಲ್ಲಿದ್ದ ಈ ಮೌಢ್ಯತೆ ಬಗ್ಗೆ ಇದ್ದ ಪರ ಮತ್ತು ವಿರೋಧದ ನೆಲೆಗಳನ್ನು ಈ ಘಟನೆಯು ನೆನಪಿಸುತ್ತದೆ. ಈ ಸಂದರ್ಭದಲ್ಲಿ ಇನ್ನೊಂದು ಸಂಗತಿಯನ್ನು ಇಲ್ಲಿ ಉದಾಹರಿಸಲಾಗುತ್ತಿದೆ:

ಆಗಸ್ಟ್ ೨೯:

"ಹುಣ್ಣಿಮೆ, ಇನ್ನೂ ಪ್ರಯಾಗದಲ್ಲಿ ಮಳೆಯಿಲ್ಲ, ಪ್ರತಿ ರಾತ್ರಿ ಹಿಂದುಗಳ ಜಾಗಟೆ, ಗಂಟೆ, ಪೂಜೆ, ಮುಸಲ್ಮಾನರ ಪ್ರಾರ್ಥನೆಗಳು ಜುಮ್ಮಾಮಸೀದಿಯಲ್ಲಿ, ಯಮುನಾತೀರದಲ್ಲಿ, ನಮ್ಮ ಮನೆಯ ಹತ್ತಿರ, ಕಪ್ಪು ಮೋಡ. ಒಂದೊಂದು ಸಾರಿ ಸಿಡಿಲು, ಗುಡುಗು, ಇನ್ನೇನು ಪೂಜೆ, ಪ್ರಾರ್ಥನೆ ಫಲಿಸಿ ಮಳೆ ಬಂದಿತು ಅಂದಾಗ ಒಂದೆರಡು ಹನಿ, ಅಷ್ಟೆ.

ಈ ಊರಿನ ಜನ ಅಲಹಾಬಾದಿನಿಂದ ಕಾಲರಾ ಓಡಿಸುತ್ತ ಇದ್ದಾರೆ. ಈಗಾಗಲೇ ನದಿಯಾಚೆ ಎರಡು ಸಲ ಅಟ್ಟಿದ್ದಾಯಿತು. ಅವರ ಸಂಪ್ರದಾಯ ಹೀಗೆ: ಒಂದು ಗೂಳಿ ತಂದು, ಅದಕ್ಕೆ ಸ್ನಾನ–ಪೂಜೆ ಮಾಡಿಸಿ, ಮಾಲೆ ಹಾಕಿ, ಅದರ ಮೇಲೆ ಕಾಲರಾ–ಭೂತವನ್ನು ಹೇರಿ, ಗಂಗೆಯ ಆಚೆ ದಡಕ್ಕೆ, ಅಯೋಧ್ಯೆಗೆ ಅಟ್ಟಿಬಿಡುತ್ತಾರೆ. ಅದನ್ನು ನೀರಿಗೆ ಬಿಟ್ಟಾಗ, ಗೂಳಿ ಈಜಿಕೊಂಡು ಹೋಗಿ ಆ ದಡ ಹತ್ತುವ ಪ್ರಯತ್ನ ಮಾಡುತ್ತದೆ. ಆದರೆ ಅಯೋಧ್ಯೆಯ ಮಂದಿ ಅದನ್ನು ಇರಗೊಡದೆ ಅಲ್ಲಿಂದ ತಮಟೆ ಬಡಿದು, ಕೋಲಿನಿಂದ ಬೆದರಿಸಿ ಓಡಿಸುತ್ತಾರೆ. ಹೀಗೆ ಎರಡು ಮೂರು ಸಾರಿ ಅತ್ತಿಂದಿತ್ತ ಮುಳುಗುತ್ತ ಈಜುತ್ತ ಹೆಣಗಾಡಿ ಸುಸ್ತಾಗಿ ಕಡೆಗೆ ನದಿಯಲ್ಲಿ ಮುಳುಗಿ ಸಾಯುತ್ತದೆ, ಪಾಪ, ಈ ಬಡಪಾಯಿ ಗೂಳಿ. ಕಾಲರಾ ಮಾತ್ರ ಊರು ಬಿಡಲಿಲ್ಲ.

ರಾತ್ರಿ ಮಳೆ ಬಂತು. ಇನ್ನು ಕಾಲರಾ ಕಡಿಮೆಯಾಗುತ್ತೆ, ಅಪಾಯದ ಗಡಿ ದಾಟಿದ ಹಾಗೆ, ಅಂತಾರೆ. ರಾತ್ರಿ ನಮ್ಮ ಆಯಾ ಸೂಸಮ್ಮ ಮೂರು ಸಾರಿ ಕಾಲರಾ ಔಷಧಿಗೆಂತ ನನ್ನನ್ನು ಎಬ್ಬಿಸಿದಳು. ಅವಳಿಗೆ ಕಾಲರಾ ಏನೂ ಬಂದಿರಲಿಲ್ಲ, ಏನೋ ಭ್ರಮೆ ಅಷ್ಟೆ.

ಅರವತ್ತು ಜನ ಸತ್ತರು. ಅವರಲ್ಲಿ ನಾಲ್ವತ್ತು ಹಿಂದುಗಳು, ಇಪ್ಪತ್ತು ಮುಸಲ್ಮಾನರು. ನಮ್ಮ ಬಟ್ಲರ್ ಅಂದ: ಹಿಂದುಗಳು ಪುಷ್ಟಿಯಾಗಿ ಊಟ ಮಾಡುವುದಿಲ್ಲ, ಉಪವಾಸ ಮಾಡುತ್ತಾರೆ. ಹೆಂಗಸರು ಹೆಚ್ಚಾಗಿ ಬಿಸಿಲಲ್ಲಿ ಅಲೆಯುವುದಿಲ್ಲ, ಅದರಿಂದಾಗಿ ಗಂಡಸರೇ ಹೆಚ್ಚು ಜನ ಸತ್ತರು.

ಇವೆಲ್ಲ ಅವಾಂತರದ ನಡುವೆ ನೀಲಿ, ಅವಳ ಹೊಟ್ಟೆಯ ಮಗು ಹೇಗೋ ಬದುಕಿಕೊಂಡದ್ದರಲ್ಲಿ ನನಗೆ ಯಾಕೋ ತೃಪ್ತಿ. ಒಂದು ಸಾರಿ ದೊಡ್ಡ ಸುಂಟರಗಾಳಿ ಬಂದು ಹಳ್ಳಿಯನ್ನೆಲ್ಲ ನಿರ್ನಾಮ ಮಾಡಿ ಹೋದಾಗ, ಒಬ್ಬ ಬಡವನ ಗುಡಿಸಿಲು ಮಾತ್ರ ಮಧ್ಯದಲ್ಲಿ ಉಳಿದುಕೊಂಡದ್ದನ್ನು ನೋಡಿದ್ದೆ. ಅದು ನೆನಪಾಯಿತು. ಅವಳನ್ನು ದೂರದಲ್ಲಿ ಒಂದು ಪಕ್ಕದಿಂದ ನೊಡಿದಾಗ ಅವಳ ಬಸಿರು ಇನ್ನಷ್ಟು ತುಂಬುಕೊಂಡು, ಮೇಲುಮೈ ಇನ್ನಷ್ಟು ಬಡಕಲಾಗಿ ಕಾಣಿಸಿ ನನ್ನೊಳಗೆ ಕನಿಕರ ಚುರ್ರೆಂದಿತು. ಅವಳ ಬಸಿರಿನ ಮಗುವಿಗೆ ತಂದೆ ಯಾರೂ ಅಂತ ಇನ್ನೂ ಯಾರಿಗೂ ಗೊತ್ತಿಲ್ಲವಂತೆ. ಏನೇನೋ ಕೆಟ್ಟ ಸಂಶಯ, ವದಂತಿ ಅಷ್ಟೆ."[೭]

ಹೀಗೆ ಸಣ್ಣಸಣ್ಣ ಘಟನೆಗಳ ಮೂಲಕ ಜನರ ನಂಬಿಕೆ, ಕ್ರೌರ್ಯ, ಸಾವು, ಪ್ರಳಯ ಅದರ ನಡುವೆ ಸೃಷ್ಟಿ, ಬಡತನ ಇತ್ಯಾದಿ ಅಂಶಗಳನ್ನು ನಿರೂಪಕ ಹೊಳೆಯಿಸುವುದರ ಮೂಲಕ ಆಲೋಚನೆಗೆ ಹಚ್ಚುತ್ತಾರೆ. ಈ ಕಥೆಯು ಇಂತಹ ಅನೇಕ ಸೂಕ್ಷ್ಮವಾದ ನಂಬಿಕೆಗಳನ್ನು, ಆಚರಣೆಗಳನ್ನು, ವಿಚಾರಗಳನ್ನು, ವೈರುಧ್ಯಗಳನ್ನು ಮತ್ತು ಸತ್ವಗಳನ್ನು ಅತ್ಯಂತ ಸಂಕೀರ್ಣವಾಗಿ ಬಿಡಿಬಿಡಿಯಾಗಿ ಕಟ್ಟಿಕೊಡುತ್ತದೆ. ಈ ಬಿಡಿಬಿಡಿಗಳನ್ನು ಜೋಡಿಸಿ ಇಡಿಯಾಗಿ ನೋಡಿದಾಗ ಈ ಕಥೆಯ ವೈಶಿಷ್ಟ್ಯ ಇಮ್ಮಡಿಯಾಗುತ್ತದೆ. ಇಲ್ಲಿಯ ಬಹುಪಾಲು ಸಂಗತಿಗಳು ಅವರ 'ಮತ್ತೊಬ್ಬನ ಆತ್ಮಚರಿತ್ರೆ' ಕೃತಿಯ ಘಟನೆಗಳಿಗೆ ಸಾಂಗತ್ಯವಾಗಿ ಕಾಣಿಸುತ್ತವೆ.

೪.೨. ಮತ್ತೊಬ್ಬನ ಆತ್ಮಚರಿತ್ರೆ

ರಾಮಾನುಜನ್ ಅವರ 'ಮತ್ತೊಬ್ಬನ ಆತ್ಮಚರಿತ್ರೆ' ಕಾದಂಬರಿಯು ಸಾಂಪ್ರದಾಯಿಕ ಪರಿಕಲ್ಪನೆಗಳಾದ ಜೀವನಚರಿತ್ರೆ, ಆತ್ಮಚರಿತ್ರೆ ಪರಿಕಲ್ಪನೆಗಳನ್ನು ಮೀರಿ ರೂಪುಗೊಂಡಂತಹ ಒಂದು ಅಪರೂಪದ ಕಥನ.

'ಮತ್ತೊಬ್ಬನ ಆತ್ಮಚರಿತ್ರೆ' ಎನ್ನುವ ಹೆಸರೇ ಅನನ್ಯವಾದದ್ದು. ಏಕೆಂದರೆ ಮತ್ತೊಬ್ಬನ ಆತ್ಮ ಚರಿತ್ರೆ ಎನ್ನುವುದು ತಾಂತ್ರಿಕವಾಗಿ ಜೀವನಚರಿತ್ರೆ, ಆದರೆ ಇಲ್ಲಿ ಲೇಖಕರು ಉದ್ದೇಶಪೂರ್ವಕವಾಗಿ

ಈ ನಾಮನಿರ್ದೇಶನವನ್ನು ಮಾಡಿದ್ದಾರೆ ಎನ್ನುವುದು ನನ್ನ ಗ್ರಹಿಕೆ. ಇಲ್ಲಿ ಲೇಖಕ ಮತ್ತು ಮತ್ತೊಬ್ಬ ಬೇರೆ ಬೇರೆ ಅಲ್ಲ. ಆತ ಕನ್ನಡಿಯಲ್ಲಿ ಕಂಡಾತ. ಲೇಖಕರು ತಮ್ಮನ್ನು ತಾವು ಈ ಕೃತಿಯ ಮೂಲಕ ಪ್ರತಿನಿಧೀಕರಿಸಿಕೊಳ್ಳುವಂತಹ ಅಂಶವನ್ನು ಪ್ರಾಚೀನ ಗ್ರೀಕ್ ಮತ್ತು ಭಾರತೀಯ ಜಾನಪದ ತಾತ್ವಿಕತೆಯ ಸಂದರ್ಭದಲ್ಲಿ ವಿಶ್ಲೇಷಿಸುವುದು ಹೊಸ ವಿಚಾರಗಳಿಗೆ ಎಡೆ ಮಾಡಿಕೊಡುತ್ತದೆ.

ಅಸ್ಮಿತೆಯ ದೃಷ್ಟಿಗಳಿಂದ ಕನ್ನಡದಲ್ಲಿ ಬೇಂದ್ರೆಯವರನ್ನು ಬಿಟ್ಟರೆ ನಂತರದ ಸ್ಥಾನ ರಾಮಾನುಜನ್ ಅವರದ್ದು. ಕೃತಿಗಳ ಹೆಸರುಗಳಲ್ಲಿಯೂ ಒಂದು ತಾಜಾತನವನ್ನು ಇವರಲ್ಲಿ ಗಮನಿಸಬಹುದು. ಇದಕ್ಕೆ ನಿದರ್ಶನವಾಗಿ ಅವರ ಕೃತಿಗಳ ಶೀರ್ಷಿಕೆಗಳಾದ 'ಹೊಕ್ಕುಳಲ್ಲಿ ಹೂವಿಲ್ಲ', 'ಕುಂಟೋಬಿಲ್ಲೆ', 'ಮತ್ತೂ ಇತರ ಪದ್ಯಗಳು', 'ಅಣ್ಣಯ್ಯನ ಮಾನವಶಾಸ್ತ್ರ', 'ವೈದ್ಯನಿಗೇ ವ್ಯಾಧಿ' ಮುಂತಾದವನ್ನು ಗಮನಿಸಬಹುದು.

ಹೀಗಾಗಿಯೇ ರಾಮಾನುಜನ್ ಅವರು ತಮ್ಮ ಸಮಕಾಲೀನ ಮಹತ್ವದ ಲೇಖಕರಾದ ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ ಹಾಗೂ ಯು.ಆರ್.ಅನಂತಮೂರ್ತಿಯವರಂತಹ ಓರಗೆಯವರಿಗೆ ಅನೇಕ ನಾಟಕ ಹಾಗೂ ಕಾದಂಬರಿಗಳಿಗೆ ವಸ್ತುವನ್ನು ಒದಗಿಸಿರುವುದರಲ್ಲಿ ಅಚ್ಚರಿಯೇನಲ್ಲ.

'ಮತ್ತೊಬ್ಬನ ಆತ್ಮಚರಿತ್ರೆ' ಎಂಬ ಕಥಾನಕವು ಎಲ್ಲರ ಅತ್ಮಚರಿತ್ರೆಯೂ ಅಗಿದೆ ಎಂಬುದು ಗಮನಾರ್ಹವಾದ ಸಂಗತಿ. ಇಲ್ಲಿ ಯಾವುದೇ ರೀತಿಯ ಪೂರ್ವನಿಯೋಜಿತ ತಂತ್ರಗಳಾಗಲೀ, ಆಶಯಗಳಾಗಲೀ ಇಲ್ಲದಿರುವುದು ಒಂದು ವೈಶಿಷ್ಟ್ಯವಾಗಿದೆ. ಈ ರೀತಿಯ ಭಿನ್ನ ರೀತಿಯ ನಿರೂಪಣೆಯನ್ನು ಕೊಡುವುದು ಸಾಹಿತ್ಯಕ್ಷೇತ್ರದಲ್ಲಿ ಒಂದು ಸವಾಲಿನ ಸಂಗತಿಯೇ ಸರಿ. ಸಾಮಾನ್ಯ ಲೇಖಕರಿಗೆ ಸಾಧ್ಯವಲ್ಲದ ಈ ದೃಷ್ಟಿಕೋನವನ್ನು, ಸ್ಥಿತಪ್ರಜ್ಞನೊಬ್ಬನ ಮಾನಸಿಕ ದೂರವನ್ನು ನೆನಪಿಸುತ್ತದೆ. ಇಲ್ಲಿ ಭಾರತೀಯ ಸಮಾಜದ ಸಾಂಪ್ರದಾಯಿಕ ಕುಟುಂಬಗಳ ಕೆಳಮಧ್ಯಮ ವರ್ಗದ ಯಾವುದೇ ಒಬ್ಬ ವ್ಯಕ್ತಿಯ ಸಾಮಾನ್ಯವಾದ ಚಿತ್ರವು ಕಂಡುಬರುತ್ತದೆ. ಅಂದಿನ ಕಾಲಘಟ್ಟದ ಕನ್ನಡದ ಮಹತ್ವದ ಲೇಖಕರ ಕಥೆ, ಕಾದಂಬರಿಗಳಲ್ಲಿ ಬರುವ ನಿರ್ದಿಷ್ಟ ಸಮಸ್ಯೆಗಳನ್ನು ಕುರಿತ ವಿಶ್ಲೇಷಣೆ ಇಲ್ಲಿ ಬರುವುದಿಲ್ಲ. ಅದಕ್ಕೆ ಬದಲು ಕಾದಂಬರಿಕಾರನು ತನ್ನ ಸುತ್ತಣ ಸಮಾಜವನ್ನು ಕಂಡ ಹಾಗೂ ಗ್ರಹಿಸಿದ ವಾಸ್ತವವಾದಿ ಸಮಾಜದ ಒಂದು ಸಂಕೀರ್ಣ ಚಿತ್ರಣ ಇಲ್ಲಿದೆ. ಎಸ್. ದಿವಾಕರ್ ಅಭಿಪ್ರಾಯ ಪಡುವ ಹಾಗೆ–

> "ಮತ್ತೊಬ್ಬನ ಆತ್ಮಚರಿತ್ರೆಯಲ್ಲಿ ಯಾವುದೇ ಪ್ಲಾಟ್ ಇಲ್ಲ. ಹಿಂದೆ ನಡೆದದ್ದನ್ನು ಇಂದಿನ ಅನುಭವದೊಡನೆ ಸಮೀಕರಿಸಿ ನೋಡುವ ನಾಯಕ ತನ್ನದೇ ಆದ ಯಾವುದೇ ನಿಲುವನ್ನು ತಾಳದಿದ್ದರೂ ಕೃತಿಯ ಕೇಂದ್ರ ಆಶಯವಾದ ದ್ವಂದ್ವ

ಮನೋವೃತ್ತಿ ಒಂದು ಧ್ವನಿಪೂರ್ಣ ಸಂಕೇತವಾಗುತ್ತದೆ. ಆದ್ದರಿಂದಲೇ ಅನೇಕ ಚಿತ್ರಗಳನ್ನು ಒಳಗೊಂಡ ಈ ಕಾದಂಬರಿಯನ್ನು ಒಟ್ಟಿಗೆ ಬೆಸೆಯಲು ಮಾಡಿರುವ ಪ್ರಯತ್ನ ವ್ಯಕ್ತಿಯೊಬ್ಬನ ದ್ವಂದ್ವ ವ್ಯಕ್ತಿತ್ವದ ಸಮರ್ಥ ನಿರೂಪಣೆಯಾಗಿದೆ. ನಾಯಕನಲ್ಲಿರುವ ಆ ಇನ್ನೊಬ್ಬನು ಯಾರು? ಪ್ರತಿಗಾಮಿಯೆ? ತಾವು ಕನಿಕರ ತಾಳಿದಾಗ ದ್ವೇಷ ಕಾರುವವನೆ? ತಾನು 'ಅರ್ಥವಾಯಿತು' ಎಂದುಕೊಂಡಾಗ 'ಇಲ್ಲ' ಎನ್ನುವವನೆ? ತಾನು ಸಮಾಜದ ಏರುಪೇರನ್ನು, ಕ್ರೌರ್ಯವನ್ನು ಕುರಿತು ಯೋಚಿಸುತ್ತಿರುವಾಗ ಸುಮ್ಮನೆ ನಕ್ಕು ಬಿಡುವವನೆ?" [೮]

ಕರಾರುವಕ್ಕಾದ ಕಾಲದ ಪರಿಕಲ್ಪನೆಗಳು, ಪಾತ್ರ-ಪಾತ್ರಗಳ ಸಂಬಂಧಗಳು, ಸ್ಥಳಗಳ ಪರಿಕಲ್ಪನೆ, ಭಯ, ನೆನಪು, ಇತಿಹಾಸದ ಪರಿಕಲ್ಪನೆ, ಪ್ರಕೃತಿಯ ವಿವಿಧ ಅಂಗಗಳ ಸ್ವರೂಪದ ಪರಿಕಲ್ಪನೆ ಇವೆಲ್ಲವುಗಳ ಒಂದು ವಿಚಿತ್ರವಾದ ಸಮ್ಮಿಶ್ರಣ ಈ ಕೃತಿಗೆ ಮೊನಚಾದ ಸಂಕೀರ್ಣತೆಯನ್ನು ನೀಡಿದೆ. ಇಲ್ಲಿನ ಭಾಷೆಯ ಬಳಕೆ ಅಪರೂಪದ ಕ್ರಮವನ್ನು ಅನುಸರಿಸಿದೆ. ಏಕೆಂದರೆ ಕಾವ್ಯಮೀಮಾಂಸೆಯ ಪರಿಕಲ್ಪನೆಗಳಲ್ಲಿ ಬರುವ ಕಾಂತಾ ಸಂಹಿತೆಯ ನೆಲೆಯಲ್ಲಿ ಇದನ್ನು ಪರಿಶೀಲಿಸಬೇಕು. ಶರಣರ ವಚನಗಳಂತೆ ಭಾಷಾ ನಿರೂಪಣೆ ಮತ್ತು ಕೃತಿಯ ಆಶಯ ಅದೂ ಹೌದು, ಇದೂ ಹೌದು ಎನ್ನುವಂತೆ ದಕ್ಕಿದರೂ ಅದೂ ಅಲ್ಲ, ಇದೂ ಅಲ್ಲ ಎನ್ನುವಂತಹ ಮಾಯಾಲೋಕದ ಸೃಷ್ಟಿ ಇಲ್ಲಿನ ವಿಶೇಷ.

ಅಂತಿಮವಾಗಿ ಈ ಕೃತಿಯಲ್ಲಿ ಬರುವ ಅನುಭವ ಸಾಮಗ್ರಿ ಲೇಖಕನದ್ದು ಮಾತ್ರವಲ್ಲದೆ ನಮ್ಮದೂ ಆಗಿಬಿಡುತ್ತದೆ. ಆದ್ದರಿಂದ ಈ ಕೃತಿಯನ್ನು ಬಿ.ಜಿ.ಎಲ್. ಸ್ವಾಮಿ ಅವರ 'ಕಾಲೇಜು ರಂಗ' ಕೃತಿಯ ಹಾಗೆ ಯಾವ ಸಾಹಿತ್ಯ ಪ್ರಕಾರಕ್ಕೆ ಸೇರಿಸಬೇಕು ಎಂಬುದು ಪ್ರಶ್ನೆ. ಅರ್ಥಾತ್ ಇದು ಆತ್ಮಚರಿತ್ರೆ-ಜೀವನಚರಿತ್ರೆಯೇ, ಕತೆ-ಕಾದಂಬರಿಯೇ, ಅನುಭವ ನಿರೂಪಣೆಯೇ, ಭಾವಗೀತೆಯೇ ಎನ್ನುವ ಪ್ರಶ್ನೆ ಎದುರಾಗಿ ಯಾವ ಪ್ರಕಾರವಾದರೇನು, ಇದೊಂದು ಜೀವನ ಮೀಮಾಂಸೆ ಎನ್ನುವ ಅಂಶಕ್ಕೆ ಅನಿವಾರ್ಯವಾಗಿ ತಲುಪಬೇಕಾಗುತ್ತದೆ.

ಇದಕ್ಕೆ ಸೂಚನೆ ಎಂಬಂತೆ ಲೇಖಕರು 'ಮತ್ತೊಬ್ಬನ ಅತ್ಮಚರಿತ್ರೆ' ಎಂಬ ಶೀರ್ಷಿಕೆಯ ಅಡಿ ಆವರಣ ಚಿಹ್ನೆಯೊಳಗೆ (ಕತೆಯಲ್ಲ ಕಾದಂಬರಿ) ಎನ್ನುವುದು ಕೂಡ ಮೇಲಿನ ನನ್ನ ಗ್ರಹಿಕೆಗೆ ಪೂರಕವಾದ ಅಂಶ. ಎಪ್ಪತ್ತರ ದಶಕದಲ್ಲಿ ರಚಿತವಾದ ಈ ಕೃತಿ ಒಟ್ಟು ೨೨ ಅಧ್ಯಾಯಗಳನ್ನು ಒಳಗೊಂಡಿದೆ. ಒಂದೊಂದು ಅಧ್ಯಾಯಗಳ ಶೀರ್ಷಿಕೆಗಳು ಮೇಲ್ನೋಟಕ್ಕೆ ಕ್ರಮವಾಗಿ ಮುಂದುವರಿದ ವಿಷಯದಂತಿಲ್ಲದಿರುವುದು ಈ ಕೃತಿಯ ಅನನ್ಯತೆಯನ್ನು ಸಾರುತ್ತದೆ. ಇಲ್ಲಿನ ಪರಿವಿಡಿಯನ್ನು ಲೇಖಕರು ಪರಿವಿಡಿಗೆ ಬದಲು ಕ್ರಮ ಎಂದು ಸೂಚಿಸಿರುವುದೂ ಕೂಡ ಕಾಲವನ್ನು ಕುರಿತ ಲೇಖಕರ ದಿಗ್ಭ್ರಮೆಯ ಸಂಕೇತವಾಗಿದೆ.

ಈ ಕೃತಿಯ ವಸ್ತು, ಪಾತ್ರಗಳು, ಕಾಲಘಟ್ಟ, ಸ್ಥಳ ಎಲ್ಲವೂ ಮದರಾಸು ಮತ್ತು ಮೈಸೂರು ಪ್ರದೇಶದಲ್ಲಿ ನಡೆಯುವಂತಹುದು. ಭಾರತೀಯತೆ ಮತ್ತು ಪಾಶ್ಚಾತ್ಯ ಪರಿಕಲ್ಪನೆಗಳ ನೇರವಾದ ಮುಖಾಮುಖಿ ಆಗಿರುವುದನ್ನು ನಿರೀಕ್ಷಿಸಬಹುದು. ಮನುಷ್ಯನ ಭಾವಜಗತ್ತಿನಲ್ಲಿ ಸದಾ ಸಂಚರಿಸುತ್ತಿರುವ ಆಶಾವಾದ, ನಿರಾಶಾವಾದ, ಅಸ್ತಿತ್ವದ ಪ್ರಜ್ಞೆ, ವಾಸ್ತವತೆ, ಕನಸುಗಾರಿಕೆಗಳ ರಿಂಗಣಗುಣಿತದ ಲಯಗಳು ಕೃತಿಯ ಅಂತರಂಗದಲ್ಲಿ ಹುದುಗಿರುವುದನ್ನು ಕಾಣಬಹುದು.

ಆನೆ ಹೋದದ್ದೇ ದಾರಿ ಕನ್ನಡಿಗ ಬರೆದದ್ದೇ ಕನ್ನಡ ಅಲ್ಲವೇ... ಇದು ಅವರ ಕನ್ನಡವನ್ನು ಕುರಿತ ಒಲವಿನ ಗುರುತು... ಮಾತೃಭಾಷಾ ಪ್ರೇಮದ ಜೊತೆಗೆ ಖಾಸಗಿ ಅನುಭವಗಳು ಇತರರಿಗೆ ಗೊತ್ತಾಗದಂತೆ ಇಡುವುದಕ್ಕೂ ಅನುಕೂಲವಾಗುತ್ತದೆ.

'ಬರೆಯುವುದಕ್ಕೆ ಕಾರಣ' ಒಂದು ಘಟನೆಯನ್ನು ಉದಾಹರಿಸಿ ಬರೆಯುವುದಕ್ಕೆ ಕಾರಣವನ್ನು ಹೇಳುವ ರೀತಿಯೇ ಭಿನ್ನವಾಗಿದೆ. ತಮ್ಮ ಮಾತೃಭಾಷೆಯಲ್ಲಿ ಬರೆದರೆ ಆಗುವ ಅನುಭವ ಮತ್ತು ಅದು ತಲುಪುವ ವಿಸ್ತಾರವನ್ನು ಹೇಳುವಾಗ, ಹೊರಜಗತ್ತಿಗೆ ಗೊತ್ತಾಗಬೇಕಾದರೆ ಜಗತ್ತಿನಲ್ಲಿ ಹರಡಿಕೊಂಡಿರುವ ಭಾಷೆಯಲ್ಲಿ ಬರೆದರೆ ತಲುಪುವ ವಿಸ್ತಾರವನ್ನು ಕಥಾನಕದ ಮೂಲಕ ವಿವರಿಸುತ್ತಾರೆ. (ತೆಲುಗು ಸ್ನೇಹಿತ) ಮತ್ತು ದೂರದಲ್ಲಿ ಕೂತು ತಮ್ಮ ಮಾತೃಭಾಷೆಯಲ್ಲಿ ಬರೆದರೆ ಮತ್ತೆ ಸಾವಿರಾರು ಮೈಲಿ ದೂರದಲ್ಲಿರುವ ಜನರೇ ಅದನ್ನು ಓದಬೇಕು, ಅಲ್ಲಿ ಜನ ಸಿಗುವುದಿಲ್ಲ, ಆದ್ದರಿಂದ ಗುಟ್ಟಾದ ವಿಷಯಗಳಿಗೆ ಮತ್ತು ತಮ್ಮ ಕನಸುಗಳಿಗೆ, ಆಲೋಚನೆಗಳಿಗೆ, ಚಿಂತನೆಗಳಿಗೆ ಮಾತೃಭಾಷೆ ಎಷ್ಟು ಆಳವಾಗಿ ಬೇರುಬಿಟ್ಟು ಕುಳಿತಿರುತ್ತದೆ ಎಂಬುದನ್ನು ತಿಳಿಯಬಹುದು.

ತನ್ನ ತಾಯಿ ತಂದೆಗೆ ಎರಡನೇ ಹೆಂಡತಿಯಾದ್ದರಿಂದ ತಂದೆ-ತಾಯಿಯ ವಯಸ್ಸು, ಚಿಂತನಾಕ್ರಮ, ಮಲತಾಯಿಯ ಮಗ, ಅವನ ವಯಸ್ಸು, ಮಲತಾಯಿಯು ತನ್ನ ಚೊಚ್ಚಲ ಬಾಣಂತಿಯಲ್ಲಿ ತೀರಿಹೋದ ಗಂಡನ ಮೊದಲ ಹೆಂಡತಿಯು ದೆವ್ವದ ರೂಪದಲ್ಲಿ ಬಂದು ತೊಂದರೆ ಕೊಡುವುದು; ಅದರಿಂದ ಆಗುವ ಮಾನಸಿಕ ಸಂಕಟ, ಪರಿಹಾರಕ್ಕಾಗಿ ಕಂಡುಕೊಳ್ಳುವ ಮಾರ್ಗಗಳು, ತಾಯಿಯು ಅನುಭವಿಸಿರಬಹುದಾದ ತೊಂದರೆಗಳು; ಇವೆಲ್ಲವೂ ಕೆಳಮಧ್ಯಮ ವರ್ಗದ ಜನರ ಜೀವನಚಿತ್ರಣ; ಇವೆಲ್ಲವನ್ನೂ ಕುತೂಹಲಭರಿತ ಭಾವನೆಗಳು ಇರುವ ವಯಸ್ಸಿನಲ್ಲಿ ಲೇಖಕರು ಮೌನದಲ್ಲಿ ಗಮನಿಸುವ ಚಿತ್ರಣವನ್ನು ಇಲ್ಲಿ ಕಾಣಬಹುದಾಗಿದೆ.

ಪಾತ್ರಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವುದು ರಾಮಾನುಜನ್ ಅವರ ಪ್ರತಿಭೆಯ ವಿಶೇಷ. ಅಪ್ಪ, ಅಮ್ಮ, ಅತ್ತೆ, ಮಾವ, ಅಣ್ಣ, ತಂಗಿ, ದೊಡ್ಡಪ್ಪ, ರಿಕ್ಷಾವಾಲ, ಪೈಲ್ವಾನ ಹೀಗೆ ಮುಂತಾದ ಪಾತ್ರಗಳನ್ನು ಚಿತ್ರಿಸಿರುವ ರೀತಿ ಅನನ್ಯವಾದದ್ದು. ಉದಾಹರಣೆಗೆ-

"ಅವರಿಟ್ಟುಕೊಂಡ ವಜ್ರದೋಲೆ, ಎರಡು ಹೊಳ್ಳೆಗೂ ಚುಚ್ಚಿದ ವಜ್ರದ ಮೂಗುತಿಗಳು, ನಾಕು ಚಿನ್ನದ ಬಳೆ, ಕತ್ತಿನಲ್ಲಿ ಕಾಸಿನ ಸರ, ಕೆಂಪು–ವಜ್ರ ಬೆರೆಸಿದ ಮೂರು ಸುತ್ತಿನ ಮುಡಿತಿರುಪು. ಮಡಿಸೀರೆ, ತಾಳಿ, ಸವೆದ ಕಾಲಂದುಗೆ, ಒಂದು ಚಿನ್ನದ ಕೈಬಳೆ..."[೯]

ಮಧ್ಯಮಗರ್ವದ ಜನರ ಮನೆ ಮತ್ತು ಮನೆಯ ಸುತ್ತಲ ವಾತಾವರಣದ ಬಗ್ಗೆ ಹೇಳುವುದೂ ಕೂಡ–

"ಮುಂಭಾಗದ ಸಣ್ಣ ತೋಟದಲ್ಲಿ ಹೂವು–ಜಾಜಿ, ಸುಗಂಧರಾಜ, ಪಾಶ್ಚಾತ್ಯ ದೇಶದ ಹಳದಿ ಕೆಂಪು ಮಚ್ಚೆ ಹಾಕಿದ ಮೇಲೆ ಬಿಡುವ ಅಲಂಕಾರ ಸಸ್ಯಗಳು, ಮೂರು ಮಾದರಿ ಗುಲಾಬಿ, ಹಿಂಭಾಗದ ತೋಟದಲ್ಲಿ ಅಮ್ಮ ಬೆಳೆಸಿದ ಬದನೆ, ಬೆಂಡೆ, ಚಪ್ಪರದವರೆ. ತುಳಸಿಕಟ್ಟೆ, ತೆಂಗಿನ ಮರ, ಬಟ್ಟೆ ಒಗೆಯುವ ಕಲ್ಲು, ಸೌದೆ, ಇದ್ದಲು ಇಡುವ ಜಾಗ, ಸೂರಿಲ್ಲದ ಕಕ್ಕಸು; ಒಳಗೆ ಕೂತವರ ಮೇಲೆ ನೆರಳು, ಕೆಲವು ದಿನ ಹಕ್ಕಿಗಳ ಹಿಕ್ಕೆ, ಮಳೆ ನಿಂತ ಮೇಲೆ ಮಳೆಹನಿ ಬೀಳಿಸುವ ದೊಡ್ಡ ಸಂಪಿಗೆಮರ."[೧೦]

ಆದರೆ ಆಧುನಿಕ ಜಗತ್ತಿಗೆ ತೆರೆದುಕೊಳ್ಳುತ್ತಿರುವ ಈ ದೇಶದಲ್ಲಿ ಇವೆಲ್ಲವೂ ಕಾಣೆಯಾಗುತ್ತಾ ಬರುತ್ತಿವೆ. ಇದರಂತೆಯೇ ಮನೆಯ ಕೌಟುಂಬಿಕ ವಾತಾವರಣವೂ ಸಹ ಸಂಬಂಧಗಳನ್ನು ಕಳಚಿಕೊಂಡು ದೂರದೂರ ಚಲಿಸುತ್ತಿರುವುದು, ವಿಸ್ತಾರಕ್ಕೆ ಪ್ರೋತ್ಸಾಹವೋ ಏಕಾಂಗಿತನದ ಆಹ್ವಾನವೋ ತಿಳಿಯುತ್ತಿಲ್ಲ. ಈ ರೀತಿಯ ಸೂಕ್ಷ್ಮತೆಗಳನ್ನು ರಾಮಾನುಜನ್ ಈ ಕಾದಂಬರಿಯಲ್ಲಿ ಹಿಡಿದಿಟ್ಟಿದ್ದಾರೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪಂಪನಿಂದ ಇಲ್ಲಿಯವರೆಗೆ ಪ್ರಯೋಗಶೀಲತೆ ಕಂಡುಬರುತ್ತದೆ. ಯುಗಪ್ರವರ್ತಕ ಲೇಖಕರಲ್ಲಿ ಈ ಪ್ರಯೋಗಶೀಲತೆ ನಿಚ್ಚಳವಾಗಿರುತ್ತದೆ. ರಾಮಾನುಜನ್ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅನನ್ಯವಾಗಿ ಎದ್ದು ಕಾಣುವ ಬರಹಗಾರರು. ಅವರು ಬರೆದಿರುವ ಎಲ್ಲ ಸಾಹಿತ್ಯ ಪ್ರಕಾರಗಳೂ ಪ್ರಯೋಗಶೀಲತೆಯನ್ನೊಳಗೊಂಡಿವೆ. 'ಮತ್ತೊಬ್ಬನ ಆತ್ಮಚರಿತ್ರೆ' ಕೂಡ ಈ ಪ್ರಯೋಗಶೀಲತೆಗೆ ಹೊರತೇನಲ್ಲ.

ಒಂದು ಅಧ್ಯಾಯದಲ್ಲಿ ಅಪ್ಪನ ಗತ್ತಿನ ಪಾತ್ರ, ರಿಕ್ಷಾವಾಲನ ಚಿತ್ರ ಮತ್ತು ಪೈಲ್ವಾನನ ಚಿತ್ರ ಬರುತ್ತದೆ. ಅಕ್ಷರಜ್ಞಾನದ ಪ್ರತಿರೂಪವಾಗಿ ಅಪ್ಪ, ಶಕ್ತಿ ರೂಪಕವಾಗಿ ಪೈಲ್ವಾನ ಮತ್ತು ಬಡತನದ ರೂಪಕವಾಗಿ ರಿಕ್ಷಾವಾಲನ ಚಿತ್ರಣ ಇಲ್ಲಿ ಕಂಡುಬರುತ್ತದೆ. ಈ ಮೂರೂ ಪಾತ್ರಗಳನ್ನು ತಲೆಮಾರಿನ ಕೊಂಡಿಯಾಗಿಯೂ ಅಧ್ಯಯನ ಮಾಡಬಹುದು.

> "ನಮ್ಮಪ್ಪ ೧೭೦ ಪೌಂಡಿನ ಭಾರದ ಆಸಾಮಿ, ಗಡದ್ದಾಗಿ ಕೂತಿದ್ದರು. ಬಿಸಿಲಲ್ಲೂ ಫಿನ್ಲೆ ಕಚ್ಚೆ ಪಂಚೆಯ ಮೇಲೆ ಕೋಟು, ಉತ್ತರೀಯ, ತಲೆಯ ಮೇಲೆ ಗರಿಗರಿ ಪೇಟ, ಹಣೆಯ ಮೇಲೆ ಶ್ರೀಚೂರ್ಣದ ಒಂದು ನಾಮ. ರಿಕ್ಷಾವಾಲನ ಕಪ್ಪು ಬೆನ್ನು ಬೆವರು ಸುರಿದು ಮಿನುಗಿ, ಅವನ ಸ್ನಾಯುಗಳೆಲ್ಲ ಎದ್ದು ನಿಂತು ಕಾಣಿಸಿದವು, ಚಲಿಸಿದರು, ನಾವು ಹೀಗೆ ನರವಾಹನರಾಗುವುದು, ಮನುಷ್ಯ ಮನುಷ್ಯರನ್ನು ಹೊತ್ತು ತಿರುಗುವುದು ಸರಿಯೇ ಅಂತ ನನಗೆ ಮೊಟ್ಟ ಮೊದಲ ಬಾರಿಗೆ ಸಂಶಯವಾಯಿತು." [೧೧]

ಇದರ ಜೊತೆಗೆ ಬರುವ ಆಜಾನುಬಾಹು ಫೈಲ್ವಾನನ ಚಿತ್ರ, ಇವೆಲ್ಲವೂ ಒಂದು ಸಂಸ್ಕೃತಿಯಲ್ಲಿ ಬರುವ ಹಲವಾರು ಅಂತಸ್ತುಗಳು. ದೈಹಿಕ ಶಕ್ತಿ, ಬೌದ್ಧಿಕ ಶಕ್ತಿ ಮತ್ತು ಮಾನಸಿಕ ಶಕ್ತಿಗಳ ಮಿಳಿತವನ್ನು ಇಲ್ಲಿ ಕಾಣಬಹುದು ಮತ್ತು ಅವುಗಳ ಚಲನಶೀಲತೆ ಇಲ್ಲಿ ವ್ಯಕ್ತವಾಗುತ್ತದೆ.

ಮತ್ತೊಂದು ಅಧ್ಯಾಯದಲ್ಲಿ ಕಕ್ಕಸ್ಸು ಎಂಬ ಒಂದು ರೂಪಕದಲ್ಲಿ ಆಧುನಿಕತೆಗೆ ನಾವು ನಮ್ಮನ್ನು ಅರ್ಪಿಸಿಕೊಳ್ಳುವ ವಿಚಾರವನ್ನು ಹೇಳುತ್ತಾರೆ. ಇಲ್ಲಿ ಅಂದರೆ ಭಾರತದಲ್ಲಿ ಬಯಲಿಗೆ ಹೋಗುವ ರೀತಿ ಹಾಗೂ ಮಲಹೊರುವ ಪದ್ಧತಿಯ ರೂಪವಾಗಿ ಒಂದು ಬಕೆಟ್ ಇಟ್ಟು ಅದಕ್ಕೆ ಕಕ್ಕಸು ಮಾಡಿದ ನಂತರ ಅದನ್ನು ಮುನಿಸಿಪಾಲ್ಟಿ ಜನರು ಬಂದು ತೆಗೆದುಕೊಂಡು ಹೋಗುವುದು; ನಂತರದಲ್ಲಿ ಆಧುನಿಕತೆ ಬೆಳೆದಂತೆ ಹಾಗೂ ವಿದೇಶೀಯ ಅನುಕರಣೆಯಲ್ಲಿ ಬಂದಂತಹ ಪಿಂಗಾಣಿ ಬಟ್ಟಲಿನ ಆಕಾರದ ಕಮೋಡ್‌ಗಳ ವಿಚಾರವನ್ನು ಹೇಳುವಾಗ, ಮಾನವನ ಸಮಾಜದಲ್ಲಿ ಕಾಲಕಾಲಕ್ಕೆ ಆದಂತಹ ಬದಲಾವಣೆಗಳು ಮತ್ತು ಸಮಾಜ ಅದಕ್ಕೆ ಸ್ಪಂದಿಸಿದ ರೀತಿಯನ್ನು ಹೇಳುವುದಲ್ಲದೆ ಆಧುನಿಕತೆ ಹೇಗೆ ನಮ್ಮ ಮೇಲೆ ಪ್ರಭಾವ ಬೀರುತ್ತಿದೆ ಎಂಬುದನ್ನು ಇಲ್ಲಿ ನೋಡಬಹುದಾಗಿದೆ.

ಮನೋವೈಜ್ಞಾನಿಕ ಕಾದಂಬರಿಯಾಗಿಯೂ ಇದನ್ನು ನೋಡಬಹುದಾಗಿದೆ. ಇಲ್ಲಿ ಬರುವ ಅನೇಕ ಪಾತ್ರಗಳು ಇದಕ್ಕೆ ಪೂರಕವಾಗಿವೆ. ವೈಜ್ಞಾನಿಕ ಅಂಶವೂ ಇಲ್ಲಿ ಬರುತ್ತದೆ. ಬಾಣಂತಿ ಸಮಯದಲ್ಲಿ ಹೆಣ್ಣು ಅನುಭವಿಸುವ ಮಾನಸಿಕ ಯಾತನೆಗಳು, ಆ ಸಂದರ್ಭದಲ್ಲಿ ಉಂಟಾಗಬಹುದಾದ ಆಲೋಚನಾಕ್ರಮ, ಅದಕ್ಕೆ ಭಾರತೀಯ ಸಮಾಜದಲ್ಲಿ ಇರಬಹುದಾದ ನಂಬಿಕೆ, ಮೂಢನಂಬಿಕೆಗಳು, ದೆವ್ವ, ದೇವರುಗಳ ಕಲ್ಪನೆಗಳನ್ನು ಈ ಕಾದಂಬರಿಯಲ್ಲಿ ನೋಡಬಹುದಾಗಿದೆ.

ಪ್ರಸ್ತುತದಲ್ಲಿ ಜಾಗತಿಕ ಮಟ್ಟದಲ್ಲಿ ಎದುರಿಸುತ್ತಿರುವ ಅನೇಕ ಕಾಯಿಲೆಗಳ ಮತ್ತು ಆ ಕಾಯಿಲೆಗಳು ಜನರಲ್ಲಿ ಉಂಟುಮಾಡಿರುವಂತಹ ಜೀವಭಯ ಇವೆಲ್ಲವೂ ಸಹ ಇಲ್ಲಿ ಚಿತ್ರಿತವಾಗಿದೆ. ಪಾಶ್ಚಾತ್ಯರಲ್ಲಿ ಸೆಕ್ಸ್ ಮುಕ್ತ, ಆದ ಕಾರಣ ಸೆಕ್ಸ್ ಸಂಬಂದಪಟ್ಟ ಕಾಯಿಲೆಗಳಿಗೆ ಧೈರ್ಯವಾಗಿ

ಚಿಕಿತ್ಸೆ ಪಡೆಯುತ್ತಾರೆ. ಆದರೆ ಒಬ್ಬರಿಂದ ಒಬ್ಬರಿಗೆ ಹರಡುವ ನೆಗಡಿ, ಜ್ವರಕ್ಕೆ ಅಲ್ಲಿ ತುಂಬಾ ಭಯ ಹುಟ್ಟಿಸುತ್ತಾರೆ. ಭಾರತದಲ್ಲಿ ಇಂತಹ ವಿಚಾರಗಳಿಗೆ ಬೇರೆ ರೀತಿಯ ಭಯ. **"ಅಮೆರಿಕನ್ ಭಯ, ನಮ್ಮಂಥ ಇಬ್ಬಂದಿಗಳಿಗೆ ಎರಡೂ ರೀತಿಯ ಭಯ. ಎರಡು ಸಂಸ್ಕೃತಿಯ ಸಮನ್ವಯ"** ಎನ್ನುತ್ತಾರೆ ರಾಮಾನುಜನ್.

ಚಿಕ್ಕಂದಿನಲ್ಲಿ ನೋಡಿದ ಇವರ ಅತ್ತೆ ಮಾವರ ಆನೇಕಾಲು ರೋಗ ಮತ್ತು ಆ ರೋಗ ಬರಲು ಕಾರಣವಾದ ಸೊಳ್ಳೆ, ಇವರು ಅಮೆರಿಕದಲ್ಲಿ ಮೀನು ಹಿಡಿಯಲು ಹೋದಾಗ ನೋಡಿದ ಸೊಳ್ಳೆಯ ಚಲನವಲನ ಗಮನಿಸಿ ಇವರಿಗೆ ಮಾನಸಿಕವಾಗಿ ಬಂದಂತಹ ಕಾಯಿಲೆಯ ಭಯವನ್ನು ಲೇಖಕರು ಮನೋವೈಜ್ಞಾನಿಕ ನೆಲೆಯಲ್ಲಿ ಚಿತ್ರಿಸಿದ್ದಾರೆ.

ಸಯಾಮಿ ಅವಳಿಗಳ ಬಗ್ಗೆ ಒಂದು ಅಧ್ಯಾಯದಲ್ಲಿ ಅವಳಿಗಳಾಗಿ ಹುಟ್ಟಿದರೂ ಬೇರೆ–ಬೇರೆಯಾಗದೇ ಯಾವುದೋ ಒಂದು ಭಾಗದಲ್ಲಿ ಅಂಟಿಕೊಂಡು ಅವು ಪಡುವ ಕಷ್ಟವನ್ನು ಚಿತ್ರಿಸಿದ್ದಾರೆ. ಅದು ನಿಜವೇ ಆದರೂ ಒಂದು ರೂಪಕವಾಗಿ ಎರಡು ಭಿನ್ನ ಸಂಸ್ಕೃತಿಯ ನಡುವೆ ಯಾವುದೋ ಒಂದು ಸಾಮ್ಯತೆಗೆ ಸಮನ್ವಯಕ್ಕೆ, 'ಸಯಾಮಿ' ಅಂಟಿಕೊಂಡು ಪಡುವ ಯಾತನೆಯನ್ನೂ, ಭಯವನ್ನೂ ಇಲ್ಲಿ ಗಮನಿಸಬಹುದು.

ಮನೋವೈಜ್ಞಾನಿಕ ಕಥೆ ಎಂದು ಹೇಳಬಹುದಾಗಿದ್ದು, ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಹೋದಾಗ, ಮೊದಲಿದ್ದ ಜಾಗದ, ಜನರ, ವಸ್ತುಗಳ, ವಿಷಯಗಳ ಬಗ್ಗೆ ಹೋದ ಜಾಗದಲ್ಲಿ ಕೂತು ಹೆಚ್ಚು ಕನವರಿಸಿಕೊಳ್ಳುತ್ತೇವೆ. ಆದರೆ ನಾವು ಇಲ್ಲಿ ಕೂತು ಅಲ್ಲಿಯ ಬಗ್ಗೆ ಕನವರಿ ಕೊಳ್ಳುವ ರೀತಿಯಲ್ಲಿ ಅಲ್ಲಿ ಇರುವುದಿಲ್ಲ. "ಇದ್ದರೂ ಸ್ವಲ್ಪ ಹೊತ್ತು ನನಗೆ ಕಣ್ಣೊಳಗಿನ ಕಂಬದ ಭ್ರಮೆ ಮಾಸಲಿಲ್ಲ; ಕಂಬವಿಲ್ಲದ ಮನೆಯಲ್ಲಿ ಮನೆಯಿಲ್ಲದ ಕಂಬ"(ಹೋಂ ಸಿಕ್‌ನೆಸ್), 'ನಾಸ್ಟಾಲ್ಜಿಯ'. ಇದಕ್ಕೆ ಪೂರಕವೆಂಬಂತೆ ಈ ಕಾದಂಬರಿಯಲ್ಲಿ ಒಂದು ಪದ್ಯ ಬರುತ್ತದೆ:

ಸ್ವಿಟ್ಸರ್ಲೆಂಡಿನ ಮಂಜಿನಲ್ಲಿ
ದೋಸೆ ಕಾಫಿ ನೆನಸಬಾರದು
ಅಮೆರಿಕನ್ ಮದುವೆ ಪಾರ್ಟಿಯಲ್ಲಿ
ಎಲಡಿಕೆ ಅರಿಸಿನ ಕುಂಕುಮಕ್ಕೆ ಕಾಯಬಾರದು ಕಣೆ
ಅಂತ ಎಷ್ಟು ಹೇಳಿದರೂ
ಕೇಳುವುದಿಲ್ಲ
ತಲಕಾಡಿನಲ್ಲಿ ಹುಟ್ಟಿ
ಮಲೆನಾಡಿನಲ್ಲಿ
ಮಡುವಾದ
ಮನಸ್ಸು.

"ನಮ್ಮಂತ ಪರದೇಶಿಗಳಿಗೆ ಈ ಮನೆ-ಜಾಡ್ಯ ರಕ್ತಗತ. ಇದಕ್ಕೆ ಸರಿಯಾದ ಔಷಧ ಇಲ್ಲ. ಮನೆ ಮನೆ ಅಂತ ಹಂಬಲಿಸಿ ತವರುಮನೆಗೆ ಹೋದರೂ ಈ ಜಾಡ್ಯ ತೀರೋದಿಲ್ಲ. ಈಗ ಹೋದ ಮನೆ, ನೆನಸಿಕೊಂಡ ಮನೆಯ ಹಾಗಿರೋದಿಲ್ಲ."[೧೨]

ಅನುಭವವನ್ನು ಹೇಳುವ ಮತ್ತು ವಯಸ್ಸಿನಲ್ಲಿ ತೋರಬಹುದಾದ ಹಲವಾರು ವಿದ್ಯೆಗಳನ್ನು ಕಾಲಾನಂತರದಲ್ಲಿ ವಯಸ್ಸಾದಂತೆ ಮಾಗಿದಂತೆ ಮೊದಲಿನ ಹಾಗೆ ಮಾಡಲು ಸಾಧ್ಯವಾಗದ್ದನ್ನು ಮತ್ತು ಅನುಭವ ಮಾಗಿದ ಜನರು ಮಾಡುವ ವಿದ್ಯೆ-ಕೈಚಳಕಗಳನ್ನು ನಿರನುಭವದಿಂದ ಅಥವಾ ಕುರುಡುತನದಿಂದ ಅನುಸರಿಸುವುದರಿಂದ ಆಗಬಹುದಾದ ನಿರಾಸೆಗಳನ್ನು ಇಲ್ಲಿ ನೋಡಬಹುದು (ಮಾವನು ಪೇಪರ್‌ನಲ್ಲಿ ಮಾಡುತ್ತಿದ್ದ ಹಲವಾರು ರೀತಿಯ ವಸ್ತುಗಳು, ದೋಣಿ, ಕತ್ತಿದೋಣಿ, ಅರಿಸಿನ ಕುಂಕುಮದ ಬಟ್ಟಲು, ಹಾರುವ ಹಕ್ಕಿ... ಲೇಖಕರು ಅದನ್ನು ಅನುಸರಿಸುವುದು ಪ್ರಯತ್ನದಲ್ಲಿ ಸೋಲುವುದು).

ಲೇಖಕನಾದವನು ತನ್ನೆಲ್ಲಾ ಅನುಭವವನ್ನು ಎಂದಿಗೂ ಪೂರ್ಣ ಪ್ರಮಾಣದಲ್ಲಿ ಹಿಡಿಯಲು ಸಾಧ್ಯವಾಗುವುದಿಲ್ಲ. ಅದು ಲೇಖಕನಿಗೆ ದೊಡ್ಡ ಸವಾಲು. ಆದರೆ ಎಲ್ಲಾ ಅನುಭವಗಳು ಲೇಖಕನಿಗೆ ವಸ್ತು ಕೂಡ ಆಗಲಾರವು. ಲೇಖಕ ಆ ಅನುಭವಗಳಲ್ಲಿ ಆಯ್ಕೆ ಮಾಡಿಕೊಂಡು ಅದಕ್ಕೆ ಅನುಗುಣವಾದ ಭಾಷೆಯನ್ನು ರೂಪಿಸಿಕೊಂಡು ಅದನ್ನು ತನ್ನದೇ ಆದ ಒಂದು ವಿಶಿಷ್ಟ ಲಯದಲ್ಲಿ ಮಂಡಿಸಲು ಅಥವಾ ನಿರೂಪಿಸಲು ಪ್ರಯತ್ನಿಸಿರುತ್ತಾನೆ. ಅನುಕರಣೆಗಳನ್ನು ಮಾಡುವುದೂ ಕೂಡ ಬಹಳ ಕಷ್ಟದ ಕೆಲಸ ಎಂಬುದನ್ನು ಇಲ್ಲಿ ಕಾಗದದಿಂದ ದೋಣಿ, ಕತ್ತಿದೋಣಿ, ಕುಂಕುಮದ ಬಟ್ಟಲು, ಹಾರುವ ಹಕ್ಕಿ ತಯಾರು ಮಾಡುವ ಸಂದರ್ಭದಲ್ಲಿ ಸೋಲುವುದನ್ನು ಕಾಣುತ್ತೇವೆ. ಲೇಖಕನ ಮಾವ ಇವುಗಳನ್ನೆಲ್ಲಾ ತುಂಬ ಸೃಜನಶೀಲವಾಗಿ ತಯಾರಿಸಿದ್ದನ್ನು, ಲೇಖಕ ತಾನು ತಯಾರಿಸಲು ಹೋಗಿ ವಿಫಲನಾಗುವ ಸಂದರ್ಭವನ್ನು ನೋಡಿದರೆ ಅನುಕರಣೆ ಕೂಡ ಎಷ್ಟು ಕಷ್ಟಕರವಾದುದು ಎಂಬುದು ಗೊತ್ತಾಗುತ್ತದೆ.

ಇಲ್ಲಿ ಪ್ರಮುಖವಾಗಿ ಲೇಖಕರು, ಸಂಬಂಧಗಳು, ಸ್ಥಳಗಳು, ವಿಷಯಗಳು ಹಾಗೂ ತಂದೆಯ ಗಟ್ಟಿತನ ಮತ್ತು ತಾಯಿಯ ಸೌಮ್ಯತೆಯನ್ನು ವಿವರಿಸಿದ್ದಾರೆ. ಇವೆಲ್ಲವೂ ಹೇಗೆ ಭಾರತೀಯ ಸಂಸ್ಕೃತಿಯಲ್ಲಿ ಒಂದನ್ನೊಂದು ಬೆಸೆದುಕೊಂಡಿವೆ, ಇವೆಲ್ಲವುಗಳು ಈ ನೆಲದಲ್ಲಿ ಹೇಗೆ ಆಳವಾಗಿ ಬೇರುಬಿಟ್ಟಿವೆ ಎಂಬುದನ್ನು ಮಾರ್ಮಿಕವಾಗಿ ವಿವರಿಸಿದ್ದಾರೆ.

ರಾಮಾನುಜನ್ ಅವರು ವ್ಯಕ್ತಿಯ ಏಕಾಂಗಿತನ, ಅನಾಥಪ್ರಜ್ಞೆ, ಹೆಣ್ಣಿನ ಅಸಹಾಯಕತೆ, ಮತ್ತು ಸಂಪ್ರದಾಯದ ಬಿಗಿ ವಿಧಿಗಳನ್ನು ಶೋಧನೆಗೆ ಒಳಪಡಿಸಿ ಅವುಗಳ ಮೂಲಕ ಸಂಸ್ಕೃತಿಯ ಹೊಸ ಚಿಂತನೆಗಳನ್ನು ಹುಟ್ಟುಹಾಕುವುದನ್ನು ಇಲ್ಲಿಯ ಕಥನದಲ್ಲಿ ಕಾಣುತ್ತೇವೆ. ಭಾರತೀಯ ಮತ್ತು ಪಾಶ್ಚಾತ್ಯ ಸಂಸ್ಕೃತಿಯ ಸಂಘರ್ಷವನ್ನು, ವೈರುಧ್ಯವನ್ನು ಮತ್ತು ಸತ್ವಗಳನ್ನು

ಈ ಕಾದಂಬರಿಯಲ್ಲಿ ಬಹಳ ದಟ್ಟವಾಗಿ ತಮ್ಮದೇ ಆದ ಕಾವ್ಯಭಾಷೆಯ ಮೂಲಕ ಕಲಾತ್ಮಕವಾಗಿ ಕಟ್ಟಿಕೊಡುತ್ತಾರೆ. ಈ ದೃಷ್ಟಿಯಿಂದ ಇದೊಂದು ವಿಭಿನ್ನವಾದ ಸಾಹಿತ್ಯ ಕೃತಿಯಾಗಿದೆ.

ಒಟ್ಟಾರೆಯಾಗಿ ರಾಮಾನುಜನ್ ಕಥನಸಾಹಿತ್ಯ ಪ್ರಕಾರದ ಗದ್ಯದಲ್ಲಿಯೂ ಸಹ ಪದ್ಯದ ಲಯ ಇರುತ್ತದೆ. ಕೆಲವೇ ಕಥೆಗಳಾದರೂ ವೈವಿಧ್ಯತೆಯಿಂದ ಕೂಡಿರುವ ಅನನ್ಯವಾದ ಕಥೆಗಳಾಗಿವೆ. ಸಮಕಾಲೀನ ಬರಹಗಾರರಿಗಿಂತ ಭಿನ್ನವಾದ ಅನನ್ಯ ಶೈಲಿಯ ರಚನೆಯನ್ನು ಕಾಣಬಹುದು. ಗದ್ಯದಲ್ಲಿ ಅನುಭವದ ಗಾಢತೆ, ಆಪ್ತತೆ ಎದ್ದು ಕಾಣುತ್ತದೆ. ಹಾಗೆಯೇ ಅವರ ಪದ್ಯದಂತೆ ಗದ್ಯದಲ್ಲಿಯೂ ಸಹ ಅನಾಥಪ್ರಜ್ಞೆ, ಏಕಾಂಗಿತನ, ಭಾರತೀಯ ಸಂಸ್ಕೃತಿಯ ಮೂಲದ ಹುಡುಕಾಟ ಇವು ಸಂಶೋಧನೆಯ ದೃಷ್ಟಿಯಿಂದ ಬಹಳ ಮಹತ್ವದ್ದಾಗಿವೆ.

೪.೩. ರೇಡಿಯೋ ನಾಟಕಗಳು

ರಾಮಾನುಜನ್ ಅವರು **'ಗಾನಪ್ರಿಯ'** ಮತ್ತು **'ನಾದಬಿಂದು'** ಎಂಬ ಎರಡು ಕಿರು ರೇಡಿಯೋ ನಾಟಕಗಳನ್ನು ಹಾಗೂ ನಾರಾಯಣರಾಯರ ಉದ್ಯೋಗ, ವೃಥಾ ಶ್ರಮ, ವೈದ್ಯನಿಗೇ ವ್ಯಾಧಿ, ಉಳಿತಾಯಕ್ಕೊಂದುಪಾಯ, ಅಂತೂ, ಆತ್ಮಕತೆ, ಏಳಿಗೆಯ ಪದ – ಎಂಬ ಏಳು ನಗೆ ಬರಹಗಳನ್ನು ಬರೆದಿದ್ದಾರೆ. ಸಾಹಿತ್ಯದ ಯಾವುದೇ ಪ್ರಕಾರದ ಮೂಲಕ ರಾಮಾನುಜನ್ ಅವರು ತಮ್ಮ ಅಭಿವ್ಯಕ್ತಿಯನ್ನು ತೋರಿದ್ದರೂ ಅವುಗಳಲ್ಲಿ ಪ್ರಧಾನವಾಗಿ ಭಾರತೀಯ ಸಂಸ್ಕೃತಿ ಹಾಗೂ ಪಾಶ್ಚಾತ್ಯ ಸಂಸ್ಕೃತಿ ಪರಂಪರೆ ಇವುಗಳ ಶೋಧ ಕಂಡುಬರುತ್ತದೆ. ಇಲ್ಲಿನ ನಾಟಕಗಳಲ್ಲಿ ಮತ್ತು ನಗೆಬರಹಗಳಲ್ಲಿ ಕೂಡ ಇದೇ ಬಗೆಯ ವಸ್ತುಗಳನ್ನು ಇಟ್ಟುಕೊಂಡು ಆ ಮೂಲಕ ಸಂಸ್ಕೃತಿಯ ಚಿಂತನೆಯನ್ನು ಒಂದು ವಿಡಂಬನಾತ್ಮಕವಾಗಿ ಚಿತ್ರಿಸಿದ್ದಾರೆ. ತಮಿಳು ಜಾನಪದ ಕಥೆಯೊಂದರಿಂದ ಪ್ರೇರಿತರಾಗಿ 'ಗಾನಪ್ರಿಯ' ನಾಟಕವನ್ನು ರಚಿಸಿದ್ದಾಗಿ ಹೇಳಿಕೊಳ್ಳುವ ರಾಮಾನುಜನ್ ಅವರು ಇದರಲ್ಲಿ ಗಾನಪ್ರಿಯನ ಕರ್ಕಷ ಧ್ವನಿಯನ್ನು ಕಪ್ಪೆಗಳ ಧ್ವನಿಗೆ ಹೋಲಿಸುವುದರ ಮೂಲಕ ವಿಡಂಬನೆಗೆ ಒಳಪಡಿಸುತ್ತಾರೆ.

ಅವರ ಕಥೆ, ಕಾದಂಬರಿ, ನಾಟಕ, ನಗೆಬರಹಗಳಲ್ಲಿ ಮೂಲಭೂತವಾಗಿ ಹರಿಯುತ್ತಿರುವ ಕಥನದ ಗುಣ ಮೌಖಿಕ ಸಾಹಿತ್ಯ ಪರಂಪರೆಗೆ ಹತ್ತಿರವಾದುದು. ಅವರ ಕವನವೇ ಆಗಲೀ, ಕಥೆಯೇ ಆಗಲೀ, ಕಾದಂಬರಿಯೇ ಆಗಲೀ ಅವು ತುಂಬಾ ಬಿಗಿಯಾದ ಬಂಧ ಹಾಗೂ ಸಾವಯವ ಶಿಲ್ಪದಿಂದ ಗಟ್ಟಿಯಾಗಿ ರೂಪಿತಗೊಂಡಿವೆ. ಒಂದು ರೂಪಕದ ಭಾಷೆಯಲ್ಲಿ ಹೇಳುವುದಾದರೆ ಏಕಶಿಲೆ ಗೊಮ್ಮಟನ ಶಿಲ್ಪದಂತೆ ಎಂದು ಹೇಳಬಹುದಾಗಿದೆ. ಅಂದರೆ ಭಾರತೀಯ ಪ್ರಧಾನ ಸಂಸ್ಕೃತಿಗೆ ಪರ್ಯಾಯವಾದ ಮುಕ್ತಸಂಸ್ಕೃತಿಯ ಅನಾವರಣವನ್ನು ಅವರ ಕಥನದಲ್ಲಿ ಕಾಣಬಹುದಾಗಿದೆ.

ರಾಮಾನುಜನ್ ಅವರ ಸೃಜನಶೀಲ ಸಾಹಿತ್ಯದಲ್ಲಿ ಗಮನಾರ್ಹವಾದದ್ದು ಎರಡು ಕಿರು ರೇಡಿಯೋ ನಾಟಕಗಳು 'ನಾದಬಿಂದು' ಮತ್ತು 'ಗಾನಪ್ರಿಯ'. ಅವು ಕೇವಲ ಹಾಸ್ಯ ಮತ್ತು ವಿಡಂಬನೆಯಿಂದ ಕೂಡಿದವುಗಳು ಎಂದು ಮೇಲ್ನೋಟಕ್ಕೆ ಕಾಣಿಸಿದರೂ ಆಂತರ್ಯದಲ್ಲಿ ಸಂಸ್ಕೃತಿಯ ಒಳ ಗೂಢಾರ್ಥವನ್ನು ತುಂಬಿರುವ ಹಾಗೂ ಚಿಂತನೆಗೆ ಒಳಗು ಮಾಡುವ ಹಲವಾರು ವಿಚಾರಗಳನ್ನು ಒಳಗೊಂಡಿವೆ. ಭಾರತೀಯರಿಗೆ ಪ್ರಕೃತಿಯು ದೇವರ ಸಮಾನ; ಪ್ರಕೃತಿಯ ಆರಾಧನೆ ಅನಾದಿಕಾಲದಿಂದಲೂ ಬಂದಿರುವುದು ಮತ್ತು ಪ್ರಕೃತಿಯನ್ನು ಹೊರತು ಪಡಿಸಿ ಮಾನವನ ಬದುಕು ಇಲ್ಲವೇ ಇಲ್ಲ ಎನ್ನುವ ಪರಿಕಲ್ಪನೆ ಭಾರತೀಯರದು. ಪ್ರಕೃತಿಯ ಮಡಿಲಿನ ಹಲವಾರು ಪ್ರಾಣಿ, ಪಕ್ಷಿ, ಮರ, ಗಿಡ, ಬಳ್ಳಿ ಮಾನವನಿಂದ ಹಲವಾರು ರೂಪದಲ್ಲಿ ಪೂಜಿಸಲ್ಪಡುತ್ತವೆ ಮತ್ತು ಒಂದಲ್ಲಾ ಒಂದು ಕಾರಣಕ್ಕಾಗಿ ಪ್ರಾಮುಖ್ಯತೆಯನ್ನು ಪಡೆಯುತ್ತವೆ. ಅಂತೆಯೇ ಈ ಪ್ರಸ್ತುತ 'ನಾದಬಿಂದು' ನಾಟಕದಲ್ಲಿ ಭಾರತೀಯ ಸಂಸ್ಕೃತಿಯೊಳಗೆ ಹೆಚ್ಚು ಚರ್ಚಿತವಾಗದ ಅಥವಾ ಇಲ್ಲವೇ ಇಲ್ಲ ಎನ್ನಬಹುದಾದ ಕಪ್ಪೆಗಳ ಬಗೆಗೆ ಈ ನಾಟಕ ಗಮನ ಸೆಳೆಯುತ್ತದೆ.

ನಾಟಕದ ಒಂದು ಪಾತ್ರವೇ ಹೇಳುವಂತೆ:

> "ಈ ಜನರಲ್ಲಿ ಈಸಪ(Aesop)ನೆಂಬಾತನೊಬ್ಬನಿದ್ದ; ಅವನು ಮಾತ್ರ ನಮ್ಮ ಚರಿತ್ರೆಯ ಕೆಲವು ಅಂಶಗಳನ್ನು ಸೊಗಸಾಗಿ ಸ್ನೇಹದಿಂದ ಬಣ್ಣಿಸಿದ್ದಾನೆ. ಅವನಂತಹ ಒಬ್ಬಿಬ್ಬರನ್ನು ಬಿಟ್ಟರೆ, ಇಡೀ ಮಾನವ ಕೋಟಿಯೇ ಮಂಡೂಕದ್ವೇಷಿ."[೧೩]

ಭಾರತೀಯ ಸಂಸ್ಕೃತಿಯೊಳಗೆ ಎಲ್ಲೂ ಚರ್ಚಿತವಾಗದ ಈ ಮಂಡೂಕಗಳ ಬಗೆಗೆ ಇಲ್ಲಿ ಒಂದು ವಿಡಂಬನಾತ್ಮಕ ನಾಟಕವನ್ನು ರಚಿಸಿ, ಪ್ರಕೃತಿ ಮತ್ತು ಪುರುಷ ಅಂದರೆ ಮಾನವನ ನಡುವೆ ನಡೆಯುತ್ತಿರುವ ಸಂಘರ್ಷವನ್ನು ರಾಮಾನುಜನ್ ಅವರು ಈ ನಾಟಕದಲ್ಲಿ ಚಿತ್ರಿಸಿದ್ದಾರೆ.

೪.೩.೧. ನಾದಬಿಂದು

ಹಾಸಿಗೆಯ ಮೇಲೆ ನಿದ್ರೆ ಇಲ್ಲದೆ ಒದ್ದಾಡುತ್ತಿರುವ ಒಬ್ಬ ವ್ಯಕ್ತಿ, ಹಾಗೆಯೇ ನಿದ್ದೆಗೆ ಜಾರುವ ಮತ್ತು ನಿದ್ರೆಯಲ್ಲಿ ಕಂಡ ಕನಸಿನ ರೂಪದಲ್ಲಿ ಈ 'ನಾದಬಿಂದು' ನಾಟಕ ಚಿತ್ರತವಾಗಿದೆ. ಏನೂ ಅಪಚಾರ ಮಾಡದ ಈ ವ್ಯಕ್ತಿ ಮಂಡೂಕಗಳ ರಾಜ್ಯದಲ್ಲಿ ಅವುಗಳ ಕೈಗೆ ಸಿಕ್ಕಿ ಅವರಿಂದ ಅವಮಾನಿತನಾಗುವ ಚಿತ್ರಣ ಇಲ್ಲಿದೆ. ಕಪ್ಪೆಗಳ ವಟ ವಟ ಶಬ್ದ ಮನುಷ್ಯನಿಗೆ ಕರ್ಕಷ ಮತ್ತು ಕರ್ಣಕಠೋರ; ಆದರೆ ಅದು ಕಪ್ಪೆಗಳಿಗೆ ಅವುಗಳ ಹಕ್ಕು. "ನಿಮ್ಮಂತೆಯೇ ನಮಗೂ ಹಕ್ಕುಗಳುಂಟೆಂಬುದನ್ನು ಮರೆಯಬೇಡಿರಿ. ವರ್ಷದಲ್ಲಿ ನಾಲ್ಕು ತಿಂಗಳು, ಅದೂ ರಾತ್ರಿಯ ತಂಪು ಹೊತ್ತಿನಲ್ಲಿ ಹಾಡಿಕೊಳ್ಳುವುದು ನಮ್ಮ ಹಕ್ಕು". ಕಪ್ಪೆಗಳು ಕೇವಲ ವರ್ಷದಲ್ಲಿ ನಾಲ್ಕು ತಿಂಗಳು ಮಾತ್ರ ಹಾಡಿಕೊಳ್ಳುತ್ತವೆ ಅದೂ ತಂಪುಹೊತ್ತಿನಲ್ಲಿ.

ಆದರೆ ಮಾನವಜೀವಿ ಮಾತ್ರ ಎಚ್ಚರವಿದ್ದಾಗಲೂ ಹಾಗೂ ನಿದ್ರೆಯಲ್ಲಿದ್ದಾಗಲೂ ಶಬ್ದ ಮಾಡುತ್ತಿರುತ್ತಾನೆ. "ನಾವು ನಿದ್ದೆ ಮಾಡುವಾಗ ನಿಶ್ಶಬ್ದವಾಗಿ ನಿದ್ದೆ ಮಾಡುತ್ತೇವೆ; ನಿಮ್ಮ ಹಾಗೆ ಎಚ್ಚರವಿರಲಿ, ಇಲ್ಲದಿರಲಿ, ಶಬ್ದ ಮಾಡುವುದಿಲ್ಲ." ಇಲ್ಲಿ ಪ್ರಕೃತಿಯಲ್ಲಿನ ಶಬ್ದ ಶಬ್ದಮಾಲಿನ್ಯವಾಗುವುದಿಲ್ಲ. ಆದರೆ ಮಾನವನಿಂದ ಹಾಗೂ ಮಾನವ ನಿರ್ಮಿಸಿದ ಹಲವಾರು ಯಂತ್ರಗಳಿಂದ ಮತ್ತು ಶಬ್ದಮಾಲಿನ್ಯವನ್ನು ಹೆಚ್ಚು ಮಾಡುವ ಪಟಾಕಿ, ಬಾಂಬುಗಳಿಂದ ಹೆಚ್ಚು ಮಾಲಿನ್ಯವಾಗುತ್ತದೆ ಎಂಬುದನ್ನು ಚರ್ಚಿಸಿದ್ದಾರೆ.

ಮಾನವ ನಿರ್ಮಿತ ರೇಡಿಯೋ ಸಂಗೀತ ಮತ್ತು ವಾದ್ಯ ಸಂಗೀತವೂ ಸಹ ಕಪ್ಪೆಗಳಿಗೆ ಕರ್ಕಶವಾಗಿ ಮತ್ತು ಮರ ಬೊಂಬುಗಳಿಂದ ಮಾಡಿದ ವಸ್ತುಗಳಿಂದ ಹೊರಹೊಮ್ಮಿಸುವ ಶಬ್ದವನ್ನು ಇಲ್ಲಿ ವಿಡಂಬನಾತ್ಮಕವಾಗಿ ಚಿತ್ರಿಸಿ ಮಾನವನ ಆಲೋಚನೆಗಳಿಗೆ ಹೊಸ ದಿಕ್ಕನ್ನು ಸೂಚಿಸಿದ್ದಾರೆ.

"ನಾದಬಿಂದು : ಅದು, ಮಾನವಕುಲ ನಮ್ಮ ಮೇಲೆ ನಡೆಸಿದ, ನಡೆಸುತ್ತಿರುವ, ದಬ್ಬಾಳಿಕೆಗೆ, ಅವರ ಸ್ವಾರ್ಥಕ್ಕೆ, ಮಹಾಸಾಕ್ಷಿ, ಅವರ ಕ್ರೌರ್ಯದ ಧ್ವಜ!

ಸಭೆ : ದಿಕ್ಕಾರವಿರಲಿ! ಅನ್ಯಾಯಕ್ಕೆ ಧಿಕ್ಕಾರವಿರಲಿ!

ನಾದಬಿಂದು : ಮಹಾಪ್ರಭುಗಳಿಗೂ ಇದರ ಅರಿವಿಲ್ಲದಿರುವಂತಿದೆ. ನಮ್ಮ ವಯೋವೃದ್ಧ ಮಂತ್ರಿಗಳಿಗೆ ಅದರ ಅನುಭವ ಚೆನ್ನಾಗುಂಟು (ಚರಿತ್ರೆ ಹೇಳುವಂತೆ) ಸುಮಾರು ಮೂರುವರುಷಗಳ ಹಿಂದೆ; ಅಳಿದ ಮಹಾಸ್ವಾಮಿಗಳವರ ಕಾಲ. ಸುಬ್ಬರಾಯನ ಕೆರೆ ನಮ್ಮ ಚಕ್ರಾಧಿಪತ್ಯಕ್ಕೆ ಸೇರಿತ್ತು.

ರಾಮ : (ಥಟ್ಟನೆ ಅರ್ಥವಾಗಿ) ಈ... ಹೌದು (ನಕ್ಕು) ಆ ಕೆರೇಲಿ ಆಗ ನೀರಿತ್ತು...

ನಾದಬಿಂದು : (ಗತಕಾಲದ ವೈಭವವನ್ನು ವರ್ಣಿಸುತ್ತ) ಹುಲುಸಾದ ಹುಲ್ಲುಮರಗಳ ಕಾಡಿನ ನಡುವೆ, ಆ ಸಿಹಿನೀರಿನಲ್ಲಿ ಚೆಲ್ಲಾಟವಾಡುತ್ತ–ಸಿಹಿಯಾದ ದೊಡ್ಡ ಮಾದರಿಯ ಸೊಳ್ಳೆಗಳನ್ನೂ ಬಣ್ಣದ ಬೇಟೆಯನ್ನೂ ಹಿಡಿದು ಮೆಲ್ಲುತ್ತ ಸ್ವಪ್ನದಂತೆ ನಮ್ಮ ಕುಲವಿತ್ತು.

ಮಂತ್ರಿ : (ಗದ್ಗದನಾಗಿ) ಅಂತಹ ರಾಜ್ಯವನ್ನು ಮಣ್ಣುಗೂಡಿಸಿದ ಮಾನವನಿಗಿಂತಲೂ ರಾಕ್ಷಸರುಂಟೆ? ನೆನಸಿಕೊಂಡರೆ ಸ್ವರ್ಗವೇ ಖಿಲವಾದಷ್ಟು ದುಃಖವಾಗುತ್ತದೆ.

ರಾಜ	:	ಆಮೇಲೇನಾಯಿತು? ತೀರ್ಥರೂಪರೊಮ್ಮೆ ಅದರ ಬಗ್ಗೆ ದುಃಖ ಪಟ್ಟಿದ್ದರು. ನನಗೆ ಆಗಿನ್ನೂ ಬಾಲ ಬಿದ್ದಿರಲಿಲ್ಲ – ಬಾಲ್ಯಾವಸ್ಥೆ... ನೀವು ತಿಳಿಸಿ ಹೇಳಿ, ಏನಾಯಿತು?
ನಾದಬಿಂದು	:	ಆಗುವುದೇನು? ಮನುಷ್ಯನ ಸ್ವಾರ್ಥದಿಂದಲೂ, ದೇವತೆಗಳ ಅಸೂಯೆಯಿಂದಲೂ ನಮಗೆ ಆಪತ್ತು ಬಂದಿತ್ತು; ನಮ್ಮ ಆಧಾರವಾಗಿದ್ದ ಜಲರಾಶಿಯನ್ನೂ ಈ ಮಾನವರು ರಕ್ಕಸ ಮಾಯೆಯಿಂದ ಬತ್ತಿಸಿಬಿಟ್ಟರು. ಕಾರಣ ನಾವೇ ಅಂತೆ; ಪಾಪ, ಆ ಸವಿಮೈಯ ಬಡ ಸೊಳ್ಳೆಗಳಂತೆ! ಆ ಬೇಸಗೆಯಲ್ಲಿ ಮಂತ್ರಿವರ್ಯರೊಮ್ಮೆ ನನಗೆ ಹೇಳಿದರು–ಅರ್ಧಕುಲ ಭೂಮಿಯೊಳಗೆ ಬೆಂದು, ಗತರಾಜ್ಯದ ಒಡೆದ ಕನಸಿನಲ್ಲಿ ಬಸವಳಿದು ಹೋಯಿತು. ವಂಶಕ್ಕೇ ಆಪತ್ತಾಗಿ ಹೋಯಿತು... ಅದೋ, ಮಂತ್ರಿಗಳು ಮೂರ್ಛೆಯಾಗುತ್ತಿದ್ದಾರೆ... (ಸಭೆ: ತುಂಬ ಕೋಲಾಹಲ)
ರಾಮ	:	(ಪೆಚ್ಚಾಗಿ) ಇನ್ನೇನಪ್ಪ ಗತಿ, ನನಗೆ? ಈ political crime ಗೆ ನಾನೇ ಹೊಣೆಯೇ (ಕನಿಕರ) ಇದ್ದರೂ, ಅನ್ಯಾಯನಪ್ಪ!"[೧೪]

ಮಾನವ ಮತ್ತು ಪ್ರಕೃತಿಯೊಂದಿಗಿನ ಸೆಣೆಸಾಟದಲ್ಲಿ ಪ್ರಕೃತಿಯಲ್ಲಿ ಒಂದಾದ ನೈಸರ್ಗಿಕ ಸಂಪತ್ತು ಎಂದರೆ ಕೆರೆ ಕಟ್ಟೆಗಳ ಉಳಿವು. ಇಂದು ಕೆರೆಗಳು ಮಾನವನ ಅತಿಯಾಸೆಯಿಂದ ನಿರ್ನಾಮವಾಗುತ್ತಿವೆ. ಅಂತೆಯೇ ಪ್ರಾಕೃತಿಕ ಸಂಪತ್ತೂ ಕೂಡ ಸರ್ವನಾಶವಾಗುತ್ತಿದೆ. ಇದೂ ಒಂದು 'ಪೊಲಿಟಿಕಲ್ ಕ್ರೈಮ್' ಎಂದು ರಾಮಾನುಜನ್ ಅವರು ಹೇಳುವ ಮಾತು ಸತ್ಯವಾಗಿದೆ.

೪.೩.೨. ಗಾನಪ್ರಿಯ

'ಗಾನಪ್ರಿಯ' ನಾಟಕದಲ್ಲಿ ಬ್ರಾಹ್ಮಣ ಮತ್ತು ಬ್ರಹ್ಮರಾಕ್ಷಸರ ನಡುವೆ ಸ್ವಾರ್ಥಕ್ಕಾಗಿ ನಡೆಯುವ ಒಂದು ದುರಾಸೆಯ ವಿಡಂಬನಾತ್ಮಕ ಚಿತ್ರಣವಿದೆ. ಬ್ರಹ್ಮರಾಕ್ಷಸನಿಗೆ ಮುಕ್ತಿ ಕಾಣಿಸವ ನೆಪದಲ್ಲಿ ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುವ ಉದ್ದೇಶದಿಂದ ತನ್ನ ಆಸೆಯ ಸ್ವಾರ್ಥಕ್ಕೆ ಬಳಸಿಕೊಳ್ಳಲು ದೇಶದ ರಾಜಕುಮಾರಿಯನ್ನು ಹಿಡಿದುಕೊಳ್ಳಲು ಹೇಳುತ್ತಾನೆ. ನಂತರ ಬ್ರಹ್ಮರಾಕ್ಷಸನನ್ನು ಬಿಡಿಸಿದ ಕೀರ್ತಿಯನ್ನು ಸಂಪಾದಿಸಿ ರಾಜರಿಂದ ಸಕಲ ಸನ್ಮಾನಗಳನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ಬ್ರಹ್ಮರಾಕ್ಷಸನಿಗೆ ಸಿಗುವ ರಾಜವೈಭೋಗವನ್ನು ತೊರೆದು ಹೋಗಲು ನಿರಾಕರಿಸುತ್ತಾನೆ. ಆಗ ಬ್ರಾಹ್ಮಣನು ಬ್ರಹ್ಮರಾಕ್ಷಸನ ನರಳಿಕೆಗೆ ಕಾರಣವಾಗಿದ್ದ ನಾಗಸ್ವರ ನುಡಿಸುವ ವ್ಯಕ್ತಿಯನ್ನು ಕರೆಸಿ ಮತ್ತೆ ನಾಗಸ್ವರ ನುಡಿಸಲು ಹೇಳುತ್ತಾನೆ. ಆಗ ಬ್ರಹ್ಮರಾಕ್ಷಸ ರಾಜಕುಮಾರಿಯನ್ನು ಬಿಟ್ಟು

ಹೋಗುತ್ತಾನೆ. ರಾಜ ಅವನಿಗೆ ರಾಜಕುಮಾರಿಯನ್ನು ಕೊಟ್ಟು ಮದುವೆ ಮಾಡಲು ಮುಂದಾಗುತ್ತಾನೆ. ಆದರೆ ಬ್ರಾಹ್ಮಣ ಒಪ್ಪುವುದಿಲ್ಲ. ಅದರ ಬದಲಿಗೆ ನಾಗಸ್ವರ ನುಡಿಸುವವನನ್ನು ನನ್ನ ಊಳಿಗದವನನ್ನಾಗಿ ನೇಮಿಸಿಕೊಡಬೇಕೆಂದು ರಾಜನಿಗೆ ತಿಳಿಸುತ್ತಾನೆ. ಅದರಂತೆ ನಾಗಸ್ವರ ನುಡಿಸುವವನನ್ನು ಬ್ರಾಹ್ಮಣನ ಊಳಿಗದವನನ್ನಾಗಿ ನೇಮಿಸಲಾಗುತ್ತದೆ. ನಾಗಸ್ವರ ನುಡಿಸುವವನು ತನ್ನ ಕಲೆಯನ್ನು ಮೆಚ್ಚಿ ಈ ಬ್ರಾಹ್ಮಣ ತನ್ನನ್ನು ಊಳಿಗದವನನ್ನಾಗಿ ನೇಮಿಸಿಕೊಂಡಿದ್ದಾನೆ ಎಂದು ತಿಳಿದು "ನಮ್ಮ ಸಂಗೀತ ಸಾಧನೆ ತಮಗೆ ಪ್ರೀತಿಯಾಯಿತೇ ಬುದ್ಧಿ? ದಿನವೂ ಬಂದು ಬಾರಿಸುತ್ತೇನೆ" ಎನ್ನುತ್ತಾನೆ. ಆದಕ್ಕೆ ಆ ಬ್ರಾಹ್ಮಣನು "ಛೆ, ಛೆ, ಅಪಾರ್ಥ ಮಾಡಿಕೊಳ್ಳಬೇಡ. ನಿನಗೆ ಸಂಬಳ ಕೊಡುವುದು ನಾಗಸ್ವರ ಬಾರಿಸುವುದಕ್ಕಲ್ಲ, ಬಾರಿಸದಿರುವುದಕ್ಕೆ ತಿಳೀತೇ?" ಎನ್ನುತ್ತಾನೆ.

ಪ್ರಪಂಚದಲ್ಲಿ ಕಲೆ ಎಲ್ಲಾ ಬಗೆಯಲ್ಲಿಯೂ ಇರುತ್ತದೆ. ಅಂದರೆ ಒಳ್ಳೆಯದು, ಕೆಟ್ಟದ್ದು ಹೀಗೆ. ಆದರೆ ಅದನ್ನು ನೋಡುವ ಮತ್ತು ಅನುಭವಿಸುವವರ ಮೇಲೆ ಅದು ನಿರ್ಧರಿಸಲ್ಪಡುತ್ತದೆ. ಚೆನ್ನಾಗಿಲ್ಲ ಎಂಬ ಕಾರಣಕ್ಕೆ ಒಂದು ಕಲೆಯನ್ನೇ ಹತ್ತಿಕ್ಕುವಂತೆ ಮಾಡುವುದು ಇಲ್ಲಿ ನಡೆಯುತ್ತದೆ. ಕೆಟ್ಟದ್ದು ಇರುವುದರಿಂದಲೇ ಒಳ್ಳೆಯದಕ್ಕೆ ಬೆಲೆ. ಇಲ್ಲಿ ಕಲೆಯೂ ಕೂಡ ಮನುಷ್ಯನ ದುರಾಸೆಗೆ ಮತ್ತು ಸ್ವಾರ್ಥಕ್ಕೆ ಬಲಿಯಾಗುತ್ತದೆ ಎಂಬುದಕ್ಕೆ ಇದು ನಿದರ್ಶನವಾಗಿದೆ.

ಮೇಲಿನ ಎರಡೂ ನಾಟಕಗಳ ವಸ್ತುವು ಲೇಖಕರಿಗೆ ಜಾನಪದ ಕಥೆಗಳೇ ಆಗಿವೆ. ಇಲ್ಲಿಯೂ ಸಹ ರಾಮಾನುಜನ್ ಅವರು ಜಾನಪದ ಕಥೆಗಳನ್ನೇ ಆಧರಿಸಿ ನಾಟಕ ರಚಿಸಿದ್ದಾರೆ. ಎರಡು ಲೋಕಗಳ ಮುಖಾಮುಖಿಯಲ್ಲಿ ನಾಟಕಗಳು ಲಘುದಾಟಿಯಲ್ಲೇ ಅನೇಕ ಕುತೂಹಲಕಾರಿಯಾದ ಪ್ರಶ್ನೆಗಳನ್ನು ಕೇಳುತ್ತವೆ.

> "ಹಾಸ್ಯ ನಾಟಕವಾಗಿ, ಮಕ್ಕಳ ನಾಟಕವಾಗಿ ಈ ಕೃತಿ ರಂಗದ ಮೇಲೂ ಸಫಲವಾಗಬಲ್ಲುದು. ಪರಿಸರವಾದಿಗಳು ತಮ್ಮದೇ ಆದ ವ್ಯಾಖ್ಯಾನವನ್ನೂ ಧಾರಣ ಮಾಡಿ ಈ ನಾಟಕಗಳನ್ನು ಹಲವು ರೀತಿಗಳಲ್ಲಿ ಬಳಸಿಕೊಳ್ಳಲು ಸಾಧ್ಯವಿದೆ. 'ನಾದಬಿಂದು' ಹಾಗೂ 'ಗಾನಪ್ರಿಯ ಅಥವಾ ಬಡಪಾಯಿ ಬ್ರಹ್ಮರಾಕ್ಷಸ' ಎರಡೂ ನಾಟಕಗಳು ಪಶ್ಚಿಮದ ವಾಸ್ತವವಾದಿ ನಾಟಕಗಳ ಮಾದರಿಗಳಿಗಿಂತ ತುಂಬಾ ಭಿನ್ನವಾದವು"[೧೫]

ಎಂಬ ನಿಲುವನ್ನು ಟಿ.ಪಿ.ಅಶೋಕ ಅವರು ವ್ಯಕ್ತಪಡಿಸಿದ್ದಾರೆ. ಪರಿಸರ, ಮಾನವ ಮತ್ತು ಪ್ರಕೃತಿಯ ನಡುವಿನ ಸಂಬಂಧ, ಸಂಘರ್ಷಗಳನ್ನು ರಾಮಾನುಜನ್ ಅವರು ಈ ನಾಟಕಗಳಲ್ಲಿ ಸಾಂಕೇತಿಕವಾಗಿ ಪರಿಣಾಮಕಾರಿಯಾಗಿ ಹಿಡಿದಿಟ್ಟಿದ್ದಾರೆ.

ಒಟ್ಟಾರೆ ಎ.ಕೆ.ರಾಮಾನುಜನ್ ಅವರು ತಮ್ಮ ಸ್ವತಂತ್ರ ಕೃತಿಗಳಾದ ಕವಿತೆಗಳು, ಕಥೆಗಳು, ಕಾದಂಬರಿ, ನಾಟಕ ಪ್ರಕಾರಗಳಲ್ಲಿ ಕನ್ನಡದ ಚಿಂತನೆಯನ್ನು ಹುಟ್ಟುಹಾಕಿದ್ದಾರೆ. ಇವು ಕನ್ನಡ ಸಂಸ್ಕೃತಿಯ ಜೊತೆ ಅನುಸಂಧಾನಕ್ಕೆ, ಮುಖಾಮುಖಿಗೆ ಎಡೆತಾಕಿವೆ. ಮೇಲ್ನೋಟಕ್ಕೆ ಇದು ಕನ್ನಡದ ನೆಲೆಯಂತೆ ಕಂಡರೂ ಅದನ್ನು ಮೀರಿಯೂ ಭಾರತೀಯ ಹಾಗೂ ಪಾಶ್ಚಾತ್ಯ ನೆಲೆಯವರೆಗೆ ಈ ಬರಹಗಳು ತಮ್ಮ ವ್ಯಾಪ್ತಿಯನ್ನು ಹಾಗೂ ಅನನ್ಯತೆಯನ್ನು ಚಾಚಿಕೊಳ್ಳುತ್ತವೆ.

ಅಡಿಟಿಪ್ಪಣಿ

೧. ಮಧುರೆಯಲ್ಲಿ ಒಂದು ತಲೆ, ಕೀರ್ತಿನಾಥ ಕುರ್ತಕೋಟಿ, ಎ.ಕೆ.ರಾಮಾನುಜನ್ ನೆನಪಿನ ಸಂಪುಟ, ೧೯೯೩ ಸಂ:ಟಿ.ಪಿ.ಅಶೋಕ, ಕರ್ನಾಟಕ ಸಂಘ, ಪುತ್ತೂರು, ಪು. ೧೦೬.

೨. ಎ.ಕೆ.ರಾಮಾನುಜನ್ ಸಮಗ್ರ, ಸಂ:ಡಾ.ರಮಾಕಾಂತ ಜೋಶಿ, ಎಸ್. ದಿವಾಕರ್, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೧, ಪು. ೩೮೨.

೩. ಕನ್ನಡ ಸಣ್ಣ ಕಥೆಗಳು, ಸಂ. ಜಿ.ಎಚ್. ನಾಯಕ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ಹೊಸ ದೆಹಲಿ, ೧೯೯೧ ಪ್ರಸ್ತಾವನೆ ಪು. xvi.

೪. ಎ.ಕೆ.ರಾಮಾನುಜನ್ ಸಮಗ್ರ, ಸಂ:ಡಾ.ರಮಾಕಾಂತ ಜೋಶಿ, ಎಸ್.ದಿವಾಕರ್, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೧, ಪು. ೩೯೮.

೫. ಎ.ಕೆ.ರಾಮಾನುಜನ್ ಸಮಗ್ರ, ಸಂ:ಡಾ.ರಮಾಕಾಂತ ಜೋಶಿ, ಎಸ್.ದಿವಾಕರ್, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೧, ಪು. ೩೯೯.

೬. ಎ.ಕೆ.ರಾಮಾನುಜನ್ ಸಮಗ್ರ, ಸಂ:ಡಾ.ರಮಾಕಾಂತ ಜೋಶಿ, ಎಸ್.ದಿವಾಕರ್, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೧, ಪು. ೪೦೧.

೭. ಎ.ಕೆ.ರಾಮಾನುಜನ್ ಸಮಗ್ರ, ಸಂ:ಡಾ.ರಮಾಕಾಂತ ಜೋಶಿ, ಎಸ್.ದಿವಾಕರ್, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೧, ಪು. ೪೦೩–೪೦೪.

೮. ಪ್ರಸ್ತಾವನೆ, ಎ.ಕೆ.ರಾಮಾನುಜನ್ ಸಮಗ್ರ, ಸಂ:ಡಾ.ರಮಾಕಾಂತ ಜೋಶಿ, ಎಸ್.ದಿವಾಕರ್, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೧, ಪು. xviii.

೯. ಮತ್ತೊಬ್ಬನ ಆತ್ಮಚರಿತ್ರೆ, ಎ.ಕೆ.ರಾಮಾನುಜನ್, ಮನೋಹರ ಗ್ರಂಥಮಾಲಾ, ಧಾರವಾಡ, ೧೯೭೮, ಪು. ೨೪.

೧೦. ಮತ್ತೊಬ್ಬನ ಆತ್ಮಚರಿತ್ರೆ, ಎ.ಕೆ.ರಾಮಾನುಜನ್, ಮನೋಹರ ಗ್ರಂಥಮಾಲಾ, ಧಾರವಾಡ, ೧೯೭೮, ಪು. ೪೦.

೧೧. ಮತ್ತೊಬ್ಬನ ಆತ್ಮಚರಿತ್ರೆ, ಎ.ಕೆ.ರಾಮಾನುಜನ್, ಮನೋಹರ ಗ್ರಂಥಮಾಲಾ, ಧಾರವಾಡ, ೧೯೭೮, ಪು. ೪೨.

೧೨. ಮತ್ತೊಬ್ಬನ ಆತ್ಮಚರಿತ್ರೆ, ಎ.ಕೆ.ರಾಮಾನುಜನ್, ಮನೋಹರ ಗ್ರಂಥಮಾಲಾ, ಧಾರವಾಡ, ೧೯೭೮, ಪು. ೧೧೧–೧೧೨.

೧೩. ಎ.ಕೆ.ರಾಮಾನುಜನ್ ಸಮಗ್ರ, ಸಂ:ಡಾ.ರಮಾಕಾಂತ ಜೋಶಿ, ಎಸ್.ದಿವಾಕರ್, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೧, ಪು. ೪೩೨.

೧೪. ಎ.ಕೆ.ರಾಮಾನುಜನ್ ಸಮಗ್ರ, ಸಂ:ಡಾ.ರಮಾಕಾಂತ ಜೋಶಿ, ಎಸ್.ದಿವಾಕರ್, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೧, ಪು. ೪೩೦–೪೩೧.

೧೫. ಸಂಪಾದಕರ ಮಾತು, ಎ.ಕೆ.ರಾಮಾನುಜನ್ ನೆನಪಿನ ಸಂಪುಟ, ಸಂ.ಟಿ.ಪಿ.ಅಶೋಕ, ಕರ್ನಾಟಕ ಸಂಘ, ಪುತ್ತೂರು, ೧೯೯೩.

ಅಧ್ಯಾಯ : ಐದು

ರಾಮಾನುಜನ್ ಅವರ ಭಾರತೀಯ ಚಿಂತನಾ ಕ್ರಮಗಳು

೫.೧. ಭಾರತೀಯವೆನ್ನುವ ಒಂದು ಚಿಂತನಕ್ರಮ ಇದೆಯೆ? (Is There an Indian Way of Thinking?)

೫.೨. ಕನ್ನಡಿಗಳೇ ಕಿಟಕಿಗಳಾಗಿರುವಲ್ಲಿ ('Where mirrors are windows: towards an anthology of reflections', from the history of religions.')

೫.೩. ಮುನ್ನೂರು ರಾಮಾಯಣಗಳು: ಅನುವಾದದ ಕುರಿತು ಮೂರು ವಿಚಾರಗಳು– ಐದು ಉದಾಹರಣೆಗಳೊಂದಿಗೆ (Three hundred Ramayanas : Five examples and three thoughts and translation)

೫.೪. ಮಹಾಭಾರತದಲ್ಲಿ ಪುನರುಕ್ತಿ (Repetition in the Mahabharatha)

೫.೫. ಅಲ್ಲಮನ ಕವಿತೆ ಯಾಕೆ ಒಗಟಲ್ಲ? (Why an Allama poem is not a riddle)

೫.೬. ಭಕ್ತಿ ವೈವಿಧ್ಯ (Varities of Bhakthi)

೫.೭. ಕನ್ನಡ ಜಾನಪದ : ಎರಡು ಆಯಾಮಗಳು (Two Realms of Kannda Folklore)

೫.೮. ಗಾದೆಗಳು

ಅಧ್ಯಾಯ : ಐದು

ರಾಮಾನುಜನ್ ಅವರ ಭಾರತೀಯ ಚಿಂತನಾ ಕ್ರಮಗಳು

ವಿನಯ ಧಾರವಾಡಕರ್ ಅವರ ಸಂಪಾದಕತ್ವದಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯವು 'The collected essays of A.K.Ramanujan(೧೯೯೯, ೨೦೦೧) ಎಂಬ ಬೃಹತ್ ಕೃತಿಯನ್ನು ಹೊರತಂದಿದೆ. ಇದರಲ್ಲಿ ರಾಮಾನುಜನ್ ಅವರು ಬೇರೆ ಬೇರೆ ಕಾಲಮಾನದಲ್ಲಿ ಇಂಗ್ಲಿಷಿನಲ್ಲಿ ಬರೆದ ಪ್ರಾತಿನಿಧಿಕವಾದ ಮೂವತ್ತು ಪ್ರಬಂಧಗಳಿವೆ. ಈ ಪ್ರಬಂಧಗಳನ್ನು ಸಂಪಾದಕರು ಸಾಹಿತ್ಯ ಮತ್ತು ಸಂಸ್ಕೃತಿ, ಅಭಿಜಾತ ಸಾಹಿತ್ಯ, ಭಕ್ತಿ ಮತ್ತು ಆಧುನಿಕ ಕಾವ್ಯ, ಜಾನಪದ ಎಂಬ ನಾಲ್ಕು ವಿಷಯಗಳಡಿಯಲ್ಲಿ ಶಾಸ್ತ್ರೀಯವಾಗಿ ವಿಂಗಡಿಸಿದ್ದಾರೆ. ಆದರೆ ರಾಮಾನುಜನ್ ಅವರು ಈ ಬಗೆಯ ಬರಹಗಳನ್ನು ಕನ್ನಡದಲ್ಲಿ ಬರೆದದ್ದು ಕಾಣಿಸದು. ಅವರು ಕನ್ನಡದಲ್ಲಿ ಬರೆದಿದ್ದರೆ ಕನ್ನಡದ ಸಾಂಸ್ಕೃತಿಕ ಚಿಂತನೆಗೆ ಇನ್ನೂ ಹೆಚ್ಚು ಲಾಭವಾಗುತ್ತಿತ್ತು. ಆದರೆ ಈಗ ಅವುಗಳನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದ ಮಾಡಿಕೊಂಡೇ ಚರ್ಚಿಸಬೇಕಾದ ಅನಿವಾರ್ಯ ಮತ್ತು ಅಗತ್ಯತೆ ಇದೆ. ಅವುಗಳಲ್ಲಿ ಅವರ ಬಹುಪಾಲು ಬರಹಗಳು ಭಾರತೀಯ ಬಹುಮುಖಿ ಚಿಂತನಾಕ್ರಮನ್ನು ಕುರಿತು ಆಲೋಚಿಸುತ್ತವೆ. ಜೊತೆಗೆ ವಚನ ಸಾಹಿತ್ಯ ಮತ್ತು ಮೌಖಿಕ ಸಾಹಿತ್ಯವನ್ನು ಕುರಿತು ಅಲೋಚಿಸಿ ಬರೆದಿರುವ ಅವರ ಪ್ರಬಂಧಗಳು ಭಾರತೀಯ ಮಟ್ಟದಲ್ಲಿ ಮಾತ್ರವಲ್ಲದೆ, ಜಾಗತಿಕ ಮಟ್ಟದಲ್ಲಿಯೂ ಚರ್ಚೆಗೆ, ಚಿಂತನೆಗೆ ಗ್ರಾಸವಾಗಿವೆ. ಈ ಪ್ರಬಂಧಗಳು ಅವರ ಚಿಂತನೆಯ ಬಹುಮುಖಿ ಸಾಹಿತ್ಯ ಮತ್ತು ಸಂಸ್ಕೃತಿಯ ವಿವಿಧ ಆಯಾಮಗಳನ್ನು ಕುರಿತು ವಿಶ್ಲೇಷಿಸುತ್ತವೆ. ಅವುಗಳ ಚಿಂತನಾಕ್ರಮಗಳ ಆಯಾಮಗಳನ್ನು ಪರಿಶೀಲಿಸುವುದು ಈ ಅಧ್ಯಾಯದ ಮುಖ್ಯ ಉದ್ದೇಶವಾಗಿದೆ.

೨೦ನೇ ಶತಮಾನದ ೫೦-೬೦ರ ದಶಕದಲ್ಲಿ ಭಾರತದಿಂದ ಅಮೆರಿಕಕ್ಕೆ ಹೋದ ರಾಮಾನುಜನ್ ಅವರು ತಮ್ಮ ಪ್ರತಿಭೆ, ಪಾಂಡಿತ್ಯಗಳಿಂದ ಶೀಘ್ರದಲ್ಲಿಯೇ ಪ್ರಾಶ್ಚಾತ್ಯ ಜಗತ್ತಿಗೆ ಪರಿಚಯ ಆದವರು. ಪಾಶ್ಚಾತ್ಯರಲ್ಲಿ ಭಾರತೀಯ ಸಾಹಿತ್ಯವೆಂದರೆ ಸಂಸ್ಕೃತ ಸಾಹಿತ್ಯ ಮಾತ್ರ

ಎಂಬ ತಿಳುವಳಿಕೆ ಇದ್ದ ಸಂದರ್ಭ ಅದು. ಗ್ರೀಕ್, ಲ್ಯಾಟಿನ್ ಜೊತೆ ಸಂಸ್ಕೃತ ಸಾಹಿತ್ಯವನ್ನೂ ಅಭ್ಯಾಸ ಮಾಡುತ್ತಿದ್ದ ಸಂದರ್ಭ ಅದು. ಹಾಗಾಗಿ ಪಾಶ್ಚಾತ್ಯ ವಿದ್ಯಾಂಸರು ಭಾರತೀಯ ಸಾಹಿತ್ಯವೆಂದರೆ ಮತ್ತು ಭಾರತೀಯ ಮೀಮಾಂಸೆ ಎಂದರೆ ಸಂಸ್ಕೃತ ಸಾಹಿತ್ಯ ಮತ್ತು ಸಂಸ್ಕೃತ ಮೀಮಾಂಸೆಯೇ ಎಂದು ತಿಳಿದದ್ದು ಸಹಜವಾಗಿತ್ತು. ಆದರೆ ರಾಮಾನುಜನ್ ಅವರು ಅಮೇರಿಕಕ್ಕೆ ಹೋದ ಸಂದರ್ಭದಿಂದಾಗಿ ಪಾಶ್ಚಾತ್ಯ ಜಗತ್ತಿಗೆ ಭಾರತೀಯ ಪ್ರಾದೇಶಿಕ ಸಾಹಿತ್ಯಗಳಾದ ತಮಿಳು, ಕನ್ನಡ, ತೆಲುಗು, ಹಿಂದಿ, ಬಂಗಾಳಿ ಭಾಷೆಗಳ ಹಾಗೂ ಆ ಸಾಹಿತ್ಯಗಳ ದೇಶೀತನವನ್ನು, ಮಹತ್ವವನ್ನು, ಪ್ರಸ್ತುತತೆಯನ್ನು ಆಧಾರಸಹಿತ ತಿಳಿಸಿಕೊಟ್ಟರು. ಅದುವರೆಗೆ ಸಂಸ್ಕೃತ ಸಾಹಿತ್ಯವೇ ಭಾರತೀಯ ಸಾಹಿತ್ಯವೆಂದು ನಂಬಿದ್ದ ಓರಿಯಂಟಲಿಸ್ಟ್ ವಿದ್ವಾಂಸರ ಕಲ್ಪನೆಯನ್ನು, ರಾಮಾನುಜನ್ ಅವರು ಈ ಬಗೆಯ ಭಾರತದ ಬಹುತ್ವದ ಸಾಹಿತ್ಯವನ್ನು ಪರಿಚಯಿಸುವುದರ ಮೂಲಕ ಅವರ ಚಿಂತನೆಯನ್ನು ಅಲುಗಾಡಿಸಿದರು. ಭಾರತದ ಜೀವನವಿಧಾನ ಮತ್ತು ಬೌದ್ಧಿಕ ಚಿಂತನೆಗಳ ಬಗೆಗೆ ಹಿಂದಿನ ವಿದ್ವಾಂಸರಾರೂ ಕಂಡುಕೊಳ್ಳಲಾಗದ ಸ್ವೋಪಜ್ಞವಾದ ಒಳನೋಟಗಳನ್ನು ರಾಮಾನುಜನ್ ಅವರು ಹೊಸದಾಗಿ ಮಂಡಿಸಿದರು. ಅವರ ಈ ಬಗೆಯ ಕುತೂಹಲಕರವಾದ ಅಧ್ಯಯನವು ಪಾಶ್ಚಾತ್ಯ ವಿದ್ವಾಂಸರಿಗೆ ಬೆರಗನ್ನೂ ಆಶ್ಚರ್ಯವನ್ನೂ ಉಂಟುಮಾಡಿತು.

ಎ. ಕೆ. ರಾಮಾನುಜನ್ ಅವರ ಸಾಹಿತ್ಯದ ವ್ಯಾಪ್ತಿ ಹಾಗೂ ಹರವು ವೈವಿಧ್ಯಮಯ ಹಾಗೂ ವ್ಯಾಪಕವಾದದ್ದು. ಸಾಹಿತಿಯಾಗಿ, ಭಾಷಾವಿಜ್ಞಾನಿಯಾಗಿ, ಜಾನಪದತಜ್ಞರಾಗಿ ಮುಂತಾದ ವಿವಿಧ ನೆಲೆಗಳಲ್ಲಿ ಕೆಲಸ ಮಾಡಿರುವ ಎ.ಕೆ.ಆರ್. ಅವರು ಸಂಶೋಧನಾ ಪ್ರಬಂಧಗಳನ್ನು ಬರೆದಿರುವುದು ಒಂದು ವಿಶೇಷ. ಅವರು ಒಬ್ಬ ಗಂಭೀರ ವಿಚಾರ ಪ್ರಚೋದಕರಾಗಿ, ಹೊಸ ಆವಿಷ್ಕಾರಗಳ ಸ್ವರೂಪದ ಗಹನವಾದ ಪ್ರಬಂಧಕಾರರಾಗಿ, ಜೊತೆಗೆ ಲಘುವಾದ ಹಾಸ್ಯಭರಿತ ಪ್ರಬಂಧಗಳನ್ನೂ ಬರೆಯುವುದರ ಮೂಲಕ ಮೇಧಾವಿ ಎನ್ನಿಸಿಕೊಂಡಿದ್ದಾರೆ. ಇಲ್ಲಿ ಅವರ ಇಂಗ್ಲಿಷ್‌ನಿಂದ ಅನುವಾದಿತ ಕೆಲವು ಪ್ರಬಂಧಗಳನ್ನು ಕುರಿತು ವಿವರಿಸುವ, ವಿಶ್ಲೇಷಿಸುವ ಕೆಲಸವನ್ನು ಮಾಡಲಾಗುತ್ತಿದೆ. ರಾಮಾನುಜನ್ ಅವರು ಆರಂಭದಲ್ಲಿಯೇ 'ಭಾರತೀಯವೆನ್ನುವ ಒಂದು ಚಿಂತನಾಕ್ರಮ ಇದೆಯೇ?' ಎಂಬ ಇಂಗ್ಲಿಷ್ ಲೇಖನದ ಮೂಲಕ ಸಾಹಿತ್ಯ ಮತ್ತು ಭಾರತೀಯ ಸಂಸ್ಕೃತಿಯ ನಡುವಿನ ಪ್ರಶ್ನೆಯನ್ನು ಎತ್ತಿದ್ದಾರೆ.

ಇಲ್ಲಿ ಮೊದಲಿಗೆ ರಾಮಾನುಜನ್ ಅವರ "ಭಾರತೀಯವೆನ್ನುವ ಒಂದು ಚಿಂತನಕ್ರಮ ಇದೆಯೇ?" ಮತ್ತು "ಕಿಟಕಿಗಳು ಕನ್ನಡಿಗಳೂ ಆದರೆ: ಪ್ರತಿಬಿಂಬಗಳ ಒಂದು ಸಂಕಲನದ ಪ್ರಯತ್ನ" ಎಂಬ ಎರಡು ಪ್ರಬಂಧಗಳನ್ನು ಚರ್ಚೆಗೆ ಎತ್ತಿಕೊಳ್ಳಲಾಗಿದೆ. ಪಾಶ್ಚಾತ್ಯರಿಗೆ ಭಾರತೀಯ ಚಿಂತನೆ ಎನ್ನುವುದು ಕೃತಕವಾಗಿ, ಅಸಂಬದ್ಧವಾಗಿ, ಅತಾರ್ಕಿಕವಾಗಿ ಕಾಣಲು ಮುಖ್ಯ ಕಾರಣ ಪಾಶ್ಚಾತ್ಯರ ಪೂರ್ವಗ್ರಹವೇ ಆಗಿರುತ್ತದೆ. ಅವರ ಆ ಪೂರ್ವಗ್ರವನ್ನು ಬದಲಾಯಿಸುವುದು

ಹೇಗೆ ಎಂಬ ಪ್ರಶ್ನೆಯನ್ನು ರಾಮಾನುಜನ್ ಅವರು ಕೇಳಿಕೊಳ್ಳುತ್ತಾರೆ. ಅವರ ಪ್ರಕಾರ ಭಾರತೀಯರ ಮತ್ತು ಪಾಶ್ಚಾತ್ಯರ ಚಿಂತನೆಗಳ ನೆಲೆ ತಾತ್ವಿಕವಾಗಿ ಬೇರೆ ಬೇರೆ. ಪಾಶ್ಚಾತ್ಯ ವಿದ್ವಾಂಸರು ವಿವರಿಸುವಂತೆ ಭಾರತೀಯರ ಚಿಂತನೆಯಲ್ಲಿ ಸಾರ್ವಕಾಲಿಕತೆಯ ಕಲ್ಪನೆಯಿಲ್ಲ. ಅವರದು ಸಂದರ್ಭ ಚಿಂತನಾಕ್ರಮ ಎಂದು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಪ್ರತಿಯಾಗಿ ಪಾಶ್ಚಾತ್ಯರದು ಸಂದರ್ಭಮುಕ್ತ ಚಿಂತನೆಯಾಗಿರುತ್ತದೆ. ಈ ಬಗೆಯ ಚಿಂತನೆಗಳಿಗೆ ಆಯಾ ದೇಶ, ಕಾಲ, ಧರ್ಮ, ಸಾಹಿತ್ಯ, ತತ್ವಜ್ಞಾನ ಮತ್ತು ಸಂಸ್ಕೃತಿಯೇ ಕಾರಣವಾಗಿರುತ್ತವೆ.

ಆದರೆ ಕಾಲ ಬದಲಾವಣೆಯಲ್ಲಿ ಆಧುನೀಕರಣದಿಂದಾಗಿ ಭಾರತದಲ್ಲಿ ಕೂಡ ಈ ಬಗೆಯ ಸಂದರ್ಭಸ್ಪಂದಿ ಚಿಂತನೆಯು ಸಂದರ್ಭಮುಕ್ತ ಚಿಂತನೆಯತ್ತ ಹೊರಳುತ್ತಿದೆ. ಇದರಿಂದಾಗಿ ಅನೇಕ ಸಾಂಸ್ಕೃತಿಕ ಗೊಂದಲಗಳು ಉಂಟಾಗುವುದು ಸಹಜವಾಗಿದೆ. ಭಾರತೀಯ ಚಿಂತನಾಕ್ರಮ ಎನ್ನುವುದು ಏಕಾಕೃತಿಯಲ್ಲ. ಅದು ಭಾಷಿಕವಾಗಿ, ಸಾಹಿತ್ಯಿಕವಾಗಿ, ಜನಾಂಗಿಕವಾಗಿ, ಸಾಮುದಾಯಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬಹುತ್ವವನ್ನು ಒಳಗೊಂಡದ್ದು. ಈ ವಿಶೇಷತೆಯೇ ಭಾರತೀಯತೆಯ ವೈಶಿಷ್ಟ್ಯ. ಇದನ್ನು ರಾಮಾನುಜನ್ ಅವರು ತಮ್ಮ ಅನೇಕ ಪ್ರಬಂಧಗಳ ಮೂಲಕ ಆಧಾರಗಳ ಸಹಿತವಾಗಿ ಪಾಶ್ಚಾತ್ಯ ಜಗತ್ತಿಗೆ ಪರಿಚಯಿಸಿದರು. ಅವರ ದೂರದೃಷ್ಟಿ ಮುಖ್ಯವಾಗಿ ಕನ್ನಡದ ಕಡೆಗೆ ಅಥವಾ ತಮಿಳಿನ ಕಡೆಗೆ ಅಥವಾ ಭಾರತದ ಕಡೆಗೆ ಈ ಬಗೆಯ ಭಾರತೀಯತೆಯನ್ನು ಪರಿಚಯಿಸುವುದಕ್ಕಿಂತ ಬದಲಾಗಿ, ಮುಖ್ಯವಾಗಿ ಪಾಶ್ಚಾತ್ಯರಿಗೆ ಪರಿಚಯಿಸಬೇಕಾದಂತಹ ಅನಿವಾರ್ಯತೆ ಮತ್ತು ಸಂದರ್ಭಕ್ಕೆ ಇದಿರಾಗಿದ್ದರು.

೫.೧. ಭಾರತೀಯವೆನ್ನುವ ಒಂದು ಚಿಂತನಾಕ್ರಮ ಇದೆಯೆ?(Is There an Indian Way of Thinking?)

ಪ್ರಸ್ತುತ ಲೇಖನದಲ್ಲಿ ಭಾರತೀಯ ಚಿಂತನಾಕ್ರಮ ಎನ್ನುವ ಪರಿಕಲ್ಪನೆಯನ್ನು ನಾಲ್ಕು ನಿಟ್ಟಿನಿಂದ ರಾಮಾನುಜನ್ ಅವರು ಚರ್ಚಿಸುತ್ತಾರೆ. ಅಂದರೆ ಒಂದು ರೀತಿಯ ವಿಜ್ಞಾನದ ಪ್ರಮೇಯಗಳಂತೆ ಒಂದೊಂದು ಪದಕ್ಕೂ ಒತ್ತುಕೊಟ್ಟರೆ ಬರುವ ಉತ್ತರ ಏನು ಎಂಬುದನ್ನು ಮತ್ತು ಒಂದೊಂದು ಪ್ರಮೇಯವನ್ನೂ ಬಿಡಿಸಿ ಬಿಡಿಸಿ ನೋಡುವ ಸೂಕ್ಷ್ಮದೃಷ್ಟಿಯನ್ನು ಈ ಲೇಖನದಲ್ಲಿ ಕಾಣಬಹುದಾಗಿದೆ.

"ಭಾರತೀಯವೆನ್ನುವ ಒಂದು ಚಿಂತನಾಕ್ರಮ ಇದೆಯೆ?" ಎನ್ನುವ ಪ್ರಶ್ನೆಯಲ್ಲಿ–

> 'ಇದೆಯೆ' ಎನ್ನುವ ಪದಕ್ಕೆ ಒತ್ತುಕೊಟ್ಟರೆ "ಭಾರತೀಯವೆನ್ನುವ ಒಂದು ಚಿಂತನಾಕ್ರಮವು ಹಿಂದೆ ಇತ್ತು. ಈಗ ಉಳಿದಿಲ್ಲ; ಭಾರತೀಯ ಚಿಂತನಾಕ್ರಮವನ್ನು ಅರಿಯಬೇಕೆಂದಿದ್ದರೆ ಆಧುನಿಕ ಕಾಲದ ನಗರವಾಸಿ ಭಾರತೀಯರನ್ನು ಕೇಳಬೇಡಿ; ಹಳೆಯ 'ಪಂಡಿತ'ರು, ವೈದ್ಯರು ಮುಂತಾದವರ ಹತ್ತಿರ ಹೋಗಿ ಇಲ್ಲವೆ, ಪುರಾತನ

ಗ್ರಂಥಗಳಿಗೆ ಹೋಗಿ ನೋಡಿ ಅಥವಾ–ಭಾರತವು ಯಾವತ್ತೂ ಬದಲಾಗುವುದಿಲ್ಲ; ಆಧುನಿಕವೆನ್ನುವ ಹೊರಸಿಪ್ಪೆಯನ್ನು ಸುಲಿದರೆ ಭಾರತೀಯರೆಲ್ಲರೂ ಈಗಲೂ ವೇದದ ಥರವೇ ಯೋಚನೆ ಮಾಡುತ್ತಾರೆ" – ಇತ್ಯಾದಿ.

'ಒಂದು' ಎನ್ನುವ ಪದಕ್ಕೆ ಒತ್ತುಕೊಟ್ಟು ವಿಶ್ಲೇಷಿಸಿದರೆ: "ಭಾರತೀಯ ಚಿಂತನಾಕ್ರಮವು ಒಂದೇ ಅಂತ ಇಲ್ಲ, ಅದು ಅನೇಕವಾಗಿದೆ; ಮಹಾಸಂಪ್ರದಾಯಗಳು ಮತ್ತು ಕಿರುಸಂಪ್ರದಾಯಗಳು, ಪ್ರಾಚೀನ ಮತ್ತು ನವೀನ, ಗ್ರಾಮೀಣ ಮತ್ತು ನಾಗರಿಕ, ಮಾರ್ಗ ಮತ್ತು ಜಾನಪದ ಇತ್ಯಾದಿ ಬಗೆಬಗೆಯ ಚಿಂತನಾಕ್ರಮಗಳು ಇಲ್ಲಿವೆ. ಪ್ರತಿಯೊಂದು ಭಾಷೆ, ಜಾತಿ, ಪ್ರದೇಶವೂ ತನ್ನದೇ ಆದ ಸ್ವಕೀಯ ಲೋಕದೃಷ್ಟಿಯನ್ನು ಸೃಷ್ಟಿಸಿಟ್ಟುಕೊಂಡಿದೆ."

ಅಥವಾ–

ಇಂಥ ಎಲ್ಲಾ ಭಿನ್ನತೆಗಳ ನಡುವೆ ನಿಜವಾಗಿ, ಒಂದು – ಏಕೈಕ – ದೃಷ್ಟಿಕೇಂದ್ರವು ಸ್ಥಾಪಿತವಾಗಿದೆ ಮತ್ತು ಇಲ್ಲಿನ ವಿವಿಧ ವ್ಯವಸ್ಥೆಗಳೆಲ್ಲವೂ ಒಂದೇ ಮಹಾವ್ಯವಸ್ಥೆಯಲ್ಲಿ ಅಳವಟ್ಟುಕೊಂಡಿವೆ(ವೈದಿಕರು ಎಲ್ಲಾ ಭಾರತೀಯ ಚಿಂತನಾಕ್ರಮಗಳಲ್ಲೂ ವೇದಮಾದರಿಯನ್ನೇ ಕಾಣುತ್ತಾರೆ. ನೆಹರು ಅವರು 'ವಿವಿಧತೆಯಲ್ಲಿ ಏಕತೆ' ಎನ್ನುವ ಒಂದು ಭಾರತೀಯ ಘೋಷವಾಕ್ಯವನ್ನು ಸೃಷ್ಟಿಸಿಕೊಟ್ಟರು. ನಮ್ಮ ರಾಷ್ಟ್ರ ಸಾಹಿತ್ಯ ಅಕಾದೆಮಿಯು, 'ಭಾರತೀಯ ಸಾಹಿತ್ಯವೆಂದರೆ ಹಲವು ಭಾಷೆಗಳಲ್ಲಿ ರಚಿತವಾಗಿರುವ ಏಕವಾಙ್ಮಯ' ಅಂತ ಸಾರಿಕೊಂಡಿದೆ).

'ಭಾರತೀಯ' ಎನ್ನುವ ಪದಕ್ಕೆ ಒತ್ತು ಕೊಟ್ಟು ಉತ್ತರಗಳನ್ನು ಕಂಡುಹಿಡಿಯಲು ಹೋದರೆ: ಇಂಡಿಯಾದಲ್ಲಿ ನಾವು ಕಾಣುತ್ತಿರುವುದು, ಇದೊಂದು ಇಲ್ಲಿನದೇ ಅನನ್ಯ ವೈಶಿಷ್ಟ್ಯವೆನ್ನುವುದಲ್ಲ: ಇದೇನಿದ್ದರೂ ಔದ್ಯೋಗಿಕಪೂರ್ವ, ಮುದ್ರಣಪೂರ್ವ, ಮುಖಾಮುಖಿ ವ್ಯವಹಾರದ, ಪಾಳೇಗಾರಿಕೆ–ವ್ಯವಸಾಯ ಸಂಸ್ಕೃತಿಯ ಸ್ಥಿತಿ (ಮಾರ್ಕ್ಸ್‌ವಾದಿಗಳು, ಫ್ರಾಯ್ಡ್‌ವಾದಿಗಳು, ಮೆಕ್‌ಲುಹಾನ್ ಮಾರ್ಗದ ಚಿಂತಕರು ಮುಂತಾಗಿ, ಒಂದೊಂದು ತಾತ್ವಿಕಪಂಥವೂ ತನ್ನ ತನ್ನ ಸಮಾಜ ವಿಕಾಸಶಾಸ್ತ್ರವನ್ನನುಸರಿಸಿ ಈ ಭಾರತೀಯ ಸಂಸ್ಕೃತಿ ಸ್ಥಿತಿಗೆ ತನ್ನ ತನ್ನ ಹೆಸರು ಕೊಟ್ಟುಕೊಂಡಿದೆ. ಒಟ್ಟಿನಲ್ಲಿ ಆ ಎಲ್ಲರಿಗೂ ಭಾರತವೆನ್ನುವುದು ಸಮಾಜವಿಕಾಸದ ಒಂದು ವಿಶಿಷ್ಟ ಹಂತಕ್ಕೆ ಮಾದರಿಯಾಗಿದೆ, ಅಷ್ಟೇ.).

ಅಥವಾ – ಕೆಲವರು ಭಾರತೀಯ ಕ್ರಮವೆನ್ನುವುದರ ಅನನ್ಯತೆಯನ್ನು, ವಿಶಿಷ್ಟತೆಯನ್ನು ಬಲವಾಗಿ ಪ್ರತಿಪಾದಿಸುತ್ತಾರೆ, ವಾದಿಸುತ್ತಾರೆ(ಅಂಥವರು– ಈ ಭಾರತವು ತನಗೆ ಎದುರಾಗುವ ಎಲ್ಲವನ್ನೂ, ಅದರಲ್ಲೂ ಮುಖ್ಯವಾಗಿ ತನ್ನ ಸ್ಪರ್ಧಿಗಳನ್ನು, ವೈರಿಗಳನ್ನು, ತನ್ನೊಳಕ್ಕೆ ಸೆಳೆದು ಅರಗಿಸಿಕೊಂಡು ಕಡೆಗೆ ಅವೆಲ್ಲಾ ತಾನೇ ಎನ್ನುವಂತೆ

ಮೈಗೂಡಿಸಿಕೊಂಡುಬಿಡುತ್ತವೆ ಎಂಬುದನ್ನು ಹೀಗೆ ವಿವರಿಸಿ ಹೇಳುತ್ತಾರೆ: ಭಾರತದಲ್ಲಿ ಇಂಡೋ-ಯುರೋಪಿಯನ್ನರ ಗತಿಯನ್ನು ನೋಡಿ; ಅವರ ಭಾಷೆಯಲ್ಲಿ ಇಲ್ಲಿನ ಭಾಷಾವರ್ಗದ ಪೂರ್ವಾನ್ವಯ ಪ್ರಯೋಗಗಳೂ, ನಾಮಸಮಾಸಗಳೂ ಹೊಕ್ಕು ಬೆರೆತು ಅವರ ಭಾಷೆಯೇ ಸಂಕರಗೊಂಡು ಬಿಟ್ಟಿತು. ಹೀಗೆ ಅವರ ನರಶಕ್ತಿಯೂ ದುರ್ಬಲಗೊಂಡು ಹೋಯಿತು(ಇಂಥ ಭಾರತೀಯ ಇತಿಹಾಸದ ಸರಣಿಯಲ್ಲಿ ಈಚಿನ ಉದಾಹರಣೆಯು ಬ್ರಿಟೀಷರದ್ದು ಎನ್ನುತ್ತಾರೆ ನೀರದ ಚೌದುರಿ). ಇಲ್ಲಿ ಬೌದ್ಧಧರ್ಮಕ್ಕೆ, ಇಸ್ಲಾಮ್‌ಗೆ, ಫಾರ್ಸಿಗಳಿಗೆ ಏನಾಯಿತು, ನೋಡಿ. ಈ 'ಭಾರತೀಯ' ಎನ್ನವುದು, ಈ ಉಪಖಂಡವನ್ನು ಯಾವಾವುವು ಪ್ರವೇಶಿಸುತ್ತವೋ ಅವೆಲ್ಲವನ್ನೂ ತನ್ನ ಎರಕವಾಗಿಸಿ ತನ್ನದೇ ಟಂಕೆಯೊತ್ತಿಬಿಡುತ್ತದೆ. ಇದರಿಂದ ಯಾರೂ ತಪ್ಪಿಸಿಕೊಳ್ಳಲಾರರು ಮತ್ತು ಇದು, ನಮ್ಮೆಲ್ಲರನ್ನೂ ಕೂಡಾ ಮಿಕ್ಕಿರುವಂಥದು.).

ನಾಲ್ಕನೆಯ ಪ್ರಶ್ನೆಗೆ(ಚಿಂತನಾಕ್ರಮ ಎಂಬ ಪದದ ಮೇಲೆ ಒತ್ತು) – ಭಾರತೀಯರಿಗೆ 'ಚಿಂತನೆ' ಎಂಬುದಿದೆಯೆ ಎಂಬ ಪ್ರತಿಪ್ರಶ್ನೆಯೇ ಹುಟ್ಟಿಕೊಳ್ಳಬಹುದು; ಪಶ್ಚಿಮವಿದೆಯಲ್ಲ, ಅದು ವಾಸ್ತವವಾದಿ, ಬುಧ್ಧಿವಾದಿ; ಭಾರತೀಯರಿಗಾದರೋ 'ತತ್ತ್ವಶಾಸ್ತ್ರ'ವೆನ್ನುವುದೂ ಇಲ್ಲ, ಇರುವುದು 'ಧರ್ಮ' ಮಾತ್ರವೇ; ಇವರಲ್ಲಿ ಜೀವನೋಪಯುಕ್ತ ವಿಜ್ಞಾನಗಳಿಲ್ಲ, ಮನಃಶಾಸ್ತ್ರವೆಂಬುದು ಕೂಡಾ ಇಲ್ಲ; ಭಾರತದಲ್ಲಿ 'ವಸ್ತು'ವು 'ಚೇತನ'ಕ್ಕೆ ಅಡಿಯಾಳು, ಬೌದ್ಧಿಕ ಚಿಂತನೆಯು ಭಾವಕ್ಕೆ ಮತ್ತು ಅಂತಃಪ್ರೇರಣೆಗೆ ಅಡಿಯಾಳು. ಇದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರಾದರೂ ಇದಕ್ಕೆ ಪರವಾಗಿಯೂ, ವಿರುದ್ಧವಾಗಿಯೂ ವಾದವಿವಾದ ನಡೆಸಲು ಕೂಡಾ ಸಾಧ್ಯವಿದೆ. ಭಾರತದ ಅಬೌದ್ಧಿಕತೆಯನ್ನು ಕೆಲವರು ಶೋಚನೀಯವೆನ್ನುತ್ತಾರೆ, ಕೆಲವರು ಅದನ್ನು ವೈಭವಿಸುತ್ತಾರೆ... ಹೀಗೆ ಕೊನೆಯಿಲ್ಲದೆ ಮುಂದುವರಿದುಕೊಳ್ಳುತ್ತ ಹೋಗಬಹುದು.

ನಾವು-ನಿಶ್ಚಿತವಾಗಿ, ನಾನು- ಮೇಲಿನ ಬೇರೆ ಬೇರೆ ವಾದವಿವಾದಗಳಲ್ಲಿ ಒಂದೊಂದು ಕಾಲಕ್ಕೆ ಸಂದರ್ಭಕ್ಕೆ ಒಂದೊಂದನ್ನು ಒಪ್ಪಿಕೊಳ್ಳುತ್ತ ಬಂದಿದ್ದೇವೆ. ಈ ಪ್ರಶ್ನೆಗಳಿಗೂ, ಉತ್ತರಗಳಿಗೂ ಅಂತ್ಯವೇ ಇಲ್ಲವೆನ್ನಬೇಕು."[೧]

'ಭಾರತೀಯ ವಿಚಾರಧಾರೆ ಎಂಬುದಿದೆಯೇ?' ಎನ್ನುವ ಶೀರ್ಷಿಕೆಯೇ ಅನನ್ಯವಾದದ್ದು. ಸುಮಾರು ೨೮ ಪುಟಗಳ ಈ ಪ್ರಬಂಧವು ಸಂಪೂರ್ಣವಾಗಿ ಅಕಾಡೆಮಿಕ್ ಅಗಿದೆ. ಒಟ್ಟು ಆರು ಭಾಗಗಳಲ್ಲಿ ಇದನ್ನು ಲೇಖಕರು ಮಥಿಸಿದ್ದಾರೆ. ಭಾರತೀಯ ಚಿಂತನಾಕ್ರಮ ಎನ್ನುವುದು ವಿಶ್ವದ ವಿವಿಧ ದೇಶಗಳ ಚಿಂತನಾಕ್ರಮಗಳಿಗಿಂತ ಭಿನ್ನವಾದ, ಪ್ರತ್ಯೇಕವಾದ, ಸ್ವತಂತ್ರವಾದ, ಸ್ವೋಪಜ್ಞತೆಯಿಂದ ಕೂಡಿದ ಚಿಂತನಾಕ್ರಮ ಎನ್ನುವುದನ್ನು ಈ ಪ್ರಬಂಧದಲ್ಲಿ ರಾಮಾನುಜನ್ ಅವರು ನಿರೂಪಿಸಿರುತ್ತಾರೆ. ಭಾರತಿಯಾ ಚಿಂತನಾಕ್ರಮ ಎನ್ನುವುದು ಒಂದಲ್ಲ ಹಲವಾರು. ಮಹಾಪರಂಪರೆ, ಕಿರು ಪರಂಪರೆ, ಹಳ್ಳಿಗಾಡಿನ ಚಿಂತನೆ, ನಗರಗಳ ಚಿಂತನೆ, ಕ್ಲಾಸಿಕಲ್

ಚಿಂತನೆ, ಜಾನಪದ ಚಿಂತನೆ, ವಿವಿಧ ಧರ್ಮ, ಭಾಷೆ, ಜಾತಿಗಳ ಚಿಂತನೆ ಇವೆಲ್ಲಾ ಮೇಲ್ನೋಟಕ್ಕೆ ವಿವಿಧವಾಗಿದ್ದರೂ ಆಳದಲ್ಲಿ ಏಕಸೂತ್ರತೆ ಇದೆ. ವೈವಿಧ್ಯದಲ್ಲಿ ಏಕತೆ ತತ್ವ ಇದು.

'ಭಾರತೀಯ ಚಿಂತನೆ ಪ್ರಾಚೀನವಾದದ್ದೋ? ಆಧುನಿಕವಾದದ್ದೋ?' ಎನ್ನುವ ಜಿಜ್ಞಾಸೆಯನ್ನು ರಾಮಾನುಜನ್ ಮಾಡಿದ್ದಾರೆ. ನಾವು ಯಾವುದನ್ನು ಭಾರತೀಯ ವಿಚಾರಧಾರೆ ಅಥವಾ ಭಾರತೀಯ ಚಿಂತನಾಕ್ರಮ ಎನ್ನುತ್ತೇವೋ ಅದು ಕೇವಲ ಭಾರತಕ್ಕೆ ಸೀಮಿತವಾದದ್ದಲ್ಲ. ಈ ಬಗೆಯ ಪರಿಕಲ್ಪನೆಗಳು ವಿಶ್ವದ ವಿವಿಧ ದೇಶಗಳಲ್ಲಿ ಇವೆ ಎನ್ನುವುದು ರಾಮಾನುಜನ್ ಅವರ ಗ್ರಹಿಕೆ. ನಂತರದ ಹಂತದಲ್ಲಿ 'ಭಾರತೀಯ ಚಿಂತನೆಯಲ್ಲಿ ಧರ್ಮವಿದೆ, ತತ್ವಜ್ಞಾನವಿಲ್ಲ, ವಿಜ್ಞಾನ, ಮನಃಶಾಸ್ತ್ರಗಳಿಲ್ಲ' ಎಂಬುದು. ಇದನ್ನು ಕುರಿತು ಪರ-ವಿರೋಧದ ಚರ್ಚೆಗಳು ಈಗಲೂ ನಡೆಯುತ್ತಿದೆ. ಪ್ರಾಚೀನ ಭಾರತೀಯ ಚಿಂತನೆಗಳಲ್ಲಿ ಕಾವ್ಯ, ಪುರಾಣ, ಶಾಸ್ತ್ರಗಳೆಂಬ ಮೂರು ಅಂಶಗಳಿವೆ; ಶಾಸ್ತ್ರ ಪ್ರಭುಸಂಹಿತ, ವಿಧಿನಿಷೇಧಗಳನ್ನು ಹೇರುತ್ತವೆ. ಪುರಾಣಗಳು ಮಿತ್ರಸಂಹಿತ 'ಗೆಳೆಯನ ಹಾಗೆ ಸಮಾನ ಮನಸ್ಕತೆಯ ಸ್ವರೂಪ ಅದರದ್ದು. ಆದರೆ ಕಾವ್ಯವು ಕಾಂತಾಸಂಹಿತ' ಮನದನ್ನೆಯೊಬ್ಬಳು ಪ್ರಿಯಕರನಿಗೆ ಆತ್ಮೀಯವಾಗಿ ಅರ್ಪಿಸಿಕೊಳ್ಳುವ ಸ್ವರೂಪವನ್ನು ಪಡೆದುಕೊಂಡಿರುತ್ತದೆ. ಇದು ಭಾರತೀಯ ಚಿಂತನಾಕ್ರಮದ ವೈವಿಧ್ಯತೆಗೆ ಪ್ರತೀಕ.

ಭಾರತೀಯ ಮಹಾಪರಂಪರೆಯ ಸೌಧವು ಜನಸಾಮಾನ್ಯರ ನೆಲೆಯ ಜಾನಪದದ ಇಟ್ಟಿಗೆಗಳ ಮೇಲೆ ನಿಂತಿದೆ. ಆದ್ದರಿಂದಲೇ ಇಂತಹ ಚಿಂತನಾಕ್ರಮಗಳು ಎಷ್ಟೇ ಪ್ರಾಚೀನವಾದರೂ ಅತ್ಯಂತ ಆಧುನಿಕವಾಗಿಯೂ ಇರುತ್ತವೆ. ಉದಾಹರಣೆಗೆ ವೈದಿಕರಲ್ಲಿ ಬರುವ ಯಜ್ಞದ ಪರಿಕಲ್ಪನೆ. ಇನ್ನು ಹಲವಾರು ವಿಚಾರಗಳನ್ನು ಕುರಿತ ವಿಶ್ಲೇಷಣೆಗಳಿಗೆ ದೇಶ ಮತ್ತು ಕಾಲ(Space & Time) ಎನ್ನುವ ಭಾರತೀಯ ಪರಿಕಲ್ಪನೆ ಅಚ್ಚರಿಯನ್ನು ಮೂಡಿಸುವಂತಹದ್ದು. ಕಾಲದ ಪರಿಕಲ್ಪನೆಯಲ್ಲಿ ರಾಹುಕಾಲ ಇತ್ಯಾದಿ, ಕಲಿಯುಗ ಇತ್ಯಾದಿ, ವರ್ಷ, ತಿಂಗಳು, ಗಂಟೆ, ಇತ್ಯಾದಿ ಒಳಪರಿಕಲ್ಪನೆಗಳನ್ನು ಗಮನಿಸಬಹುದು. ಭಾರತೀಯ ಕಲ್ಪನೆಯಲ್ಲಿ ಸರ್ವ ಸಮಾನತಾ ಹಾಗೂ ಪ್ರಜಾಪ್ರಭುತ್ವಾತ್ಮಕ ಎನ್ನುವ ಪರಿಕಲ್ಪನೆಗಳು ಆದರ್ಶವಾಗಿವೆ. ಇನ್ನು ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಪರಿಕಲ್ಪನೆಗಳು ಬೇರೆ ಇವೆ. ಇಂಡಿಯಾದ ಕಲ್ಪನೆಗಳಲ್ಲಿ ಭಕ್ತಿಪಂಥದವರು ಪ್ರತಿಪಾದಿಸಿದ ಭಕ್ತಿ ಒಂದು ಪ್ರಮುಖ ಪರಿಕಲ್ಪನೆ. ಮೇಲಿನ ಹಲವಾರು ಸಂಕೀರ್ಣ ವಿಚಾರಧಾರೆಗಳನ್ನು ವಿಶ್ಲೇಷಿಸಿರುವ ರಾಮಾನುಜನ್ ಅವರ ಈ ಪ್ರಬಂಧ ಭಾರತೀಯ ಜಾನಪದ ವಿಚಾರಧಾರೆಯಂತೆ ಬಹುಮುಖಿಯಾದದ್ದು.

ಇಂಥದೊಂದು ಮಹತ್ತರವಾದ ಮತ್ತು ಚಿಂತನಾಶೀಲವಾದ ಪ್ರಬಂಧವನ್ನು ಬರೆಯಲು ತನ್ನ ತಂದೆಯ ವ್ಯಕ್ತಿತ್ವವೇ ಕಾರಣ ಎಂಬ ಮಾತನ್ನು ಲೇಖಕರು ಹೇಳುತ್ತಾರೆ. ತನ್ನ

ತಂದೆಯಲ್ಲಿದ್ದ ಸಂಗತ ಮತ್ತು ಅಸಂಗತ ವ್ಯಕ್ತಿತ್ವಗಳು ಹಾಗೂ ಸಾಂಪ್ರದಾಯಿಕತೆಯ ಒಳಗೇ ಇದ್ದು ಆಧುನಿಕತೆಗೆ ತೆರೆದುಕೊಳ್ಳುವ ಮನಸ್ಸು ಹಾಗೂ ಅವುಗಳ ಬಗ್ಗೆ ಇದ್ದಂತಹ ಹೊಂದಾಣಿಕೆ ಮನೋಭಾವನೆ ಇವರ ಈ ಪ್ರಬಂಧಕ್ಕೆ ಪ್ರೇರಣೆಯಾದುದರಿಂದ ಈ ಪ್ರಬಂಧವನ್ನು ಅವರು ತಮ್ಮ ತಂದೆಗೇ ಅರ್ಪಿಸಿದ್ದಾರೆ. ಸಂಸ್ಕೃತ, ಗಣಿತ, ಖಗೋಳಶಾಸ್ತ್ರ, ಜ್ಯೋತಿಷ್ಯಶಾಸ್ತ್ರ ಹೀಗೆ ಹಲವಾರು ವಿಷಯಗಳ ಬಗ್ಗೆ ಮಾತನಾಡುವ ತಂದೆ ಬರ್ಟ್ರಂಡ್ ರಸೆಲ್ ಬಗ್ಗೆ ಮತ್ತು ಇಂಗರ್‌ಸಾಲ್ ಬಗ್ಗೆ ಕೂಡ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರು. ಈ ವಿಚಾರದ ಬಗ್ಗೆ ತಂದೆಯನ್ನು ಪ್ರಶ್ನಿಸಿದಾಗ "ಗೀತೆಯೆನ್ನುವುದು ನಮ್ಮ ಶುಚೀಕರಣದ ಒಂದು ಭಾಗ; ಇನ್ನು, ನಮ್ಮ ಮಿದುಳಿನಲ್ಲಿ ಎರಡು ಹೋಳುಗಳಿವೆ, ಗೊತ್ತಿಲ್ಲವೇನು?" ಎಂದು ಹೇಳಿದ್ದರು ಎಂದು ಇಲ್ಲಿ ರಾಮಾನುಜನ್ ಪ್ರಸ್ತಾಪಿಸುತ್ತಾರೆ.

ಹೀಗೆ ವಿಶ್ವದ ಮಹಾನ್ ಚಿಂತಕರಾದ ಎಡ್ವರ್ಡ್ ಸೈದ್, ನ್ಯೂಟನ್, ಕಿಸ್ಸಿಂಗರ್, ಫಾಸ್ಟರ್, ಜಿಮ್ಮರ್, ಮ್ಯಾಕ್ಸ್‌ಮುಲ್ಲರ್, ಅಲೆಕ್ಸಾಂಡರ್ ವೂಲ್ಡರ್, ಕಾಂಟ್, ಹಾಬ್ಸ್, ಬರ್ನಾಡ್ ಶಾ, ಲೆವಿಸ್ಟ್ರಾಸ್, ಮ್ಯಾಕ್ಸ್ ವೇಬರ್, ಲೈಯಾನ್ಸ್, ಲಿಂಗತ್, ಪ್ಲೇಟೋ, ಹಾರ್ಪರ್, ಹೆಗೆಲ್ ಸಿ.ಎ, ಸೆರಿಲ್ ಡೇನಿಯಲ್, ಇ.ವಿ. ಡೇನಿಯಲ್, ಡುಮಾಂಟ್, ಬರ್ಕೆ– ಇವರ ವಿಚಾರಗಳ ಹಿನ್ನೆಲೆಯಲ್ಲಿ ಇವರು ತಮ್ಮ ವಿಚಾರಗಳನ್ನು ಮಂಡಿಸುತ್ತಾರೆ. ರಾಮಾನುಜನ್ ಅವರು ಭಾರತೀಯ ಚಿಂತನಾಕ್ರಮದ ಬಗ್ಗೆ ಅಧ್ಯಯನ ನಡೆಸಿರುವ ಮತ್ತು ಇಂತಹ ಪ್ರಪಂಚದ ಎಲ್ಲಾ ಜ್ಞಾನಶಿಸ್ತುಗಳ ವಿದ್ವಾಂಸರ ಸಿದ್ಧಾಂತಗಳನ್ನು ಭಾರತೀಯ ಚಿಂತನಾಕ್ರಮದಲ್ಲಿ ತಂದು ತಮ್ಮದೇ ಆದ ವ್ಯಷ್ಟಿ ನಿಲುವನ್ನು ಸಾರ್ವತ್ರಿಕಗೊಳಿಸುವ ಕ್ರಮ ವಿನೂತನವಾದ್ದು. ವಿವಿಧ ಚಿಂತನೆಗಳ ಸಂದರ್ಭದಲ್ಲಿ ತಮ್ಮ ಆಲೋಚನೆಗಳನ್ನು ಇಟ್ಟು ಕೂಡ ಪರಿಶೀಲನೆ ಮಾಡುತ್ತಾ, ಕೊನೆಗೆ ತಮ್ಮದೇ ಆದ ಒಂದು ಸೂತ್ರರೂಪಿಯಾದ ಅಭಿಪ್ರಾಯಕ್ಕೆ ಅವರು ತಲುಪುವುದನ್ನು ಕಾಣುತ್ತೇವೆ. ಕೊನೆಗೆ ರಾಮಾನುಜನ್ ಅವರು ಭಾರತೀಯ ಚಿಂತನಾಕ್ರಮವು ಏಕವಾಗಿರದೆ ಅನೇಕವಾಗಿದೆ ಎಂಬ ನಿಲುವಿಗೆ ಬರುತ್ತಾರೆ. ಇದು ಬಹುಭಾಷಿಕ ಮತ್ತು ಬಹುಸಂಸ್ಕೃತಿಯ ದೇಶವಾದ ಭಾರತದಂತಹ ರಾಷ್ಟ್ರದಲ್ಲಿ ಸಹಜವೂ ಆಗಿದೆ.

ರಾಮಾನುಜನ್ ಅವರು ಲೇಖನದಲ್ಲಿ ಹೇಳುವಂತೆ: "ನಾವೆಲ್ಲರೂ ಬೇರೆ ಬೇರೆ ಕಾಲಮಾನಗಳಲ್ಲಿ ಎಲ್ಲ ಜ್ಞಾನಶಿಸ್ತುಗಳಿಂದ ಬಗೆ ಬಗೆಯ ನಿಲುವುಗಳನ್ನು ಸ್ವೀಕರಿಸಿದ್ದೇವೆ. ನಾನಂತೂ ಖಂಡಿತವಾಗಿ ಇದನ್ನು ಮಾಡಿದ್ದೇನೆ. ಇಲ್ಲಿ ನಾನು ಎತ್ತಿರುವ ಪ್ರಶ್ನೆಗಳಿಗೂ ಕೊನೆಯಿಲ್ಲ. ನಾನು ಚರ್ಚಿಸಿರುವ ಉತ್ತರಗಳಿಗೂ ಕೊನೆಯಿಲ್ಲ. ಇಂತಹ ಒಂದು ಪ್ರಶ್ನೆ, ಸಮಸ್ಯೆ ವೈಯಕ್ತಿಕವಾಗಿ ನನ್ನ ಎದುರು ಬಂದು ನಿಂತದ್ದು ನನ್ನ ಇಪ್ಪತ್ತನೆಯ ವಯಸ್ಸಿನಲ್ಲಿಯೇ. ಅದು ನನ್ನ ತಂದೆಯ ರೂಪದಲ್ಲಿ. ಅಲ್ಲಿಯವರೆಗೆ ನಾನು ಅಪ್ಪನಲ್ಲಿದ್ದ ಪಾಂಡಿತ್ಯವನ್ನು, ಅಸಂಬದ್ಧತೆಯನ್ನು ಸರಿಯಾಗಿ

ಗಮನಿಸಿಯೇ ಇರಲಿಲ್ಲ. ಆಮೇಲೆ ಅಪ್ಪನನ್ನು ಕುರಿತು ಚಿಂತಿಸಿದ ಆಲೋಚನೆಗಳಿಂದ ಇಂತಹ ಒಂದು ಚಿಂತನೆ ನನ್ನಲ್ಲಿ ಹುಟ್ಟಿತು. ಆಗಷ್ಟೇ ನಾನು ರಸಲ್‌ನ ಮೂಲಕ ವೈಜ್ಞಾನಿಕ ಚಿಂತನೆಯ ಪರಿಚಯವನ್ನು ಕೂಡ ಮಾಡಿಕೊಂಡು ಪರಿವರ್ತಿತನಾಗಿದ್ದೆ. ಅಪ್ಪನ ಒಂದೇ ಮೆದುಳಿನಲ್ಲಿ ಗಣಿತ, ಖಗೋಳ, ಸಂಸ್ಕೃತ ಮತ್ತು ಜ್ಯೋತಿಷ್ಯ ಇವೆಲ್ಲ ಒಟ್ಟಿಗೆ ಹೇಗೆ ಇರಬಲ್ಲವು ಎಂದು ಆಶ್ಚರ್ಯಪಡುತ್ತಿದ್ದೆ. ಚಿಂತನೆ ಮಾಡುತ್ತಿದ್ದೆ. ಆದರೆ ನನ್ನಪ್ಪನಿಗೆ ಈ ಬಗ್ಗೆ ಯಾವ ಚಿಂತೆಯೂ ಇರಲಿಲ್ಲ. ಆತ ಅವುಗಳನ್ನು ಕೇರ್ ಮಾಡುತ್ತಲೂ ಇರಲಿಲ್ಲ. ಆದರೆ ನಾನು ನನ್ನ ಅಪ್ಪನಲ್ಲಿ ಸುಸಂಬದ್ಧತೆ ಮತ್ತು ಸುಸಂಗತತೆಯನ್ನು ಹುಡುಕುತ್ತಿದ್ದೆ" ಎಂದು ರಾಮಾನುಜನ್ ಅವರು ತಮ್ಮ ಈ ಚಿಂತನೆಯ ಹಿಂದಿನ ಪ್ರೇರಣೆ ಸಂದರ್ಭ ಮತ್ತು ತಮ್ಮ ಮೇಲೆ ಬೀರಿದ ಹಲವು ಜ್ಞಾನಶಿಸ್ತುಗಳ ವಿಚಾರ ಇವುಗಳನ್ನೆಲ್ಲ ಇಲ್ಲಿ ಸೂಕ್ಷ್ಮವಾಗಿ ವಿವರಿಸಿದ್ದಾರೆ. ಇಂತಹ ಗಂಭೀರವಾದ ವಿಷಯವನ್ನು ವೈಯಕ್ತಿಕ ನೆಲೆಯಲ್ಲಿ ಪರಿಭಾವಿಸಿ ಅದನ್ನು ವಿಶ್ವಾತ್ಮಕ ನೆಲೆಯಲ್ಲಿ ಮಂಡಿಸಿ ಸಾರ್ವಕಾಲಿಕ ಚಿಂತನೆಗೆ ಹಚ್ಚುವ ಅವರ ವಿಶಾಲವಾದ ದೃಷ್ಟಿಕೋನ ಮತ್ತು ಮುಕ್ತವಾದ ಮನೋಧರ್ಮ ಗಮನೀಯವಾದದ್ದು.

೫.೨. ಕನ್ನಡಿಗಳೇ ಕಿಟಕಿಗಳಾಗಿರುವಲ್ಲಿ(‘Where mirrors are windows: towards an anthology of reflections’, from the history of religions’)

‘ಕನ್ನಡಿಗಳೇ ಕಿಟಕಿಗಳಾಗಿರುವಲ್ಲಿ’ ಎನ್ನುವ ಪ್ರಬಂಧವು ರಾಮಾನುಜನ್ ಅವರ ಈ ಪ್ರಬಂಧದ ಚಿಂತನೆಯ ನೆಲೆಗಟ್ಟು ತಮಿಳಿನಲ್ಲಿ ಬರುವ ‘ಅಹಂ’(ಅಂತರಂಗ) ಮತ್ತು ‘ಪುರಂ’ (ಬಹಿರಂಗ) ಎನ್ನುವ ಪರಿಕಲ್ಪನೆಯದು. ಯಾವುದೇ ಒಂದು ಕಲಾಕೃತಿ ಈ ಎರಡರ ಸುಮಧುರ ಬೆಸುಗೆಯ ಬಂಧವಾಗಿರಬೇಕು ಎನ್ನುವುದನ್ನು ರಾಮಾನುಜನ್ ಇಲ್ಲಿ ನಿರೂಪಿಸುತ್ತಾರೆ. ಅಹಂ ಅಥವಾ ಒಳಲೋಕದ ಕವಿತೆಯಲ್ಲಿ ಹೆಸರುಗಳಿಲ್ಲದ, ರೂಪಗಳಿಲ್ಲದ ವಿಚಾರಗಳಿರುತ್ತದೆ. ಏಕೆಂದರೆ ಅಹಂ ಆರ್ಷೇಯವಾಗಿರುತ್ತದೆ. ಈ ಒಳಲೋಕದ ಕವಿತೆ ಮನೆಯ ಒಳಗಿನದನ್ನು ಚಿತ್ರಿಸುತ್ತದೆ. ಪುರಂ ಹೊರಲೋಕದ್ದು. ಸಾಮಾನ್ಯವಾಗಿ ಇಲ್ಲಿ ವ್ಯಕ್ತಿಗಳ ಸ್ಥಳಗಳ ಹೆಸರುಗಳು ಇರುತ್ತವೆ. ಇವು ಚರಿತ್ರೆಯನ್ನು ಮತ್ತು ಸಮಾಜವನ್ನು ಕುರಿತು ಹೇಳುತ್ತವೆ. ಈ ಅಹಂ ಮತ್ತು ಪುರಂ ಎರಡೂ ಪ್ರಕಾರಗಳು ಪರಸ್ಪರ ಸಂಬಂಧವನ್ನುಳ್ಳದ್ದಾಗಿದ್ದರೂ ಪರಸ್ಪರ ಸ್ಪಂದಿಸುತ್ತವೆ. ಅಹಂ ಮತ್ತು ಪುರಂ ಪ್ರಕಾರಗಳಲ್ಲಿ ಏಳು ಬಗೆಯ ಸಂವಾದಗಳನ್ನು ಗಮನಿಸಬಹುದು. ಎರಡೂ ಒಂದಕ್ಕೊಂದು ಮುಖಾಮುಖಿಯಾಗಿ ಹಲವಾರು ಪ್ರತಿಮಾವಳಿಗಳನ್ನು ಬಿಂಬಿಸುತ್ತವೆ.

> “ಭಾರತೀಯ ಪರಂಪರೆ ಎಂದರೆ ಅಖಿಲ ಭಾರತ ವ್ಯಾಪ್ತಿಯ ಹಾಗೂ ಸಂಸ್ಕೃತ ಭಾಷೆ ಪ್ರಧಾನವಾಗಿರುವ ಒಂದು ಮಹಾನ್ ಪರಂಪರೆ(ಏಕವಚನ) ಮತ್ತು ಹಲವು ಸ್ಥಳೀಯ ಪ್ರಾದೇಶಿಕ ಕಿರುಪರಂಪರೆಗಳು(ಬಹುವಚನ) ಎಂದು ನಂಬಿರುವವರು

ಕೂಡ ಹೀಗೆಯೇ ಭಾವಿಸುತ್ತಾರೆ. ಭಾರತದ ಪರಂಪರೆ ಕುರಿತ 'ಮಾರ್ಗ' ಮತ್ತು 'ದೇಸಿ' ಎಂಬ ಹಳೆಯ ಪ್ರಭೇದ ಹಾಗೂ ಆಧುನಿಕ ಭಾರತದ ರಾಜಕಾರಣಿಗಳು ಸದಾ ಹೇಳುವ, ವಿವಿಧತೆಯಲ್ಲಿ ಏಕತೆ ಎಂಬ ಸೊಲ್ಲು ಕೂಡ ಇದೇ ನಿಲುವನ್ನು ಎತ್ತಿ ಹಿಡಿಯುತ್ತದೆ. ಸಾಹಿತ್ಯಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಭಾರತದ ಸರಕಾರಿ ಸಂಸ್ಥೆ 'ಸಾಹಿತ್ಯ ಅಕಾದೆಮಿ' 'ಭಾರತೀಯ ಸಾಹಿತ್ಯ ಒಂದೇ ಆದರೂ ಅದನ್ನು ಹಲವು ಭಾಷೆಗಳಲ್ಲಿ ಬರೆಯಲಾಗಿದೆ' ಎಂಬ ಮಾತನ್ನು ತನ್ನ ಘೋಷ ವಾಕ್ಯವಾಗಿಸಿಕೊಂಡಿದೆ. ಆದರೆ ನಾನು ಭಾರತೀಯ ಸಾಹಿತ್ಯದ ಮಟ್ಟಿಗೆ 'ಭಾರತೀಯ ಸಾಹಿತ್ಯಗಳು' ಎಂಬ ಬಹುವಚನವನ್ನೇ ಬಳಸಬೇಕು ಎಂದು ಹೇಳುವವ"[೨]

ಎಂಬ ನಿರ್ಣಯಕ್ಕೆ ರಾಮಾನುಜನ್ ಅವರು ಇಲ್ಲಿ ತಲುಪುತ್ತಾರೆ.

ಭಾಷಾಶಾಸ್ತ್ರಜ್ಞರು ಮತ್ತು ಮಾನವಶಾಸ್ತ್ರಜ್ಞರ ಪ್ರಕಾರ:

"ಸ್ಥಳೀಯ ಭಾಷಿಕನೊಬ್ಬನ ವ್ಯಕ್ತಿತ್ವದಲ್ಲಿ ಅವನ ಭಾಷೆಯ ಸರ್ವಸ್ವವೂ ಮೈಗೂಡಿರುತ್ತದೆ. ಯಾವುದೇ ಮಾಹಿತಿ, ಐತಿಹ್ಯ ಅಥವಾ ಆಚರಣೆ ಇಡೀ ಸಂಸ್ಕೃತಿಯನ್ನು ತನ್ನೊಳಗೆ ಇಟ್ಟುಕೊಂಡಿರುತ್ತದೆ. ಅವನ/ಅದರ ಸಂಸ್ಕೃತಿಯ ವ್ಯಾಕರಣವನ್ನು ಅಭ್ಯಸಿಸುವುದು ಎಂದರೆ ಇಡೀ ಭಾಷೆ ಮತ್ತು ಸಂಸ್ಕೃತಿಗಳನ್ನು ಅಭ್ಯಾಸ ಮಾಡುವುದೇ ಆಗಿದೆ. ಸಂಸ್ಕೃತಿ ಕುರಿತ ಇಂತಹ ಗ್ರಹಿಕೆ, ಸಂಸ್ಕೃತಿಗಳಿಗೆ ಒಂದು ಏಕರೂಪವನ್ನು ಆರೋಪಿಸುತ್ತದೆ."[೩]

"ಭಾರತೀಯ ಸಂಸ್ಕೃತಿಯ ಮೇರುಕೃತಿಗಳಾದ ರಾಮಾಯಣ, ಮಹಾಭಾರತ, ಪುರಾಣಗಳು ಹಾಗೂ ನಾವು ಕಿರುಪರಂಪರೆ ಎಂದು ಕರೆಯುವ ಜಾನಪದ ಪರಂಪರೆಗಳು – ಇವು ಒಟ್ಟಾಗಿ ಒಂದು ಅಖಂಡ ಪರಂಪರೆಯನ್ನು ರೂಪಿಸಿವೆ; ಹೆಚ್ಚೆಂದರೆ ನಮ್ಮ ಜನಪದದ ಅಥವಾ ಕಿರುಪರಂಪರೆಗಳು, ನಮ್ಮ ಮೇರುಕೃತಿಗಳ ಪರಂಪರೆಯ ಒಂದು ಒರಟು ಪ್ರತಿರೂಪ; ಸಾಮಾನ್ಯರಿಗೋಸ್ಕರ ಅಥವಾ ಸಾಮಾನ್ಯರಿಂದ ಸಿದ್ಧವಾದ ಸರಳ ಪ್ರತಿರೂಪ. ಮಹಾನ್ ಪರಂಪರೆ ಕುಲೀನರದ್ದಾದರೆ, ಕಿರುಪರಂಪರೆ ಸಾಮಾನ್ಯರು, ಬಡಪಾಯಿಗಳು, ಅರೆ ಅಥವಾ ಪೂರ್ತ ಅನಕ್ಷರಸ್ಥರು, ಹಳ್ಳಿಗಮಾರರು ಮತ್ತು ತಮ್ಮ ತಾಯ್ನುಡಿಗಳನ್ನು ಮಾತ್ರ ಬಲ್ಲ 'ಸ್ಥಳೀಯ'(ಅಂದರೆ ಕೇಂದ್ರವಲ್ಲದ) ಜನರ ಒಡವೆ; ಆದಾಗ್ಯೂ ಈ ಎರಡು ಪರಂಪರೆಗಳ ನಡುವೆ ಮೂಲಭೂತವಾದ ವ್ಯತ್ಯಾಸವೇನಿಲ್ಲ."[೪]

"ಭಾರತದ... ಸಾಂಸ್ಕೃತಿಕ ಪರಂಪರೆಗಳು ಒಂದು ಇನ್ನೊಂದರಲ್ಲಿ ಲೀನವಾಗಲಾರದಷ್ಟು ಬಹುಮುಖಿಯಾಗಿವೆ; ಅನೇಕ ಸಂದರ್ಭಗಳಲ್ಲಿ ಒಂದು ಇನ್ನೊಂದನ್ನು ಅಲ್ಲಗಳೆಯುತ್ತದೆ. ಆದರೆ ಈ ಪರಂಪರೆಗಳ ನಿರ್ಮಿತಿಯ ಹಿಂದೆ ಎರಡು ಸೂತ್ರಗಳು ಕೆಲಸ ಮಾಡಿವೆ. ೧. ಈ ಪರಂಪರೆಗಳು ಸಂದರ್ಭಾನುಸಾರಿ ಗುಣವನ್ನು ಹೊಂದಿವೆ. ೨. ಹಲವು ಬಗೆಯ ಪ್ರತಿಫಲನ ಮತ್ತು ಪ್ರತಿಬಿಂಬಗಳ

ಪ್ರಕ್ರಿಯೆ ಈ ಪರಂಪರೆಗಳನ್ನು ರೂಪಿಸಿದೆ. ಈ ಎರಡು ಮೂಲಸೂತ್ರಗಳು, ನಿರಂತರವಾಗಿ ಹಳೆಯದ್ದಾರಿಂದ ಹೊಸ ಹೊಸ ಸಾಂಸ್ಕೃತಿಕ ಆಕೃತಿಗಳ ನಿರ್ಮಿತಿಗೆ ಕಾರಣವಾಗಿವೆ. ನಾವು ತಕ್ಷಣ ಹೆಸರಿಸಬಹುದಾದ ಬ್ರಾಹ್ಮಣತ್ವ, ಭಕ್ತಿಪರಂಪರೆಗಳು, ಬೌದ್ಧ, ಜೈನ ಧರ್ಮಗಳು, ತಂತ್ರ, ಬುಡಕಟ್ಟು ಜನರ ಪರಂಪರೆಗಳು, ಜಾನಪದ ಮತ್ತು ಕೊನೆಯದಾಗಿ ಆಧುನಿಕತೆ. ಈ ಬಗೆಯ ಸಾಂಸ್ಕೃತಿಕ ಆಕೃತಿಗಳ ನಿರ್ಮಿತಿಯಲ್ಲಿ ಮುಖ್ಯವಾಗಿರುವಂತಹವು. ಇವು ಗತಕಾಲದ ಮತ್ತು ಈಗ ನಮ್ಮನ್ನು ಆವರಿಸಿಕೊಂಡಿರುವ ಪರಂಪರೆಗಳ ಪ್ರತಿಫಲನಗಳಾಗಿವೆ. ಇವು ಪರಂಪರೆಗಳನ್ನು ರೂಪಾಂತರಿಸುತ್ತವೆ; ಅವಕ್ಕೆ ಪ್ರತಿರೋಧ ತೋರುತ್ತವೆ; ಅವನ್ನು ಬದಲಾಯಿಸುತ್ತವೆ. ಜೊತೆಗೆ ಈ ನುಡಿಗಟ್ಟುಗಳು, ನಾವು ಯಾವುದನ್ನು ಭಾರತ ಎಂದು ಕರೆಯುತ್ತೇವೆಯೋ, ಅದರೆ ಹಾಗೆಯೇ, ಹಲವು ಅರ್ಥಗಳನ್ನು ಪಡೆದಿವೆ. ಅವುಗಳಲ್ಲಿ ಕೆಲವಂತೂ ಒಂದಕ್ಕೊಂದು ತದ್ವಿರುದ್ಧವಾಗಿರುವಂತಹವು. ಅವುಗಳ ನಡುವಿನ ಭಿನ್ನತೆ ಮತ್ತು ಸಂವಾದ, ನಿರಂತರವಾಗಿ ನಡೆಯುವಂತಹದ್ದು."[೫]

'ಪುರಂ'ಗೆ ನಿದರ್ಶನವಾಗಿ – ಒಂದು ಎಲೆ : ಯುದ್ಧದಲ್ಲಿ, ಪ್ರೀತಿಯಲ್ಲಿ ಎನ್ನುವ ಒಂದು ಪದ್ಯವನ್ನು ಗಮನಿಸಬಹುದು.

ಒತ್ತಾಗಿ ಕಪ್ಪಾಗಿ ಬೆಳೆದ ಶುದ್ಧ ಮರಗಳ ತೋಪು
ಎಂದೂ ಒಣಗದ ನೆಲದೊಡನೆ ಒಂದಾಗಿ
ಎಲೆಗಳ ಮೇಲಿನ ಬಣ್ಣ
ಒತ್ತೊತ್ತಿ ಕಣ್ಣು ತುಂಬುಹುದು.
    ಒಡವೆ ಧರಿಸಿದ ಹೆಂಗಳ
    ಪ್ರೀತಿ ದಿಣ್ಣೆಗಳ ಮೇಲೆ
    ಆ ಎಲೆಗಳಿರುವುದು
    ನಾವು ಕಂಡಿದ್ದೇವೆ.
ಪರಿಶುದ್ಧ ಪರ್ಣಮಾಲೆ ಕತ್ತಿರಿಸಿ ಬಿದ್ದಿದೆ
ನೆಲದಲ್ಲೆಲ್ಲ ಚೆಲ್ಲಾಡಿ, ರಕ್ತದೊಡನೆ ಬೆರೆತು ಬದಲಾಗಿ.
ಮಾಂಸದ ಮುದ್ದೆ ಅಂದುಕೊಂಡು
ರಣಹದ್ದು ಕೊಕ್ಕಲ್ಲಿ ಎತ್ತಿಕೊಂಡು ಹಾರಿದೆ.
ಯುದ್ಧಕ್ಕೆ ಒಲಿದ ಯುವಕ
ಅದೇ ಪರ್ಣಮಾಲೆಯನ್ನು
ಕೀರ್ತಿಮಾಲೆಯಾಗಿ ಧರಿಸಿದ್ದನ್ನೂ
ಕಂಡಿದ್ದೇವೆ.

(ವೆರಿಪಾದೀಯ ಕಾಮಕಣ್ಣಿಯಾರ್, ಪುರನಾನೂರು, ೨೭೧)[೬]

'ಅಹಂ'ಗೆ ನಿದರ್ಶನವಾಗಿ – ಅವಳು ಹೇಳಿದ್ದು ಪದ್ಯ ಗಮನಿಸಬಹುದು

ಅವನೊಡನೆ ನಾನು
ಇರುಳೆಲ್ಲ ನಗುವ ಮೊದಲು
ಅವನೂರಿನ ದಡಕ್ಕೆ
ಮೆಲ್ಲನೆ ಬಡಿವ ಅಲೆಗಳು
ಹೊಳೆಯ ಬದಿ ಬೆಳೆದ
ಹಕ್ಕಿಗಳಂಥ ತಾಳೆ ಹೂಗಳನ್ನು
ತೇಲಿಸಿ ತರುತಿದ್ದವು.

ನನ್ನ ಕಣ್ಣು ಕಮಲದ ಹಾಗಿತ್ತು
ನನ್ನ ತೋಳಿನಲ್ಲಿ ಬಿದಿರಿನ ಒನಪಿತ್ತು
ನನ್ನ ಮುಖವನ್ನು ಚಂದಿರನೆನ್ನುತ್ತಿದ್ದರು
ಆದರೆ ಈಗ

(ಮದುರೈ ಎರುತ್ತಾಲನ್ ಚೆಂತಂಪೂತನ್, ಕುರುಂತೋಕ್ಕೈ, ೨೨೬)

'ಪಾರಿ! ಪಾರಿ!' ಅನ್ನುತ್ತಾರೆ
ಈ ಕವಿಗಳು
ಶುಭನುಡಿವ ಕೆಂಪು ನಾಲಗೆ ಹೊರಳಿಸಿ
ಒಬ್ಬನನ್ನೇ ಬಗೆಬಗೆಯಾಗಿ
ಹೊಗಳುತಾರೆ.
ಪಾರಿ ಮಾತ್ರವಲ್ಲ
ಇಲ್ಲೆಲ್ಲ ಮಳೆ ಕೂಡ
ಲೋಕವನ್ನು ನಡೆಸುತಿದೆ.

(ಕಪಿಲರ್ ಪಾರಿಯ ಬಗ್ಗೆ, ಪುರಾನಾನೂರು, ೧೦೭)[೬]

ರಾಮಾನುಜನ್ ಅವರ ವಿಶೇಷವೆಂದರೆ ಒಂದು ಕ್ರಮಬದ್ಧವಾದ ತಾತ್ವಿಕ ಚಿಂತನೆ ಮತ್ತು ಆ ತಾತ್ವಿಕತೆಗೆ ಪೂರಕವಾದ ಕ್ರಿಯಾವಿವರಗಳನ್ನು ನೀಡುವುದು. ಇದು ಅವರ ಎಲ್ಲಾ ಲೇಖನಗಳಲ್ಲಿರುವ ಒಂದು ಸೂತ್ರ. ಬಹುಶಃ ಇದಕ್ಕೆ ಪ್ರೇರಣೆ ಅವರಲ್ಲಿರುವ ಸಂಶೋಧನಾ ಪ್ರವೃತ್ತಿ. ಮೇಲೆ ಕೊಟ್ಟಿರುವ ಎರಡು ನಿದರ್ಶನಗಳ ಪದ್ಯಗಳಿಗೆ ಹೊಂದಾಣಿಕೆಯಾಗುವಂತೆ ಅವರೇ ನೀಡಿರುವ **ಅಹಂ ಮತ್ತು ಪುರಂ ಪರಿಕಲ್ಪನೆಗಳ ಸ್ಪಂದನೆ – ಪ್ರತಿಸ್ಪಂದನೆಗಳ ಅರ್ಥಘಟಕಗಳ ಪಟ್ಟಿಯನ್ನು ನೋಡಿ.**

ಅಹಂ	ಪುರಂ
೧. ಅಂತರಂಗ	ಬಹಿರಂಗ
೨. ಹೃದಯ, ಮನಸ್ಸು	ಶರೀರದ ಮೇಲ್ಮೈ, ಬೆನ್ನು, ಪಕ್ಕ, ತೋಳು ಇತ್ಯಾದಿ
೩. ಸ್ವ	ಅನ್ಯರು
೪. ಸಂಬಂಧಿಕರು	ಸಂಬಂಧಿಕರಲ್ಲದವರು
೫. ಮನೆ, ಕುಟುಂಬ	ಮನೆಯ ಅಂಗಳ, ಹೊಲ
೬. ಒಳನಾಡು, ವಸತಿ	ಮನುಷ್ಯವಾಸದಿಂದ ದೂರವಾದ ಕಾಡು, ಮರಳುಗಾಡು
೭. ನೆಲ	ದೂರದ ಕಡಲು
೮. ವ್ಯಕ್ತಿ, ಸ್ಥಳಗಳ ಹೆಸರಿಲ್ಲದ ಪ್ರೇಮಕವಿತೆ	ನಿಜವ್ಯಕ್ತಿ / ಸ್ಥಳಗಳ ಉಲ್ಲೇಖವಿರುವ ಯುದ್ಧ, ಪ್ರೇಮ ಬಿಟ್ಟು ಉಳಿದ ಭಾವಗಳಿರುವ ಸಾರ್ವಜನಿಕ ಕವಿತೆ
೯. ಅಹಂ ಕಾವ್ಯಕ್ಕೆ ಸೂಕ್ತವಾದ ಸಂಹಿತೆಗಳು	ಪುರಂ ಕಾವ್ಯಕ್ಕೆ ಸೂಕ್ತವಾದ ಸಂಹಿತೆಗಳು

(ರಾಮಾನುಜನ್ ೧೯೮೫, ಪುಟ ೨೬೨)

ಈಗ ಈ ಪ್ರಬಂಧದ ಒಟ್ಟು ಸ್ಥೂಲ ಸ್ವರೂಪವನ್ನು ಗಮನಿಸೋಣ: ೩೮ ಪುಟಗಳಿರುವ ಈ ಪ್ರಬಂಧಕ್ಕೆ ಆರಂಭದಲ್ಲಿ ಬಸವಣ್ಣನವರ ಒಂದು ವಚನ ಮತ್ತು ಭಾಗವತ ಪುರಾಣದ ಒಂದು ಘಟನೆಯನ್ನು ನೀಡಿದ್ದಾರೆ. ಬಸವಣ್ಣನವರ ವಚನವು 'ಪುರಂ'ಗೆ ಹತ್ತಿರವಾಗಿದ್ದರೆ, ಭಾಗವತದ ಕಥೆಯು 'ಅಹಂ'ಗೆ ಹತ್ತಿರವಾಗಿದೆ. ನಂತರ ಪ್ರಸ್ತಾವನೆ ಎಂಬ ಭಾಗ ಬರುತ್ತದೆ. ಈ ಪ್ರಸ್ತಾವನೆಯಲ್ಲಿ ಮಾರ್ಗ, ದೇಸಿ, ವೈವಿಧ್ಯತೆಯಲ್ಲಿ ಏಕತೆ, ಮಹಾಪರಂಪರೆ ಮತ್ತು ಕಿರುಪರಂಪರೆ, ಬಗೆಬಗೆಯ ಸಂವೇದನೆಗಳು ಮತ್ತು ಇವುಗಳ ಒಳಸೂಕ್ಷ್ಮಗಳನ್ನು ವಿವರಿಸಿರುತ್ತಾರೆ. ಭಾರತೀಯ ಸಾಹಿತ್ಯ ಪಠ್ಯಗಳು ಮತ್ತು ಅವುಗಳ ಸಂಬಂಧವನ್ನು ಕುರಿತು ರಾಮಾನುಜನ್ ೩ ರೀತಿಯ ಪ್ರತಿಕ್ರಿಯೆಗಳನ್ನು ಗುರುತಿಸುತ್ತಾರೆ. ಮೊದಲನೆಯದು, ಪ್ರತಿಸ್ಪಂದನಾತ್ಮಕ(responsive), ಇದನ್ನೇ ಅವರು ಉಪಪಠ್ಯ(co-text) ಎಂದಿದ್ದಾರೆ. ಎರಡನೆಯದು ಪ್ರತಿಫಲನಾತ್ಮಕ(reflective), ಇದನ್ನು ಅವರು counter-text ಎನ್ನುತ್ತಾರೆ. ಮೂರನೆಯದು ಸ್ವ-ಪ್ರತಿಫಲನಾತ್ಮಕ(Self-reflective), ಇದನ್ನು ಅವರು Meta-text ಎನ್ನುತ್ತಾರೆ. ಈ ಮೂರು ಪರಿಕಲ್ಪನೆಗಳನ್ನು ಪೂರ್ವಪಠ್ಯ, ಅಂತರ್‌ಪಠ್ಯ ಮತ್ತು ಉಪಪಠ್ಯ ಎಂದು ಕರೆಯಬಹುದು. ರಾಮಾನುಜನ್ ಅವರು ಈ ಪರಿಕಲ್ಪನೆಗಳನ್ನು ಟಿ.ಎಸ್. ಎಲಿಯಟ್ ಹೇಳಿದ 'ಪರಂಪರೆ' ಮತ್ತು 'ವ್ಯಕ್ತಿ ಪ್ರತಿಭೆ' (Tradition and Indivisual Talent) ಎನ್ನುವ ವಿಚಾರಕ್ಕೆ ಹೋಲಿಸುತ್ತಾರೆ. ಹಾಗೆಯೇ ಈ ಪ್ರಬಂಧದ ಉಳಿದ ಭಾಗಗಳಲ್ಲಿ ಅಗತ್ಯದ ಹಿನ್ನೆಲೆ, ಎರಡು ಮಹಾಕಾವ್ಯಗಳು,

ಪರ್ಯಾಯ ಪರಂಪರೆಗಳು, ಜಾನಪದ, ಸಮಾರೋಪ– ಎಂಬ ಭಾಗಗಳಲ್ಲಿ, ಒಟ್ಟಾರೆಯಾಗಿ ಭಾರತೀಯ ಹಲವು ಕಾಲದ, ಹಲವು ಭಾಷೆಗಳ ವಿವಿಧ ಪಠ್ಯಗಳ ಸ್ವರೂಪವನ್ನು ಕುರಿತು ರಾಮಾನುಜನ್ ಅವರು ವಿಶ್ಲೇಷಿಸಿದ್ದಾರೆ.

ಲೇಖಕರು ಲೇಖನದ ಪ್ರಾರಂಭದಲ್ಲೇ ಕೃಷ್ಣನ ಬಾಯಲ್ಲಿ ಯಶೋಧೆಗೆ ಇಡೀ ವಿಶ್ವವೇ ಕಾಣಿಸುತ್ತದೆ. ಅಂದರೆ ಒಂದರ ಒಳಗೆ ಹಲವಾರು ಒಳಗೊಂಡಿವೆ ಎಂಬುದಾಗಿರುತ್ತದೆ. ಆದರೆ ಯಶೋಧೆ ನೋಡಬಯಸಿದ್ದ ಒಂದು ವಸ್ತುವಿನ ದರ್ಶನದ ಬದಲಾಗಿ ಹಲವಾರು ವಸ್ತುಗಳ ಒಂದು ಅಖಂಡ ದರ್ಶನವಾಗುತ್ತದೆ. ಕನ್ನಡಿಯಲ್ಲಿ ನಮ್ಮ ಪ್ರತಿಫಲನವನ್ನಷ್ಟೇ ಕಾಣುವ ಬದಲು ಕಿಟಕಿಗಳ ಮೂಲಕ ಹೊರಜಗತ್ತನ್ನೇ ಕಾಣುವ ತವಕ ಇರಬೇಕು. ರಾಮಾನುಜನ್ ಅವರು ಹೇಳುವಂತೆ ಒಂದರಂತೆ ಇನ್ನೊಂದು ಇರುತ್ತದೆ ಅಥವಾ ಸೃಷ್ಟಿಸಲ್ಪಟ್ಟಿರುತ್ತದೆ. ತ್ರಿಶಂಕುವಿಗಾಗಿ ಪ್ರತಿಯಾಗಿ ಇನ್ನೊಂದು ಲೋಕವನ್ನೇ ಸೃಷ್ಟಿಸಿದ ಹಾಗೆ. ಎಮ್ಮೆಗೆ ಹಸುವನ್ನು, ಕುದುರೆಗೆ ಕತ್ತೆಯನ್ನು ಹೋಲಿಕೆಯಲ್ಲಿ ಸೃಷ್ಟಿಸಲಾಗಿದೆ ಎನ್ನುತ್ತಾರೆ.

ಸಂಸ್ಕೃತಿಗೆ ಮತ್ತೊಂದು ಸಂಸ್ಕೃತಿ, ಪರಂಪರೆಗೆ ಮತ್ತೊಂದು ಪರಂಪರೆ ಪ್ರತಿಫಲನವಾಗಿ ನಿಲ್ಲುತ್ತದೆ. ಅಂತೆಯೇ ಪ್ರತಿಬಿಂಬದಲ್ಲೇ ಇನ್ನೊಂದು ಪ್ರತಿಬಿಂಬ ಕಾಣಿಸುತ್ತದೆ. ದೇಶಿ ಪರಂಪರೆಗೆ ಮಾರ್ಗ ಪರಂಪರೆ, ಸಂಸ್ಕೃತ ಪರಂಪರೆಗೆ ಜಾನಪದ, ಮೌಖಿಕ ಪರಂಪರೆಗಳು ಸೃಷ್ಟಿಯಾದಂತೆ ಪ್ರತಿಯೊಂದು ಚಿಂತನೆಗೂ ಇನ್ನೊಂದು ಪ್ರತಿಚಿಂತನೆ ಇದ್ದೇ ಇರುತ್ತದೆ. ಅಥವಾ ಸೃಷ್ಟಿಸಲ್ಪಡುತ್ತದೆ ಎಂಬುದಾಗಿದೆ. ಒಂದು ಕನ್ನಡಿಯಲ್ಲಿ ಒಂದೇ ಪ್ರತಿಬಿಂಬ ಕಾಣಬಹುದು. ಆದರೆ ಕಿಟಕಿಯಲ್ಲಿ ಎಲ್ಲವೂ ಅಂದರೆ ಹಲವು ಬಿಂಬಗಳು ಕಾಣಿಸುತ್ತವೆ. ಮನೆಗೆ ಹಲವಾರು ಕಿಟಕಿಗಳಿರುತ್ತವೆ ಅಂತೆಯೇ ಕಿಟಕಿಗಳೆಲ್ಲವೂ ಕನ್ನಡಿಗಳಾಗಿಬಿಟ್ಟರೆ. ಬಿಂಬದಲ್ಲಿ ಪ್ರತಿಬಿಂಬ, ಪ್ರತಿಬಿಂಬದಲ್ಲಿ ಪ್ರತಿಬಿಂಬ, ಹೀಗೆ ಹಲವಾರು, ಸಹಸ್ರಾರು ಪ್ರತಿಬಿಂಬಗಳನ್ನು ಕಾಣಬಹುದು ಎಂಬ ಪರಿಕಲ್ಪನೆ ರಾಮಾನುಜನ್ ಅವರದ್ದಾಗಿದೆ. ಪರಂಪರೆ ಮತ್ತು ಸಂಸ್ಕೃತಿಗಳನ್ನು ಕಿಟಕಿಗಳು ಮತ್ತು ಕನ್ನಡಿಗಳಿಗೆ ಹೋಲಿಸುವ ರೀತಿಯ ಅನುಸಂಧಾನವನ್ನು ರಾಮಾನುಜನ್ ಅವರು ನಡೆಸಿದ್ದಾರೆ.

ಒಂದರ ಪ್ರತಿಫಲನ ಇನ್ನೊಂದು ಅಲ್ಲ. ಒಂದರ ಒಳಗೆ ಇನ್ನೊಂದು, ಮತ್ತೊಂದು, ಮಗದೊಂದು ಸೇರಿ ಅಂಖಡ ಒಂದಾಗಿ ಕಾಣಿಸುವ ಪರಿಯನ್ನು ರಾಮಾನುಜನ್ ಈ ಲೇಖನದಲ್ಲಿ ಮೌಖಿಕ ಪರಂಪರೆಯಿಂದ ಹಿಡಿದು, ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ, ವೇದಗಳು, ಕಿರುಪರಂಪರೆ, ಮಹಾನ್ ಪರಂಪರೆಗಳು, ೯ನೇ ಶತಮಾನದ ನಮ್ಮಾಳ್ವರರ ಚಿಂತನೆಗಳು, ೧೨ನೇ ಶತಮಾನದ ವಚನಕಾರರಾದ ಅಲ್ಲಮ, ಅಕ್ಕಮಹಾದೇವಿ, ಬಸವಣ್ಣ ಮತ್ತು ಸೂರದಾಸ ಮುಂತಾದವರು ಪರಂಪರೆಗೆ ಪ್ರತಿಪರಂಪರೆಯ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ.

ಒಂದರಂತೆಯೇ ಇನ್ನೊಂದು ಎಂದು ಹೇಳುವುದರ ಜೊತೆಗೆ ಒಂದು ಒಂದು ಸೇರಿ ಇನ್ನೊಂದು ಅಂದರೆ ಮೂರನೆಯದೊಂದು ಸೃಷ್ಟಿಯಾಗಿರುವ ಒಂದು ಪರಂಪರೆಯ ಚಿತ್ರಣವನ್ನೂ ಸಹ ಈ ಪ್ರಬಂಧದಲ್ಲಿ ರಾಮಾನುಜನ್ ಚರ್ಚಿಸಿದ್ದಾರೆ.

೫.೩. ಮುನ್ನೂರು ರಾಮಾಯಣಗಳು: ಅನುವಾದದ ಕುರಿತು ಮೂರು ವಿಚಾರಗಳು–ಐದು ಉದಾಹರಣೆಗಳೊಂದಿಗೆ(Three hundred Ramayanas : Five examples and three thoughts and translation)

ಭಾರತೀಯ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಲು ಲಿಖಿತ ರೂಪದ ಅಭಿಜಾತ ಸಾಹಿತ್ಯ ಒಂದು ಪ್ರಮುಖ ಆಕರ. ಸಂಸ್ಕೃತದಲ್ಲಿರುವ ರಾಮಾಯಣ, ಮಹಾಭಾರತಗಳು, ತಮಿಳು ಮತ್ತು ಕನ್ನಡ ಭಾಷೆಗಳಲ್ಲಿರುವ ಪ್ರಾಚೀನ ಹಾಗೂ ಆಧುನಿಕ ಗ್ರಂಥಗಳು ರಾಮಾನುಜನ್ ಅವರ ಅಧ್ಯಯನಕ್ಕೆ ಪ್ರಮುಖ ಆಕರಗಳಾಗಿವೆ. ಲ್ಯಾಟಿನ್, ಗ್ರೀಕ್, ಫ್ರೆಂಚ್, ಅರೇಬಿಕ್ ಮುಂತಾದ ಭಾಷೆ ಮತ್ತು ಸಾಹಿತ್ಯ ಕೃತಿಗಳನ್ನು ಬಿಟ್ಟರೆ ಭಾರತದಲ್ಲಿ ಸಂಸ್ಕೃತ, ತಮಿಳು, ಕನ್ನಡ, ತೆಲುಗು, ಒರಿಯಾ ಮುಂತಾದ ಭಾರತೀಯ ಭಾಷಾ ಸಾಹಿತ್ಯವನ್ನು ಅಭಿಜಾತ ಭಾಷಾ ಸಾಹಿತ್ಯ(Classical language and literature) ಪರಂಪರೆ ಅಡಿಯಲ್ಲಿ ಅಧ್ಯಯನ ಮಾಡಲಾಗುತ್ತದೆ. ರಾಮಾನುಜನ್ ಅವರು ರಾಮಾಯಣ ಮತ್ತು ಮಹಾಭಾರತದ ಕೃತಿಗಳ ಮೂಲಕ ಭಾರತೀಯ ಸಂಸ್ಕೃತಿಯ ಅಖಂಡತೆಯನ್ನು ಅರಿಯಲು, ಅರ್ಥೈಸಲು ಸಾಧ್ಯ ಎಂಬ ನಿಲುವನ್ನು ಪ್ರತಿಪಾದಿಸುತ್ತಾರೆ. ಪ್ರಸ್ತುತ ಸಂದರ್ಭದಲ್ಲಿ ಅವರ "ಮುನ್ನೂರು ರಾಮಾಯಣಗಳು: ಅನುವಾದದ ಕುರಿತು ಮೂರು ವಿಚಾರಗಳು–ಐದು ಉದಾಹರಣೆಗಳೊಂದಿಗೆ" ಮತ್ತು "ಮಹಾಭಾರತದಲ್ಲಿ ಪುನರುಕ್ತಿ" ಪ್ರಬಂಧಗಳನ್ನು ಇಲ್ಲಿ ಚರ್ಚಿಸಲಾಗುವುದು.

ರಾಮಾನುಜನ್ ಅವರು 'ಮುನ್ನೂರು ರಾಮಾಯಣಗಳು' ಎಂಬ ಈ ಪ್ರಬಂಧವನ್ನು ೧೯೮೭–೮೭ರಲ್ಲಿ ಶಿಕಾಗೋ ವಿಶ್ವವಿದ್ಯಾಲಯದಲ್ಲಿ ನಡೆದ ದಕ್ಷಿಣ ಏಷಿಯಾ ಕುರಿತ ಕಾರ್ಯಾಗಾರದಲ್ಲಿ ಮಂಡಿಸಿದ್ದು. ಲೇಖನದ ಆರಂಭದಲ್ಲಿಯೇ 'ರಾಮಾಯಣಗಳು ಎಷ್ಟು? ಮುನ್ನೂರೇ? ಮೂರು ಸಾವಿರವೇ?' ಎಂಬ ಪ್ರಶ್ನೆಯ ಮೂಲಕವೇ ಚರ್ಚೆ ಪ್ರಾರಂಭವಾಗಿ ಕೊನೆಗೆ ಪ್ರತಿ ಜಾತಿ, ಜನಾಂಗ, ಸಮುದಾಯ, ಭಾಷೆ ಹಾಗೂ ಪಾಶ್ಚಾತ್ಯ, ಪೌರಾತ್ಯ ದೇಶಗಳಲ್ಲೆಲ್ಲಾ ವೈವಿಧ್ಯಮಯವಾಗಿ, ವಿಭಿನ್ನವಾಗಿ ಹರಡಿರುವ ರಾಮಾಯಣದ ಕಥೆಗಳು ಅಸಂಖ್ಯಾತ ಎಂಬ ಚರ್ಚಿತ ನಿಲುವಿಗೆ ರಾಮಾನುಜನ್ ಅವರು ತಲಪುತ್ತಾರೆ. ಈ ಪ್ರಬಂಧವು ಜಗತ್ತಿನ ಬಹುಸಂಸ್ಕೃತಿ ಚಿಂತಕರನ್ನು ವಿಶೇಷವಾಗಿ ಆಕರ್ಷಿಸಿರುವ ಮತ್ತು ಅನೇಕ ವಾದ ವಿವಾದಗಳನ್ನು ಹುಟ್ಟುಹಾಕಿರುವ ಪ್ರಬಂಧ. ಅವರು ಈ ಪ್ರಬಂಧದಲ್ಲಿ ರಾಮಾಯಣದ ಹಲವಾರು ಭಾಷಿಕ ಆವೃತ್ತಿ, ಪಠ್ಯ, ರೂಪ, ಬರವಣಿಗೆ, ನೃತ್ಯ, ಚಿತ್ರ, ಜನಪದ ಕಲೆ,

ಹರಿಕಥೆ, ನಾಟಕ, ಪಾರಾಯಣ, ಗಮಕ, ವ್ಯಾಖ್ಯಾನ– ಮುಂತಾದ ಎಲ್ಲಾ ಬಗೆಯ ಅಭಿವ್ಯಕ್ತಿ ಕ್ರಮಗಳನ್ನು ಕುರಿತು ಜಿಜ್ಞಾಸೆ ಮಾಡಿದ್ದಾರೆ.

ಮೂಲ ಎಂದು ಭಾವಿಸಲಾಗಿರುವ ಸಂಸ್ಕೃತದ ವಾಲ್ಮೀಕಿ ರಾಮಾಯಣದ ಸ್ವರೂಪಕ್ಕೆ ಸಮಾನಾಂತರವಾಗಿ ಹಲವಾರು ರಾಮಾಯಣಗಳ ಆವೃತ್ತಿಗಳನ್ನು ರಾಮಾನುಜನ್ ಅವರು ಉದಾಹರಿಸುತ್ತಾರೆ. ಕನ್ನಡದಲ್ಲಿ ಕುಮಾರವ್ಯಾಸ ತಾನು ರಾಮಾಯಣ ಬರೆಯದಿರುವುದಕ್ಕೆ ಕಾರಣವನ್ನು ಹೇಳಬೇಕಾಯಿತು. ರಾಮಾಯಣ ಕಾವ್ಯಗಳನ್ನು ಬರೆದ ಕನ್ನಡ ಕವಿಗಳ ಜನಸಂಖ್ಯೆಗೆ ಭೂಭಾರವಾಗಿ ಭೂಮಿಯನ್ನು ಹೊತ್ತ ಆದಿಶೇಷನು ತಿಣುಕಿದನಂತೆ; ಆದ್ದರಿಂದ ಅಲ್ಲಿ ಜಾಗವಿಲ್ಲದೆ ಕುಮಾರವ್ಯಾಸ ಮಹಾಭಾರತವನ್ನು ಬರೆಯಬೇಕಾಯಿತು. ಮುದ್ದಣ ತನ್ನ ರಾಮಾಶ್ವಮೇಧದಲ್ಲಿ 'ಇಳೆಯೊಳ್ ಎನಿತೋ ರಾಮಾಯಣಂಗಳ್ ಒಳವು' ಎಂದು ಹೇಳುವ ಮಾತು ಪ್ರಸಿದ್ಧವಾದದ್ದು. ವಾಲ್ಮೀಕಿ ರಾಮಾಯಣ, ತುಳಸಿದಾಸ ರಾಮಾಯಣ, ಕಂಬ ರಾಮಾಯಣ, ಪಂಪ ರಾಮಾಯಣ, ಅಧ್ಯಾತ್ಮ ರಾಮಾಯಣ, ಆನಂದ ರಾಮಾಯಣ, ವಾಸಿಷ್ಠ ರಾಮಾಯಣ, ಅದ್ಭುತ ರಾಮಾಯಣ, ತೊರವೆ ರಾಮಾಯಣ, ಶ್ರೀರಾಮಾಯಣ ದರ್ಶನಂ, ಶ್ರೀರಾಮ ಪರೀಕ್ಷಣಂ, ಅಹಲ್ಯ, ರಾಮಾಯಣ ಕಲ್ಪವೃಕ್ಷಮು– ಹೀಗೆ ರಾಮಾಯಣಗಳ ಸಂಖ್ಯೆ ಅಪಾರ. ಇದರ ಜೊತೆಗೆ ವೈದಿಕ ಪರಂಪರೆ, ಜೈನ ಪರಂಪರೆ, ಬೌದ್ಧ ಪರಂಪರೆ, ಮೌಖಿಕ ಪರಂಪರೆಗೆ ಸೇರಿದ ವಿವಿಧ ಬಗೆಯ ರಾಮಾಯಣಗಳಿವೆ. ವಾಲ್ಮೀಕಿ, ವ್ಯಾಸರ ರಾಮಾಯಣ ಹಾಗೂ ಮಹಾಭಾರತಗಳನ್ನು ಮೂಲ ಆಕರವಾಗಿರದ ಮೌಖಿಕ ಪರಂಪರೆಯ ಮೇಲೆ ರಚಿತವಾದ 'ಗೊಂಡರ ರಾಮಾಯಣ', ಸರಳ ದಾಸನ 'ಸರಳ ರಾಮಾಯಣ' ಕೃತಿಗಳೂ ಇವೆ. ಒಂದೊಂದು ರಾಮಾಯಣದಲ್ಲಿ ಒಬ್ಬೊಬ್ಬರು ಕೇಂದ್ರ. ಇಲ್ಲಿ ಪಿತೃವಾಕ್ಯ ಪರಿಪಾಲನೆ, ಭ್ರಾತೃಪ್ರೇಮ, ಸೇವಕರನ್ನು ಕುರಿತ ವಿಶ್ವಾಸ, ಏಕಪತ್ನಿ ವ್ರತ– ಈ ಮುಂತಾದ ಮೌಲ್ಯಗಳು ಹಿರಿಯ ಪರಂಪರೆಯ ಕೃತಿಗಳಲ್ಲಿ ವ್ಯಕ್ತವಾಗಿದ್ದರೆ. ಕಿರುಪರಂಪರೆಯ ರಾಮಾಯಣಗಳಲ್ಲಿ ದಾಯಾದಿ ಜಗಳ, ಎರಡು ಗುಂಪುಗಳ ವೈಮನಸ್ಯ, ಬಹುಪತ್ನಿತ್ವ– ಮುಂತಾದ ಅಪಮೌಲ್ಯಗಳೂ ಕೂಡ ಬಂದಿರುವುದುಂಟು.

ರಾಮಾನುಜನ್ ಅವರು ತಮಗಿಂತ ಹಿಂದಿನ ವಿದ್ವಾಂಸರು, ಭಾಷಾಂತರಕಾರರು ಅಧ್ಯಯನ ಮಾಡಿದ ರಾಮಾಯಣಗಳನ್ನು ತಮ್ಮ ಪ್ರಬಂಧ ಬರೆಯುವುದಕ್ಕೆ ಪರಿಶೀಲಿಸುತ್ತಾರೆ. ಅವರೇ ಹೇಳುವ ಹಾಗೆ–

> "ಇದರಲ್ಲಿ ನಾನು ವಿವಿಧ ಸಂಸ್ಕೃತಿಗಳು, ಭಾಷೆಗಳು ಮತ್ತು ಧಾರ್ಮಿಕ ಪರಂಪರೆಗಳಲ್ಲಿ ಕಂಡುಬರುವ ಒಂದೇ ಕಥೆಯ ನೂರಾರು ವಕ್ತೃಗಳು ಹೇಗೆ ಒಂದಕ್ಕೊಂದು ಸಂಬಂಧಿಸಿವೆ ಮತ್ತು ಅವು ಹೇಗೆ ಭಾಷಾಂತರ, ಭಾವಾಂತರ

ಹಾಗೂ ರೂಪಾಂತರಗೊಳ್ಳುತ್ತವೆ ಎಂಬುದನ್ನು ಕಂಡು ಬೆರಗಾಗಿದ್ದೇನೆ. ಇವುಗಳಲ್ಲಿ ಕೆಲವು ಮಾದರಿಗಳನ್ನು ಓದುಗರಿಗೆ ನೀಡುವುದರ ಮೂಲಕ ನನಗೆ ನಾನೇ ನನ್ನ ಆಲೋಚನೆಗಳಲ್ಲಿರುವ ಅಭಿಪ್ರಾಯಗಳನ್ನು ಸ್ಪಷ್ಟಪಡಿಸಿಕೊಳ್ಳಲು ಇಲ್ಲಿ ಪ್ರಯತ್ನಿಸಿದ್ದೇನೆ"[೮]

ಎಂದಿದ್ದಾರೆ.

ಇದಕ್ಕಾಗಿ ವಾಲ್ಮೀಕಿ ಮತ್ತು ಕಂಬ-ಇಬ್ಬರು ಅಹಲ್ಯೆಯರು ಎಂಬ ಪ್ರಸಂಗವನ್ನು ಚರ್ಚೆಗೆ ಎತ್ತಿಕೊಳ್ಳುತ್ತಾರೆ. ವಾಲ್ಮೀಕಿಯಲ್ಲಿ ಮತ್ತು ಕಂಬನಲ್ಲಿ ಅಹಲ್ಯೆ ಪ್ರಸಂಗ ಹೇಗೆ ಬರುತ್ತದೆ ಎಂಬುದನ್ನು ಇಲ್ಲಿ ತೌಲನಿಕವಾಗಿ ಪರಿಶೀಲಿಸುತ್ತಾರೆ. ಹಾಗೆಯೇ ಇನ್ನೂ ಮುಂತಾದ ಕೆಲವು ರಾಮಾಯಣದಿಂದ ಆಯ್ದ ಪ್ರಸಂಗಗಳನ್ನು ತೆಗೆದುಕೊಂಡು ರಾಮಾಯಣದ ಕಥೆಯ ವಿಸ್ತಾರತೆಯನ್ನು ಶೋಧಿಸುತ್ತಾರೆ.

ರಾಮಾಯಣದ ಭಿನ್ನತೆಗಳನ್ನು ವಿವರಿಸುವ ಸಲುವಾಗಿ ರಾಮಾನುಜನ್ ಅವರು ರಾಮಾಯಣದ ಒಂದು ಭಾಗವನ್ನು ಉದಾಹರಿಸಿ ಚರ್ಚೆಗೆ ಎತ್ತಿಕೊಂಡಿದ್ದಾರೆ. ವಾಲ್ಮೀಕಿ ರಾಮಾಯಣದಲ್ಲಿ ಇಂದ್ರನಿಗೆ ಅಹಲ್ಯೆಯ ಮೇಲೆ ಆಸೆಯಿದ್ದರೂ. ಅಹಲ್ಯೆಯ ಒಪ್ಪಿಗೆಯಿಂದಲೇ ಇಂದ್ರ ಅವಳನ್ನು ಕೂಡಿ ಸರಸವಾಡುತ್ತಾನೆ. ಆದರೆ ಕಂಬನ್ ರಾಮಾಯಣದಲ್ಲಿ ಅಹಲ್ಯೆಗೆ ತಾನು ಮಾಡುತ್ತಿರುವುದು ಅಪಚಾರ ಎಂದು ತಿಳಿದಿದ್ದರೂ ಇಂದ್ರನನ್ನು ಕೂಡುತ್ತಾಳೆ. ಮನೋಸಹಜವಾದ ಮತ್ತು ನಿಷಿದ್ಧವಾದ ಸುಖವನ್ನು ಆ ಕ್ಷಣದಲ್ಲಿ ಬಿಟ್ಟುಕೊಡಲು ನಿರಾಕರಿಸಿ ಇಂದ್ರನನ್ನು ಕೂಡುತ್ತಾಳೆ. ಇದು ಗ್ರಂಥಸ್ಥ ರೂಪದ ರಾಮಾಯಣದ ಕಲ್ಪನೆಯಾಗಿದ್ದರೂ ಬೆಕ್ಕಿನ ರೂಪದಲ್ಲಿ ಓಡಿಹೋಗಲು ಯತ್ನಿಸುವ ಇಂದ್ರನ ನಡವಳಿಕೆ ಶುದ್ಧಾಂಗ ಜಾನಪದೀಯ ಕಲ್ಪನೆಯಾಗಿದೆ ಎನ್ನುತ್ತಾರೆ ರಾಮಾನುಜನ್.

ನಿಶ್ಚಲವಾಗಿ ನಿಂತಿರುವ ಅಹಲ್ಯೆಯನ್ನು ನೋಡಿ ಗೌತಮನು ನಿಷಿದ್ಧವಾದ ಸುಖವನ್ನು ಬಯಸಿದ್ದಕ್ಕಾಗಿ ಅಹಲ್ಯೆಗೆ ಯಾವ ಭಾವನೆಗಳೂ ಇಲ್ಲದ ಕಲ್ಲಾಗುವಂತೆ ಶಪಿಸುತ್ತಾನೆ. ಅಂತೆಯೇ ಇಂದ್ರನಿಗೆ ಯಾವುದನ್ನು ಬಯಸಿ ಋಷಿಕನ್ಯೆಯೊಡನೆ ಕೂಡಿ ಸುಖಿಸಿದನೋ ಅದರ ಚಿಹ್ನೆಯೇ ಮೈಮೇಲೆ ಮೂಡುವಂತೆ ಅಂದರೆ ಮೈಯೆಲ್ಲಾ ಸಹಸ್ರ ಯೋನಿಗಳಾಗುವಂತೆ ಶಪಿತನಾಗುತ್ತಾನೆ. ಭಾವಶೂನ್ಯದ ಕಲ್ಲಾಗಿ ಅಹಲ್ಯೆ ಮತ್ತು ಇಂದ್ರ ಕಾಮಪೀಪಾಸುತನಕ್ಕೆ ತಕ್ಕ ಚಿಹ್ನೆಯನ್ನು ಮೈಮೇಲೆ ಹೊಂದುವಂತಾಗುತ್ತದೆ. ಮುಂದೆ ಅದು ಕಣ್ಣುಗಳಾಗಿ ಮಾರ್ಪಾಟದ ವಿಷಯವನ್ನು ಇಲ್ಲಿ ರಾಮಾನುಜನ್ ಚರ್ಚಿಸಿದ್ದಾರೆ. ಈ ಪ್ರಸಂಗವನ್ನು ರಾಮಾನುಜನ್ ಅವರು ತಮ್ಮ ತೌಲನಿಕ ನೆಲೆಯಲ್ಲಿ ಮತ್ತು ಬಹುಶಿಸ್ತೀಯ ನೆಲೆಯಲ್ಲಿ ಗ್ರಹಿಸುತ್ತಾ ಹೋಗುತ್ತಾರೆ. ಅವರೇ ಹೇಳುವಂತೆ:

“ವಾಲ್ಮೀಕಿಯಲ್ಲಿ ಕಾಣಸಿಗದ ಈ ಆಶಯಗಳು ದಕ್ಷಿಣ ಭಾರತದ ಜಾನಪದ ಸಂಪ್ರದಾಯ ಮತ್ತು ರಾಮಕಥೆಗಳಲ್ಲಿ, ಶಾಸನಗಳಲ್ಲಿ, ಪ್ರಾಚೀನ ತಮಿಳು ಕಾವ್ಯಗಳಲ್ಲಿ ಹಾಗೂ ತಮಿಳೇತರ ಮೂಲಗಳಲ್ಲಿ ಕಂಡುಬರುತ್ತವೆ. ಕಂಬನು ಈ ಭಾಗದಲ್ಲಿ ಹಾಗೂ ಬೇರೆ ಭಾಗಗಳಲ್ಲಿ ಅವನ ಪೂರ್ವಸೂರಿಯಾದ ವಾಲ್ಮೀಕಿಯ ಸಾಮಗ್ರಿಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳುತ್ತಾನೆ; ಅಲ್ಲದೆ ಹಲವು ಪ್ರಾದೇಶಿಕ ಜಾನಪದೀಯ ಪರಂಪರೆಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಾನೆ. ಅನೇಕ ಸಂದರ್ಭಗಳಲ್ಲಿ ಅವನ ಮೂಲಕವೇ ಈ ಜಾನಪದ ಪರಂಪರೆಗಳು ಇತರ ರಾಮಾಯಣಗಳಲ್ಲಿ ಸೇರಿಕೊಂಡಿವೆ”[೯] ಎಂದು ಅಭಿಪ್ರಾಯ ತಳೆಯುತ್ತಾರೆ.

“ರಾಮಕಥೆಯು ಮೂರು ಮಾರ್ಗಗಳಲ್ಲಿ ಸಂಚರಿಸಿರಬೇಕು. ಭೂಮಾರ್ಗವಾಗಿ ಅದು ಉತ್ತರದ ಹಾದಿಯಲ್ಲಿ, ಪಂಜಾಬ್ ಮತ್ತು ಕಾಶ್ಮೀರದಿಂದ ಚೀನ, ಟಿಬೆಟ್ ಮತ್ತು ಪೂರ್ವ ತುರ್ಕಿಸ್ಥಾನಕ್ಕೆ, ಸಮುದ್ರ ಮಾರ್ಗವಾಗಿ ದಕ್ಷಿಣದ ಹಾದಿಯಲ್ಲಿ ಗುಜರಾತ್ ಮತ್ತು ದಕ್ಷಿಣ ಭಾರತದಿಂದ ಜಾವ, ಸುಮಾತ್ರ ಮತ್ತು ಮಲಯಕ್ಕೆ ಹಾಗೂ ಮತ್ತೆ ಭೂಮಾರ್ಗವಾಗಿ ಪೂರ್ವದ ಹಾದಿಯಲ್ಲಿ ಬಂಗಾಳದಿಂದ ಬರ್ಮಾ, ಥಾಯ್ಲೆಂಡ್ ಮತ್ತು ಲಾವೋಸ್‌ಗೆ ಸಂಚರಿಸಿರಬೇಕು. ವಿಯೆಟ್ನಾಂ ಮತ್ತು ಕಾಂಬೋಡಿಯಾ ದೇಶಗಳಿಗೆ ರಾಮಕಥೆಯು ಸ್ವಲ್ಪಮಟ್ಟಿಗೆ ಜಾವ ಮತ್ತು ಭಾರತದಿಂದ ಪೂರ್ವದ ಹಾದಿಯಲ್ಲಿ ಸಂಚರಿಸಿರಬಹುದು.”[೧೦]

ಪ್ರಪಂಚದಾದ್ಯಂತ ಹೀಗೆ ರಾಮ ಕಥೆಯು ಹರಡಿರುವುದಕ್ಕೆ ಕಾರಣ ಮತ್ತು ಪ್ರಾಮುಖ್ಯತೆಯನ್ನು ಪಡೆದಿದೆ ಎಂಬ ಸಂತೋಷ ದೇಸಾಯಿಯವರ ಈ ಅಭಿಪ್ರಾಯವನ್ನು ರಾಮಾನುಜನ್ ಸಹ ಒಪ್ಪಿಕೊಂಡಿದ್ದಾರೆ.

ಜೈನ ಕಾವ್ಯಗಳಲ್ಲಿ ರಾಮಾಯಣದ ಕಥೆ ಪ್ರವೇಶಿಸುವುದೇ ಪರ್ಯಾಯವಾಗಿ ಅಂದರೆ ಹಿಂದೂ ಆಚರಣೆಯಲ್ಲಿ ರಾಮನ ಕಲ್ಪನೆಗೆ ವಿರುದ್ಧವಾಗಿ; ರಾಮನನ್ನು ವಿಜೃಂಭಿಸುವ ಓಘದಲ್ಲಿ ರಾವಣನನ್ನು ಒಬ್ಬ ರಾಕ್ಷಸನನ್ನಾಗಿಯೂ, ದುಷ್ಟನನ್ನಾಗಿಯೂ ಚಿತ್ರಿಸಿದ್ದಾರೆ. ಆದರೆ ಜೈನ ಕವಿಯಾದ ವಿಮಲಸೂರಿಯು ರಾಮನ ಬದಲಿಗೆ ರಾವಣನ ಮೂಲಕ ರಾಮಾಯಣವನ್ನು ಪ್ರಾರಂಭಿಸುತ್ತಾನೆ:

“ರಾವಣನು... ಓರ್ವ, ವಿದ್ವಾಂಸ, ಉದಾರಿ, ತನ್ನ ತಪೋಬಲದಿಂದಲೇ ಮಾಂತ್ರಿಕ ಶಕ್ತಿ ಹಾಗೂ ಶಸ್ತ್ರಾಸ್ತ್ರಗಳನ್ನು ಸಂಪಾದಿಸಿದವನು; ಜೈನತೀರ್ಥಂಕರರ ಪರಮಭಕ್ತ. ಓರ್ವ ತೀರ್ಥಂಕರನನ್ನು ಮೆಚ್ಚಿಸಲು ಆತ ತನ್ನಲ್ಲಿ ಅನುರಕ್ತಳಾಗದ ಹೆಣ್ಣನ್ನು ತಾನು ಮುಟ್ಟುವುದಿಲ್ಲವೆಂದು ಆಣೆ ಮಾಡುತ್ತಾನೆ.”[೧೧]

ಹೀಗೆ ರಾವಣ ರಾಮಾಯಣದಲ್ಲಿ ಹೇಗೆ ಶ್ರೇಷ್ಠ ಎಂಬುದನ್ನು ಕವಿ ಹೇಳುತ್ತಾನೆ. ಮುಂದುವರಿಯುತ್ತ –

> "ಜೈನ ರಾಮಾಯಣಗಳ ಇನ್ನೊಂದು ಪರಂಪರೆಯಲ್ಲಿ ಸೀತೆಯು ರಾವಣನ ಮಗಳು; ಅದು ಅವನಿಗೆ ತಿಳಿದಿರುವುದಿಲ್ಲ. ಈಡಿಪಸ್‌ನ ದುರಂತವನ್ನು ನೆನಪಿಸುವ ಈ ಸಂದರ್ಭ ವಿಧಿಯ ಚದುರಂಗದಾಟವಾದಲ್ಲಿ ಆತನ ಸೋಲು ಪೂರ್ವನಿಶ್ಚಿತವಾಗಿದೆ ಎಂಬುದನ್ನು ಸೂಚಿಸುತ್ತದೆ."[೧೨]

ಎಂದು ರಾಮಾನುಜನ್ ರಾಮಾಯಣದ ಕೆಲವು ಘಟನೆಗಳನ್ನು ಗ್ರೀಕ್ ಮೈಥಾಲಜಿಯಲ್ಲಿ ಬರುವ ಈಡಿಪಸ್ ಕಥೆಗೆ ಸಾಮ್ಯತೆಯನ್ನು ತರುತ್ತಾರೆ.

ಮೌಖಿಕ ಪರಂಪರೆಯ ಜಾನಪದದಲ್ಲಿ ಇದು ಪಠ್ಯದಿಂದ ಬಾಯಿಮಾತಿಗೆ ಬರುತ್ತದೆ ಎಂದು ಇಲ್ಲಿ ನೋಡಬಹುದಾಗಿದೆ. ಜಾನಪದ ಪರಿಕಲ್ಪನೆಯಲ್ಲಿ ರಾಮಾಯಣವು ಪಠ್ಯದಲ್ಲಿ ಬರುವ ಹಾಗೆ ರಾಮ ಅಥವಾ ರಾವಣರ ಮೂಲಕ ಪ್ರವೇಶ ಪಡೆದುಕೊಳ್ಳುವುದಿಲ್ಲ. ಬದಲಿಗೆ ಮಂಡೋದರಿ ಮತ್ತು ಸೀತೆಯ ಮೂಲಕ ಅಂದರೆ ಹೆಣ್ಣಿನ ಜೀವನಚಿತ್ರಣದ ಮೂಲಕ ಪ್ರವೇಶ ಪಡೆದುಕೊಳ್ಳುತ್ತದೆ.

ಒಬ್ಬ ತಂಬೂರಿ ದಾಸಯ್ಯನು ಹಾಡಿನ ಮೂಲಕ ಮೊದಲು ರಾವಣ, ಮಂಡೋದರಿಯ ಜೀವನಚರಿತ್ರೆಯನ್ನು ಹೇಳಿ ನಂತರದಲ್ಲಿ ಸೀತೆಯ ಜನನದ ವಿವರಣೆ ಕೊಟ್ಟು, ತದನಂತರ ರಾಮ ಲಕ್ಷ್ಮಣರ ಚಿತ್ರಣವನ್ನು ಕೊಡುತ್ತಾನೆ:

> "ಈ ಜನಪದ ರಾಮಾಯಣದಲ್ಲಿ ಒಂದು ವಿಭಿನ್ನವಾದ ಹೆಣಿಗೆ ಹಾಗೂ ಅವಧಾರಣೆಯನ್ನು ಗಮನಿಸಬಹುದು: ಸೀತೆಯ ಜೀವನ, ಜನನ, ದತ್ತು ಸ್ವೀಕಾರ, ವಿವಾಹ, ಅಪಹರಣ ಹಾಗೂ ಪುನರ್ಮಿಲನ – ಹೀಗೆ ಕತೆಗಾರ ಮತ್ತೆ ಮತ್ತೆ ಸೀತೆಯ ವಿಷಯಕ್ಕೇ ಮರಳಿ ಬರಲು ಹಾತೊರೆಯುತ್ತಾನೆ. ರಾಮಲಕ್ಷ್ಮಣರ ಜನನ, ವನವಾಸ, ರಾವಣನ ಜೊತೆ ಯುದ್ಧ – ಈ ಭಾಗಗಳಷ್ಟೇ ದೊಡ್ಡದಾಗಿದೆ. ಸೀತಾಪರಿತ್ಯಾಗ, ಗರ್ಭಧಾರಣೆ ಮತ್ತು ಪುನರ್ಮಿಲನದ ಭಾಗಗಳೂ ಕೂಡ. ಮೇಲಾಗಿ ಪುರುಷನಾದ ರಾವಣನ ಗರ್ಭದಲ್ಲಿ ಆಕೆಯ ವಿಲಕ್ಷಣ ಜನನವಾಯಿತೆಂಬುದು ಬಸಿರು ಮತ್ತು ಹೆರಿಗೆ ಬಗೆಗಿನ ಗಂಡಿನ ಅಸೂಯೆ ಮೊದಲಾದ ಹೊಸ ಹೊಳಹುಗಳಿಗೆ ಅವಕಾಶ ಕಲ್ಪಿಸಿದೆ. ಇದು ಭಾರತೀಯ ಸಾಹಿತ್ಯದಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ ವಸ್ತು. ಈಡಿಪಸ್ ಲಾಲಸೆಯ ಈ ಭಾರತೀಯ ಆವೃತ್ತಿಯಲ್ಲಿ ತಂದೆ ಮಗಳನ್ನು ಬೆನ್ನಟ್ಟುತ್ತಾನೆ. ಈ ಪ್ರಕರಣವು ತನ್ನನ್ನು ಮೋಹಿಸುವ ತಂದೆಯ ಸಾವಿಗೆ ಮಗಳೇ ಕಾರಣವಾಗುವುದಕ್ಕೆ ನಿದರ್ಶನವಾಗಿದೆ."[೧೩]

ಹೀಗೆ ಜನಪದ ರಾಮಾಯಣದಲ್ಲಿ ಹೆಣ್ಣಿನ ಪಾತ್ರ ಬಹಳ ಮುಖ್ಯವಾಗಿ ಕಾಣಸಿಗುತ್ತವೆ. ಪಠ್ಯದ ಅಂದರೆ ವಾಲ್ಮೀಕಿ, ಕಂಬನ್ ಹಾಗೂ ವಿಮಲಸೂರಿಯ ರಾಮಾಯಣದ ಪರಿಕಲ್ಪನೆಗೆ ಪರ್ಯಾಯವಾದ ಒಂದು ಸಾರ್ವಕಾಲಿಕ ಪರಿಕಲ್ಪನೆಯನ್ನು ಜನಪದ ಕೊಟ್ಟಿದೆ ಎಂಬ ನಿರ್ಣಯಕ್ಕೆ ರಾಮಾನುಜನ್ ಬರುತ್ತಾರೆ.

ವೈದಿಕ ಪರಿಕಲ್ಪನೆಯ ರಾಮಾಯಣಗಳಲ್ಲಿ ಉದಾಹರಣೆಗೆ ವಾಲ್ಮೀಕಿ ರಾಮಾಯಣದಲ್ಲಿ ಶ್ರೀರಾಮ ಕಾವ್ಯನಾಯಕ, ನಾಗಚಂದ್ರನೆಂಬ ಕನ್ನಡ ಕವಿಯ ಜೈನ ಪರಂಪರೆಯ ರಾಮಾಯಣದಲ್ಲಿ ರಾವಣ ರುದ್ರಗಂಭೀರ ನಾಯಕ, ಜನಮಾನಸಕ್ಕೆ ಹತ್ತಿರದಲ್ಲಿರುವ ಜನಪದೀಯ ರಾಮಾಯಣಗಳಲ್ಲಿ ಸೀತೆಯೇ ನಾಯಕಿ. ಇದು ಪ್ರಧಾನವಾದ ಭಾರತೀಯ ಪರಿಕಲ್ಪನೆ. ಈ ಎಲ್ಲಾ ಮೇಲ್ಕಂಡ ವಿಚಾರಗಳನ್ನು ರಾಮಾನುಜನ್ ಅವರು ವಿವರ ವಿವರವಾಗಿ ಪ್ರಬಂಧದಲ್ಲಿ ವಿವರಿಸಿರುತ್ತಾರೆ. ಮೌಖಿಕ ಸಾಹಿತ್ಯದ ಕಿರುಪರಂಪರೆಯಲ್ಲಿ ಮಹಿಳೆಯೇ ಪ್ರಾತಿನಿಧ್ಯ ಸ್ಥಾಪಿಸುವುದರ ಮೂಲಕ ಮಾತೃಪ್ರಧಾನ ಕುಟುಂಬವ್ಯವಸ್ಥೆಗೆ ಸಂಕೇತವಾಗುತ್ತದೆ. ಆದರೆ ಹಿರಿಯ ಪರಂಪರೆ ಎನ್ನುವ ಲಿಖಿತ ಸಾಹಿತ್ಯ ಪರಂಪರೆಯಲ್ಲಿ ಪುರುಷಪ್ರಾಧಾನ್ಯತೆ, ಅವನ ಪೌರುಷತ್ವ ಕಂಡುಬರುತ್ತದೆ.

ಹಲವು ರಾಮಾಯಣಗಳ ಬಗ್ಗೆ ಇರುವ ಕಥೆಯೊಂದರಿಂದ ಆರಂಭಗೊಳ್ಳುವ ಈ ಪ್ರಬಂಧವನ್ನು ಹನುಮಂತ ಮತ್ತು ರಾಮನ ಉಂಗುರದ ಬಗ್ಗೆ ಇರುವ ಇನ್ನೊಂದು ಕಥೆಯನ್ನು ಹೇಳುವುದರ ಮೂಲಕ ರಾಮಾನುಜನ್ ಅವರು ಕಥೆಯನ್ನು ಮುಗಿಸುತ್ತಾರೆ. ಈ ಪ್ರಬಂಧವನ್ನು ದೆಹಲಿಯ ವಿಶ್ವವಿದ್ಯಾಲಯದ ಪದವಿ ತರಗತಿಗೆ ಪಠ್ಯ ಮಾಡಿದಾಗ ಅಲ್ಲಿಯ ಕೆಲವು ಬಲಪಂಥೀಯ ಚಳುವಳಿ, ಹೋರಾಟದ ಶಕ್ತಿಗಳಿಂದ ಆ ಪ್ರಬಂಧವನ್ನು ಬೋಧನೆಯಿಂದ ಹಿಂದಕ್ಕೆ ಪಡೆದದ್ದು ಚರಿತ್ರೆಯ ವ್ಯಂಗ್ಯ.

೫.೪. ಮಹಾಭಾರತದಲ್ಲಿ ಪುನರುಕ್ತಿ(Repetition in the Mahabharatha)

ಇದು ಮಹಾಭಾರತದೊಳಗೆ ಬರುವ ಅನೇಕ ಘಟನೆಗಳ ಪುನರುಕ್ತಿಗಳ ಜೊತೆಗೆ ಮಹಾಭಾರತವನ್ನು ಪರಿಭಾವಿಸುವ ದೇಶಕಾಲವನ್ನು ಮೀರಿದ ಓದುಗರ ಮನಸ್ಸಿನಲ್ಲಿ ಉಂಟಾಗುವ ಪುನರುಕ್ತಿಯೂ ಹೌದು. ಮಹಾಭಾರತವನ್ನು ಸಮಗ್ರವಾಗಿ ಅದರ ಹಲವು ಪಾತಳಿಗಳ ಆಳಕ್ಕೆ ಇಳಿದು ಅಲ್ಲಿನ ಸೂಕ್ಷ್ಮಗಳನ್ನು ಗಮನಿಸಿ ಅದರ ಒಟ್ಟು ಬಂಧಕ್ಕೆ ಇರುವ ಒಂದು ಚೌಕಟ್ಟನ್ನು ರಾಮಾನುಜನ್ ಈ ಪ್ರಬಂಧದಲ್ಲಿ ಗುರುತಿಸುತ್ತಾರೆ. ಏಳು ಭಾಗಗಳಿರುವ ೨೬ ಪುಟಗಳ ಈ ದೀರ್ಘ ಲೇಖನ ಇಡೀ ಮಹಾಭಾರತದ ಸಾಮಗ್ರಿಯನ್ನು ಸೂಕ್ಷ್ಮವಾದ ತಾತ್ವಿಕತೆಯ ಚಿಂತನೆಯಲ್ಲಿ ಹಿಡಿದಿಡುತ್ತದೆ.

ಯಾವ ಹಿಂದುವೂ ಮಹಾಭಾರತವನ್ನು ಮೊದಲಿಗೆ ಓದುವುದಿಲ್ಲ. ಓದಿದರೂ ಸಂಸ್ಕೃತದಲ್ಲಿರುವ ಅದನ್ನು ಓದುವುದಿಲ್ಲ. ಅಂತಹ ಸ್ಥಳೀಯರಲ್ಲಿ ಒಬ್ಬನಾಗಿ ಹಿಂದೂ ಮಹಾಕಾವ್ಯಗಳನ್ನು ನಾನೂ ಕನ್ನಡ ಮತ್ತು ತಮಿಳಿನ ಮೂಲಕ ಬಹುಮಟ್ಟಿಗೆ ಮೌಖಿಕ ಪರಂಪರೆಯ ಮೂಲಕ ಬಲ್ಲನೇ ಹೊರತು, ಸಂಸ್ಕೃತದ ಮೂಲಕ ತಿಳಿದವನಲ್ಲ ಎಂದು ಹೇಳುತ್ತಾ ರಾಮಾನುಜನ್ ಆರಂಭಿಸುವ ಈ ಲೇಖನ ಮಹಾಭಾರತದ ಮೌಖಿಕ ಪರಂಪರೆಯನ್ನು ಮತ್ತು ಅದರ ಪುನರುಕ್ತಿಯನ್ನು ವಿವರಿಸುತ್ತದೆ. ಮಹಾಭಾರತವು ಲಿಖಿತ ಪರಂಪರೆಯಿಂದ

ಹಿಡಿದು ಮೌಖಿಕ ಪರಂಪರೆಯವರಗೆ ಜಗತ್ತಿನಾದ್ಯಂತ ಪ್ರಚಲಿತದಲ್ಲಿದೆ. ಅದರ ಮೂಲ ಯಾವುದು? ಪ್ರಕ್ಷಿಪ್ತ ಯಾವುದು? ಎಂದು ಬೇರ್ಪಡಿಸಲಾರದಷ್ಟು ಅದು ನಿತ್ಯ ಬೆಳೆಯುವ ಒಂದು ಜೀವಂತ ಕಾವ್ಯವಾಗಿದೆ. ಅದರಲ್ಲೂ ಮೌಖಿಕ ಪರಂಪರೆಯಲ್ಲಿ ಅದು ವ್ಯಕ್ತಿಯಿಂದ ವ್ಯಕ್ತಿಗೆ, ಸಮುದಾಯದಿಂದ ಸಮುದಾಯಕ್ಕೆ, ಜನಾಂಗದಿಂದ ಜನಾಂಗಕ್ಕೆ, ದೇಶದಿಂದ ದೇಶಕ್ಕೆ ಬದಲಾಗುವ, ವಿಸ್ತರಿಸುವ ಶಕ್ತಿಯನ್ನು ಒಳಗೊಂಡಿದೆ. ಅದರಿಂದ ವಸ್ತುವನ್ನಾಗಿ ಪಡೆಯದ ಬಹುಶಃ ಯಾವುದೇ ಸಾಹಿತ್ಯ ಪ್ರಕಾರ ಇರಲಾರದು. ಇದಕ್ಕೆ ರಾಮಾನುಜನ್ ಅವರು ಉದಾಹರಿಸುವ ಒಂದು ಪ್ಯಾರಾವನ್ನು ಇಲ್ಲಿ ದಾಖಲಿಸಬಹುದಾಗಿದೆ:

> "ನಾಟಕಗಳಿಂದ ಗಾದೆಗಳವರೆಗೆ, ಜಾನಪದ ಪ್ರದರ್ಶನದಿಂದ ಹಿಡಿದು ಸಿನಿಮಾ ಟಿವಿಗಳವರೆಗೆ ಮಹಾಭಾರತವು ಎಲ್ಲ ಪ್ರಕಾರದ ಸೃಷ್ಟಿಗಳಿಗೂ ಸಾಮಗ್ರಿಯನ್ನು, ಉದಾಹರಣೆಯನ್ನು ಒದಗಿಸಿದೆ. ಜನಪ್ರಿಯ ತಮಿಳು ವಾರಪತ್ರಿಕೆಗಳಲ್ಲಿ ರಾಮಾಯಣ ಮಹಾಭಾರತಗಳು ಧಾರಾವಾಹಿಯಾಗಿ ಪ್ರಕಟವಾಗಿವೆ. ಆಧುನಿಕ ರಾಜಕೀಯಕ್ಕೆ ಪರಂಪರೆಯ ವಿವೇಕವನ್ನು ತಂದುಕೊಡಲು ತನ್ನನ್ನೆ ಸಮರ್ಪಿಸಿಕೊಂಡಿರುವ ಹಿರಿಯ ಮುತ್ಸದ್ದಿ ಸಿ.ರಾಜಗೋಪಾಲಾಚಾರಿ ಈ ಮಹಾಕಾವ್ಯಗಳನ್ನು ತಮಿಳಿನಲ್ಲಿ ಮರುನಿರೂಪಿಸಿದ್ದಾರೆ. ಅನಂತರ ಅವನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಅವನ್ನು ಭಾರತೀಯ ವಿದ್ಯಾಭವನ ಪ್ರಕಟಿಸಿದಾಗ ಅವು ಇಂಗ್ಲಿಷ್‌ನಲ್ಲಿ ಲಭ್ಯವಿರುವ ಭಾರತೀಯ ಮಹಾಕಾವ್ಯಗಳ ಅತ್ಯಂತ ಜನಪ್ರಿಯ ಆವೃತ್ತಿಗಳಾದವು. ಮಹಾಭಾರತ ಅನೇಕ ಗಾತ್ರಗಳಲ್ಲಿ, ಅನೇಕ ಭಾಷೆಗಳಲ್ಲಿ ಕಾಣಿಸಿಕೊಳ್ಳುತ್ತದೆ. 'ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ' ಎಂಬ ಕನ್ನಡ ಗಾದೆಯಿಂದ ಹಿಡಿದು, ಒಂದೆರಡು ಗಂಟೆಗಳ ಪ್ರದರ್ಶನವನ್ನೂ ಒಳಗೊಂಡು, ಒಂದು ಲಕ್ಷ ಶ್ಲೋಕಗಳನ್ನು ಒಳಗೊಂಡ ಸಂಸ್ಕೃತ ಕಾವ್ಯದ ದಕ್ಷಿಣ ಭಾರತೀಯ ಆವೃತ್ತಿಯವರೆಗೆ ಅದರ ವ್ಯಾಪ್ತಿ ಇದೆ. ಅನೇಕ ಭಾರತೀಯ ಮಾತೃಭಾಷೆಗಳಿಗೆ ಅನುವಾದವಾಗಿ, ರೂಪಾಂತರವಾಗಿ, ಭಾಷಾಂತರವಾಗಿ, ಹಲವು ಸ್ಥಳೀಯ ಸಮುದಾಯಗಳಲ್ಲಿ ದ್ರೌಪದಿಯೂ ಪಾಂಡವರೂ ನಟರ ಮತ್ತು ಪ್ರೇಕ್ಷಕರ ಮೈ ಮೇಲೆ ಆವಾಹನೆಯಾಗುವಂತಹ ಪ್ರದರ್ಶನಗಳಾಗಿ ಕಾಣಿಸಿಕೊಳ್ಳುತ್ತದೆ. ಇಂಥದೊಂದು ಪ್ರದರ್ಶನ ಹಿಮಾಚಲ ಪ್ರದೇಶದ 'ಪಾಂಡವಲೀಲಾ'ವನ್ನು ೧೯೮೭ರಲ್ಲಿ ಸಾಕ್ಸ್, ತಮಿಳುನಾಡಿನ ದ್ರೌಪದೀ ಪಂಥವನ್ನು ಹಿಲ್ಟ್‌ಬೀಯ್ಟೆಲ್ ವಿವರವಾಗಿ ಅಭ್ಯಾಸಕ್ಕೆ ಒಳಪಡಿಸಿದ್ದಾರೆ. **ಹೀಗಾಗಿ ಮಹಾಭಾರತದಂತ ಪಠ್ಯ ಕೇವಲ ಪಠ್ಯವಲ್ಲ, ಅದೊಂದು ಪರಂಪರೆ."** [೧೪]

ರಾಮಾನುಜನ್ ಅವರು ಹೇಳುವ ಹಾಗೆ ಮಹಾಭಾರತ ಒಂದು ಪಠ್ಯ ಅಲ್ಲ. ಅದು ಅನೇಕ ಸಹಪಠ್ಯಗಳನ್ನು ಒಳಗೊಂಡಂತಹದ್ದು. ಅದು ಮೌಖಿಕ ಪರಂಪರೆಗೆ ಹತ್ತಿರವಾದದ್ದು. ಹಾಗಾಗಿ ಅದೊಂದು ಗಾತ್ರದಲ್ಲಿ ಭಾರತೀಯರಲ್ಲದ ಓದುಗರನ್ನು ಆಕರ್ಷಿಸುವ ಬಹುಶ್ರುತ

ಪರಂಪರೆಯ ಕಾವ್ಯ ರಾಮಾಯಣಕ್ಕೂ ಕೂಡ ಇದೇ ಮಾತನ್ನು ಹೇಳಬಹುದು. ಮೌಖಿಕ ಪರಂಪರೆಯಲ್ಲಿ ಪಠ್ಯ ಎಂಬುದೇ ಇರುವುದಿಲ್ಲ. ಅಲ್ಲಿ ವಕ್ತೃಗಳಿಂದ ಅನೇಕ ಸಹಪಠ್ಯಗಳು ನಿರ್ಮಾಣವಾಗುತ್ತಿರುತ್ತವೆ. ರಾಮಾಯಣ ಮತ್ತು ಮಹಾಭಾರತದಿಂದ ಪ್ರೇರಣೆ ಪಡೆದು ಆಧುನಿಕ ಲೇಖಕರೂ ಕೂಡ ಬಹುಮಟ್ಟಿಗೆ ಎಲ್ಲಾ ಭಾರತೀಯ ಭಾಷೆಗಳಲ್ಲಿಯೂ ಕೃತಿಗಳನ್ನು ರಚನೆ ಮಾಡಿದ್ದಾರೆ. ಮಹಾಭಾರತದಿಂದ ಪ್ರೇರಣೆ ಪಡೆದು ಕೃತಿಗಳನ್ನು ರಚಿಸಿದವರಲ್ಲಿ ಪ್ರಾಚೀನ ಕನ್ನಡದ ಕವಿಗಳಾದ ಪಂಪ, ರನ್ನ, ಕುಮಾರವ್ಯಾಸರೂ ಸಹ ಇದ್ದಾರೆ. ಮಹಾಭಾರತದಿಂದ ಪ್ರೇರಣೆ ಪಡೆದ ಸುಬ್ರಮಣ್ಯ ಭಾರತಿಯವರ ತಮಿಳು ಕಥನಕಾವ್ಯ ಪಾಂಚಾಲಿ ಶಪಥಂ, ರಾಮಾಯಣದಿಂದ ಪ್ರೇರಣೆ ಪಡೆದ ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಮಹಾಕಾವ್ಯಗಳನ್ನೂ ಇಲ್ಲಿ ಹೆಸರಿಸಬಹುದು. ಹಾಗೆಯೇ ಮಹಾಭಾರತದಿಂದ ಕುವೆಂಪು ಅವರು 'ಬೆರಳ್ಗೆ ಕೊರಳ್' ನಾಟಕವನ್ನು ಮತ್ತು ರಾಮಾಯಣದಿಂದ 'ಶೂದ್ರ ತಪಸ್ವಿ' ಎಂಬ ನಾಟಕವನ್ನು, ಮರಾಠಿಯಲ್ಲಿ ವಿ.ಎಸ್.ಖಾಂಡೇಕರ್ ಅವರು 'ಯಯಾತಿ' ಎಂಬ ಕಾದಂಬರಿಯನ್ನು, ಕನ್ನಡದಲ್ಲಿ ಎಸ್.ಎಲ್.ಭೈರಪ್ಪನವರು 'ಪರ್ವ' ಎಂಬ ಕಾದಂಬರಿಯನ್ನು ಮತ್ತು ರಾಮಾಯಣದಿಂದ 'ಉತ್ತರಕಾಂಡ' ಎಂಬ ಕಾದಂಬರಿಯನ್ನು ಮತ್ತು ಹಿಂದಿಯಲ್ಲಿ ಧರ್ಮವೀರ ಭಾರತಿಯವರು 'ಅಂಧಯುಗ' ಎಂಬ ಕೃತಿಯನ್ನು ರಚಿಸಿದ್ದಾರೆ. ಈ ಪರಂಪರೆ ಹೀಗೆ ಮುಂದುವರಿದಿದೆ. ಇವೆಲ್ಲಾ ಇವರುಗಳಿಗೆ ಮಹಾಭಾರತದಿಂದ ಮತ್ತು ರಾಮಾಯಣದಿಂದ ಪಡೆದ ಪ್ರೇರಣೆಗಳಾಗಿವೆ. ಈ ಕಾವ್ಯಗಳು ಹೀಗೆ ಕಾವ್ಯ ನಾಟಕ ಚಲನಚಿತ್ರ ಇತ್ಯಾದಿಗಳಿಗೆ ಆಕರವಾದ ಕೃತಿಯಾಗಿದೆ. ಶಾಂಬೆನಗಲ್ ಅವರು ಹಿಂದಿಯಲ್ಲಿ 'ಕಲಿಯುಗ್' ಎಂಬ ಚಲನಚಿತ್ರವನ್ನು 'ಭಾರತ್ ಏಕ್ ಕೋಜ್' ಎಂಬ ಧಾರಾವಾಹಿಯನ್ನು ದೂರದರ್ಶನದಲ್ಲಿ ಪ್ರಸಾರ ಮಾಡಿದ್ದನ್ನು ನೆನೆಯಬಹುದು. ಹೀಗೆ ಮಹಾಭಾರತ ಕಾವ್ಯಜಗತ್ತು ಜಗತ್ತಿನಾದ್ಯಂತ ವ್ಯಾಪಿಸಿಕೊಂಡಿದೆ. ರಾಮಾನುಜನ್ ಅವರು ಹೇಳುವ ಹಾಗೆ ನಮ್ಮ ಪುರಾಣ ಕಾವ್ಯಗಳು ಕೇವಲ ಪಠ್ಯಗಳಲ್ಲ; ಅವು ದೊಡ್ಡ ಪರಂಪರೆಯನ್ನು ಹೊಂದಿರುವಂತಹವು.

ಮಹಾಭಾರತದ ವಸ್ತುವನ್ನು ಸಾಮಾನ್ಯರೂ ನೆನಪಿನಲ್ಲಿಟ್ಟುಕೊಳ್ಳಲು ಸಾಧ್ಯವಾಗಿರುವುದು ಅದರಲ್ಲಿರುವ ಬಹುಮುಖ್ಯವಾದ ಮೌಖಿಕ ಪರಂಪರೆಯೇ ಕಾರಣವಾಗಿದೆ. ಇದರ ಬಗ್ಗೆ ರಾಮಾನುಜನ್ ಅವರು ಹೀಗೆ ಹೇಳುತ್ತಾರೆ:

> "ಬಹುತೇಕ ಸಾಂಪ್ರದಾಯಕ ಹಿಂದೂಗಳು ಬಹು ಅಂತಸ್ತುಗಳ ಈ ಸಂಕೀರ್ಣವಾದ, ಅಗಾಧವಾದ ಮಹಾಕಾವ್ಯವನ್ನು ಅದರ ಹೆಚ್ಚಿನ ವಿವರಗಳನ್ನು ನೆನಪಿನಲ್ಲಿಟ್ಟುಕೊಂಡಿದ್ದಾರೆ. ಮಹಾಭಾರತವು 'ಸಂರಚನೆ'ಯನ್ನು ಉಳ್ಳ ಕೃತಿಯಾಗಿರುವುದರಿಂದಲೇ ಹಾಗೆ ನೆನಪಿಟ್ಟುಕೊಳ್ಳಲು ಸಾಧ್ಯವಾಗಿದೆ. ಬಹುಮಟ್ಟಿಗೆ ಮೌಖಿಕವೇ ಆಗಿರುವ ಪರಂಪರೆಗೆ ಸೇರಿದವರು ಭಾಷೆಯಲ್ಲಿ ಕಲಿಯುವಂತೆಯೇ


ತಮ್ಮ ಪರಂಪರೆಯ ಪ್ರಮುಖ ಸಾಹಿತ್ಯಿಕ ಕೃತಿಗಳನ್ನೂ ಕಲಿಯುತ್ತಾರೆ– ಆ ನಂತರದಲ್ಲಿ ಕಲಿಯುವವರ ಮನಸ್ಸಿನಲ್ಲಿ ಒಟ್ಟುಗೂಡಿ ಇಂಡಿಯಾದ ಬಿಡಿಬಿಡಿ ತುಣುಕುಗಳಾಗಿ ಕಲಿಯುತ್ತಾರೆ. ಯಾಕೆಂದರೆ ಅಂಥ ಒಂದೊಂದು ಬಿಡಿ ತುಣುಕೂ ತನ್ನೊಳಗೆ ಅಂತರ್ಗತವಾಗಿರುವ ಸಂರಚನೆಯನ್ನು ಪ್ರತಿಫಲಿಸುತ್ತಿರುತ್ತದೆ. ಪರಂಪರೆಯು ಆ ನಂತರದಲ್ಲಿ ಮಹಾಭಾರತವನ್ನು ಕಾವ್ಯವಲ್ಲ, ಇತಿಹಾಸವೆಂದು ಕರೆದು ಅದರಲ್ಲಿರುವ ಸಂರಚನೆ, ಸಂಯೋಜನೆಗಳನ್ನು ನಿರಾಕರಿಸಿತು. ಆದರೂ ಸಂಸ್ಕೃತದ ಮಹಾನ್ ಸೌಂದರ್ಯಶಾಸ್ತ್ರಜ್ಞ ಆನಂದವರ್ಧನನು ಮಹಾಕಾವ್ಯದ ಮುಖ್ಯಕಥೆಯನ್ನು ಒಂದು ಮುಖ್ಯಭಾವವನ್ನು ಕೇಂದ್ರವಾಗಿ ಉಳ್ಳ ಸುಸಂಬದ್ಧ ಕವಿತೆಯೆಂದೇ ಭಾವಿಸುತ್ತಾನೆ; ಅದರ ಎಲ್ಲ ಭಾಗ, ಕಥಾವಸ್ತು ಮತ್ತು ಪಾತ್ರಗಳು ಅಂತಿಮವಾಗಿ ಶಾಂತರಸದ ಪ್ರತಿಪಾದನೆಯಲ್ಲಿ ಔಚಿತ್ಯಪೂರ್ಣವಾಗಿ ಹೊಂದಿಕೊಂಡಿವೆ ಎನ್ನುತ್ತಾನೆ. ನಾವು ಅವನ ವಿವರಣೆಯನ್ನು ಒಪ್ಪಿದರೂ ಒಪ್ಪದಿದ್ದರೂ ಆನಂದವರ್ಧನನು ಮಾತ್ರ ಮಹಾಭಾರತವನ್ನು ನಿರ್ದಿಷ್ಟ ಆಕಾರವಿಲ್ಲದ ದೈತ್ಯ ಕೃತಿ ಎಂದಲ್ಲ, ಅಚ್ಚುಕಟ್ಟಾಗಿ ಪೂರ್ಣತೆಯನ್ನು ಸಾಧಿಸಿರುವ ಕೃತಿ ಎಂದೇ ಕಂಡಿದ್ದಾನೆ. ಇತ್ತೀಚಿನ ಭಾರತೀಯ ಮತ್ತು ಪಾಶ್ಚಾತ್ಯ ವಿದ್ವಾಂಸರು ಈ ಕೃತಿಯ ಪಠ್ಯದೊಳಗೆ ಸೇರಿರುವ ನೂರಾರು ಪ್ರಕ್ಷಿಪ್ತಗಳ ಬಗ್ಗೆ ಮಾತನಾಡಿದ್ದಾರೆ." [೧೫]

ಆನಂದವರ್ಧನ ಹೇಳುವ ಹಾಗೆ ಮಹಾಭಾರತವು ಮುಖ್ಯ ಕಥೆಯನ್ನು ಹೊಂದಿದ್ದು, ಅದೊಂದು ಸುಸಂಬದ್ಧ ಪೂರ್ಣತೆಯ ರಚನೆಯಾಗಿದೆ ಎಂಬುದನ್ನು ಒಪ್ಪಿಕೊಂಡರೂ ಮೌಖಿಕ ಪರಂಪರೆಯಲ್ಲಿ ಆ ಕಥೆಯು ಪುನರುಕ್ತಿಯನ್ನು ಪಡೆಯುತ್ತಾ ಹೋಗುತ್ತದೆ. ಹಾಗೆ ಪಡೆಯುವಾಗ ಹಳೆಯದನ್ನು ಎಷ್ಟೋ ಸಂದರ್ಭದಲ್ಲಿ ಕಳೆದುಕೊಂಡು ಹೊಸದನ್ನು ಸೇರಿಸಿಕೊಂಡು ಬೆಳೆಯುತ್ತಾ ಹೋಗುತ್ತದೆ. ಇಂತಹ ಸನ್ನಿವೇಶಗಳಲ್ಲಿ ಪ್ರಕ್ಷಿಪ್ತಗಳು ಧರ್ಮ, ಮತಕ್ಕೆ ಅನುಸಾರವಾಗಿ ಸೇರುತ್ತಾ ಹೋಗುತ್ತವೆ. ರಾಮಾನುಜನ್ ಅವರು ಈ ಪುನರುಕ್ತಿಯ ಪರಿಕಲ್ಪನೆಯನ್ನು ಅರ್ಥೈಸುವುದಕ್ಕಾಗಿ ಈ ಪ್ರಬಂಧವನ್ನು ಬರೆಯುತ್ತಾರೆ. ಮಹಾಭಾರತದಲ್ಲಿ ಪುನರುಕ್ತಿಯು ಹೇಗೆ ಕೆಲಸ ಮಾಡಿದೆ ಎಂಬುದನ್ನು ಹಲವಾರು ಘಟನೆಗಳ, ಕ್ರಿಯೆಗಳ ಮೂಲಕ ಅವರು ವಿವರಿಸಲು ಪ್ರಯತ್ನಿಸುತ್ತಾರೆ. ಅವರೇ ಹೇಳುವ ಹಾಗೆ,

"ಹತ್ತು ಮೈಲುದ್ದ ಈ ಮಹಾ ದೈತ್ಯ ಕೃತಿಯ ಸಂರಚನೆಯನ್ನೂ ಐಕ್ಯತೆಯನ್ನೂ ಗ್ರಹಿಸಿರುವ 'ಸ್ಥಳೀಯ ಪ್ರತಿಭೆ'ಯನ್ನು ವಿವರಿಸುವುದು ನನ್ನ ಈ ಪ್ರಬಂಧದ ಮುಖ್ಯ ಉದ್ದೇಶವಾಗಿದೆ. ಇಲ್ಲಿ ನಾನು 'ಪ್ರತಿಭೆ' ಎಂಬ ಮಾತನ್ನು ಭಾಷಾಶಾಸ್ತ್ರಜ್ಞರು ಬಳಸುವ ಅರ್ಥದಲ್ಲಿ ಬಳಸಿದ್ದೇನೆ. ಅದು ಸ್ಥಳೀಯರು ತಮ್ಮ ಮಾತೃಭಾಷೆಯ ವ್ಯಾಕರಣದ ಬಗ್ಗೆ ಹೊಂದಿರುವ ಸಹಜ ಗ್ರಹಿಕೆ. ವ್ಯಾಕರಣಬದ್ಧವಾಗಿ ಮಾತನಾಡುವಂತೆ ಮಾಡುವ, ಯಾವುದು ವ್ಯಾಕರಣ ಬದ್ಧ, ಯಾವುದು ಅಲ್ಲ ಎಂಬುದನ್ನು ಗ್ರಹಿಸುವಂತೆ

> ಮಾಡುವ ಶಕ್ತಿಯನ್ನು ಇದು ಸೂಚಿಸುತ್ತದೆ. ಪುನರುಕ್ತಿಯು ಈ ಮಹಾಕಾವ್ಯದ ಪ್ರಮುಖ ರಾಚನಿಕ ತತ್ವವಾಗಿದೆ. ಪುನರುಕ್ತಿ ಅಥವಾ ಬಿಂಬಗಳ ಸೃಷ್ಟಿ ಯಾವುದೇ ರಾಚನಿಕತೆಯ ಮುಖ್ಯ ತತ್ವ ಎಂದೂ ಹೇಳಬಹುದು. ಕೇವಲ ಒಮ್ಮೆ ಕಾಣಿಸಿಕೊಳ್ಳುವ ಅಂಶವನ್ನು ಆಧಾರವಾಗಿಟ್ಟುಕೊಂಡು ನಾವು ರಚನೆ ಬಗ್ಗೆ ಮಾತನಾಡಲು ಸಾಧ್ಯವಿಲ್ಲ. ಕಥನಗಳನ್ನು ಕುರಿತು ಅಭ್ಯಾಸ ಮಾಡಿರುವ ಲೆವಿಸ್ಟ್ರಾಸ್ ಈ ವಿಚಾರವನ್ನು ಸಾಮಾನ್ಯ ಜ್ಞಾನದ ಭಾಗವನ್ನಾಗಿಸಿದ್ದಾರೆ. ಹಿಂದೂ ದೇವಾಲಯ, ತಮಿಳು ಕ್ಲಾಸಿಕಲ್ ಕಾವ್ಯದ ಅಥವಾ ಭಕ್ತಿ ಕಾವ್ಯದ 'ಪಾಟ್ಟು', ಕರ್ನಾಟಕ ಸಂಗೀತದ 'ರಾಗ' ಇಂತಹ ಭಾರತೀಯ ಕಲಾಕೃತಿಗಳು ಪರಸ್ಪರ ಸಂಬಂಧಿಯಾದ ಪುನರುಕ್ತಿ, ವಿಸ್ತರಣೆ ಹಾಗೂ ಬದಲಾವಣೆಯ ತತ್ವವನ್ನು ಆಧರಿಸಿಯೇ ರೂಪು ತಳೆದಿವೆ."[೧೬]

ಎಂಬ ಅಭಿಪ್ರಾಯವನ್ನು ಮಂಡಿಸುತ್ತಾರೆ. ಅಂದರೆ ಪುನರುಕ್ತಿ ಎಂಬುದು ಕೇವಲ ಕಾವ್ಯಗಳಿಗೆ ಮಾತ್ರ ಸೀಮಿತವಾದ ಪರಿಕಲ್ಪನೆ ಅಲ್ಲ. ಅದು ಭಕ್ತಿಕಾವ್ಯ, ಸಂಗೀತ ಮುಂತಾದ ಕಲಾ ಪ್ರಕಾರಗಳಲ್ಲಿಯೂ ಕಾಣಿಸಿಕೊಳ್ಳುವ ಒಂದು ಪರಿಕಲ್ಪನೆಯಾಗಿದೆ. ಹಾಗಾಗಿ ಇದಕ್ಕೆ ಒಂದು ವಿಶಾಲವಾದ ವ್ಯಾಪ್ತಿ ಇದೆ. ಪುನರುಕ್ತಿಯ ಸಂಬಂಧಗಳ ನಿದರ್ಶನಕ್ಕಾಗಿ ರಾಮಾನುಜನ್ ಅವರು ಮಹಾಭಾರತದಿಂದ ಕೆಲವು ಸನ್ನಿವೇಶಗಳನ್ನು ಆಯ್ದುಕೊಂಡು ಈ ತತ್ವವನ್ನು ವಿವರಿಸುತ್ತಾ ಸ್ಪಷ್ಟಪಡಿಸುತ್ತಾರೆ. ಮಹಾಭಾರತದಲ್ಲಿ ಪ್ರಮುಖ ಪಾತ್ರಗಳೆಲ್ಲಾ ಎರಡು ಮದುವೆ ಮಡಿಕೊಳ್ಳುವುದನ್ನು,



ಪ್ರಮುಖ ಪಾತ್ರಗಳ ವಂಶಾವಳಿಯ ನಕ್ಷೆ [೧೭]

ಎರಡು ಬಗೆಯ ವಂಶಾವಳಿ ಹೊಂದಿರುವುದನ್ನು ರಾಮಾನುಜನ್ ಅವರು ನಕ್ಷೆಯ ಮೂಲಕ ತೋರಿಸಿಕೊಡುತ್ತಾರೆ. ಆಮೂಲಕ ಪುನರುಕ್ತಿಯ ವಿನ್ಯಾಸಗಳನ್ನು ಗುರ್ತಿಸುತ್ತಾರೆ:

ಅತ್ಯಂತ ಸೂಕ್ಷ್ಮವಾಗಿ ಈ ಬೃಹತ್ ಹಾಗೂ ಮಹತ್ತುಗಳನ್ನೊಳಗೊಂಡಿರುವ ಮಹಾಭಾರತದಂತಹ ಮಹಾಭಾರವಾದ ಕೃತಿಯ ನಾಯಕ ಪಕ್ಷದ ಪಾತ್ರಗಳನ್ನು ಎರಡು ವಂಶಾವಳಿಗಳ ನಕ್ಷೆಯ ಮೂಲಕ ಚಿತ್ರಿಸುತ್ತಾರೆ. ಮೊದಲನೆಯ ನಕ್ಷೆಯಲ್ಲಿ ಶಂತನುವಿನಿಂದ ಪಾಂಡವರವರೆಗಿನ ನಾಲ್ಕು ತಲೆಮಾರುಗಳ ವಿವರವಾದ ವಂಶವೃಕ್ಷವಿದೆ. ಇಲ್ಲಿ ಮಾನುಷ, ಅತಿಮಾನುಷ, ಋಷಿ ರೂಪದ ವ್ಯಕ್ತಿಗಳಿದ್ದಾರೆ. ವಿವಾಹದ ಮೂಲಕ ಕಾನೂನುಬದ್ಧ ಸಂತಾನ, ವಿವಾಹದಾಚೆಗಿನ ಸಂತಾನ, ನಿಯೋಗದ ಮೂಲಕ ಸಂತಾನ, ಋಷಿಗಳಿಂದ ಕಾನೂನುಬದ್ಧಗೊಂಡ ಧಾರ್ಮಿಕದಾಚೆಗಿನ ಸಂತಾನ, ಕೌಟುಂಬಿಕ ಸ್ತ್ರೀ ಹಾಗೂ ದಾಸಿಯರಿಂದ ಸಂತಾನ– ಈ ಎಲ್ಲಾ ಬಗೆಯ ಸಂತಾನಗಳನ್ನು ಈ ನಕ್ಷೆ ಸೂಚಿಸುತ್ತದೆ. ಸತ್ಯವತಿ ಪರಾಶರನಿಂದ, ವ್ಯಾಸನನ್ನು ವಿವಾಹಪೂರ್ವದಲ್ಲಿ ಪಡೆದರೂ, ಪರಾಶರನು ವರವಾಗಿ ಕೊಟ್ಟ ಕನ್ಯತ್ವ ಲೋಕನಿಂದೆಯಿಂದ ಅವಳನ್ನು ದೂರ ಮಾಡಿತು. ಆದರೆ ಕರ್ಣನ ಸಂದರ್ಭದಲ್ಲಿ ವಿವಾಹಪೂರ್ವದಲ್ಲಿ ಕುಂತಿಗೆ ಅವನು ಜನಿಸಿ ಪರಿತ್ಯಕ್ತನಾಗಿ ಬೆಸ್ತನ ಬಳಿ ಬೆಳೆದದ್ದರಿಂದ ಇಡೀ ಮಹಾಭಾರತದಲ್ಲಿ ಕರ್ಣನ ಪಾತ್ರ ದುರಂತನಾಯಕನ ರೀತಿಯಲ್ಲಿ ಬೆಳೆಯುವುದಕ್ಕೆ ಸಾಧ್ಯವಾಯಿತು.

ಕಾವ್ಯಾರಂಭದಲ್ಲಿ ನಡೆಯುವ ರಾಜಸೂಯಯಾಗ ಮತ್ತು ಕಾವ್ಯಾಂತ್ಯದಲ್ಲಿ ಬರುವ ಅಶ್ವಮೇಧಯಾಗ ಪುನರುಕ್ತಿಯಾಗಿದೆ. ಹಾಗೆಯೇ ಪಾಂಡವರು ಅರಗಿನ ಮನೆಯಲ್ಲಿ ತಪ್ಪಿಸಿಕೊಂಡ ನಂತರ ಬ್ರಾಹ್ಮಣರ ವೇಷದಲ್ಲಿ ಒಂದು ಚಿಕ್ಕ ವನವಾಸ ಮತ್ತು ಅಜ್ಞಾತವಾಸವನ್ನು ಅನುಭವಿಸುತ್ತಾರೆ. ದ್ರೌಪದಿಯನ್ನು ಸೋತ ನಂತರ ಹನ್ನೆರಡು ವರ್ಷ ವನವಾಸ ಮತ್ತು ಒಂದು ವರ್ಷದ ಅಜ್ಞಾತವಾಸ ಇವೂ ಕೂಡ ಪುನರುಕ್ತವೇ.

ಮಹಾಭಾರತದ ಇನ್ನೊಂದು ವಿಶೇಷವೆಂದರೆ ಅಲ್ಲಿನ ಪ್ರಮುಖ ಕಥಾವಾಹಿನಿಯ ಜೊತೆಗೆ ಬಂದು ಸೇರಿಕೊಳ್ಳುವ ಸುಮಾರು ಇಪ್ಪತ್ತು ಉಪಕತೆಗಳು. ಮಹಾಭಾರತದಲ್ಲಿ ಅತಿಮಾನುಷ ಘಟನೆಯಾದ ವಿಶ್ವರೂಪ ದರ್ಶನ ಮತ್ತು ಭಗವದ್ಗೀತೆಯ ಸಂದರ್ಭಗಳು ಬರುತ್ತವೆ. ಸಮಸ್ಯೆಗಳಿಗೆ ಸಂಬಂಧಪಟ್ಟ ಹಾಗೆ ಮಹಾಭಾರತ ಒಂದು ದೊಡ್ಡ ಆಗರ. ಕರ್ಣನ ಪಶ್ನೆ, ಪಾಂಡವರ ವಿವಾಹ, ಮೋಸದ ಜೂಜು, ಅಜ್ಞಾತವಾಸದ ಪರಿಕಲ್ಪನೆ– ಈ ಸಮಸ್ಯೆಗಳು ಬದುಕಿನ ಧರ್ಮಸೂಕ್ಷ್ಮದ ಪ್ರಶ್ನೆಗಳನ್ನು ತಂದೊಡ್ಡುತ್ತವೆ.


ವಂಶಪ್ರಜ್ಞೆ, ವ್ಯಕ್ತಿ ಕರ್ಮದಲ್ಲಿ ತೊಡಗುವುದು, ಪಾತ್ರಗಳ ಕ್ರಿಯೆಯ ಉದ್ದೇಶ ಮತ್ತು ಚಿತ್ರಣ, ವಿಭಿನ್ನ ವ್ಯಕ್ತಿಗಳ ಮನೋಭಾವಗಳು, ಘಟನೆಗಳ ಕ್ರಿಯೆಯ ವಿನ್ಯಾಸ– ಇವೆಲ್ಲಾ ರಾಮಾನುಜನ್ ಅವರು ಮಹಾಭಾರತದಲ್ಲಿ ಹೆಕ್ಕಿರುವ ಚಿಂತನೆಗಳು. ವ್ಯಾಸ ಮತ್ತು ಸಂಜಯ

ಇವರಿಬ್ಬರ ಪಾತ್ರ ಅನನ್ಯವಾದದ್ದು, ಈ ಅನನ್ಯತೆಯನ್ನು ರಾಮಾನುಜನ್ ಅವರೂ ಗುರುತಿಸುತ್ತಾರೆ. ಆಯಾ ಪಾತ್ರಗಳ ಮನೋಧರ್ಮವನ್ನು ಇನ್ನೊಂದು ನಕ್ಷೆಯಲ್ಲಿ ರಾಮಾನುಜನ್ ಗುರುತು ಮಾಡಿದ್ದಾರೆ. ಅದರ ಪ್ರಕಾರ ಧರ್ಮರಾಯನು ಸಚಿವ ಮತ್ತು ಸಹಯೋಗಿ, ಭೀಮಾರ್ಜುನರು ಯುದ್ಧವೀರರು. ಭೀಮನು ಸಾಮರ್ಥ್ಯಕ್ಕೂ, ಅರ್ಜುನನು ಕೌಶಲಕ್ಕೂ ಸಂಕೇತ. ನಕುಲ ಸಹದೇವರು ಉಸ್ತುವಾರಿಕೆ ಹಾಗೂ ಘೋಷಣೆಗಳನ್ನು ಗಮನಿಸುತ್ತಾರೆ. ಹೀಗಾಗಿ ಒಟ್ಟಾಗಿ ಪಾಂಡವರು ಬದುಕನ್ನು ಎದುರಿಸಲು ಸಮರ್ಥರು.

ಎಲ್ಲ ಕಾಲಕ್ಕೆ, ಎಲ್ಲ ದೇಶಗಳಿಗೆ ಅತ್ಯಂತ ಅನನ್ಯ ಎನಿಸಿಕೊಂಡಿರುವ ವ್ಯಾಸಭಾರತದ ಮರ್ಮವನ್ನು ರಾಮಾನುಜನ್ ಈ ಪ್ರಬಂಧದಲ್ಲಿ ನಿರೂಪಿಸಿರುತ್ತಾರೆ. ಮಹಾಭಾರತದ ಕ್ರಿಯೆಯ ಪರಿಕಲ್ಪನೆಯನ್ನು ಪುನರುಕ್ತಿಗಳು ಹೇಗೆ ಒಟ್ಟಾರೆ ವ್ಯಕ್ತಿಗಳ ಬದುಕಿನ ದೃಷ್ಟಿಯ ಭಾಗವಾಗಿದೆ ಎಂಬುದನ್ನು ಸೂಕ್ಷ್ಮವಾಗಿ ಅವರು ಗುರುತಿಸುತ್ತಾರೆ. ಇಲ್ಲಿ ಪಾತ್ರಗಳು ಬದಲಾಗುವುದಿಲ್ಲ; ಪಾತ್ರಗಳು ಬೆಳೆಯಬೇಕು, ಬದಲಾಗಬೇಕು, ಪಕ್ವವಾಗಬೇಕು ಎಂಬ ನಿರೀಕ್ಷೆಗಳು ಇಲ್ಲಿ ಹುಸಿಯಾಗುತ್ತವೆ ಎಂಬುದನ್ನು ರಾಮಾನುಜನ್ ಅವರು ಘಟನೆಗಳ ಮೂಲಕ ವಿವರಿಸುತ್ತಾರೆ. ಅವರು ಹೇಳುವ ಹಾಗೆ,

> "ಭಗವದ್ಗೀತೆಯ ಉಪದೇಶವನ್ನು ಪಡೆದೂ, ಕೃಷ್ಣನ ವಿಶ್ವರೂಪ ದರ್ಶನವನ್ನು ಹೊಂದಿಯೂ ಅರ್ಜುನ ಬದಲಾದ ವ್ಯಕ್ತಿಯೇನೂ ಆಗುವುದಿಲ್ಲ. ಮರಳಿ ಯುದ್ಧದಲ್ಲಿ ತೊಡಗಲು ಅಗತ್ಯವಾದ, ಮರಳಿ ತನ್ನ ಸ್ವಭಾವದಲ್ಲಿ ಸ್ಥಿತನಾಗುವುದಕ್ಕೆ ಅಗತ್ಯವಾದಷ್ಟನ್ನು ಮಾತ್ರ ಅವನು ಪಡೆದುಕೊಳ್ಳುತ್ತಾನೆ. ಪಾತ್ರವೊಂದರಲ್ಲಿ ಆಗುವ ಬದಲಾವಣೆಯೆಂದರೆ, ಸಾಮಾನ್ಯವಾಗಿ, ಅಜ್ಞಾನದಿಂದ ಜ್ಞಾನಕ್ಕೆ ನಡೆಯುವ ಚಲನೆ ಮಾತ್ರವೇ. ಉತ್ತರಕುಮಾರನು ಅರ್ಜುನನ ನಿಜರೂಪವನ್ನು ಕಾಣುತ್ತಾನೆ, ಆದರೂ ತನ್ನ ಸಹಜ ಹೇಡಿತನವನ್ನು ಅವನು ನೀಗಿಕೊಳ್ಳುವುದಿಲ್ಲ. ಅರ್ಜುನನು ಕೃಷ್ಣನ ನಿಜರೂಪವನ್ನು ಕಾಣುತ್ತಾನೆ. ಮತ್ತೆ ತನ್ನ ಸ್ವಭಾವಕ್ಕೆ ಸಹಜವಾದ ಕ್ರಿಯೆಯಲ್ಲಿ ತೊಡಗುತ್ತಾನೆ. ಅಲ್ಲದೆ, ಪುನರುಕ್ತಿಗಳ ಕಾರಣದಿಂದ ಕ್ರಿಯೆಯ ವಿನ್ಯಾಸ ಕೇವಲ ಒಂದು ಪಾತ್ರಕ್ಕೆ ಮಾತ್ರ ಸೀಮಿತವಾಗಿ ಉಳಿಯುವುದಿಲ್ಲ: ಸತ್ಯವತಿ ಮತ್ತು ಕುಂತಿ, ಯುಧಿಷ್ಠಿರ ಮತ್ತು ನಳ ಇಂಥ ಪಾತ್ರಗಳ ಬದುಕಿನಲ್ಲಿ ಭೂತಕಾಲದಲ್ಲೂ ವರ್ತಮಾನದಲ್ಲೂ ಒಂದೇ ಬಗೆಯ ಸಂಗತಿಗಳು ನಡೆಯುತ್ತವೆ. ಹೀಗಾಗಿ 'ಪಾತ್ರ'ವೆಂಬುದು ಅನಂತವಲ್ಲ, ಸಾಂತವಾದದ್ದು ಎಂಬ ವಿಚಾರವೇ ಕುಸಿದು, ಕ್ರಿಯೆಗಳ ವಿನ್ಯಾಸ ಇತರ ಪಾತ್ರಗಳ ಬದುಕಿನಲ್ಲೂ ವ್ಯಕ್ತವಾಗುತ್ತದೆ."[೧೮]

ಮಹಾಭಾರತದಲ್ಲಿ ಕೆಲವು ಪಾತ್ರಗಳು ವೀಕ್ಷಕರಾಗಿಯೂ, ಕೆಲವರು ಕ್ರಿಯಾವಂತರಾಗಿ ಕಾಣಿಸುವುದನ್ನು ರಾಮಾನುಜನ್ ಅವರು ಈ ಪುನರುಕ್ತಿಯ ಸಂದರ್ಭದಲ್ಲಿ ಗುರುತಿಸಿದ್ದಾರೆ.



ಮಜಲು ೧. ಐವರು ಪಾಂಡವರ
ಐಕ್ಯತೆ ೨. ಧರ್ಮ X ಕರ್ಮ
೩. ಇಂಡೋ ಯೂರೋಪಿಯನ್ ತ್ರಿವಿಧ ಸಮಾಜ, ದುಮೆಝಿಲ್ ಹೇಳುವಂತೆ
೪. ಐವರು ನಾಯಕರ ವ್ಯೆಯಕ್ತಿಕತೆ

೧೯

ವಿದುರ ಮತ್ತು ವ್ಯಾಸ ಕಾವ್ಯದ ವೀಕ್ಷಕರಾಗಿ ಹಾಗೂ ನಿರೂಪಕರಾಗಿ ಕಾಣುತ್ತಾರೆ. ಯುದ್ಧ ಪರ್ವದಲ್ಲಿ ಸಂಜಯ ಎಲ್ಲಾ ಕ್ರಿಯೆಗಳನ್ನು ನೋಡುವ ವೀಕ್ಷಕ; ಭೀಷ್ಮ ಮತ್ತು ದ್ರೋಣರು ಕ್ರಿಯೆಯಲ್ಲಿ ಪಾಲ್ಗೊಳ್ಳುವುದು ಕಡಿಮೆ. ದ್ರೌಪತಿಯ ವಸ್ತ್ರಾಪಹರಣದ ಸಂದರ್ಭದಲ್ಲಿ ಹಿರಿಯರ ಮೌನ ಮತ್ತು ವೀಕ್ಷಣೆಯೇ ಪ್ರಮುಖ. ಹೀಗೆ ಮಹಾಕಾವ್ಯದ ಇಡೀ ಪಾತ್ರವರ್ಗ ಆತ್ಮಕ್ಕೆ ಸಾಕ್ಷಿತ್ವ ಮತ್ತು ಕ್ರಿಯಾಶೀಲತೆ ಎಂಬ ಎರಡು ಅಂಶಗಳಿವೆ ಎಂಬ ಪ್ರಾಚೀನ ಪರಿಕಲ್ಪನೆಯ ನಿದರ್ಶನ ಎಂಬಂತೆ ತೋರುತ್ತದೆ ಎಂದು ರಾಮಾನುಜನ್ ಅವರು ತಮ್ಮ ಅಧ್ಯಯನದಿಂದ ಇಲ್ಲಿ ಗುರ್ತಿಸುತ್ತಾರೆ. ಇಂತಹ ಅನೇಕ ಪುನರುಕ್ತಿಯ ಘಟನೆಗಳು ಮುಂದೆ ನಡೆಯಲಿರುವ ಘಟನೆಗಳ ಸೂಚನೆಯೂ, ಹಿಂದೆ ಆದದ್ದನ್ನು ನೆನಪು ಮಾಡಿಕೊಡುವುದನ್ನೂ ಇಲ್ಲಿ ಅನೇಕ ಉದಾಹರಣೆಗಳ ಸಹಿತ ಗುರ್ತಿಸಿದ್ದಾರೆ. ಪುನರುಕ್ತಿಯ ಮತ್ತೊಂದು ಮಹತ್ವದ ನಿದರ್ಶನ ಎಂದರೆ ಭಗವದ್ಗೀತೆಯನ್ನು ಕುರಿತು ವಿದ್ವಾಂಸರಲ್ಲಿ ನಡೆದಿರುವ ಚರ್ಚೆಯನ್ನು ಅವರು ಇಲ್ಲಿ ಪರಾಮರ್ಶೆಗೆ ಒಳಗು ಮಾಡುತ್ತಾರೆ. ಒಟ್ಟಾರೆ ಈ ಮಹಾಕಾವ್ಯದ ಪುನರುಕ್ತಿಯನ್ನು ಗುರುತಿಸುವಲ್ಲಿ ರಾಮಾನುಜನ್ ಅವರ ಚಿಂತನೆ ನವೀನವಾಗಿದೆ. ಭಾಷಿಕ ಮತ್ತು ಮೌಖಿಕ ನೆಲೆಯಿಂದ ಪ್ರವೇಶ ಮಾಡಿ ಅಭಿಜಾತ ಕಾವ್ಯದಲ್ಲಿ ನಡೆದಿರುವ ಈ ಪುನರುಕ್ತಿಯನ್ನು ಕೆಲವಾರು ಘಟನೆ ಹಾಗೂ ಕ್ರಿಯೆಗಳ ಮೂಲಕ ಸಮರ್ಥವಾಗಿ ವಿವರಿಸಲು ಮತ್ತು ಅರ್ಥೈಸಲು ರಾಮಾನುಜನ್ ಅವರು ಪ್ರಯತ್ನಿಸಿದ್ದಾರೆ. ಅವರ ಈ ಚಿಂತನಾಕ್ರಮವು ನಿಜಕ್ಕೆ ಹತ್ತಿರವಾಗಿದೆ.

೫.೫. ಅಲ್ಲಮನ ಕವಿತೆ ಯಾಕೆ ಒಗಟಲ್ಲ?(Why an Allama poem is not a riddle)

ಭಕ್ತಿಸಾಹಿತ್ಯ ಮತ್ತು ಆಧುನಿಕ ಕನ್ನಡ ಕಾವ್ಯದ ಸಂದರ್ಭದಲ್ಲಿ 'ಅಲ್ಲಮನ ಕವಿತೆ ಯಾಕೆ ಒಗಟಲ್ಲ?' ಎಂಬ ರಾಮಾನುಜನ್ ಅವರ ಪ್ರಬಂಧ ಹಲವಾರು ಪ್ರಶ್ನೆಗಳನ್ನು ಎತ್ತುತ್ತದೆ. ರಾಮಾನುಜನ್ ಅವರ 'ಅಲ್ಲಮನ ಕವಿತೆ ಯಾಕೆ ಒಗಟಲ್ಲ?' ಹದಿನೇಳು ಪುಟಗಳ ಮೂರು ಭಾಗಗಳ ಈ ಪ್ರಬಂಧ ಒಂದು ರೀತಿ ಇತರ ವಿಮರ್ಶೆಗಳಿಗಿಂತ ಭಿನ್ನವಾಗಿದೆ. ಎಲ್ಲಾ ಪ್ರಬಂಧಗಳು ಪಾಸಿಟಿವ್ ನೆಲೆಯಲ್ಲಿದ್ದರೆ ಈ ಪ್ರಬಂಧದ ಶೀರ್ಷಿಕೆ ನೆಗೆಟಿವ್ ರೀತಿಯಲ್ಲಿದೆ. ಈ ಸಂದರ್ಭದಲ್ಲಿ ಇದು ಬೇಂದ್ರೆಯವರ 'ಬಡತನವು ಸಾಹಿತ್ಯದ ವಸ್ತು ಏಕಾಗಿದೆ?' ಎನ್ನುವ ಪ್ರಶ್ನಾರ್ಥಕ ಲೇಖನವನ್ನು ನೆನಪಿಗೆ ತರಿಸುತ್ತದೆ. ಕವಿತೆ ಮತ್ತು ಒಗಟು ಎರಡೂ ಕೂಡ ಭಿನ್ನವಾದವು. ಅಲ್ಲಮನ ಕವಿತೆ ಗ್ರಹಿಕೆಗೆ ಸುಲಭವಾಗಿ ದಕ್ಕುವಂಥದ್ದಲ್ಲ. ಆದರೆ ಒಗಟು ಕಷ್ಟವಾದರೂ ಅರ್ಥವಾಗಬಲ್ಲುದು. ಒಂದು ಪ್ರಸಂಗದ ಒಟ್ಟು ಸೂಕ್ಷ್ಮ ಅನುಭವದ ಸಾರ ಒಗಟಾದರೆ ಅಲ್ಲಮನ ಕವಿತೆ ಹಾಗಲ್ಲ. ಅದು ಒಗಟಿನ ಹಾಗೆ ಸ್ಟೇಟ್‌ಮೆಂಟ್ ಅಲ್ಲ. ಒಗಟಿನಲ್ಲಿ ಆಕರ್ಷಣೆ, ಪ್ರಾಸ, ಪ್ರಶ್ನೆ, ವಿಸ್ಮಯ, ಇರುತ್ತವೆ. ಆದರೆ ಅದು ನಿಗೂಢವಲ್ಲ. ಅಲ್ಲಮನ ಕವಿತೆ ಇವೆಲ್ಲವನ್ನೂ ಮೀರಿದ ಒಂದು ಅಗಾಧವಾದ ನಿಗೂಢತೆ, ಅಪಾರವಾದ ಅರ್ಥಸಾಧ್ಯತೆಗಳು ಹಾಗೂ ಅನಂತವಾದ ಭಾಷೆಯ ಆಯಾಮ ಇವುಗಳನ್ನೊಳಗೊಂಡಿರುತ್ತದೆ.

ಹೇಳಿ ಕೇಳಿ ಅಲ್ಲಮ ಒಬ್ಬ ಅನುಭಾವಿ. ಒಂದು ರೀತಿಯಲ್ಲಿ ಅವನು ಸಂತ. ಅವನು ಅವಧೂತ ಕೂಡ. ಕೆಲವು ಸಲ ಅವನು ನಮಗೆ ಪ್ರವಾದಿಯಂತೆ ತೋರುವನು. ಇನ್ನು ಕೆಲವು ಸಲ ಭವಿಷ್ಯವನ್ನು ಹೇಳುವ ಕಾಲಜ್ಞಾನಿಯ ಹಾಗೆ ಕಾಣುತ್ತಾನೆ. ಇಂತಹವನ ಅಭಿವ್ಯಕ್ತಿ ರೂಪ ಕೇವಲ ಒಗಟಾಗಿರಲಿಕ್ಕೆ ಸಾಧ್ಯವಿಲ್ಲ. ಅವನ ಭಾಷೆಯ ಸ್ವರೂಪವನ್ನು ಗಮನಿಸಿ ಅಲ್ಲಿ ನಿಯಮವಿಲ್ಲ, ವ್ಯಾಕರಣವಿಲ್ಲ, ಛಂಧಸ್ಸಿನ ಶಿಸ್ತಿಲ್ಲ; ಆದರೂ ಅದು ತನ್ನದೇ ನಿಯಮ, ವ್ಯಾಕರಣ, ಶಬ್ದ, ಸ್ವರ, ಛಂದಸ್ಸನ್ನು ಕಟ್ಟಿಕೊಂಡಿದೆ. ಬಹುಶಃ ಕವಿತೆಯನ್ನು ಕುರಿತು ಬೇಂದ್ರೆಯವರು ಹೇಳುವ ಹಾಗೆ ಇದು ಮಂತ್ರ, ಅರ್ಥಕ್ಕೊಗ್ಗದ ಶಬ್ದಗಳ ಪವಣಿಸುವ ತಂತ್ರ- ಎನ್ನುವ ಮಾತು ಅಲ್ಲಮನ ವಚನಗಳಿಗೆ ಚೆನ್ನಾಗಿ ಒಪ್ಪುತ್ತದೆ. ಸಾಮಾಜಿಕ, ಬೌದ್ಧಿಕ ಮತ್ತು ಧಾರ್ಮಿಕ ಆಯಾಮಗಳ ಎಲ್ಲ ರಚನೆಗಳನ್ನು ತಿರಸ್ಕರಿಸಿದವನು ಅಲ್ಲಮ. ಅವನ ಭಾಷೆಯ ಸೊಕ್ಕು ವಿಸ್ಮಯವನ್ನುಂಟು ಮಾಡುತ್ತದೆ.

ತಮಿಳಿನ ನಮ್ಮಾಳ್ವಾರ್ ದೇವರನ್ನು ಎಷ್ಟು ವರ್ಣಿಸಿಯೂ ತೃಪ್ತಿ ಪಡುವುದಿಲ್ಲ. ಆದರೆ ಅಲ್ಲಮ ಹಾಗಲ್ಲ. ರೂಪಕ, ಸ್ವ-ವಿರೋಧ, ವಿರೋಧಾಭಾಸ, ಅಸಂಭಾವ್ಯತೆ- ಇವುಗಳಿಂದ ಅಲ್ಲಮನ ಬೆಡಗಿನ ವಚನಗಳು ಕಂಗೊಳಿಸುತ್ತವೆ. ಇದರ ಆಚೆಗೆ ಒಂದು ತಾರ್ಕಿಕವಾದ ಸಂರಚನೆ ಇದೆ. ಇದಕ್ಕೆ ಉದಾಹರಣೆಯಾಗಿ ಅಲ್ಲಮನ ಯಾವುದೇ ವಚನವನ್ನು ಗಮನಿಸಬಹುದು.

ತಮಿಳಿನಲ್ಲಿ ಸುಂದರಾರ್, ನಮ್ಮಾಳ್ವಾರ್, ಕನ್ನಡದಲ್ಲಿ ಬಸವಣ್ಣ, ಅಕ್ಕಮಹಾದೇವಿ, ಬಂಗಾಳಿಯಲ್ಲಿ ವಿದ್ಯಾಪತಿ– ಇವರು ತಮ್ಮ ರಚನೆಗಳಲ್ಲಿ ಒಗಟುಗಳನ್ನು, ಬೆಡಗುಗಳನ್ನು ಅಲ್ಲಮನಂತೆ ಬಳಸಿಕೊಂಡಿಲ್ಲ. ಹಿಂದಿಯಲ್ಲಿ ಕಬೀರ, ಕನ್ನಡದಲ್ಲಿ ಅಲ್ಲಮ, ಬಂಗಾಳಿಯಲ್ಲಿ ಲಾಲನ್ ಷಾಹ್, ತಮಿಳಿನ ಸಿತ್ತಾರ್– ಇವರು ನಿರ್ಗುಣ ಕವಿಗಳು. ದೇವರಿಗೆ ರೂಪವಿಲ್ಲ, ದೇವರು ಶಬ್ದದಾಚೆಯ ನಿಶ್ಶಬ್ದ ಎಂದು ಪರಿಭಾವಿಸುತ್ತಾರೆ. ಹೀಗಾಗಿ ಮತಧರ್ಮಶಾಸ್ತ್ರ ಹಾಗೂ ಶಾಸ್ತ್ರಗಳಂತಹ ಚಿಂತನೆ, ಆಲೋಚನೆಗಳ ವ್ಯವಸ್ಥೆಗಳು, ವೇದ, ಭಾಷೆ, ಕಾವ್ಯ, ಅಲಂಕಾರ, ಪುರಾಣ, ಕವಿಗಳು, ಧಾರ್ಮಿಕರು, ಬೆಲೆಯುಳ್ಳವರೆಂದು ಭಾವಿಸುವಂಥವರೆಲ್ಲಾ ಮೇಲ್ಕಂಡ ಕವಿಗಳಿಗೆ ನಿರುಪಯುಕ್ತರಾಗುತ್ತಾರೆ. ನಿರಾಕರಣೆ ಇರುವುದು ಭಾಷೆಯಲ್ಲೇ ಹೊರತು ನಿಸರ್ಗದಲ್ಲಲ್ಲ. ಇವಿಷ್ಟು ಪ್ರಬಂಧದ ಮೊದಲನೆಯ ಭಾಗದಲ್ಲಿ ಚರ್ಚೆಗೆ ಬರುವ ರಾಮಾನುಜನ್ ಅವರ ಚಿಂತನೆಗಳು.

ಪ್ರಬಂಧದ ಎರಡನೇ ಭಾಗದಲ್ಲಿ ವರ್ಣನೆಯನ್ನು ನಿರಾಕರಿಸುವ ಮೂಲಕ ವರ್ಣಿಸುವ ಮತ್ತು ಅನುಭವವನ್ನು ಸಕಾರಾತ್ಮಕವಾಗಿ ವರ್ಣಿಸುವ ರಚನೆಗಳಿವೆ. ಇದಕ್ಕೆ ಹದಿನಾಲ್ಕು ವಚನಗಳನ್ನು ನಿರ್ದಶನವನ್ನಾಗಿ ನೀಡಲಾಗಿದೆ. ಒಂದು ವಚನವನ್ನು ಗಮನಿಸಬಹುದು:

ಶಿಲೆಯೊಳಗಣ ಪಾವಕನಂತೆ
ಉದಕದೊಳಗಣ ಪ್ರತಿಬಿಂಬದಂತೆ
ಬೀಜದೊಳಗಣ ವೃಕ್ಷದಂತೆ
ಶಬ್ದದೊಳಗಣ ನಿಶ್ಶಬ್ದದಂತೆ
ಗುಹೇಶ್ವರ, ನಿಮ್ಮ ಶರಣ ಸಂಬಂಧ.

(ಅಲ್ಲಮನ ವಚನ ಚಂದ್ರಿಕೆ, ೧)

ಇಲ್ಲಿ ಭಾಷೆಯನ್ನೂ ಒಳಗೊಂಡಂತೆ ಅರ್ಥ ಮಾಡಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡುವ ಎಲ್ಲಾ ಅಂಶಗಳನ್ನು ಅಲ್ಲಮ ನಿರಾಕರಿಸುತ್ತಾನೆ.

ಅವನ ವಚನಗಳು ಪ್ರಾಚೀನ ರೂಢಮೂಲ ಚಿಂತನೆಗೆ ಆಘಾತ ನೀಡುವಂತೆ ಜನಪದೀಯ ಸಾಂಸ್ಕೃತಿಕ ಪರಿಕಲ್ಪನೆಗಳನ್ನೂ ಬಳಸಿಕೊಳ್ಳುತ್ತದೆ. ಹೀಗಾಗಿ ಏಕಕಾಲದಲ್ಲಿ ಅಲ್ಲಮನ ವಚನ ಜನಸಾಮಾನ್ಯರೂ, ಪಂಡಿತರೂ, ವಿಮರ್ಶಕರೂ ಎಲ್ಲರಿಗೂ ದಕ್ಕುವಂತೆ ಕಂಡರೂ, ಅದರ ವಿಮರ್ಶೆ ಒಂದು ಸವಾಲಾಗಿಯೇ ಉಳಿಯುತ್ತದೆ. ಇದೇ ಅಲ್ಲಮನ ವಿಶೇಷ ಎನ್ನುವುದು ರಾಮಾನುಜನ್ ಅವರ ಪ್ರಮೇಯ.

'ಅಲ್ಲಮನ ಕವಿತೆ ಯಾಕೆ ಒಗಟಲ್ಲ?' ಎಂಬ ಪ್ರಬಂಧವನ್ನು ರಾಮಾನುಜನ್ ಅವರು ಬರೆಯುವುದಕ್ಕೆ ಮುಖ್ಯ ಪ್ರೇರಣೆ ಅವರು ೧೯೭೩ರಲ್ಲಿ 'ಸ್ಪೀಕಿಂಗ್ ಆಫ್ ಶಿವ' ಎಂಬ

ಹೆಸರಿನಲ್ಲಿ ವಚನಗಳನ್ನು ಇಂಗ್ಲಿಷಿಗೆ ಅನುವಾದ ಮಾಡುವಾಗ ಅಲ್ಲಮನ ವಚನಗಳನ್ನು ಕುರಿತು ಮತ್ತೊಮ್ಮೆ ಅವರನ್ನು ಆಲೋಚನೆಗೆ ಹಚ್ಚಿದ್ದೇ ಈ ಬರಹದ ಉಗಮಕ್ಕೆ ಮುಖ್ಯ ಕಾರಣ. ಬಸವಣ್ಣನ ವಚನಗಳಲ್ಲಿ ಮುಖ್ಯವಾಗಿ ಜಾತಿ, ಆಚರಣೆ, ದೇವಾಲಯ, ತೀರ್ಥಕ್ಷೇತ್ರ, ವೇದ, ಉಪನಿಷತ್ತು, ಶಾಸ್ತ್ರ, ಪಾಪ-ಪುಣ್ಯ ಇವುಗಳ ನಿರಾಕರಣೆಯನ್ನು ಅಂದು ರಾಮಾನುಜನ್ ಗುರುತಿಸಿದ್ದರು. ಆದರೆ ಆ ಬಗೆಯ ಸಾಂಸ್ಥಿಕ ನಿರಾಕರಣೆಗಿಂತ ಭಿನ್ನವಾದ ರಾಚನಿಕ ನೆಲೆಯ ನಿರಾಕರಣೆಯೊಂದು ಅಲ್ಲಮನ ವಚನಗಳಲ್ಲಿ ಕಂಡುಬಂದಿದ್ದನ್ನು ರಾಮಾನುಜನ್ ಅವರು ಅಂದು ಮನಗಂಡಿದ್ದರು. ಅದನ್ನು ಮತ್ತೊಮ್ಮೆ ವಿವರವಾಗಿ ಅರ್ಥೈಸಿಕೊಳ್ಳಲು ಅಲ್ಲಮನ ಕೆಲವು ವಚನಗಳನ್ನು ಈ ಪ್ರಬಂಧದಲ್ಲಿ ಆಯ್ಕೆ ಮಾಡಿಕೊಂಡು ವಿವರಿಸುವ ಯತ್ನವನ್ನು ಅವರು ಮಾಡುತ್ತಾರೆ. ಪ್ರಬಂಧದ ಆರಂಭದಲ್ಲಿ–

> "ಶರಣರ ದೃಷ್ಟಿಯಲ್ಲಿ ದೇವರ ಅನುಭವವು ಕೇವಲ ಅನುಭವವಲ್ಲ, 'ಅನುಭಾವ'. ಅನುಭವವನ್ನು ನಿರೀಕ್ಷಿಸಬಹುದಾದರೂ, ಅನುಭಾವ ಯಾವಾಗಲೂ ಅನಿರೀಕ್ಷಿತವೇ. ಅನುಭಾವವನ್ನು ಶಾಸ್ತ್ರದಲ್ಲಿ ಹಿಡಿದಿಡುವುದಾಗಲೀ, ವಿವರಿಸುವುದಾಗಲೀ ಸಾಧ್ಯವಿಲ್ಲ. ಯಾವುದೇ ತಂತ್ರದಿಂದ ಅನುಭಾವವನ್ನು ಸಂಭವಿಸುವಂತೆ ಪುಸಲಾಯಿಸುವುದಾಗಲೀ, ಪ್ರಚೋದಿಸುವುದಾಗಲೀ ಸಾಧ್ಯವಿಲ್ಲ. ಉಗ್ರನಿಷ್ಠೆಯ ವೀರಶೈವರು ಇಂಥ ಕೈವಾಡ ಕೈಚಳಕಗಳನ್ನು ಒಲ್ಲದವರು; ಪವಾಡ, ಕರುಣೆ, ತತ್‌ಕ್ಷಣದ ದರ್ಶನವನ್ನು ಮಾತ್ರ ಬಯಸುವವರು. ಹಾಗೂ ದೈವಿಕ ಅನುಭವವನ್ನು ನಿರೀಕ್ಷಿತಗೊಳಿಸುವ, ರಚಿಸುವ, ಪಳಗಿಸುವ, ಅಲ್ಪಗೊಳಿಸುವ ಎಲ್ಲಾ ರಚನೆಗಳನ್ನು ಅವರು ವಿರೋಧಿಸುತ್ತಾರೆ."[೨೦]

ಎಂದು ವಚನಕಾರರ ಅನುಭವ ಮತ್ತು ಅನುಭಾವಗಳ ನಡುವಿನ ದರ್ಶನವನ್ನು, ವೈರುಧ್ಯವನ್ನು, ವಿಭಿನ್ನತೆಯನ್ನು ರಾಮಾನುಜನ್ ಪ್ರಸ್ತಾಪಿಸುತ್ತಾರೆ. ಅವರು ಈ ವಿರೋಧಾತ್ಮಕ ಅಂಶಗಳಲ್ಲಿ ಒಂದಾಗಿರುವ ಭಾಷೆಯ ಬಗ್ಗೆ ಸಂಶಯ ಮತ್ತು ಭಾಷೆಯ ತಿರಸ್ಕಾರ ಅಲ್ಲಮಪ್ರಭುವಿನ ವಚನಗಳಲ್ಲಿ ಹೇಗೆ ವ್ಯಕ್ತವಾಗಿದೆ ಎಂಬುದನ್ನು ತೀವ್ರ ಪರಿಶೀಲನೆಗೆ ಒಳಗು ಮಾಡುತ್ತಾರೆ.

ಸಾಮಾಜಿಕವಾಗಿ, ಬೌದ್ಧಿಕವಾಗಿ ಮತ್ತು ಧಾರ್ಮಿಕ ರಚನೆಗಳನ್ನೆಲ್ಲಾ ಪೂರ್ಣವಾಗಿ ನಿರಾಕರಿಸಿದ ಉಗ್ರಗಾಮಿ, ತೀವ್ರಗಾಮಿ ಎಂದರೆ ಅಲ್ಲಮಪ್ರಭು. ಭಾವದ ತೀವ್ರತೆ ಇದ್ದರೂ ಅಲ್ಲಮನ ಧ್ವನಿಯಲ್ಲಿ ಸೊಕ್ಕು ಇದೆ ಎಂದು ಅಭಿಪ್ರಾಯಪಡುವ ರಾಮಾನುಜನ್ ಅವರು ಇಡೀ ವಚನಕಾರರಲ್ಲಿ ಬೆಡಗಿನ ವಚನಗಳನ್ನು ಬರೆದವನು ಅಲ್ಲಮಪ್ರಭು ಮಾತ್ರ ಎಂದು ಅಭಿಪ್ರಾಯ ಪಡುತ್ತಾರೆ. ಬಸವಣ್ಣ, ಜೇಡರ ದಾಸಿಮಯ್ಯ, ಅಕ್ಕಮಹಾದೇವಿ ಇವರ್‍ಯಾರೂ ಇಂತಹ ವಚನಗಳನ್ನು ಬರೆಯಲಾಗಿಲ್ಲ ಎನ್ನುತ್ತಾರೆ. ಅಲ್ಲಮನ ವಚನಗಳನ್ನು ಕುರಿತು ರಾಮಾನುಜನ್ ಅವರು ಈ ರೀತಿ ಅಭಿಪ್ರಾಯ ಪಡುತ್ತಾರೆ:

"ಅಸ್ಪಷ್ಟ ಒಗಟುಗಳಂತಿರುವ ಅಲ್ಲಮನ ವಚನಗಳು ಪ್ರಾಚೀನವೂ, ಅಖಿಲ ಭಾರತೀಯವೂ ಆದ ಸಂಧ್ಯಾಭಾಷಾ ಅಥವಾ ಉಲ್ಟೀ ಭಾಷಾದ(ತಲೆಕೆಳಗು ಭಾಷೆ) ಸಂಪ್ರದಾಯದಲ್ಲಿ ಪಾಲ್ಗೊಳ್ಳುತ್ತವೆ. ಈ ಬಗೆಯ ನಿದರ್ಶನಗಳು ವೇದ, ಉಪನಿಷತ್ತುಗಳಷ್ಟು ಪ್ರಾಚೀನವಾದವು, ದೇಶ ಭಾಷೆಗಳಲ್ಲಿ ಚರ್ಯಾಗೀತಿಗಳಷ್ಟು ಹಳೆಯವು. ಅಲ್ಲಮನ ರಚನೆಗಳು ಬಹುಶಃ ಚರ್ಯಾಗೀತಿಗಳಿಗಿಂತ ಹಿಂದಿನವು. ವಿಚಾರಗಳು, ಆಶಯಗಳು, ವಿರೋಧಾಭಾಸಗಳು, ಪ್ರತೀಕಗಳು, ಕಾವ್ಯಪ್ರಕಾರಗಳನ್ನೆಲ್ಲ ಒಳಗೊಂಡಿದ್ದ ನಾಥ ಮತ್ತಿತರ ಗೂಢ ಸಂಪ್ರದಾಯಗಳ ವಿಶಾಲವಾದ ರಾಶಿಯೊಂದಿತ್ತು. ಅಲ್ಲಮನಂತಹ ಕವಿಗಳು ತಮ್ಮ ರಚನೆಗಳನ್ನು ಅದರಲ್ಲಿ ಅದ್ದಿ ಹರಳುಗಳನ್ನು ಹಕ್ಕಳೆ ಕಟ್ಟಿಸಿ ಮೇಲೆತ್ತಿಕೊಂಡರು"[೨೧]

ಎಂದು ರಾಮಾನುಜನ್ ಅವರು ಊಹೆ ಮಾಡುತ್ತಾರೆ. ಅವರ ಈ ಊಹೆ ಅಲ್ಲಮನ ವಚನಗಳನ್ನು ನೋಡಿದಾಗ ನಿಜವೆನ್ನಿಸುತ್ತದೆ. ಈ ಅಂಶಗಳನ್ನು ವಿವರಿಸಲು ಅಲ್ಲಮನ ಮುಂದಿನ ಕೆಲವು ವಚನಗಳನ್ನು ಆಯ್ದುಕೊಂಡು ರಾಮಾನುಜನ್ ಅವರು ಪರಿಶೀಲಿಸುತ್ತಾರೆ.

ಈ ದ್ವಿತೀಯ ಭಾಷೆ, ಭಾಷೆಯೊಳಗಿನ ಭಾಷೆ ಅಂಥ ಇತರ ದ್ವಿತೀಯ ಭಾಷೆಗಳಿಗಿಂತ ಭಿನ್ನವಾದದ್ದು. ಈ ದ್ವಿತೀಯ ಭಾಷೆಯು ಯೋಗ, ತಂತ್ರ, ನಾಥ, ವ್ಯವಸ್ಥೆ ಮತ್ತು ತಂತ್ರಗಳನ್ನು ನಿರಾಕರಿಸಿದರೂ ಅವುಗಳ ಪ್ರತೀಕಗಳನ್ನು ಬಳಸಿಕೊಳ್ಳುವುದನ್ನು ರಾಮಾನುಜನ್ ಅವರು ಅಲ್ಲಮ ಪ್ರಭುವಿನ ವಚನಗಳಲ್ಲಿ ಗುರುತಿಸುತ್ತಾರೆ. ಭಕ್ತಕವಿಗಳನ್ನು ಸಗುಣ ಕವಿಗಳು ಮತ್ತು ನಿರ್ಗುಣ ಕವಿಗಳೆಂದು ಎರಡು ವಿಭಾಗವಾಗಿ ಗುರುತಿಸುತ್ತಾರೆ. ಸಗುಣ ಕವಿಗಳ ಸಾಲಿನಲ್ಲಿ ತಮಿಳಿನ ಸುಂದರಾರ್, ನಮ್ಮಾಳ್ವಾರ್, ಕನ್ನಡದಲ್ಲಿ ಬಸವ, ಅಕ್ಕ, ಬಂಗಾಳಿಯಲ್ಲಿ ವಿದ್ಯಾಪತಿ ಅಂತಹ ಕವಿಗಳನ್ನು ಸೇರಿಸುತ್ತಾರೆ. ಇಂತಹ ಭಕ್ತಕವಿಗಳು ತಮ್ಮ ಕವಿತೆಗಳಲ್ಲಿ ಒಗಟುಗಳನ್ನು ಮತ್ತು ಬೆಡಗುಗಳನ್ನು ಬಳಸುವುದಿಲ್ಲ. ಆದರೆ ಹಿಂದಿಯಲ್ಲಿ ಕಬೀರ, ಕನ್ನಡದಲ್ಲಿ ಅಲ್ಲಮ, ಬಂಗಾಳಿಯಲ್ಲಿ ಲಾಲನ್ ಷಾಹ್, ತಮಿಳಿನಲ್ಲಿ ಸಿತ್ತಾರ್ ಇಂತಹ ನಿರ್ಗುಣ ಕವಿಗಳು ದೇವರಿಗೆ ರೂಪವಿಲ್ಲದಿರುವುದನ್ನು, ಶಬ್ದಗಳಾಚೆಯ ನಿಶ್ಶಬ್ದವನ್ನು ಗುರುತಿಸುವುದನ್ನು ಇವರು ಗುರುತಿಸುತ್ತಾರೆ. ಕೊನೆಗೆ ಇವರೆಲ್ಲಾ ನಿರಾಕರಣೆಯ ಕವಿಗಳೆಂದು ಹೇಳುತ್ತಾರೆ. ರೂಪಕ, ವಿರೋಧಾಭಾಸ, ಅಸಂಭಾವ್ಯತೆ ಇವನ್ನೆಲ್ಲ ಅಲ್ಲಮಪ್ರಭು ಪ್ರತ್ಯೇಕವಾಗಿಯೂ ಬೆಡಗಿನ ವಚನಗಳ ಭಾಗವಾಗಿಯೂ ತನ್ನ ಕವಿತೆಗಳಲ್ಲಿ ಬಳಸುವುದನ್ನು ರಾಮಾನುಜನ್ ಅವರು ಗುರುತಿಸುತ್ತಾರೆ. ಇವೆಲ್ಲವಕ್ಕೂ ಒಂದು ತಾರ್ಕಿಕವಾದ ಸಂರಚನೆಯಿದೆಯೆಂದು, ಒಗಟು ಈ ಮೂರೂ ಅಲಂಕಾರಗಳನ್ನು ಬಳಸಿಕೊಳ್ಳುತ್ತದೆಂದು ಅಲ್ಲಮನ ವಚನಗಳ ಮೂಲಕ ಸೋದಾಹರಣವಾಗಿ ವಿವರಿಸುತ್ತಾರೆ.

ಅಲ್ಲಮ ತನ್ನ ವಚನಗಳಲ್ಲಿ ವರ್ಣನೆಯನ್ನು ನಿರಾಕರಿಸುವ ಮೂಲಕ ವರ್ಣಿಸುವ ಮತ್ತು ಅನುಭವವನ್ನು ಸಕಾರಾತ್ಮಕವಾಗಿ ಬಣ್ಣಿಸುವ, ಆ ಅನುಭವವನ್ನು ಅನುಭಾವಿಕ ನೆಲೆಯಲ್ಲಿ ಪರಿಭಾವಿಸುವುದನ್ನು ರಾಮಾನುಜನ್ ಅವರು ಅಲ್ಲಮನ ಹಲವಾರು ವಚನಗಳ ಮೂಲಕ ಪರಿಶೀಲಿಸುತ್ತಾರೆ. ಅಲ್ಲಮನ ಕವಿತೆಗಳು ಐಕ್ಯವನ್ನು ಅನುಭವಿಸಿದವನ ಮಾತಾಗಿವೆ. ಪಕ್ಕದ ಸ್ಥಿತಿಯತ್ತ ಸಾಗುವ ಅನುಭಾವಿಯ ಆರೋಹಣ, ಅವರೋಹಣ ಅಥವಾ ತೊಳಲಾಟಗಳಿಗಿಂತ ಮಿಗಿಲಾಗಿ ಐಕ್ಯ ಸ್ಥಿತಿಯಲ್ಲಿ ಹೆಚ್ಚಾಗಿ ಹೇಳುತ್ತವೆ ಎಂಬುದನ್ನು ಗುರುತಿಸುತ್ತಾರೆ. ಕಾಯ, ಉಸಿರು, ಪುಣ್ಯ, ಮುಕ್ತಿ, ಯುಗ, ಶಿವ, ಶಕ್ತಿ, ದರ್ಶನ, ರೂಪಕ ಕೊನೆಗೆ ತಾರ್ಕಿಕ ಕಾರಣ ಇಂಥ ಎಲ್ಲಾ ಸಾಂಸ್ಕೃತಿಕ ಪರಿಕಲ್ಪನೆಗಳನ್ನು ನಿರಾಕರಿಸುವ, ತಿರಸ್ಕರಿಸುವ ಸಂದರ್ಭಗಳನ್ನು ಅಲ್ಲಮನ ಕವಿತೆಗಳಲ್ಲಿ ಇವರು ಗುರ್ತಿಸುತ್ತಾರೆ. ಸಗುಣ ಕವಿಗಳಿಗಿಂತ ನಿರ್ಗುಣ ಕವಿಗಳು ಬೆಡಗಿನ ಭಾಷೆಯನ್ನು ಚೆನ್ನಾಗಿ ಬಳಸುವುದನ್ನೂ, ಬೆಡಗಿನ ಭಾಷೆ ಮೌಖಿಕ ಸಾಹಿತ್ಯದ ಒಗಟುಗಳ ಭಾಷೆಗೆ ಸಮೀಪವಿರುವುದನ್ನು ರಾಮಾನುಜನ್ ಅವರು ಗುರುತಿಸುತ್ತಾರೆ. ರೂಪಕಗಳು ಮತ್ತು ರೂಪಕಗಳನ್ನು ಪ್ರಶ್ನಿಸುವುದು ಎರಡೂ ಅಲ್ಲಮನ ಅಭಿವ್ಯಕ್ತಿಯ ವ್ಯಾಪ್ತಿಯೊಳಗೆ ವ್ಯಕ್ತವಾಗಿರುವುದನ್ನು 'ಬೀಜದೊಳಗಣ ವೃಕ್ಷದಂತೆ' ಎಂಬ ಅಲ್ಲಮನ ವಚನದ ರೂಪಕಕ್ಕೆ 'ಬೀಜದೊಳಗಣ ವೃಕ್ಷ ಉಲಿಯಬಲ್ಲುದೆ?' ಎಂದು ಮತ್ತೊಂದು ರೂಪಕ ಪ್ರಶ್ನಿಸುವುದನ್ನು ಗುರ್ತಿಸುತ್ತಾರೆ.

ಈ ಲೇಖನದ ಮೂರನೆಯ ಭಾಗದಲ್ಲಿ ಅಲ್ಲಮನ ಕೆಲವು ಕವಿತೆಗಳನ್ನು ಪರಿಶೀಲಿಸಲು ರಾಮಾನುಜನ್ ಅವರು ಬಯಸುತ್ತಾರೆ. ಆ ಕವಿತೆಗಳನ್ನು 'ಬೆಡಗು' ಅಥವ 'ಒಗಟು' ಎಂದಲ್ಲದೇ ಕವಿತೆಗಳಾಗಿಯೇ ಓದುವ ಬಗ್ಗೆ ಯಾವುದೆಂದು ಹುಡುಕಾಟಕ್ಕೆ ತೊಡಗುತ್ತಾರೆ. ಅವುಗಳ ವಿವರಣೆಯನ್ನು ಕೂಡ ಮಂಡಿಸುತ್ತಾರೆ. ಮುಖ್ಯವಾಗಿ 'ಸಂಸಾರವೆಂಬ ಹೆಣಬಿದ್ದರೆ...', 'ಆನೆಯ ಹೆಣಬಿದ್ದರೆ...', 'ಗಗನದ ಮೇಲೊಂದು ಅಭಿನವ ಗಿಳಿ ಹುಟ್ಟಿ' ಎಂಬ ಮೂರು ವಚನಗಳನ್ನು ವಿಶ್ಲೇಷಣೆ ಮಾಡುತ್ತಾರೆ.

ರೂಪಕಗಳು ಮತ್ತು ರೂಪಕಗಳನ್ನು ಪ್ರಶ್ನಿಸುವುದು, ಗೇಲಿ ಮಾಡುವುದು, ಅಲ್ಲಮನ ಸ್ವಭಾವ; ಇದನ್ನು ಅನೇಕ ವಚನಗಳಲ್ಲಿ ನೋಡಬಹುದು:

> ಸಂಸಾರವೆಂಬ ಹೆಣ ಬಿದ್ದಿರೆ
> ತಿನ ಬಂದ ನಾಯ ಜಗಳ ನೋಡಿದೆ!
> ನಾಯ ಜಗಳ ನೋಡಿ ಹೆಣನೆದ್ದು ನಗುತಿದೆ
> ಗುಹೇಶ್ವರನೆಂಬ ಲಿಂಗವಲ್ಲಿಲ್ಲ ಕಾಣಿರೇ

ಇಲ್ಲಿ ನಾಯಿ ಎಂದರೆ ಇಂದ್ರಿಯಗಳು. ಇದು ನಮ್ಮಾಳ್ವರ್‌ನಂತಹ ಸಗುಣ ಕವಿ ಮಾಡಬಹುದಾಂತೆ ಸಂಸಾರವನ್ನು ದೇವರ ವಿರುದ್ಧವಾಗಿ ಇರಿಸುತ್ತದೆ.

ಆನೆಯ ಹೆಣ ಬಿದ್ದಿರೆ ಕೋಡಗ ಮುದ್ದಾಡಿಸಿತ್ತ ಕಂಡೆ
ಕಾಡೊಳಗುಳ್ಳ ಸೂಳೆ ಕರೆದೊತ್ತೆಯ ಕೊಂಬುದ ಕಂಡೆ
ಹಾಳೂರೊಳಗೆ ನಾಯಿ ಜಗಳವ ಕಂಡೆ
ಇದೇನು ಸೋಜಿಗ ಹೇಳಾ ಗುಹೇಶ್ವರ

ಇಲ್ಲಿ ಕೋಡಗ ಎಂದರೆ ಮನಸ್ಸು, ನಾಯಿಗಳು ಇಂದ್ರಿಯಗಳು, ಹೆಣ ಅಹಂಕಾರದ ಲೌಕಿಕ ಬದುಕು. ಕವಿತೆಯನ್ನು ಅನ್ಯೋಕ್ತಿಯಾಗಿಸುವ ಇಂತಹ ಪ್ರತಿಮೆಗಳನ್ನು ಅರ್ಥಗಳನ್ನಾಗಿ ರೂಪಕಗಳನ್ನು ವಾಚ್ಯವಾಗಿ, ಬೆಡಗಿನ ನಿಗೂಢತೆಯನ್ನು ಉಂಟುಮಾಡುತ್ತದೆ. ರಾಮಾನುಜನ್ ಅವರು ಹೇಳುವ ಹಾಗೆ "ಅಮೂರ್ತವಾದ ಪದಗಳನ್ನೆಲ್ಲ ಬಲ್ಲ ಕವಿ ಅದನ್ನೇ ಹೇಳುವುದಕ್ಕೆ ಪ್ರತಿಮೆಗಳನ್ನು ಬಳಸಿ ಹೀಗೆ ಸುತ್ತಿ ಬಳಸಿ ಯಾಕೆ ಹೇಳುತ್ತಾನೆ? ಸ್ವತಃ ಅಲ್ಲಮನದೇ ನೂರಾರು ಸ್ಪಷ್ಟವಾಗಿರುವ ಕವಿತೆಗಳಿವೆ; ಹಾಗಿದ್ದರೆ ಯಾಕೆ ಈ ಬೆಡಗು? ಈ ಒಗಟು?" ಎಂದು ಪ್ರಶ್ನಿಸುತ್ತಾರೆ.

ಹೀಗೆಯೇ ರಾಮಾನುಜನ್ ಅವರು ಕೆಳಕಂಡ ಪದ್ಯವನ್ನು ಹೀಗೆ ವಿವರಿಸುತ್ತಾರೆ:

ಗಗನದ ಮೇಲೊಂದು ಅಭಿನವ ಗಿಳಿ ಹುಟ್ಟಿ
ಸಯಸಂಭ್ರಮದಲ್ಲಿ ಮನೆಯ ಮಾಡಿತ್ತು
ಒಂದು ಗಿಳಿ ಇಪ್ಪತ್ತೈದು ಗಿಳಿಯಾಗಿತ್ತು
ಬ್ರಹ್ಮನಾ ಗಿಳಿಗೆ ಪಂಜರವಾದ, ವಿಷ್ಣುವಾ ಗಿಳಿಗೆ ಕೊರೆಕೂಳಾದ
ರುದ್ರನಾ ಗಿಳಿಗೆ ತಾ ಕೋಲಾದ
ಇಂತೀ ಮೂವರ ಮುಂದಣ ಕಂದನ ನುಂಗಿ ದೃಷ್ಟನಾಮ ನಷ್ಟವಾಯಿತ್ತು
ಇದೆಂತೋ ಗುಹೇಶ್ವರ

"ಆತ್ಮದ ಅಹಂಭಾವದ ಅಂತಿಮ ಸ್ಥಿತಿಯಲ್ಲಿ ಬದುಕಿನ ಗಿಳಿ ಹುಟ್ಟಿ ಲೋಕದಲ್ಲಿ ಮನೆ ಮಾಡುತ್ತದೆ. ಅದು ಇಪ್ಪತ್ತೈದು ಅಂಶಗಳಿಂದ ಆದದ್ದು. ಬ್ರಹ್ಮನು(ರಜಸ್) ಸ್ಥೂಲ ತನುವಾಗಿ ಅದರ ಪಂಜರ, ವಿಷ್ಣು(ಸತ್ವ) ಸೂಕ್ಷ್ಮ ತನುವಾಗಿ ಇಂದ್ರಿಯಗಳ ಮೂಲಕ ಅದಕ್ಕೆ ಕೂಳು ಆಗುವವನು, ರುದ್ರ(ತಮಸ್) ಕಾರಣ ತನುವಾಗಿ ಅದು ಕೂರುವ ಕೋಲು. ಈ ಮೂರು ತತ್ವಗಳೂ ಅಹಂ-ಭಾವದ ಭಕ್ಷಣೆಗೆ ಒಳಗಾದ್ದರಿಂದ ಗಿಳಿ ಏನನ್ನೂ ಕಾಣದು, ಯಾವುದರ ಹೆಸರನ್ನೂ ಅರಿಯದು."[೨೨]

ಎಂದು ಈ ಕವಿತೆಯನ್ನು ರಾಮಾನುಜನ್ ಅವರು ವ್ಯಾಖ್ಯಾನಿಸುತ್ತಾರೆ.

ಈ ಕವಿತೆಯಲ್ಲಿರುವ ಅದ್ಭುತ ಹಾಗೂ ನಾಟಕೀಯತೆಯನ್ನು ಗುರುತಿಸುತ್ತಾರೆ. ಆಕಾಶದಲ್ಲಿ ಹುಟ್ಟಿದ ಗಿಳಿ ತನ್ನದೇ ಸೃಷ್ಟಿಯನ್ನು ನಾಶ ಮಾಡುತ್ತದೆ ಎಂಬಲ್ಲಿರುವ ಹಿಂಸೆಯನ್ನು ಗುರುತಿಸುತ್ತಾರೆ. ಇದು ಅಹಂ ವಿನಾಶದ ನಾಟಕ ಎನ್ನುತ್ತಾರೆ. 'ನಾನು' ಎನ್ನುವ ಗಿಳಿ ತನ್ನದೇ ಸೃಷ್ಟಿಯೊಂದನ್ನು

ತಿಂದಾಗ ತನ್ನ ಸುತ್ತಲಿನ ಪ್ರಪಂಚವೇ ಮಾಯವಾಗುತ್ತದೆ. ಇದು ನಿರ್ಗುಣ ಕವಿಗಳ ಅಭಿವ್ಯಕ್ತಿಯ ವಿಶಿಷ್ಟ ವಿಧಾನ ಮತ್ತು ಪ್ರಜ್ಞೆಯ ಪರಿವರ್ತನೆ. ಈ ಪರಿವರ್ತನೆಯನ್ನು ಓದುಗ ಗುರ್ತಿಸದಿದ್ದರೆ ಅದು ಅಲ್ಲಮನ ಒಗಟುಕವಿತೆಯಾಗಿ ಉಳಿಯುತ್ತದೆ ಎಂದು ರಾಮಾನುಜನ್ ಅವರು ವಿಷಾದಿಸುತ್ತಾರೆ. ಈ ಬಗೆಯ ಸಾಂಸ್ಕೃತಿಕ ಸ್ಥಲಪಲ್ಲಟವನ್ನು ಅಲ್ಲಮನ ಕವಿತೆಗಳಲ್ಲಿ ಗುರುತಿಸುವ ಕೆಲಸ ಆಗಬೇಕೆಂದು ಅವರು ಅಭಿಪ್ರಾಯ ಪಡುತ್ತಾರೆ.

ಅಲ್ಲಮನ ಕವಿತೆಗಳನ್ನು ಅವು ಬಳಸುವ ಸಾಮಗ್ರಿಗಳಿಂದ ಪ್ರತ್ಯೇಕಗೊಳಿಸಿ ಓದಬೇಕೆಂದು, ಆ ಕವಿತೆಗಳು ತಾವು ಬಳಸುವ ಸಾಮಗ್ರಿಯನ್ನು ವಾದ್ಯದ ಹಾಗೆ ಬಳಸಿಕೊಂಡು ವ್ಯಂಗ್ಯ ಪಲುಕುಗಳ ಸರಣಿಯನ್ನು ಹೊಮ್ಮಿಸುತ್ತವೆ ಎಂದು ರಾಮಾನುಜನ್ ಅಭಿಪ್ರಾಯಪಡುತ್ತಾರೆ. ಪ್ರತಿ ಒಗಟುವಿನಲ್ಲೂ ಒಂದು ಉತ್ತರವಿರುತ್ತದೆ. ಅದು ಉತ್ತರವಿಲ್ಲದೆ ಪೂರ್ಣವಾಗಿರುವುದಿಲ್ಲ. ಆದರೆ ಅಲ್ಲಮನ ಕವಿತೆಯಲ್ಲಿ ಉತ್ತರ ಇರುವುದಿಲ್ಲ ಎನ್ನುವುದೇ ಉತ್ತರ. ಭಾಷೆ ಇರದೇ ಇರುವುದೇ ಭಾಷೆ, ನಿಗೂಢತೆಯೇ ಅದರ ಸ್ಪಷ್ಟತೆ. ಕೆಲವು ಪ್ರಮೇಯಗಳಿಗೆ ಉತ್ತರವಿಲ್ಲ ಎಂದು ಸಾಧಿಸಿ ತೋರಿಸುವುದೇ ಅಲ್ಲಮನ ಕವಿತೆಗಳ ಮುಖ್ಯ ಆಶಯ. ಆ ನಿಗೂಢತೆಯನ್ನು ಗುರುತಿಸುವುದು, ವ್ಯಾಖ್ಯಾನಿಸುವುದು, ವಿವರಿಸುವುದು, ಅರ್ಥೈಸುವುದು ಸಾಂಸ್ಕೃತಿಕವಾಗಿ ಬಹುಮುಖ್ಯ ಜವಾಬ್ದಾರಿ ಎಂದು ರಾಮಾನುಜನ್ ಅವರು ಪ್ರತಿಪಾದಿಸುತ್ತಾರೆ. ಈ ದೃಷ್ಟಿಯಿಂದ ಅವರ ಅಲ್ಲಮನ ಬಗೆಗಿನ ಈ ಪ್ರಬಂಧ ೧೨ನೇ ಶತಮಾನದ ಇತರ ವಚನಕಾರರಿಗಿಂತ ಅಲ್ಲಮನ ವಚನಗಳು ಹೇಗೆ ಭಿನ್ನ, ಹೇಗೆ ನಿಗೂಢ, ಹೇಗೆ ವೈರುಧ್ಯ ಎಂಬುದನ್ನು ಅರ್ಥೈಸಿಕೊಳ್ಳಲು ಒಂದು ಬಹುಮುಖ್ಯವಾದ ಮಾರ್ಗದರ್ಶಿಯಾಗಿದೆ.

೫.೬. ಭಕ್ತಿ ವೈವಿಧ್ಯ(Varities of Bhakthi)

ಇದು ಬಹಳ ಕುತೂಹಲವನ್ನು ಉಂಟುಮಾಡುವ ರಾಮಾನುಜನ್ ಅವರ ಪ್ರಬಂಧ. ಭಾರತೀಯ ಇಬ್ಬರು ಅನುಭಾವಿಗಳು–ಒಂದು ಗಂಡು–ಒಂದು ಹೆಣ್ಣು ಹಾಗೂ ವಿದೇಶೀಯ ಇಬ್ಬರು ಕವಿಗಳು. ಇವರ ರಚನೆಗಳಲ್ಲಿ ಹೊಮ್ಮಿರುವ ಭಕ್ತಿಯ ಸ್ವರೂಪದ ಅನನ್ಯತೆ ಮತ್ತು ಅಸ್ಮಿತೆಗಳನ್ನು ಇಲ್ಲಿ ರಾಮಾನುಜನ್ ಹೋಲಿಸುತ್ತಾರೆ. ಭಕ್ತಿ ಎನ್ನುವುದು ವ್ಯಕ್ತಿಯ ಅಂತರಂಗದ ಅಭಿವ್ಯಕ್ತಿ ಹಾಗೂ ಒಂದು ಕಾಲಘಟ್ಟದೊಳಗೆ ಒಂದು ಜನಸಮುದಾಯದೊಳಗೆ ಕಾಣಿಸಿಕೊಳ್ಳಬಹುದಾದ ಭಾವ ವಿಶೇಷ. ಭಾರತೀಯ ನೆಲೆಯಲ್ಲಿ ಭಕ್ತಿಪಂಥ ಎಂಬುದು ಒಂದು ಪ್ರಮುಖ ಬೆಳವಣಿಗೆ. ಕನ್ನಡದಲ್ಲಿ ಅಕ್ಕ, ತಮಿಳಿನಲ್ಲಿ ಆಂಡಾಳ್, ಉತ್ತರದಲ್ಲಿ ಮೀರಾ ಮುಂತಾದ ಹಲವಾರು ಹೆಣ್ಣುಗಳಿದ್ದಾರೆ. ಅಕ್ಕ ಕನ್ನಡದ ದಿಟ್ಟ ಮಹಿಳೆ. ಅವಳ ನಿರ್ಧಾರಗಳು ಅಚಲ. ಲೌಕಿಕವನ್ನು ಮೀರಲು ಅವಳಿಗೆ ಚನ್ನಮಲ್ಲಿಕಾರ್ಜುನನ ಪತಿತ್ವ ನೆರವು ನೀಡಿತು. ಭಕ್ತಿಯ ಮೂಲಕ ಲೌಕಿಕದ ಜಂಜಡಗಳನ್ನು ಅವಳು ದಾಟಿಕೊಂಡಳು. ಒಂದು ರೀತಿಯಲ್ಲಿ

ಭಕ್ತಿಯೆಂಬುದು ಬಂಡಾಯ. ಅದು ಬಹಳ ಗಟ್ಟಿ. ಯಾರಿಗೂ ಬಾಗುವುದಿಲ್ಲ. ಇದಕ್ಕೆ ಅಕ್ಕಮಹಾದೇವಿಯ ಜೀವನವೇ ಜ್ವಲಂತ ಉದಾಹರಣೆ. ತಾನೊಬ್ಬ ಸಾಮಾನ್ಯ ಹೆಣ್ಣಾಗಿದ್ದು, ಗಂಡನಾದ ಕೌಶಿಕನು ರಾಜನಾಗಿದ್ದದ್ದು, ಅವನನ್ನು ಧಿಕ್ಕರಿಸುವ ಶಕ್ತಿ ಅವಳಿಗೆ ಭಕ್ತಿಯಿಂದ ಬಂದಿತ್ತು. ಇದು ಅಕ್ಕಮಹಾದೇವಿಯ ಭಕ್ತಿಯ ಸ್ವರೂಪ.

ಮುಂದೆ ಬಂಗಾಳಿ ಭಕ್ತ ಕವಿ ಗೋವಿಂದದಾಸರ ರಚನೆಯನ್ನು ನೀಡಲಾಗಿದೆ. ಇಲ್ಲಿ ರಾಧೆ ಕೃಷ್ಣನನ್ನು ಉದ್ದೇಶಿಸಿ ನುಡಿಯುತ್ತಿದ್ದಾಳೆ. ಇಲ್ಲಿ ಕೂಡ ಕವಿ ಗಂಡಾಗಿದ್ದರೂ ಅವನ ಹೆಂಗರುಳನ್ನು ಗಮನಿಸಬಹುದು. ಹೆಣ್ಣು ದೈಹಿಕವಾಗಿ ಅಬಲೆ ಇರಬಹುದು. ಆದರೆ ಅವಳದು ನಿಷ್ಠೆಯಲ್ಲಿ ಬಹು ಖಡಾಖಂಡಿತ. ಅಕ್ಕನ ಹಾಗೆಯೇ ಇಲ್ಲೂ ಕೂಡ ರಾಧೆ ಲೌಕಿಕದ ದಿಗಿಲನ್ನು ದಾಟಿಕೊಳ್ಳಬೇಕಾದ ತನ್ನ ದಯನೀಯ ಸ್ಥಿತಿಯನ್ನು ಕೃಷ್ಣನಿಗೆ ತೋಡಿಕೊಂಡು ಅವನ ಕೊಳಲ ದನಿ ತನಗೆ ಆ ಶಕ್ತಿಯನ್ನು ನೀಡಿದೆ; ಅದರಿಂದಾಗಿ ಈ ದಾರಿಯ ನೋವು ಲೆಕ್ಕಕ್ಕಿಲ್ಲ ಎನ್ನುವ ಧೈರ್ಯ ಅವಳಿಗೆ ಬಂದಿದೆ. ಅಕ್ಕ ಮತ್ತು ಗೋವಿಂದದಾಸರ ರಚನೆಗಳಿಗೆ ಸಾಮ್ಯ ಇರುವುದನ್ನು ರಾಮಾನುಜನ್ ಅವರು ಈ ಪ್ರಬಂಧದಲ್ಲಿ ಗುರುತಿಸುತ್ತಾರೆ.

ಜಾರ್ಜ್ ಹರ್ಬರ್ಟ್‌ನ 'ಲವ್-೩' ಎನ್ನುವ ಕವಿತೆ. ಇಲ್ಲಿ ಹರ್ಬರ್ಟ್ ಪ್ರಣಯ ಸಂಪ್ರದಾಯವನ್ನು ಪ್ರೇಮಿಗಳ ಸಂಭಾಷಣೆಯನ್ನು ಬಳಸಿ ಕವಿತೆಯನ್ನು ನಿರೂಪಿಸುತ್ತಾನೆ. ಈ ಕವಿತೆಗೆ ಹಿನ್ನೆಲೆಯಾಗಿರುವುದು ಕ್ರಿಸ್ತನ ಅನುಕರಣೆ.

ರಾಮಾನುಜನ್ ಅವರು ಮಧ್ಯಕಾಲೀನ ಕನ್ನಡ ಮತ್ತು ತಮಿಳಿನ ಭಕ್ತಿ ಸಾಹಿತ್ಯದ ಬಗ್ಗೆ ಆಳವಾಗಿ ಅಧ್ಯಯನ ನಡೆಸಿದವರು. ಕನ್ನಡದಲ್ಲಿ ವಚನ ಸಾಹಿತ್ಯ ಮತ್ತು ತಮಿಳಿನಲ್ಲಿ ಸಂಗಂ ಸಾಹಿತ್ಯವನ್ನು ಕುರಿತು ಈ ಸಾಹಿತ್ಯಗಳಲ್ಲಿ ಪ್ರಕಟವಾಗುವ ಭಕ್ತಿಯ ವೈವಿಧ್ಯತೆಯನ್ನು ಆಳವಾದ ಶೋಧನೆಗೆ ಒಳಗುಪಡಿಸಿದವರು. ಪ್ರಸ್ತುತ 'ಭಕ್ತಿವೈವಿಧ್ಯ' ಎಂಬ ಈ ಕಿರುಲೇಖನದಲ್ಲಿ ಮುಖ್ಯವಾಗಿ ನಾಲ್ಕು ಭಕ್ತಿಕವಿಗಳ ತಲಾ ಒಂದೊಂದು ಭಕ್ತಿಕವಿತೆಯನ್ನು ಆಯ್ದುಕೊಂಡು ಅವುಗಳಲ್ಲಿ ಪ್ರಕಟವಾಗುವ ಭಕ್ತಿಕಾವ್ಯದ ವೈವಿಧ್ಯತೆಯನ್ನು ಚರ್ಚೆಗೆ ಒಳಪಡಿಸಿದ್ದಾರೆ. ಈ ಕವಿತೆಗಳು ಭಕ್ತಿ ಚಳುವಳಿಯ ಪ್ರಾತಿನಿಧಿಕವಾದ ಕವಿತೆಗಳು ಸಹ ಆಗಿವೆ. ಕನ್ನಡದಿಂದ ೧೨ನೇ ಶತಮಾನದ ಮಹಾದೇವಿಯಕ್ಕನ ಒಂದು ಕವಿತೆ, ೧೬-೧೭ನೇ ಶತಮಾನದ ಬಂಗಾಳಿಯ ಭಕ್ತಕವಿ ಗೋವಿಂದ ದಾಸನ ಒಂದು ಕವಿತೆ, ಮೂರನೆಯದು ಪಾಶ್ಚಾತ್ಯ ಭಕ್ತಕವಿ ಎನ್ನುವುದಕ್ಕಿಂತ ಬದಲಾಗಿ ಅನುಭಾವಿಕ ಕವಿ(ಮೆಟಾಫಿಸಿಕಲ್) ಜಾನ್ ಡನ್ ಕವಿಯ ಹೋಲಿ ಸಾನೆಟ್ಸ್ ಕಾವ್ಯದಲ್ಲಿನ ಒಂದು ಕವಿತೆ ಮತ್ತು ನಾಲ್ಕನೆಯದಾಗಿ ೧೭ನೇ ಶತಮಾನದ ಜಾರ್ಜ್ ಹರ್ಬಟ್ ನ 'ದಿ ಲವ್' ಎಂಬ ಒಂದು ಕವಿತೆಯನ್ನು ಆಯ್ಕೆ ಮಾಡಿಕೊಂಡು ಈ ನಾಲ್ಕೂ ಕವಿತೆಗಳಲ್ಲಿ ಪ್ರಕಟವಾಗುವ ಭಕ್ತಿಯ ವೈವಿಧ್ಯತೆಯನ್ನು ರಾಮಾನುಜನ್ ಅವರು ಪರಿಶೀಲಿಸಿದ್ದಾರೆ. ಇಂಗ್ಲಿಷಿನ

ಎರಡೂ ಕವಿತೆಗಳು ಮೆಟಾಫಿಸಿಕಲ್ ಪರಂಪರೆಗೆ ಮತ್ತು ವಿಶಾಲವಾದ ಯುರೋಪಿಯನ್ ಭಕ್ತಿ ಕಾವ್ಯದ ಪರಂಪರೆಗೆ ಸೇರಿದಂತಹವುಗಳು. ಎರಡೂ ಭಾರತೀಯ ಕವಿತೆಗಳಲ್ಲಿ ಒಂದು ಬಗೆಯ ಪರಸ್ಪರ ಸಂಬಂಧವಿದೆ. ಇವು ಪ್ರಾಚೀನವಾದ ಅಖಿಲ ಭಾರತೀಯ ಭಕ್ತಿ ಪರಂಪರೆಗೆ ಸೇರಿದಂತಹವು. ನಾಲ್ಕು ಕವಿತೆಗಳಲ್ಲಿ ಲೌಕಿಕವಾದ ಪ್ರೀತಿಯನ್ನು ಅಲೌಕಿಕ ಪ್ರೀತಿಗೆ ಪ್ರತಿಮೆಯಾಗಿ ಅನುಸಂಧಾನ ಮಾಡಿರುವುದು ಸಮಾನವಾದ ಅಂಶವಾಗಿದೆ.

ಭಕ್ತಿಕಾವ್ಯದಲ್ಲಿ ಬಹುಮಟ್ಟಿಗೆ ಆಕರ, ಆಶಯ, ಸಂಕೇತ ಮತ್ತು ನುಡಿಗಟ್ಟುಗಳಲ್ಲಿ ಸಮಾನವಾದ ಅಂಶಗಳು ಕಂಡುಬರುತ್ತವೆ. ದೇಶ ವಿದೇಶಗಳಲ್ಲಿನ ಇಂತಹ ಕವಿತೆಗಳಲ್ಲಿ ಈ ಬಗೆಯ ಸಮಾನತೆ ಹೇಗೆ ಮೂಡಿತು ಎಂಬುದು ಪ್ರಶ್ನೆಯಾದರೂ ಇದು ಪರಸ್ಪರ ಪ್ರಭಾವವೇನಲ್ಲ. ಮನುಷ್ಯನ ಅನುಭವವೇ ವಿಶ್ವಾತ್ಮಕವಾದದ್ದು. ಅನಾದಿಕಾಲದಿಂದ ಭಕ್ತಿ ಎಲ್ಲಾ ನಾಗರಿಕತೆಗಳಲ್ಲಿಯೂ, ಜನಾಂಗಗಳಲ್ಲಿಯೂ ಕಾಣಿಸಿಕೊಂಡು ಬಂದಿದೆ. ಏನೇ ಇದ್ದರೂ ಭಕ್ತಿಕಾವ್ಯದ ಆಳದಲ್ಲಿ ಭಿನ್ನವಾಗಿರುವ ಸಂದರ್ಭಗಳು ಮತ್ತು ಕಲಾತ್ಮಕ ತತ್ವರತೆಗಳು ಮೇಲ್ಪದರದಲ್ಲಿ ಒಂದೇ ಬಗೆಯಾಗಿ ತೋರಿದರೂ ಅವುಗಳ ರಚನೆಗಳಲ್ಲಿ, ಅವುಗಳ ಶೈಲಿಯಲ್ಲಿ ವೈಶಿಷ್ಟ್ಯ ಇರುವುದನ್ನು ರಾಮಾನುಜನ್ ಅವರು ಇಲ್ಲಿ ಗುರುತಿಸಲು ಯತ್ನಿಸಿದ್ದಾರೆ.

ಇಂತಹ ವ್ಯತ್ಯಾಸಗಳನ್ನು, ಹೋಲಿಕೆಗಳನ್ನು, ಭಿನ್ನ ಪರಂಪರೆಯ ಪಠ್ಯಗಳನ್ನು ಅಕ್ಕಪಕ್ಕದಲ್ಲಿಟ್ಟು ಅವುಗಳ ಪರಸ್ಪರ ವೈಶಿಷ್ಟ್ಯಗಳನ್ನು ರಾಮಾನುಜನ್ ಅವರು ನಿರ್ವಚಿಸಿದ್ದಾರೆ. ತೌಲನಿಕ ಸಾಹಿತ್ಯದ ಅಧ್ಯಯನದ ಪರಿಕಲ್ಪನೆ ಈ ಕವಿತೆಗಳ ಹಿಂದಿನ ಅಧ್ಯಯನದಲ್ಲಿ ಕಂಡುಬಂದರೂ, ರಾಮಾನುಜನ್ ಅವರು "ವೈದೃಶ್ಯ ಸಾಹಿತ್ಯಕ್ಕೆ ಮಾಡಿರುವ ಜಾಣ ನಾಮಕರಣ" ಎನ್ನುವ ಮಾತನ್ನೂ ಅವರು ಸೇರಿಸುತ್ತಾರೆ.

ರಾಮಾನುಜನ್ ಅವರು ಈ ನಾಲ್ಕು ಭಕ್ತಿ ಕವಿಗಳ ಕವಿತೆಗಳನ್ನು ಆಯ್ದುಕೊಂಡು ಅವುಗಳನ್ನು ವ್ಯಾಖ್ಯಾನಿಸುವ, ವಿವರಿಸುವ ಮತ್ತು ಇತರ ಭಕ್ತಿ ಕವಿ ಜೊತೆ ಪರಸ್ಪರ ಹೋಲಿಸಿ ಮೌಲ್ಯಮಾಪನ ಮಾಡುವ ವಿಶಿಷ್ಟವಾದ ಅವರ ಚಿಂತನೆಯು ಇಲ್ಲಿ ಎದ್ದು ಕಾಣುತ್ತದೆ. ಮೊದಲಿಗೆ ಮಹಾದೇವಿಯಕ್ಕ ಕನ್ನಡದಲ್ಲಿ ಬರೆದಿರುವ ಕವಿತೆಯನ್ನು ತೆಗೆದುಕೊಳ್ಳುತ್ತಾರೆ. ಈಕೆ ಶಿವನ ದೈವಿಕ ಪ್ರೇಮಿ, ಅವನನ್ನು ಚೆನ್ನಮಲ್ಲಿಕಾರ್ಜುನ, ಮಲ್ಲಿಗೆಗಳ ಅರ್ಜುನ ಎಂದು ಸಂಬೋಧಿಸುತ್ತಾಳೆ. ಕವಿತೆ ಈಗಿದೆ:

> ಅತ್ತೆ ಮಾಯೆ, ಮಾವ ಸಂಸಾರಿ!
> ಮುವ್ವರು ಮೈದುನರು ಹುಲಿಯಂಥಾ ಅವದಿರು!
> ನಾಲುವರು ನಗೆವೆಣ್ಣು ಕೇಳು ಕೆಳದಿ!
> ಐವರು ಭಾವದಿರನೊಯ್ವ ದೈವವಿಲ್ಲ!

ಆರು ಪ್ರಜೆಯತ್ತಿಗೆಯರ ಮೀರಲಾರೆನು ತಾಯೆ!
ಹೇಳುವಡೆ ಏಳು ಪ್ರಜೆ ತೊತ್ತಿರ ಕಾವಲು
ಕರ್ಮವೆಂಬ ಗಂಡನ ಬಾಯ ಟೊಣೆದು
ಹಾದರವನಾಡುವೆನು ಹರನ ಕೂಡೆ!
ಮನವೆಂಬ ಸಖಿಯ ಪ್ರಸಾದದಿಂದ
ಅನುಭಾವವ ಕಲಿತೆನು ಶಿವನೊಡನೆ
ಕರ ಚೆಲುವ ಶ್ರೀಶೈಲ ಚೆನ್ನಮಲ್ಲಿಕಾರ್ಜುನನ
ಸಜ್ಜನದ ಗಂಡನ ಮಾಡಿಕೊಂಬೆನು

ಬಂಗಾಳಿ ಕವಿ ಗೋವಿಂದದಾಸನ ಕವಿತೆಯ ವಸ್ತು ವಿಷ್ಣುವಿನ ಅವತಾರವಾಗಿರುವ ಕೃಷ್ಣನನ್ನು ಉದ್ದೇಶಿಸಿ ಕವಿತೆಯನ್ನು ನುಡಿಯುತ್ತಿರುವ ರಾಧೆ. ಆಕೆ ಮದುವೆಯಾಗಿರುವ ಹೆಣ್ಣು. ಹಳ್ಳಿಯ ಮಿಕ್ಕ ಹುಡುಗಿಯರಂತೆಯೇ ಕಪ್ಪು ಬಣ್ಣದ ದನಗಾಹಿ ಕೃಷ್ಣನಲ್ಲಿ ಅವಳಿಗೆ ಅದಮ್ಯ ಪ್ರೀತಿ. ಆ ಪದ್ಯ ಹೀಗಿದೆ:

ನನ್ನ ದಿಗಿಲು ಹೇಗೆ ಹೇಳಲಿ ಓ ಮಾಧವಾ?
ಸಾವಿರ ನಾಲಗೆ ಇದ್ದರೂ ನನಗೆ
ಬಣ್ಣಿಸಲಾರೆ ಇಲ್ಲಿಗೆ ನಾ ಬಂದೆ ಹೇಗೆ.
ಇದ್ದೆ ಒಬ್ಬಳೇ, ಹೆಂಗಸು; ಇರುಳು ಕಪ್ಪಾಗಿತ್ತು.
ಕಾಡು ದಟ್ಟವಾಗಿ ಕತ್ತಲೆ ಮುಸುಗಿತ್ತು.
ನನ್ನದೋ ದೂರದ ಹಾದಿ.
ಮಳೆ ಸುರಿಯುತ್ತಿತ್ತು.
ಯಾವ ದಾರಿ ತುಳಿಯಲಿ?
ಕಾಲೆಲ್ಲ ಕೆಸರು
ಪಾದಕೆಲ್ಲ ಮುಳ್ಳು ಚುಚ್ಚಿ ಉರಿ.
ಯಾವುದೂ ಲೆಕ್ಕಕ್ಕೆ ಇಲ್ಲ.
ಕಂಡೀಯೆ ನೀನು ಅನ್ನುವ ಆಸೆ.
ಭಯವೀಗ ದೂರವಾಗಿದೆ.
ನಿನ್ನ ಕೊಳಲ ದನಿ ನನ್ನ ಕಿವಿ ತುಂಬಿದೆ.
ಮನೆಯ ತೊರೆ, ಗೆಳತಿಯರ ತೊರೆ ಎಂದಿದೆ.
ಕತ್ತಲಲ್ಲಿ ನಿನ್ನೆಡೆಗೆ ಸೆಳೆದಿದೆ.
ಇಲ್ಲಿಗೆ ಬರುವ ದಾರಿಯ ನೋವು
ಲೆಕ್ಕಕಿಲ್ಲ ಅನ್ನುವನು ಗೋವಿಂದ ದಾಸ.

(ಡಿಮಾಕ ಮತ್ತು ಲೆವಟ್ರೋವ್ ೧೯೬೭, ೨೧)

ಈ ಕವಿತೆಗಳನ್ನು ರಾಮಾನುಜನ್ ಅವರು ಪ್ರತ್ಯೇಕವಾಗಿ ಮತ್ತು ತೌಲನಿಕವಾಗಿ ಪರಿಶೀಲಿಸುತ್ತಾರೆ. ಅಕ್ಕನ ಕವಿತೆ ಮತ್ತು ಗೋವಿಂದದಾಸನ ಕವಿತೆ ಎರಡೂ ಸಂಸ್ಕೃತದ ಮತ್ತು ಸ್ಥಳೀಯ ಭಾಷೆಗಳ ಭಾರತೀಯ ಶೃಂಗಾರ ಕಾವ್ಯದ ಸಂಪ್ರದಾಯಗಳನ್ನು ಬಳಸಿಕೊಂಡಿವೆ. ಅಕ್ಕನ ಕವಿತೆಯಲ್ಲಿ ಬಂಧುಗಳ ಮನೆಯನ್ನು ಬಿಟ್ಟು ಪ್ರೇಮಿಯನ್ನು ಹುಡುಕುತ್ತಾ ಹೋಗುವ ಅಭಿಸಾರಿಕೆಯ ಪ್ರತಿಮೆಯೇ ಕೇಂದ್ರ ಬಿಂದು. ಆದರೆ ಆಪ್ತಸಖಿಯನ್ನುಳಿದ ಮಿಕ್ಕ ವಿವರಗಳಿಲ್ಲ. ಇದು ಅನ್ಯೋಕ್ತಿಯ ವಿಧಾನವನ್ನು ಬಳಸಿಕೊಂಡಿದೆ ಎಂದು ರಾಮಾನುಜನ್ ಅವರು ಈ ಕವಿತೆಯ ಬಗ್ಗೆ ವಿಶ್ಲೇಷಣೆ ಮಾಡುತ್ತಾರೆ. ಕವಿತೆಯಲ್ಲಿ ಸಂಬಂಧಿಗಳು ಒಂದೊಂದು ಗುಣಗಳಿಗೆ ಸಂವಾದಿಯಾಗಿದ್ದಾರೆ. ಅತ್ತೆಯು ಮಾಯೆ, ಮಾವನು ಲೋಕ, ಮೂವರು ಮೈದುನರು ವ್ಯಕ್ತಿಯ ಸ್ವಭಾವಕ್ಕೆ ಸಂಕೇತವಾಗಿದ್ದಾರೆ. ಗಂಡನು ಅನೇಕ ಜನ್ಮಗಳಿಂದ ಸಾಗಿ ಬಂದಿರುವ ಒಂದು ಕರ್ಮ. ನಾದಿನಿಯು ಗತಜನ್ಮಗಳ ವಾಸನೆಗೆ ಸಂಕೇತ. ಮನಸ್ಸು ಮಾತ್ರವೇ ಪ್ರಿಯಕರನೊಡನೆ ಭೇಟಿಗೆ ನೆರವು ನೀಡುವ ಆಪ್ತಸಖಿ. ಈ ಎಲ್ಲಾ ಸಂಬಂಧಗಳು ಮದುವೆಯ ಕಾರಣದಿಂದ ಮಾಡಿಕೊಂಡ ಸಂಬಂಧಗಳಾಗಿವೆ. ಇವರ್‍ಯಾರೂ ಅವಳ ರಕ್ತಸಂಬಂಧಿಯಲ್ಲ. ಎಲ್ಲಾ ನೈತಿಕ ವಿವರಗಳು ಕವಿತೆಯ ಆಶಯಗಳಾಗಿವೆ. ಇವುಗಳಿಗೆ "ಹಾದರವನಾಡುವೆನು ಹರನ ಕೂಡೆ" ಎಂಬ ಮಾತಿನಿಂದ ಧಕ್ಕೆ ಒದಗುತ್ತದೆ. ಈ ಹಾದರ ಎಂಬ ಆಡುಮಾತಿನ ಶೈಲಿಯಲ್ಲಿ ರಚಿತವಾಗಿರುವ ಇಡೀ ಕವಿತೆ ಈ ಪದದ ಬಳಕೆಯಿಂದ ಕವಿತೆಯಲ್ಲಿರುವ ನೈತಿಕತೆಗೆ ಆಘಾತವನ್ನು ನೀಡುತ್ತದೆ. ಇದೊಂದು ಭಾಷಿಕ ಆಘಾತ. ಲಜ್ಜೆಯು ಒಂದು ಸದ್ಗುಣ ಎಂದು ನಿರಾಕರಿಸುವ ಅಕ್ಕ ತೊಟ್ಟ ಉಡುಗೆಯನ್ನೇ ಧಿಕ್ಕರಿಸುವ ಆಕೆ ಈ ಸಂದರ್ಭದಲ್ಲಿ ಈ ಪದದಿಂದ ಕವಿತೆಯು ನೈತಿಕವಾಗಿ ತನ್ನ ಚೌಕಟ್ಟನ್ನು ದ್ವಂದ್ವಕ್ಕೆ ಸಿಕ್ಕಿಸಿಕೊಳ್ಳುತ್ತದೆ.

ಅಕ್ಕನ ಈ ಕವಿತೆಯನ್ನು ಡನ್ ಕವಿಯ ಕವಿತೆಯಲ್ಲೂ ಬರುವ ಆಡುಮಾತಿನ ಲಯದ ಜೊತೆ ಹೋಲಿಸಬಹುದಾಗಿದೆ ಎಂದು ರಾಮಾನುಜನ್ ಅವರು ಹೇಳುತ್ತಾರೆ. ಜಾನ್ ಡನ್ ಕವಿಯ ಹೋಲಿ ಸಾನೆಟ್ಸ್ ಸರಣಿಯ ಹದಿನಾಲ್ಕನೆಯ ಕವಿತೆ. ತನ್ನ ಕಲ್ಪನೆಯಲ್ಲಿ ಆಡುಮಾತಿನ ಲಯದ ಶಕ್ತಿಯಲ್ಲಿ ಕನ್ನಡದ ಕವಿತೆಯಂತಿದೆ. ಟಗರಿನ ಲೈಂಗಿಕ ಕ್ರಿಯೆಯ ಸೂಚನೆಯೊಂದಿಗೆ ಆ ಕವಿತೆ ಆರಂಭವಾಗಿದೆ. ಸೈನ್ಯದ ಆಕ್ರಮಣಶೀಲತೆ ಹಾಗೂ ಮೃಗೀಯ ಲೈಂಗಿಕತೆ ಎರಡೂ ನೋಟಗಳು ಕವಿತೆಯಲ್ಲಿ ಬಳಕೆಯಾಗಿದೆ. ಎರಡೂ ಕವಿತೆಗಳು ಪರಿಣಾಮದಲ್ಲಿ ಭಿನ್ನವಾಗಿವೆ. ಅವರು ಹೇಳುವ ಹಾಗೆ

> "ಈ ಭಿನ್ನತೆ ಭಾಷೆ ಮತ್ತು ರೂಪಗಳ ಭಿನ್ನತೆಯ ತಾಂತ್ರಿಕ ಕಾರಣಗಳಿಂದ ಮಾತ್ರ ಮೂಡಿದ್ದಲ್ಲ. ಮಹಾದೇವಿಯಕ್ಕನ ಕವಿತೆ ಉಲ್ಲಂಘನೆ ಮತ್ತು ವಿಶ್ವಾಸಗಳ ಅಭಿವ್ಯಕ್ತಿಯಾಗಿದ್ದರೆ, ಡನ್ ಕವಿತೆ ಬೇಗುದಿ ಮತ್ತು ಸಂಶಯಗಳ ಅಭಿವ್ಯಕ್ತಿಯಾಗಿದೆ"[೨೩]

ಎಂದು ರಾಮಾನುಜನ್ ಅವರು ಅಭಿಪ್ರಾಯ ಪಡುತ್ತಾರೆ.

ಬಂಗಾಳಿ ಕವಿ ಗೋವಿಂದದಾಸನ ಕವಿತೆಯಲ್ಲಿ ಶೃಗಾರದ ಸಂಪ್ರದಾಯ ಪೂರ್ಣತೆಯನ್ನು ಪಡೆದಿದೆ. ಅಭಿಸಾರವನ್ನು ಬಯಸಿಬರುವ ಹೆಣ್ಣು ರಾತ್ರಿಯ ಕತ್ತಲೆಗೆ ಭಯ ಪಡುತ್ತಾಳೆ. ಈ ಕತ್ತಲೆ ಮುಳ್ಳುಕಲ್ಲಿನ ಹಾದಿ, ಮಳೆ, ಇವೆಲ್ಲ ಆ ಪ್ರೇಮಿಗಳ ಮಿಲನಕ್ಕೆ ಒದಗಿ ಬರುವ ಸಾಂಪ್ರದಾಯಿಕ ಹಿನ್ನೆಲೆಗಳಾಗಿವೆ. ಇಲ್ಲಿ ಕೂಡ ರಾಧೆ ಅಕ್ಕನಂತೆ ಮನೆಯನ್ನು, ಗೆಳತಿಯನ್ನು ತೊರೆದುಬರುತ್ತಿರುವ ವಿವಾಹಿತ ಮಹಿಳೆ.

ಜಾನ್ ಹರ್ಬರ್ಟ್‌ನ ಕವಿತೆ ದೇವರ ಹೆಸರನ್ನು ಹೇಳುವುದಿಲ್ಲ. 'ಲವ್' ಎನ್ನುವ ಪದವನ್ನು ಮಾತ್ರ ಬಳಸುತ್ತದೆ. ಕವಿತೆಯನ್ನು ನಡೆಸುತ್ತಿರುವ ವ್ಯಕ್ತಿ ತಾನೇ ಪ್ರೀತಿಯ ಬಳಿಗೆ ಬಂದರೂ ಮಿಕ್ಕ ಎಲ್ಲವನ್ನೂ ಪ್ರೀತಿಯೇ ನೆರವೇರಿಸುತ್ತದೆ ಎಂಬುದು ಅವನ ಅಪರಾಧಿ ಭಾವ, ಪಾಪಪ್ರಜ್ಞೆಗಳನ್ನು ನಿವಾರಿಸುತ್ತದೆ. ಇಲ್ಲಿ ಪ್ರೀತಿ ಗಂಡೋ ಹೆಣ್ಣೋ ಎನ್ನುವುದು ಸ್ಪಷ್ಟವಾಗುವುದಿಲ್ಲ. ಈ ವಿಷಯದಲ್ಲಿ ಇದು ಸಂದಿಗ್ಧವಾಗಿದೆ. ಬಂಗಾಳಿ ಕವಿತೆ ಮಾಡುವಂತೆಯೇ ಹರ್ಬರ್ಟ್ ಕೂಡ ತನ್ನ ಕಾವ್ಯ ಪರಂಪರೆಯಲ್ಲಿ ಬರುವ ಪ್ರಣಯ ಸಂಪ್ರದಾಯವನ್ನು, ಪ್ರೇಮಿಗಳ ಸಂಭಾಷಣೆಯನ್ನು ಬಳಸಿಕೊಂಡಿದ್ದಾನೆ.

ಹೀಗಾಗಿ ಮೇಲಿನ ಎರಡು ಕವಿತೆಗಳಲ್ಲಿ ಮಾನಸಿಕ ಅಂಶಗಳು ಬಂದಿದ್ದರೆ ಇನ್ನುಳಿದ ಎರಡು ಕವಿತೆಗಳಲ್ಲಿ ದೈಹಿಕ ವಿಚಾರಗಳು ಬಂದಿವೆ. ಈ ವೈರುಧ್ಯವನ್ನು ರಾಮಾನುಜನ್ ಇಲ್ಲಿ ಹೋಲಿಸಿ ನಿರೂಪಿಸುತ್ತಾರೆ. ಭಕ್ತಿ ಎಂಬುದು ಒಂದು ವಿಶೇಷ ಭಾವ. ಅಕ್ಕ ಮಹಾದೇವಿಯಾಗಲೀ, ಗೋವಿಂದದಾಸರಾಗಲೀ ತಮ್ಮ ರಚನೆಗಳಲ್ಲಿ ಶೃಂಗಾರವನ್ನು ಭಕ್ತಿಯ ಸಲುವಾಗಿ ಬಳಸಿಕೊಂಡರು. ಮುಂದೆ ಭಾರತದಲ್ಲಿ ಇದು ಭಕ್ತಿ ಎನ್ನುವುದನ್ನು ಒಂದು ರಸವೆಂದು ಪರಿಗಣಿಸುವಷ್ಟು ಬೆಲೆ ಅದಕ್ಕೆ ಸಿಕ್ಕಿತು. ಆದರೆ ಪಾಶ್ಚಾತ್ಯರಲ್ಲಿ ಶೃಂಗಾರವು ಶೃಂಗಾರವಾಗಿ ಬಂದಿದೆಯೇ ಹೊರತು, ಆಧ್ಯಾತ್ಮಿಕತೆಯ ಭಾಗವಾದ ಭಕ್ತಿಯಾಗಿ ಅಕ್ಕ ಮತ್ತು ಗೋವಿಂದರಲ್ಲಿ ಬಂದಂತೆ ಬರುವುದಿಲ್ಲ. ಇಲ್ಲಿ ಇನ್ನೊಂದು ಮಾತು ಮುಖ್ಯ. ಅದೇಂದರೆ ಭಕ್ತಿಯು ಒಂದು ಪಂಥವಾಗಿ ಒಂದು ಕಾಲಘಟ್ಟದ ಧೋರಣೆಯಾಗಿ ಇಂಡಿಯಾ ದೇಶದಲ್ಲಿ ವ್ಯಾಪಕವಾಗಿ ಕಾಣಿಸಿಕೊಳ್ಳಲು ಶಿಷ್ಟರ ಗ್ರಂಥಸ್ಥ ಮಹಾಪರಂಪರೆಗಿಂತ ಗ್ರಾಮೀಣ ನೆಲೆಯ ಅನಕ್ಷರಸ್ಥ ಜನಪದರ ಮೌಖಿಕ ಪರಂಪರೆಯು ನೆರವು ನೀಡಿದೆ ಎಂಬುದು.

> "ಬಂಗಾಳಿ ಕವಿತೆಯಲ್ಲಿ ಶೃಗಾರ ರಸವನ್ನು ಭಕ್ತಿಯ ಸಲುವಾಗಿ ಬಳಸಲಾಗಿದೆ. ಅನಂತರ ಕಾಲದಲ್ಲಿ ಭಕ್ತಿಯೇ ಒಂದು ರಸವೆಂದು ಪರಿಗಣನೆಯಾಯಿತು. ಭಾರತದಲ್ಲಿ ಆದ ಈ ಬೆಳವಣಿಗೆಗೆ ಸಮಾನಾಂತರವಾಗಿ ಹರ್ಬರ್ಟ್ ಕಾಲದಲ್ಲಿ(ಎಲಿಜಬೆತ್ ಯುಗ) ಪವಿತ್ರ ಅಣಕು ಎನ್ನುವ ಪ್ರಕಾರ ಸೃಷ್ಟಿಯಾಯಿತು"[೨೪]

ಎಂದು ರಾಮಾನುಜನ್ ಅವರು ಅಭಿಪ್ರಾಯ ಪಡುತ್ತಾರೆ. ಕುತೂಹಲಕರವಾದ ಇನ್ನೂ

ಅನೇಕ ಸಂಗತಿಗಳನ್ನು ಈ ಕವಿತೆಗಳಲ್ಲಿ ಪರಿಶೀಲಿಸಲು ಸಾಧ್ಯವಿದೆ ಎಂದು ಹೇಳುವ ರಾಮಾನುಜನ್ ಅವರು–

> "ಈ ಎಲ್ಲಾ ಕವಿತೆಗಳಲ್ಲಿ ಬಳಕೆಯಾಗಿರುವ ಪರಿಚಿತ ಭಾಷೆ; ಕನ್ನಡದ ಭಕ್ತಿ ಕವಿತೆಯಲ್ಲಿ ಮತ್ತು ತಕ್ಕಮಟ್ಟಿಗೆ ಬಂಗಾಳಿ ಕವಿತೆಯಲ್ಲಿ ಆಡುಮಾತಿನ ಸರಳತೆ ಮತ್ತು ಶಕ್ತಿ ಸಂಸ್ಕೃತದ ವಿರುದ್ಧವಾದ, ದೇವಭಾಷೆ ಮತ್ತು ಅದು ಪ್ರತಿನಿಧಿಸುವ ಬ್ರಾಹ್ಮಣ ಜ್ಞಾನ ಮತ್ತು ವಿಧ್ಯುಕ್ತ ಆಚರಣೆಗಳ ವಿರುದ್ಧವಾದ ಬಂಡಾಯದ ರೂಪವಾಗಿದೆ"[೨೫]

ಎಂದು ರಾಮಾನುಜನ್ ಅವರು ಅಭಿಪ್ರಾಯ ಪಡುತ್ತಾರೆ.

ಭಕ್ತಕವಿಗಳು ಬಹುಮಟ್ಟಿಗೆ ಸಂಸ್ಕೃತ ಭಾಷೆಗೆ ಪರ್ಯಾಯವಾಗಿ ದೇಶೀಭಾಷೆಗೆ ಒತ್ತುಕೊಟ್ಟು ತಮ್ಮ ಭಕ್ತಿಯ ತತ್ಪರತೆಯನ್ನು ಪ್ರಕಟಿಸಿದವರೇ ಆಗಿದ್ದಾರೆ. ಹಿಂದಿಯ ಭಕ್ತಕವಿಗಳು "ಸಂಸ್ಕೃತವು ಭಾವಿಯ ನೀರು, ದೇಶ ಭಾಷೆಯು ಹರಿಯುವ ಹೊಳೆಯ ನೀರು" ಎಂದು ಪರಿಭಾವಿಸಿದ್ದರೆ, ವಚನಕಾರರು "ಸಿಹಿನೀರು ಸಂಸ್ಕೃತಕ್ಕಿಂತ, ಉಪ್ಪುನೀರು ಕನ್ನಡವೇ ಲೇಸು" ಎಂದು ಹೇಳಿರುವ ಮಾತುಗಳು ಭಕ್ತಿಯ ಬಗೆಗೆ ದಿನನಿತ್ಯದ ಆಡುನುಡಿಗೆ ಅವರು ಕೊಟ್ಟಿದ್ದ ಪ್ರಾಶಸ್ತ್ಯವು ತಿಳಿದು ಬರುತ್ತದೆ. ರಾಮಾನುಜನ್ ಅವರು ಈ ಲೇಖನದಲ್ಲಿ ಭಕ್ತಿಯ ವೈದೃಶ್ಯಗಳನ್ನು ಅರ್ಥಪೂರ್ಣವಾದ ಅಧ್ಯಯನಕ್ಕೆ ಒಳಪಡಿಸಿರುವುದು ವಿಶೇಷವಾಗಿದೆ.

ವಚನಗಳಲ್ಲಿ ಇರುವ ತಾರ್ಕಿಕ, ತಾತ್ವಿಕ ನೆಲೆಗಳನ್ನು, ಹೋಲಿಕೆಗಳನ್ನು ಸ್ಪಷ್ಟವಾಗಿ ಗುರುತಿಸಿ ಖಚಿತವಾದ ಇಂಗ್ಲಿಷ್ ಪರ್ಯಾಯಗಳ ಮೂಲಕ ಅರ್ಥನಿವೇದನೆಯನ್ನು ಮಾಡಿಸುತ್ತಾರೆ. ನಿರಾಕರಿಸುವ ಸಂದರ್ಭದಲ್ಲಿ ಶರಣರು ಹಿರಿಯ ಪರಂಪರೆಗಳನ್ನು ಮಾತ್ರವಲ್ಲದೆ, ಕಿರಿಯ ಪರಂಪರೆಗಳನ್ನೂ ತಿರಸ್ಕರಿಸಿರುವುದನ್ನು ರಾಮಾನುಜನ್ ಗುರುತಿಸುತ್ತಾರೆ. ವಿಭಿನ್ನ ಶರಣರ ವಿವಿಧ ವಚನಗಳ ಅನುವಾದಕ್ಕೆ ಲೇಖಕರು ಬೇರೆ ಬೇರೆ ಮಾದರಿಯ ಭಾಷೆಯನ್ನು ಬಳಸಿರುವುದುಂಟು. ವಚನಗಳ ಅನುವಾದದ ಮೂಲಕ ಜನಪದದಂತೆ ರಾಮಾಯಣ ಮಹಾಭಾರತಗಳನ್ನು ಕುರಿತ ಲೇಖನಗಳಂತೆ ರಾಮಾನುಜನ್ ಭಾರತೀಯತೆಯನ್ನು, ಭಾರತೀಯ ಚಿಂತನಾಕ್ರಮಗಳನ್ನು, ಭಾರತೀಯ ನಂಬಿಕೆ, ಆಚರಣೆ, ಆಶೋತ್ತರಗಳನ್ನು ಸಾಗರದಾಚೆಗೆ ಸಮರ್ಥವಾಗಿ ದಾಟಿಸಿದ್ದಾರೆ. ಅನುವಾದಕ್ಕೆ ಆಯ್ಕೆ ಮಾಡಿಕೊಂಡಿರುವ ವಚನಗಳು ಜಾಗತಿಕ ಸಾಹಿತ್ಯ ಮಟ್ಟದ ಹಂತವನ್ನು ತಲುಪಿರುವುದನ್ನು ಇಲ್ಲಿ ಗಮನಿಸಬಹುದು. ಧರ್ಮಾತೀತವಾದ, ಜಾತ್ಯತೀತವಾದ, ಭಾಷಾತೀತವಾದ, ಶಾಸ್ತ್ರಜಡವಲ್ಲದ, ಜೀವಂತಿಕೆಯ ಸಾಹಿತ್ಯದ ಮಾದರಿಗಳನ್ನು ಹೇಗೆ ಅನುವಾದಕ್ಕೆ ಆರಿಸಿಕೊಳ್ಳಬೇಕು ಎನ್ನುವುದಕ್ಕೆ ರಾಮಾನುಜನ್ ಅವರ ವಿಧಾನ ಒಳ್ಳೆಯ ಉದಾಹರಣೆ. ಒಂದು ನಿರ್ದಿಷ್ಟ ಪ್ರದೇಶದ, ಒಂದು ರಾಜ್ಯದ, ಭಾಷೆಯ ವಿಶಿಷ್ಟ ಸಾಹಿತ್ಯಿಕ

ಪ್ರಕಾರದ ಮೂಲಕ ಇಲ್ಲಿ ರಾಮಾನುಜನ್ ಭಾರತವನ್ನು ಜಗತ್ತಿಗೆ ಪರಿಚಯಿಸಿಕೊಟ್ಟಿದ್ದಾರೆ. ಬಹುಶಃ ರಾಮಾನುಜನ್ ಅವರ ದೊಡ್ಡ ಕೊಡುಗೆ ಇದೇ ಆಗಿದೆ. ಭಾರತೀಯ ಭಾಷೆಯೊಂದರ ಇಂಗ್ಲಿಷ್ ಭಾಷಾಂತರಕ್ಕೆ ಆಯ್ಕೆ ಮಾಡಿಕೊಳ್ಳಬೇಕಾದ ವಸ್ತು, ಅಭಿವ್ಯಕ್ತಿ ಕ್ರಮ ಮುಂತಾದವುಗಳಿಗೆ ಈ ವಚನಗಳ ಅನುವಾದ ರಾಮಾನುಜನ್ ನಂತರದ ಪೀಳಿಗೆಗೆ ಹಾಕಿಕೊಟ್ಟ ನಿದರ್ಶನವೆಂದೇ ಹೇಳಬಹುದು. ರಾಮಾನುಜನ್ ಅವರ ಪ್ರಬಂಧಗಳು ವಸ್ತು, ರೀತಿ, ವಿನ್ಯಾಸ, ನಿರ್ವಹಣಾ ಕ್ರಮ, ಚಿಂತನೆಗಳು, ನಿರೂಪಣೆ ಈ ಎಲ್ಲಾ ದೃಷ್ಟಿಗಳಿಂದ ಅವರ ಒಟ್ಟು ವ್ಯಕ್ತಿತ್ವದ ಸ್ವರೂಪವನ್ನು ಸಮಗ್ರವಾಗಿ ತಿಳಿಸಿಕೊಡುತ್ತದೆ.

೫.೭. ಕನ್ನಡ ಜಾನಪದ: ಎರಡು ಆಯಾಮಗಳು(Two Realms of Kannda Folklore)

ರಾಮಾನುಜನ್ ಅವರು 'ಕಾನ್ಫರೆನ್ಸ್ ಪೇಪರ್ಸ್'(೧೯೭೭) ಎಂಬ ಹೆಸರಿನಲ್ಲಿ ಮೊದಲು ಈ ಪ್ರಬಂಧದಲ್ಲಿರುವ ವಿಚಾರಗಳನ್ನು ಪಕಟಿಸಿದ್ದಾರೆ. ಅನಂತರ ಅವರು ವಿಸ್ತರಿಸಿ ಬರೆದ ಈ ಪ್ರಬಂಧ 'ಅನದರ್ ಹಾರ್ಮನಿ: ನ್ಯೂ ಎಸ್ಸೇಸ್ ಇನ್ ಸೌತ್ ಏಷಿಯನ್ ಫೋಕ್ಲೋರ್' ಎಂಬ ಪುಸ್ತಕದಲ್ಲಿ(ಸಂಪಾದಕರು: ಸ್ಟುವರ್ಟ್ ಬ್ಲಾಕ್‌ಬರ್ನ್ ಮತ್ತು ಎ.ಕೆ.ರಾಮಾನುಜನ್, ಬರ್ಕ್ಲಿ ಯೂನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯಾ, ೧೯೮೬) ಇದು ಪ್ರಕಟವಾಯಿತು.

ರಾಮಾನುಜನ್ ಅವರು ಜಾನಪದ ಅಧ್ಯಯನ ಕ್ಷೇತ್ರಕ್ಕೆ ನೀಡಿರುವ ಕಾಣಿಕೆ ದೊಡ್ಡದು. ೧೯೫೫ರಲ್ಲಿಯೇ **'ಗಾದೆಗಳು'** ಎಂಬ ಕಿರುಪುಸ್ತಿಕೆಯನ್ನು ಬರೆದಿದ್ದರು. ಕನ್ನಡ ಗಾದೆಗಳ ಅಧ್ಯಯನಕ್ಕೆ ಇದು ಒಂದು ಕೀಲಿಕೈ. ಇದರ ನಂತರ ಸುಧಾಕರ, ಕಾಳೇಗೌಡ ನಾಗವಾರ ಅವರು ಗಾದೆಗಳ ಅಧ್ಯಯನ ಕುರಿತು ಬರೆದ ಪುಸ್ತಕಗಳು ಬಂದವು. ಇವರ ಈ ಅಧ್ಯಯನ ಕೃತಿಗಳಿಗೆ ರಾಮಾನುಜನ್ ಅವರೇ ಪ್ರೇರಣೆ. ಗಾದೆಗಳನ್ನು ಕುರಿತು ರಾಮಾನುಜನ್ ಅವುಗಳ ವಿಂಗಡಣೆಯ ವಸ್ತುಕ್ರಮ, ಅವುಗಳ ಸಾಮಾಜಿಕ, ಭಾಷಿಕ ಮಹತ್ವವನ್ನು ಕುರಿತು ವಿಶ್ಲೇಷಿಸಿರುವ ರೀತಿ ಆದರಣೀಯವಾದುದು.

ಪ್ರಕಾರ ಮತ್ತು ವ್ಯವಸ್ಥೆ, ಕನ್ನಡದ ಗಾದೆ ಮತ್ತು ಒಗಟು, ಜಾನಪದ ಪುರಾಣ ಮತ್ತು ಪ್ರಾಚೀನ ಪುರಾಣ, ಕಥೆ ಮತ್ತು ಜನಪದ ಆಚರಣೆ- ಜನಪದ ರಂಗಭೂಮಿ ಇವುಗಳ ನಡುವೆ ಇರುವ ಅನೇಕ ಸಾಮ್ಯ-ವೈಷಮ್ಯಗಳನ್ನು ನಿದರ್ಶನಗಳ ಸಹಿತ ಈ ಪ್ರಬಂಧದಲ್ಲಿ ವಿವರವಾಗಿ ಚರ್ಚಿಸಿದ್ದಾರೆ. ಜಾನಪದ ಅಧ್ಯಯನ ಕ್ಷೇತ್ರಕ್ಕೆ ಈ ಪ್ರಬಂಧವು ಒಂದು ಹೊಸ ದೃಷ್ಟಿಕೋನವನ್ನು ತೋರಿಸುತ್ತದೆ. ತಮಿಳು ಕ್ಲಾಸಿಕಲ್ ಕಾವ್ಯದ ಅಧ್ಯಯನದ ನಂತರ ಅಲ್ಲಿಂದ ಪ್ರೇರಣೆ ಪಡೆದು ಕನ್ನಡ ಜಾನಪದ ಅಧ್ಯಯನ ಕ್ಷೇತ್ರಕ್ಕೆ ಪ್ರವೇಶಿಸಿದ ರಾಮಾನುಜನ್ ಅವರು

ಜಾನಪದದಲ್ಲಿನ ಸರಳವೂ, ಸ್ಪಷ್ಟವೂ ಆದ ವಿಶಿಷ್ಟ ವಿನ್ಯಾಸವೊಂದನ್ನು ಈ ಪ್ರಬಂಧದಲ್ಲಿ ಗುರುತಿಸುತ್ತಾರೆ. ಈ ವಿನ್ಯಾಸ ಹಳ್ಳಿಯೊಂದರ ಜಾನಪದ ವ್ಯವಸ್ಥೆಯನ್ನು ಗ್ರಹಿಸಲು ತುಂಬಾ ಸಹಕಾರಿ ಎಂದು ಅವರು ಭಾವಿಸಿ ಈ ಪ್ರಬಂಧವನ್ನು ರಚಿಸುವುದು ತಿಳಿದುಬರುತ್ತದೆ.

ಇಂತಹ ಅಧ್ಯಯನ ಯಾಕೆ ಅವಶ್ಯಕ ಎಂಬುದಕ್ಕೆ ರಾಮಾನುಜನ್ ನೀಡುವ ಪ್ರಮೇಯ ಹೀಗಿದೆ:

> "ಯಾಕೆಂದರೆ ಜಾನಪದವು ಒಂದು ವ್ಯವಸ್ಥೆ. ಅದರೊಳಗಿನ ಪ್ರತಿಯೊಂದು ಪ್ರಕಾರಕ್ಕೂ ಪರಸ್ಪರ ಸಂಬಂಧವಿರುತ್ತದೆ. ಒಂದು ಮತ್ತೊಂದರೊಡನೆ ಜೋಡಣೆಯಾಗಿರುತ್ತದೆ; ಕೀಲಿಸಿಕೊಂಡಿರುತ್ತದೆ. ಪರಸ್ಪರ ವೈರುಧ್ಯವನ್ನು ತೋರುತ್ತದೆ. ಹೀಗಾಗಿ ಯಾವುದೇ ಒಂದು ಪ್ರಕಾರವನ್ನು ಪ್ರತ್ಯೇಕವಾಗಿ ಸುದೀರ್ಘ ಅಧ್ಯಯನ ಮಾಡುವುದು ಸಾಧ್ಯವಿಲ್ಲ."[೨೬]

ಹೀಗೆ ಅವರು 'ಪ್ರಕಾರ ಮತ್ತು ವ್ಯವಸ್ಥೆ'ಯ ಸಂಬಂಧವನ್ನು ಮಂಡಿಸಿ, ಈ ಪ್ರಮೇಯವನ್ನು ಜಾನಪದದ ಹಲವು ಪ್ರಕಾರಗಳನ್ನು ನಿದರ್ಶನವನ್ನಾಗಿ ಆಯ್ದುಕೊಂಡು ಅವು ಮತ್ತೊಂದು ಪ್ರಕಾರದ ಜೊತೆಗೆ ಹೊಂದಿರುವ ಸಂಬಂಧವನ್ನು ಇಲ್ಲಿ ವಿವರಿಸುತ್ತಾರೆ. ಮೊದಲಿಗೆ ಉದಾಹರಣೆಯಾಗಿ ಕನ್ನಡ ಒಗಟು ಮತ್ತು ಕನ್ನಡ ಗಾದೆಗಳು ಒಂದಕ್ಕೊಂದು ಹೇಗೆ ಪೂರಕವಾಗಿ ಜೋಡಣೆಯಾಗಿರುತ್ತವೆ ಎಂಬುದನ್ನು ವಿಶ್ಲೇಷಿಸುತ್ತಾರೆ. ಗಾದೆಗಳಲ್ಲಿರುವಂತೆ ಒಗಟುಗಳಲ್ಲಿ ಸಾಮಾಜಿಕ ಥೀಮ್ ಇರುವುದಿಲ್ಲ. ಒಗಟು ನಿಸರ್ಗದ ಪರಿಚಿತ ವಸ್ತುಗಳ ಮೇಲೆ ಗಮನವಿಟ್ಟಿರುತ್ತದೆ. ಅಲ್ಲಿ ತರ್ಕಕ್ಕೆ ಆಸ್ಪದವಿರುತ್ತದೆ. ಸಣ್ಣ ಮಕ್ಕಳಿಗೆ ಒಗಟು ಇಷ್ಟವಾಗುತ್ತದೆ. ಉದಾಹರಣೆಗೆ, "ಮೂರು ಕಣ್ಣಿವೆ, ಆದರೂ ಶಿವ ಅಲ್ಲ, ಏನದು?" ಎಂಬುದಕ್ಕೆ ಉತ್ತರ 'ತೆಂಗಿನ ಕಾಯಿ'.

ಹೀಗೆ ಒಗಟನ್ನು ವಿವರಿಸಿದ ರಾಮಾನುಜನ್ ಅವರು ಗಾದೆಗಳನ್ನು ಹೀಗೆ ವಿವರಿಸುತ್ತಾರೆ: ಇದಕ್ಕೆ ಪ್ರತಿಯಾಗಿ ಗಾದೆಗಳು ಸಮಾಜವೊಂದರಲ್ಲಿ ಲಭ್ಯವಿರುವ, ಬೇಕಾದಲ್ಲಿ ಒಯ್ದು ಬಳಸಬಹುದಾದ 'ಪೋರ್ಟಬಲ್' ನಿದರ್ಶನಗಳಾಗುತ್ತವೆ. ಗಾದೆಗಳಲ್ಲೂ ನಿಸರ್ಗದ, ಸಂಸ್ಕೃತಿಯ ವಸ್ತುಗಳ ಉಲ್ಲೇಖವಿರುತ್ತಾದರೂ ಅದು ಆ ವಸ್ತುಗಳಿಗೆ ಇರುವ ಕಾವ್ಯಾತ್ಮಕ ಅಥವಾ ತಾರ್ಕಿಕ ಮೌಲ್ಯಗಳ ಕಾರಣಕ್ಕಲ್ಲದೆ, ಬದಲಾಗಿ ನೀತಿ, ಬೋಧೆ ಅಥವಾ ನಂಬಿಕೆಯೊಂದರ ನಿದರ್ಶನವೆಂಬ ಕಾರಣಕ್ಕೆ ಉಲ್ಲೇಖಗೊಳ್ಳುತ್ತವೆ. ಉದಾಹರಣೆಗೆ, 'ಬಾಳೆಗೆ ಒಂದು ಗೊನೆ, ಚೇಳಿಗೆ ಒಂದು ಬಸಿರು' ಎಂಬ ಗಾದೆಯನ್ನು ಹೆಸರಿಸುತ್ತಾರೆ. ಗಾದೆಗಳು ಹದಿವಯಸ್ಸಿನಲ್ಲಿ ವ್ಯಕ್ತಿಯ ಮನೋಭಾವಕ್ಕೆ ಸೇರ್ಪಡೆಯಾಗುತ್ತವೆ. ಆದರೆ ಮಗು ಗಾದೆಯನ್ನು ಬಳಸಿದರೆ ಅದು ಅದರ ವಯಸ್ಸಿಗೆ ಮೀರಿದ್ದು. ಹೀಗೆ–

"ಗಾದೆ ಮತ್ತು ಒಗಟು ಪರಸ್ಪರ ಪೂರಕವಾಗಿವೆ. ಹೀಗೆಯೇ ಜಾನಪದ ಕಥೆ ಮತ್ತು ಪುರಾಣ, ಅಜ್ಜಿ ಕಥೆ ಮತ್ತು ಗಾಯಕರ ಕಥೆ, ಆಚರಣೆ ಮತ್ತು ರಂಗಭೂಮಿ, ಅನಕ್ಷರಸ್ಥ ಸಮುದಾಯ ಮತ್ತು ಅಕ್ಷರಸ್ಥ ಸಮುದಾಯ ಇವೆಲ್ಲವೂ ಒಂದೇ ವ್ಯವಸ್ಥೆಯೊಳಗಿರುವ ಪರಸ್ಪರ ಪೂರಕವಾದ, ಸಂದರ್ಭಸಂವೇದಿಯಾದ ಭಾಗಗಳು ಎಂದು ಪರಿಗಣಿಸಬಹುದು. ಅಂಥ ವ್ಯವಸ್ಥೆಯ ಒಂದು ಅಂಶವನ್ನು ಮಾತ್ರ ಇಲ್ಲಿ ಸೂಚಿಸಲು ಬಯಸಿದ್ದೇನೆ"[೨೭]

ಎಂಬ ತೀರ್ಮಾನಕ್ಕೆ ರಾಮಾನುಜನ್ ಬರುತ್ತಾರೆ. ಈ ಬಗೆಯ ಜಾನಪದದಲ್ಲಿರುವ ವೈದೃಶ್ಯವನ್ನು ಪ್ರಾಚೀನ ದ್ರಾವಿಡ ವರ್ಗೀಕರಣಗಳಾದ, ವಿಶೇಷವಾಗಿ ಕ್ಲಾಸಿಕಲ್ ತಮಿಳು ಕಾವ್ಯದಲ್ಲಿ ಕಣ್ಣು ಕೋರೈಸುವಂತೆ ವಿಕಾಸ ಹೊಂದಿದ 'ಅಹಂ' ಮತ್ತು 'ಪುರಂ' ಎಂಬ ವೈದೃಶ್ಯಗಳೊಡನೆ ಜೋಡಿಸಲು ಎರಡು ಉದಾಹರಣೆಗಳ ಸಹಿತ ಇಲ್ಲಿ ಪ್ರತಿಪಾದಿಸುತ್ತಾರೆ. ಇದಕ್ಕೆ ಕನ್ನಡ ಜಾನಪದದ ಸಂಗ್ರಹಿತ ಪದ್ಯಗಳಿಂದ ಆಯ್ದು ವಿಸ್ತಾರವಾದ ಭಾಗಗಳ ವಿಶ್ಲೇಷಣೆಯ ಮೂಲಕ ಅವರು ತಮ್ಮ ವಾದವನ್ನು ಮಂಡಿಸುತ್ತಾರೆ. ಹೀಗೆ ಜಾನಪದವನ್ನು ವ್ಯವಸ್ಥೆ ಮತ್ತು ಸಂದರ್ಭ ಸಂವೇದಿಯಾಗಿ ಅಧ್ಯಯನ ಮಾಡಬಹುದಾದ ಮತ್ತು ಅರ್ಥಪೂರ್ಣವಾದ ಜಾನಪದ ಅಧ್ಯಯನಕ್ಕೆ ಈ ಪ್ರಬಂಧ ಒಂದು ದಿಕ್ಸೂಚಿಯಾಗಿದೆ.

ಯಾವುದೇ ದೇಶದ ಚರಿತ್ರೆ, ಸಂಸ್ಕೃತಿ, ಪರಂಪರೆಯನ್ನು ಅಧ್ಯಯನ ಮಾಡಬೇಕಾದರೆ ಅಲ್ಲಿನ ಮೌಖಿಕ ಸಾಹಿತ್ಯದ ಅಧ್ಯಯನ ಬಹಳ ಮುಖ್ಯವಾಗುತ್ತದೆ. ಮೌಖಿಕ ಸಾಹಿತ್ಯದ ಪ್ರಕಾರದಲ್ಲಿ ಒಗಟುಗಳು, ಗಾದೆಗಳು, ಜನರ ಬಾಯಿಂದ ಬಾಯಿಗೆ ಹರಿದಾಡುವ ಕೆಲವು ಕಥೆ–ಉಪಕಥೆಗಳು ಆಯಾಯ ದೇಶದ ಪುರಾತನ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಯಾವ ದೇಶದಲ್ಲಿ ಹೆಚ್ಚು ಹೆಚ್ಚು ಒಗಟುಗಳು, ಗಾದೆಗಳು ಬಳಕೆಯಲ್ಲಿವೆಯೋ ಆ ದೇಶ ಎಷ್ಟು ಪುರಾತನವಾದದ್ದು ಎಂದು ತೋರಿಸುತ್ತದೆ. ದೀರ್ಘವಾದ ಸಂಸ್ಕೃತಿ ಹೊಂದಿರುವ ದೇಶದಲ್ಲಿ ಗಾದೆಗಳು ಯಥೇಚ್ಛವಾಗಿ ಕಂಡುಬರುತ್ತವೆ.

ರಾಮಾನುಜನ್ ಅವರು ಅಂದು ಪಾಶ್ಚಿಮಾತ್ಯ ಶಿಕ್ಷಣ ಕಲಿತವರಾದರೂ ಅವರ ಮನಸ್ಸು ಮಾತ್ರ ದೇಶೀಯ ಚಿಂತನೆಯಲ್ಲಿ ತೊಡಗಿತ್ತು ಎಂಬುದಕ್ಕೆ ಅವರು ಗಾದೆಗಳ ಜಾಡನ್ನು ಹಿಡಿದು ಹೊರಟದ್ದು ನಿಜಕ್ಕೂ ಸಂಶೋಧನಾ ವಿಷಯವಾಗಿದೆ. ಸಂಸ್ಕೃತಿ ಅಧ್ಯಯನದಲ್ಲಿ ತೊಡಗಿಕೊಂಡ ಅವರು ಮೂಲದ ಹುಡುಕಾಟದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಅವರ ಅಧ್ಯಯನ ಕ್ಷೇತ್ರವನ್ನು ಗಮನಿಸಿದರೆ ತಿಳಿಯಬಹುದು. ಗಾದೆಗಳು, ಜಾನಪದ ಸಾಹಿತ್ಯ, ದ್ರಾವಿಡ ಸಂಸ್ಕೃತಿಯ ಪುರಾತನ ಸಾಹಿತ್ಯದ ಆಕರಗಳು ಒಂದು ದೇಶದ ಮೂಲ ಸಂಸ್ಕೃತಿಯನ್ನು ಅರ್ಥೈಸಿಕೊಳ್ಳಲು ಮುಖ್ಯ ಆಕರಗಳಾಗುತ್ತವೆ. ಗಾದೆಗಳ ಬಗ್ಗೆ ರಾಮಾನುಜನ್ ಅವರು ಹೇಳುವಂತೆ,

> "ಈ ನಾಲ್ಕು ನುಡಿಯ ಅಂಗೈ ಇಂತಹ ಆಕಾಶ ತೋರಿಸೀತೆಂದು ಎಣಿಸಿರಲಿಲ್ಲ-
> 'ಸ್ವಲ್ಪ ಕಂಡವನಿಗೆ ಅಚ್ಚರಿ ಬಹಳ.' "[೨೮]

ಗಾದೆಗಳು ಅಂಗೈಯಷ್ಟಿದ್ದರೂ ಅವುಗಳು ತೋರುವ ಅನುಭವ ಮತ್ತು ವಿಸ್ತಾರ ಆಕಾಶದಷ್ಟು ಎಂದು ಹೇಳುತ್ತಿರುವುದು, ಹೇಳುವುದನ್ನು ಚಿಕ್ಕದಾಗಿ ಚೊಕ್ಕದಾಗಿ ವಿಷಯ ಮನದಟ್ಟಾಗುವಂತೆ ಹೇಳಬೇಕು ಮತ್ತು ಹೇಳುವ ವಿಷಯದ ವಸ್ತು ಬಹಳ ವಿಸ್ತಾರವಾಗಿರಬೇಕು ಎಂಬುದು.

ಇದಕ್ಕೆ ಪೂರಕವಾಗಿ ಸುಮತೀಂದ್ರ ನಾಡಿಗರು-

> "ನನ್ನ 'ಹೆಬ್ಬಾವು' ಎನ್ನುವ ಕವಿತೆ ನೂರಾಮೂವತ್ತು ಸಾಲುಗಳಷ್ಟು ಉದ್ದ ಇದ್ದಾಗ, ನೂರಾ ಹದಿನೇಳು ಸಾಲುಗಳನ್ನು ಹೊಡೆದುಹಾಕಿ ಹದಿಮೂರು ಸಾಲು ಮಾತ್ರ ಉಳಿಸಿದರು. ಈಗ ಆ ಹದಿಮೂರು ಸಾಲು ಮಾತ್ರ ಉಳಿದಿವೆ! ಇದು ರಾಮಾನುಜನ್ ನನಗೆ ಕಲಿಸಿದ ಪಾಠ"[೨೯]

ಎಂದು ಹೇಳಿದ್ದಾರೆ.

ಚಂದ್ರಶೇಖರ ಕಂಬಾರರು ಸಹ ರಾಮಾನುಜನ್ ಅವರ ಬಗ್ಗೆ ಇದೇ ನಿಲುವು ತಳೆಯುತ್ತ

> "ರಾಮಾನುಜನ್ ಅವರು ಪದ್ಯ ಬರೆಯುವಲ್ಲಿ ಕೆಲವು ಹಠಗಳನ್ನು ಹಿಡಿದ ಹಾಗೆ ಇತ್ತು. ಸಾಂಪ್ರದಾಯಿಕವಾದ ಅರ್ಥದಲ್ಲಿ ಅದು ಪದ್ಯವಾಗಿರಬಾರದು. ಸಾಂಪ್ರದಾಯಿಕ ಶಬ್ದಶಕ್ತಿಗಳನ್ನು ಬಳಸಿಕೊಳ್ಳಬಾರದು, ಶಾಬ್ದಿಕ ಸಂಗೀತ ಖಂಡಿತ ಇರಕೂಡದು, ಅಗತ್ಯ ಇದ್ದುದಕ್ಕಿಂತ ಜಾಸ್ತಿ ಒಂದು ಪದ ಕೂಡ ಇರಕೂಡದು, ಇತ್ಯಾದಿ."[೩೦]

ಇಬ್ಬರು ಕವಿಗಳ ಮಾತಿನಿಂದ ರಾಮಾನುಜನ್ ಅವರ ವಿದ್ವತ್ತು, ಪಾಂಡಿತ್ಯ ಅಸಾಧಾರಣವಾದುದು ಎಂಬುದು ವ್ಯಕ್ತವಾಗುತ್ತದೆ.

ಗಾದೆಗಳನ್ನು ಅಧ್ಯಯನ ಮಾಡಿ ಸಂಗ್ರಹಿದ್ದಷ್ಟೇ ಅಲ್ಲದೆ, ಗಾದೆಯ ಗತಿ, ಗಾದೆಯನ್ನೇಕೆ ಗಮನಿಸಬೇಕು? ಬೇರೆ ಬೇರೆ ಭಾಷೆಗಳಲ್ಲಿನ ಸಮಾನಪದಗಳು, ಗಾದೆಗಳ ಬಗ್ಗೆ ಗಾದೆಗಳು, ಗಾದೆಗಳ ಹುಟ್ಟು, ಗಾದೆಗಳಲ್ಲಿ ಜ್ಞಾನ, ಗಾದೆಗಳಲ್ಲಿ ಸಾಹಿತ್ಯ- ಮುಂತಾದ ವಿಷಯಗಳನ್ನು ಕುರಿತು ರಾಮಾನುಜನ್ ಅವರು ಚರ್ಚಿಸಿದ್ದಾರೆ. ಇಲ್ಲಿ ವಿಶೇಷವಾಗಿ ಗಮನಿಸಬೇಕಾದದ್ದು ಅವರು ಕೇವಲ ಗಾದೆಗಳನ್ನು ಸಂಗ್ರಹಿಸಬೇಕೆಂದು ಸಂಗ್ರಹಿಸಿರುವುದಲ್ಲ. ಅವರು ಪ್ರತಿಯೊಂದು ಗಾದೆಯ ಹಿಂದಿರುವ ಸಾಂಸ್ಕೃತಿಕ ಪರಂಪರೆಯನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಗಾದೆಯ ಅಪ್ಪಟತನವನ್ನು ಕುರಿತು ಅವರು-

> "ಪಂಡಿತರಿನ್ನೂ ಈ ಗಾದೆಗಳ ಹೊಚ್ಚ ಹೊಸ ಭೂಮಿಗೆ ಕೈ ಹಾಕಿ ಕ್ರೋಡೀಕರಿಸದೆ ಇರುವುದರಿಂದ ಜನತೆಯ ಮನಸ್ಸಿನ ಧ್ವನಿ ಅಪ್ಪಟವಾಗಿ, ತನ್ನರಿವಿನ

ಕೃತ್ರಿಮ ಕೊಂಕುಗಳಿಲ್ಲದೆ, ಸಹಜ ಸ್ಥಿತಿಯಲ್ಲಿ ಕಾಣಬರುತ್ತವೆ... ವಂಚನೆ, ವಿಕಾರಗಳಿಲ್ಲದೆ ತಾನೇ ತಾನಾಗಿ ಕಲ್ಲು ತಾಗಿ ಕಿಡಿ ಬಂದಂತೆ ಬಂದ ಈ ಕಿಡಿ ಮಾತು, ಜನರ ಮನಸ್ಸಿನ ಓರೆ–ಕೋರೆಗಳನ್ನೂ, ನೀತಿ–ನಂಬಿಕೆಗಳನ್ನೂ ಸಹಜರೂಪದಲ್ಲಿ ಹುದುಗಿಸಿಟ್ಟುಕೊಂಡಿರುತ್ತದೆ."[೩೧]

ಇಲ್ಲಿ ಪಂಡಿತರು ಪುರಾತನವಾದ ಗಾದೆಗಳ ಅಧ್ಯಯನಕ್ಕೆ ಕೈ ಹಾಕದೇ ಇರುವುದರಿಂದ ಅದು ಇನ್ನೂ ಹೊಚ್ಚ ಹೊಸ ಭೂಮಿಯಾಗೇ ಅಪ್ಪಟವಾಗಿ, ಸ್ವಚ್ಛವಾಗಿ ಇದೆ ಎಂದು ರಾಮಾನುಜನ್ ಅವರು ಹೇಳುತ್ತಾರೆ. ಮುಂದುವರಿದು ಅವರು–

"ಬಾಯಲ್ಲಿ ಮಾತಾಗಿ ಗಾಳಿಯಲ್ಲಿ ಹಾರಿಹೋಗುವ ಈ ಗಾದೆ ಮಾತುಗಳನ್ನು ಬಾಯಿಂದ ಬಾಯಿಗೆ ಬದಲಾಗುತ್ತ ಅಪಭ್ರಂಶವಾಗುವ ಈ ವಾಕ್ಪ್ರಚಾರಗಳನ್ನು ಬರಹದಲ್ಲಿ ಬಂಧಿಸಿಡದಿದ್ದರೆ, ಅಮೂಲ್ಯ ನಿಧಿಯೊಂದನ್ನು ಕಳೆದುಕೊಂಡಂತೆ. ಸಂಸ್ಕೃತಿಯ ಬಗ್ಗೆ, ನಮ್ಮ ಜನಜೀವನದ ಬಗ್ಗೆ, ಭಾಷೆಯ ರೂಪಾಂತರಗಳ ಬಗ್ಗೆ, ಯಾವ ಅಭ್ಯಾಸ, ಪರಿಶೋಧನೆ ನಡೆಯಬೇಕಾದರೂ ಇಂತಹ ನಿಧಿಯೊಂದು ಅತ್ಯಾವಶ್ಯಕ. ಗಾದೆಗಳನ್ನೂ ಅವುಗಳ ಬೇರೆ ಬೇರೆ ಪಾಠಾಂತರಗಳನ್ನೂ ಸಂಗ್ರಹಿಸಬೇಕು; ಶುಚಿ–ರುಚಿ, ಸ್ವಾರಸ್ಯ–ನೀರಸ ಎಂಬ ಯಾವ ಪೂರ್ವಾಭಿಪ್ರಾಯವೂ ಇಲ್ಲದೆ ಈ ಮಾತುಗಳನ್ನು ಹತ್ತಾರು ಜನ ಕಂಡಕಂಡಂತೆ ಬರೆದಿಡಬೇಕು–ವಿಜ್ಞಾನಿ ಕಣ್ಣಿಗೆ ಕಂಡ ವಿಷಯವನ್ನೆಲ್ಲ ಚಿಕ್ಕದೆನ್ನದೆ, ಅಸಹ್ಯವೆನ್ನದೆ, ತನ್ನ ಬೇಕು–ಬೇಡಗಳನ್ನು ಒತ್ತರಿಸಿ, ಗ್ರಹಿಸುವಂತೆ, ಇವೆಲ್ಲ ಸಂಸ್ಕೃತಿಯ ಸೂಚಿಗಳು; ಮುಂದಿನ ಪರಿಶೋಧನೆಯ ಸಾಮಗ್ರಿ. ಕೆಲವಂತೂ ಅತಿ ಆದಿಕಾಲದ ಮಾನವನ ಮನಸ್ಸಿನ ತಿರುವು–ಮುರುವುಗಳನ್ನು ಬಿಂಬಿಸಿ ತೋರಿಸುತ್ತವೆ. ಇದನ್ನೀಗ ಮಾಡದಿದ್ದರೆ ಈ ಹೊಸಯುಗದ ಹೊಸ್ತಿಲಲ್ಲಿ ಹಳೆಯದನ್ನೆಲ್ಲ ಕಳೆದುಕೊಂಡು ಬೆತ್ತಲಾಗುತ್ತೇವೆ; ಪಿತ್ರಾರ್ಜಿತವಿಲ್ಲದೆ ದಿವಾಳಿಯಾಗುತ್ತೇವೆ; ಕಾಲ ಇವನ್ನೆಲ್ಲ ನುಂಗಿಕೊಳ್ಳುತ್ತಾನೆ. ಇದು ಬರಿ ಮಾತಿನ ಅಂಜಿಕೆಯಲ್ಲ."[೩೨]

ರಾಮಾನುಜನ್ ಅವರ ಈ ಚಿಂತನೆಗಳು ಪ್ರಸ್ತುತದಲ್ಲಿಯೂ ಚಿಂತನಾಯೋಗ್ಯವಾಗಿವೆ. ಅನಾದಿಕಾಲದ ಪುರಾತನವಾದ ಸಂಸ್ಕೃತಿ ಉಳಿಯಬೇಕಾದರೆ, ಅಧ್ಯಯನಶೀಲರಾಗಬೇಕಾದರೆ ನಮ್ಮ ಮೌಖಿಕ ಸಂಸ್ಕೃತಿಯನ್ನು ಎಷ್ಟರ ಮಟ್ಟಿಗೆ ಉಳಿಸಿಕೊಳ್ಳಬೇಕೆಂಬುದು ಅವರ ಮುಖ್ಯ ಕಾಳಜಿಯಾಗಿದೆ. ಸಂಸ್ಕೃತಿಯ ಬೇರುಗಳಂತಿರುವ ಗಾದೆಗಳನ್ನು ಸಂಗ್ರಹಿಸಿರುವ ಡಾ. ಚಾಂಪಿಯನ್ ಅವರು ತಮ್ಮ 'Racial Proverbs' ಎಂಬ ಪುಸ್ತಕದಲ್ಲಿ ತೆಲುಗು, ತಮಿಳು, ಗುಜರಾತಿ, ಮರಾಠಿ, ಬೆಂಗಾಲಿ, ಇತ್ಯಾದಿ ಗಾದೆಗಳ ಅನುವಾದ ಸಿಕ್ಕುತ್ತದೆ. ಕಡೆಗೆ ತಿರಿದು ಜೀವಿಸುವ ಲಂಬಾಣಿ(gipsy)ಗಳ, ಹೆಸರೇ ಕೇಳದ ಆಫ್ರಿಕನ್ ಜಾತಿಗಳ ಗಾದೆಮಾತುಗಳ ಅನುವಾದವಿದೆ. ಕನ್ನಡದ್ದಿಲ್ಲ, ಕಾರಣ ಕನ್ನಡಿಗರೇ. ಬೇಡದಲ್ಲಿ ತುಂಬಿ ತುಳುಕುವ ದುರಭಿಮಾನ ಇಲ್ಲಿಗೂ ಸ್ವಲ್ಪ ಹರಿದು ಬಂದರೆ ವಾಸಿ ಎಂದಿದ್ದಾರೆ.

ಎಲ್ಲೋ ಸಾವಿರಾರು ಮೈಲಿಗಳ ಆಚೆ ಬೇರೊಂದು ಸಂಸ್ಕೃತಿಯಲ್ಲಿ ಜೀವಿಸುತ್ತಿರುವ ವ್ಯಕ್ತಿ ತನ್ನ ತಾಯಿನಾಡಿನ ಸಂಸ್ಕೃತಿಯ ಸಂಕೀರ್ಣತೆಯನ್ನು ಕುರಿತು ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದ್ದಾರೆ.

ಹಲವಾರು ದೇಶದ ಸಂಸ್ಕೃತಿಯ ಅಧ್ಯಯನ ಮಾಡಿರುವ ರಾಮಾನುಜನ್ ಅವರು ಪ್ರಪಂಚದ ಬಹಳಷ್ಟು ದೇಶದ ಗಾದೆಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಭಾರತೀಯ ಸಂಸ್ಕೃತಿಯ ಪ್ರಾಕೃತ, ಸಂಸ್ಕೃತ, ತಮಿಳು, ಪಂಜಾಬಿ, ಕನ್ನಡ ಇವೆಲ್ಲವೂ ಸೇರಿದಂತೆ ಹಂಗರಿ, ಅರಬಿ, ಚೀನೀ, ಗ್ರೀಕ್, ಲ್ಯಾಟಿನ್, ಐರಿಷ್, ಇಂಗ್ಲಿಷ್, ಸ್ಕಾಟ್ಲೆಂಡ್, ಜರ್ಮನ್, ಇಟಲಿ, ರಷ್ಯನ್, ಮಂಗೋಲಿಯನ್, ಆಫ್ರಿಕ, ಪೋಲೆಂಡ್ ಹೀಗೆ ಹಲವಾರು ದೇಶಗಳ ಗಾದೆಗಳನ್ನು ಸಂಗ್ರಹಿಸಿ ಅವುಗಳಲ್ಲಿ ಸಮಾನಾಂತರವಾಗಿ ಇರುವ ಬಳಕೆಯನ್ನೂ ಸಹ ತೋರಿಸಿದ್ದಾರೆ. ಕೆಲವೊಂದು ಇಲ್ಲಿ ನೋಡಬಹುದು:

"ಪ್ರಾಕೃತ – ಗಾಹೆ – ಗತಿಬದ್ಧ ನುಡಿ, ಹಾಡು.
ಸಂಸ್ಕೃತ – ಒಳ್ಳೆಯದಾಗಿ ಹೇಳಿದ ಮಾತು, ನೀತಿವಚನ
ಅರಬಿ – ಮತಲ್ – ಉಪಮೆ – ದೃಷ್ಟಾಂತ
ಚೀಣಿ – ಯೆನ್ – ಮನೋಹರವಾದ ಮಾತು
ಗ್ರೀಕ್ – ಪರೋಮಿಯ – ಬೀದಿಯಲ್ಲಿ ಕೇಳಿದ ಮಾತು
ಲ್ಯಾಟಿನ್ – ಪ್ರವರ್ಬಿಯಂ – ಜನರೆದುರು ಆಡಿದ ಮಾತು
ಐರಿಷ್ – ಹಳೆಯ ಮಾತು"

"ಒಂದು ವಾಕ್ಯ ಮನಸ್ಸಿನಲ್ಲುಳಿಯಬೇಕಾದರೆ ಸಂಗ್ರಹವಾಗಿ ಚಿಕ್ಕದಾಗಿರಬೇಕು; ಅರ್ಥ ತ್ರಿವಿಕ್ರಮನಾದರೂ ರೂಪ ವಾಮನನಾಗಿರಬೇಕು. ನಾಲ್ಕು ಮೊಳದುದ್ದದ ಮಾತು ಪಂಡಿತರಲ್ಲದವರ ಬಾಯಿಂದ ತಟ್ಟನೆ ಹೊರಬರುವುದಿಲ್ಲ. 'Death and proverbs love bravity...'[೩೩]

'... ಇಂದು ಸಂಸ್ಕೃತಿ ಪ್ರಸಾರದ ಉತ್ಸಾಹ ಅನೇಕರ ಮನಸ್ಸನ್ನು ಮಿಡಿಯುತ್ತಿದೆ. ಅದರೊಂದಿಗೆ, ಜನತೆಯ ಹೃದಯದಲ್ಲಿ ಅರಗಿ, ರಕ್ತಗತವಾಗಿ ಹರಿಯುವ ಸಂಸ್ಕೃತಿಯನ್ನು ಸಮರಿಸಬೇಕಾಗಿದೆ. ಅಭಿಮಾನದ ಕಾವಿನೊಂದಿಗೆ ಅರಿವಿನ ಬೆಳಕನ್ನೂ ಮೆರೆಸಬೇಕಾಗಿದೆ...' "[೩೪]

ಗಾದೆಗಳು ಒಂದು ನಾಗರಿಕತೆಯ, ಸಂಸ್ಕೃತಿಯ ಕನ್ನಡಿಗಳಾಗಿ ನಮಗೆ ಕಾಣಿಸುತ್ತವೆ. ಪ್ರತಿಯೊಂದು ಗಾದೆಯ ಹುಟ್ಟಿನಲ್ಲೂ ಆ ಸಂಸ್ಕೃತಿಯ ಒಟ್ಟಾರೆ ಸಾರ ಅಡಗಿರುತ್ತದೆ.


ಹೀಗೆ ಗಾದೆಗಳು ಮತ್ತು ಒಗಟುಗಳ ಪೂರಕ ಸಂಬಂಧದ ಬಗ್ಗೆ ಚರ್ಚೆ ಮಾಡುವ ರಾಮಾನುಜನ್ ಅವರು **'ಕನ್ನಡ ಜಾನಪದ: ಎರಡು ಆಯಾಮಗಳು'** ಪ್ರಬಂಧಗಲ್ಲಿ 'ಕಥೆಗಳು

ಮತ್ತು ಕಥೆಗಾರರು: ಖಾಸಗಿ ಮತ್ತು ಸಾರ್ವಜನಿಕ' ಎಂಬ ಉಪಶೀರ್ಷಿಕೆಯಲ್ಲಿ ಅವುಗಳ ವೈದೃಶ್ಯಗಳನ್ನು ಕುರಿತು ಚರ್ಚಿಸುತ್ತಾರೆ. ಮನೆಯಲ್ಲಿ ಅಜ್ಜಿ ಹೇಳಿದ ಮತ್ತು ಸಾರ್ವಜನಿಕವಾಗಿ ಗಾಯಕ ಕಲಾವಿದನೊಬ್ಬ ಹೇಳುವ ಒಂದೇ ಮಾದರಿಯ ಕಥೆಯ ಎರಡು ಆವೃತ್ತಿಗಳನ್ನು ಆಯ್ದು ಚರ್ಚಿಸುತ್ತಾರೆ. ಅಜ್ಜಿ ಹೇಳುವ ಕಥೆಯ ಸ್ಥಳ, ಸಂದರ್ಭ, ಕೇಳುಗ ಸಮೂಹಕ್ಕಿಂತ ಸಾರ್ವಜನಿಕವಾಗಿ ಅದೇ ಕಥೆಯನ್ನು ಹೇಳುವ ಗಾಯಕನ ಕಾಲ, ಸಂದರ್ಭ, ವೇಷಭೂಷಣ, ಹಾಡುಗಾರಿಕೆ, ಪ್ರೇಕ್ಷಕ ಸಮೂಹ, ತಾಳವಾದ್ಯಗಳು ಇತ್ಯಾದಿಗಳು ಬದಲಾಗುವುದನ್ನು ಒಂದು ಜನಪದ ಕಥೆಯ ನಿದರ್ಶನದ ಮೂಲಕ ಗುರುತಿಸುತ್ತಾರೆ. ಇಲ್ಲಿ 'ಅಜ್ಜಿ ಹೇಳುವ ಕಥೆ'ಯಲ್ಲಿ ಯಾವ ಪಾತ್ರಕ್ಕೂ ಯಾವ ಊರಿಗೂ ಹೆಸರುಗಳಿಲ್ಲ. ಆದರೆ ವೃತ್ತಿಗಾಯಕ ಹಾಡುವ 'ಅದೇ ಕಥೆ'ಯಲ್ಲಿ ಎಲ್ಲ ಪಾತ್ರಗಳಿಗೂ, ಊರುಗಳಿಗೂ, ಸೂಲಗಿತ್ತಿಗೂ ಹೆಸರುಗಳಿವೆ. ಇದನ್ನು ರಾಮಾನುಜನ್ ಅವರು ಪ್ರಾಚೀನ ತಮಿಳು 'ಪುರಂ' ಕಾವ್ಯದಲ್ಲಿ ಹೆಸರುಗಳಿರುವಂತೆ 'ಅಹಂ' ಕಾವ್ಯದಲ್ಲಿ ಯಾವ ಹೆಸರುಗಳನ್ನೂ ಉಲ್ಲೇಖಿಸಬಾರದು ಎನ್ನುತ್ತಾರೆ.

ಅಹಂ ಒಳಗಿನದ್ದು, ಅಂತರಂಗದ್ದು; ಪುರಂ ಎಂದರೆ ಹೊರಗಿನದ್ದು, ಬಹಿರಂಗದ್ದು. ಅಹಂಗೆ ಮನೆ ಎಂಬ ಅರ್ಥವೂ ಇದೆ. ಹಾಗಾಗಿ ಕನ್ನಡ ಜಾನಪದ ವ್ಯವಸ್ಥೆಯನ್ನು ವಿವರಿಸಲು ಈ ಪ್ರಾಚೀನ ದಕ್ಷಿಣ ತಮಿಳು ಪರಿಭಾಷೆಗಳನ್ನು ಬಳಸಿಕೊಳ್ಳಬಹುದು ಎನ್ನುತ್ತಾರೆ ರಾಮಾನುಜನ್. ಬರೋ ಮತ್ತು ಎಮಿನೋ(೧೯೬೧) ಅವರ ಪ್ರಕಾರ ಈ ಎರಡು ಪದಗಳು ಎಲ್ಲ ದಕ್ಷಿಣ ದ್ರಾವಿಡ ಭಾಷೆಗಳಲ್ಲಿ, ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿಯೂ ಇವೆ. ಅಜ್ಜಿಯ ಕಥೆ ಮನೆಯೊಳಗೆ ಹೇಳುವ ಕಥೆ. ಅಜ್ಜಿ ಮನೆಯ ಹಿರಿಯ ಹೆಂಗಸು, ಪ್ರೇಕ್ಷಕರು ಮನೆಯವರು. ಅದೇ ಕಥೆಯನ್ನು ಹೇಳುವ ವೃತ್ತಿಗಾಯಕನಲ್ಲಿ ಮಾತ್ರ ದೇವರ, ಪ್ರೇಕ್ಷಕರ ಔದಾರ್ಯ ಕೋರಿ ಪ್ರಾರ್ಥನೆ ಸಲ್ಲಿಸುವುದಿರುತ್ತದೆ. ಇಲ್ಲಿ ಆ ಕಥೆಯ ಪ್ರದರ್ಶನ ಎಲ್ಲಾ ಕೌಶಲಗಳನ್ನೂ ಪಡೆದುಕೊಂಡುಬಿಡುತ್ತದೆ. ಈ ಅಹಂನ / ಮನೆಯೊಳಗಿನ ಕಥೆಯನ್ನು ಪುರಂ / ಬಾಹ್ಯ ಕಥೆಯೊಂದಿಗೆ ಹೋಲಿಸಿದಾಗ ಅದಕ್ಕೆ ಸಂಬಂಧಿಸಿದ ವೈದೃಶ್ಯಗಳು, ವ್ಯತ್ಯಾಸಗಳು ಗಮನಕ್ಕೆ ಬರುತ್ತವೆ ಎಂದು ರಾಮಾನುಜನ್ ಅವರು ಅಭಿಪ್ರಾಯ ಪಡುತ್ತಾರೆ. ಅವರ ಅಭಿಪ್ರಾಯ ಸಮಂಜಸವಾಗಿದೆ ಕೂಡ.

ಮನೆಯೊಳಗಿನ ಕಥೆಯ ಭಾಷೆ ದಿನನಿತ್ಯದ ಸಾಮಾನ್ಯ ಭಾಷೆಗೆ ಹತ್ತಿರವಾದುದು. ಆದರೆ ವೃತ್ತಿಗಾಯಕನ ಭಾಷೆ ಸೂತ್ರಬದ್ಧವಾದದ್ದು. ಹೀಗೆ ಕನ್ನಡ ಹಳ್ಳಿಯೊಂದರ ಜಾನಪದ ಪ್ರಕಾರಗಳ ಅಹಂ ಮತ್ತು ಪುರಂ ಅಥವಾ ಖಾಸಗಿ ಮತ್ತು ಸಾರ್ವಜನಿಕ ವರ್ಣಪಟಲಗಳನ್ನು ಗುರುತಿಸಲು ಸಾಧ್ಯವಿದೆ ಎನ್ನುತ್ತಾರೆ. ಕನ್ನಡದ ಅಜ್ಜಿ ಕಥೆಗಳು ಊಟದ ಹೊತ್ತಿನ ಕಥೆಗಳಾಗಿರುತ್ತವೆ. ಅವು ಮಲಗುವ ಹೊತ್ತಿನ ಕಥೆಗಳಲ್ಲ. ಅಡುಗೆಮನೆಯಲ್ಲಿ ಮಕ್ಕಳನ್ನು ಕೂರಿಸಿಕೊಂಡು ಅಜ್ಜಿ ಹೇಳುವ

ಕಥಾಪ್ರಕಾರವು ಅಹಂ ಆದದ್ದು. ಅಂದರೆ ಅಂತರಂಗದ್ದು, ಖಾಸಗಿಯಾದದ್ದು, ಕುಟುಂಬದೊಳಗಿನದ್ದು; ಅನಂತರ ಅದೇ ಕಥೆ ಪುರಂ ಪ್ರಕಾರದ ಸಾರ್ವಜನಿಕತೆಯ ವಿವಿಧ ಮಜಲುಗಳನ್ನು, ಆಯಾಮಗಳನ್ನು ಪಡೆದುಕೊಳ್ಳುತ್ತದೆ. ಅಲ್ಲಿ ಒಂದು ರಂಗತಂಡವೇ ನಿರ್ಮಿತವಾಗಿ ಪುರಂ ಅಥವಾ ಅತ್ಯಂತ ಸಾರ್ವಜನಿಕವಾದದ್ದಾಗಿರುತ್ತದೆ. ಅರಿಸ್ಟಾಟಲ್ ಕೂಡ ತನ್ನ ಕಾವ್ಯ ಮೀಮಾಂಸೆಯಲ್ಲಿ ಭಾಷೆ, ಪದ್ಯ, ಪ್ರಸಂಗ ಮತ್ತು ಇತರ ಅಂಶಗಳಲ್ಲಿ ಆಗುವ ಬದಲಾವಣೆಗಳನ್ನು ಗುರುತಿಸಿದ್ದ. ಆ ಚರ್ಚೆ ಕೂಡ ಭಾರತೀಯ ಸಾಹಿತ್ಯ ಪ್ರಕಾರಗಳ ಅಧ್ಯಯನಕ್ಕೆ ನೆರವಾಗಬಲ್ಲವು. ಈ ಕಥಾಪ್ರಕಾರದ ನಿಷ್ಠೆ ಲಕ್ಷಣಗಳು ಜಾನಪದ ಕಥೆಗಳ ಎರಡು ಬಗೆಗಳಿಗೆ ಅಚ್ಚುಕಟ್ಟಾಗಿ ಹೊಂದಿಕೊಳ್ಳುತ್ತವೆಂದು ರಾಮಾನುಜನ್ ಅವರು ಅಭಿಪ್ರಾಯ ಪಡುತ್ತಾರೆ. ಇದನ್ನು ನಕ್ಷೆಯ ಮೂಲಕ ಹೀಗೆ ತೋರಿಸಿದ್ದಾರೆ:



ಹೀಗೆಯೇ 'ಅಜ್ಜಿ ಕಥೆ ಮತ್ತು ಪುರಾಣ' ಎಂಬ ಎರಡು ವಲಯಗಳು ನಿರ್ದಿಷ್ಟ ಪ್ರದೇಶದ ಅಧಿಜಾನಪದದ(Meta Folklore) ಖಾಸಗಿ ಭಾಗವಾಗಿ ನಿರ್ವಚಿಸಬೇಕಾದ ಇತರ ಜಾನಪದ ಪ್ರಕಾರಗಳ ವಿಂಗಡಣೆಗೂ ಒದಗಿಬರುತ್ತವೆ ಎನ್ನುತ್ತಾರೆ. ಆದರೆ ಪ್ರಕಾರಗಳ ವಿಂಗಡಣೆ ಮತ್ತು ವರ್ಗೀಕರಣ ವಿಶ್ವಾತ್ಮಕವೇ ಆಗಿದ್ದರೂ ಗಾದೆ ಮತ್ತು ಒಗಟು, ಅಜ್ಜಿ ಕಥೆ ಮತ್ತು ಪುರಾಣ– ಇಂತಹ ಪ್ರಕಾರಗಳ ನಡುವಿನ ಗೆರೆ ಬೇರೆ ಬೇರೆ ಸಂಸ್ಕೃತಿಗಳಲ್ಲಿ ಬೇರೆ ಬೇರೆ ರೀತಿಗಳಲ್ಲಿ ಆಗಿರುತ್ತದೆ. ಇಂತಹ ವ್ಯವಸ್ಥೆಗೆ ಒಳಪಟ್ಟಿರುವ ಪ್ರಕಾರಗಳಲ್ಲಿ ನಡೆಯುವ ಇಂತಹ ಪಲ್ಲಟಗಳು, ಸ್ಥಿತ್ಯಂತರಗಳು 'ಅಂತರ್–ಪರ್ಯಾಯತೆ'ಯ ಭಾಗವಾಗಿರುತ್ತದೆ ಎಂದು ರಾಮಾನುಜನ್ ಹೇಳುತ್ತಾರೆ. ಇದನ್ನು ಕನ್ನಡದ ಅಜ್ಜಿಕಥೆಗಳು ಮತ್ತು ಪುರಾಣಗಳ ಸಂಬಂಧವನ್ನು 'ಸಿಂಗಿರಾಜ ಪುರಾಣ'ದಲ್ಲಿ ಬರುವ ಕಥೆಯೊಂದರ ನಿದರ್ಶನದ ಮೂಲಕ ವಿವರಿಸಿರುತ್ತಾರೆ.

ಈ ಕಥೆಯು 'ಸ್ಕಂದ ಪುರಾಣ'ವನ್ನು ಅನುಸರಿಸಿರುವುದನ್ನು ತಿಳಿಸುತ್ತಾ, ಆ ಪಠ್ಯದಲ್ಲಿ ಬರುವ ಕಥೆಯನ್ನು ಉದಾಹರಿಸಿರುವುದರ ಮೂಲಕ ರಾಮಾನುಜನ್ ಅವರು ತಮ್ಮ ಪ್ರಮೇಯವನ್ನು ಸ್ಪಷ್ಟಗೊಳಿಸುತ್ತಾರೆ. ಈ ಕಥೆಯಲ್ಲಿಯೂ ಅಹಂ ಮತ್ತು ಪುರಂಗಳ ಎರಡು ಲೋಕಗಳ ಪರಿಕಲ್ಪನೆಗಳನ್ನು ಗುರುತಿಸುತ್ತಾರೆ.

ಹೀಗೆಯೇ 'ಆಚರಣೆ ಮತ್ತು ರಂಗಭೂಮಿ' ಸಂಬಂಧವನ್ನು ರಾಮಾನುಜನ್ ಅವರು ವಿವರಿಸುತ್ತಾರೆ: "ವ್ರತ ಕಥೆಯಂತಹ ಪವಿತ್ರ ಕಥನಗಳು ಆಚರಣೆಗಳೊಳಗೆ, ಆಚರಣೆಗಳು ಕಥೆಗಳೊಳಗೆ ಹುದುಗಿಕೊಂಡಿರುತ್ತದೆ. ಅಷ್ಟೇ ಅಲ್ಲದೆ ಜಾನಪದ ರಂಗಭೂಮಿಯೂ ಆಳದಲ್ಲಿ ಆಚರಣೆಗಳ ವಿನ್ಯಾಸವನ್ನು ಹೊಂದಿರುತ್ತದೆ. ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಆಚರಣೆಯೇ ರಂಗಭೂಮಿ; ರಂಗ ಪ್ರದರ್ಶನಗಳಲ್ಲಿ ಆಚರಣೆಗಳ ಮಾದರಿಗಳು ಸ್ಪಷ್ಟವಾಗಿ ಕಾಣಿಸುತ್ತವೆ. ಪ್ರೇಕ್ಷಕರೂ ಇಲ್ಲಿ ಪಾಲ್ಗೊಳ್ಳುತ್ತಾರೆ" ಎನ್ನುವ ರಾಮಾನುಜನ್ ಅವರು, "ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಆಚರಣೆ ಮತ್ತು ನಾಟಕ ಪ್ರದರ್ಶನಗಳ ನಡುವೆ ಕಾಣುವ ಸಾಮ್ಯಗಳನ್ನು, ಆಚರಣೆಯೇ ರಂಗಭೂಮಿಯಾಗಿರುವುದನ್ನು ಮತ್ತು ಮೇಳಗೀತ, ಡೋಲು ಬಡಿತ, ವೇಷ ತೊಟ್ಟವರ ಕುಣಿತ ಇವುಗಳೆಲ್ಲದರ ಮೂಲಕ 'ನಟರು' ಭಕ್ತರೂ ಆಗಿರುವ ಪ್ರೇಕ್ಷಕರಲ್ಲಿ ಭಕ್ತಿಗೆ ಸಮಾನವಾದ ಭಾವವನ್ನು ಮೂಡಿಸಲು ಯತ್ನಿಸುವುದು ಜಾನಪದ ರಂಗಭೂಮಿಯ ಮೂಲಕಾರ್ಯವಾಗಿದೆ" (ಚಂದ್ರಶೇಖರ ಕಂಬಾರ, ಉತ್ತರ ಕರ್ನಾಟಕದ ಜಾನಪದ ರಂಗಭೂಮಿ, ೧೯೭೨) ಎಂದು ಹೇಳುವ ಕಂಬಾರರ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತಾರೆ. ಕಂಬಾರರು ಸಮೃದ್ಧ ವಿವರಗಳನ್ನುಳ್ಳ ತಮ್ಮ ಮಹಾಪ್ರಬಂಧದಲ್ಲಿ ತೋರಿಸಿಕೊಟ್ಟಿರುವುದನ್ನು ರಾಮಾನುಜನ್ ಅವರು ಉದಾಹರಿಸುತ್ತಾರೆ.

ಪ್ರಸ್ತುತ ಪ್ರಬಂಧದಲ್ಲಿ 'ಜಾನಪದ ಪುರಾಣ ಮತ್ತು ಪ್ರಾಚೀನ ಪುರಾಣಗಳು: ಗ್ರಾಮದೇವತೆಯತ್ತ ನೋಟ' ಎಂಬ ಉಪಶೀರ್ಷಿಕೆಯಲ್ಲಿ ರಾಮಾನುಜನ್ ಅವರು ಚರ್ಚಿಸಿರುವ ವಿಷಯ ಅತ್ಯಂತ ಗಹನವೂ, ಸೂಕ್ಷ್ಮವೂ, ನವೀನವೂ ಆಗಿದೆ. "ಕನ್ನಡದಲ್ಲಿ ಮಾತ್ರವಲ್ಲದೆ ಭಾರತದ ಬಹುಪಾಲು ಹಳ್ಳಿಗಳಲ್ಲಿ ಜಾನಪದ ಪುರಾಣಗಳೆಂದು ಕರೆಯಬಹುದಾದಂತಹ ಪುರಾಣಗಳನ್ನು ನೋಡುತ್ತೇವೆ. ಅವು ಶಿಷ್ಟ ಸಂಸ್ಕೃತ ಪುರಾಣಗಳಿಗೆ ಸಮಾನಾಂತರವಾಗಿರುತ್ತವೆ ಅಥವಾ ಅವುಗಳನ್ನು ಮೀರಿರುತ್ತವೆ ಅಥವಾ ಅವನ್ನು ಜೋಡಣೆ ಮಾಡಿಕೊಂಡಿರುತ್ತವೆ" ಎಂಬ ಪ್ರಮೇಯವನ್ನು ರಾಮಾನುಜನ್ ಅವರು ಮಂಡಿಸುತ್ತಾರೆ. ಹಲವಾರು ಪಾಶ್ಚಾತ್ಯ ಹಾಗೂ ಭಾರತೀಯ ವಿದ್ವಾಂಸರು ಗ್ರಾಮದೇವತೆಗಳನ್ನು, ದೇವರುಗಳನ್ನು ಕುರಿತು ಇರುವಂತಹ ಕಥೆಗಳನ್ನು, ಪುರಾಣಗಳನ್ನು ಅಧ್ಯಯನ ಮಾಡಿದ್ದಾರೆ.

"ಜಾತಿ ಅಥವಾ ಉತ್ಸವ ಸಂಬಂಧಿಯಾದ ಮೌಖಿಕ ಕಾವ್ಯಗಳು ಈ ಕಥನಶರೀರದ ಭಾಗವಾಗಿರುತ್ತವೆ. ಕಥೆಗಳೊಂದಿಗೆ ದೇವತೆ ಭಕ್ತರ ಮೇಲೆ ಆವಾಹನೆಗೊಳ್ಳುವ ಆಚರಣೆಗಳು ಮತ್ತು ಪ್ರಾಣಿಬಲಿಗಳು ಇರುತ್ತವೆ. ಮಾರಿಯಮ್ಮನ್ ಅಥವಾ ಮಾರಮ್ಮನನ್ನು ಕುರಿತ ಪುರಾಣಗಳು ಕನ್ನಡ, ತಮಿಳು, ತೆಲುಗು ಪ್ರದೇಶಗಳಲ್ಲಿ ದೊರೆಯುತ್ತವೆ. ಮಾತೃದೇವತೆಗಳೆಂದು ಕರೆಯಲಾಗುವ ಈ ದೇವತೆಗಳ ಬಗ್ಗೆ ಸಾಕಷ್ಟು ಅಧ್ಯಯನವೂ ನಡೆದಿದೆ" ಎಂದು ಬರೆಯುತ್ತಾ ರಾಮಾನುಜನ್ ಅವರು ಸಂಸ್ಕೃತ ಅಥವಾ ಶಿಷ್ಟ ದೇವತೆಯರಿಗೂ ಪರಿಶಿಷ್ಟ ಅಥವಾ ಹಳ್ಳಿಯ ಗ್ರಾಮದೇವತೆಗಳಿಗೂ ಇರುವ ಸಂಬಂಧ, ವ್ಯತ್ಯಾಸ, ವೈದೃಶ್ಯಗಳೇನು ಎಂಬ ಪ್ರಶ್ನೆಯನ್ನು ಹಾಕಿಕೊಂಡು ಇದಕ್ಕೆ ಉದಾಹರಣೆಗಳ ಸಹಿತ ವಿವರಿಸುತ್ತಾರೆ, ವಿಶ್ಲೇಷಣೆ ಮಾಡುತ್ತಾರೆ.

ರಾಮಾನುಜನ್ ಅವರು ಗ್ರಾಮದೇವತೆಯನ್ನು ಕುರಿತು ಇರುವ ಅನೇಕ ಐತಿಹ್ಯಗಳನ್ನು ಪ್ರಸ್ತಾಪಿಸುತ್ತಾರೆ. ಆಕೆಯ ಕಾಳಿಯ ಅವತಾರ, ಪಾರ್ವತಿ ಅಥವಾ ಶಿವನೊಂದಿಗೆ ಆಕೆಯ ಸಂಬಂಧ ಕಲ್ಪಿಸುವ – ಈ ಬಗೆಯ ಜನಪ್ರಿಯ ವಿಧಾನಗಳಿಗಿಂತ ಭಿನ್ನವಾಗಿ ಆಕೆಯನ್ನು ನೋಡಲು ಯತ್ನಿಸುತ್ತಾರೆ. ಮನಶ್ಶಾಸ್ತ್ರೀಯ ವಿದ್ವಾಂಸರು ದೇವತೆಯನ್ನೂ ಗ್ರಾಮದೇವತೆಯನ್ನೂ ಪರಿಭಾವಿಸುತ್ತ ಅವರನ್ನು ಅಹಂಗೆ ನಿಕಟವಾಗುವಂತೆ ಮಾಡುವುದನ್ನು ಗುರುತಿಸುತ್ತಾರೆ. ಇದರ ಬಗ್ಗೆ ಅವರು ಎರಡು ಅಂಶಗಳನ್ನು ಸ್ಪಷ್ಟಪಡಿಸುತ್ತಾರೆ:

> "೧. ಗ್ರಾಮದೇವತೆ, ದೇವಿಯಾಗಲಿ ಅಥವಾ ಯಾವುದೇ ರೂಪದ ಮಾರಿಯಾಗಿರಲಿ ತಾಯಿಯಲ್ಲ. ಬಹಳಷ್ಟು ಪುರಾಣಗಳಲ್ಲಿ ಅವಳಿಗೆ ಮಕ್ಕಳಿಲ್ಲ, ತಮಿಳು ಮತ್ತು ಕನ್ನಡದಲ್ಲಿ ಈ ದೇವತೆಯನ್ನು ಕರೆಯಲು ಬಳಸುವ 'ಅಮ್ಮ' ಎಂಬ ಪದ ತಾಯಿ ಮತ್ತು ಮಹಿಳೆ ಎಂಬ ಎರಡು ಅರ್ಥಗಳನ್ನೂ ಹೊಂದಿದೆ. ಅವಳಿಂದ ಉಂಟಾಗುವ ತೊಂದರೆಯನ್ನು 'ಅಮ್ಮ' ಎಂದೇ ಸೌಮ್ಯೋಕ್ತಿಯಿಂದ ಸೂಚಿಸಲಾಗುತ್ತದೆ.
>
> ೨. ಲಕ್ಷ್ಮೀ ಅಥವಾ ಪಾರ್ವತಿಯಂಥ ಸಂಗಾತಿ ದೇವತೆಗಳು ವಿವಾಹಿತರು, ಶುಭಕರರೂ ಆಗಿದ್ದರೆ ಗ್ರಾಮದೇವತೆ ಅವರಿಗಿಂತ ಭಿನ್ನ. ಲಕ್ಷ್ಮೀ, ಪಾರ್ವತಿಯರಂಥ ದೇವತೆಗಳ ಗುಡಿಗಳು ಅವರ ಗಂಡಂದಿರಿಗೆ ಮೀಸಲಾಗಿರುವ ದೊಡ್ಡ ದೇವಾಲಯಗಳ ಭಾಗವಾಗಿ ಇರುತ್ತವೆ. ಸಂಗಾತಿ ದೇವತೆಯರೂ ನಿಜವಾದ ಅರ್ಥದಲ್ಲಿ ತಾಯಂದಿರಲ್ಲ. ಸಂಸ್ಕೃತ ಪುರಾಣಗಳಲ್ಲಿ ಲಕ್ಷ್ಮಿಗೆ ಮಕ್ಕಳಿಲ್ಲ, ಪಾರ್ವತಿಗೆ ಮಕ್ಕಳಾದದ್ದು ಅಯೋನಿ ಜನ್ಮದ ಪವಾಡಗಳಿಂದ." [೩೬]

ಸಂಸ್ಕೃತದ ಸಂಗಾತಿ ದೇವತೆಗಳಿಗೂ ಹಳ್ಳಿಯ ಅಮ್ಮನ್ ದೇವತೆಗಳಿಗೂ ಇರುವ ವ್ಯತ್ಯಾಸವನ್ನು ಜಾನಪದ ಪುರಾಣವೊಂದರ ಪರಿಶೀಲನೆಯ ಮೂಲಕ ರಾಮಾನುಜನ್ ಅವರು

ಸ್ಪಷ್ಟಪಡಿಸುತ್ತಾರೆ. ಇದಕ್ಕೆ ಶ್ರೀಮತಿ ಸರ್ವಮಂಗಳಾ ಅವರು ಅಜ್ಜಿಯಿಂದ ಕೇಳಿ ನಿರೂಪಿಸಿದ ಪುರಾಣ ಕಥೆ (೧೯೭೭)ಯನ್ನು ಬಳಸಿಕೊಳ್ಳುತ್ತಾರೆ. ಈ ಕಥೆಯನ್ನು 'ಮಾರ್ಕಂಡೇಯ ಪುರಾಣ'ದಲ್ಲಿ ಬರುವ ಪ್ರಾಚೀನವಾದ 'ದೇವಿ ಪುರಾಣ'ದೊಂದಿಗೆ ಹೋಲಿಸಿ ವಿಶ್ಲೇಷಿಸಿದ್ದಾರೆ.

ರಾಮಾನುಜನ್ ಅವರು ಶಿಷ್ಟ ಮತ್ತು ಪರಿಶಿಷ್ಟ ಭಾರತೀಯ ದೇವತೆಗಳ ಬಗ್ಗೆ ಮಿತಿಗಳಿದ್ದರೂ ಅವುಗಳ ಬಗ್ಗೆ ಇರುವ ವೈದೃಶ್ಯಗಳನ್ನು ಕುರಿತು ಒಂದು ಸೂಕ್ಷ್ಮವಾದ ತೌಲನಿಕವಾದ ಪಟ್ಟಿಯನ್ನೇ ನೀಡಿದ್ದಾರೆ:

ಸಂಸ್ಕೃತ ದೇವತೆಯರು	**ಹಳ್ಳಿಯ ಗ್ರಾಮದೇವತೆಗಳು**
ಸ್ತನದಾಯಿ ದೇವತೆಯರು (ಸಂಗಾತಿ ದೇವತೆಯರು)	ದಂತ ದೇವತೆಯರು (ಕನ್ಯಾದೇವತೆಯರು, ಅಮ್ಮನ್)
ವಿವಾಹಿತರು, ಪುರುಷ ಸಂಗಾತಿಗೆ ಅಧೀನರು	ಮೂಲತಃ ಸ್ವತಂತ್ರರು, ಮದುವೆಯಾಗಿದ್ದರೂ ಅವಿಧೇಯರು, ಸಂಗಾತಿಯ ಸಾವಿಗೆ ಕಾರಣರು; ಪುರುಷನು ಸಂಗಾತಿ, ಸೋದರ, ಸೇವಕ, ಪೋಷಕ ಆಗಿರಬಹುದು.
ಶುಭಕಾರಿಗಳು, ಮದುವೆ, ಐಶ್ವರ್ಯದಂತ ಜೀವನಾವರ್ತಗಳಿಗೆ ಸಂಬಂಧಪಟ್ಟವರು.	ಸಂಕಷ್ಟದ ದೇವತೆ; ಕ್ಷಾಮಡಾಮರಗಳಂಥ ಬಿಕ್ಕಟ್ಟಿನಲ್ಲಿ ಪ್ರಾರ್ಥನೆ ಮಾಡತಕ್ಕವರು; ನಮ್ಮ ಪಾಡಿಗೆ ನಮ್ಮನ್ನು ಬಿಡುವುದೇ ಅವರು ತೋರುವ ಕರುಣೆಯ ಒಂದು ಅಂಶ.
ಮನೆದೇವತೆಗಳು, ಊರೊಳಗೆ ಅವರ ಗುಡಿ	ಗುಡಿಗಳು ಸಾಮಾನ್ಯವಾಗಿ ಊರಾಚೆ ಇರುತ್ತವೆ, ವಿಶೇಷ ಸಂದರ್ಭಗಳಲ್ಲಿ ಈ ದೇವತೆಗಳು ಊರೊಳಕ್ಕೆ ಬರುತ್ತವೆ.
ಸುಂದರವಾಗಿ ಕೆತ್ತಿದ ಮುಖವುಳ್ಳ ಶಿಲ್ಪ	ಒಡ್ಡಾದ ಕೆತ್ತನೆ, ಸಾಮಾನ್ಯವಾಗಿ ಮುಖರಹಿತ, ವಿಗ್ರಹ ಗಳಾಗಿರುವುದಕ್ಕಿಂತ ಮಡಕೆ ಮೊದಲಾದ ವಸ್ತುರೂಪಗಳು.
ಭೂಮಿಯ ಮೇಲೆ ಹುಟ್ಟಿದವರಲ್ಲ. ಪರಿಶುದ್ಧರು. ವಿಶ್ವಾತ್ಮಕ ಚಲಾವಣೆ ಉಳ್ಳವರು	ಈ ನೆಲದವರು, ಕೆಲವೊಮ್ಮೆ ಅಕ್ಷರಶಃ ಮಣ್ಣಿನಿಂದಾದವರು; ಕೆಲವೊಮ್ಮೆ ಕಾಮಿಗಳು, ಕೋಪಿಷ್ಠರು, ಬಿನ್ನಾಣಗಿತ್ತಿಯರು. ಸಾಮಾನ್ಯವಾಗಿ ತಾವಿರುವ ಹಳ್ಳಿಗೆ ಸೀಮಿತರಾದವರು.
ತಪ್ಪು ಮಾಡದಿದ್ದರೆ ಕರುಣಾಮಯಿಗಳು; ವೈಷ್ಣವ ಭಕ್ತಿಯಲ್ಲಿ ಲಕ್ಷ್ಮಿ, ಜಾನಪದದಲ್ಲಿ ಪಾರ್ವತಿ ಮನುಷ್ಯರಿಗೆ ಸಹಾಯಕರು.	ಸಂದಿಗ್ಧರು. ಇವರ ಬಗ್ಗೆ ಇರುವ ಭಕ್ತಿಯಲ್ಲಿ ಭಯದ ಪಾಲು ದೊಡ್ಡದು. ಮೈಮೇಲೆ ಬರುವುದು ಆಚರಣೆಯ ಒಂದು ಭಾಗ
ಸಸ್ಯಾಹಾರಿಗಳು	ರಕ್ತಬಲಿ(ಅಥವಾ ಅದಕ್ಕೆ ಪರ್ಯಾಯ) ಬೇಡುವವರು, ಪಡೆಯುವವರು.
ಬ್ರಾಹ್ಮಣ ಅಥವ ಬ್ರಾಹ್ಮಣೀಕರಣಗೊಂಡ ಪೂಜಾರಿಗಳು.	ಬಹಳ ಮಟ್ಟಿಗೆ ಅಬ್ರಾಹ್ಮಣ, ಅಸ್ಪೃಶ್ಯ ವರ್ಗದ ಪೂಜಾರಿಗಳು.

೩೮

ಹಾಗೆಯೇ ಕ್ಲಾಸಿಕಲ್ ಪಾತ್ರಗಳನ್ನು ಜಾನಪದವು ಬಳಸಿಕೊಳ್ಳುವ ರೀತಿಗೆ ನಿದರ್ಶನವಾಗಿ 'ಆಕಾಶಮ್ಮನ ಮಕ್ಕಳು' ಎಂಬ ಜಾನಪದ ಕಥೆಯನ್ನು ವಿಶ್ಲೇಷಿಸುತ್ತಾರೆ. 'ಜನಪದ ರಾಮಾಯಣ'ದ ಕಥೆಯಲ್ಲಿ ಜಾನಪದ ಆವೃತ್ತಿಗಳು ಪುರಾಣ ಕಥೆಯ ಸಂಬಂಧಗಳಿಗೆ, ವ್ಯಾಖ್ಯಾನಗಳಿಗೆ ಹೊಸ ಅಂಶಗಳನ್ನು ಸೇರ್ಪಡೆ ಮಾಡುವುದನ್ನು ರಾಗೌ ಸಂಪಾದಿಸಿದ 'ಜನಪದ ರಾಮಾಯಣ' ಮತ್ತು 'ಗಂಗೆಗೌರಿಯರ ಜಗಳ' ಕಥೆಯ ಮೂಲಕ ವಿವರಿಸಿದ್ದಾರೆ. "ಜಾನಪದ ಕಥನಗಳು ಭಾರತೀಯ ಮಹಾಕಾವ್ಯಗಳನ್ನೂ, ಪುರಾಣಗಳನ್ನೂ ಸ್ಥಳೀಯಗೊಳಿಸುತ್ತವೆ"; "ಜಾನಪದ ಆವೃತ್ತಿಗಳು ಪುರಾಣದ ಹಲವು ಸಂದರ್ಭಗಳನ್ನು ಸಮಕಾಲೀನಗೊಳಿಸುತ್ತವೆ" ಎಂದು ರಾಮಾನುಜನ್ ಅವರು ಈ ಬಗೆಯ ತಮ್ಮ ಸೂತ್ರರೂಪಿ ಪ್ರಮೇಯದ ಮಾತುಗಳಿಗೆಲ್ಲಾ ಉದಾಹರಣೆಗಳ ಸಹಿತ ಈ ಪ್ರಬಂಧದಲ್ಲಿ ವಿವರಿಸಿ ಅದಕ್ಕೆ ಒಂದು ಹೊಸ ಬಗೆಯ ಚಿಂತನೆಯನ್ನು ತಂದುಕೊಡುತ್ತಾರೆ.

"ಕಲೆಯು ಬದುಕನ್ನು, ಬದುಕು ಕಲೆಯನ್ನು ಅನುಕರಿಸುತ್ತದೆ" ಎಂಬ ಆಸ್ಕರ್ ವೈಲ್ಡ್‌ನ ಮಾತನ್ನು ಉದಾಹರಿಸಿ ಈ ಪ್ರಬಂಧವನ್ನು ಅವರು ಮುಗಿಸುತ್ತಾರೆ. ಹೀಗೆ ಒಂದು ಪ್ರಕಾರ ಮತ್ತೊಂದು ಪ್ರಕಾರದ ಜೊತೆಗೆ ಹೇಗೆ ಪೂರಕವಾಗಿ, ಜೋಡಿಯಾಗಿ ಬೆಸೆದುಕೊಂಡಿರುತ್ತದೆ ಎಂಬುದಕ್ಕೆ ಜಾನಪದ ಗಾದೆ, ಒಗಟು, ಕಥೆ, ಪುರಾಣ ಮುಂತಾದ ಪ್ರಕಾರಗಳ ಮೂಲಕ ಅವುಗಳ ಸಂಬಂಧವನ್ನು ಈ ಪ್ರಬಂಧವು ಗ್ರಹಿಸುತ್ತಾ ಜಾನಪದದ ಅರ್ಥಪೂರ್ಣ ಅಧ್ಯಯನಕ್ಕೆ ಪ್ರೇರಣೆಯನ್ನು ಒದಗಿಸುತ್ತದೆ. ಈ ದೃಷ್ಟಿಯಿಂದ ರಾಮಾನುಜನ್ ಅವರ ಜಾನಪದ ಅಧ್ಯಯನದ ಕುರಿತ ಈ ಚಿಂತನೆಗಳು ಪ್ರಸ್ತುತವಾಗುತ್ತವೆ.

ಒಟ್ಟಾರೆ ರಾಮಾನುಜನ್ ಅವರ ಈ ಎಲ್ಲಾ ಪ್ರಬಂಧಗಳು ಸಾಹಿತ್ಯ, ಧರ್ಮ, ಭಕ್ತಿ, ಜಾನಪದ, ಸಂಸ್ಕೃತಿ, ಭಾರತೀಯತೆ ಇತ್ಯಾದಿ ವೈರುಧ್ಯಗಳನ್ನು ಮತ್ತು ಮೌಲ್ಯಗಳನ್ನು ವಿವರಿಸಿಕೊಳ್ಳಲು, ಅರ್ಥೈಸಿಕೊಳ್ಳಲು ಇಂದಿಗೂ ನವನವೋನ್ಮೇಷಶಾಲಿನಿಗಳಾಗಿವೆ.

ಅಡಿಟಿಪ್ಪಣಿ

೧. ಭಾರತೀಯವೆನ್ನುವ ಒಂದು ಚಿಂತನಕ್ರಮ ಇದೆಯೆ? ಅನು. ಕೆ.ವಿ. ಸುಬ್ಬಣ್ಣ ಎ.ಕೆ.ರಾಮಾನುಜನ್ ಅವರ ಆಯ್ದ ಬರಹಗಳು, ಕೆ.ವಿ.ಸುಬ್ಬಣ್ಣ ನೆನಪಿನ 'ಮೊದಲ ಓದು' ಮಾಲಿಕೆ, ಅಕ್ಷರ ಪ್ರಕಾಶನ, ಹೆಗ್ಗೋಡು(ಸಾಗರ), ೨೦೦೯, ಪು. ೬-೭.

೨. ಕನ್ನಡಿಗಳು ಕಿಟಕಿಗಳೂ ಆದರೆ: ಪ್ರತಿಬಿಂಬಗಳ ಒಂದು ಸಂಕಲನದ ಪ್ರಯತ್ನ, ಅನು. ಜಿ.ರಾಜಶೇಖರ್, ಎ.ಕೆ.ರಾಮಾನುಜನ್ ಅವರ ಆಯ್ದ ಬರಹಗಳು, ಕೆ.ವಿ.ಸುಬ್ಬಣ್ಣ ನೆನಪಿನ 'ಮೊದಲ ಓದು' ಮಾಲಿಕೆ, ಅಕ್ಷರ ಪ್ರಕಾಶನ, ಹೆಗ್ಗೋಡು(ಸಾಗರ), ೨೦೦೯, ಪು. ೭೦.

೩. ಕನ್ನಡಿಗಳು ಕಿಟಕಿಗಳೂ ಆದರೆ: ಪ್ರತಿಬಿಂಬಗಳ ಒಂದು ಸಂಕಲನದ ಪ್ರಯತ್ನ, ಅನು. ಜಿ.ರಾಜಶೇಖರ್. ಎ.ಕೆ.ರಾಮಾನುಜನ್ ಅವರ ಆಯ್ದ ಬರಹಗಳು, ಕೆ.ವಿ.ಸುಬ್ಬಣ್ಣ ನೆನಪಿನ 'ಮೊದಲ ಓದು' ಮಾಲಿಕೆ, ಅಕ್ಷರ ಪ್ರಕಾಶನ, ಹೆಗ್ಗೋಡು(ಸಾಗರ), ೨೦೦೯, ಪು. ೭೦.

೪. ಕನ್ನಡಿಗಳು ಕಿಟಕಿಗಳೂ ಆದರೆ: ಪ್ರತಿಬಿಂಬಗಳ ಒಂದು ಸಂಕಲನದ ಪ್ರಯತ್ನ, ಅನು. ಜಿ.ರಾಜಶೇಖರ್, ಎ.ಕೆ.ರಾಮಾನುಜನ್ ಅವರ ಆಯ್ದ ಬರಹಗಳು, ಕೆ.ವಿ.ಸುಬ್ಬಣ್ಣ ನೆನಪಿನ 'ಮೊದಲ ಓದು' ಮಾಲಿಕೆ, ಅಕ್ಷರ ಪ್ರಕಾಶನ, ಹೆಗ್ಗೋಡು(ಸಾಗರ), ೨೦೦೯, ಪು. ೭೧.

೫. ಕನ್ನಡಿಗಳು ಕಿಟಕಿಗಳೂ ಆದರೆ: ಪ್ರತಿಬಿಂಬಗಳ ಒಂದು ಸಂಕಲನದ ಪ್ರಯತ್ನ, ಅನು. ಜಿ.ರಾಜಶೇಖರ್, ಎ.ಕೆ.ರಾಮಾನುಜನ್ ಅವರ ಆಯ್ದ ಬರಹಗಳು, ಕೆ.ವಿ.ಸುಬ್ಬಣ್ಣ ನೆನಪಿನ 'ಮೊದಲ ಓದು' ಮಾಲಿಕೆ, ಅಕ್ಷರ ಪ್ರಕಾಶನ, ಹೆಗ್ಗೋಡು(ಸಾಗರ), ೨೦೦೯, ಪು. ೭೧–೭೨.

೬. ಕನ್ನಡಿಗಳೆ ಕಿಟಕಿಗಳಾಗಿರುವಲ್ಲಿ, ಅನು. ಓ.ಎಲ್.ನಾಗಭೂಷಣಸ್ವಾಮಿ, ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು. ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೨, ಪು. ೧೩.

೭. ಕನ್ನಡಿಗಳೆ ಕಿಟಕಿಗಳಾಗಿರುವಲ್ಲಿ, ಅನು. ಓ.ಎಲ್.ನಾಗಭೂಷಣಸ್ವಾಮಿ, ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು. ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೨, ಪು. ೧೪.

೮. ಮುನ್ನೂರು ರಾಮಾಯಣಗಳು: ಅನುವಾದದ ಕುರಿತು ಮೂರು ವಿಚಾರಗಳು–ಐದು ಉದಾಹರಣೆಗಳೊಂದಿಗೆ, ಅನು. ಡಾ.ಮಹಾಬಲೇಶ್ವರರಾವ್, ಎ.ಕೆ.ರಾಮಾನುಜನ್ ಅವರ ಆಯ್ದ ಬರಹಗಳು, ಕೆ.ವಿ.ಸುಬ್ಬಣ್ಣ ನೆನಪಿನ 'ಮೊದಲ ಓದು' ಮಾಲಿಕೆ, ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ), ಕರ್ನಾಟಕ, ೨೦೦೯, ಪು. ೩೬–೩೭.

೯. ಮುನ್ನೂರು ರಾಮಾಯಣಗಳು: ಅನುವಾದದ ಕುರಿತು ಮೂರು ವಿಚಾರಗಳು–ಐದು ಉದಾಹರಣೆಗಳೊಂದಿಗೆ, ಅನು. ಮಹಾಬಲೇಶ್ವರರಾವ್, ಎ.ಕೆ.ರಾಮಾನುಜನ್ ಆಯ್ದ ಬರಹಗಳು, ಕೆ.ವಿ.ಸುಬ್ಬಣ್ಣ ನೆನಪಿನ 'ಮೊದಲು ಒದು' ಮಾಲಿಕೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಪು. ೪೨–೪೩.

೧೦. ಮುನ್ನೂರು ರಾಮಾಯಣಗಳು: ಅನುವಾದದ ಕುರಿತು ಮೂರು ವಿಚಾರಗಳು–ಐದು ಉದಾಹರಣೆಗಳೊಂದಿಗೆ, ಅನು. ಮಹಾಬಲೇಶ್ವರರಾವ್, ಎ.ಕೆ.ರಾಮಾನುಜನ್ ಆಯ್ದ ಬರಹಗಳು, ಕೆ.ವಿ.ಸುಬ್ಬಣ್ಣ ನೆನಪಿನ 'ಮೊದಲು ಒದು' ಮಾಲಿಕೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಪು. ೪೫.

೧೧. ಮುನ್ನೂರು ರಾಮಾಯಣಗಳು: ಅನುವಾದದ ಕುರಿತು ಮೂರು ವಿಚಾರಗಳು–ಐದು ಉದಾಹರಣೆಗಳೊಂದಿಗೆ, ಅನು. ಮಹಾಬಲೇಶ್ವರರಾವ್, ಎ.ಕೆ.ರಾಮಾನುಜನ್ ಆಯ್ದ ಬರಹಗಳು, ಕೆ.ವಿ.ಸುಬ್ಬಣ್ಣ ನೆನಪಿನ 'ಮೊದಲು ಒದು' ಮಾಲಿಕೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಪು. ೪೬.

೧೨. ಮುನ್ನೂರು ರಾಮಾಯಣಗಳು: ಅನುವಾದದ ಕುರಿತು ಮೂರು ವಿಚಾರಗಳು–ಐದು ಉದಾಹರಣೆಗಳೊಂದಿಗೆ, ಅನು. ಮಹಾಬಲೇಶ್ವರರಾವ್, ಎ.ಕೆ.ರಾಮಾನುಜನ್ ಆಯ್ದ ಬರಹಗಳು, ಕೆ.ವಿ.ಸುಬ್ಬಣ್ಣ ನೆನಪಿನ 'ಮೊದಲು ಒದು' ಮಾಲಿಕೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಪು. ೪೭.

೧೩. ಮುನ್ನೂರು ರಾಮಾಯಣಗಳು: ಅನುವಾದದ ಕುರಿತು ಮೂರು ವಿಚಾರಗಳು–ಐದು ಉದಾಹರಣೆಗಳೊಂದಿಗೆ, ಅನು. ಮಹಾಬಲೇಶ್ವರ ರಾವ್, ಎ.ಕೆ.ರಾಮಾನುಜನ್ ಆಯ್ದ ಬರಹಗಳು, ಕೆ.ವಿ.ಸುಬ್ಬಣ್ಣ ನೆನಪಿನ 'ಮೊದಲು ಒದು' ಮಾಲಿಕೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಪು. ೫೦–೫೧.

೧೪. ಮಹಾಭಾರತದಲ್ಲಿ ಪುನರುಕ್ತಿ, ಅನು. ಓ.ಎಲ್.ನಾಗಭೂಷಣಸ್ವಾಮಿ, ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೨, ಪು. ೧೦೪.

೧೫. ಮಹಾಭಾರತದಲ್ಲಿ ಪುನರುಕ್ತಿ, ಅನು. ಓ.ಎಲ್.ನಾಗಭೂಷಣಸ್ವಾಮಿ, ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೨, ಪು. ೧೦೫–೧೦೬.

೧೬. ಮಹಾಭಾರತದಲ್ಲಿ ಪುನರುಕ್ತಿ, ಅನು. ಓ.ಎಲ್.ನಾಗಭೂಷಣಸ್ವಾಮಿ, ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೨, ಪು. ೧೦೭.

೧೭. ಮಹಾಭಾರತದಲ್ಲಿ ಪುನರುಕ್ತಿ, ಅನು. ಓ.ಎಲ್.ನಾಗಭೂಷಣಸ್ವಾಮಿ, ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೨, ಪು. ೧೦೮.

೧೮. ಮಹಾಭಾರತದಲ್ಲಿ ಪುನರುಕ್ತಿ, ಅನು. ಓ.ಎಲ್.ನಾಗಭೂಷಣಸ್ವಾಮಿ, ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೨, ಪು. ೧೨೩.

೧೯. ಮಹಾಭಾರತದಲ್ಲಿ ಪುನರುಕ್ತಿ, ಅನು. ಓ.ಎಲ್.ನಾಗಭೂಷಣಸ್ವಾಮಿ, ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೨, ಪು. ೧೨೬.

೨೦. ಅಲ್ಲಮನ ಕವಿತೆ ಯಾಕೆ ಒಗಟಲ್ಲ?, ಅನು. ಓ.ಎಲ್.ನಾಗಭೂಷಣಸ್ವಾಮಿ, ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೨, ಪು. ೧೨೯–೧೩೦.

೨೧. ಅಲ್ಲಮನ ಕವಿತೆ ಯಾಕೆ ಒಗಟಲ್ಲ?, ಅನು. ಓ.ಎಲ್.ನಾಗಭೂಷಣಸ್ವಾಮಿ, ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೨, ಪು. ೧೩೦.

೨೨. ಅಲ್ಲಮನ ಕವಿತೆ ಯಾಕೆ ಒಗಟಲ್ಲ?, ಅನು. ಓ.ಎಲ್.ನಾಗಭೂಷಣಸ್ವಾಮಿ. ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು, ಮನೋಹರ ಗ್ರಂಥಮಾಲ, ಧಾರವಾಡ, ೨೦೧೨, ಪು.೧೪೩-೧೪೪

೨೩. ಭಕ್ತಿ ವೈವಿಧ್ಯ, ಅನು. ಓ.ಎಲ್.ನಾಗಭೂಷಣಸ್ವಾಮಿ, ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೨, ಪು. ೧೫೦.

೨೪. ಭಕ್ತಿ ವೈವಿಧ್ಯ, ಅನು. ಓ.ಎಲ್.ನಾಗಭೂಷಣಸ್ವಾಮಿ, ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೨, ಪು. ೧೫೨-೧೫೩.

೨೫. ಭಕ್ತಿ ವೈವಿಧ್ಯ, ಅನು. ಓ.ಎಲ್.ನಾಗಭೂಷಣಸ್ವಾಮಿ, ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೨, ಪು. ೧೫೩.

೨೬. ಕನ್ನಡ ಜಾನಪದದ ಎರಡು ವಲಯಗಳು, ಅನು. ಓ.ಎಲ್.ನಾಗಭೂಷಣಸ್ವಾಮಿ, ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೨, ಪು. ೨೩೫.

೨೭. ಕನ್ನಡ ಜಾನಪದದ ಎರಡು ವಲಯಗಳು, ಅನು. ಓ.ಎಲ್.ನಾಗಭೂಷಣಸ್ವಾಮಿ, ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೨, ಪು. ೨೩೬.

೨೮. ಗಾದೆಗಳು, ಎ.ಕೆ.ರಾಮಾನುಜನ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೫೫, ಬಿನ್ನಹ, ಪು. vi.

೨೯. ರಾಮಾನುಜನ್: ಮಹಾಪ್ರತಿಭೆ, ಸುಮತೀಂದ್ರ ನಾಡಿಗ, ಎ.ಕೆ.ರಾಮಾನುಜನ್ ನೆನಪಿನ ಸಂಪುಟ, ಸಂ.ಟಿ.ಪಿ.ಅಶೋಕ, ಕರ್ನಾಟಕ ಸಂಘ, ಪುತ್ತೂರು, ೧೯೯೩, ಪು. ೧೯.

೩೦. ಎ.ಕೆ.ರಾಮಾನುಜನ್-ಅರ್ಥಪೂರ್ಣ ಕೊಡುಕೊಳ್ಳುವಿಕೆ, ಚಂದ್ರಶೇಖರ ಕಂಬಾರ, ಎ.ಕೆ.ರಾಮಾನುಜನ್ ನೆನಪಿನ ಸಂಪುಟ, ಸಂ.ಟಿ.ಪಿ.ಅಶೋಕ, ಕರ್ನಾಟಕ ಸಂಘ, ಪುತ್ತೂರು, ೧೯೯೩, ಪು. ೧೩೭.

೩೧. ಗಾದೆಗಳು, ಎ.ಕೆ.ರಾಮಾನುಜನ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೫೫, ಪು. ೧-೨.

೩೨. ಗಾದೆಗಳು, ಎ.ಕೆ.ರಾಮಾನುಜನ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೫೫, ಪು. ೩-೪.

೩೩. ಗಾದೆಗಳು, ಎ.ಕೆ.ರಾಮಾನುಜನ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೫೫, ಪು. ೧೨.

೩೪. ಗಾದೆಗಳು, ಎ.ಕೆ.ರಾಮಾನುಜನ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೫೫, ಪು. ೮೮.

೩೫. ಕನ್ನಡ ಜಾನಪದ: ಎರಡು ವಲಯಗಳು, ಅನು. ಓ.ಎಲ್.ನಾಗಭೂಷಣಸ್ವಾಮಿ, ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೨, ಪು. ೨೪೪.

೩೬. ಕನ್ನಡ ಜಾನಪದ: ಎರಡು ವಲಯಗಳು, ಅನು. ಓ.ಎಲ್.ನಾಗಭೂಷಣಸ್ವಾಮಿ, ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೨, ಪು. ೨೫೪.

೩೭. ಕನ್ನಡ ಜಾನಪದ: ಎರಡು ವಲಯಗಳು, ಅನು. ಓ.ಎಲ್.ನಾಗಭೂಷಣಸ್ವಾಮಿ, ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೨, ಪು. ೨೫೫.

ಅಧ್ಯಾಯ : ಆರು

ರಾಮಾನುಜನ್ ಅವರ ಇಂಗ್ಲೀಷ್ ಭಾಷಾಂತರಗಳು ಮತ್ತು ಭಾರತೀಯ ಚಿಂತನೆ

ಅಧ್ಯಾಯ : ಆರು

ರಾಮಾನುಜನ್ ಅವರ ಇಂಗ್ಲಿಷ್ ಭಾಷಾಂತರಗಳು ಮತ್ತು ಭಾರತೀಯ ಚಿಂತನೆ

'Translation' ಎಂಬ ಇಂಗ್ಲಿಷ್ ಪದ ಲ್ಯಾಟಿನ್ ಭಾಷೆಯ 'Translatus' ಎಂಬ ಪದದಿಂದ ಬಂದಿದೆ. ಅದರ ಅರ್ಥ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ವರ್ಗಾಯಿಸುವುದು ಎಂದು. ಆದರೆ ಮೂಲಕೃತಿ ಮತ್ತು ಅದರ ಭಾಷಾಂತರದ ನಡುವೆ ಕಂದಕ ಮಾತ್ರ ಇದ್ದೇ ಇದೆ. ಭಾಷಾಂತರದ ವ್ಯಾಖ್ಯೆ, ವ್ಯುತ್ಪತ್ತಿ, ಸಿದ್ಧಾಂತ, ಪರಿಕಲ್ಪನೆ, ಪ್ರಯೋಗದ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಭಾರತದ ಮತ್ತು ವಿದೇಶಿ ವಿದ್ವಾಂಸರ ಮಟ್ಟದಲ್ಲಿ ಭಾಷಾಂತರದ ಬಗ್ಗೆ ನಡೆದಿರುವ ಚರ್ಚೆ ಮತ್ತು ಇಂದಿಗೂ ನಡೆಯುತ್ತಿರುವ ಈ ಚರ್ಚೆಗೆ ಕೊನೆಯೇ ಇಲ್ಲ. ಭಾರತವಂತು ಬಹುಭಾಷೆಗಳ, ಬಹುಸಂಸ್ಕೃತಿಗಳ ದೇಶವಾಗಿರುವುದರಿಂದ ಭಾಷಾಂತರ ಕ್ರಿಯೆ ಕೂಡ ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಕ್ರಿಯಾಶೀಲವಾಗಿ ನಡೆದುಬಂದಿದೆ. ಮೊದಲಿನಿಂದಲೂ ಸಂಸ್ಕೃತ ಮತ್ತು ಇತರ ಭಾರತೀಯ ಭಾಷೆಗಳ ನಡುವೆ ಮತ್ತು ಪರ್ಶಿಯನ್ ಹಾಗೂ ಅರಾಬಿಕ್ ಭಾಷೆಗಳ ನಡುವೆ ಭಾಷಾಂತರ ಕ್ರಿಯೆ ನಡೆದೇ ಬಂದಿತ್ತು. ೧೮ನೆಯ ಶತಮಾನದಿಂದ ಭಾರತೀಯ ಭಾಷೆಗಳ ಮತ್ತು ಇಂಗ್ಲಿಷ್ ಭಾಷೆಯ ನಡುವೆ ವ್ಯಾಪಕವಾಗಿ ಭಾಷಾಂತರ ಕ್ರಿಯೆ ನಡೆದಿದೆ. ಭಾರತದಲ್ಲಿ ಹೀಗೆ ಭಾಷಾಂತರ ಕ್ರಿಯೆಗೆ ಶ್ರೀಮಂತ ಪರಂಪರೆಯಿದೆ. ಆದರೆ ಭಾಷಾಂತರ ಸ್ವರೂಪ, ನಿಯೋಗಗಳ ಬಗ್ಗೆ ತ್ರೀವ್ರವಾಗಿ ಚರ್ಚೆ ನಡೆದಿರುವುದು ಮಾತ್ರ ಕಳೆದ ಒಂದು ಶತಮಾನದಿಂದ ಎಂದರೆ ತಪ್ಪಾಗಲಾರದು. ಇದಕ್ಕೆ ಬಹುಮುಖ್ಯ ಕಾರಣ ಈ ಭಾಷಾಂತರವನ್ನು ವಸಾಹತುಶಾಹಿಯು ತನ್ನ ರಾಜಕೀಯ ಅಧಿಕಾರವನ್ನು ಭದ್ರಪಡಿಸಿಕೊಳ್ಳಲು ಉಪಯೋಗಿಸಿಕೊಂಡಿದ್ದು.

ಅಭಿಜಾತ ಸಾಹಿತ್ಯ ಪರಂಪರೆಯ ಭಾಷಾಂತರ ಕ್ರಿಯೆ ಒಂದು ಬಗೆಯದಾದರೆ ಮೌಖಿಕ ಸಾಹಿತ್ಯದ ಭಾಷಾಂತರ ಕ್ರಿಯೆ ಹಲವಾರು ಸಮಸ್ಯೆಗಳನ್ನು ಒಡ್ಡುತ್ತದೆ. ಮೌಖಿಕ ಸಾಹಿತ್ಯದ

ಪರಿಭಾಷೆ, ಸಾಂಸ್ಕೃತಿಕ ನುಡಿಗಟ್ಟು, ಪ್ರಾದೇಶಿಕ ಭಾಷಾಪ್ರಬೇಧ, ಜನಾಂಗೀಯ ಅನುಭವಗಳು, ಪಠ್ಯದ ಹಲವು ಆವೃತ್ತಿಗಳು, ಸಂಸ್ಕೃತಿಯ ವಿಶೇಷತೆಗಳನ್ನು ಬೇರೆ ಇಂಗ್ಲೀಷ್ ಮುಂತಾದ ಭಾಷೆಗಳಿಗೆ ವರ್ಗಾಯಿಸುವಾಗ ಹಲವಾರು ಸಮಸ್ಯೆಗಳನ್ನು ಭಾಷಾಂತರಕಾರ ಅನುಭವಿಸಬೇಕಾಗುತ್ತದೆ. ವಚನಗಳನ್ನು ಇಂಗ್ಲಿಷ್‌ಗೆ ಭಾಷಾಂತರಿಸುವಾಗ ಇರುವ ಸೌಲಭ್ಯ ಜಾನಪದ ಸಾಹಿತ್ಯವನ್ನು ಅನುವಾದಿಸುವಾಗ ಇರುವುದಿಲ್ಲ. ಆದರೆ ವಚನಗಳನ್ನು ಅನುವಾದಿಸುವಾಗ ಇಂಗ್ಲಿಷ್ ಬಲ್ಲ ಭಾರತೀಯರಿಗೋ ಅಥವಾ ಪಾಶ್ಚಾತ್ಯ ಇಂಗ್ಲಿಷ್ ಓದುಗರಿಗಾಗಿಯೋ ಎಂಬ ಕಲ್ಪನೆ ಕೂಡ ಇರಬೇಕಾಗುತ್ತದೆ. ಆ ಸಮಾಜಗಳ ಸಂಸ್ಕೃತಿ, ಪರಂಪರೆಯ ಬಗ್ಗೆ ತಿಳಿದಿರಬೇಕಾಗುತ್ತದೆ. ರಾಮಾನುಜನ್ ಅವರಿಗೆ ವಚನಗಳು ಜನಪದ ಸಾಹಿತ್ಯ, ಸಂಗಂ ಸಾಹಿತ್ಯವನ್ನು ಇಂಗ್ಲಿಷ್‌ಗೆ ಅನುವಾದ ಮಾಡುವಾಗ ಈ ಬಗೆಯ ವಿಶ್ವಾತ್ಮಕ ಕಲ್ಪನೆಯಿತ್ತು. ಹಾಗಾಗಿ ಅವರಿಗೆ ಇವುಗಳನ್ನು ಇಂಗ್ಲಿಷಿಗೆ ವರ್ಗಾಯಿಸುವಾಗ ಹಲವು ಬಗೆಯ ಬದಲಾವಣೆಗಳು ಅನಿವಾರ್ಯವಾಗಿತ್ತು. ಉದಾಹರಣೆಗೆ 'ಕೂಡಲ ಸಂಗಮದೇವಾ' ಎಂಬುದನ್ನು 'Lord of the Meeting Rivers' ಎಂದು ಬದಲಾಯಿಸಿ ಭಾಷಾಂತರಿಸಿದ್ದು ಆ ಸಮಾಜಕ್ಕೆ ಹತ್ತಿರವಾದ ಸ್ವೀಕಾರಾರ್ಹವಾದುದಾಗಿತ್ತು. ಜರ್ಮನ್ ತತ್ವಜ್ಞಾನಿ ಮತ್ತು ಮಾರ್ಕ್ಸ್‌ವಾದಿ ವಿಮರ್ಶಕನಾದ ಬೆಂಜಮಿನ್ ಹೇಳುವಂತೆ, "ಪ್ರತಿಯೊಂದು ವಿಶಿಷ್ಟಕೃತಿಯೂ ತನ್ನ ಒಡಲಿನಲ್ಲಿಯೇ ಅನುವಾದ ಸಾಧ್ಯತೆ(Translatability)ಯನ್ನು ಒಳಗೊಂಡಿರುತ್ತದೆ. ಈ ಕಾರಣದಿಂದ ಮೂಲಕೃತಿ ಮತ್ತು ಅನುವಾದ ಇವೆರಡರ ನಡುವೆ ಗಾಢ ಸಂಬಂಧವಿರುತ್ತದೆ"[೧] ಎಂದು ಹೇಳುವ ವಾಲ್ಟರ್ ಬೆಂಜಮಿನ್ (೧೮೯೨-೧೯೪೦) ಅವರ ಮಾತು ಈ ಬಗೆಯ ಸಾಹಿತ್ಯವನ್ನು ಅನುವಾದ ಮಾಡುವಾಗ ಅದರ ಸಾಧ್ಯತೆಯನ್ನು ವಿಸ್ತರಿಸಬಹುದಾದ ಅವಕಾಶವನ್ನು ಸೂಚಿಸುತ್ತದೆ.

ಸ್ವತಃ ಕನ್ನಡ-ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಶ್ರೇಷ್ಠ ಕವಿಯಾಗಿದ್ದ ರಾಮಾನುಜನ್ ಅವರು ಅನುವಾದ ಕಾರ್ಯವನ್ನು ಸುಮಾರು ನಾಲ್ಕು ದಶಕಗಳ ಕಾಲ ಗಂಭೀರವಾಗಿ ಪರಿಗಣಿಸಿ ಕೆಲಸ ಮಾಡಿದರು. ಅನುವಾದ ಕಾರ್ಯದ ಸ್ವರೂಪ, ಉದ್ದೇಶ, ಪರಿಣಾಮ, ಮಹತ್ವಗಳ ಬಗ್ಗೆ ಅವರು ಸದಾ ಚಿಂತಿಸುತ್ತಿದ್ದರು. ಅನುವಾದ ಕ್ರಿಯೆಯನ್ನು ಕುರಿತು ಅವರು 'On Translating a Tamil Poem' ಎಂಬ ಒಂದು ಮಹತ್ವದ ಪ್ರಬಂಧವನ್ನು ಬರೆದಿದ್ದರು. ಇದಲ್ಲದೆ ಅವರು ತಮ್ಮ ಪ್ರತಿಯೊಂದು ಅನುವಾದ ಕೃತಿಗಳ ಪ್ರಸ್ತಾವನೆಯಲ್ಲಿ, ಮುನ್ನುಡಿಗಳಲ್ಲಿ ಅನುವಾದ ಕ್ರಿಯೆಯನ್ನು ಕುರಿತು ದೀರ್ಘವಾಗಿ ಚರ್ಚಿಸಿದ್ದಾರೆ, ವ್ಯಾಖ್ಯಾನಿಸಿದ್ದಾರೆ ಮತ್ತು ವಿಶ್ಲೇಷಿಸಿದ್ದಾರೆ. ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಯನ್ನು ರಾಮಾನುಜನ್ ಅವರು ಇಂಗ್ಲಿಷಿಗೆ ಅನುವಾದಿಸಿದ ಸಂದರ್ಭದಲ್ಲಿ ಅದರ 'ಮುನ್ನುಡಿ'ಯಲ್ಲಿ ಅನುವಾದದ ಉದ್ದೇಶವನ್ನು ಹೀಗೆ ಗುರುತಿಸಿದ್ದಾರೆ. "ಅನುವಾದಕನು ಕೇವಲ ಕೃತಿಯೊಂದನ್ನು ಮಾತ್ರ ಅನುವಾದಿಸಲು ಇಚ್ಛಿಸುವುದಿಲ್ಲ. ಅವನ ಇಚ್ಛೆಯೆಂದರೆ – ಅದು ಅಸಾಧ್ಯವೆಂದು ತೋರಿದರೂ – ಕೃತಿಯೊಡನೆ

ಅನ್ಯಭಾಷೆಯ ಓದುಗನನ್ನೂ ಮೂಲಭಾಷೆಯ ಓದುಗನಂತೆ ಅನುವಾದಿಸುವುದು"(A translator hopes not only to translate a text, but hopes(against all odds) to translate a non-native reader into a native reader)"[೨]

ರಾಮಾನುಜನ್ ಅವರು ತಮ್ಮ ಇನ್ನೊಂದು ಅನುವಾದಿತ ಕೃತಿ 'ಪ್ರಸ್ತಾವನೆ'ಯಲ್ಲಿ ಭಾಷಾಂತರ ಕ್ರಿಯೆಯ ಬಗ್ಗೆ ಮೇಲಿನ ಉದ್ದೇಶವನ್ನೇ ವ್ಯಕ್ತಪಡಿಸಿದ್ದಾರೆ: "ತಮಿಳು ಭಾಷೆಯ ಓದುಗನು ಪ್ರಾಚೀನ ತಮಿಳು ಕವನಗಳನ್ನು ಓದುವಾಗ ಪಡೆಯುವ ಅನುಭವವನ್ನು – ಅನುವಾದವನ್ನು ಓದುವ ಓದುಗ – ತಮಿಳೇತರ ಓದುಗನೂ ಪಡೆಯುವಂತೆ ಮಾಡುವುದು. ಕವನವೊಂದನ್ನು ವಿದೇಶಿ ಭಾಷೆಗೆ ಅನುವಾದಿಸುವವನು, ಅದರೊಟ್ಟಿಗೇ ಆ ವಿದೇಶಿ ಓದುಗನನ್ನು ದೇಶಿ ಓದುಗನಂತೆ ಅನುವಾದಿಸಲು ಪ್ರಯತ್ನಿಸುವುದು(...trying to translate a foreign reader into a native one.)"[೩]

ಈ ಎರಡೂ ಅನುವಾದ ಪ್ರಮೇಯಗಳು ರಾಮಾನುಜನ್ ಅವರ ಅನುವಾದದ ಪರಿಕಲ್ಪನೆಯನ್ನು ಚಿಂತನೆಯನ್ನು ವಿವರಿಸುತ್ತವೆ. ಮೂಲಕೃತಿಯ ಓದುಗನಿಗೆ ಆ ಕೃತಿಯನ್ನು ರೂಪಿಸಿದ ಸಂಸ್ಕೃತಿ, ಸಾಹಿತ್ಯಿಕ ಸಂದರ್ಭ, ಭಾಷೆ, ವ್ಯಾಕರಣ, ಲಯ, ಧ್ವನಿ ಮುಂತಾದ ಅಂಶಗಳೆಲ್ಲಾ ಅಂತಸ್ಥವಾಗಿರುತ್ತವೆ. ಈ ಎಲ್ಲಾ ಅಂಶಗಳನ್ನು ಅನುವಾದಕ ಉದ್ದಿಷ್ಟ / ಲಕ್ಷ್ಯ ಓದುಗನಿಗೆ ತನ್ನ ಅನುವಾದದ ಮೂಲಕ ಒದಗಿಸಬೇಕಾಗುತ್ತದೆ. ಅನುವಾದಿತ ಕೃತಿಗೆ ನೀಡುವ 'ಪ್ರಸ್ತಾವನೆ'ಯಲ್ಲಿ ಆ ಕೃತಿಯ ಚಾರಿತ್ರಿಕ ಸಂದರ್ಭ, ಆ ಕೃತಿಯನ್ನು ರೂಪಿಸಿದ ವೈಚಾರಿಕತೆ, ರಾಜಕೀಯ ಒತ್ತಡ, ಕೃತಿಯ ಸಾಹಿತ್ಯಿಕ, ಸಾಂಸ್ಕೃತಿಕ ವ್ಯಾಖ್ಯಾನ, ಅಡಿಟಿಪ್ಪಣಿ, ಅರ್ಥಕೋಶ ಹೆಚ್ಚಿನ ಓದಿಗೆ ಗ್ರಂಥಗಳ ವಿವರ ಮುಂತಾದ ವಿವರಗಳನ್ನೆಲ್ಲಾ ರಾಮಾನುಜನ್ ಅವರು ಟಿಪ್ಪಣಿಗಳ ಮೂಲಕ ನೀಡುತ್ತಾರೆ. ಯಾವುದೇ ಭಾಷಾಂತರವಾದ ಕೃತಿಗೆ ಈ ಎಲ್ಲಾ ವಿವರಗಳು ಅತ್ಯವಶ್ಯ ಎಂಬುದನ್ನು ರಾಮಾನುಜನ್ ಅವರು ಮನಗಂಡಿದ್ದರು. ಪಠ್ಯದ ಜೊತೆಗೆ ಈ ಬಗೆಯ ಪಠ್ಯೇತರ ವಿವರಗಳು ಆ ಪಠ್ಯದ ಅವಿನಾ ಭಾಗವೆಂದು ರಾಮಾನುಜನ್ ಅವರು ತಿಳಿದಿದ್ದರು. ಅವರ ಯಾವುದೇ ಅನುವಾದಿತ ಕೃತಿಯನ್ನು ನೋಡಿದರೂ ಅವರ ಈ ನಿಲುವು ಗೋಚರವಾಗುತ್ತದೆ. ವಿನಯ ಧಾರವಾಡಕರ್ ಅವರು "ಅನುವಾದಕನು ಕೇವಲ ಪಠ್ಯಗಳನ್ನೇ ಅಲ್ಲದೆ ಓದುಗರು, ಸಂಸ್ಕೃತಿಗಳು, ಪರಂಪರೆಗಳು ಮತ್ತು ತನ್ನ ವ್ಯಕ್ತಿತ್ವ ಇವೆಲ್ಲವನ್ನೂ ರೂಪಕಾತ್ಮಕವಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಒಯ್ಯುವುದರಲ್ಲಿ ತನ್ನನ್ನು ತೊಡಗಿಸಿಕೊಂಡಿರುತ್ತಾನೆ ಎಂಬುದು ರಾಮಾನುಜನ್ ಅವರ ಖಚಿತ ನಿಲುವಾಗಿತ್ತು"[೪] ಎಂದು ಹೇಳಿದ್ದಾರೆ. ರಾಮಾನುಜನ್ ಅವರು ಪದಗಳು, ಪಂಕ್ತಿಗಳು, ವಾಕ್ಯಗಳು, ಪ್ರಕ್ರಿಯೆಗಳು, ಆಶಯಗಳು ಮಾತ್ರವಲ್ಲದೆ ಮೂಲಪಠ್ಯವನ್ನು ರೂಪಿಸುವ ತತ್ವಗಳು, ಆ ಪಠ್ಯದ ಕಾವ್ಯಾತ್ಮಕ

ತಿರುಳು ಇದನ್ನೆಲ್ಲಾ ಅನುವಾದಿಸಲು ತಮ್ಮ ಅನುವಾದಿತ ಕೃತಿಗಳಲ್ಲಿ ಯತ್ನಿಸುವುದನ್ನು ಕಾಣುತ್ತೇವೆ ಎಂದು ವಿನಯ ಧಾರವಾಡಕರ್ ಅವರು ಹೇಳುವ ಮಾತು ಸೂಕ್ತವಾಗಿಯೇ ಇದೆ.

“ಅನುವಾದವು ಮೂಲ ಲೇಖಕನಿಗೆ ನಿಷ್ಠವಾಗಿರುವಂತೆ ಅನುವಾದಕನಿಗೂ ನಿಷ್ಠವಾಗಿರಬೇಕು. ಎಂದರೆ, ಒಂದು ನೆಲೆಯಲ್ಲಿ ಅನುವಾದಿತ ಕೃತಿಯ ಲೇಖಕರು ಇಬ್ಬರು: ಮೂಲ ಲೇಖಕ ಮತ್ತು ಅನುವಾದಕ”[೫] ಎಂದು ಸಿ.ಎನ್.ರಾಮಚಂದ್ರನ್ ಅವರು ಹೇಳುವ ಅಭಿಪ್ರಾಯ ರಾಮಾನುಜನ್ ಅವರ ಅನುವಾದ ಕ್ರಿಯೆಯ ಸಂದರ್ಭದಲ್ಲಿ ಸೂಕ್ತವಾಗಿಯೇ ಅನ್ವಯವಾಗುತ್ತದೆ. ಈ ಬಗೆಯ ‘ಇಬ್ಬಗೆಯ ನಿಷ್ಠೆ’ಯನ್ನು ರಾಮಾನುಜನ್ ಅವರು ಸಹ ಹೇಳುವ ಅವರ ಈ ಮಾತುಗಳಲ್ಲಿ ಗ್ರಹಿಸಬಹುದಾಗಿದೆ: “ಅನುವಾದವು ಮೂಲಕ್ಕಷ್ಟೇ ಅಲ್ಲದೆ ಅನುವಾದಕನಿಗೂ ನಿಷ್ಠೆಯಿಂದ ಇರಬೇಕಾಗುತ್ತದೆ. ಅನುವಾದಕನು ತನ್ನ ನೆರಳಿನಿಂದ ಸಂಪೂರ್ಣವಾಗಿ ಹೊರಬರಲಾಗುವುದಿಲ್ಲ. ಅನುವಾದವೆಂದರೆ, ಅದೊಂದು ಆಯ್ಕೆ, ವ್ಯಾಖ್ಯಾನ, ಅಭಿರುಚಿಯ ದಾಖಲೆ”[೬] ಎಂದಿದ್ದಾರೆ. ಅನುವಾದ ಆದರ್ಶದ ಈ ಅರಿವು ರಾಮಾನುಜನ್ ಅವರಿಗೆ ಇತ್ತು. ರಾಮಾನುಜನ್ ಅವರ ಅನುವಾದ ಪ್ರಕ್ರಿಯೆಯು ಅನೇಕ ದಾರಿಗಳಲ್ಲಿ ಸಾಗುವ ಒಂದು ಸಂಕೀರ್ಣ ಪ್ರಕ್ರಿಯೆ. ಈ ಅನುವಾದದ ವಿಕಾಸದ ಹೊಸ ಹಾದಿಯನ್ನು ತುಳಿದವರು ರಾಮಾನುಜನ್ ಅವರು. ಇದನ್ನು ಅವರು ತಮ್ಮ ಅನುವಾದಿತ ಕೃತಿಗಳ ತಾತ್ವಿಕತೆ ಮತ್ತು ಆನ್ವಯಿಕ ನೆಲೆಗಳಲ್ಲಿ ತೋರಿಸಿಕೊಟ್ಟಿದ್ದಾರೆ. ‘ಈ ಹೊಸ ವಿಕಾಸದ ಪಥದಲ್ಲಿ ಅನುವಾದಕ, ಲೇಖಕ, ಕವಿತೆ ಮತ್ತು ಓದುಗ ಇವರೆಲ್ಲರೂ ಎರಡು ಭಿನ್ನ ಭಾಷೆ, ಭಿನ್ನ ಸಂಸ್ಕೃತಿಗಳ, ಭಿನ್ನ ಚಾರಿತ್ರಿಕ ಸಂದರ್ಭಗಳ ಮತ್ತು ಪರಂಪರೆಗಳ ನಡುವೆ ಅತ್ತ ಇತ್ತ ಚಲಿಸುತ್ತಿರುತ್ತಾರೆ’ ಎಂದು ವಿನಯ ಧಾರವಾಡಕರ ಅವರು ಹೇಳುವ ಅಭಿಪ್ರಾಯವನ್ನು ಇಲ್ಲಿ ಒಪ್ಪಬಹುದಾಗಿದೆ.

ಭಾಷಾಂತರದ ಬಗೆಗಿನ ರಾಮಾನುಜನ್ ಅವರ ಈ ನಿಲುವುಗಳು ಹಾಗೂ ಚಿಂತನೆಗಳ ಹಿನ್ನೆಲೆಯಲ್ಲಿ ಅವರ ಭಾಷಾಂತರಿತ ಕೃತಿಗಳನ್ನು ಪರಿಶೀಲಿಸಬಹುದಾಗಿದೆ. ರಾಮಾನುಜನ್ ಅವರು ಪ್ರಾಚೀನ ತಮಿಳು ಸಂಗಂ ಕಾವ್ಯ, ಕನ್ನಡದ ವಚನ ಸಾಹಿತ್ಯ, ಮಧ್ಯಕಾಲೀನ ಜನಪದ ಕಾವ್ಯ, ಮಧ್ಯಕಾಲೀನ ಜನಪದ ಕಾವ್ಯ, ಭಾರತೀಯ ಮೌಖಿಕ ಪರಂಪರೆಯ ಗದ್ಯ ಕೃತಿಗಳು ಇವುಗಳನ್ನು ಇಂಗ್ಲಿಷಿಗೆ ಅನುವಾದಿಸಿದ್ದಾರೆ. ಈ ಅನುವಾದಿತ ಕ್ಷೇತ್ರದಲ್ಲಿ ಅವರು ಸುಮಾರು ನಾಲ್ವತ್ತು ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಹೀಗೆ ಅನುವಾದ ಮಾಡುವ ಮೂಲಕ ಕನ್ನಡ–ತಮಿಳು–ತೆಲುಗು ಭಾಷೆ ಸಾಹಿತ್ಯಗಳ ಜೊತೆಗೆ ಇಡೀ ದ್ರಾವಿಡ ಸಾಹಿತ್ಯ ಸಂಸ್ಕೃತಿಗಳಿಗೆ ಅಂತಾರಾಷ್ಟ್ರೀಯ ಮಾನ್ಯತೆಯನ್ನು ದೊರಕಿಸಿಕೊಟ್ಟ ಕೀರ್ತಿ ರಾಮಾನುಜನ್ ಅವರಿಗಿದೆ. ಅವರು ಅನುವಾದಿಸಿದ ಪ್ರಮುಖ ಕೃತಿಗಳೆಂದರೆ, The Interior Landscape

(೧೯೬೭, ಪ್ರಾಚೀನ ತಮಿಳು ಸಂಗಂ ಕಾವ್ಯದ ಅನುವಾದ), Speaking of Siva (೧೯೭೩, ೧೨ನೆಯ ಶತಮಾನದ ಕನ್ನಡದ ನಾಲ್ಕು ಪ್ರಮುಖ ವಚನಕಾರರ ವಚನಗಳು), (Hymns for the Drowning) (೧೯೮೧, ಪ್ರಾಚೀನ ತಮಿಳು ಭಾಷೆಯ ನಮ್ಮಾಳ್ವಾರ್ ಅವರ ರಚನೆಗಳ ಅನುವಾದ), Folktales from Indian (೧೯೯೦, ಭಾರತದ ವಿವಿಧ ಭಾಷೆಗಳಲ್ಲಿರುವ ಜಾನಪದ ಕಥೆಗಳ ಅನುವಾದ), Samskara (೧೯೭೬, ಯು.ಆರ್.ಅನಂತಮೂರ್ತಿ ಅವರ ಪ್ರಸಿದ್ಧ ಪ್ರಥಮ ಕಾದಂಬರಿ) ಮತ್ತು A Flowring of Tree and Other Folk Stories(೧೯೯೩, ಕನ್ನಡದ ಜನಪದ ಕಥೆಗಳ ಅನುವಾದ), When God is a Customer-Telugu courtesan songs by Ksetrayya and others(ಹದಿನೇಳು ಮತ್ತು ಹದಿನೆಂಟನೇ ಶತಮಾನದಲ್ಲಿ ಅನ್ನಮಯ್ಯ, ಕ್ಷೇತ್ರಯ್ಯ ರುದ್ರಕವಿ ಇವರುಗಳಿಂದ ರಚಿಸಲ್ಪಟ್ಟ ತೆಲುಗು ಭಕ್ತಿಕಾವ್ಯ) ಇತ್ಯಾದಿ.

ರಾಮಾನುಜನ್ ಅವರು ಅನುವಾದ ಪ್ರಕ್ರಿಯೆಯ ತಾತ್ವಿಕ ಮತ್ತು ಆನ್ವಯಿಕ ನೆಲೆಗಳಲ್ಲಿ ಹೊಸ ದಾರಿಗಳನ್ನು ಹುಡುಕುತ್ತಾ ಹೊರಟಿದುದರಲ್ಲಿ, ಹೊಸಚಿಂತನೆಯನ್ನು ಹುಟ್ಟಿಹಾಕುವುದರಲ್ಲಿ ಮೊದಲಿಗರು ಎಂದರೆ ಉತ್ಪ್ರೇಕ್ಷೆಯಾಗಲಾರದು. ಎಪ್ಪತ್ತರ ದಶಕದವರೆಗೂ ಅನುವಾದ ಪ್ರಕ್ರಿಯೆಯನ್ನು ಕುರಿತ ಚರ್ಚೆ, ಚಿಂತನೆ, ವಾದ, ವ್ಯಾಖ್ಯಾನಗಳು ಯುರೋಪಿನ ಭಾಷೆಗಳ ನಡುವೆ ಅಥವಾ ಸಂಸ್ಕೃತದಿಂದ ಯುರೂಪಿನ ಭಾಷೆಗಳಿಗೆ ಆಗುವ ಅನುವಾದಗಳನ್ನು ಕುರಿತದ್ದೇ ಆಗಿತ್ತು. ಅನಂತರ ರಾಮಾನುಜನ್ ಅವರು ತಮ್ಮ ಅನುವಾದಗಳನ್ನು ಅಂತಾರಾಷ್ಟ್ರೀಯ ವಿದ್ವಾಂಸರ ಗಮನಕ್ಕೆ ತಂದರು. ಇದರ ಬಗ್ಗೆ ಸಿ.ಎನ್.ರಾಮಚಂದ್ರನ್ ಹೇಳುವ ಎರಡು ಅಭಿಪ್ರಾಯಗಳು ರಾಮಾನುಜನ್ ಅವರ ಅನುವಾದದ ಬಗ್ಗೆ ಸೂಕ್ತವಾಗಿವೆ:

೧. “ಮೊದಲ ಬಾರಿಗೆ, ರಾಮಾನುಜನ್ ಭಾರತದ(ಕನ್ನಡ, ತಮಿಳು, ತೆಲುಗು ಇತ್ಯಾದಿ) ಪ್ರಾಂತೀಯ ಭಾಷೆಗಳಿಗೆ ‘ಪ್ರಬಲ’ ಯುರೋಪಿನ(ಈ ಸಂದರ್ಭದಲ್ಲಿ ಇಂಗ್ಲೀಷ್) ಭಾಷೆಗಳಿಗೆ ಆಗುವ ಅನುವಾದ ಪ್ರಕ್ರಿಯೆಯಲ್ಲಿ ಜನ್ಮಿಸುವ ಸಮಸ್ಯೆಗಳನ್ನು ಹಾಗೂ ಅವುಗಳಿಗೆ ತಾವು ಕಂಡುಕೊಂಡ ಪರಿಹಾರಗಳನ್ನು, ಅನುವಾದವನ್ನು ಕುರಿತ ಚರ್ಚೆಗಳನ್ನು ಕೇಂದ್ರಕ್ಕೆ ತಂದರು. ಇನ್ನೂ ಮುಂದುವರಿದು ಹೇಳಬೇಕಾದರೆ, ಪ್ರಾಂತೀಯ ಭಾಷೆಗಳಲ್ಲಿಯೂ ಹೆಚ್ಚಿನ ಭಾರತೀಯರಿಗೆ ಮತ್ತು ಓರಿಯಂಟಲ್ ವಿದ್ವಾಂಸರಿಗೆ ಸಂಪೂರ್ಣವಾಗಿ ಅಪರಿಚಿತವಾಗಿದ್ದ(ವಚನ ಸಾಹಿತ್ಯ, ಸಂಗಂ ಸಾಹಿತ್ಯ, ಇತ್ಯಾದಿ) ಪ್ರಾಚೀನ ಸಾಹಿತ್ಯ ಕೃತಿಗಳನ್ನು ಅನುವಾದಿಸಿ, ಆ ಮೂಲಕ ಆಧುನಿಕ ಪೂರ್ವಭಾರತದಲ್ಲಿಯೂ, ಸಂಸ್ಕೃತವನ್ನು ಹೊರತುಪಡಿಸಿಯೂ ಶ್ರೇಷ್ಠ ಸಾಹಿತ್ಯವಿತ್ತೆಂಬುದನ್ನು ತೋರಿಸಿಕೊಟ್ಟರು. ಇದು ರಾಮಾನುಜನ್ ಅವರಿಂದಾದ ಅಸಾಧಾರಣ ಸಾಧನೆ.”[೬]

೨. "ಭಾರತೀಯ ಹಾಗೂ ಪಾಶ್ಚಾತ್ಯ ಓರಿಯೆಂಟಲಿಸ್ಟ್ ವಿದ್ವಾಂಸರಿಂದ ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟಿದ್ದ ಪ್ರಾಂತೀಯ ಭಾಷೆಗಳ ಜಾನಪದ/ಮೌಖಿಕ ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸಿ, ಆ ಪರಂಪರೆಯ ಕಥೆ-ಗೀತೆಗಳನ್ನು ಅನುವಾದಿಸಿ, ಅವುಗಳನ್ನು ವಿದ್ವತ್ಪೂರ್ಣವಾಗಿ ವ್ಯಾಖ್ಯಾನಿಸಿದವರಲ್ಲಿ ರಾಮಾನುಜನ್ ಮೊದಲನೆಯವರು. ಈ ಸಂದರ್ಭದಲ್ಲಿ ಅವರು ಜನಪ್ರಿಯಗೊಳಿಸಿದ 'ಅಹಂ'-'ಪುರಂ' ಅಥವಾ 'ಹಿರಿಯ ಪರಂಪರೆ-ಕಿರಿಯ ಪರಂಪರೆ'('Akam-Puram' / Great Tradition - Little Tradition') ಇತ್ಯಾದಿ ಪರಿಕಲ್ಪನೆಗಳು ಅನುವಾದ ಕ್ಷೇತ್ರವನ್ನಷ್ಟೇ ಅಲ್ಲದೆ ಜಾನಪದ ಅಧ್ಯಯನ ಕ್ಷೇತ್ರವನ್ನೂ ಪ್ರಭಾವಿಸಿದವು."[೮]

ಸಂಸ್ಕೃತ, ತಮಿಳು, ಕನ್ನಡ, ತೆಲುಗು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರೌಢತೆಯನ್ನು ಪಡೆದಿದ್ದ ರಾಮಾನುಜನ್ ಅವರು ಮೊದಲಿಗೆ ತಮಿಳಿನ ಅಭಿಜಾತ ಸಂಗಂ ಸಾಹಿತ್ಯದ ಪ್ರೇಮಕವನಗಳನ್ನು ಇಂಗ್ಲಿಷಿಗೆ ಅನುವಾದಿಸಿದರು. ಇವುಗಳನ್ನು ಅನುವಾದಿಸಿದರು ಎನ್ನವುದಕ್ಕಿಂತ ಮಿಗಿಲಾಗಿ 'ಮರುಸೃಷ್ಟಿ'(ಟ್ರಾನ್ಸ್‌ಕ್ರಿಯೇಷನ್) ಮಾಡಿದರು ಎಂಬುದೇ ಸರಿ. ಭಾರತೀಯ ಪರಂಪರೆಯಲ್ಲಿ ಇಂದು ನಾವು ಉಪಯೋಗಿಸುವ 'ಅನುವಾದ' ಎಂಬ ಪರಿಕಲ್ಪನೆ ಇರಲಿಲ್ಲ. ಈ ಪರಿಕಲ್ಪನೆ ಬಂದದ್ದು ಪಶ್ಚಿಮದಿಂದ. ಪ್ರಾಚೀನ ಕಾಲದಿಂದ ಬಂದ 'ರಾಮಾಯಣ', 'ಮಹಾಭಾರತ'ಗಳ ಪ್ರಾಂತೀಯ ಭಾಷೆಯಲ್ಲಿ ಬಂದು ಕೃತಿಗಳನ್ನು 'ಮರುಸೃಷ್ಟಿ', 'ಹೊಸ ಕೃತಿ' ಎಂಬ ಪರಿಕಲ್ಪನೆಗಳಲ್ಲಿ ಗುರುತಿಸಲಾಗುತ್ತಿತ್ತು. ಆದರೆ ಸುಜೀತ್ ಮುಖರ್ಜಿಯಂತಹ ವಿದ್ವಾಂಸರು, "ನಿರೀಕ್ಷಿತ ಓದುಗರನ್ನು ಓಲೈಸುವುದಕ್ಕಾಗಿ ಭಾರತೀಯ ಪಠ್ಯಗಳ ಅನುವಾದಕರು ಮೂಲಪಠ್ಯವನ್ನು ತಿದ್ದುವುದು, ಬದಲಾಯಿಸುವುದು ಇತ್ಯಾದಿ ಕಾರ್ಯಗಳನ್ನು ಒಪ್ಪಲು ಸಾಧ್ಯವಿಲ್ಲ" ಎಂದು ವಾದಿಸಿದರೂ, ರಾಮಾನುಜನ್ ಅವರು ಭಾರತೀಯ ಪಠ್ಯಗಳ ಇಂಗ್ಲಿಷ್ ಅನುವಾದಗಳು ಮೂಲಕೃತಿಗಳಿಗೆ ನಿಷ್ಠವಾಗಿಯೂ, ನಿರೀಕ್ಷಿತ ಇಂಗ್ಲಿಷ್ ಬಲ್ಲ ಪಾಶ್ಚಾತ್ಯ ಹಾಗೂ ಪೌರಾತ್ಯ ಓದುಗರನ್ನು ಉದ್ದಿಷ್ಟವನ್ನಾಗಿಟ್ಟುಕೊಂಡು ಅನುವಾದ ಮಾಡಿದ ಪಠ್ಯಗಳೇ ಆಗಿವೆ. ವಿಲಿಯಂ ಜೋನ್ಸ್, "ಸ್ಥಳೀಯರು ತಮ್ಮದೇ ಶಾಸನಗಳನ್ನು, ಸಂಸ್ಕೃತಿಗಳನ್ನು, ಸಂಸ್ಕೃತದ ಪಠ್ಯಗಳನ್ನು ಅನುವಾದಿಸಲು ಅಸಮರ್ಥವಾಗಿರುವುದರಿಂದ ಅವುಗಳನ್ನು ಯುರೋಪಿಯನ್ನರು ಅನುವಾದಿಸುವ ಅವಶ್ಯಕತೆ ಇದೆ" ಎಂದು ಹೇಳಿ ಆತ ಸಂಸ್ಕೃತವನ್ನು ಕಲಿತು ಕಾಳಿದಾಸನ 'ಶಾಕುಂತಲ', 'ಮನುಧರ್ಮಶಾಸ್ತ್ರ' ಮುಂತಾದ ಕೃತಿಗಳನ್ನು ಇಂಗ್ಲಿಷಿಗೆ ಅನುವಾದಿಸಿದ.

ಆದರೆ ರಾಮಾನುಜನ್ ಅವರು ಜೋನ್ಸ್‌ನ ಮಾತನ್ನು ತಮ್ಮ ಅನುವಾದಗಳ ಮೂಲಕ ಭಾರತೀಯ / ಸ್ಥಳೀಯ ವಿದ್ವಾಂಸರೂ ಸಹ ತಮ್ಮ ಪಠ್ಯಗಳನ್ನು ಇಂಗ್ಲಿಷಿಗೆ ಅನುವಾದಿಸಬಲ್ಲರು ಎಂಬುದನ್ನು ತೋರಿಸಿಕೊಟ್ಟರು. ಭಾರತೀಯ ಕನ್ನಡ ವಿದ್ವಾಂಸರಾದ ತೇಜಸ್ವಿನಿ ನಿರಂಜನ ಅವರು ತಮ್ಮ 'ಅನುವಾದಸ್ಥಳ'(Siting Translation) ಎಂಬ ಇಂಗ್ಲಿಷ್ ಕೃತಿ(೧೯೯೨)ಯಲ್ಲಿ

ಭಾರತಕ್ಕೆ ಸಂಬಂಧಿಸಿದಂತೆ ಹೇಗೆ ಯಜಮಾನ ಸಂಸ್ಕೃತಿ ತನ್ನ ಅಧೀನ ಸಂಸ್ಕೃತಿಯನ್ನು ತನ್ನ ದೃಷ್ಟಿಕೋನದಿಂದ ರೂಪಿಸುತ್ತದೆ ಎಂಬುದನ್ನು ಅನುವಾದಗಳ ನೆಲೆಯಲ್ಲಿ ವಿಶ್ಲೇಷಿಸಿ ತೋರಿಸಿಕೊಟ್ಟರು. ಎಡ್ವರ್ಡ್ ಸೈದ್(೧೯೩೫-೨೦೦೩)ನ 'ಆನ್ ಓರಿಯಂಟಲಿಸಂ'(೧೯೭೮) ಕೃತಿಯು ಮಾರ್ಕ್ಸ್‌ವಾದ ಮತ್ತು ನಿರಚನವಾದಗಳ ಪ್ರಭಾವದಿಂದ ರೂಪುಗೊಂಡ ಕೃತಿಯಾಗಿತ್ತು. ತೇಜಸ್ವಿನಿ ನಿರಂಜನ ಅವರ ಈ ಕೃತಿಯ ಮೇಲೆ ಇದು ದಟ್ಟ ಪ್ರಭಾವ ಬೀರಿತು. ಹಾಗಾಗಿ ತೇಜಸ್ವಿನಿ ಅವರು "ಅನುವಾದವೆಂಬುದು ಒಂದು ರಾಜಕೀಯ ಕ್ರಿಯೆ; ಎರಡು ಅಸಮಾನ ಅಧಿಕಾರಾಧಾರಿತ ಸಂಸ್ಕೃತಿಗಳ ನಡುವೆ 'ಯಾಜಮಾನ್ಯ'ಕ್ಕಾಗಿ ನಡೆಯುವ ಕ್ರಿಯೆ" ಎಂದು ಪ್ರತಿಪಾದಿಸಿದರು. ಅವರ ಈ ಅಭಿಪ್ರಾಯ ಬ್ರಿಟಿಷ್ ವಸಾಹತುಶಾಹಿಯ ಯುಗದ ಅನುವಾದಗಳ ಸಂದರ್ಭಕ್ಕೆ ಒಪ್ಪತಕ್ಕದ್ದೇ ಆಗಿದೆ.

೬.೧. The Interior Landscape(೧೯೬೭)

ಇಂಗ್ಲಿಷ್ ಮತ್ತು ಕನ್ನಡ(ಅಥವಾ ತಮಿಳು, ತೆಲುಗು..) ಈ ಎರಡೂ ಭಾಷೆಗಳ ವ್ಯವಸ್ಥೆಗಳು ಶಬ್ದ-ಲಿಪಿ-ಪದಕೋಶ-ವ್ಯಾಕರಣ-ಶೈಲಿ-ಸಂಪ್ರದಾಯಗಳು-ಇತ್ಯಾದಿ ಎಲ್ಲಾ ಘಟಕಗಳ ನೆಲೆಗಳಲ್ಲಿಯೂ ಸಂಪೂರ್ಣವಾಗಿ ಭಿನ್ನವಾಗಿರುತ್ತವೆ. ಇದರ ಪರಿಣಾಮ ಇವೆರಡರ ನಡುವೆ 'ಪದಶಃ ಅನುವಾದ'(ಲಿಟರಲ್ ಟ್ರಾನ್ಸಲೇಷನ್) ಅಸಾಧ್ಯ; ಅದು ಭಾವಾನುವಾದವೇ ಆಗಬೇಕು. ಆದರೆ ಭಾವಾನುವಾದವು ಮೂಲದ ಶಾಬ್ದಿಕ ಆಕೃತಿ, ಅದರ ಕಟ್ಟೋಣ ಹಾಗೂ ಅದರ ಭಾವಾರ್ಥ ಇವೆಲ್ಲಕ್ಕೂ ನಿಷ್ಠೆಯಿಂದಿರಬೇಕು; ಎಲ್ಲದಕ್ಕಿಂತ ಮುಖ್ಯವಾಗಿ, ಮೂಲ ಕನವದ ಅನುವಾದವೂ ಮತ್ತೊಂದು ಸ್ವತಂತ್ರ ಕವನವೇ ಆಗಿರಬೇಕು ಎಂಬುದು ರಾಮಾನುಜನ್ ಅವರ ನಿಲುವಾಗಿತ್ತು. ಅವರು ಆಂತರಿಕ ಪಠ್ಯದ ವಿನ್ಯಾಸವನ್ನು ಗ್ರಹಿಸಿ, ಅದನ್ನು ಲಕ್ಷ್ಯ ಭಾಷೆಯಲ್ಲಿ ಹೇಗೆ ತರುವುದು ಎಂದು ಚಿಂತಿಸುತ್ತಾರೆ. ಅನಂತರ ಆ ಪಠ್ಯದ ಬಾಹ್ಯ ವಿನ್ಯಾಸವನ್ನೂ ಲಕ್ಷ್ಯ ಭಾಷೆಯಲ್ಲಿ ತರಲು ಯತ್ನಿಸುತ್ತಾರೆ. ಹೀಗೆ ರಾಮಾನುಜನ್ ಮೂಲಪಠ್ಯ ಮತ್ತು ಲಕ್ಷ್ಯ ಓದುಗ ಎರಡೂ ಘಟಕಗಳಿಗೂ ನಿಷ್ಠೆಯನ್ನು ತೋರಿ ಅನುವಾದಿಸುವುದನ್ನು ಇಲ್ಲಿ ಅನುವಾದಿತ ತಮಿಳು ಕವನಗಳಲ್ಲಿ ಕಾಣುತ್ತೇವೆ. ಇದು ಪ್ರಾಚೀನ ತಮಿಳು ಕಾವ್ಯಮೀಮಾಂಸೆಯ 'ಅಹಂ' ಮತ್ತು 'ಪುರಂ'(ಆಂತರಿಕ ಮತ್ತು ಬಾಹ್ಯ) ಪರಿಕಲ್ಪನೆಗಳಿಗೆ ಬದ್ಧವಾಗಿ ರಾಮಾನುಜನ್ ಅವರು ತಮ್ಮ ಅನುವಾದ ಕ್ರಿಯೆಯನ್ನು ಪ್ರಾರಂಭಿಸುವುದನ್ನು ನೋಡುತ್ತೇವೆ. 'ದಿ ಇಂಟೀರಿಯರ್ ಲ್ಯಾಂಡ್ ಸ್ಕೇಪ್' ಕೃತಿಗೆ ಅವರು ಬರೆದ 'ಪ್ರಸ್ತಾವನೆ'ಯಲ್ಲಿ 'ಪಠ್ಯದ ವಿವರ ಹಾಗೂ ಪಠ್ಯೇತರ ವಿವರಗಳೆರಡೂ ಒಂದು ಕೃತಿಯನ್ನು ಮೂಲಭಾಷೆ / ಆಕರ ಭಾಷೆಯಿಂದ ಉದ್ದಿಷ್ಟ / ಲಕ್ಷ್ಯ ಭಾಷೆಗೆ ಅನುವಾದಿಸುವಾಗ ಬಹುಮುಖ್ಯ' ಎಂಬ ಉದ್ದೇಶವನ್ನು ರಾಮಾನುಜನ್ ಅವರು ಸ್ಪಷ್ಟಪಡಿಸಿದ್ದಾರೆ.

ಅವರ ಸಾವಿನ ನಂತರ ಪ್ರಕಟವಾದ 'A Flowring Trees and othr stories' ಕೃತಿ ಪ್ರಸ್ತಾವನೆಯಲ್ಲಿ ಅಲೆನ್ ಡಂಡಸ್ ಅವರು ಮತ್ತು ಅವರ ಸಾವಿನ ನಂತರ ಅವರ ಎಲ್ಲಾ ಬಿಡಿ ಪ್ರಬಂಧಗಳನ್ನು ಸಂಪಾದಿಸಿ ಪ್ರಕಟಿಸಿದ 'Ramanujan and his Essays' ಕೃತಿಯ ಪ್ರಸ್ತಾವನೆಯಲ್ಲಿ ವಿನಯ ಧಾರವಾಡಕರ್ ಅವರು ಹೇಳುವ ಹಾಗೆ 'ಹೆಚ್ಚಿನ ಸಂದರ್ಭಗಳಲ್ಲಿ ರಾಮಾನುಜನ್ ಅವರು ತಮ್ಮ ಅನುವಾದಗಳ ೩೦–೪೦ ಕರಡುಗಳನ್ನು ತಯಾರಿಸುತ್ತಿದ್ದರು; ಮತ್ತು ಒಂದು ಪದಪುಂಜ / ಪಂಕ್ತಿಗಳು / ವಾಕ್ಯಗಳು / ಪ್ರತಿಮೆಗಳು ಅನುವಾದವನ್ನು ಕುರಿತು ದಿನಗಟ್ಟಲೆ ಚಿಂತಿಸುತ್ತಿದ್ದರು' ಎಂಬ ಮಾತಿನಲ್ಲಿ ಯಾವುದೇ ಉತ್ಪ್ರೇಕ್ಷೆ ಇರಲಾರದು. ಅವರ ಅನುವಾದಿತ ಕೃತಿಗಳನ್ನು ಓದಿದರೆ ಈ ವಿದ್ವಾಂಸರು ಹೇಳುವ ಅಭಿಪ್ರಾಯಗಳು ನಿಜವೆನ್ನಿಸುತ್ತದೆ.

ಅಹಂ ಪುರಂ ಎನ್ನುವ ಕಲ್ಪನೆಯನ್ನು ಜಾನಪದದಲ್ಲಿ ಬಳಸಿದರು. ಅವರು ಜಾನಪದ ಕಥೆಗಳನ್ನು ಅನುವಾದಕ್ಕೆ ಆಯ್ಕೆ ಮಾಡಿಕೊಂಡಿರುವುದನ್ನು ನೋಡಿದಾಗ ಇದು ನಮಗೆ ತಿಳಿದು ಬರುತ್ತದೆ. ಹೊರಜಗತ್ತಿನ ಮತ್ತು ಒಳಜಗತ್ತಿನ ಕಥೆಗಳು ಹಾಗೂ ಸಾಹಸಪ್ರಧಾನವಾದ ಮತ್ತು ಮಹಿಳಾಪ್ರಧಾನವಾದ ಹಾಗೂ ಪ್ರಕೃತಿಪ್ರಧಾನವಾದ ಕಥೆಗಳ ಆಯ್ಕೆಯೇ ಇದಕ್ಕೆ ಉದಾಹರಣೆಯಾಗಿದೆ.

ತಮಿಳು ಸಾಹಿತ್ಯದಲ್ಲಿ ಅಹಂ ಮತ್ತು ಪುರಂ ಎನ್ನುವ ಕಲ್ಪನೆಯನ್ನು ಒಂದು ವಿರುದ್ಧ ದೃಷ್ಟಿಕೋನದಿಂದ ಚರ್ಚೆಗೆ ಒಳಪಡಿಸಿದರೆ. ರಾಮಾನುಜನ್ ಅವರು ಅದರನ್ನು ವಿಸ್ತರಿಸಿ ಬಳಸಿದರು.

> "ಅಹಂ ಮತ್ತು ಪುರಂ ಅನ್ನು ಒಂದುಗೂಡಿಸಲು ಆಗುವುದಿಲ್ಲ, ಅವುಗಳನ್ನು ಬೇರೆ ಬೇರೆಯಾಗಿಯೇ ಅಧ್ಯಯನ ಮಾಡಬೇಕು ಎಂಬ ಗಾಢಭಾವನೆಯನ್ನು ತಮಿಳು ಸಂಪ್ರದಾಯ ನಮ್ಮಲ್ಲಿ ಮೂಡಿಸಿತ್ತು. ಅನೇಕ ವ್ಯಾಖ್ಯಾನಕಾರರು ಮತ್ತು ವಿದ್ವಾಂಸರು ತಮ್ಮ ಇಡೀ ಜೀವನವನ್ನು ಸಂಶೋಧನೆಯಲ್ಲಿ ಕಳೆದರೂ, ರಾಮಾನುಜನ್ ಅವರಿಗೆ ಅಹಂ ಮತ್ತು ಪುರಂ ಕಾವ್ಯಗಳನ್ನು ಒಟ್ಟಿಗೇ ತರಬಹುದು ಎಂದು ಹೊಳೆದಂತೆ, ಏಕೆ ಹೊಳೆಯಲಿಲ್ಲ? ವಾಸ್ತವವಾಗಿ ಹೀಗೆ ಮಾಡುವ ಮೂಲಕ ರಾಮಾನುಜನ್ ಮರೆತುಹೋದ ಸಂಪ್ರದಾಯವನ್ನೇ ಅನುಸರಿಸುತ್ತಾರೆ. ತಮಿಳು ಕಾವ್ಯಮೀಮಾಂಸೆಯ ಪ್ರಾಚೀನ ಗ್ರಂಥಗಳು ಅಹಂ ಮತ್ತು ಪುರಂ ಎರಡು ಸಂಪ್ರದಾಯವನ್ನು ಅನುಸರಿಸಿದರೂ ಅವು ಮೂರನೆಯ 'ಅಹಪುರಂ' ಬಗ್ಗೆಯೂ ಮಾತಾಡುತ್ತವೆ. ಎ.ಕೆ.ರಾಮಾನುಜನ್ ಕೃತಿಯಲ್ಲಿ ಈ 'ಅಹಪುರಂ' ಕುರಿತು ಪ್ರಶಂಸೆ ಇದೆ. ಈ ದೃಷ್ಟಿ ಇಡೀ ಆಧುನಿಕ ತಮಿಳು ಅಕಡೆಮಿಕ್ ಪ್ರಪಂಚಕ್ಕೆ ಸಾಧ್ಯವಾಗಿರಲಿಲ್ಲ. ರಾಮಾನುಜನ್‌ರಂಥ ಒಬ್ಬ ಕನ್ನಡ ಕವಿ ಮಾಡಿದ್ದನ್ನು ತಮಿಳು ಅಕಡೆಮಿಕ್ ಪ್ರಪಂಚ ಏಕೆ ಮಾಡಲಿಲ್ಲ ಎನ್ನುವುದರ ಬಗ್ಗೆಯೂ ವಿಚಾರ ಮಾಡುವುದು ಮುಖ್ಯ."[೬]

ಅಹಂ ಮತ್ತು ಪುರಂನ ತದ್ವಿರುದ್ಧವಾದ ಅಥವಾ ವಿರುದ್ಧ ದಿಕ್ಕಿನಲ್ಲಿ ಆಲೋಚಿಸುವ ಸಾಹಿತ್ಯ ಸಿದ್ಧಾಂತವನ್ನು ಪ್ರತಿಪಾದಿಸುತ್ತಲೇ ಬಂದಿರುವ ತಮಿಳು ಸಾಹಿತ್ಯಕಾರರು ಸುಮಾರು ೨೦ ಶತಮಾನಗಳು ತಮ್ಮ ಸಂಸ್ಕೃತಿಯೊಳಗೆ ಸಿಕ್ಕಿಕೊಂಡು ಒಂದೇ ತೆರನಾದ ಆಲೋಚನೆಯಲ್ಲಿ ತೊಡಗಿಕೊಂಡಿದ್ದರು. ಪ್ರಾಚೀನ ವ್ಯಾಕರಣ ಹಾಗೂ ಕಾವ್ಯಮೀಮಾಂಸೆಯಾದ 'ತೊಲ್ಗಾಪಿಯಂ'ನ ವರ್ಣನೆಯನ್ನು ಬಿಟ್ಟು ಹೊರಗೆ ಯೋಚಿಸುವ ಗೊಡವೆಗೆ ಹೋಗಲಿಲ್ಲ. ಆದರೆ ರಾಮಾನುಜನ್ ಅವರು ಪಾಶ್ಚಾತ್ಯ ಸಾಹಿತ್ಯ ಮತ್ತು ಸಂಸ್ಕೃತಿಯ ಅಧ್ಯಯನದಿಂದ ಅಂದರೆ ಭಾರತೀಯ ಸಾಹಿತ್ಯದ ಹೊರಗೆ ನಿಂತು ಇದನ್ನು ಗಮನಿಸಿದಾಗ ಈ 'ಅಹಂ' ಮತ್ತು 'ಪುರಂ' ಎರಡನ್ನೂ ಬೆಸೆದು ನೋಡುವ ಒಂದು ಹೊಸ ಆಲೋಚನೆಯನ್ನು ತಮಿಳು ಹಾಗೂ ಜಾಗತಿಕ ಸಾಹಿತ್ಯಕ್ಕೆ ಕೊಟ್ಟರು. ರಾಮಾನುಜನ್ ಅವರು ಕೊಟ್ಟ ಈ ಹೊಸ 'ಅಹಪುರಂ' ಆಲೋಚನೆಯನ್ನು ತಮಿಳು ವಿದ್ವಾಂಸರು ಆಳವಾಗಿ ಅಧ್ಯಯನ ನಡೆಸಿ ಚರ್ಚೆಗೆ ಒಳಪಡಿಸಿದಾಗ ಈಗಾಗಲೇ ತಮಿಳು ಸಾಹಿತ್ಯ ಪರಂಪರೆಯಲ್ಲಿ ಈ ಒಂದು 'ಅಹಂ' ಮತ್ತು 'ಪುರಂ' ಅನ್ನು ಬೆಸೆದು 'ಅಹಂ-ಪುರಂ' ಎನ್ನುವ ಒಂದು ಅಲೋಚನಾಕ್ರಮ ಈಗಾಗಲೇ ತಮಿಳು ಕೃತಿಗಳಲ್ಲಿ ಕಂಡುಬಂದಿರುವುದನ್ನು ಪ್ರಸ್ತುತದಲ್ಲಿ ಗುರುತಿಸಿ ಅಧ್ಯಯನಕ್ಕೆ ಒಳಪಡಿಸುತ್ತಿರುವುದನ್ನು ನಾವು ಕಾಣಬಹುದಾಗಿದೆ. ಇಂದು ತಮಿಳು ವಿದ್ವಾಂಸರಲ್ಲೂ ಹಾಗೂ ಹಲವಾರು ವಿಶ್ವವಿದ್ಯಾಲಯಗಳಲ್ಲೂ 'ತೊಲ್ಗಾಪಿಯಂ' ಅನ್ನು ವಿಸ್ತರಿಸಿ ಎಲ್ಲಾ ಪ್ರಕಾರದ ಸಾಹಿತ್ಯದ ಚಿಂತನೆಗೆ ಒಳಗುಮಾಡುವ ಪ್ರಯತ್ನ ಇಲ್ಲಿ ನಡೆಯುತ್ತಿದೆ. ಹೀಗೆ ರಾಮಾನುಜನ್ ಅವರು ೧ ಮತ್ತು ೩ನೇ ಶತಮಾನದಲ್ಲಿ ರಚಿತವಾದ ತಮಿಳು ಸಂಗಂ ಸಾಹಿತ್ಯವನ್ನು ಅವಲೋಕಿಸುವ ಮತ್ತು ಚರ್ಚಿಸುವ ಒಂದು ಹೊಸ ದೃಷ್ಟಿಕೋನವನ್ನೇ ಸೃಷ್ಟಿಸಿದರು ಎಂದರೆ ತಪ್ಪಾಗಲಾರದು.

ಪುರಾತನ ಸಾಹಿತ್ಯ ಪ್ರಕಾರಗಳಲ್ಲಿ ನಮಗೆ ಮೊದಲು ದೊಕಿರುವ ಸಾಹಿತ್ಯ ಪ್ರಕಾರಗಳೆಂದುರೆ ತಮಿಳು ಮತ್ತು ಸಂಸ್ಕೃತ ಮೂಲದ ಸಾಹಿತ್ಯ ಎಂಬುದು ತಿಳಿದ ವಿಷಯವಾಗಿದೆ. ೧ ಮತ್ತು ೩ನೇ ಶತಮಾನದಲ್ಲಿ ರಚಿಸಲ್ಪಟ್ಟಿದೆ ಎಂದು ಹೇಳಲಾಗುವ ತಮಿಳಿನ ಸಾಹಿತ್ಯ ಕೃತಿಗಳ ಸಂಕಲನ ಅಂದರೆ ತಾಳೆಗರಿಯಲ್ಲಿ ದೊರೆತಂತಹ ಸಾಹಿತ್ಯ. ೧೮ನೇ ಶತಮಾನದಲ್ಲಿ ಈ ತಾಳೆಗರಿಗಳನ್ನು ಪರಿಷ್ಕರಿಸಿ ಮುದ್ರಣಕ್ಕೆ ದೊರೆಯುವಂತೆ ಮಾಡಿದ ತಮಿಳು ವಿದ್ವಾಂಸರು ಯು.ವಿ.ಸ್ವಾಮಿನಾಥ ಅಯ್ಯರ್ ಅವರು. ಈ ತಮಿಳು ಸಾಹಿತ್ಯ ಕೃತಿಗಳ ಮೂಲವನ್ನು 'ಪತ್ತುಪಾಟ್ಟು'(ಹತ್ತು ಹಾಡುಗಳು), 'ಎಟ್ಟುತೊಗೈ'(ಎಂಟು ಸಂಕಲನಗಳು) ಎಂದು ಎರಡು ವಿಭಾಗಗಳನ್ನಾಗಿ ಮಾಡಿದ್ದಾರೆ. ಈ ಎರಡರಲ್ಲೂ ಸುಮಾರು ೨೦೦೦ ಪದ್ಯಗಳಿವೆ. ಅದರಲ್ಲಿ ರಾಮಾನುಜನ್ ಅವರು 'ಎಟ್ಟು ತೊಗೈ'ನ ಒಂದು ಕೃತಿಯಾದ 'ಕುರುಂತೊಗೈ' ಎಂಬ ಕಿರುಪದ್ಯಗಳ ಸಂಕಲನದಿಂದ ೭೬ ಕಿರುಪದ್ಯಗಳನ್ನು ಆಯ್ಕೆ ಮಾಡಿಕೊಂಡು 'The Interior Landscape' ಎಂಬ ಶೀರ್ಷಿಕೆಯಲ್ಲಿ ಇಂಗ್ಲಿಷ್‌ಗೆ ಅನುವಾದ ಮಾಡಿದ್ದಾರೆ. ಈ ಕೃತಿಯನ್ನು ಇಂಡಿಯಾನ ಯೂನಿವರ್ಸಿಟಿ ಪ್ರೆಸ್ ೧೯೬೭ರಲ್ಲಿ ಪ್ರಕಟಣೆ ಮಾಡಿದೆ.

"ಈ ಪದ್ಯಗಳ ಅನುವಾದ ಮಾಡುವಾಗ ನಾನು ಪದಕ್ಕೆ ಪದ ಅನುವಾದ ಮಾಡಿಲ್ಲ. ನನಗೆ ತಿಳಿದ ತಮಿಳು ಮತ್ತು ಇಂಗ್ಲಿಷ್ ಭಾಷಾಜ್ಞಾನದ ಆಧಾರದಲ್ಲಿ ಬಹಳ ದೀರ್ಘವಾಗಿ ಆಳವಾಗಿ ಅಧ್ಯಯನ ಮಾಡಿ ಪದ್ಯದ ಒಳಚೌಕಟ್ಟನ್ನು ಅರ್ಥೈಸಿಕೊಂಡು ಅನುವಾದ ಮಾಡಿದ್ದೇನೆ. ಆ ಪದ್ಯಗಳಿಗೆ ತಪ್ಪದೇ ಒಂದು 'ವಿಶುವಲ್ ಶೇಪ್' ಅನ್ನು ಕೊಡಲು ಪ್ರಯತ್ನಿಸಿದ್ದೇನೆ. ಇದೇ ನನ್ನ ದೃಷ್ಟಿಯಲ್ಲಿ ಮೂಲಕೃತಿ ಮತ್ತು ಅನುವಾದಕೃತಿಗೆ ನೀಡುವ ನ್ಯಾಯ ಎಂದು ಭಾವಿಸುತ್ತೇನೆ" ಎಂದಿದ್ದಾರೆ ರಾಮಾನುಜನ್.

೬.೨. Speaking of Siva(೧೯೭೩)

ರಾಮಾನುಜನ್ ಅವರು ಸ್ಪೀಕಿಂಗ್ ಆಫ್ ಶಿವ ಕೃತಿಯಲ್ಲಿ ಬಸವಣ್ಣನವರ ೪೪ ವಚನಗಳು, ದೇವರ ದಾಸಿಮಯ್ಯನ ೨೮ ವಚನಗಳು, ಮಹಾದೇವಿಯಕ್ಕನ ೪೭ ವಚನಗಳು ಮತ್ತು ಅಲ್ಲಮಪ್ರಭುವಿನ ೩೮ ವಚನಗಳನ್ನು ೧೯೭೩ರಲ್ಲಿ ಇಂಗ್ಲಿಷ್‌ಗೆ ಅನುವಾದ ಮಾಡಿದ್ದಾರೆ. ಈ ಕೃತಿಯಲ್ಲಿ ೪ ಜನ ವಚನಕಾರರ ಬಗ್ಗೆ ಅವರ ವೈಶಿಷ್ಟ್ಯತೆಯನ್ನು ಕುರಿತು ಪರಿಚಯ ಮಾಡಿರುವುದರ ಜೊತೆಗೆ ತಾವು ಬಳಸಿರುವ ಅನುವಾದಿತ ವಚನಗಳಿಗೆ ಪೂರಕವಾಗಿ ವಿವರಣೆ, ಅಡಿಟಿಪ್ಪಣಿಗಳನ್ನು ನೀಡಿದ್ದಾರೆ. William McCormack ಅವರು ೧೯೬೮ರಲ್ಲಿ ಬರೆದ 'On Lingayat Culture' ಎಂಬ ಅಮೂಲ್ಯವಾದ ಲೇಖನವನ್ನು ಸೇರಿಸಿದ್ದಾರೆ. ಈ ಕೃತಿಗೆ ಬರೆದಿರುವ ವಿಸ್ತಾರವಾದ ಪ್ರಸ್ತಾವನೆಯನ್ನು ಓ.ಎಲ್. ನಾಗಭೂಷಣಸ್ವಾಮಿ ಅವರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ.

ಕನ್ನಡದಲ್ಲಿ ಪ್ರಸಿದ್ಧವಾದ ವಚನಗಳನ್ನು ಅನೇಕರು ಅನೇಕ ಭಾಷೆಗಳಿಗೆ ಅನುವಾದ ಮಾಡಿದ್ದಾರೆ. ಆದರೆ ಅವುಗಳಲ್ಲೆಲ್ಲ ಎದ್ದು ನಿಲ್ಲುವ ಕೃತಿ ರಾಮಾನುಜನ್ ಅವರ Speaking of Siva. ದೂರದ ಅಮೆರಿಕೆಯಲ್ಲಿದ್ದ ಕಾರಣ ರಾಮಾನುಜನ್ ಅವರು ಭಾರತೀಯ ಸಾಹಿತ್ಯವನ್ನು ವಸ್ತುನಿಷ್ಠವಾಗಿ ಮತ್ತು ಮಾನಸಿಕ ದೂರದಿಂದ ನೋಡುವ ಹಂತಕ್ಕೆ ತಲುಪಿದ್ದರು. ಹೀಗಾಗಿಯೇ ರಾಮಾನುಜನ್ ಅವರ ವಚನಗಳ ಅನುವಾದ ಒಂದು ಅನನ್ಯತೆಯನ್ನು ಪಡೆದುಕೊಂಡಿದೆ. ಭಾರತೀಯರಲ್ಲದವರಿಗೆ ಭಾರತೀಯ ಸಾಹಿತ್ಯವನ್ನು ಹೇಗೆ ಕಾಣಿಸುವಂತೆ ಮಾಡಬೇಕು ಎನ್ನುವುದಕ್ಕೆ ಇವರ ಅನುವಾದ ಒಂದು ಮಾದರಿ. ಇಲ್ಲಿ ವಚನಕಾರರಲ್ಲಿ ಬರುವ ಅಂಕಿತಗಳನ್ನು ಅದರ ಸಕಲ ಅರ್ಥಗಳೊಂದಿಗೆ ವಾಚ್ಯಾರ್ಥವನ್ನು ಸೇರಿಗೆ ಅನುವಾದ ಮಾಡಿರುವುದು ರಾಮಾನುಜನ್ ಅವರ ವಿಶೇಷ. ಉದಾಹರಣೆಗೆ 'ಕೂಡಲ ಸಂಗಮದೇವ' ಎನ್ನುವ ಪರಿಕಲ್ಪನೆಯನ್ನು ಅವರು Lord of the meeting rivers ಎಂದೇ ಅನುವಾದ ಮಾಡುತ್ತಾರೆ. ಇದು ಹಲವು ಅರ್ಥಪೂರ್ಣ ಚರ್ಚೆಗಳಿಗೆ ಕಾರಣವಾಗಿದೆ. ಇಲ್ಲಿನ ಅನುವಾದದ ಕೆಲವು ಸೂಕ್ಷ್ಮಗಳನ್ನು ಗಮನಿಸಬಹುದು. ಉಳ್ಳವರು ಎನ್ನುವುದಕ್ಕೆ the haves ಎನ್ನುವುದಕ್ಕೆ

ಬದಲು the riches ಎಂದೂ, ಬಡವರೂ ಎನ್ನುವುದಕ್ಕೆ poor man ಎಂದೂ ಅನುವಾದಿಸಿರುವುದು ಸೂಕ್ತವಾಗಿಯೇ ಇದೆ. ಹೀಗೆಯೇ ಭಾರತಿಯೇತರ ಓದುಗರಿಗೆ ಸರಳವಾಗಿ ಗ್ರಹಿಕೆಯಾಗುವಂತೆ ಸುಲಭವಾದ ದಿನ ನಿತ್ಯದ ರೂಢಿಯ ಇಂಗ್ಲಿಷ್ ನುಡಿಗಟ್ಟನ್ನು ಬಳಸುತ್ತಾರೆ.

ರಾಮಾನುಜನ್ ಅವರು ಮುಖ್ಯವಾಗಿ ಈ ೪ ವಚನಕಾರರ ಸಾಮಾಜಿಕವಾದ ಮತ್ತು ಸಾರ್ವಕಾಲಿಕವಾದ ಮೌಲ್ಯಗಳನ್ನು ಪ್ರತಿಪಾದಿಸುವ ವಚನಗಳನ್ನು ಮಾತ್ರ ಆಯ್ದುಕೊಂಡು ಜಾಗತಿಕ ಮಟ್ಟದ ಸಾಹಿತ್ಯದ ಚರಿತ್ರೆಗೆ ಸೇರಿಸುವ ಕೆಲಸವನ್ನು ಮಾಡಿರುತ್ತಾರೆ. ಬಸವಣ್ಣನವರ ಒಂದು ಪ್ರಸಿದ್ಧವಾದ ವಚನ

'ಉಳ್ಳವರು ಶಿವಾಲಯವ ಮಾಡುವರು
ನಾನೇನು ಮಾಡಲಿ ಬಡವನಯ್ಯಾ
ಎನ್ನ ಕಾಲೇ ಕಂಭ, ದೇಹವೇ ದೇಗುಲ.
ಶಿರ ಹೊನ್ನ ಕಳಸವಯ್ಯಾ
ಕೂಡಲಸಂಗಮದೇವ, ಕೇಳಯ್ಯ;
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲಾ!'

ಈ ವಚನವನ್ನು ರಾಮಾನುಜನ್ ಅವರು ಇಂಗ್ಲಿಷ್‌ಗೆ ಕೆಳಕಂಡಂತೆ ಅನುವಾದಿಸಿದ್ದಾರೆ.

The rich
will make temples for Siva
What shall I,
a poor man,
do?
My legs are pillars,
the body the shrine,
the head a cupola
of gold.

Listen, O lord of the meeting rivers,
things standing shall fall
but the moving ever shall stay.

ಅಲ್ಲಮಪ್ರಭುವಿನ ಒಂದು ವಚನ

'ಎತ್ತಣ ಮಾಮರ? ಎತ್ತಣ ಕೋಗಿಲೆ?
ಎತ್ತಣಿಂದೆತ್ತ ಸಂಬಂಧವಯ್ಯ?
ಬೆಟ್ಟದ ನೆಲ್ಲಿಯ ಕಾಯಿ, ಸಮುದ್ರಗೊಳಗಣ ಉಪ್ಪು,
ಎತ್ತಣಿಂದೆತ್ತ ಸಂಬಂಧವಯ್ಯ?
ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯ?

ಈ ವಚನವನ್ನು ರಾಮಾನುಜನ್ ಅವರು ಇಂಗ್ಲಿಷಿಗೆ ಹೀಗೆ ಅನುವಾದ ಮಾಡಿದ್ದಾರೆ:

Where was the mango tree,
where the koilbird?
when were they kin?
Mountain gooseberry
and sea salt:
    when
were they kin?
    and when was I
    kin to the Lord
    of Caves?

ಬಸವಣ್ಣನ ಮಾನವಕೇಂದ್ರಿತ, ಅಲ್ಲಮನ ಅನುಭಾವಕೇಂದ್ರಿತ ವಚನಗಳನ್ನು ರಾಮಾನುಜನ್ ಅವರು ಜಾಗತಿಕ ಮಟ್ಟಕ್ಕೆ ಇಂಗ್ಲಿಷ್‌ಗೆ ಅನುವಾದದ ಮೂಲಕ ಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಹಾಗೆಯೇ ಅಕ್ಕನ ಕಾವ್ಯಮಯವಾದ ಮತ್ತು ಗಹನವಾದ ವಚನಗಳನ್ನು ಮತ್ತು ದೇವರದಾಸಿಮಯ್ಯನ ವೃತ್ತಿಪರವಾದ ವಚನಗಳನ್ನು ಇಂಗ್ಲಿಷ್‌ಗೆ ಅನುವಾದ ಮಾಡುವಲ್ಲಿ ಸಫಲತೆಯನ್ನು ಕಂಡಿದ್ದಾರೆ. ಅಕ್ಕಮಹಾದೇವಿಯ 'ಅಕ್ಕ ಕೇಳವ್ವಾ' ಎಂಬ ಒಂದು ವಚನ:

"ಅಕ್ಕ ಕೇಳವ್ವ ನಾನೊಂದು ಕನಸಕಂಡೆ
ಅಕ್ಕಿಯಡಕೆ ಓಲೆ ತೆಂಗಿನಕಾಯ ಕಂಡೆ
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವ!
ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು
ಚೆನ್ನಮಲ್ಲಿಕಾರ್ಜುನಯ್ಯನ ಕಂಡು ಕಣ್ದೆರೆದೆನು."

ಈ ವಚನವನ್ನು ರಾಮಾನುಜನ್ ಅವರು ಇಂಗ್ಲಿಷ್‌ಗೆ ಹೀಗೆ ಅನುವಾದ ಮಾಡಿದ್ದಾರೆ:

Listen, sister, listen.
I had a dream
I saw rice, betel, palmleaf
and coconut.
I saw an ascetic
come to beg,
white teeth and small matted curls.
I followed on his heels
and held his hand,
he who goes breaking
all bounds and beyond.
I saw the lord, white as jasmine,
and woke wide open.

ರಾಮಾನುಜನ್ ಅವರು ವಚನಗಳನ್ನು ಇಂಗ್ಲಿಷ್‌ಗೆ ಅನುವಾದ ಮಾಡುವಾಗ ಇಂಗ್ಲಿಷ್ ಭಾಷಿಕರನ್ನು ದೃಷ್ಟಿಕೋನದಲ್ಲಿಟ್ಟುಕೊಂಡಿರುವುದು ಈ ಅನುವಾದಿತ ವಚನಗಳ ಸಾರ್ವಕಾಲಿಕ ವಸ್ತು, ದರ್ಶನ ಮತ್ತು ಮೌಲ್ಯಗಳಿಂದ ತಿಳಿದುಬರುತ್ತದೆ. ಇದರ ಅರ್ಥ ಭಾರತೀಯ ಕನ್ನಡೇತರ ಇಂಗ್ಲಿಷ್ ಬಲ್ಲ ಭಾಷಿಕರಿಗೂ ಈ ವಚನಗಳು ತುಂಬಾ ಆಕರ್ಷಕವಾಗಿ ಮತ್ತು ಪ್ರಿಯವಾಗುವುದನ್ನು ಗುರುತಿಸಬಹುದಾಗಿದೆ. ಅವರು ಬಳಸುವ ಇಂಗ್ಲಿಷ್ ಭಾಷೆ ಒಂದು ಬಗೆಯ ಮೌಖಿಕ ಕನ್ನಡದ ಭಾಷೆಗೆ ಸಮೀಪದಂತೆ ಲಯ, ನೇರ ಮತ್ತು ಸರಳತೆಯನ್ನು ಒಳಗೊಂಡಿರುವುದು ವ್ಯಕ್ತವಾಗುತ್ತದೆ.

ವಸಾಹತೋತ್ತರ ಯುಗದಲ್ಲಿ ಅನುವಾದಿಸಿದ ರಾಮಾನುಜನ್ ಅವರ ಅನುವಾದಗಳಲ್ಲಿ ಅವರ 'Speaking of Siva' ಕೃತಿಯ ವಚನಗಳ ಅನುವಾದಗಳನ್ನು ಕುರಿತು ತೇಜಸ್ವಿನಿ ಅವರು, "ರಾಮಾನುಜನ್ ವೀರಶೈವ ಧರ್ಮವನ್ನು ಪ್ಯೂರಿಟನ್ ಹಾಗೂ ಪ್ರಾಟೆಸ್ಟೆಂಟ್ ಧರ್ಮಗಳ ತಾತ್ವಿಕ ಚೌಕಟ್ಟಿನಲ್ಲಿ ವ್ಯಾಖ್ಯಾನಿಸುತ್ತಾರೆ" ಎಂದು ಅಕ್ಷೇಪಿಸುತ್ತಾರೆ. ತೇಜಸ್ವಿನಿ ಅವರು ತಮ್ಮ ಈ ತೀರ್ಮಾನಕ್ಕೆ ಕೊಡುವ ಕೆಲವು ಸಾಕ್ಷ್ಯಗಳು ಹೀಗಿವೆ:

"೧. ವೀರಶೈವ ಮೀಮಾಂಸೆಯಲ್ಲಿ 'ವ್ಯಕ್ತಿ', 'ಮೂಲ', 'ನೇರ ಅನುಭವ', 'ಏಕದೇವೋಪಾಸನೆ', 'ಧರ್ಮ ಪ್ರಚಾರ', 'ಪೂಜಾರಿಗಳಂತಹ ಮಧ್ಯವರ್ತಿಗಳ ಬಗ್ಗೆ ಇರುವ ಆತ್ಮವಿಶ್ವಾಸ' – ಈ ಅಂಶಗಳಿಗೆ ರಾಮಾನುಜನ್ ಅವರು ಕೊಡುವ ಹೆಚ್ಚಿನ ಪ್ರಾಮುಖ್ಯತೆ.

೨. 'ಹೆರೆಸಾರಿ', 'ಬಳ್ಳಿ', 'ಸಂಚು' ಇತ್ಯಾದಿ ಪದಗಳನ್ನು ರಾಮಾನುಜನ್ 'ತಪ್ಪಾಗಿ' ಅರ್ಥೈಸುವಿಕೆ.

೩. ಅಲ್ಲಮನ ಅಂಕಿತನಾಮದ 'ಗುಹೇಶ್ವರ' ಪದವನ್ನು ರಾಮಾನುಜನ್ 'ಲಾರ್ಡ್ ಆಫ್ ದಿ ಕೇವ್ಸ್' ಎಂದು ಅನುವಾದಿಸುವುದು; ಇದು ಅಧೀನರಾಗಿರುವವರ ಹೆಸರುಗಳನ್ನು ಅಲಕ್ಷಿಸುವ ಅಪಭ್ರಂಶಗೊಳಿಸುವ ವಸಾಹತುಶಾಹಿಯ ಧೋರಣೆಯ ಮುಂದುವರಿಕೆ.

೪. ಕ್ರಿಯಾಪದಗಳನ್ನು ಇಲ್ಲವಾಗಿಸುವ ರಾಮಾನುಜನ್ ಅವರ ತಂತ್ರವು ಅವುಗಳನ್ನು ಸರಳಗೊಳಿಸುವುದು.

೫. ಕನ್ನಡದ 'ಉಪಮಾ' ಪದವನ್ನು 'ಮೆಟಫರ್' ಎಂದು ಸಾಮಾನ್ಯೀಕರಿಸುವುದು.

೬. ಮೂಲವಚನದಲ್ಲಿಲ್ಲದ 'ವೈಚಾರಿಕ ವೃತ್ತಿಪ್ರಗತಿ'ಯನ್ನು ಅನುವಾದದಲ್ಲಿ ತರುವುದು." [೧೦]

ವಿನಯ ಧಾರವಾಡಕರ್ ಅವರು, ತೇಜಸ್ವಿನಿಯವರು ರಾಮಾನುಜನ್ ಅವರ ಅನುವಾದದ ಬಗೆಗಿನ ಆಕ್ಷೇಪಗಳ ಬಗ್ಗೆ ತುಂಬಾ ತೀವ್ರವಾಗಿ ತಮ್ಮ ಪ್ರಬಂಧದಲ್ಲಿ ಉತ್ತರಿಸಿದ್ದಾರೆ. ಧಾರವಾಡಕರ್ ಅವರು ತೇಜಸ್ವಿನಿಯವರ ಪ್ರತಿಯೊಂದು ಆಕ್ಷೇಪಗಳಿಗೆ ನೀಡುವ ವಿವರಗಳು ಹೀಗಿವೆ:

"೧. ವಚನಗಳ ಭಿನ್ನ ಆವೃತ್ತಿಗಳಲ್ಲಿ ವಚನಗಳ ಭಿನ್ನತೆ ಇರುವುದನ್ನು ಮತ್ತು ತಾನು ಎಸ್. ಸಿ. ನಂದೀಮಠ್ ಅವರ ಪಠ್ಯವನ್ನಲ್ಲದೆ ಎಲ್.ಬಸವರಾಜು ಸಂಪಾದಿಸಿರುವ 'ವಚನ ಚಂದ್ರಿಕೆ'ಯನ್ನು ಆಧರಿಸಿದ್ದೇನೆ ಎಂದು ರಾಮಾನುಜನ್ ಅವರು ತಮ್ಮ 'Speaking of Siva' ಕೃತಿಯ 'ಪ್ರಸ್ತಾವನೆ'ಯಲ್ಲಿ ಸ್ಪಷ್ಟಪಡಿಸಿರುವುದನ್ನು ತೇಜಸ್ವಿನಿ ಅವರು ದಾಖಲಿಸುವುದಿಲ್ಲ.

೨. ಕೇವಲ ಅಡಿ ಟಿಪ್ಪಣಿಯಲ್ಲಿ, ಒಂದು ಆವೃತ್ತಿಯಲ್ಲಿ 'ಹೆರೆಸಾರಿ' ಇನ್ನೊಂದು ಆವೃತ್ತಿಯಲ್ಲಿ 'ಹೆರಸಾರಿ' ಎಂದಿರುವುದನ್ನು(ಅದೊಂದು ಅಪ್ರಮುಖ ಅಂಶವೆಂಬಂತೆ) ತೋರಿಸುವುದು.

೩. ವೀರಶೈವ ತಾತ್ವಿಕತೆ ಮತ್ತು ಯುರೋಪಿನ ಪ್ರಾಟೆಸ್ಟಂಟ್ – ಪ್ಯೂರಿಟನ್ ತಾತ್ವಿಕತೆ ಇವೆರಡರ ನಡುವೆ ಇರಬಹುದಾದ ಸಾದೃಶ್ಯವನ್ನು ಸೂಚಿಸುವುದು; ಒಂದನ್ನು ಮತ್ತೊಂದರ ಚೌಕಟ್ಟಿಗೆ ಹೊಂದಿಸುವುದು ಎಂದಾಗುವುದಿಲ್ಲ.

೪. ರಾಮಾನುಜನ್ ಅನುವಾದಿಸಿರುವ ಸುಮಾರು ೩೦೦೦ ಕನ್ನಡ–ತಮಿಳು–ತೆಲುಗು ಪದ್ಯಗಳನ್ನು ಅನುಲಕ್ಷಿಸಿ, ಅವರ ಒಂದು ಪದ್ಯದ ಅನುವಾದದ ವಿಶ್ಲೇಷಣೆಯಿಂದ ಇಡಿಯಾಗಿ ಅವರ ಅನುವಾದ–ಪ್ರಕ್ರಿಯೆ ಬಗ್ಗೆ ನಕಾರಾತ್ಮಕ ತೀರ್ಮಾನ ಕೊಡುವುದು." [೧೧]

ಹೀಗೆ ತಾತ್ವಿಕತೆಯನ್ನು ವಿಶ್ಲೇಷಿಸುವ ಧಾರವಾಡಕರ್ ಅವರು ರಾಮಾನುಜನ್ ಬೆಂಜಮಿನ್-ಡೆರಿಡಾ ಅವರು ಮಂಡಿಸುವ ಅನೇಕ 'ವೈಚಾರಿಕ' ವಿಚಾರಗಳನ್ನು ಒಪ್ಪಿಕೊಳ್ಳುತ್ತಾರೆಂದು ಹೇಳುತ್ತಾರೆ. ಆದರೆ ತೇಜಸ್ವಿನಿ ಅವರದು, ಧಾರವಾಡಕರ್ ಅವರದು ಒಂದೊಂದು ಬಗೆಯ ವ್ಯಾಖ್ಯಾನವಾದರೆ ರಾಮಾನುಜನ್ ಅವರ ಅನುವಾದದ ವ್ಯಾಖ್ಯಾನವೇ ಬೇರೆಯಾಗಿದೆ. ಅವರಿಗೆ ನಿರಚನವಾದ ಚಿಂತನೆಯ ಬಗ್ಗೆ ಅಸ್ಪಷ್ಟತೆ, ಅನುಮಾನಗಳು ಇದ್ದವು. ಇದರ ಬಗ್ಗೆ ಅವರೇ ಹೇಳಿಕೊಂಡಿರುವ ಮಾತುಗಳು ಸಿಗುತ್ತವೆ. ಆದರೆ ಸಿ.ಎನ್.ರಾಮಚಂದ್ರನ್ ಅವರು, "ರಾಮಾನುಜನ್ ಅವರು ಓದುಗರ ಪ್ರಶ್ನೆ ಬಂದಾಗ ಬೆಂಜಮಿನ್‌ಗಿಂತ ಭಿನ್ನವಾಗುತ್ತಾರೆ. ಅವರಿಗೆ ಮೂಲಪಠ್ಯದ ಅರ್ಥ, ಆಕೃತಿ ಮತ್ತು ಸಂಸ್ಕೃತಿ ಹೇಗೆ ಮುಖ್ಯವೋ ಹಾಗೆಯೇ ಅನುವಾದಿತ ಕೃತಿಯ ಓದಗನೂ ಮುಖ್ಯ. ಎಂದರೆ, ಪಠ್ಯವೊಂದನ್ನು ಒಂದು ಸಂಸ್ಕೃತಿಯಿಂದ ಇನ್ನೊಂದು ಸಂಸ್ಕೃತಿಗೆ ಒಯ್ಯುವುದು ಮತ್ತು ಅನುವಾದ ಓದುಗನಿಗೆ ಮೂಲಪಠ್ಯದ ಓದುಗನ ಅಂತಸ್ಥ ಗ್ರಹಿಕೆಗಳನ್ನು ಸಂವಹಿಸುವುದು ಹೇಗೆ ಎಂಬುದೇ ಅವರನ್ನು ಸದಾ ಕಾಡುವ ಸಮಸ್ಯೆ; ಹಾಗೆಯೇ, ರಾಮಾನುಜನ್ 'ನಿರಚನ ಚಿಂತನೆ'ಯನ್ನು ಗಂಭೀರವಾಗಿ ಪಡಿಗಣಿಸುವುದಿಲ್ಲ"[೧೨] ಎಂದು ಹೇಳುವ ಮಾತುಗಳು ರಾಮಾನುಜನ್ ಅವರ ಅನುವಾದ ಕ್ರಿಯೆಯ ಉದ್ದೇಶ ಹಾಗೂ ಸಾಧ್ಯತೆಯನ್ನು ಅರ್ಥ ಮಾಡಿಕೊಳ್ಳಲು ಬಹುಮುಖ್ಯವಾಗುತ್ತವೆ.

ಎ. ಕೆ. ರಾಮಾನುಜನ್ 'Speaking of Siva' ಅನುವಾದ ಕೃತಿಗೆ ಬರೆದಿರುವ ಪ್ರಸ್ತಾವನೆ ಅನೇಕ ಕಾರಣಗಳಿಗಾಗಿ ಬಹು ಮುಖ್ಯವಾದುದು. ರಾಮಾನುಜನ್ ಅವರೇ ಮಾಡಿಕೊಂಡ ಕಿರುಪರಂಪರೆ(ಲಿಟಲ್ ಟ್ರೆಡೀಷನ್) ಮತ್ತು ಮಹಾಪರಂಪರೆ(ಗ್ರೇಟರ್ ಟ್ರೆಡೀಷನ್) ವರ್ಗೀಕರಣವನ್ನು ಆಧರಿಸಿದ ಮತ್ತು 'ಭಾರತೀಯ ಎನ್ನುವ ಚಿಂತನಾಕ್ರಮ ಎಂಬುದಿದೆಯೇ?' ಎನ್ನುವ ಮೂಲ ಸೈದ್ಧಾಂತಿಕ ಪ್ರಶ್ನೆಗಳೆರಡನ್ನೂ ರಾಮಾನುಜನ್ ಇಲ್ಲಿ ಚರ್ಚಿಸುತ್ತಿರುವ ಹಾಗೆ ಕಾಣಿಸುತ್ತದೆ. ಮೇಲ್ನೋಟಕ್ಕೆ ವಚನ ಸಾಹಿತ್ಯವು ಅಭೂತಪೂರ್ವ, 'ನ ಭೂತೋ ನ ಭವಿಷ್ಯತಿ' ಎನ್ನುವ ಅಸಾಧಾರಣ ನೆಲೆಯದ್ದಾಗಿ ಕಾಣುತ್ತದೆ. ಆದರೆ ಭಾರತೀಯ ಸಮುದಾಯದಲ್ಲಿ ಅದರಲ್ಲೂ ಮುಖ್ಯವಾಗಿ ಮೌಖಿಕ ಪರಂಪರೆಯಲ್ಲಿ ನಿರಂತರವಾಗಿ ಇರುವ ಜನಪರ ನಿಲುವುಗಳ ಸ್ಫೋಟವಾಗಿ ವಚನ ಸಾಹಿತ್ಯವನ್ನು ನೋಡಲು ಸಾಧ್ಯವಿದೆ.

ಎಂದರೆ ಯಾವ ಮಹಾಪರಂಪರೆ ಭಿತ್ತಿಯಲ್ಲಿ ಭಾರತೀಯ ಸಾಹಿತ್ಯವನ್ನು, ಅದರ ಗುಣ ಲಕ್ಷಣಗಳನ್ನು ಚರ್ಚಿಸುತ್ತಾ ಅದೇ ಭಾರತೀಯ ಸಾಹಿತ್ಯದ ಪ್ರಧಾನಧಾರೆ ಎನ್ನುವ ಸಂಗತಿಯನ್ನು ಸ್ಥಾಪಿಸಲಾಗಿದೆಯೋ ಅದಕ್ಕೆ ತದ್ವಿರುದ್ಧವಾದ, ಸಂಪೂರ್ಣವಾಗಿ ದಮನಿತರ ಧನಿಯಾಗಿರುವ ಸಾಹಿತ್ಯ ಪರಂಪರೆಯೂ ಒಂದು ಭಾರತೀಯ ಸಾಹಿತ್ಯ ಪರಂಪರೆಯಲ್ಲಿದೆ. ಆದರೆ ಅದನ್ನು 'ಕಿರು ಪರಂಪರೆ' ಎಂದು ಗುರುತಿಸುವ ಕ್ರಮದಲ್ಲಿಯೇ ಮೂರ್ತವಾದ ಮತ್ತು ಅಮೂರ್ತವಾದ

ಸಾಂಸ್ಕೃತಿಕ ರಾಜಕಾರಣ ಒಂದು ಕೆಲಸ ಮಾಡುತ್ತಿರುತ್ತದೆ. ಸಾಹಿತ್ಯ ಮತ್ತು ಪ್ರತಿಷ್ಠಿತ ಶಕ್ತಿಯ ನಡುವಿರುವ ಸಂಬಂಧವು ಪ್ರಧಾನಧಾರೆಯೆಂದು ಗುರುತಿಸಲಾಗುವ ಸಾಹಿತ್ಯ ಪರಂಪರೆಗೆ ಕಾವ್ಯ ಮೀಮಾಂಸೆಯ ಊರೆಗೋಲನ್ನೂ ಶಕ್ತವಾಗಿ ಕೊಟ್ಟುಬಿಟ್ಟಿರುತ್ತದೆ. ರಾಜಪ್ರಭುತ್ವದ ಸಂದರ್ಭದಲ್ಲಿ ಅದೊಂದು ಪ್ರಶ್ನಾತೀತವಾದ ಮೌಲ್ಯ ಮತ್ತು ಮಾದರಿ ಎರಡೂ ಆಗಿಬಿಡುವುದು ಅತ್ಯಂತ ಸಹಜ. ಇಂಥ ಸನ್ನಿವೇಶದಲ್ಲಿ ಕಿರುಪರಂಪರೆಯ ಜಲಮೂಲಗಳು ಅಲ್ಲಲ್ಲಿ ನಮಗೆ ಕಾಣಿಸುತ್ತಾ ಹೋಗುತ್ತವೆ. ಈ ಜಲಕಣ್ಣುಗಳನ್ನು ಒಂದರ ಜೊತೆ ಒಂದು ಜೋಡಿಸುತ್ತಾ ಹೋದರೆ ಇನ್ನೊಂದು ಭಾರತೀಯ ಸಾಹಿತ್ಯ ಪರಂಪರೆಯ ಚಹರೆಗಳು ನಮಗೆ ಸ್ಪಷ್ಟವಾಗಿ ಕಾಣುತ್ತಾ ಹೋಗುತ್ತವೆ.

ರಾಮಾನುಜನ್ ಅವರು ಕನ್ನಡದ ವಚನ ಮತ್ತು ತಮಿಳಿನ ಸಂಗಂ ಸಾಹಿತ್ಯವನ್ನು ತಮ್ಮ ಅನುವಾದಕ್ಕೆ ಆರಿಸಿಕೊಂಡಿರುವುದರ ಹಿಂದೆ ಈ ಉದ್ದೇಶ ಸ್ಪಷ್ಟವಾಗಿ ಕಾಣಿಸುತ್ತದೆ. ತಮ್ಮ ಪ್ರಸ್ತಾವನೆಯಲ್ಲಿ ರಾಮಾನುಜನ್ ಅವರು ಚರ್ಚೆಗೆ ಎತ್ತಿಕೊಳ್ಳುವ ಪ್ರಶ್ನೆಗಳು ಕೂಡ ಇದಕ್ಕೆ ಪೂರಕವಾಗಿಯೇ ಇವೆ. ಆರಂಭದಲ್ಲೇ ಅವರು ಎತ್ತಿಕೊಳ್ಳುವ ವಚನ 'ಉಳ್ಳವರು ಶಿವಾಲಯವ ಮಾಡುವರು' ವಚನ ಸಾಹಿತ್ಯದ ಆಶಯಗಳ ಪ್ರಾತಿನಿಧಿಕ ರೂಪದಂತಿರುವ ಈ ವಚನವನ್ನು ಕನ್ನಡೇತರರಿಗೆ ಮತ್ತು ಅಭಾರತೀಯರಿಗೆ ಪರಿಚಯಿಸಬೇಕಾದ ಸಂದರ್ಭದಲ್ಲಿ ಮೊದಲ ಮಾತುಗಳಲ್ಲೇ ರಾಮಾನುಜನ್ ಇದನ್ನು ಪ್ರಾಟೆಸ್ಟಂಟ್ ಚಳುವಳಿಗೆ ಹೋಲಿಸುತ್ತಾರೆ. ಈ ಮೂಲಕ ವಚನ ಚಳುವಳಿಯ ಸ್ಥೂಲ ರೂಪವೊಂದನ್ನು ಓದುಗರಿಗೆ ಪರಿಚಯಿಸುವಲ್ಲಿ ಯಶಸ್ವಿಯಾಗುತ್ತಾರೆ. ನಾವಿಲ್ಲಿ ಗಮನಿಸಬೇಕಾಗಿರುವುದು ವಚನ ಚಳುವಳಿಯನ್ನು ಜಾಗತಿಕ ನೆಲೆಯಲ್ಲಿ ಪರಿಚಯಿಸುವ, ಸ್ಥಾಪಿಸುವ ಮತ್ತು ಅದಕ್ಕೆ ಸಲ್ಲಬೇಕಾದ ಗೌರವ ಮತ್ತು ಸ್ಥಾನವನ್ನು ಕಲ್ಪಿಸಿಕೊಡುವುದರ ಬಗೆಗೆ ರಾಮಾನುಜನ್ ಅವರಿಗಿದ್ದ ಆಸ್ಥೆ ಮತ್ತು ಬದ್ಧತೆಯನ್ನು.

ಅನನ್ಯವಾದ ಸಾಹಿತ್ಯ ಘಟ್ಟವೊಂದನ್ನು ಪರಿಚಯಿಸುವ ಕಾವ್ಯಜೀವಿಯ ಉತ್ಸಾಹವನ್ನೂ ಮೀರಿದ ಸಂಗತಿಗಳು ರಾಮಾನುಜನ್ ಅವರಿಗೆ ಮುಖ್ಯವಾಗಿದ್ದವು ಎನ್ನುವುದು ಇಲ್ಲಿ ಸ್ಪಷ್ಟ. ಸಾಹಿತ್ಯ ಅಭಿವ್ಯಕ್ತಿಗೆ ಸಾಧ್ಯವಾಗುವ ಸಾಂಸ್ಕೃತಿಕ, ಸಾಮಾಜಿಕ ಮತ್ತು ರಾಜಕೀಯ ನೆಲೆಗಳ ಬಗೆಗೆ ರಾಮಾನುಜನ್ ಅವರಿಗಿದ್ದ ನಂಬಿಕೆಯನ್ನು ಇದು ಹೇಳುತ್ತದೆ. ಯಾವ ದೇಗುಲ ಮತ್ತು ಪುರೋಹಿತಶಾಹಿ ಭಾರತೀಯ ಸಮುದಾಯದ ಅದರಲ್ಲೂ ಬಹುಸಂಖ್ಯಾತ ಶೋಷಿತ ಸಮುದಾಯಗಳ ಆಮಿಷ ಮತ್ತು ಸವಾಲು ಎರಡೂ ಆಗಿದೆಯೋ ಅದನ್ನು ಬಸವಣ್ಣ ಒಡೆಯುವುದರ ಬಗೆಗೆ ರಾಮಾನುಜನ್ ಅವರಿಗಿರುವ ರೋಮಾಂಚನ ಓದುಗರ ಅನುಭವಕ್ಕೆ ಬರುವ ಸ್ವರೂಪದಲ್ಲಿದೆ. ಇದೇ ಪ್ರಸ್ತಾವನೆಯ ಮುಂದುವರಿದ ಭಾಗದಲ್ಲಿ ರಾಮಾನುಜನ್ ಮಧ್ಯಸ್ಥಿಕೆಯನ್ನು ನಿರಾಕರಿಸಿದ ದರ್ಶನವೆಂದು ವಚನ ಸಾಹಿತ್ಯವನ್ನು ಗುರುತಿಸುತ್ತಾರೆ.

ದೇವಾಲಯ ಎನ್ನುವುದನ್ನೇ ಒಂದು 'ಮಿಥ್' ಎಂದು ಗ್ರಹಿಸುವ ಬಸವಣ್ಣ ಆ 'ಮಿಥ್' ಅನ್ನು ಒಡೆಯುವುದರ ಮೂಲಕವೇ ಭಾರತೀಯ ಸಾಮಾಜಿಕ ಮತ್ತು ಧಾರ್ಮಿಕ ಮೌಲ್ಯ ವ್ಯವಸ್ಥೆಗಳೆರಡನ್ನೂ ಭೇದಿಸುವ ಪ್ರಯತ್ನವನ್ನು ಮಾಡುತ್ತಿದ್ದಾನೆ. ಈ ಒಡೆಯುವಿಕೆಯು ಇನ್ನೊಂದು ಹೊಸದರ ಪ್ರತಿಪಾದನೆಯೂ ಆಗುತ್ತದೆ. ನಿಜವಾದ ಕ್ರಾಂತಿ ಎನ್ನುವುದು ಒಂದರ ವಿಸರ್ಜನೆಯೂ ಮತ್ತೊಂದರ ಸ್ವೀಕಾರವೂ ಆಗಿರುತ್ತದೆ. ಕೇವಲ ವಿಸರ್ಜನೆಯನ್ನು ಮಾತ್ರ ಪ್ರತಿಪಾದಿಸುವವರು ನಿಜವಾದ ಅರ್ಥದಲ್ಲಿ ಕ್ರಾಂತಿಕಾರಿಗಳಲ್ಲ. ಯಾರು ಅದಕ್ಕೆ ಪರ್ಯಾಯವನ್ನು ಕಟ್ಟಿಕೊಡಬಲ್ಲರೋ ಅವರು ಮಾತ್ರ ದಾರ್ಶನಿಕರಾದರು. ಬಸವಣ್ಣನಿಗಿದ್ದ ಈ ದಾರ್ಶನಿಕ ಶಕ್ತಿಯನ್ನು ಇದೊಂದೇ ವಚನದ ಚರ್ಚೆಯ ಮೂಲಕವೇ ರಾಮಾನುಜನ್ ಘನವಾಗಿ ಸ್ಥಾಪಿಸಿಬಿಡುತ್ತಾರೆ.

ದೇಹವೇ ದೇವಾಲಯವಾಗುವ ಅದ್ಭುತವಾದ ಮತ್ತು ಜೀವಂತವಾದ ಪ್ರಕ್ರಿಯೆಯನ್ನು ಬಸವಣ್ಣ ಹೇಳುತ್ತಾನೆ ಎನ್ನುವುದರ ಬಗೆಗೆ ರಾಮಾನುಜನ್ ಅವರಿಗೆ ಅಪಾರ ಗೌರವ. ಒಬ್ಬ ಸಾಧಾರಣ ವಿದ್ವಾಂಸರಿಗೆ ವಚನಗಳ ಕಾವ್ಯದ ಸೌಂದರ್ಯವೇ ಮೊದಲನೆಯದ್ದು. ಅವುಗಳಿಗಿರಬಹುದಾದ ಜನಪರ ಆಶಯಗಳು ಅವರಿಗೆ ಎರಡನೆಯದ್ದಾಗಿ ಕಾಣುವುದು ಸಹಜ. ರಾಮಾನುಜನ್ ಮಾತ್ರ ವಚನಗಳ ಸಮಾಜೋರಾಜಕೀಯ ಆಶಯಗಳೇ ಪ್ರಧಾನ ಎನ್ನುವಂತೆಯೇ ತಮ್ಮ ಪ್ರಸ್ತಾವನೆಯನ್ನು ಆರಂಭಿಸುತ್ತಾರೆ. ಇಡೀ ವಚನ ಭಕ್ತನೊಬ್ಬ 'ಆಗು'ವ ಸಾವಯವ ಪ್ರಕ್ರಿಯೆಯನ್ನು ಈ ವಚನ ಹೇಳುತ್ತಲೇ ಅದು ಇನ್ನೊಂದನ್ನು ಮುರಿಯುತ್ತಿದೆ ಎನ್ನುವುದನ್ನೂ ನೇಪಥ್ಯದಲ್ಲಿ ಹೇಳುತ್ತಾ ಹೋಗುತ್ತದೆ. ಈ ವಚನ ವ್ಯಕ್ತಿಗತವಾದದ್ದೂ ಹೌದು, ಸಾರ್ವಜನಿಕವಾದದ್ದೂ ಹೌದು. ಬಸವಣ್ಣ ತಾನು ಆ ಮೌಲ್ಯವ್ಯವಸ್ಥೆಯಿಂದ ಪಡೆಯುವ ಬಿಡುಗಡೆಯಷ್ಟೇ ಜೊತೆಗಾರರು ಪಡೆಯುವ ಬಿಡುಗಡೆಯೂ ಮುಖ್ಯ ಎನ್ನುವುದನ್ನು ಇಲ್ಲಿ ಧ್ವನಿಸುತ್ತಿದ್ದಾನೆ. ಜಂಗಮ ಎನ್ನುವ ಅಳಿವಿಲ್ಲದ ತತ್ವವು ಇಲ್ಲಿ ಮನುಷ್ಯ ಮತ್ತು ದೈವದ ನಡುವೆ ಏರ್ಪಡಬಹುದಾದ ಒಂದು ಸಖ್ಯವಾಗಿ, ಸಂಬಂಧವಾಗಿ ಕಾಣಿಸುತ್ತಾ ಹೋಗುತ್ತದೆ.

ಈ ಇಡೀ ಪ್ರಕ್ರಿಯೆಯನ್ನು ರಾಮಾನುಜನ್ ಕಿರುಪರಂಪರೆಯು ಬಹುಸಂಖ್ಯಾತರನ್ನೂ ಅವರ ನಿಲುವುಗಳನ್ನೂ ಭಾಷಾಂತರಗೊಳಿಸುವ ಒಂದು ಅಪೂರ್ವ ಕ್ರಿಯೆ ಎನ್ನುವಂತೆ ವ್ಯಾಖ್ಯಾನಿಸುತ್ತಾರೆ. ಮಾತ್ರವಲ್ಲ ವಚನ ಮತ್ತು ಹಿಂದೂಧರ್ಮದ ನಡುವಿನ ಬಿಕ್ಕಟ್ಟಿನ ಸಂಬಂಧವನ್ನೂ ಸೂಕ್ಷ್ಮವಾದ ಅವಲೋಕನಕ್ಕೆ ಒಳಗುಮಾಡುತ್ತಾರೆ. ಜಾತಿ ಮತ್ತು ವರ್ಗಗಳನ್ನು ನಿರಾಕರಿಸುವ ಇವರ ನಿಲುವನ್ನು ಅದರ ವಿಶಿಷ್ಟತೆಯಲ್ಲಿ ಮತ್ತು ಅದಕ್ಕಿರುವ ಬೌದ್ಧಿಕ ಸ್ಪಷ್ಟತೆಯಲ್ಲಿ ರಾಮಾನುಜನ್ ಗುರುತಿಸುತ್ತಾರೆ. ಪ್ರಧಾನಧಾರೆಯ ಕಣ್ಕಟ್ಟುಗಳನ್ನು ಕಿರುಪರಂಪರೆಗಳು ಹೇಗೆ ಕಿತ್ತು ಹಾಕುತ್ತವೆ ಎನ್ನುವುದನ್ನು ಈ ಪ್ರಸ್ತಾವನೆ ಚರ್ಚಿಸುತ್ತದೆ.

ಈ ಪ್ರಸ್ತಾವನೆಯ ಇನ್ನೊಂದು ಮುಖ್ಯ ಆಯಾಮವೆಂದರೆ ಭಾರತೀಯ ಕಾವ್ಯಮೀಮಾಂಸೆಗೆ ಎದುರಾಗಿ ಮೌಖಿಕ ಕಾವ್ಯಪರಂಪರೆಯನ್ನು ರಾಮಾನುಜನ್ ಸ್ಥಾಪಿಸುವ ಪರಿ. ಅರವತ್ತರ

ದಶಕದಲ್ಲಿ ರಾಮಾನುಜನ್ ಅದೆಷ್ಟು ತಯಾರಿಯಲ್ಲಿ ಇದನ್ನು ಮಾಡಿದ್ದಾರೆಂದರೆ ಈಗಲೂ ಮೌಖಿಕ ಕಾವ್ಯಮೀಮಾಂಸೆಯನ್ನು ಕುರಿತ ಅತ್ಯುತ್ತಮ ಸಂಗತಿಗಳು ಈ ಪ್ರಸ್ತಾವನೆಯಲ್ಲಿವೆ. ಕೆಲವು ಮುಖ್ಯರಾದ ಪಾಶ್ಚಾತ್ಯ ವಿದ್ವಾಂಸರ ನೆರವನ್ನು ಪಡೆದು ವಚನ ಸಾಹಿತ್ಯವನ್ನು ಮತ್ತು ಅದರ ಕಾವ್ಯಮೀಮಾಂಸೆಯ ಲಕ್ಷಣಗಳನ್ನು ಗುರುತಿಸುವ ಪ್ರಯತ್ನವನ್ನು ರಾಮಾನುಜನ್ ಇಲ್ಲಿ ಮಾಡುತ್ತಾರೆ. ಜನರಿಂದ ಜನರಿಗಾಗಿ ಹುಟ್ಟಿದ ವಚನಗಳು ಅಪ್ಪಟ ಕಾವ್ಯಾಭಿವ್ಯಕ್ತಿಗಳಾಗಿರುವುದರ ಹಿಂದೆ ಅವರ ಅನುಭವದ ತೀವ್ರತೆ ಮತ್ತು ಪ್ರಾಮಾಣಿಕತೆಯನ್ನು ಇಲ್ಲಿ ಗುರುತಿಸಲಾಗುತ್ತದೆ. ದೇವರನ್ನು ಕುರಿತ ಪ್ರೀತಿ ಎನ್ನುವುದು ಕರಾರುಗಳೇ ಇಲ್ಲದ ಮತ್ತು ಯಾವುದೇ ಬಗೆಯ ಸಾಮಾಜಿಕ ಮತ್ತು ರಾಜಕೀಯ ನಿರ್ಬಂಧಗಳಿಗೆ ಒಳಗಾಗುವಂತಹ ಸಂಗತಿಯಲ್ಲ ಎನ್ನುವುದನ್ನು ರಾಮಾನುಜನ್ ಇಲ್ಲಿ ಒತ್ತು ಕೊಟ್ಟು ಹೇಳುತ್ತಾರೆ.

ಈ ಇಡೀ ಪ್ರಸ್ತಾವನೆಯು ಅಂತಿಮವಾಗಿ ಕಾಲಾತೀತವಾದ ಸಾಹಿತ್ಯವೆನ್ನುವುದು ಬಹುಸಂಖ್ಯಾತರಾದ ದಮನಿತರ ಪರವಾಗಿಯೇ ಇರುತ್ತದೆ ಎನ್ನುವ ಸತ್ಯವನ್ನು ಧ್ವನಿಸುತ್ತದೆ. ಇದೂ ಕಾಲಾತೀತವಾದದ್ದೂ ಹೌದು. ಸಾರ್ವತ್ರಿಕವಾದದ್ದೂ ಹೌದು. ಜಗತ್ತಿನ ಬೇರೆ ಬೇರೆ ಸಂಸ್ಕೃತಿ ಮತ್ತು ಭಾಷೆಗಳ ಜನ ಇದನ್ನು ಓದಬೇಕು ಮಾತ್ರವಲ್ಲ, ಇದರೊಂದಿಗೆ ಅವರಿಗೆ ಕರುಳಬಳ್ಳಿಯ ಸಂಬಂಧ ಏರ್ಪಡುವುದು ಸಾಧ್ಯ ಎನ್ನುವ ಆಸೆ ಮತ್ತು ನಂಬಿಕೆಯಲ್ಲಿ ರಾಮಾನುಜನ್ ಈ ಅನುವಾದವನ್ನು ಕೈಗೆತ್ತಿಕೊಂಡಿದ್ದಾರೆ. ಕನ್ನಡ ಭಾಷೆಯಲ್ಲಿರುವ ವಚನಗಳು ಜಗತ್ತಿನ ಯಾವುದೇ ಮೂಲೆಯ ಪ್ರಜ್ಞಾವಂತ ಮಾನವೀಯ ಓದುಗರನ್ನು ತಲುಪಬಲ್ಲವು, ಅವರ ಬುದ್ಧಿ ಭಾವಗಳನ್ನು ಆವರಿಸಿಕೊಳ್ಳಬಲ್ಲವು. ಈ ಮೂಲಕ ವಚನಕಾರರ ಆಶಯಗಳು ಸಾತತ್ಯವನ್ನು ಪಡೆಯುತ್ತವೆ ಎನ್ನುವ ಘನವಾದ ಆಶಯವೊಂದನ್ನು ನಾವಿಲ್ಲಿ ಕಾಣಬಹುದು.

ಈ ಪ್ರಸ್ತಾವನೆಯು ಭಾರತೀಯ ಸಾಹಿತ್ಯದ ಓದುಗರಿಗೂ ಕಣ್ತೆರೆಸುವ ಲೇಖನವೇ ಆಗಿದೆ. ಮಧ್ಯಯುಗೀನ ಭಾರತೀಯ ಭಕ್ತಿಪರಂಪರೆಯನ್ನು ನೋಡಲು ಕೆಲವು ಮಾದರಿಗಳನ್ನು ನಾವು ಕಟ್ಟಿಕೊಂಡಿದ್ದೇವೆ. ಆದರೆ ಆ ಮಾದರಿಯಲ್ಲಿಯೂ ವಚನ ಸಾಹಿತ್ಯ ಅದೆಷ್ಟು ಭಿನ್ನವಾಗಿದೆ? ಏಕೆ ಭಿನ್ನವಾಗಿದೆ? ಎನ್ನುವ ಅಂಶವನ್ನು ಈ ಪ್ರಸ್ತಾವನೆ ಶಕ್ತವಾಗಿ ಹೇಳುತ್ತದೆ. ಗೆಳೆಯರ ಗುಂಪಿನಲ್ಲಿದ್ದೂ ಏಕಾಂಗಿಯಾದವರಂತೆ ವಚನಕಾರರಿದ್ದಾರೆ ಎನ್ನುವ ಸತ್ಯವೂ ಓದುಗರಿಗೆ ಹೊಳೆಯುತ್ತದೆ. ಅಥವಾ ಇದನ್ನು ಹೀಗೆ ಹೇಳೋಣ, ವಚನಕಾರರ ಸಾಮಾಜಿಕ ಮತ್ತು ರಾಜಕೀಯ ಆಶಯಗಳು ಭಕ್ತಿಯ ಏಕರೂಪಿ ನೆಲೆಯಲ್ಲಿ ತನ್ನಷ್ಟಕ್ಕೆ ತಾನೇ ಮಾಯವಾಗುವ ಸಂಗತಿಗಳು ಎಂದು ನೋಡುವುದಿಲ್ಲ. ಬದಲಿಗೆ ವಚನಕಾರರು ಭಾರತೀಯ ಸಮುದಾಯ ಎದುರಿಸುತ್ತಿದ್ದ ಜಾತಿ ಮತ್ತು ಅಸ್ಪೃಶ್ಯತೆಯ ಸವಾಲುಗಳನ್ನು ಲೌಕಿಕವಾಗಿಯೇ ಎದುರಿಸುವ ಮತ್ತು ಪರಿಹರಿಸಿಕೊಳ್ಳುವ ರಾಜಕೀಯ ಕಾರ್ಯಕರ್ತರ ಕೂಟವಾಗಿತ್ತು ಎನ್ನುವುದನ್ನು

ರಾಮಾನುಜನ್ ಮತ್ತೆ ಮತ್ತೆ ಹೇಳುತ್ತಾರೆ. ಎಂದರೆ ಭಕ್ತಿಯ ಅಲೌಕಿಕತೆಯಲ್ಲಿ ನಾವು ಮೀರಿಕೊಳ್ಳಬೇಕಾದ, ಮೀರಿಕೊಳ್ಳಲು ಸಾಧ್ಯ ಎಂದು ನಂಬಿರುವ ಧಾರ್ಮಿಕ ನಿಲುವು ಮಾತ್ರ ಅಲ್ಲ ಇದು. ಬದಲಿಗೆ ಇದು ಮೌಲ್ಯವ್ಯವಸ್ಥೆಯಲ್ಲಿಯೇ ಆಗಬೇಕಾಗಿರುವ ಮೂರ್ತವಾದ ಪಲ್ಲಟ ಎನ್ನುವುದರಲ್ಲಿ ವಚನಕಾರರಿಗಿದ್ದ ಮಹತ್ವಾಕಾಂಕ್ಷೆಯನ್ನು ರಾಮಾನುಜನ್ ಬಲು ಸ್ಪಷ್ಟವಾಗಿ ಗ್ರಹಿಸಿದ್ದಾರೆ.

ರಾಮಾನುಜನ್ ಅವರ ಅನುವಾದಗಳು ಅದರಲ್ಲೂ ಅಂಕಿತನಾಮಗಳನ್ನು ಅವರು ಅನುವಾದಿಸಿರುವ ಕ್ರಮದ ಬಗ್ಗೆ ಕೆಲವು ಪ್ರಶ್ನೆಗಳನ್ನು ಕನ್ನಡದ ಸಂದರ್ಭದಲ್ಲಿ ಎತ್ತಲಾಗಿದೆ. ಚೆನ್ನಮಲ್ಲಿಕಾರ್ಜುನನನ್ನು 'Lord white as jasmine', 'Lord of the meeting rivers' ಈ ಬಗೆಯ ಅನುವಾದಗಳನ್ನು ಡಿ.ಆರ್.ನಾಗರಾಜ ತೀವ್ರವಾಗಿ ವಿರೋಧಿಸಿದ್ದಾರೆ. ಆ ಅಂಕಿತನಾಮಗಳ ರೂಪಕಶಕ್ತಿ, ಸಾಂಕೇತಿಕತೆ ಈ ಎರಡೂ ಅನುವಾದಕ್ಕೆ ಒಳಗಾಗುವಂತಹವೇ ಅಲ್ಲ ಎನ್ನುತ್ತಾರೆ ಡಿ.ಆರ್.ನಾಗರಾಜ. ಮುಂದುವರಿದು ಇನ್ನೂ ಗಂಭೀರವಾದ ಮಿತಿಯೊಂದರ ಕಡೆಗೆ ಅವರು ನಮ್ಮ ಗಮನ ಸೆಳೆಯುತ್ತಾರೆ. ರಾಮಾನುಜನ್ ಅವರು ಅನುವಾದಕ್ಕೆ ಆರಿಸಿಕೊಂಡಿರುವುದು ಸರಳವೆನ್ನಬಹುದಾದ ವಚನಗಳನ್ನು ಮಾತ್ರ. ಅಲ್ಲಮನ ನಿಗೂಢ, ಸಂಕೀರ್ಣ ವಚನಗಳು ವಚನ ಚಳುವಳಿಯ ಅತ್ಯುತ್ತಮ ರಚನೆಗಳು. ಈ ಅತ್ಯುತ್ತಮ ರಚನೆಗಳ ಗೊಡವೆಗೇ ರಾಮಾನುಜನ್ ಅವರು ಹೋಗದೆ ಇರುವುದು ಈ 'Speaking of Siva' ಕೃತಿಯ ಬಹುದೊಡ್ಡ ಮಿತಿ ಎನ್ನುತ್ತಾರೆ ಅವರು. ಈ ಮಾತುಗಳನ್ನು ಒಪ್ಪದೇ ಇರಲು ಸಾಧ್ಯವಿಲ್ಲ. ಹೀಗಿದ್ದೂ ವಚನಗಳನ್ನು ಮೊದಲಬಾರಿಗೆ ಜಾಗತಿಕ ಓದುಗರಿಗೆ ಪರಿಚಯಿಸುವ ಮಹತ್ವಾಕಾಂಕ್ಷೆಯ ಈ ಅನುವಾದಕ್ಕಿರುವ ಮಹತ್ವವನ್ನೂ ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಜಾಗತಿಕ ಸಾಹಿತ್ಯಿಕ ರಂಗದಲ್ಲಿ ಈ ಅನುವಾದ ಪಡೆದುಕೊಂಡ ಮನ್ನಣೆ ಮತ್ತು ಜನಪ್ರಿಯತೆಯನ್ನು ಗಮನಿಸಿದಾಗ, ಜಗತ್ತಿನಾದ್ಯಂತ ಅನೇಕ ವಿದ್ವಾಂಸರು ಮತ್ತು ವಿದ್ಯಾರ್ಥಿಗಳು ವಚನಗಳ ಕಡೆಗೆ ಸೆಳೆಯಲ್ಪಟ್ಟಿರುವುದನ್ನು ಕಂಡಾಗ ರಾಮಾನುಜನ್ ಅವರ ಆಶಯ ಸಂಪೂರ್ಣವಾಗಿ ಈಡೇರಿದೆ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ.

ಚೆನ್ನಮಲ್ಲಿಕಾರ್ಜುನನನ್ನು 'Lord white as jasmine' ಎಂದು ಮಾಡಿರುವ ಅನುವಾದವನ್ನು ಕೆಲವರು ಒಪ್ಪುವುದಿಲ್ಲ. ಚೆನ್ನಮಲ್ಲಿಕಾರ್ಜುನನೆನ್ನುವ ದೈವದ ಚಿತ್ರವನ್ನು ಕೊಡುವುದರಲ್ಲಿ ಅದು ಸೋಲುತ್ತದೆ ಎನ್ನುವುದು ಇವರ ಮುಖ್ಯ ವಾದ. ಆದರೆ ಅಕ್ಕಮಹಾದೇವಿಯೂ ಸೇರಿದಂತೆ ಮಹಿಳಾ ಅನುಭಾವಿಗಳು ಪ್ರಕೃತಿಯ ಜೊತೆಯಲ್ಲಿ ಕಟ್ಟಿಕೊಂಡಿರುವ ಸಂಬಂಧದ ಸ್ವರೂಪವನ್ನು ಗಮನಿಸಿದಾಗ ಈ ಅಂಕಿತನಾಮದ ಅನುವಾದ ಸಮರ್ಥನೀಯವಾಗಿದೆ ಎಂದೇ ತೋರುತ್ತದೆ. 'ಮಲ್ಲಿಕಾ' ಎನ್ನುವ 'ಹೂ'ವಿಗೆ 'ಅರ್ಜುನ'ನಾದ

ಎಂದರೆ 'ಒಡೆಯ'ನಾದ ಎನ್ನುವ ಸಮರ್ಥನೆಯನ್ನು ಒಪ್ಪದೇ ಇರಲು ಕಾರಣಗಳಿಲ್ಲ. ಅನುವಾದಗಳು ಸಾಮಾನ್ಯವಾಗಿ ಎದುರಿಸುವ ಸಂಸ್ಕೃತಿಯ ಸವಾಲುಗಳನ್ನು ಈ ಅನುವಾದವೂ ಸಹಜವಾಗಿಯೇ ಎದುರಿಸಿದೆ.

ಗಿರೀಶ್ ಕಾರ್ನಾಡ್ ಅವರು ಒಂದು ಕುತೂಹಲಕರ ಸಂಗತಿಯ ಕಡೆಗೆ ನಮ್ಮ ಗಮನ ಸೆಳೆಯುತ್ತಾರೆ. ಅದೆಷ್ಟೋ ಮಂದಿ ಈ ಅನುವಾದದಿಂದ ಆಕರ್ಷಿತರಾಗಿ ತಾವು ವಚನಗಳ ಅನುವಾದಕ್ಕೆ ತೊಡಗಿದರಷ್ಟೆ. ಅದರಲ್ಲಿ ಜ್ವಲೇಬಿಲ್ ಎನ್ನುವ ವಿದ್ವಾಂಸರ ಪುಸ್ತಕ 'The Lord of the Meeting Rivers: Devotional Poems of Basavanna' (1984)' ಎನ್ನುವ ಹೆಸರಿನಲ್ಲಿ ಎರಡು ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಂದ ಪ್ರಕಟವಾಗಿದೆ. ಮೋತಿಲಾಲ್ ಬನಾರಸಿದಾಸ್, ದೆಹಲಿ, ಮತ್ತು ಯುನೆಸ್ಕೋ ಪ್ಯಾರಿಸ್.

ಮೂಲ ವಚನಗಳು

೧

ಉಳ್ಳವರು ಶಿವಾಲಯ ಮಾಡಿಹರು।
ನಾನೇನ ಮಾಡುವೆ? ಬಡವನಯ್ಯ।
ಎನ್ನ ಕಾಲೇ ಕಂಬ, ದೇಹವೇ ದೇಗುಲ,
ಶಿರವೇ ಹೊನ್ನ ಕಳಸವಯ್ಯ।
ಕೂಡಲ ಸಂಗಮ ದೇವ ಕೇಳಯ್ಯ,
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ।

೨

ಮಡಕೆ ದೈವ, ಮೊರ ದೈವ,
ಬೀದಿಯ ಕಲ್ಲು ದೈವ,
ಹಣಿಗೆ ದೈವ, ಬಿಲ್ಲು ನಾರಿ ದೈವ-ಕಾಣಿರೋ।
ಕೊಳಗ ದೈವ, ಗಿಣ್ಣಿಲು ದೈವ-ಕಾಣಿರೋ।
ದೈವ ದೈವವೆಂದು ಕಾಲಿಡಲಿಂಬಿಲ್ಲ।
ದೇವನೊಬ್ಬನೆ ಕೂಡಲ ಸಂಗಮ ದೇವ.

೩

ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯ.
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದನಿಸಯ್ಯ
ಕೂಡಲ ಸಂಗಮ ದೇವಯ್ಯ ನಿಮ್ಮಯ ಮನೆಮಗನೆಂದೆನಿಸಯ್ಯ.[೧೩]

The rich
will make temples for Siva.
What shall I,
A poor man,
Do?

My legs are pillars,
the body the Shrine,
the head a cupola
of gold.

Listen, O lord of the meeting rivers,
things standing shall fall,
but the moving ever shall stay.

The pot is a god. The winnowing
fan is a god. The stone in the
street is a god. The comb is a
god. The bowstring is also a
god. The bushel is a god and the
spouted cup is a god.

Gods, gods, there are so many
there's no place left
for a foot.

There is only
one god. He is our Lord
of the Meeting Rivers.

Don't make me here all day
'Whose man, whose man, whose man is this'
Let me hear, 'This man is mine, mine,
This man is mine.

O lord of the meeting rivers,
Make me feel I'm a son
Of the house. ೧೪

ಜ್ವೆಲೇಬಿಲ್ ಅವರ ಭಾಷಾಂತರ ಹೀಗಿದೆ:

The rich
will make temples for Siva.
What shall I, O Lord,
a poor man, do?

My legs are pillars,
the body the shrine,
the head the cupola of gold.

O Lord of the Meeting Rivers,
Liste, O Lord:
Standing things shall fall,
that which moves shall stay.

The pot is a god. The winnowing fan is a
god.
The stone in the street is a god.
The comb is a god. The bowstring is a
god, see!
The jar is a god. The water-vessel is a god,
see!
Gods, gods, there are so many
there's no place left
to put a foot.

There's only one god.
The Lord of the Meeting Rivers.

Let them not say, O Lord,
"Whose man, whose man, whose man is this"

Let them say, "This man is mine, this man is mine,
This man is mine!"

O Lord of the Meeting Rivers,
Make me feel I'm a son of your house,
O Lord![೧೫]

ಇಲ್ಲಿ ಜ್ವೆಲೇಬಿಲ್ ಅಲ್ಲಲ್ಲಿ ಒಂದೊಂದು ಪದಗಳನ್ನು ಸೇರಿಸಿರುವುದನ್ನು ಬಿಟ್ಟರೆ ಮಿಕ್ಕಿದ್ದೆಲ್ಲಾ ರಾಮಾನುಜನ್ ಅನುವಾದದ ಯಥಾವತ್ ಅನುವಾದವನ್ನೇ ಬಳಸಿಕೊಂಡಿದ್ದಾರೆ. ಇದೊಂದು 'ಅನುಕರಣೆ' ಎನ್ನುತ್ತಾರೆ ಗಿರೀಶ್ ಕಾರ್ನಾಡ್. ಈ ಸಂಗತಿಯನ್ನು ರಾಮಾನುಜನ್ ಅನುವಾದದ ಅಂತಿಮ ಯಶಸ್ಸು ಎಂದೂ ವಾದಿಸಲು ಸಾಧ್ಯವಿದೆಯಷ್ಟೇ! ಏಕೆಂದರೆ ಜ್ವೆಲೇಬಿಲ್ ರಾಮಾನುಜನ್ ಅವರ ಈ ಅನುವಾದ ಕೃತಿ ಇಲ್ಲದಿದ್ದರೆ ತಾವು ಅನುವಾದಕ್ಕೇ ಕೈ ಹಾಕುತ್ತಿರಲಿಲ್ಲ ಎಂದು ಹೇಳುತ್ತಾರೆ. ಇಷ್ಟಕ್ಕೂ ಯಾವ ಅನುವಾದವೂ ಕೊನೆಯದಲ್ಲ.

ರಾಮಾನುಜನ್, ಕಂಬಾರರೂ ಸೇರಿದಂತೆ ಜಾನಪದ ವಿದ್ವಾಂಸರೂ ಮತ್ತು ಆ ಭಾಷಿಕ ಪರಿಸರದ ಸೂಕ್ಷ್ಮಜ್ಞರೊಂದಿಗೆ ನಡೆಸಿದ ಚರ್ಚೆಗಳು, ಅನುವಾದಕ್ಕಾಗಿ ಅವರು ಮೀಸಲಿಟ್ಟ ಸಮಯ ಈ ಎಲ್ಲವನ್ನೂ ನೋಡಿದಾಗ ಈ ಅನುವಾದಗಳಲ್ಲಿ ಅವರು ತಮ್ಮನ್ನು ತಾವು ಅದೆಷ್ಟು ತೀವ್ರವಾಗಿ ತೊಡಗಿಸಿಕೊಂಡಿದ್ದರು ಎನ್ನುವುದಕ್ಕೆ ಸಾಕ್ಷಿಯಾಗಿದೆ. ಕಿ.ರಂ.ನಾಗರಾಜ ಅವರು ಹೇಳುವಂತೆ 'ನಿಜವಾದ ಕನ್ನಡ ಸೇವೆ ಎಂದರೆ ಎ.ಕೆ.ರಾಮಾನುಜನ್ ಅವರದ್ದು.'

ಈ ಅನುವಾದ ಮತ್ತು ಇದರ ಪ್ರಸ್ತಾವನೆಯನ್ನು ಇನ್ನೊಂದು ಅಂಶದ ಜೊತೆಗೂ ಜೋಡಿಸಲು ಸಾಧ್ಯವಿದೆ. ಭಾರತೀಯ ಚಿಂತನಾಕ್ರಮ ಎನ್ನುವುದರ ಬಗೆಗೆ ರಾಮಾನುಜನ್ ನಡೆಸುವ ಸೈದ್ಧಾಂತಿಕ ಚರ್ಚೆಯ ಪ್ರಾಯೋಗಿಕ ಆವೃತ್ತಿಯಂತಿದೆ ಇದು. ರಾಮಾನುಜನ್ ಅವರನ್ನು ಉದ್ದಕ್ಕೂ ಕಾಡಿದ, ಪ್ರಭಾವಿಸಿದ ಸಂಗತಿಗಳಲ್ಲಿ ಪ್ರಧಾನವಾದದ್ದು ಜಾನಪದ, ಮೌಖಿಕ ಮತ್ತು ಶಿಷ್ಟಪರಂಪರೆಗಳ ನಡುವಿನ ಸಂಬಂಧ ಮತ್ತು ಸಂಘರ್ಷಗಳದ್ದು. ಮುನ್ನೂರು ರಾಮಾಯಣಗಳು ಎನ್ನುವ ಇವರ ಬಹು ಮುಖ್ಯವಾದ ಮತ್ತು ಬಹು ಚರ್ಚಿತವಾದ ಲೇಖನವು ಒಂದು ಶಿಷ್ಟ ರಾಮಾಯಣದ ಎದುರಿಗೆ ನೂರಾರು ಮೌಖಿಕ, ಸಂಸ್ಕೃತಿನಿಷ್ಠ ಮತ್ತು ಮುಗಿಯದ ರಾಮಾಯಣಗಳನ್ನು ಎದುರಾಗಿ ನಿಲ್ಲಿಸುತ್ತಾರೆ. ಆದಿ-ಮಧ್ಯ-ಅಂತ್ಯಗಳ ವಾಲ್ಮೀಕಿ ವಿರಚಿತ ರಾಮಾಯಣದ ಎದುರಿಗೆ ಎಂದೂ ಮುಗಿಯದ ಮತ್ತು ಜನಸಾಮಾನ್ಯರು ಅವರವರ ದೃಷ್ಟಿಕೋನಕ್ಕೆ ಅನುಗುಣವಾಗಿ ಕಟ್ಟಿಕೊಳ್ಳುತ್ತಲೇ ಹೋಗಿರುವ ಅಸಂಖ್ಯಾತ ಬಿಡಿ ಬಿಡಿ ರಾಮಾಯಣಗಳಿವೆ.

ಈ ರಾಮಾಯಣಗಳು ಮೂಲ ರಾಮಾಯಣಕ್ಕಿಂತ ಭಿನ್ನವಾಗುವ ನೆಲೆಗಳನ್ನು ಗುರುತಿಸುವುದರಲ್ಲಿ ರಾಮಾನುಜನ್ ಅವರಿಗೆ ಆಸಕ್ತಿ ಇದೆ. ಈ ರಾಮಾಯಣಗಳು ಅನೇಕ

ಬಾರಿ ದಮನಿತರ ನೆಲೆಯಿಂದ ಪ್ರಭುತ್ವವನ್ನು ನೋಡುವ ವಿನ್ಯಾಸವನ್ನು ಹೊಂದಿರುತ್ತವೆ. ರಾಮಾಯಣ ವೆನ್ನುವ ರಾಷ್ಟ್ರೀಯ ಮಹಾಕಾವ್ಯ ತನ್ನ ಜೀವಂತಿಕೆಯನ್ನು, ಹೆಗ್ಗಳಿಕೆಯನ್ನು ಪಡೆದುಕೊಳ್ಳುವುದು ಮತ್ತು ಉಳಿಸಿಕೊಳ್ಳುವುದು ಈ ರಾಮಾಯಣಗಳಲ್ಲಿ. ತುಸು ನಾಟಕೀಯವಾಗಿ ಹೇಳುವುದಾದರೆ ಪ್ರತಿನಿತ್ಯದ ರಾಮಾಯಣಗಳಲ್ಲಿ ಇವರು ಪಾತ್ರಧಾರಿಗಳಾಗಿಯೇ ಆ ರಾಮಾಯಣವನ್ನು ತಮಗೆ ಬೇಕಾದಂತೆ ಬೆಳೆಯುತ್ತಾ ಕಟ್ಟುತ್ತಾ ಹೋಗುತ್ತಾರೆ. ಕವಿ ಕುಮಾರವ್ಯಾಸ 'ತಿಣುಕಿದನು ಫಣಿರಾಯ ರಾಮಾಯಣಗಳ ಭಾರದಲ್ಲಿ' ಎನ್ನುತ್ತಾನೆ. ಕುಮಾರವ್ಯಾಸನ ಗಮನವಾದರೂ ಈ ಬಗೆಯ ಮೌಖಿಕ ಜನಪದ ರಾಮಾಯಣಗಳನ್ನು ಕುರಿತದ್ದೇ ಇದ್ದಿರಬೇಕು. ಇಂಥ ಮೌಖಿಕ ರಾಮಾಯಣಗಳನ್ನು ಕುರಿತ ತಿರಸ್ಕಾರ ಮತ್ತು ಗೇಲಿಯನ್ನು ಕುಮಾರವ್ಯಾಸನ ಮಾತುಗಳಲ್ಲಿ ನಾವು ಗುರುತಿಸಲು ಸಾಧ್ಯವಿದೆ.

ನಾವಿಲ್ಲಿ ಮುಖ್ಯವಾಗಿ ಗಮನಿಸಿಬೇಕಾಗಿರುವುದು ರಾಮಾನುಜನ್ ಅವರ ಓರಗೆಯ ಲೇಖಕರು ವ್ಯಕ್ತಿಕೇಂದ್ರಿತವಾದ ಬರವಣಿಗೆಯನ್ನು ಮತ್ತು ಸೈದ್ಧಾಂತಿಕ ನಿಲುವುಗಳನ್ನು ರೂಪಿಸುವುದರಲ್ಲಿ ಮಗ್ನರಾಗಿದ್ದಾಗ, ಭಾರತೀಯ ಪರಂಪರೆಯನ್ನು ಕುರಿತ ತೀವ್ರ ವಿರೋಧ ಮತ್ತು ಸಂಘರ್ಷದ ನಿಲುವುಗಳನ್ನು ಪ್ರಸ್ತುತಪಡಿಸುತ್ತಿದ್ದಾಗ ರಾಮಾನುಜನ್ ಅದಕ್ಕೆ ತದ್ವಿರುದ್ಧ ಎನ್ನುವಂತೆ ಪರಂಪರೆಯ ಜೊತೆಯಲ್ಲಿ ಕರುಳಬಳ್ಳಿಯ ಸಂಬಂಧವನ್ನು ಕಟ್ಟಿಕೊಳ್ಳಲು ಉದ್ಯುಕ್ತರಾಗುತ್ತಾರೆ. ಇದರಲ್ಲಿ ರಾಮಾನುಜನ್ ತಮ್ಮನ್ನು ಇಡಿಯಾಗಿ ಮುಳುಗಿಸಿಕೊಂಡ ಪರಿ ಮತ್ತು ಅದರಲ್ಲಿ ಪಡೆದ ಯಶಸ್ಸು ರಾಮಾನುಜನ್ ಅವರ ಮುಂದಿನ ತಲೆಮಾರಿನ ಅನೇಕರಿಗೆ ಭಾರತೀಯ ಸಾಹಿತ್ಯವನ್ನು ನೋಡುವ ಕ್ರಮವನ್ನೇ ಬದಲಾಯಿಸಿತು ಎನ್ನುವುದು ನಿಜ. ಈ ಅಂಶವೇ ರಾಮಾನುಜನ್ ಅವರ ದೃಷ್ಟಿಕೋನ ಮತ್ತು ಪ್ರಯತ್ನಗಳ ಸಮಕಾಲೀನತೆ ಮತ್ತು ಮಹತ್ವವನ್ನು ಸೂಚಿಸುತ್ತದೆ. ಆಧುನಿಕ ಸಾಹಿತ್ಯ ಸಿದ್ಧಾಂತಗಳು ಭಾರತೀಯ ಕಾವ್ಯಮೀಮಾಂಸೆಯ ನೆಲೆಗಳು ಈ ಎಲ್ಲವುಗಳ ಜೊತೆಗಿನ ತಮ್ಮ ಆಳವಾದ ತಿಳಿವಳಿಕೆಯನ್ನು ಬೆರೆಸಿ ರಾಮಾನುಜನ್ ಮೌಖಿಕ ಕಾವ್ಯ ಮೀಮಾಂಸೆಯ ಹಲವು ಸ್ತರಗಳನ್ನು ಗುರುತಿಸುತ್ತಾ ಅದರ ಚಹರೆಯನ್ನು ಅದರೆಲ್ಲಾ ಶಕ್ತಿ ಮತ್ತು ಸಾಧ್ಯತೆಗಳನ್ನು ಕಟ್ಟಿಕೊಟ್ಟರು.

ಸಂಗಂ ಸಾಹಿತ್ಯವನ್ನು ರಾಮಾನುಜನ್ ಅನುವಾದಕ್ಕೆ ಆರಿಸಿಕೊಂಡದ್ದು ಕೂಡ ಇದಕ್ಕೆ ಪೂರಕವಾಗಿಯೇ ಇದೆ. ಸಂಗಂ ಸಾಹಿತ್ಯ ಕೂಡ ಅದರ ನಿಜದಲ್ಲಿ ಪ್ರಭುತ್ವ ಮತ್ತು ಪಟ್ಟಭದ್ರ ಶಕ್ತಿಗಳು ಮತ್ತು ಸ್ಥಾಪಿತ ಮೌಲ್ಯವ್ಯವಸ್ಥೆಯ ವಿರುದ್ಧ ಬಂಡೆದ್ದ ಕಾವ್ಯ. ಸರಳವಾಗಿ ಹೇಳುವುದಾದರೆ ವಚನ ಮತ್ತು ಸಂಗಂ ಸಾಹಿತ್ಯ ಗಳೆರಡೂ ಜನಮೀಮಾಂಸೆಯನ್ನು ಕಟ್ಟಲು ಹೊರಟಂತಹವು. ಸಂಗಂ ಸಾಹಿತ್ಯವಂತೂ ಪ್ರಕೃತಿಮೀಮಾಂಸೆಯನ್ನೇ ಲೋಕಮೀಮಾಂಸೆಯಾಗಿ ಮನುಷ್ಯ ನಾಗರಿಕತೆ ಒಪ್ಪಬೇಕಲ್ಲವೇ ಎನ್ನುವ ದೊಡ್ಡ ಪ್ರಶ್ನೆಯನ್ನು ತಮ್ಮ ಮುಂದಿಟ್ಟುಕೊಂಡು ಹೊರಟವು.

ರಾಮಾನುಜನ್ ಅವರ ಇಂಗ್ಲಿಷ್, ಅದರ ಶಕ್ತತೆಯ ಬಗೆಗೆ ಅನೇಕ ಭಾರತೀಯ ಮತ್ತು ಪಾಶ್ಚಾತ್ಯ ವಿದ್ವಾಂಸರು ಮತ್ತೆ ಮತ್ತೆ ಮಾತನಾಡಿದ್ದಾರೆ.

ರಾಮಾನುಜನ್ ಅವರ ಇನ್ನೊಂದು ಬಹು ಮುಖ್ಯವಾದ ತಾತ್ವಿಕ ಕೇಂದ್ರವೆಂದರೆ ಮಹಿಳೆಯರದ್ದು. ರಾಮಾನುಜನ್ ಅವರ ಲೋಕಮೀಮಾಂಸೆ ಮತ್ತು ಸಾಹಿತ್ಯಮೀಮಾಂಸೆ ಎರಡರಲ್ಲಿಯೂ ಪ್ರಧಾನವಾಗಿರುವುದು ಧಮನಿತ ಲೋಕ ಎನ್ನುವುದು ಇವತ್ತಿನ ಮಟ್ಟಿಗೆ ಬಹುಮುಖ್ಯವಾದ ಸಂಗತಿಯಾಗಿ ತೋರುತ್ತದೆ. ಅಧಿಕೃತವಾಗಿ ದಲಿತ ಮತ್ತು ಮಹಿಳಾ ಸಂಕಥನಗಳು ಇನ್ನೂ ಉದ್ಘಾಟನೆಯಾಗದಿದ್ದಾಗಲೇ ರಾಮಾನುಜನ್ ಅವರ ಬರವಣಿಗೆ, ಸಂಪಾದನೆ ಮತ್ತು ಅನುವಾದಗಳಲ್ಲಿ ಈ ಇಬ್ಬರನ್ನೂ ಕೇಂದ್ರವಾಗಿಸಲು ಪ್ರಯತ್ನಿಸಿದ್ದರೆನ್ನುವ ಸಂಗತಿ ನಿಜಕ್ಕೂ ಐತಿಹಾಸಿಕ ಮಹತ್ವದ್ದು. ಒಂದು ಬೀಸಿನಲ್ಲಿ ರಾಮಾನುಜನ್ ಅವರ ಪ್ರಮುಖ ಬರಹಗಳನ್ನು ಪಟ್ಟಿ ಮಾಡುತ್ತಾ ಹೋದರೆ ರಾಮಾನುಜನ್ ಅವರ ಚಿಂತನಾ ಪ್ರಣಾಳಿಕೆಯ ಚಹರೆ ನಮಗೆ ಸ್ಪಷ್ಟವಾಗುತ್ತದೆ.

ಮುನ್ನೂರು ರಾಮಾಯಣಗಳು, ಭಾರತೀಯತೆ ಎನ್ನುವ ಚಿಂತನಾಕ್ರಮ ಎನ್ನುವುದೊಂದಿದೆಯೇ, ಪ್ರತಿವ್ಯವಸ್ಥೆಯತ್ತ ಹೆಂಗಸರ ಕಥೆಗಳು, ಕನ್ನಡ ಜಾನಪದ ಎರಡು ವರ್ತುಲಗಳು, ಸ್ಪೀಕಿಂಗ್ ಆಫ್ ಶಿವ ಮತ್ತು ಸಂಗಂ ಸಾಹಿತ್ಯಕ್ಕೆ ಇವರು ಬರೆದಿರುವ ಪ್ರಸ್ತಾವನೆಗಳು, ಮಹಿಳಾ ಅನುಭಾವಿಗಳ ಬಗೆಗಿನ ಇವರ ಲೇಖನ ಗಂಡು ಹೆಣ್ಣು ಮತ್ತು ಅನುಭಾವಿಗಳು ಎನ್ನುವ ಲೇಖನ, ಜಾನಪದ ಯಾರಿಗೆ ಬೇಕು, ಈ ಬಗೆಯ ಕೆಲವು ಮುಖ್ಯ ಲೇಖನಗಳನ್ನು ಗಮನಿಸಿದರೂ ರಾಮಾನುಜನ್ ಕಟ್ಟಲು ಬಯಸಿದ್ದ ದೇಸೀ ಸಾಹಿತ್ಯಮೀಮಾಂಸೆ ಎನ್ನುವುದು ಸ್ಪಷ್ಟವಾಗುತ್ತದೆ. ಶಿಷ್ಟಕಾವ್ಯದ ಎದುರಿಗೆ ಜಾನಪದ ಮತ್ತು ಧಮನಿತ ಲೋಕದ ಕಥನಗಳನ್ನು ಇಡುತ್ತಾ ಆ ಎರಡರ ವೈರುಧ್ಯಗಳನ್ನು ಗುರುತಿಸುತ್ತಲೇ ರಾಮಾನುಜನ್ ಕಡೆಗೂ ಬಹುಸಂಖ್ಯಾತ ಶೋಷಿತರ ಮತ್ತು ಅಭಿವ್ಯಕ್ತಿಗೆ ಅಧಿಕೃತತೆಯನ್ನೇ ಪಡೆಯದವರ ಅಭಿವ್ಯಕ್ತಿಗೆ ಸಲ್ಲಬೇಕಾದ ಅಧಿಕೃತತೆಯನ್ನು ತಂದುಕೊಡುವಲ್ಲಿ ನಿರಂತರವಾದ ಪ್ರಯತ್ನ ನಡೆಸಿದರೆನ್ನುವುದು ತಿಳಿಯುತ್ತದೆ.

ಇಲ್ಲಿ ಸ್ಪಷ್ಟಪಡಿಸಿಕೊಳ್ಳಬೇಕಾದ ಮೂಲಭೂತ ಸಂಗತಿಯೊಂದಿದೆ. ಅದೆಂದರೆ ಯಾವ ಅಭಿವ್ಯಕ್ತಿಗಳಿಗೆ ಅಧಿಕೃತತೆ ಮತ್ತು ಮನ್ನಣೆಯನ್ನು ತಂದುಕೊಡಲು ಇವರು ಪ್ರಯತ್ನಿಸುತ್ತಿದ್ದಾರೋ ಆ ಅಭಿವ್ಯಕ್ತಿಗಳು ನಿಸ್ಸಂದೇಹವಾಗಿ ಅತ್ಯುತ್ತಮ ಅಭಿವ್ಯಕ್ತಿಗಳು ಎನ್ನುವುದನ್ನು ರಾಮಾನುಜನ್ ಸಾದಾರವಾಗಿ ಮಂಡಿಸುತ್ತಾರೆ. ವಚನ, ಸಂಗಂ ಮತ್ತು ಮಹಿಳಾ ಸಾಹಿತ್ಯವನ್ನು ಆರಾಧನೆಯ ನೆಲೆಯಲ್ಲಿ ನೋಡುವವರಿಗೂ ರಾಮಾನುಜನ್ ಅವರ ಅಧ್ಯಯನಗಳಿಗೂ ಇರುವ ವ್ಯತ್ಯಾಸ ಸ್ಪಷ್ಟವಾಗುವುದು ಈ ಅಂಶದಲ್ಲಿ. ಉದಾಹರಣೆಗೆ ಮಹಿಳಾ ಅಭಿವ್ಯಕ್ತಿಯನ್ನು ರಾಮಾನುಜನ್

ಚರ್ಚಿಸುವ ಕ್ರಮ ನೋಡಿ. ಭಕ್ತಿ ಮತ್ತು ಹೆಣ್ಣಿನ ನಡುವೆ ಬಲು ಹತ್ತಿರದ ಸಂಬಂಧ ಇದೆ ಎನ್ನುತ್ತಾರೆ ರಾಮಾನುಜನ್. ಕೊನೆಗೂ ಭಕ್ತಿ ಎನ್ನುವುದು ಶರಣಾಗತಿ ಎನ್ನುವುದಾದರೆ, ಸದಾ ಅಧೀನ ಸ್ಥಿತಿಯಲ್ಲಿಯೇ ಇರುವ, ಇರಬೇಕೆಂದು ನಿರೀಕ್ಷಿಸುವ ಹೆಣ್ಣಿನ ಮನಸ್ಥಿತಿ ಬಹುತೇಕ ಸಂದರ್ಭಗಳಲ್ಲಿ ಶರಣಾಗತಿಯದೇ ಆಗಿರುತ್ತದೆ. ಆದ್ದರಿಂದ ಶರಣಾಗತಿಗೆ ಬೇಕಾದ ಅಹಂ ಅನ್ನು ಕಳೆದುಕೊಳ್ಳುವ ಪ್ರಕ್ರಿಯೆ ಬಲು ಕಷ್ಟದ್ದಾಗುವುದು ಗಂಡಿಗೆ. ಮೌಲ್ಯವ್ಯವಸ್ಥೆಯ ಮೂಲಾಧಿಕಾರದ ಸವಲತ್ತು ಗಂಡಿನದು. ಆದ್ದರಿಂದ ಸದಾ ಅಪ್ಪಣೆಗಳನ್ನು ಹೊರಡಿಸುತ್ತಾ ಬದುಕುವ ಗಂಡು ಅದನ್ನು ಕಳೆದುಕೊಳ್ಳುತ್ತಾ ಹೋಗುವುದೆಂದರೆ ಅದೊಂದು ಭಗೀರಥ ಪ್ರಯತ್ನ. ಗಂಡಿನ ಮನೋಬೌದ್ಧಿಕ ಲೋಕದಲ್ಲಿ ಇದೊಂದು ಭೂಮ್ಯಾಕಾಶಗಳ ಅಂತರದ ಸನ್ನಿವೇಶ. ಆದರೆ ಹೆಣ್ಣಿಗೋ ಇದೊಂದು ಸಹಜ ನಡಿಗೆ. ಹೀಗಾಗಿ ದೈವಕ್ಕೆ ಶರಣಾಗುವುದು ಹೆಣ್ಣಿಗೆ ಬಲು ಕಷ್ಟದ ಕೆಲಸವೇನಲ್ಲ. ಆದರೆ ಹೀಗಿದ್ದೂ ಹೆಣ್ಣಿನ ಅಭಿವ್ಯಕ್ತಿಗಳು ಭಿನ್ನವೇ ಎನ್ನುವ ಸೂಕ್ಷ್ಮವಾದ ಒಳನೋಟಗಳನ್ನು ರಾಮಾನುಜನ್ ಕೊಡುತ್ತಾರೆ.

ಗಂಡು ಬಿಟ್ಟುಕೊಡಬೇಕಾದ ಅನೇಕ ಸಂಗತಿಗಳಿವೆ. ಅವನ ಅಧಿಕಾರ, ಪೌರುಷ, ಜಾತಿ, ವರ್ಗ ಇತ್ಯಾದಿ. ಆದರೆ ಹೆಣ್ಣಿನ ಮಟ್ಟಿಗೆ ಇವು ಯಾವುವೂ ಅವಳು ಎದುರಿಸಬೇಕಾದ ಸಂಗತಿಗಳೇ ಅಲ್ಲ. ಭಕ್ತನಾದವನು ಸಾಧಿಸಿಕೊಳ್ಳಬೇಕಾದ ಮನಸ್ಥಿತಿ ಎಂದು ಹೇಳಲಾಗುವ ಸಂಗತಿಗಳೆಲ್ಲಾ ಅವಳಲ್ಲಿ ಸದಾ ಕಾಲಕ್ಕೂ ಇದ್ದೇ ಇರುತ್ತವೆ ತಾನೆ. ಆದರೆ ಹೆಣ್ಣಿನ ಸವಾಲುಗಳು ಬೇರೆ. ಅದು ಅವಳು ಮದುವೆಯಾದ ಅನುಭಾವಿಯಾಗಿದ್ದರಂತೂ ವಿಲಕ್ಷಣವಾದ ತಿರುವುಗಳನ್ನು ಪಡೆದುಕೊಳ್ಳುತ್ತದೆ. 'ಶರಣ ಸತಿ, ಲಿಂಗ ಪತಿ' ಎನ್ನುವ ವಚನ ಚಳುವಳಿಯ ಅಥವಾ ಭಕ್ತಿ ಚಳುವಳಿಯ ಆಶಯವೂ ದೈವ ಮತ್ತು ಭಕ್ತರ ನಡುವಿನ ಸಂಬಂಧದ ಸಮೀಕರಣವೂ ಹೌದಷ್ಟೇ. ಹಾಗಿದ್ದರೆ ಈ ಶರಣೆಯರು ಸತಿಗಳಾಗಿಯೇ ಇರುತ್ತಾರಾದ್ದರಿಂದ ಅವರು ಒಳಗಾಗಬೇಕಾದ ಪ್ರಕ್ರಿಯೆ ಯಾವುದು?

ಈ ನಿರ್ಣಾಯಕ ಪ್ರಶ್ನೆಯನ್ನು ರಾಮಾನುಜನ್ ಚರ್ಚೆಗೆ ಎತ್ತಿಕೊಳ್ಳುತ್ತಾರೆ. ಭಕ್ತಿ ಚಳುವಳಿಯಲ್ಲಿ ಹೆಣ್ಣಿಗೆ 'ಕೊಡಮಾಡಲಾದ' ಎಂದು ಹೇಳಲಾಗುವ ಸನ್ನಿವೇಶವೇ ಬರುವುದಿಲ್ಲ ಅಲ್ಲವೇ. ಏಕೆಂದರೆ ಅದು ಇರುವ ಸ್ಥಿತಿ. ಅವಳಿಗೆ ಹೊಸದಾಗಿ ನಿರ್ಮಿಸಲಾದ ಸಂಗತಿ ಎಂದು ಹೇಳುವುದು ಕಷ್ಟ. ಹೆಣ್ಣು ಎದುರಿಸುವ ಸವಾಲುಗಳೇ ಬೇರೆ ಶರಣಾಗತಿಯ ಸ್ಥಿತಿಯಿಂದ ಅದ್ವೈತಕ್ಕೆ ಹೊರಳುವ ದಾರಿಯನ್ನು ಅವಳು ಎದುರಿಸುವ ಸಂಭ್ರಮ ಸಂಕಷ್ಟಗಳು ಗಂಡಿಗಿಂತ ಬೇರೆ. ಆದ್ದರಿಂದ ಗಂಡು ಮತ್ತು ಹೆಣ್ಣು ಇಬ್ಬರ ಭಕ್ತಿ ಮತ್ತು ಅನುಭಾವದ ನೆಲೆಗಳನ್ನು ಬೇರೆಯಾಗಿಯೇ ಚರ್ಚಿಸಬೇಕು ಎನ್ನುವ ಮಹತ್ವ ಸಂಗತಿಯನ್ನು ಮೊದಲಿಗೆ ಎತ್ತಿದವರು ರಾಮಾನುಜನ್ ಅವರು.

ವಿಪರ್ಯಾಸವೆಂದರೆ ಇವರಿಗೆ ಕೊಡಬೇಕಾದ ಹೆಗ್ಗಳಿಕೆಯನ್ನು ಕೊಡಲಾಗಿಲ್ಲ ಎನ್ನುವುದು. ಇದರ ಮುಂದುವರಿದ ಭಾಗವೆನ್ನುವಂತೆ ನಾವು 'ಪ್ರತಿ ವ್ಯವಸ್ಥೆಯತ್ತ ಹೆಂಗಸರ ಕಥೆಗಳು' ಎನ್ನುವ ಲೇಖನವನ್ನು ನೋಡಬಹುದು. ರಾಮಾನುಜನ್ ಹೆಂಗಸರ ಕಥೆಗಳನ್ನು ಕೇವಲ ಸಾಮಾಜಿಕ ಸಂದರ್ಭದಲ್ಲಿಟ್ಟು ನೋಡದೆ ಈ ಸಂದರ್ಭವನ್ನೇ ಮೂಲವಾಗಿಟ್ಟುಕೊಂಡು ಮನೋವೈಜ್ಞಾನಿಕ ವಿಶ್ಲೇಷಣೆಗೆ ಒಳಗುಮಾಡುವ ಮುಖ್ಯವಾದ ಪ್ರಯತ್ನವನ್ನೂ ಮಾಡಿದ್ದಾರೆ. ಕಥೆ ಎನ್ನುವುದು ಗಂಡು ಮತ್ತು ಹೆಣ್ಣು ಇಬ್ಬರಿಗೂ ಒಂದೆಯೇ? ಅಥವಾ ಬೇರೆಯೇ? ಎನ್ನುವ ಸ್ತ್ರೀವಾದಿ ಪ್ರಶ್ನೆಯನ್ನು ರಾಮಾನುಜನ್ ಇಲ್ಲಿ ಚರ್ಚಿಸುತ್ತಾರೆ. ಗಂಡಿಗಿಂತ ಹೆಚ್ಚು ಸೂಕ್ಷ್ಮವಾದ ನೈತಿಕ ಪ್ರಶ್ನೆಗಳನ್ನು ಹೆಣ್ಣು ಎದುರಿಸುತ್ತಾಳಲ್ಲವೇ ಎನ್ನುವ ಅಂಶವೊಂದು ಇಲ್ಲಿ ಅವರ ಗಮನಕ್ಕೆ ಬರುತ್ತದೆ. ಇಷ್ಟೇ ಮುಖ್ಯವಾದ ಇನ್ನೊಂದು ಸಂಗತಿ ಕಥೆ ಹೇಳುವುದು ಮತ್ತು ಕೇಳುವುದು ಎರಡೂ ಹೆಣ್ಣಿಗೆ ತಾನು ಅನುಭವಿಸುವ ಅಪಾರ ನೋವಿಗೆ ಕಂಡುಕೊಳ್ಳುವ ಬಿಡುಗಡೆಯ ದಾರಿಗಳಿರಬಹುದು ಎನಿಸುತ್ತದೆ. ಹೆಣ್ಣಿನ ಗುಪ್ತವಾದ ಆಸೆಗಳು, ಅವ್ಯಕ್ತವಾದ ಕೋಪ, ಮೌಲ್ಯ ವ್ಯವಸ್ಥೆಯನ್ನು ಕುರಿತಂತೆ ತನ್ನಿಂತಾನೇ ಏಳುವ ಪ್ರಶ್ನೆಗಳು, ಅವಳ ಹಾಸ್ಯಪ್ರಜ್ಞೆ, ಸಂದರ್ಭವನ್ನು ಎದುರಿಸುವಲ್ಲಿ ಅವಳು ತೋರಿಸುವ ಚತುರತೆ, ನೂರು ಕಷ್ಟಗಳ ಕೊನೆಗೂ ಮುಕ್ಕಾಗದ ಅವಳ ಜೀವನಪ್ರೀತಿ ಈ ಎಲ್ಲವೂ ಅವಳ ಅಭಿವ್ಯಕ್ತಿಗಳಲ್ಲಿ ಢಾಳಾಗಿ ಕಾಣಿಸುತ್ತವೆ.

ಆದರೆ ಹೆಣ್ಣಿನ ಕಥೆಗಳ ಧ್ವನಿ ಪ್ರತಿವ್ಯವಸ್ಥೆಯ ಕಡೆಗೆ ತುಡಿಯುತ್ತದೆ. ಸಾಹಸದಲ್ಲಿ ತೊಡಗುವ ರಾಜಕುಮಾರನಿಗೆ ಅವನ ಶೌರ್ಯ ಮತ್ತು ಅವನು ಪಟ್ಟ ಕಷ್ಟಕ್ಕೆ ಉಡುಗೊರೆಯೋ ಎನ್ನುವಂತೆ ಸುಂದರಿಯಾದ, ಸುಗುಣೆಯಾದ ವಧು ಸಿಗುತ್ತಾಳೆ. ಆದರೆ ಹೆಣ್ಣಿನ ಕಥೆ ನೋಡಿ, ಶಕುಂತಲೆಯಾಗಲಿ, ಸಾವಿತ್ರಿಯಾಗಲಿ ಕೊನೆಗೆ ಸೀತೆಯೇ ಆಗಲಿ ಅವರ ಬದುಕು ಕೊನೆಯಿರದ ನೋವಿನ ಹಾದಿ. ಒಳ್ಳೆಯ ಗಂಡನನ್ನು ಪಡೆಯುವುದೋ, ದಾಂಪತ್ಯವನ್ನು ಉಳಿಸಿಕೊಳ್ಳುವುದೋ ಎಲ್ಲವೂ ಅವಳಿಗೆ ಹೋರಾಟ, ಹೋರಾಟ ಮತ್ತು ಹೋರಾಟ ಮಾತ್ರ. ಆದ್ದರಿಂದಲೇ ಹೆಣ್ಣಿನ ಜನಪದ ಕಥೆಗಳು ಇನ್ನೊಂದು ಲೋಕದ ಅನಾವರಣ. ಈ ಹೆಣ್ಣುಮಕ್ಕಳು ತಮಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಹೋರಾಟವಿರದ, ತಮ್ಮ ವ್ಯಕ್ತಿತ್ವ ಮತ್ತು ಬದುಕಿಗೆ ಆಯ್ಕೆಯ ಅವಕಾಶವಿರುವ, ತಮ್ಮನ್ನು ಶೋಷಿಸುವವರೆಗೆ ಕೊನೆಗೆ ಒಂದು ಸಣ್ಣ ಶಿಕ್ಷೆಯಾದರೂ ಆಗುವ ಪ್ರತಿಲೋಕವೊಂದನ್ನು ಕಟ್ಟಿಕೊಳ್ಳುತ್ತಾ ಹೋಗುತ್ತಾರೆ. ಅವರಲ್ಲಿ ಈ ಅಂಶವನ್ನು ರಾಮಾನುಜನ್ ಗುರುತಿಸುತ್ತಾರೆ ಮಾತ್ರವಲ್ಲ, ಒಂದು ಬಗೆಯ ಸಂತೋಷದಿಂದಲೇ ಅದನ್ನು ದಾಖಲಿಸುತ್ತಾರೆ.

Speaking of Siva ಪ್ರಸ್ತಾವನೆಯ ಮುಖ್ಯ ಆಯಾಮ ರಾಮಾನುಜನ್ ಅವರು ಭಕ್ತಿಯನ್ನು ನಿರ್ವಚಿಸುವ ಕ್ರಮ. ಈ ವಚನಗಳನ್ನು ತಾನು ಯಾರಿಗೆ ಪರಿಚಯಿಸುತ್ತಿದ್ದೇನೆ

ಎನ್ನುವ ಸ್ಪಷ್ಟತೆಯೊಂದಿಗೆ ಈ ತನಕ ಆ ವಚನಗಳನ್ನು ಮತ್ತು ಒಟ್ಟು ಭಕ್ತಿಸಾಹಿತ್ಯವನ್ನು ನೋಡಲಾಗಿರುವ ಕ್ರಮಕ್ಕಿಂತ ಭಿನ್ನವಾದ ನೆಲೆಯಲ್ಲಿ ರಾಮಾನುಜನ್ ಭಕ್ತಿಯನ್ನು ಚರ್ಚಿಸುತ್ತಾರೆ. ಸರಳವಾದ, ಉತ್ಸಾಹದ ಆರಾಧನಾ ಮಾದರಿಗಿಂತ ರಾಮಾನುಜನ್ ಅವರು ಇಲ್ಲಿ ಅನುಸರಿಸುತ್ತಿರುವುದು ವಿಶ್ಲೇಷಣೆ ಮತ್ತು ಸಂಶ್ಲೇಷಣೆಯ ಮಾದರಿಯನ್ನು. ಈ ಮಾದರಿಯು ರಾಮಾನುಜನ್ ಅವರ ಬರವಣಿಗೆಗೆ ಸಂಯಮನ್ನು ತಂದುಕೊಡುವುದರ ಜೊತೆಗೆ ಭಕ್ತಿಸಾಹಿತ್ಯವನ್ನು ಸಮಕಾಲೀನ ಗೊಳಿಸಿಕೊಳ್ಳುವ ಆವರಣವೊಂದನ್ನು ಸೃಷ್ಟಿಸಿಕೊಳ್ಳುವಲ್ಲಿಯೂ ನೆರವು ನೀಡುತ್ತದೆ. ವಚನಗಳು ಸಾಹಿತ್ಯ ಪಠ್ಯಗಳೆಷ್ಟೋ ಅಷ್ಟೇ ಸಾಮಾಜಿಕ ಮತ್ತು ರಾಜಕೀಯ ಪಠ್ಯಗಳೂ ಹೌದು ಎನ್ನುವುದನ್ನು ರಾಮಾನುಜನ್ ನಿಖರವಾಗಿ ಹೇಳುತ್ತಾರೆ. ವಚನಗಳಿಗಿರುವ ಧಾರ್ಮಿಕ ಆವರಣವು ಆ ವಚನಗಳ ಮುಖ್ಯ ಆವರಣಗಳಲ್ಲಿ ಒಂದು ಮಾತ್ರ ಎನ್ನುವ ಮೂಲಕ ಧಾರ್ಮಿಕ ಆವರಣವೇ ವಚನಗಳ ಮೂಲಕೇಂದ್ರ ಎನ್ನುವ ಸ್ಥಾಪಿತ ನೆಲೆಯನ್ನು ರಾಮಾನುಜನ್ ಅವರು ಒಡೆದುಹಾಕುತ್ತಾರೆ.

ವಚನಗಳ ಹಲವು ಕೇಂದ್ರಗಳನ್ನು, ಮಜಲುಗಳನ್ನು ಸಮಾನ ಪಾತಳಿಯಲ್ಲಿ ನಿಲ್ಲಿಸಲು ಸಾಧ್ಯವಾಗಿದ್ದು ರಾಮಾನುಜನ್ ಅವರ ಈ ಪ್ರಸ್ತಾವನೆಯ ಮುಖ್ಯವಾದ ಯಶಸ್ಸುಗಳಲ್ಲಿ ಒಂದು. ಭಾರತಿಯೇತರ ಓದುಗರಿಗೆ ವಚನಗಳನ್ನು ಎದುರಾಗಿಸಲು ಬೇಕಾಗುವ ಬೌದ್ಧಿಕ ವಿನ್ಯಾಸವನ್ನು ಈ ಪ್ರಸ್ತಾವನೆ ಬಹಳ ಶಕ್ತವಾಗಿ ರಚಿಸಿಕೊಡುತ್ತದೆ. ಯಾವ ಭಕ್ತಿಚಳುವಳಿಯನ್ನು ಆ ನಿರ್ದಿಷ್ಟ ಕಾಲಘಟ್ಟದ ಎಂದರೆ ಮಧ್ಯಯುಗೀನ ಕಾಲಘಟ್ಟಕ್ಕೆ ಅನುಭಾವಿಗಳು ನೀಡಿದ ಪ್ರತಿಕ್ರಿಯೆ ಎಂದೋ, ಪ್ರತಿರೋಧವೆಂದೋ ಸ್ಥಾಪಿಸಲಾಗಿತ್ತೋ ಆ ಭಿತ್ತಿಯನ್ನು ರಾಮಾನುಜನ್ ಅನಾಯಾಸವಾಗಿ ವಿಸ್ತರಿಸುತ್ತಾರೆ. ಭಕ್ತಿ ಚಳುವಳಿಯ ಒಂದು ಅಂಗವಾದ ಈ ಅಭಿವ್ಯಕ್ತಿಗಳು ಮನುಷ್ಯನ ಆಗಿನ ಎನ್ನಬಹುದಾದ ಪ್ರಶ್ನೆಗಳ ಅಭಿವ್ಯಕ್ತಿಯಾಗಿ ಇವುಗಳನ್ನು ನೋಡುತ್ತಾರೆ. ಇದರಿಂದ ವಚನಗಳಿಗೆ ಒಂದು ಸಾರ್ವತ್ರಿಕ ನೆಲೆ ಸಿಕ್ಕುವುದು ಸಾಧ್ಯವಾಯಿತು. ಜಗತ್ತಿನಾದ್ಯಂತ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಪಠ್ಯವಾಗಿ ಚರ್ಚಿಸುವವರು ವಚನಗಳಷ್ಟೇ ಮುಖ್ಯವಾಗಿ ಈ ಪ್ರಸ್ತಾವನೆಯನ್ನೂ ಅಗತ್ಯವಾಗಿ ಚರ್ಚಿಸುತ್ತಾರೆ ಎನ್ನುವ ಅಂಶ ಈ ಮಾತಿಗೆ ಪೂರಕವಾಗಿದೆ. ಕಿ.ರಂ.ನಾಗರಾಜ ಹೇಳುವ 'ಅಪ್ಪಟ ಕನ್ನಡದ ಸೇವೆ' ಎನ್ನುವ ಮಾತನ್ನು ಇಲ್ಲಿ ಮತ್ತೆ ಚರ್ಚೆಗೆ ಎತ್ತಿಕೊಳ್ಳಬಹುದಾದರೆ ಜಗತ್ತು ನಿಬ್ಬೆರಗಾಗಿ ನೋಡುವ ವಚನ ಸಾಹಿತ್ಯದ ಅನನ್ಯತೆಯನ್ನು ರಾಮಾನುಜನ್ ಕೇವಲ ಉತ್ಸಾಹ ಮತ್ತು ಹೆಮ್ಮೆಯಿಂದ ಮಾತ್ರ ಮಾಡುವುದಿಲ್ಲ. ವಚನ ಸಾಹಿತ್ಯದ ನಿತ್ಯ ರೂಪಾಂತರ ಶಕ್ತಿಯನ್ನು, ಅದರ ಅಪೂರ್ವ ಕಾಲಾತೀತ ಶಕ್ತಿ ಮತ್ತು ಸೌಂದರ್ಯದ ನೆಲೆಗಳನ್ನು ರಾಮಾನುಜನ್ ಅವರ ಸ್ವರೂಪ ಮತ್ತು ಪ್ರಮಾಣದಲ್ಲಿ ಮುಂದಿನ ಯಾವ ವಿದ್ವಾಂಸರಿಗೂ. ಅನುವಾದಕರಿಗೂ ಮಾಡಲು ಸಾಧ್ಯವಾಗಲಿಲ್ಲ ಎನ್ನುವ ಸತ್ಯದ ಎದುರಿಗೆ ಇಟ್ಟಾಗ ಮಾತ್ರ ರಾಮಾನುಜನ್ ಅವರ ಕೊಡುಗೆಯ ಮಹತ್ವ ಅರ್ಥವಾಗುತ್ತದೆ.

ಉದಾಹರಣೆಗೆ ಎಚ್.ಎಸ್. ಶಿವಪ್ರಕಾಶ್ ಅವರ ಮಹಾತ್ವಾಕಾಂಕ್ಷೆಯ ಅನುವಾದಿತ ಕೃತಿ 'I Keep the Vigil of Rudra' ನೋಡಬಹುದು. ನಿಸ್ಸಂದೇಹವಾಗಿ ಶಿವಪ್ರಕಾಶ್ ಭಕ್ತಿ ಸಾಹಿತ್ಯದ ಬಹುದೊಡ್ಡ ವಿದ್ವಾಂಸರು ಮತ್ತು ಕನ್ನಡದ ಬಹುಮುಖ್ಯ ಕವಿಗಳಲ್ಲಿ ಒಬ್ಬರು. ರಾಮಾನುಜನ್ ಅವರಂತೆಯೇ ಶಿವಪ್ರಕಾಶ್ ಅವರಿಗೂ ಕೂಡ ತಮಿಳು, ತೆಲುಗು ಮತ್ತು ಇತರ ಭಾರತೀಯ ಭಕ್ತಿಸಾಹಿತ್ಯದ ಆಳವಾದ ತಿಳಿವಳಿಕೆ ಇದೆ. ರಾಮಾನುಜನ್ ಅವರ ಬಹು ಚರ್ಚಿತ ಮತ್ತು ಜನಪ್ರಿಯ ಅನುವಾದದ ಎದುರಿಗೆ ಇನ್ನೊಂದು ಅನುವಾದವನ್ನು ಮಾಡುವುದರ ಸವಾಲಿನ ಅರಿವಿದ್ದೇ ಶಿವಪ್ರಕಾಶ್ ಈ ಅನುವಾದವನ್ನು ಕೈಗೆತ್ತಿಕೊಂಡಿದ್ದಾರೆ. ವಚನಗಳನ್ನು ಕುರಿತ ನಿಡುಗಾಲದ ಒಡನಾಟದ ಹಿನ್ನೆಲೆಯಲ್ಲಿ ಶಿವಪ್ರಕಾಶ್ ಮಾಡಿರುವ ಈ ಪ್ರಯತ್ನ ಸ್ವಾಗತಾರ್ಹವಾದುದೂ ಹೌದು. ಶಿವಪ್ರಕಾಶ್ ಕೂಡ ಇದಕ್ಕೊಂದು ಗಂಭೀರವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ. ಈ ಪ್ರಸ್ತಾವನೆಯಲ್ಲಿ ತಾವು ಆರಿಸಿಕೊಂಡಿರುವ ವಚನಗಳು, ಅವುಗಳ ಅನುಕ್ರಮಣಿಕೆ, ಅನುವಾದ ವಿಧಾನ ಈ ಎಲ್ಲವನ್ನೂ ಸುದೀರ್ಘವಾಗಿ ಚರ್ಚಿಸಿದ್ದಾರೆ.

ಶಿವಪ್ರಕಾಶ್ ಅವರ ಈ ಪ್ರಸ್ತಾವನೆಯು ವಚನಗಳ ಅನುಭಾವಿಕ ಮತ್ತು ಸೌಂದರ್ಯಾತ್ಮಕ ನೆಲೆಗಳನ್ನು ಮುನ್ನೆಲೆಗೆ ತರುವ ಉತ್ಸಾಹದ್ದು. ಶಿವಪ್ರಕಾಶ್‌ರ ಈ ಅನುವಾದವು ವಚನಗಳ ಅಮೂರ್ತ ನೆಲೆಯನ್ನೂ, ರೂಪಕ ಶಕ್ತಿಯನ್ನೂ ಇಂಗ್ಲಿಷ್‌ಗೆ ದಾಟಿಸುವ ಮಹತ್ವಾಕಾಂಕ್ಷೆಯದ್ದಾಗಿದೆ. ಸ್ವತಃ ಅತ್ಯುತ್ತಮ ಕವಿಯೂ ಆಗಿರುವ ಶಿವಪ್ರಕಾಶ್ ಕವಿಯ ಸ್ವಾತಂತ್ರ್ಯವನ್ನು ಬಳಸುವುದರಲ್ಲಿ ಯಾವ ಸಂಕೋಚವನ್ನೂ ಇಟ್ಟುಕೊಂಡಿಲ್ಲ. ತಮ್ಮ ಕವಿ ಪ್ರತಿಭೆಯು ವಚನಗಳ ಪರಿಣಾಮಕಾರಿಯಾದ ಅನುವಾದಕ್ಕೆ ಸಹಾಯ ಮಾಡಬಹುದಾದರೆ ಅದನ್ನು ಬಳಸಿಕೊಳ್ಳುವುದು ಸೂಕ್ತ ಎನ್ನುವುದರಲ್ಲಿ ಇವರಿಗೆ ಗಾಢವಾದ ನಂಬಿಕೆ ಇದೆ. ಜೊತೆಗೆ ಶಿವಪ್ರಕಾಶರಿಗೆ ರಾಮಾನುಜನ್ ಅವರಿಗೆ ಇಲ್ಲದ ಇನ್ನೊಂದು ಅನುಕೂಲವಿತ್ತು. ಈಗಾಗಲೇ ರಾಮಾನುಜನ್ ಅವರದೂ ಸೇರಿದಂತೆ ಮತ್ತೆ ಹಲವರ ಇಂಗ್ಲಿಷ್ ವಚನಗಳ ಅನುವಾದಗಳು ಲಭ್ಯವಿದ್ದವು. ಇವರ ಅನುವಾದ ಮೊದಲ ಅನುವಾದಗಳು ಎದುರಿಸುವ ಆತಂಕಗಳನ್ನು ಮೀರಿತ್ತು. ಹೀಗಾಗಿ ಶಿವಪ್ರಕಾಶರ ಪ್ರಯೋಗಶೀಲತೆಗೆ ಇಲ್ಲೊಂದು ವೇದಿಕೆ ಸಿದ್ಧವಾಗಿತ್ತು. ಜಗತ್ತಿನ ಶ್ರೇಷ್ಠ ಕಾವ್ಯದ ಮಾದರಿಗಳನ್ನು ಇಂಗ್ಲಿಷಿನ ಮೂಲಕ ಜಗತ್ತಿಗೆ ಪರಿಚಯಿಸಬೇಕಾದ ಹೊತ್ತಿನಲ್ಲಿ ರಾಮಾನುಜನ್ ಅವರಿಗೆ ಸಹಜವಾಗಿಯೇ ಇದ್ದ ಆತಂಕದ ಹೊಣೆಗಾರಿಕೆ ಶಿವಪ್ರಕಾಶರ ಮೇಲೆ ಇರಲು ಸಾಧ್ಯವಿರಲಿಲ್ಲ. ಇವರದ್ದು ಅಷ್ಟರ ಮಟ್ಟಿಗೆ ಅನುಕೂಲದ ಸ್ಥಿತಿ. ಈ ಅನುಕೂಲವನ್ನು ಶಿವಪ್ರಕಾಶ್ ಚೆನ್ನಾಗಿ ಬಳಸಿಕೊಂಡಿದ್ದಾರೆ ಎನ್ನುವುದು ಇದರ ಓದುಗರಿಗೆ ತಿಳಿಯುತ್ತದೆ. ಪರಿಚಿತವಾಗಿರುವ ಜನಪ್ರಿಯವಾಗಿರುವ ವಚನಗಳ ಅನುವಾದದ ಪ್ರಯೋಗಶೀಲ ಆವೃತ್ತಿಯನ್ನು ಮಾಡಲು ಶಿವಪ್ರಕಾಶರಿಗೆ ಎಲ್ಲಾ ಅವಕಾಶಗಳೂ ಇದ್ದವು. ಶಿವಪ್ರಕಾಶರ ಈ ಅನುವಾದಗಳನ್ನು ಮತ್ತು ಪ್ರಸ್ತಾವನೆಯನ್ನು ಓದಿದವರಿಗೆ ವಚನಗಳನ್ನು ಕುರಿತ ಕೆಲವು ಮಹತ್ವದ ಒಳನೋಟಗಳು

ಸಿಗುತ್ತವೆ. ಆದರೆ ವಚನ ಸಾಹಿತ್ಯದ ಇಂಗ್ಲಿಷಿನ ಮೊದಲ ಓದುಗರಿಗೆ ಈ ಎರಡರಲ್ಲಿ ಯಾವ ಪಠ್ಯವನ್ನು ಮೊದಲು ಓದಿಸಬೇಕು? ಎನ್ನುವ ಪ್ರಶ್ನೆ ಬಂದಾಗ ನಮ್ಮ ಮೊದಲ ಆಯ್ಕೆ ರಾಮಾನುಜನ್ ಅವರದ್ದೇ ಆಗಿರುತ್ತದೆ.

೬.೩. Samskara(೧೯೭೬)

ಯು. ಆರ್. ಅನಂತಮೂರ್ತಿಯವರ ಹೆಸರಾಂತ ಕಾದಂಬರಿ ಸಂಸ್ಕಾರ. ಇದನ್ನು ರಾಮಾನುಜನ್ ಇಂಗ್ಲಿಷ್‌ಗೆ ಅನುವಾದ ಮಾಡಿದ್ದಾರೆ. ಭಾರತೀಯ ಸಂಸ್ಕೃತಿಯಲ್ಲಿ ಒಂದು ಸಮುದಾಯದ ಸೂಕ್ಷ್ಮತೆಯನ್ನು ಕುರಿತ ವಿಷಯವನ್ನು ಜಾಗತಿಕ ಮಟ್ಟದಲ್ಲಿ ಚರ್ಚಿಸುವಂತೆ ಮಾಡಿದ ಅನುವಾದ ಇದಾಗಿದೆ. ಇದರಿಂದ ಅನಂತಮೂರ್ತಿಯವರನ್ನು ಒಂದು ಜಾಗತಿಕ ಮಟ್ಟದಲ್ಲಿ ಪರಿಚಯಿಸಿದ ಮತ್ತು ಗುರುತಿಸಿಕೊಳ್ಳಲು ಅನುವು ಮಾಡಿಕೊಟ್ಟ ಕೃತಿ ಎಂದರೆ ತಪ್ಪಾಗಲಾರದು.

ಯು. ಆರ್. ಅನಂತಮೂರ್ತಿ ಅವರ 'ಸಂಸ್ಕಾರ'ದ ಅನುವಾದ ಕೂಡ ಬೇರೆ ಬೇರೆ ಕಾರಣಗಳಿಗಾಗಿ ಭಾರತೀಯ ಸಾಹಿತ್ಯಕ್ಕೆ ರಾಮಾನುಜನ್ ಸಲ್ಲಿಸಿರುವ ಸೇವೆಯೇ ಅಗಿದೆ. ಕನ್ನಡದ ಅತ್ಯುತ್ತಮ ಕಲಾ ಪಠ್ಯವನ್ನು ಅಭಾರತೀಯರಿಗೆ ಪರಿಚಯಿಸುವುದು ಮಾತ್ರವಲ್ಲ, ಭಾರತೀಯ ಸಮುದಾಯ, ಅದರ ಸಾಮಾಜಿಕ ಸಾಂಸ್ಕೃತಿಕ ಮತ್ತು ಧಾರ್ಮಿಕ ಸಂರಚನೆಗಳನ್ನು ಕುರಿತ ಶೋಧವೂ ಆಗಿದೆ. ಸ್ವತಃ ಅನಂತಮೂರ್ತಿ ಹೇಳುವಂತೆ 'ಭಾರತೀಯ ಪರಂಪರೆ ಮತ್ತು ಸಮಕಾಲೀನ ಸಂದರ್ಭಗಳಿಗೆ ಉದ್ದಕ್ಕೂ ರಾಮಾನುಜನ್ ಅವರು ಸ್ಪಂದಿಸಿದ್ದು 'ಕ್ರಿಟಿಕಲ್ ಇನ್‌ಸೈಡರ್ ಆಗಿ'. ಯಾವ ಭಾರತೀಯ ಸಂರಚನೆಯನ್ನು ಕ್ರೂರ ಶ್ರೇಣೀಕೃತ ವ್ಯವಸ್ಥೆಯೆಂದು ಹೇಳಲಾಗುತ್ತಿತ್ತೋ ಮತ್ತು ಅದರ ಫಲಾನುಭವಿಗಳೆಂದು ಬ್ರಾಹ್ಮಣರನ್ನು ಗುರುತಿಸಲಾಗುತ್ತಿತ್ತೋ ಆ ಬ್ರಾಹ್ಮಣ ವರ್ಗ ಅಥವಾ ಶಾಸ್ತ್ರೀಯವಾಗಿ ಹೇಳುವುದಾದರೆ ಪುರೋಹಿತಶಾಹಿ ಒಳಗೇ ಕೊಳೆತುಹೋಗುತ್ತಿತ್ತು ಎನ್ನುವ ದುರಂತ ಸತ್ಯವನ್ನು ಹೇಳುವ ಕೃತಿ ಸಂಸ್ಕಾರ. ಇಂತದ್ದೊಂದು ಕೃತಿಯನ್ನು ಇಂಗ್ಲಿಷಿಗೆ ಅನುವಾದಿಸಬೇಕೆನ್ನುವ ರಾಮಾನುಜನ್ ಅವರ ಆಯ್ಕೆ ಮುಖ್ಯವಾದದ್ದು ಮತ್ತು ನಿರ್ಣಾಯಕವಾದದ್ದು. ಏಕೆಂದರೆ ಇಲ್ಲಿ ರಾಮಾನುಜನ್ ಅವರಿಗೆ ವ್ಯಕ್ತಿಗತವಾಗಿ ಅನಂತಮೂರ್ತಿ ಅವರ ಸ್ನೇಹ ಮಾತ್ರ ಮುಖ್ಯ ಅಲ್ಲವೇ ಅಲ್ಲ. ಬದಲಿಗೆ ಜಾಗತಿಕ ನೆಲೆಯಲ್ಲಿ ಭಾರತೀಯ ಸಮುದಾಯವೊಂದನ್ನು ಕುರಿತಂತೆ ಸ್ಥಾಪಿತವಾಗಿದ್ದ ಅನೇಕ ಅಪವ್ಯಾಖ್ಯಾನಗಳಿಗೆ ನೀಡುವ ಉತ್ತರವಾಗಿಯೂ ಅವರಿಗೆ ಇದು ಕಂಡಿದ್ದಿರಬೇಕು.

ಪುರೋಹಿತಶಾಹಿ ಇತರ ಬಹುಸಂಖ್ಯಾತರನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿದೆ. ತನ್ನ ಹಿಡಿತವನ್ನು ಅದು ಎಂದೂ ಬಿಟ್ಟುಕೊಟ್ಟಿಲ್ಲ, ಬಿಟ್ಟು ಕೊಡುವುದಿಲ್ಲ. ಭಾರತೀಯ ಸಮಾಜದ ರೋಗಗ್ರಸ್ತ ಸ್ಥಿತಿಗೆ ಮೂಲಕಾರಣವೇ ಈ ಪುರೋಹಿತಶಾಹಿ. ಆದರೆ

ಈ ಪುರೋಹಿತ ಶಾಹಿಯೇ ತನ್ನೊಳಗೇ ಎದುರಿಸುತ್ತಿರುವ ಒಳಪ್ರತಿರೋಧಗಳು ಪುರೋಹಿತಶಾಹಿಯನ್ನೇ ನಾಶಮಾಡಬಲ್ಲವು ಎನ್ನುವ ಸಾಧ್ಯತೆಯನ್ನು ಪರಿಣಾಮಕಾರಿಯಾಗಿ ತೋರಿಸಿದ ಕೃತಿ ಸಂಸ್ಕಾರ. ಪ್ರಾಣೇಶಾಚಾರ್ಯ ಸ್ಥಾಪಿತ ವ್ಯವಸ್ಥೆಯನ್ನು ಪ್ರತಿನಿಧಿಸುತ್ತಿದ್ದಾನೆ, ನಾರಾಯಣಪ್ಪ ಬಂಡಾಯವನ್ನು ಪ್ರತಿನಿಧಿಸುತ್ತಿದ್ದಾನೆ. ಪ್ರಾಣೇಶಾಚಾರ್ಯರು ಆ ವ್ಯವಸ್ಥೆಯ ಮುಖವಾಣಿಯಾಗಿ ಕಾಶಿಯಲ್ಲಿ ಪಂಡಿತರೊಂದಿಗೆ ವಾದ ಮಾಡಿ ಚಿನ್ನದ ಜರಿಯ ಶಾಲನ್ನು ಪಡೆದವರು. ನಾರಾಯಣಪ್ಪನಾದರೋ ಇಡೀ ದುರ್ವಾಸಪುರದ ಅಗ್ರಹಾರಕ್ಕೆ ಮಗ್ಗುಲು ಮುಳ್ಳಾಗಿರುವವನು. ಮಾಂಸಾಹಾರ, ಮದ್ಯ ಮತ್ತು ತನ್ನ ಪ್ರಿಯತಮೆಯ ಮೂಲಕ ಅಗ್ರಹಾರದ ಮಡಿ ವ್ಯವಸ್ಥೆಗೆ ಸೆಡ್ಡು ಹೊಡೆದಿರುವವನು. ಇಂಥ ನಾರಾಯಣಪ್ಪ ಸತ್ತಾಗ ಇವನ ಸಂಸ್ಕಾರವನ್ನು ಯಾರು ಮಾಡಬೇಕೆನ್ನುವ ಪ್ರಶ್ನೆಯ ಸುತ್ತ ಸಂಸ್ಕಾರ ಕಾದಂಬರಿ ಇದೆ. ನಾರಾಯಣಪ್ಪ ಬ್ರಾಹ್ಮಣ್ಯವನ್ನು ಬಿಟ್ಟರೂ ಬ್ರಾಹ್ಮಣ್ಯ ನಾರಾಯಣಪ್ಪನನ್ನು ಬಿಡುವುದಿಲ್ಲ ಎನ್ನುವ ಪಟ್ಟಭದ್ರ ಧಾರ್ಮಿಕ ಮನೋದಾಸ್ಯವನ್ನು ಈ ಕಾದಂಬರಿ ಮೂಲಭೂತವಾಗಿ ಎದುರಿಸುತ್ತದೆ.

ಈ ಪ್ರಶ್ನೆಯನ್ನು ಪರಿಹರಿಸಬಲ್ಲ ಶಕ್ತಿ ಇರುವ ಪ್ರಾಣೇಶಾಚಾರ್ಯರು ನಾರಾಯಣಪ್ಪನ ಗೆಳತಿ ಚಂದ್ರಿಯನ್ನು ಕೂಡುವುದರ ಮೂಲಕ ತಮ್ಮ ನೈತಿಕ ಶಕ್ತಿ ಕುಸಿಯಿತೆಂದು ತಿಳಿಯುತ್ತಾರೆ. ಭಾರತೀಯ ಸಮುದಾಯಕ್ಕೆ ಮಾತ್ರ ಸೀಮಿತವೂ, ವಿಶಿಷ್ಟವೂ ಆದ ಈ ಸನ್ನಿವೇಶವನ್ನು ಜಗತ್ತಿಗೆ ದಾಟಿಸಬೇಕೆಂದು ರಾಮಾನುಜನ್ ಅವರಿಗೆ ಯಾಕೆ ಅನ್ನಿಸಿತು. ರೋಗಗ್ರಸ್ತ ಭಾರತೀಯ ಸಮಾಜಕ್ಕೆ ಒಂದು ಮದ್ದು ರೋಗಕ್ಕೆ ಕಾರಣರಾದವರ ಬಳಿಯೇ ಇರಬಹುದೆ? ಇದೆಯಲ್ಲವೆ? ಎನ್ನುವ ಪ್ರಶ್ನೆಗಳನ್ನು ಮುಂದಿಡುವ ಸಂಸ್ಕಾರ ಕಾದಂಬರಿಯು ಭಾರತೀಯ ಸಮಾಜದ ಪಲ್ಲಟದ, ಹೊರಳುವಿಕೆಯ ಸೂಚನೆಯೂ ಹೌದು. ಈ ಎಲ್ಲಾ ಅಂಶಗಳನ್ನೂ ರಾಮಾನುಜನ್ ಅವರು ತಮ್ಮ ಪ್ರಸ್ತಾವನೆಯಲ್ಲಿ ಗಂಭೀರವಾಗಿ ಚರ್ಚಿಸುತ್ತಾರೆ. ಭಾರತೀಯ ಸಮಾಜದ ಬದಲಾಗುತ್ತಿರುವ ಗುಣಲಕ್ಷಣಗಳನ್ನು ಚರ್ಚೆಗೆ ಒಡ್ಡುವ ಮನಸ್ಸೂ ರಾಮಾನುಜನ್ ಅವರಿಗೆ ಇದ್ದಿರಬೇಕು. ರಾಮಾನುಜನ್ ಬಲು ಆಸ್ಥೆಯಿಂದ ಮಾಡಿದ ಈ ಅನುವಾದ ಜಗತ್ತಿನ ಅನೇಕ ವಿದ್ವಾಂಸರನ್ನು ಸೆಳೆಯಿತು. ಜಗತ್ತಿನ ಶ್ರೇಷ್ಠ ಮನೋವಿಜ್ಞಾನಿ ಎಂದೇ ಪರಿಗಣಿತವಾಗಿರುವ ಎರಿಕ್ ಎರಿಕ್ಸನ್ ಸಂಸ್ಕಾರ ಕಾದಂಬರಿಯನ್ನು ಕುರಿತಂತೆ ಸುದೀರ್ಘವಾದ ಮನೋವೈಜ್ಞಾನಿಕ ವಿಶ್ಲೇಷಣೆಯೊಂದನ್ನು ಮಾಡಿದರು. ಈ ವಿಶ್ಲೇಷಣೆ ಕೂಡ ಅಂತಿಮವಾಗಿ ಹೊರಳುಘಟ್ಟದಲ್ಲಿರುವ ಸಮುದಾಯ ಮತ್ತು ಅದರ ವ್ಯಕ್ತಿಗಳ ನಡವಳಿಕೆ ಮತ್ತು ಮನಸ್ಥಿತಿಯನ್ನು ಕುರಿತಂತೆ ಬಹುಮುಖ್ಯವಾದ ಅಧ್ಯಯನ ಎಂದು ಖ್ಯಾತಿಯನ್ನು ಪಡೆದಿದೆ. ಎರಿಕ್ಸನ್ ವಿಶ್ಲೇಷಣೆಗೆ ಅನುವು ಮಾಡಿಕೊಟ್ಟ ಈ ಕಾದಂಬರಿಯ ಅನುವಾದದ ಬಗೆಗೂ ಸಂದರ್ಶನವೊಂದರಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ. ಸಂದಿಗ್ಧತೆಗೆ ಅವಕಾಶವೇ ಮಾಡಿಕೊಡದಂತಹ ಅನುವಾದ ಇದಾಗಿದ್ದರಿಂದಲೇ ಆ ವಿಶ್ಲೇಷಣೆಯನ್ನು ಮಾಡುವುದು ತಮಗೆ ಸಾಧ್ಯವಾಯಿತು ಎಂದು

ಹೇಳುತ್ತಾರೆ. ವಿ.ಎಸ್. ನೈಪಾಲ್ ಇಂತಹ 'ಸಂಸ್ಕಾರ'ದ ಸಂಸ್ಕೃತಿಯನ್ನು ಕುರಿತು 'ಬರ್ಬೇರಿಯನ್ ಕಲ್ಚರ್'–ಅನಾಗರಿಕ ಸಂಸ್ಕೃತಿ–ಎಂದು ಕರೆದದ್ದು ಕೂಡ ಆ ಬ್ರಾಹ್ಮಣ್ಯ ಸಂಸ್ಕೃತಿಯ ವೈರುಧ್ಯಗಳನ್ನು ಸೂಚಿಸುತ್ತದೆ. ಈ ಕಾದಂಬರಿ ಜರ್ಮನ್ ಭಾಷೆಗೂ ಅನುವಾದಗೊಂಡು ಜಾಗತಿಕ ಸಾಹಿತ್ಯದ ವಲಯದಲ್ಲಿ ಖ್ಯಾತಿಯನ್ನು ಗಳಿಸಿಕೊಂಡಿದೆ.

೬.೪. Hymns for the Drowning(೧೯೮೧)

೧ ಮತ್ತು ೩ನೇ ಶತಮಾನದ ಸಂಗಂ ಸಾಹಿತ್ಯ ಮತ್ತು ೬ ರಿಂದ ೯ನೇ ಶತಮಾನದ ಭಕ್ತಿಸಾಹಿತ್ಯ ರಚಿತವಾಗಿರುವ ಮಧ್ಯಕಾಲೀನ ತಮಿಳು ಸಾಹಿತ್ಯವನ್ನು 'ಸಂಗಂ ಮಾರ್ಪಟ್ಟ ಸಾಹಿತ್ಯದ ಕಾಲ' ಎಂದು ಕರೆಯುತ್ತಾರೆ. ಈ ಕಾಲದಲ್ಲಿ ರಚಿತವಾದ ತಮಿಳಿನ ಬಹುಮುಖ್ಯವಾದ ಹಾಗೂ ಪ್ರಮುಖವಾದ ಕೃತಿಗಳೆಂದರೆ ನೀತಿಯನ್ನು ಹೇಳುವ 'ತಿರುಕ್ಕುರಳ್' ಹಾಗೂ ಇನ್ನೊಂದು ತಮಿಳು ಕಾವ್ಯಮೀಮಾಂಸೆಯ 'ಶಿಲಪ್ಪದಿಕಾರಂ'. ಪ್ರಸ್ತುತದಲ್ಲಿ ರಾಮಾನುಜನ್ ಅವರು ಅನುವಾದಕ್ಕೆ ಆಯ್ಕೆ ಮಾಡಿಕೊಂಡಿರುವುದು ೬ ರಿಂದ ೯ ಶತಮಾನದವರೆಗೆ ರಚಿತವಾದ ಭಕ್ತಿಸಾಹಿತ್ಯವನ್ನು. ಇದರಲ್ಲಿ ಎರಡು ಗುಂಪುಗಳು. ಒಂದು ನಾಯನ್ಮರರ ಭಕ್ತಿ ಸಾಹಿತ್ಯ. ಇವರು ಶೈವ ಸಂಪ್ರದಾಯದವರು. ಇವರು ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಬಹಳ ಹತ್ತಿರದವರಾಗಿದ್ದಾರೆ. ಮತ್ತೊಬ್ಬರು ವೈಷ್ಣವ ಪಂಥದವರು. ಅವರನ್ನು ಆಳ್ವಾರರು ಎಂದು ತಮಿಳು ಸಾಹಿತ್ಯದಲ್ಲಿ ಕರೆಯಲಾಗುತ್ತದೆ. ಈ ಆಳ್ವಾರರ ಭಕ್ತಿಸಾಹಿತ್ಯವನ್ನು ವೈಷ್ಣವ ಭಕ್ತಿಸಾಹಿತ್ಯವನ್ನು, ರಾಮಾನುಜನ್ ಅವರು 'Hymns for the Drowning' ಎಂಬ ಹೆಸರಿನಿಂದ ಇಂಗ್ಲಿಷ್‌ಗೆ ಅನುವಾದ ಮಾಡಿದ್ದಾರೆ. ಇದು ಭಾರತೀಯ ಹಾಗೂ ತಮಿಳು ಸಾಹಿತ್ಯವಲಯದಲ್ಲಷ್ಟೇ ಅಲ್ಲದೆ, ಜಾಗತಿಕ ಮಟ್ಟದಲ್ಲಿ ಬಹು ಚರ್ಚಿತವಾದ ಮತ್ತು ವಿಮರ್ಶೆಗೆ ಒಳಗಾದ ಅನುವಾದ ಕೃತಿಯಾಗಿದೆ. ಈ ಕೃತಿಯಲ್ಲಿ ತಮಿಳಿನ ಆಳ್ವಾರರ ಭಕ್ತಿಸಾಹಿತ್ಯದಿಂದ ಆರಿಸಿಕೊಂಡ ೮೩ ಪದ್ಯಗಳಿವೆ. ಇದಕ್ಕೆ ದೀರ್ಘವಾದ ಮುನ್ನುಡಿ ಮತ್ತು ಹಿನ್ನುಡಿಗಳನ್ನು ಬರೆದು, ತಮಿಳಿನ ಭಕ್ತಿಸಾಹಿತ್ಯ ಪರಂಪರೆ ಮತ್ತು ಅದಕ್ಕಿರುವ ದೀರ್ಘಕಾಲದ ಚರಿತ್ರೆ ಮತ್ತು ಮಹತ್ವವನ್ನು ವಿವರವಾಗಿ ಚರ್ಚಿಸಿದ್ದಾರೆ.

೬.೫. Poems of Love and War(೧೯೮೫)

ಪ್ರಾರಂಭಕಾಲದ ಮತ್ತು ಮಧ್ಯಕಾಲೀನ ತಮಿಳು ಕಾವ್ಯವನ್ನು ಒಟ್ಟಾರೆಯಾಗಿ ಜಾಗತಿಕ ವಲಯದಲ್ಲಿ ಪರಿಚಯಿಸುವ ಒಂದು ಪ್ರಯತ್ನ ಇದಾಗಿದೆ. ಅಹಂ ಮತ್ತು ಪುರಂ ಪದ್ಯಗಳಿವೆ. ಅಹಂ ಪದ್ಯಗಳನ್ನು ೫ ಭಾಗಗಳಾಗಿ ಕೊಡಲಾಗಿದೆ. ಪುರಂ ಪದ್ಯಗಳನ್ನು ನಂತರದಲ್ಲಿ ಕೊಡಲಾಗಿದೆ. ೩ನೇ ಭಾಗ ೫ರಿಂದ ೬ನೇ ಶತಮಾನದವರೆಗಿನ ತಮಿಳು ಪದ್ಯಗಳನ್ನು

ರಾಮಾನುಜನ್ ಆಯ್ಕೆ ಮಾಡಿಕೊಂಡು ಇಂಗ್ಲಿಷ್‌ಗೆ ಅನುವಾದ ಮಾಡಿದ್ದಾರೆ. ನಾಲ್ಕನೇ ಭಾಗದಲ್ಲಿ ಕೆಲವು ವೈಷ್ಣವ ಪಂಥದ ತಮಿಳು ಕಾವ್ಯಗಳ ಅನುವಾದವನ್ನು ಕೊಡಲಾಗಿದೆ. ಅದರಲ್ಲಿ ಮುರುಗನ್ ಬಗ್ಗೆ ಇರುವ ಪತ್ತುಪಾಟ್ಟಿನ ಪದ್ಯವಾದ 'ತಿರುಮುರುಕಾಟ್ರು ಪಡೈ' ಎಂಬ ಮುರುಗನ್ ಮೇಲೆ ಇರುವ ಒಂದು ಪದ್ಯವನ್ನು ಸೇರಿಸಲಾಗಿದೆ. ಹೀಗೆ ನಾಲ್ಕು ಭಾಗಗಳಾಗಿ ವಿಂಗಡಿಸಿ ಪದ್ಯಗಳನ್ನು ಅನುವಾದ ಮಾಡಿರುವ ಕೃತಿ ಇದಾಗಿದೆ. ಕೊನೆಯದಾಗಿ ದೀರ್ಘವಾದ ಹಿನ್ನುಡಿಯನ್ನು ಕೊಡಲಾಗಿದೆ. ಇದರಲ್ಲಿ ತಮಿಳು ಸಾಹಿತ್ಯ ಪ್ರಪಂಚದ ಮೌಲ್ಯಗಳು ಮತ್ತು ಸಾಹಿತ್ಯಮೀಮಾಂಸೆಯ ವೈಶಿಷ್ಟ್ಯತೆಯನ್ನು ಗುರುತಿಸಲಾಗಿದೆ.

ತಮಿಳಿನ ಸಂಗಂ ಸಾಹಿತ್ಯದ ಅಹಂ ಮತ್ತು ಪುರಂ ಕಾವ್ಯಮೀಮಾಂಸೆ ಬೇರೆ ಬೇರೆಯಾಗಿ ಹಾಗೂ ಅನಂತರದಲ್ಲಿ ಎರಡೂ ಬೆಸೆದುಕೊಂಡಿರುವ ಸಾಹಿತ್ಯ ಪರಂಪರೆಯಾಗಿ ನೋಡುವ ರಾಮಾನುಜನ್ ಅವರ ದೃಷ್ಟಿಕೋನವನ್ನು ಇಲ್ಲಿ ಕಾಣಬಹುದಾಗಿದೆ. ಅದರಂತೆಯೇ ತಮಿಳಿನ ಭಕ್ತಿಪರಂಪರೆಯೂ ಕೂಡ ಈ ಎರಡು ಸಾಹಿತ್ಯ ಪ್ರಕಾರಗಳಲ್ಲಿ ಬೇರು ಬಿಟ್ಟಿರುವುದನ್ನು ಗಮನಿಸಬಹುದಾಗಿದೆ. ಇವೆಲ್ಲವನ್ನೂ ಒಟ್ಟಾರೆಯಾಗಿ ನೋಡುವ ದೃಷ್ಟಿಕೋನದಿಂದ ಈ ಸಂಕಲನ ಹುಟ್ಟಿಕೊಂಡಿದೆ ಎಂದರೆ ತಪ್ಪಾಗಲಾರದು. ಆ ಕಾರಣದಿಂದ 'ಎಟ್ಟುತೊಗೈ'ನ ಪುರಂ ವಿಭಾಗವನ್ನು ಸೇರಿದ 'ಪದಿಟ್ರುಪತ್ತು' ಮತ್ತು 'ಪುರನಾನೂರಿ'ನ ಪದ್ಯಗಳನ್ನು ಇಲ್ಲಿ ಅನುವಾದಿಸಿ ಕೊಡಲಾಗಿದೆ. ಜೊತೆಗೆ 'ಕಲಿತ್ತೊಗೈ' ಮತ್ತು ವೈಷ್ಣವ ಭಕ್ತಿಪರಂಪರೆಯ 'ಪರಿಪಾಡಲ್'ನ್ನೂ ಇಲ್ಲಿ ಅನುವಾದಿಸಲಾಗಿದೆ. ಇನ್ನೊಂದು 'ಪತ್ತುಪಾಟ್ಟಿ'ನಿಂದ 'ನಕ್ಕೀರರ್' ಎಂಬ ಕವಿ ಬರೆದ 'ತಿರುಮುರುಗಾಟ್ರುಪಡೈ' ಪದ್ಯದ ಭಾಗಗಳನ್ನೂ ಸಹ ಇಲ್ಲಿ ಅನುವಾದಕ್ಕೆ ಆಯ್ಕೆ ಮಾಡಿಕೊಂಡಿರುತ್ತಾರೆ. ಇಲ್ಲಿ ಅಹಂ ಸಾಹಿತ್ಯ ಪ್ರಕಾರದಲ್ಲಿ ಮಾತ್ರ ಪ್ರೇಮಕ್ಕೆ ಸಂಬಂಧಿಸಿದ ಕಾವ್ಯಗಳನ್ನು ಅನುವಾದ ಮಾಡಿದ್ದಾರೆ. ಉಳಿದದ್ದು ಪುರಂ ಸಾಹಿತ್ಯ ಪ್ರಕಾರಕ್ಕೆ ಮತ್ತು ಭಕ್ತಿಸಾಹಿತ್ಯಕ್ಕೆ ಸಂಬಂಧಿಸಿದ ಪದ್ಯಗಳಾಗಿವೆ.

ಸಂಸ್ಕೃತ ಪರಂಪರೆಗಿಂತ ಭಿನ್ನವಾದ ಸಾಹಿತ್ಯ ಪರಂಪರೆ ಇದು ಎಂಬುದು ಹಲವು ವಿದ್ವಾಂಸರ ಅಭಿಪ್ರಾಯ ಬಹಳ ಹಿಂದಿನಿಂದಲೂ ಇದೆ. ಇತ್ತೀಚೆಗೆ 'ಸಂಗಂ' ಸಾಹಿತ್ಯದಿಂದ ಕೆಲವು ಪದ್ಯಗಳನ್ನು ಆಯ್ಕೆ ಮಾಡಿ ನೇರವಾಗಿ ತಮಿಳು ಭಾಷೆಯಿಂದಲೇ ಕನ್ನಡಕ್ಕೆ ಅನುವಾದ ಮಾಡಿಸಿರುವ 'ನಿಚ್ಚಂ ಪೊಸತು'(೨೦೧೫) ಎಂಬ ಕೃತಿ ಪ್ರಕಟವಾಗಿದೆ. ಈ ಕೃತಿಯನ್ನು ತಮಿಳು ವಿದ್ವಾಂಸರಾದ ಎಸ್. ಕಾರ್ಲೋಸ್ ಅವರು ಸಂಪಾದಿಸಿದ್ದಾರೆ. ಇದನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಿಸಿದೆ. ಇದರಲ್ಲಿ ಸಂಗಂ ಸಾಹಿತ್ಯದ ಪರಿಚಯ, ಅದರ ತಾತ್ವಿಕತೆ ವಿಷಯಗಳನ್ನು ಕುರಿತು ವಿವಿಧ ವಿದ್ವಾಂಸರಿಂದ ಬರೆಸಿದ ಮುಖ್ಯ ಲೇಖನಗಳೂ ಇವೆ. 'ಎಟ್ಟುತ್ತೊಗೈ' ಮತ್ತು 'ಪತ್ತುಪಾಟ್ಟು' ಎಂಬ ಎರಡು ವಿಂಗಡಣೆಯ ಕೆಳಗೆ ಸಂಗಂ ಸಾಹಿತ್ಯದಿಂದ ಆಯ್ದ ಪದ್ಯಗಳನ್ನು ಅನುವಾದ ಮಾಡಿ ಕೊಡಲಾಗಿದೆ. ೧೭೫ ಕವಿತೆಗಳನ್ನು

ಒಳಗೊಂಡಿರುವ ಈ ಸಂಕಲನ ಒಂದು ಬಗೆಯ ಸಾಮೂಹಿಕ ಅನುವಾದವಾಗಿದ್ದು, ಒಂದು ಉತ್ತಮ ಅನುವಾದಿತ ಕೃತಿಯಾಗಿದೆ.

೬.೬. Folktales from India(೧೯೯೨)

ಭಾರತೀಯ ಹಾಗೂ ಪಾಶ್ಚಾತ್ಯ ಓರಿಯಂಟಲಿಸ್ಟ್ ವಿದ್ವಾಂಸರಿಂದ ಸಂಪೂರ್ಣವಾಗಿ ಅವಜ್ಞೆಗೆ ಒಳಗಾಗಿದ್ದ ಪ್ರಾಂತೀಯ ಅಥವಾ ಸ್ಥಳೀಯ ಭಾಷೆಗಳ ಜಾನಪದ / ಮೌಖಿಕ / ಅಲಿಖಿತ ಸಾಹಿತ್ಯವನ್ನು ಮತ್ತು ಸಮುದಾಯಗಳ ವಿಶಿಷ್ಟ ಅನನ್ಯ ಸಂಸ್ಕೃತಿಯನ್ನು ಗಂಭೀರವಾಗಿ ಪರಿಗಣಿಸಿ, ಆ ಪರಂಪರೆಯ ಕಥೆ–ಗಾದೆ–ಒಗಟು–ಲಾವಣಿ–ಗೀತೆಗಳನ್ನು ಇಂಗ್ಲಿಷಿಗೆ ಅನುವಾದಿಸಿ, ಅವುಗಳನ್ನು ವಿದ್ವತ್ಪೂರ್ಣವಾಗಿ ವ್ಯಾಖ್ಯಾನಿಸಿದವರಲ್ಲಿ ರಾಮಾನುಜನ್ ಅವರು ಅಗ್ರಗಣ್ಯರು. ಅಷ್ಟೇ ಅಲ್ಲದೆ, ಭಾರತದ ಪ್ರಾಂತೀಯ ಭಾಷೆಗಳಲ್ಲಿಯೂ ಹೆಚ್ಚಿನ ಭಾರತೀಯರಿಗೆ(ಪ್ರಾಚೀನ ಕನ್ನಡ ಸಾಹಿತ್ಯ ಕೃತಿಗಳು ಮತ್ತು ಸಂಸ್ಕೃತ ಸಾಹಿತ್ಯ ಮಾತ್ರ ಪರಿಚಯವಿದ್ದ ವಿದ್ವಾಂಸರಿಗೆ) ಮತ್ತು ಪಾಶ್ಚಾತ್ಯ ಓರಿಯಂಟಲಿಸ್ಟ್ ವಿದ್ವಾಂಸರಿಗೂ ಸಂಪೂರ್ಣವಾಗಿ ಅಪರಿಚಿತವಾಗಿದ್ದ ಕನ್ನಡದ ವಚನ ಸಾಹಿತ್ಯ, ತಮಿಳಿನ ಸಂಗಂ ಸಾಹಿತ್ಯ ಮತ್ತು ಎಲ್ಲಾ ಪ್ರಾಂತೀಯ ಸ್ಥಳೀಯ ಭಾಷೆಗಳ ಜಾನಪದ / ಮೌಖಿಕ / ಅಲಿಖಿತ ಸಾಹಿತ್ಯವನ್ನು ಪ್ರಾಚೀನ ಹಾಗೂ ಸಂಸ್ಕೃತ ಸಾಹಿತ್ಯಕ್ಕಿಂತಲೂ ಶ್ರೇಷ್ಠ ಸಾಹಿತ್ಯ ಇದೆ ಎಂಬುದನ್ನು ಇಪ್ಪತ್ತನೆಯ ಶತಮಾನದ ಎಪ್ಪತ್ತರ ದಶಕದಲ್ಲಿ ತೋರಿಸಿಕೊಟ್ಟವರು ರಾಮಾನುಜನ್ ಅವರು. ಇದು ಅವರಿಂದಾದ ಒಂದು ಜಾಗತಿಕವಾದ ಅಸಾಧಾರಣ ಸಾಧನೆ.

ಈ ಅಧ್ಯಯನದ ಸಂದರ್ಭದಲ್ಲಿ ರಾಮಾನುಜನ್ ಅವರು ವ್ಯಾಖ್ಯಾನಿಸಿದ 'ಅಹಂ–ಪುರಂ' (Akam-Puram) ಅಥವಾ 'ಹಿರಿಯ ಪರಂಪರೆ(Greater Tradition) ಕಿರುಪರಂಪರೆ (Little Tradition) ಇತ್ಯಾದಿ ಪರಿಕಲ್ಪನೆಗಳು ಅನುವಾದ ಕ್ಷೇತ್ರವನ್ನಷ್ಟೇ ಅಲ್ಲದೆ ಜಾನಪದ ಅಧ್ಯಯನ ಕ್ಷೇತ್ರವನ್ನೂ ವ್ಯಾಪಕವಾಗಿ ಪ್ರಭಾವಿಸಿ ಸೂಕ್ಷ್ಮವಾದ ಅಧ್ಯಯನಕ್ಕೆ ದಾರಿ ಮಾಡಿಕೊಟ್ಟವು. ಆದರೆ ಭಾರತಕ್ಕೆ ಬಂದಂತಹ ಮುಸಲ್ಮಾನರಾಗಲೀ, ಆಂಗ್ಲರಾಗಲೀ ಮೊದಲಿಗೆ ಈ ದೇಶದ ಮೂಲ ಸಂಸ್ಕೃತಿಯಾದ ಜಾನಪದ ಅಧ್ಯಯನಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಲಿಲ್ಲ. ಕೇವಲ ಈ ನೆಲದ ಅಪಾರವಾದ ನೈಸರ್ಗಿಕ ಸಂಪತ್ತನ್ನು ಬಳಸಿಕೊಳ್ಳುವುದು, ರಾಜಪ್ರಭುತ್ವದ ಒಡೆತನ, ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಈ ನೆಲದಲ್ಲಿ ಗಟ್ಟಿಯಾಗಿ ನೆಲೆಸುವ ಹುನ್ನಾರ ಹಾಗೂ ವ್ಯಾಪಾರ ವಹಿವಾಟು, ಇಡೀ ಭಾರತದಲ್ಲಿ ತಮ್ಮ ಧರ್ಮದ ಸ್ಥಾಪನೆಗಾಗಿ ಹೆಚ್ಚು ಗಮನ ಕೊಟ್ಟರು. ಜಾನಪದದ ಹಲವಾರು ಆಚಾರ–ವಿಚಾರಗಳು, ಸಾಂಸ್ಕೃತಿಕ ಆಚರಣೆಗಳು, ಹಬ್ಬದ ಆಚರಣೆಗಳು ಅವರಿಗೆ ವಿನೋದದಂತೆ ಕಂಡು, ಕೇವಲ ಮನೋರಂಜನೆಯ ವಸ್ತುಗಳು ಎಂದು ಭಾವಿಸಿದ್ದರು.

ಆದರೆ ಇಂಗ್ಲಿಷರು ತಮ್ಮ ಧರ್ಮ, ಆಚಾರ ವಿಚಾರಗಳನ್ನು ಭಾರತೀಯರಿಗೆ ತಿಳಿಸುವ ಅಥವಾ ಹೇರುವ ಸಲುವಾಗಿ ಹಲವಾರು ಪ್ರಾದೇಶಿಕ ಅಧ್ಯಯನದ ಕಡೆ ಗಮನ ಕೊಟ್ಟರು. ಅದು ಕೇವಲ ಭಾರತದ ನಾಗರಿಕತೆಯ ಅಧ್ಯಯನದ ಅಥವ ಜಾನಪದದ ಮೇಲಿನ ಆಸಕ್ತಿಯಿಂದಲ್ಲ. ತಮ್ಮ ಧರ್ಮವನ್ನು ಬಿತ್ತುವ ಸಲುವಾಗಿ ಸ್ಥಳೀಯರ ಜೊತೆ ಬೆರೆಯುವ, ಬೆರೆತು ತಮ್ಮ ಅಭಿವ್ಯಕ್ತಿಯನ್ನು ಹೇರುವ ತಂತ್ರವಾಗಿ ಜಾನಪದ ಅಧ್ಯಯನದ ಕಡೆ ಗಮನ ನೀಡಿದರು. ತಮ್ಮ ಅಭಿವ್ಯಕ್ತಿಯನ್ನು ತಮ್ಮದೇ ಆದ ಭಾಷೆಯಲ್ಲಿ, ತಮಗೆ ಬೇಕಾದಂತೆ, ತಮಗೆ ಬೇಕಾಗಿದ್ದನ್ನು ಭಾರತೀಯರ ಮನದಾಳದಲ್ಲಿ ಬೇರೂರುವಂತೆ ಮಾಡಿದರು. ಆದರೆ ಅವರದೇ ಭಾಷೆಯನ್ನು ಬಳಸಿ ಅವರಿಗೆ ಭಾರತದ ಮೂಲ ಸಂಸ್ಕೃತಿಯ ಜಾನಪದವನ್ನು ಅವರಿಗೆ ತಿಳಿಸಲು ದೀರ್ಘಕಾಲವೇ ಬೇಕಾಯಿತು. ಅದರ ಪ್ರಯತ್ನವಾಗಿ ಎ.ಕೆ.ರಾಮಾನುಜನ್ ಅವರು ಭಾರತದ ಜನಪದದ ಆಳವಾದ ಅಧ್ಯಯನವನ್ನು ಮಾಡಿ ಪಾಶ್ಚಾತ್ಯರಿಗೆ ಅರ್ಥವಾಗುವ ಹಾಗೆ ತಿಳಿಸಲು ಪ್ರಯತ್ನಿಸಿ, ಭಾತರದ ಶ್ರೀಮಂತ ಸಂಸ್ಕೃತಿಯ ಇನ್ನೊಂದು ಮುಖವನ್ನು ಪ್ರಪಂಚದಾದ್ಯಂತ ಪರಿಚಯಿಸಿದರು.

ರಾಮಾನುಜನ್ ಅವರು ಜಾಗತಿಕ ಮಟ್ಟದ ಜಾನಪದ ಸಾಹಿತ್ಯಕ್ಕೆ ಸಮನಾಗಿ ಭಾರತದ ದೇಶಿ ಭಾಷೆಗಳಲ್ಲಿ ಪ್ರಚಲಿತದಲ್ಲಿರುವ ಮೌಖಿಕ ಸಾಹಿತ್ಯದ ಜನಪದ ಕಥೆಗಳನ್ನು ಇಂಗ್ಲಿಷ್‌ಗೆ ಅನುವಾದಿಸಿ 'ಫೋಕ್ ಟೇಲ್ಸ್ ಪ್ರಂ ಇಂಡಿಯಾ' ಎಂಬ ಹೆಸರಿನಿಂದ ೧೯೯೧ರಲ್ಲಿ ಮಾಡ್ರನ್ ಕ್ಲಾಸಿಕ್ ಸೀರಿಸ್‌ನಲ್ಲಿ ಪೆಂಗ್ವಿನ್ ಬುಕ್ಸ್ ಅವರಿಂದ ಪ್ರಕಟಿಸಿದ್ದಾರೆ. ಭಾರತದ ೨೨ ಭಾಷೆಗಳಿಂದ ಆಯ್ದ ೧೧೬ ಜನಪದ ಕಥೆಗಳು ಈ ಸಂಗ್ರಹದಲ್ಲಿವೆ. ಭಾರತೀಯ ಕಥೆಗಳ ಬಹುರೂಪಿ ಮತ್ತು ಪರಿವರ್ತನಶೀಲ ಗುಣವನ್ನು ಈ ಕಥೆಗಳು ಪ್ರತಿನಿಧಿಸುತ್ತವೆ. ರಾಮಾನುಜನ್ ಅವರು ಹೇಳುವ ಹಾಗೆ "ಒಂದು ಭಾಷೆಗೆ ಮತ್ತು ಪ್ರಾಂತ್ಯಕ್ಕೆ ಸೇರಿದ ಒಬ್ಬೊಬ್ಬ ಕತೆಗಾರ ಹೇಳಿದ ಕತೆಯನ್ನು ಆಯ್ಕೆ ಮಾಡಿಕೊಂಡಿದ್ದರೂ ಇಲ್ಲಿನ ಒಂದೊಂದು ಕತೆಯೂ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ಕಂಡುಬರುತ್ತವೆ. ಕತೆಗಾರರು ಕತೆ ಹೇಳುತ್ತಿರುವಾಗಲೇ ಕೇಳಿ ಲಿಖಿತ ರೂಪಕ್ಕೆ ತಂದ ಇಲ್ಲಿನ ಕತೆಗಳನ್ನು ನೀವು ಅಥವಾ ಬೇರೆ ಯಾರಾದರೂ ಓದಿ, ಅಲ್ಪಸ್ವಲ್ಪ ಮಾರ್ಪಾಟುಗಳೊಂದಿಗೆ ಅನ್ಯರಿಗೆ ಹೇಳಿದಾಗ ಅವು ಮತ್ತೆ ಜೀವಂತವಾಗುತ್ತವೆ. ಈ ಕತೆಗಳನ್ನು ನಾನು ಅವರಿವರನ್ನು ಹೇಳಿ ಸಂಗ್ರಹಿಸಿದೆ. ಕತೆಗಳನ್ನು ಆಯ್ದುಕೊಳ್ಳುವಾಗ, ವ್ಯವಸ್ಥಿತವಾಗಿ ಪೋಣಿಸುವಾಗ ಮತ್ತು ಅನುವಾದಿಸುವಾಗ ಅನಿವಾರ್ಯವಾಗಿ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿದ್ದೇನೆ"[೧೬]

ಜನಪದ ಕಥೆಗಳಲ್ಲಿ ನಂಬಿಕೆ, ಪುರಾಣ, ಆಚರಣೆ, ಕಾವ್ಯಗುಣ ಮತ್ತು ಸಾಂಸ್ಕೃತಿಕ ಸಂದರ್ಭಗಳು ಹುದುಗಿರುತ್ತವೆ. ಅದೊಂದು ಚಲನಶೀಲ ರೂಪಕ. ಹಾಗಾಗಿ ಅದು ಪ್ರತಿಸಲದ

ಕಥನದಲ್ಲೂ ಹೊಸ ಹೊಸ ಅರ್ಥಗಳನ್ನು ಪಡೆದುಕೊಳ್ಳುತ್ತದೆ. ರಾಮಾನುಜನ್ ಅವರು ಕತೆಗಳನ್ನು ಇಂಗ್ಲಿಷ್‌ಗೆ ಅನುವಾದಿಸುವಾಗ ಸರಳವಾಗಿ ನಿರಾಲಂಕಾರವಾಗಿ, ನಿರೂಪಣಾಪ್ರಧಾನವಾಗಿ ಅನುವಾದಿಸಿರುತ್ತಾರೆ. ಜಾನಪದ ಕಥೆಗಳ ಮೂಲದ್ರವ್ಯವಾದ ಕಥಾ ನಿರೂಪಣಾ ಕ್ರಮವನ್ನು ಅಚ್ಚುಕಟ್ಟಾಗಿ ಅನುಸರಿಸಿದ್ದಾರೆ. ಕಥೆಯಲ್ಲಿನ ವಿವರಗಳನ್ನಾಗಲೀ, ಆಶಯಗಳನ್ನಾಗಲೀ ಕೈಬಿಡದೆ ಕಥಾಸಂವಿಧಾನವನ್ನು ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ. ಮೂಲ ಭಾಷೆಯ ಕಥೆಗಳನ್ನು ಇಂಗ್ಲಿಷ್ ಅನುವಾದದಲ್ಲಿ ಚ್ಯುತಿ ಬರದಂತೆ ನಿರೂಪಿಸಿದ್ದಾರೆ.

ಈ ಕತೆಗಳು ಇದೇ ಮೊದಲಬಾರಿಗೆ ಇಂಗ್ಲಿಷ್‌ನಲ್ಲಿ ಅನುವಾದಗೊಂಡು ಪ್ರಕಟವಾಗುತ್ತಿವೆ. ಆಯಾಯ ಭಾರತೀಯ ಭಾಷೆಯ ವಕ್ತೃಗಳು ಹೇಳಿದ ಕತೆಗಳನ್ನೇ ರಾಮಾನುಜನ್ ಅವರು ಇಲ್ಲಿ ಅನುವಾದಿಸಿದ್ದಾರೆ.

ಭಾರತ ದೇಶದಲ್ಲಿ ಲಿಖಿತ ಕಾವ್ಯ ಪರಂಪರೆಯಷ್ಟೇ ಬಾಯ್ಮಾತಿನ ಪರಂಪರೆ ಕೂಡ ಬಲಿಷ್ಠವಾಗಿದೆ. ಭಾರತೀಯ ಸಂಸ್ಕೃತಿಯನ್ನು ಅಭ್ಯಾಸ ಮಾಡುವವರು ಲಿಖಿತ ಅಭಿಜಾತ ಸಾಹಿತ್ಯದ ಜೊತೆಗೆ ಮೌಖಿಕ ಸಾಹಿತ್ಯ ಪರಂಪರೆಯನ್ನು ಅಧ್ಯಯನ ಮಾಡುವುದರಿಂದ ಭಾರತೀಯ ಸಂಸ್ಕೃತಿಯ ಬಹುರೂಪತೆ ಮತ್ತು ವಿಶಿಷ್ಟತೆಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಅದರಲ್ಲೂ ಭಾರತೀಯ ಸಂಸ್ಕೃತಿ ನಿಂತಿರುವುದೇ ಬಹುಭಾಷೆಗಳ ಮತ್ತು ಬಹುಸಂಸ್ಕೃತಿಗಳ ಪ್ರಕ್ರಿಯೆಯ ಮೇಲೆ ಎನ್ನಬಹುದು.

ರಾಮಾನುಜನ್ ಅವರು ಈ ಕೃತಿಯನ್ನು ತುಂಬಾ ಅರ್ಥವತ್ತಾಗಿ ಮತ್ತು ಶಾಸ್ತ್ರೀಯವಾಗಿ ರೂಪಿಸಿದ್ದಾರೆ. ಪ್ರತಿ ಕಥೆಗೂ ವಿವರವಾದ ಸಂದರ್ಭ, ವಿಶೇಷ ಮುಂತಾದ ವಿವರಗಳ ಟಿಪ್ಪಣಿಯನ್ನು ಕೊಟ್ಟಿದ್ದಾರೆ. ಈ ಕೃತಿಗೆ ಬರೆದಿರುವ ದೀರ್ಘವಾದ ಪ್ರಸ್ತಾವನೆಯು ಜನಪದ ಕಥೆಗಳ ವೈವಿಧ್ಯತೆಯನ್ನು ಅಧ್ಯಯನ ಮಾಡುವವರಿಗೆ ಬಹುಮುಖ್ಯವಾದ ಆಕರವಾಗಿದೆ. ಬಹುಮಟ್ಟಿಗೆ ಭಾರತದ ಬಹುಭಾಷೆಗಳ ಜನಪದ ಕಥೆಗಳು ಇಲ್ಲಿ ಸಂಕಲಿತವಾಗಿವೆ. ಒಂದೊಂದೂ ಕಥೆಯೂ ನಿಜಕ್ಕೂ ರಾಮಾನುಜನ್ ಅವರು ಜಾನಪದ ಕಥೆಗಳ ಕ್ಷೇತ್ರಕ್ಕೆ ಮತ್ತು ಜಾಗತಿಕ ಜಾನಪದ ವಲಯಕ್ಕೆ ನೀಡಿದ ಒಂದು ಅಪೂರ್ವ ಕಾಣಿಕೆಯಾಗಿದೆ.

ಈ ಕೃತಿಯನ್ನು 'ಭಾರತೀಯ ಜನಪದ ಕತೆಗಳು' ಎಂಬ ಶೀರ್ಷಿಕೆಯಲ್ಲಿ ಮಹಾಬಲೇಶ್ವರರಾವ್ ಅವರು ಅನುವಾದ ಮಾಡಿದ್ದಾರೆ. ಈ ಕೃತಿಯನ್ನು ನ್ಯಾಷನಲ್ ಬುಕ್ ಟ್ರಸ್ಟ್, ನವದೆಹಲಿ ೨೦೦೦ನೇ ಇಸವಿಯಲ್ಲಿ ಪ್ರಕಟಣೆ ಮಾಡಿದೆ.

The Flowering Tree : A Woman's Tale, Towards a Counter-system: Women's Tales, Telling Tales ಹಾಗೂ Two Realms of Kannada Folklore. ಎನ್ನುವ ಇಂಗ್ಲಿಷ್ ಲೇಖನಗಳ ಕ್ರಮವಾದ ಅನುವಾದಗಳೇ 'ಹೂ ಬಿಡುವ ಮರ: ಒಂದು

ಹೆಂಗಸಿನ ಕತೆ', 'ಪ್ರತಿವ್ಯವಸ್ಥೆಯತ್ತ: ಹೆಂಗಸರ ಕತೆಗಳು', 'ಕತೆ ಹೇಳುವುದು' ಈ ಪ್ರಬಂಧಗಳಲ್ಲಿ ಬರುವ ಪರಿಕಲ್ಪನೆಗಳು ಹಾಗೂ ವಿಚಾರಧಾರೆಗಳನ್ನು ರಾಮಾನುಜನ್ ಅವರು ಜನಪದ ಕಥೆಗಳ ಅಧ್ಯಯನದ ಹಿನ್ನೆಲೆಯಲ್ಲಿ ಅರ್ಥಪೂರ್ಣವಾಗಿ ವಿವರಿಸಿದ್ದಾರೆ.

೬.೮. The Flowering Tree(೧೯೯೭)

ರಾಮಾನುಜನ್ ಅವರ 'A Flowering Tree And Other Oral Tales from India' ಕೃತಿಯಲ್ಲಿ ೭೭ ಕನ್ನಡ ಜನಪದ ಕಥೆಗಳಿವೆ. ಅವರು ಜನಪದ ಕತೆಗಳನ್ನು ಕರ್ನಾಟಕದ ಧಾರವಾಡ, ಬೆಳಗಾಂ, ಬಿಜಾಪುರ ಮುಂತಾದ ಭಾಗಗಳಿಂದ, ವಕ್ತೃಗಳಿಂದ ಸಂಗ್ರಹಿಸಿದ್ದಾರೆ. ಇವು ಬರಿ ಕನ್ನಡದ ಜನಪದ ಕತೆಗಳು ಮಾತ್ರವಲ್ಲದೇ ಭಾರತೀಯ ಇತರ ಭಾಷೆಗಳಲ್ಲಿಯೂ, ಪ್ರಪಂಚದ ಬೇರೆ ದೇಶಗಳಲ್ಲಿಯೂ ಕಂಡುಬರುತ್ತವೆ ಎಂದು ಅಲೆನ್ ಡಂಡಸ್ ಹೇಳುತ್ತಾರೆ. ಪ್ರಾದೇಶಿಕ ಜನಪದ ಕಥೆಗಳ ಭಾಷಿಕ ಸ್ವರೂಪ ಮತ್ತು ಸಾಂಸ್ಕೃತಿಕ ಮಹತ್ವವನ್ನು ಉಳಿಸಿಕೊಂಡು ರಾಮಾನುಜನ್ ಅವರು ಇಂಗ್ಲಿಷ್‌ಗೆ ಇವುಗಳನ್ನು ಅನುವಾದ ಮಾಡಿರುತ್ತಾರೆ. ಇವು ಕನ್ನಡದಲ್ಲಿ ಪ್ರಟಕವಾಗದೇ ಮೊದಲಿಗೆ ನೇರವಾಗಿ ಇಂಗ್ಲಿಷ್‌ಗೆ ಅನುವಾದಗೊಂಡ ಕತೆಗಳು. ರಾಮಾನುಜನ್ ಅವರು ನಿಧನರಾದ ನಂತರ ಈ ಕತೆಗಳ ಸಂಕಲನ ಆಕ್ಸ್‌ಫರ್ಡ್ ಮುದ್ರಣಾಲಯದಿಂದ ಪ್ರಕಟವಾಗಿದೆ. ಈ ಕಥೆಗಳಲ್ಲಿ ಜಾಗತಿಕ ವಸ್ತುವಾದ ಪರಿಸರಕೇಂದ್ರಿತ ಪ್ರಜ್ಞೆ ವಿಭಿನ್ನವಾಗಿ ಪ್ರಕಟವಾಗಿದೆ. ಇಲ್ಲಿನ ಕತೆಗಳಲ್ಲಿ ಸ್ತ್ರೀಕೇಂದ್ರಿತ ಮತ್ತು ಪುರುಷಕೇಂದ್ರಿತ ಆಶಯಗಳಿವೆ. ಹೆಣ್ಣಿನ ಸ್ವಾತಂತ್ರ್ಯ, ಸಮಾನತೆ ಮತ್ತು ಸಾಹಸವನ್ನು ಮೆರೆಯುವ ಕತೆಗಳಿವೆ. ಪ್ರಾಕೃತಿಕ ಪರಿಸರ ಮತ್ತು ಮನುಷ್ಯ ಸಂಬಂಧಗಳು, ಜೀವಸಂಕುಲಗಳು ಮತ್ತು ಮನುಷ್ಯರ ವರ್ತನೆಗಳನ್ನು ಬಿಂಬಿಸುವ ಅರ್ಥಪೂರ್ಣ ಜನಪದ ಕತೆಗಳಿವೆ. ಬಹುಪಾಲು ಕತೆಗಳು ಸಾರ್ವಕಾಲಿಕವಾದ ಅಶಯಗಳನ್ನು ಹೊಂದಿದ್ದು, ಜಾಗತಿಕ ಮೌಲ್ಯಗಳನ್ನು ಪ್ರತಿಪಾದಿಸುತ್ತವೆ. ರಾಮಾನುಜನ್ ಅವರ ಅಪರೂಪದ ಜನಪದ ಕತೆಗಳ ಸಂಕಲನ ಇದಾಗಿದೆ. ಇದು ಜನಪದ ಕಥನ ಪರಂಪರೆ ಅಧ್ಯಯನ ಮಾಡುವವರಿಗೆ ಒಂದು ಮಹತ್ವದ ಆಕರ ಕೃತಿಯಾಗಿದೆ. ಇದನ್ನು ಇಂಗ್ಲಿಷ್‌ನಿಂದ ಅತ್ಯಂತ ಸರಳವಾಗಿ ಕನ್ನಡಕ್ಕೆ ಕರೀಗೌಡ ಬೀಚನಹಳ್ಳಿ ಅವರು ಅನುವಾದಿಸಿದ್ದಾರೆ. ಇದನ್ನು 'ಕಥೆ ಮತ್ತು ಹಾಡು' ಎಂಬ ಶೀರ್ಷಿಕೆಯಲ್ಲಿ ೨೦೦೩ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗವು ಪ್ರಕಟಣೆ ಮಾಡಿದೆ.

ಹೂ ಬಿಡುವ ಮರ: ಒಂದು ಹೆಂಗಸಿನ ಕಥೆ ಪ್ರಬಂಧವು ಒಂದು ಜಾನಪದ ಕಥೆಯನ್ನು ಅವಲಂಬಿಸಿ ಬರೆದ ಲೇಖನ. ಈ ಕಥೆ ಅಪರೂಪದ ವಿಸ್ಮಯಕಾರಿಯಾದ ಕಥೆ. ಇಲ್ಲಿ ಹೆಣ್ಣು ಮತ್ತು ಪ್ರಕೃತಿಯ ನಡುವೆ ಅಭೇದಭಾವವಿದೆ. ಒಂದು ಹೆಣ್ಣು ಹೂ ಬಿಡುವ ಮರವಾಗುವ ಮತ್ತೆ ಹೆಣ್ಣಾಗುವ ಮತ್ತು ಈ ಪ್ರಕ್ರಿಯೆಯು ಪುನಃ ಪುನಃ ಪುನರುಕ್ತವಾಗುವ ಘಟನೆಗಳು

ಈ ಕಥೆಯಲ್ಲಿ ನಡೆಯುತ್ತವೆ. ಈ ಕತೆಯ ಮೂಲಕ ಜನಪದರು ಹೇಗೆ ಪ್ರಕೃತಿ ಪರಿಸರದ ಪ್ರಜ್ಞೆಯನ್ನು ಪಡೆದುಕೊಂಡಿದ್ದರು ಮತ್ತು ಮುಂದಿನ ತಲೆಮಾರಿಗೆ ಅದನ್ನು ಹೇಗೆ ದಾಟಿಸಿದರು ಎಂಬ ಮಹತ್ವದ ಸಂಗತಿಯನ್ನು ಇಲ್ಲಿ ರಾಮಾನುಜನ್ ಅವರು ವಿಶ್ಲೇಷಿಸಿದ್ದಾರೆ.

ಈ ಜಾನಪದ ಕಥೆಯಲ್ಲಿ ಹೆಣ್ಣು ಗಂಡುಗಳನ್ನು ಪ್ರಕೃತಿ ಪುರುಷರಿಗೆ ಹೋಲಿಸಿ ಅಂತಿಮವಾಗಿ ಪ್ರಕೃತಿ ಮೇಲ್ಗೈ ಪಡೆದುಕೊಳ್ಳುವ ವಿಚಾರವಿದೆ. ಇಲ್ಲಿ ಕೂಡ ಹೆಣ್ಣು ಗಿಡವಾಗುವ, ಗಿಡ ಹೆಣ್ಣಾಗುವ ಪ್ರಕ್ರಿಯೆ ಪುನಃ ಪುನಃ ಬಂದು ಒಂದು ಹಂತದಲ್ಲಿ ರೂಪವು ಹೆಣ್ಣು ಮತ್ತು ಗಿಡ ಎರಡೂ ಸಂಶ್ಲೇಷಣೆಗೊಳ್ಳುವ ಒಂದು ವಿಚಿತ್ರ ಹಂತವಿದೆ. ಬಹುಶಃ ಕಂಬಳಿ ಹುಳು ಚಿಟ್ಟೆಯಾಗುವ ರೂಪಾಂತರ(Metamorphasis) ಪ್ರಕ್ರಿಯೆಗೆ ಇದು ತುಂಬಾ ಹತ್ತಿರವಿದೆ. ಇಂತಹ ಹೆಣ್ಣು ಮರವಾಗುವ, ಕಲ್ಲಾಗುವ, ಅದೃಶ್ಯವಾಗುವ, ರೂಪಾಂತರ ಪ್ರಕ್ರಿಯೆಗಳು ಜನಪದ ಸಾಹಿತ್ಯದಲ್ಲಿ ಹೇರಳವಾಗಿ ಬರುತ್ತವೆ. ಜನಪದದ ಮೂಲದ್ರವ್ಯವಾದ ಈ ಫ್ಯಾಂಟಸಿಯ ವಿವಿಧ ಆಯಾಮಗಳನ್ನು ಈ ಲೇಖನದ ಮೂಲಕ ರಾಮಾನುಜನ್ ಅವರು ಪ್ರಬಲವಾಗಿ ಮಂಡಿಸುತ್ತಾರೆ.

'ಪ್ರತಿ-ವ್ಯವಸ್ಥೆಯತ್ತ: ಹೆಂಗಸರ ಕಥೆಗಳು' ಪ್ರಬಂಧವು ದೀರ್ಘವಾದ ಹರವು ಹೊಂದಿದ್ದು ಪೀಠಿಕೆ, ಕರ್ಮ ಮತ್ತು ಅದರ ಪರ್ಯಾಯಗಳು, ದೀಪದ ಮಲ್ಲಿ, ಕಥೆಗಳ ಬಗ್ಗೆ ಇರುವ ಕಥೆಗಳು, ಒಂದು ಕಥೆ ಒಂದು ಹಾಡು, ಪಾವಿತ್ರ್ಯ, ನಾಗ-ಪ್ರೇಮಿ ಈ ಮುಂತಾದ ಉಪ ಶೀರ್ಷಿಕೆಗಳನ್ನೊಳಗೊಂಡಿದೆ. ಇಲ್ಲಿ ಹಲವು ದೇಶಗಳ ಭಾರತದ ವಿವಿಧ ಪ್ರದೇಶಗಳ ವೈವಿಧ್ಯಮಯ ಕಥೆಗಳ ಪ್ರಸ್ತಾಪಗಳಿವೆ. ಎಲ್ಲ ಕಥೆಗಳಲ್ಲಿ ಹೆಣ್ಣು ಕೇಂದ್ರ ವಸ್ತು, ಅವಳು ಮಗಳಾಗಿರಬಹುದು, ತಾಯಿಯಾಗಿರಬಹುದು, ಹೆಂಡತಿಯಾಗಿರಬಹುದು, ಗೃಹಸ್ಥೆಯಾಗಿರಬಹುದು, ವಿಧವೆಯಾಗಿರಬಹುದು, ಅಜ್ಜಿಯಾಗಿರಬಹುದು, ಹುಡುಗಿಯಾಗಿರಬಹುದು; ಇವರೆಲ್ಲರೂ ಪುರುಷಪ್ರಧಾನ ಸಮಾಜದ ಪ್ರಭಾವದಿಂದ ಮುಕ್ತರಾಗಿ ಪ್ರಧಾನ ನೆಲೆಗೆ ಒಂದು ಪರ್ಯಾಯ ವ್ಯವಸ್ಥೆಯನ್ನು ಕಟ್ಟುವ ಧೀಮಂತ ಹೆಂಗಸರೇ ಆಗಿದ್ದಾರೆ. ಇಲ್ಲಿ ಕೂಡ ಮಾನುಷ, ಅತಿಮಾನುಷ ಲೋಕೋತ್ತರ ಮುಂತಾದ ಅಂಶಗಳೂ ಬರುತ್ತವೆ.

ಉದಾಹರಣೆಗೆ: ರಾಜನೊಬ್ಬನಿಗೆ ಕತ್ತೆಯ ಕಿವಿ ಇದ್ದದ್ದು ಯಾರಿಗೂ ಗೊತ್ತಿರುವುದಿಲ್ಲ. ಆದರೆ ರಾಜನಿಗೆ ಕ್ಷೌರ ಮಾಡುತ್ತಿದ್ದ ಕ್ಷೌರಿಕನಿಗೆ ಮಾತ್ರ ತಿಳಿದಿರುತ್ತದೆ. ಆದರೆ ಅವನು ಗುಟ್ಟನ್ನು ಇತರರಿಗೆ ಹೇಳುವಂತಿಲ್ಲ. ಇದರಿಂದ ರಾಜನ ಹೊಟ್ಟೆ ಉಬ್ಬುತ್ತದೆ. ಅವನು ತಡೆಯಲಾರದೆ ರಹಸ್ಯವನ್ನು ಹೆಂಡತಿ ರಾಣಿಗೆ ತಿಳಿಸುತ್ತಾನೆ. ಆಗ ಅವಳ ಹೊಟ್ಟೆ ಉಬ್ಬುತ್ತದೆ. ಅವಳು ತಡೆಯಲಾರದೆ ಊರಾಚೆ ಹಳ್ಳ ತೋಡಿಸಿ ಗುಟ್ಟನ್ನು ಅಲ್ಲಿ ಉಸಿರಿಬಿಟ್ಟು ಮಣ್ಣು ಮುಚ್ಚಿಸಿ ಬಿಡುತ್ತಾಳೆ. ಅಲ್ಲಿ ಆಮೇಲೆ ಒಂದು ಗಿಡ ಬೆಳೆದು ಮರವಾಗುತ್ತದೆ. ಅರಮನೆಯ

ತಮಟೆಯವನು ಆ ಮರದ ಕೊಂಬೆ ಮುರಿದು ಡೋಲು ಬಾರಿಸುವ ಕೋಲು ಮಾಡಿಕೊಳ್ಳುತ್ತಾನೆ. ಒಂದು ದಿನ ರಾಜನ ಸಭೆಯಲ್ಲಿ ಅವನು ಡೋಲು ಬಾರಿಸಿದಾಗ ಅದು 'ಡಂ..ಡಂ..ಡಂ.. ರಾಜನ ಕಿವಿ ಡಂ..ಡಂ.. ಕತ್ತೆ ಕಿವಿ ಡಂ..ಡಂ..ಡಂ..' ಹೀಗೆ ಅನ್ನುತ್ತದೆ. ಈ ಕಥೆಯ ಮೂಲಕ ತಿಳಿದು ಬರುವ ಸತ್ಯವೇನೆಂದರೆ ಈ ಜನಪದೀಯ ಜಗತ್ತಿನಲ್ಲಿ ಏನೂ ನಾಶವಾಗುವುದಿಲ್ಲ. ಅದು ರೂಪ ಪರಿವರ್ತನೆ ಹೊಂದುತ್ತದೆ ಎಂಬ ತತ್ವವನ್ನು ಇದು ನಿರೂಪಿಸುತ್ತದೆ. ಇಂತಹ ಹತ್ತಾರು ವೈವಿಧ್ಯಮಯ ಕಥೆಗಳ ಪ್ರಸ್ತಾಪ ಈ ಲೇಖನದಲ್ಲಿ ಬರುತ್ತದೆ. ರಾಮಾನುಜನ್ ಅವರ ಉದ್ದೇಶ ಜಗತ್ತಿನ ಎಲ್ಲಾ ಜನಪದ ಕಥೆಗಳಲ್ಲಿಯೂ ಒಂದು ಸಾಮ್ಯವಿದೆ; ಪುರುಷನಂತೆಯೇ ಸ್ತ್ರೀಯೂ ಎಲ್ಲಾ ಹಕ್ಕುಗಳನ್ನು ಪಡೆಯಲು ಅರ್ಹಳು ಎಂದು ಹೇಳುವುದೇ ಆಗಿದೆ.

'ನಾಗ-ಪ್ರೇಮಿ' ಎನ್ನುವ ಒಂದು ಜಾನಪದ ಕಥೆಯನ್ನು ದಶಕಗಳ ಹಿಂದೆ ರಾಮಾನುಜನ್ ಅವರು ತಮ್ಮ ಮಿತ್ರರಾದ ಚಂದ್ರಶೇಖರ ಕಂಬಾರ ಮತ್ತು ಗಿರೀಶ್ ಕಾರ್ನಾಡ್ ಅವರಿಗೆ ಮೌಖಿಕವಾಗಿ ಹೇಳಿದಾಗ ಕಂಬಾರರು ಅದರ ಪ್ರೇರಣೆಯಿಂದ 'ಸಿರಿಸಂಪಿಗೆ' ಎಂಬ ನಾಟಕವನ್ನು, ಕಾರ್ನಾಡರು 'ನಾಗಮಂಡಲ' ಎಂಬ ನಾಟಕವನ್ನು ರಚಿಸಿದ್ದು ಗೊತ್ತಿರುವ ಸಂಗತಿಯೇ ಆಗಿದೆ. ಜಾನಪದ ಕಥೆಗಳು ಕೇವಲ ಕುತೂಹಲದ ವಸ್ತು ಮಾತ್ರವಲ್ಲದೆ ಪ್ರಸಿದ್ಧ ಕೃತಿರಚನೆಗಳಿಗೂ ಪ್ರೇರಣೆಯನ್ನು ನೀಡುವ ಅಂಶವನ್ನು ಇದರಿಂದ ತಿಳಿದುಕೊಳ್ಳಬಹುದು.

ಬಾಲ್ಯದಲ್ಲಿ ಕಥೆಗಳು, ಹೆಂಗಸರ ಮೌಖಿಕ ಕಥೆಗಳು, ಕಥೆಗಳ ಸೇಡು, ಕಥೆಗಳಿಗೆ ಜಗತ್ತಿನ ತುಂಬ ನೆಂಟರು, ಚಿಕ್ಕಮಕ್ಕಳಿಗಾಗಿ ಕಥೆಗಳು ಇವುಗಳ ಬಗ್ಗೆ ಅವುಗಳ ಅಭಿವ್ಯಕ್ತಿಕ್ರಮಗಳ ವಿವಿಧ ಆಯಾಮಗಳನ್ನು ಕುರಿತು ಚಿಂತಿಸಲಾಗಿದೆ. ಕಥೆಗಳಲ್ಲಿ ಎರಡು ಕ್ರಿಯೆಗಳಿವೆ. ಒಂದು ಹೇಳುವುದು ಇನ್ನೊಂದು ಕೇಳುವುದು. ಒಂದು ಬರೆಯುವುದು ಇನ್ನೊಂದು ಓದುವುದು. ಒಂದು ಆಡುವುದು(ನಾಟಕ) ಇನ್ನೊಂದು ನೋಡುವುದು(ಪ್ರೇಕ್ಷಕ). ಈ ದ್ವಿವಿಧ ಪ್ರಕ್ರಿಯೆಯ ವಿನ್ಯಾಸಗಳನ್ನು ಈ ಲೇಖನದಲ್ಲಿ ಅಧ್ಯಯನ ಪೂರ್ಣವಾಗಿ ವಿವರಿಸಲಾಗಿದೆ.

ಲೋಕದಲ್ಲಿನ ಏಟಿಗೆ ಜಾನಪದವು ತಿರುಗೇಟು ನೀಡುತ್ತದೆ ಎಂಬುದಕ್ಕೆ ಇದು ಉದಾಹರಣೆ. ಕಥೆಗಳು ಅನಾದಿಕಾಲದಿಂದಲೂ ಜಗತ್ತಿನಾದ್ಯಂತ ಮಕ್ಕಳಿಂದ ಹಿಡಿದು ದೊಡ್ಡವರವರೆಗೆ ಆಸಕ್ತಿಯ ಕೇಂದ್ರ ಎಂಬುದನ್ನು ಇಲ್ಲಿ ಲೇಖಕರು ನಿದರ್ಶನಗಳೊಂದಿಗೆ ತೋರಿಸಿಕೊಟ್ಟಿದ್ದಾರೆ. ರಾಜಕುಮಾರ, ಶ್ರೀಮಂತ, ದೆವ್ವ, ಸತ್ತವನು, ಬದುಕಿದವನು, ಕಾಗಕ್ಕ-ಗುಬ್ಬಕ್ಕ, ಹೀಗೆ ಕಥೆಗಳಲ್ಲಿ ಬರುವ ಪಾತ್ರಗಳು ಅನಂತ ಮುಖಗಳನ್ನುಳ್ಳವರಾಗಿರುತ್ತಾರೆ. ಇದು ಜಾನಪದದ ವ್ಯಾಪಕ ಹಾಗೂ ವೈವಿಧ್ಯಮಯ ಕಥನದ ಆಯಾಮವನ್ನು ತಿಳಿಸುತ್ತದೆ.

೬.೮. When God is a Customer- Telugu Courtesan Songs by Ksetrayya and others(Posthumous-೧೯೯೪)

ಇದು ತೆಲುಗಿನ ಭಕ್ತಿಕಾವ್ಯದ ಅನುವಾದ. ಇದು ಸಹ ಮೌಖಿಕ ಪರಂಪರೆಯದೇ ಆಗಿದೆ. ದೇವದಾಸಿಯರು ದೇವರನ್ನು ಕುರಿತು ಹಾಡಿದ ಹಲವಾರು ಪದ್ಯಗಳನ್ನು ಅನ್ನಮಯ್ಯ, ರುದ್ರಕವಿ, ಕ್ಷೇತ್ರಯ್ಯ, ಸಾರಂಗಪಾಣಿ ಇವರು ರಚಿಸಿದ್ದಾರೆ. ಈ ರಚನೆಗಳನ್ನು ರಾಮಾನುಜನ್ ಅನುವಾದ ಮಾಡಿದ್ದಾರೆ. ಕೊಂಕಣೇಶ್ವರರ ರಚನೆಗಳನ್ನೂ ಸಹ ಇಂಗ್ಲಿಷ್‌ಗೆ ಅನುವಾದ ಮಾಡಿದ್ದಾರೆ.

ರಾಮಾನುಜನ್ ಅವರು ತಮಿಳಿನ ೧ ರಿಂದ ೩ನೇ ಶತಮಾನದ ವರೆಗೆ ರಚಿಸಲ್ಪಟ್ಟವು ಎಂದು ಹೇಳಲಾಗಿರುವ ಸಂಗಂ ಸಾಹಿತ್ಯ ಮತ್ತು ಕನ್ನಡದ ೧೨ ಮತ್ತು ೧೩ನೇ ಶತಮಾನದ ವಚನ ಸಾಹಿತ್ಯವನ್ನು ತಮ್ಮ ಅನುವಾದಕ್ಕೆ ಆಯ್ಕೆ ಮಾಡಿಕೊಂಡಂತೆ ೧೪ ಮತ್ತು ೧೫ನೇ ಶತಮಾನದ ತೆಲುಗಿನ ಭಕ್ತಿಕಾವ್ಯದ ಅನುವಾದಕ್ಕೂ ಕೈ ಹಾಕಿದರು. ತೆಲುಗಿನ ಭಕ್ತಿಕಾವ್ಯದ ಅತ್ಯುನ್ನತ ಕಾವ್ಯಪ್ರಕಾರದ ರಚನಾಕಾರರಾದ ಅನ್ನಮಯ್ಯ, ಕ್ಷೇತ್ರಯ್ಯ, ಸಾರಂಗಪಾಣಿ ಮುಂತಾದ ಹಲವಾರು ಕೀರ್ತನಾಕಾರರ ಸಾಹಿತ್ಯವನ್ನು ಭಾರತೀಯೇತರರಿಗೆ ಹಾಗೂ ಪಾಶ್ಚಿಮಾತ್ಯರಿಗೆ ಪರಿಚಯಿಸುವ ಸಾಹಸಕ್ಕೆ ಕೈಹಾಕಿ ಯಶಸ್ಸನ್ನು ಕಂಡ ನಿಜವಾದ ಭಾರತೀಯ ಎನ್ನಬಹುದು.

ಸುಪ್ರಸಿದ್ಧ ತೆಲುಗು ಕೀರ್ತನಕಾರರಾದ ತಾಳ್ಳಪಾಕ ಅನ್ನಮಯ್ಯ, ಕ್ಷೇತ್ರಯ್ಯ ಮತ್ತು ಸಾರಂಗಪಾಣಿ ಅವರ ಶೃಂಗಾರ ಪದಗಳನ್ನು ತೆಲುಗಿನ ಖ್ಯಾತ ವಿದ್ವಾಂಸರಾದ ವೆಲ್ಚೇರು ನಾರಾಯಣರಾವು ಹಾಗೂ ಆಂಗ್ಲ ವಿದ್ವಾಂಸರಾದ ಡೇವಿಡ್ ಶುಲ್ಮನ್ ಅವರೊಡಗೂಡಿ 'When God is a Customer' ಎಂಬ ಶೀರ್ಷಿಕೆಯಲ್ಲಿ ಈ ಮೂವರ ಹಲವಾರು ಪದಗಳನ್ನು ರಾಮಾನುಜನ್ ಅವರು ಇಂಗ್ಲೀಷ್‌ಗೆ ಅನುವಾದ ಮಾಡಿದ್ದಾರೆ. ಅನ್ನಮಾಚಾರ್ಯರ ಕೀರ್ತನೆಗಳು ತಿರುಮಲೆಯಲ್ಲಿ ವಿರಾಜಿಸುತ್ತಿರುವ ಶ್ರೀವೆಂಕಟೇಶ್ವರ ಸ್ವಾಮಿ ಅವರ ಮುಂದೆ ಹಾಡಲ್ಪಡುತ್ತಿದ್ದವು. ಇವರು ಭಕ್ತಿ ಪ್ರಧಾನವಾದ ಮತ್ತು ಶೃಂಗಾರಪ್ರಧಾನವಾದ ಸಾವಿರಾರು ಕೀರ್ತನೆಗಳನ್ನು ಖುದ್ದಾಗಿ ಸಂಪ್ರದಾಯಬದ್ಧವಾದ ರೀತಿಯಲ್ಲಿ ಹಾಡುತ್ತಿದ್ದರು. ಆದರೆ ಇವು ಕಾರಣಾಂತರಗಳಿಂದ ಬಹಳ ದೂರ ವ್ಯಾಪಿಸಲಿಲ್ಲ. ಇವು ತಿರುಪತಿ ತಿಮ್ಮಪ್ಪನ ಸನ್ನಿಧಿಗೇ ಸೀಮಿತವಾಗಿದ್ದವು.

ಕ್ಷೇತ್ರಯ್ಯ ಕಥೆಯೇ ಬೇರೆ. ಇವರು ಮಧುರೈ, ತಂಜಾವೂರು, ಗೋಲ್ಕೊಂಡ ಮುಂತಾದ ರಾಜಮಹಾರಾಜರನ್ನು ವರ್ಣಿಸಿ ಅವರನ್ನು ಸಂತುಷ್ಟಗೊಳಿಸಲು ಶ್ರೀಕೃಷ್ಣನನ್ನು ನಾಯಕನಾಗಿಸಿ ಅತ್ಯಂತ ಶೃಂಗಾರಪೂರ್ಣವಾಗಿ ಪದಗಳನ್ನು ರಚಿಸಿದರು. ಇವು ದಕ್ಷಿಣದೇಶದ– ಅಂದರೆ ತಮಿಳುನಾಡು, ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳ ರಾಜರ ಸಭೆಗಳಲ್ಲಿ ಮತ್ತು ದೇವಾಲಯಗಳಲ್ಲಿ ದೇವದಾಸಿಯರಿಂದ ಮತ್ತು ನೃತ್ಯಕಲಾವಿದರಿಂದ ಅಭಿನಯಪೂರ್ವಕವಾಗಿ ಪ್ರದರ್ಶಿಸಲಾಗುತ್ತಿತ್ತು.

ಕ್ಷೇತ್ರಯ್ಯನವರ ಹಾಡುಗಳಲ್ಲಿ ತೆಲುಗು ಭಾಷೆಯ ಸೊಗಡು ಅದ್ಭುತವಾಗಿ ಮಿಂಚುತ್ತಿತ್ತು. ದೇವದಾಸಿಯರ ಮತ್ತು ನೃತ್ಯಕಲಾವಿದರ ಅಭಿನಯಕ್ಕೆ, ಹಾಡುಗಾರಿಕೆಗೆ ಸೊಗಸಾಗಿ ಕಾಣುತ್ತಿತ್ತು. ಆದರೆ ಕ್ಷೇತ್ರಯ್ಯನವರ ಹಾಡುಗಳು ಸಾಮಾನ್ಯ ಜನರಿಗೆ ತಲುಪುತ್ತಿರಲಿಲ್ಲ. ಇವು ಶಿಷ್ಟಜನರ ಸಭೆ ಸಮಾರೋಪಗಳಿಗೆ ಸೀಮಿತವಾಗಿತ್ತು.

ಕ್ಷೇತ್ರಯ್ಯ ಪದಗಳು ಅಪ್ಪಟ ಶೃಂಗಾರ ಸಾಹಿತ್ಯ, ಆದರೆ ಕೆಲವು ವಿದ್ವಾಂಸರು ಆ ಪದಗಳಲ್ಲಿ ಜೀವಾತ್ಮ, ಪರಮಾತ್ಮ ಸಂವಾದಗಳನ್ನು ಭಾವನೆಗಳನ್ನು ಹುಡುಕಿ ವ್ಯಾಖ್ಯಾನಿಸಿದ್ದಾರೆ. ಆದರೆ ಪ್ರಸಿದ್ಧ ಸಾಹಿತಿಗಳಾದ ಪಾಕಾಲ ವೆಂಕಟರಾಜಮನ್ನಾರು ಅವರು ಕ್ಷೇತ್ರಯ್ಯ ಪದಗಳಲ್ಲಿ ಅಧ್ಯಾತ್ಮವನ್ನು ನೋಡುವುದಂತು ಉಚಿತವಲ್ಲ, ವ್ಯರ್ಥ. ಇವು ಕೇವಲ ಶೃಂಗಾರ ಪದಗಳೇ ಎಂದು ಘಂಟಾಘೋಷವಾಗಿ ಹೇಳಿದ್ದಾರೆ.[೧೭]

ತಾಳ್ಳಪಾಕ ಅನ್ನಮಾಚಾರ್ಯುಲು(೧೪೨೪-೧೫೦೩) ಇವರು ವಿಜಯನಗರದ ಚಕ್ರವರ್ತಿಗಳಾದ ಸಾಳುವ ನರಸಿಂಹರಾಯರ ಕಾಲದಲ್ಲಿ ಇದ್ದರು. ರಾಜಾಶ್ರಯವನ್ನು ಧಿಕ್ಕರಿಸಿ ಸ್ವತಂತ್ರ ಜೀವನ ನಡೆಸಿದ ಮಹಾನುಭಾವರು. ಇವರು ರಚಿಸಿದ ಸಂಕೀರ್ತನೆಗಳು(ಪದಗಳು) ಸಾವಿರಾರು ಸಂಖ್ಯೆಗಳಲ್ಲಿ ಇವೆ. ಅನ್ನಮಾಚಾರ್ಯರ ಕೀರ್ತನೆಗಳನ್ನು ತಿರುಮಲೆಯ ಒಂದು ಕೊಠಡಿಯಲ್ಲಿದ್ದ ಹಲವಾರು ತಾಮ್ರಪತ್ರಗಳನ್ನು ಹೊರತೆಗೆದ ಕೀರ್ತಿ ವೇಟೂರಿ ಪ್ರಭಾಕರಶಾಸ್ತ್ರಿ ಅವರಿಗೆ ಸಲ್ಲುತ್ತದೆ. ಅನ್ನಮಾಚಾರ್ಯರ ಕೀರ್ತನೆಗಳನ್ನು ಆಧ್ಯಾತ್ಮಿಕ ಹಾಗೂ ಶೃಂಗಾರ ಪದಗಳೆಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ತಿರುಪತಿ ತಿರುಮಲ ದೇವಸ್ಥಾನ ಇವುಗಳನ್ನು ಹಲವಾರು ಸಂಪುಟಗಳಲ್ಲಿ ಪ್ರಕಟಿಸಿದೆ. ತೆಲುಗಿನಲ್ಲಿ ಆದಿಪುರುಷರೆಂದು ಅನ್ನಮಾಚಾರ್ಯರನ್ನು ಗೌರವಿಸಲಾಗಿದೆ.

ನಂತರದಲ್ಲಿ ಕ್ಷೇತ್ರಯ್ಯ ಅವರು ಕೃಷ್ಣನ ಬಗೆಗೆ ಬರೆದ ನೂರಾರು ಪದಗಳು ತೆಲುಗಿನಲ್ಲಿ ಖ್ಯಾತಿ ಪಡೆದಿವೆ. ಇವರು ತಂಜಾವೂರು, ಮಧುರೈ ಅರಸರ ಮತ್ತು ಗೋಲ್ಕೊಂಡ ನವಾಬರ ಪೋಷಣೆಯನ್ನು ಪಡೆದರು. ಇವರ ಪದಗಳು ಮುಖ್ಯವಾಗಿ ದೇವದಾಸಿಯರ ಮೌಖಿಕ ಪರಂಪರೆಯಿಂದ ಖ್ಯಾತಿ ಪಡೆದಿವೆ. ಈ ಪದಗಳು ಕ್ಷೇತ್ರಯ್ಯನವರ ಆರಾಧ್ಯದೈವವಾದ ಮುವ್ವಾ ಗ್ರಾಮದ ವೇಣುಗೋಪಾಲ ಸ್ವಾಮಿ ಅವರಿಗೆ ಸಮರ್ಪಿಸಲಾಗಿದೆ.

ರಾಮಾನುಜನ್ ಅವರು ಆಯ್ಕೆ ಮಾಡಿಕೊಂಡಿರುವ ಮತ್ತೊಬ್ಬ ತೆಲುಗಿನ ಕೀರ್ತನಕಾರ ಸಾರಂಗಪಾಣಿ ಅವರು. ಇವರು ಆಂಧ್ರದ ಚಿತ್ತೂರು ಜಿಲ್ಲೆಯ ಕಾರ್ವೇಟಿನಗರ ಸಂಸ್ಥಾನದಲ್ಲಿ ಆಶ್ರಯ ಪಡೆದ ಭಕ್ತಕವಿ. ಇವರ ಪದಗಳು ಸಾರಂಗಪಾಣಿ ಪದಗಳೆಂದೇ ಖ್ಯಾತಿ ಪಡೆದವು. ಇವೂ ಸಹ ದೇವದಾಸಿಯರಿಂದ ಹಾಡಲ್ಪಟ್ಟಿವೆ.

ಕೆಲವು ತೆಲುಗು ವಿದ್ವಾಂಸರು ಕ್ಷೇತ್ರಯ್ಯ ಪದಗಳನ್ನು ಅತಿ ಶೃಂಗಾರಮಯವಾಗಿದೆ ಎಂದು ಭಾವಿಸಿದರೆ, ಇನ್ನು ಕೆಲವರು ಅವುಗಳಲ್ಲಿ ಆಧ್ಯಾತ್ಮಿಕ ಭಾವನೆ ಇದೆ ಎಂದು ಭಾವಿಸಿದರು. ಆದರೆ ಕ್ಷೇತ್ರಯ್ಯ ಪದಗಳನ್ನು ಬಹಳಷ್ಟು ಕಾಲ, ಅದೇಕೆ ಈಗಲೂ ಸಹ ಸಭ್ಯ ಜನರಿಗೆ ತಲುಪದಂತೆ ಮಾಡುವ ಒಂದು ಸಂಪ್ರದಾಯ ಬೆಳೆದುಬಂದಿದೆ. ತೆಲುಗು ಸಾಹಿತ್ಯ ಪ್ರಪಂಚದಲ್ಲಾಗಲೀ, ಪಠ್ಯಮಸ್ತಕಗಳಲ್ಲಾಗಲೀ ಈ ಪದಗಳಿಗೆ ಸಿಗಬೇಕಾದ ಮನ್ನಣೆ ಹಾಗೂ ಸ್ಥಾನ ಲಭಿಸಿಲ್ಲ ಎಂದರೆ ತಪ್ಪಾಗಲಾರದು.

ತಾಳ್ಳಪಾಕ ಅನ್ನಮಾಚಾರ್ಯ ಸಂಕೀರ್ತನೆಗಳು ತೆಲುಗು ಭಾಷೆಯ ದೇಸಿ ಸೊಗಡನ್ನು ಹೊಂದಿವೆ. ಹಲವಾರು ಪದಗಳು ಬಳಕೆಯಲ್ಲಿ ಇಲ್ಲದಿರುವುದರಿಂದ ನಮಗೆ ಈಗ ಅದರ ಅರ್ಥಗಳು ತಿಳಿದುಕೊಳ್ಳುವುದು ಕಷ್ಟ. ಅವರು ಹಾಡಿದ ಪದಗಳ ರಾಗಗಳ ಸ್ವರೂಪವನ್ನು ತಿಳಿದುಕೊಳ್ಳುವುದು ಕಷ್ಟವಾಗಿ ಕಾಣುತ್ತದೆ. ಯಾಕೆಂದರೆ ಆ ರಾಗಗಳನ್ನು ಬಳಸಿದ ಪದಕರ್ತರು ಯಾರೂ ಇಲ್ಲ.

ಗಿಡುಗು ವೆಂಕಟಸೀತಾಪತಿ ಅವರು ೩೨೭ ಕ್ಷೇತ್ರಯ್ಯ ಪದಗಳನ್ನು ಸಂಗ್ರಹಿಸಿದರೆ, ವಿಸ್ಸಾ ಅಪ್ಪಾರಾವು ಅವರು ೩೨೯ ಪದಗಳನ್ನು ಶೇಖರಣೆ ಮಾಡಿ ಪ್ರಕಟಣೆ ಮಾಡಿದ್ದಾರೆ. ರಾಮಾನುಜನ್ ಅವರು ತೆಲುಗಿನ ಈ ಇಬ್ಬರು ಪಂಡಿತರು ಸಂಪಾದಿಸಿರುವ ಕೃತಿಗಳಿಂದ ಕೆಲವು ಪದಗಳನ್ನು ಆಯ್ಕೆ ಮಾಡಿಕೊಂಡು ಇಂಗ್ಲಿಷ್‌ಗೆ ಅನುವಾದ ಮಾಡಿದ್ದಾರೆ. ಇಲ್ಲಿಯೂ ಸಹ ರಾಮಾನುಜನ್ ಅವರು ದೇಶಿ ಸಂಸ್ಕೃತಿಗೆ ಹೆಚ್ಚು ಒತ್ತುಕೊಟ್ಟಂತೆ ಕಾಣುತ್ತದೆ. ಲಿಖಿತ ರೂಪದಲ್ಲಿದ್ದರೂ ಸಹ ಹೆಚ್ಚು ಮೌಖಿಕವಾಗಿ ಪ್ರಸಿದ್ಧಿಯನ್ನು ಪಡೆದ ಪದಗಳನ್ನೇ ಆರಿಸಿಕೊಂಡು ಪಾಶ್ಚಿಮಾತ್ಯರಿಗೆ ಕೊಡುವ ಪ್ರಯತ್ನ ಮಾಡಿದ್ದಾರೆ. 'ಅಹಂ' ಮತ್ತು 'ಪುರಂ' ಎನ್ನುವ ಪರಿಕಲ್ಪನೆಯನ್ನು ಇಲ್ಲಿಯೂ ಸಹ ಅಳವಡಿಸಿಕೊಂಡು ಚರ್ಚಿಸಿದ್ದಾರೆ. ಅಂತಃಪುರದಲ್ಲಿ ಪ್ರಾರಂಭವಾಗಿ, ರಾಜನ ಸಭೆಯಲ್ಲಿ ನೃತ್ಯರೂಪಕ್ಕೆ ಬಂದು ನಂತರದಲ್ಲಿ, ಇವು ದೇವದಾಸಿರ ಮನೆಯಲ್ಲಿಯೂ, ಇವುಗಳ ಪ್ರಯೋಗ ನೃತ್ಯರೂಪದಲ್ಲಿ ಹಾಡಿನ ರೂಪದಲ್ಲಿ ಬಂದವು ಎಂದು ಹೇಳಬಹುದಾಗಿದೆ.

೬.೯. 'ಭಾರತೀಯತಕು ಅದ್ದಂ ಜಾನಪದ ಸಾಹಿತ್ಯಂ'(೧೯೯೨)

ದಿನಾಂಕ ೪, ಸೆಪ್ಟೆಂಬರ್ ೧೯೯೨ರಲ್ಲಿ ಈನಾಡು ಪತ್ರಿಕೆಯ ಕರ್ನಾಟಕ ಎಡಿಶನ್‌ಗಾಗಿ ಪ್ರೊ. ಘಟ್ಟಮರಾಜು ಅಶ್ವತ್ಥನಾರಾಯಣ ಅವರು 'ಭಾರತೀಯತಕು ಅದ್ದಂ ಜಾನಪದ ಸಾಹಿತ್ಯಂ' ಎಂಬ ಶೀರ್ಷಿಕೆಯಡಿಯಲ್ಲಿ ಎ.ಕೆ.ರಾಮಾನುಜನ್ ಅವರನ್ನು ಸಂದರ್ಶನ ಮಾಡಿದ್ದಾರೆ. ಇಲ್ಲಿ ರಾಮಾನುಜನ್ ಅವರು ಅಶ್ವತ್ಥನಾರಾಯಣ ಅವರ ಹಲವಾರು ಬೌದ್ಧಿಕ ಪ್ರಶ್ನೆಗಳಿಗೆ ಉತ್ತರವನ್ನು ನೀಡುತ್ತಾ 'ಜಾನಪದ ಸಾಹಿತ್ಯ ಭಾರತೀಯತೆಗೆ ಒಂದು ಕನ್ನಡಿಯಂತೆ' ಎನ್ನುವ ಮೌಲಿಕವಾದ ಮಾತನ್ನು ಹೇಳಿದ್ದಾರೆ. ಅಂತೆಯೇ ತಾವು ಮಾಡುತ್ತಿರುವ ತೆಲುಗು ಕಾವ್ಯಗಳ

ಅನುವಾದವನ್ನೂ ಕುರಿತು ಮಾತನಾಡಿದ್ದಾರೆ. 'ಶಿಕಾಗೋ ವಿಶ್ವವಿದ್ಯಾಲಯದಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಭಾರತದೇಶದ ಭಕ್ತಿಚಳುವಳಿ ಬಗ್ಗೆ ಆಸಕ್ತಿ ಹೆಚ್ಚು. ಅದರಿಂದ ನಾವು ತಮಿಳು. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿದ್ದ ಭಕ್ತಿಚಳುವಳಿಗಳ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನ ಮಾಡುತ್ತಿದ್ದೇವೆ' ಎಂದು ತಾವು ವಿದ್ಯಾರ್ಥಿಗಳಿಗಷ್ಟೇ ಅಲ್ಲದೆ ಪಾಶ್ಚಿಮಾತ್ಯರಿಗೆ ಭಾರತೀಯ ಭಕ್ತಿಚಳುವಳಿಯ ಬಗ್ಗೆ ಅರಿವು ಮೂಡಿಸುತ್ತಿರುವುದರ ಬಗ್ಗೆ ಚರ್ಚಿಸಿದ್ದಾರೆ. ಪ್ರಸ್ತುತ ಕೃತಿ 'When God is a Customer' ಬಗ್ಗೆ ಈ ಸಂದರ್ಶನದಲ್ಲೇ ಮೊದಲಬಾರಿಗೆ ಇವರು ಮಾತನಾಡಿದ್ದಾರೆ. ಈ ಕೃತಿಯ ಅನುವಾದ ಮಾಡುತ್ತಿರುವ ಬಗ್ಗೆ ಮತ್ತು ಅದರಲ್ಲಿ ಇವರ ಜೊತೆ ಕೆಲಸ ಮಾಡುತ್ತಿರುವ ವೆಲ್ಚೇರು ನಾರಾಯಣರಾವು ಮತ್ತು ಡೇವಿಡ್ ಶುಲ್ಮನ್ ಅವರು ನೀಡುತ್ತಿರುವ ಮೌಲ್ಯಯುತವಾದ ಸಹಾಯವನ್ನು ಕುರಿತು ತಿಳಿಸಿದ್ದಾರೆ. ಈ ಕೃತಿಯು ತೆಲುಗು ಭಕ್ತಿ ಸಾಹಿತ್ಯ ಕ್ಷೇತ್ರದಲ್ಲಿ ಎಷ್ಟು ಪ್ರಾಮುಖ್ಯತೆಯನ್ನು ಪಡೆಯಬಹುದು ಎಂದೂ ಸಹ ತಿಳಿಸಿದ್ದಾರೆ.

'ಹಿಂದೆ ನೀವು ಬರೆದ ಗಾದೆಗಳು ಎಂಬ ಚಿಕ್ಕ ಜನಪದ ಕೃತಿಯು ಬಹಳ ಜನಪ್ರಿಯವಾಗಿತ್ತು. ಆನಂತರದಲ್ಲಿ ತಾವು ಆ ಕ್ಷೇತ್ರದಲ್ಲಿ ಹೆಚ್ಚು ಕೃಷಿ ಮಾಡಿದಂತೆ ಕಾಣುತ್ತಿಲ್ಲ ಏಕೆ?' ಎಂಬ ಸಂದರ್ಶಕರ ಪ್ರಶ್ನೆಗೆ ರಾಮಾನುಜನ್ ಅವರು ಹೀಗೆ ಉತ್ತರಿಸುತ್ತಾರೆ. 'ನಾನು ಈಗ ಆ ಕೆಲಸದಲ್ಲೇ ಇದ್ದೀನಿ, ಹೆಂಗಸರ ಪರಿಸರದಲ್ಲಿ ಬಳಸಲ್ಪಡುವ ಅಶ್ಲೀಲ ಗಾದೆಗಳು ಸಾಕಷ್ಟು ಇವೆ. ಹೆಂಗಸರು ಆ ಗಾದೆಗಳು ಗಂಡಸರ ಕಿವಿಗಳಿಗೆ ಬೀಳದಂತೆ ಬಹಳ ಗೌಪ್ಯವಾಗಿ ಇಟ್ಟಿದ್ದಾರೆ. ನಾನು ಅಂತಹ ಕೆಲವು ಗಾದೆಗಳನ್ನು ಸಂಗ್ರಹಿಸಿದ್ದೇನೆ. ಈಗ ಮತ್ತಷ್ಟು ಗಾದೆಗಳ ಸಂಗ್ರಹ ಮಾಡುತ್ತಿದ್ದೇನೆ' ಎಂದು ಹೇಳಿದರು. ನಂತರದಲ್ಲಿ 'ಆಧುನಿಕ ಕನ್ನಡ ಸಾಹಿತ್ಯವನ್ನು ಏನಾದರೂ ಅನುವಾದ ಮಾಡುತ್ತಿದ್ದೀರ' ಎಂಬ ಪ್ರಶ್ನೆಗೆ 'ಹಿಂದೆ ದೇವನೂರು ಮಹಾದೇವ ಅವರ ಕಥೆಗಳು, ಕಾದಂಬರಿ ಇಂಗ್ಲಿಷಿಗೆ ಅನುವಾದವಾಗಿವೆ. ನಾನೂ ಸಹ ಸ್ವಲ್ಪ ಪ್ರಯತ್ನ ಮಾಡಿದ್ದೇನೆ. ಆದರೆ ದೇವನೂರು ಸಮಗ್ರ ಸಾಹಿತ್ಯವನ್ನು ಇಂಗ್ಲಿಷಿಗೆ ಅನುವಾದ ಮಾಡುವ ಯೋಜನೆಗೆ ನಾನು ಸಂಪಾದಕನಾಗಿ ಕೆಲಸ ಮಾಡುತ್ತಿದ್ದೇನೆ' ಎಂದು ಹೇಳಿದರು. ಆದರೆ ಇದು ಅವರಿಂದ ಆಗಲಿಲ್ಲ. ಇದು 'ಸಂಸ್ಕಾರ'ದ ನಂತರ ರಾಮಾನುಜನ್ ಅವರು ಆಧುನಿಕ ಕನ್ನಡ ಸಾಹಿತ್ಯದ ಭಾಷಾಂತರಕ್ಕೆ ಆಯ್ಕೆ ಮಾಡಿಕೊಂಡ ವಿಷಯವಾಗಿದೆ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

'ಇತ್ತೀಚೆಗೆ ಬಹಳಷ್ಟು ವಿಶ್ವವಿದ್ಯಾಲಯಗಳಲ್ಲಿ ತೌಲನಿಕ ಸಾಹಿತ್ಯ ಮತ್ತು ಜಾನಪದ ಸಾಹಿತ್ಯದ ಬಗ್ಗೆ ಒಲವು ಕಾಣುತ್ತಿದ್ದೇವೆ. ಇದರ ಪರಿಣಾಮಗಳು ಏನಾಗಬಹುದು' ಎಂಬ ಮತ್ತೊಂದು ಬಹುಮುಖ್ಯವಾದ ಪ್ರಶ್ನೆಗೆ ರಾಮಾನುಜನ್ ಅವರು 'ತೌಲನಿಕ ಸಾಹಿತ್ಯದ

ಅಧ್ಯಯನದಿಂದ ನಮ್ಮ ಭವಿಷ್ಯವನ್ನು ಹೇಗೆ ರೂಪಿಸಬಹುದು ಎಂಬ ವಿಷಯವನ್ನು ತಿಳಿದುಕೊಳ್ಳಬಹುದಾಗಿದೆ. ಜಾನಪದ ಸಾಹಿತ್ಯದ ಅಧ್ಯಯನದಿಂದ ನಮ್ಮ ಹಿಂದಿನ ಇತಿಹಾಸ ಮತ್ತು ಸಂಸ್ಕೃತಿ ಬಗ್ಗೆ ಅರಿವು ಉಂಟಾಗುತ್ತದೆ. ಇಷ್ಟೇ ಅಲ್ಲದೆ ವರ್ತಮಾನ ಕಾಲದ ಆಗುಹೋಗುಗಳನ್ನು ಜನಪದ ಸಾಹಿತ್ಯದಿಂದ ತಿಳಿದುಕೊಳ್ಳಬಹುದು. ನಮ್ಮ ಸಾಹಿತ್ಯ ಚರಿತ್ರೆಯ ನಿರ್ಮಾಣಕ್ಕೆ ಕೆಲವು ಹೊಸ ದೃಷ್ಟಿಕೋನಗಳ ಮೇಲೆ ಜನಪದ ಸಾಹಿತ್ಯ ಬೆಳಕು ಚೆಲ್ಲುತ್ತದೆ' ಎಂದು ಮಹತ್ತರವಾದ ವಿಷಯವನ್ನು ಸಂದರ್ಶಕರ ಜೊತೆ ಹಂಚಿಕೊಂಡಿದ್ದಾರೆ.

ತೌಲನಿಕ ಅಧ್ಯಯನವು ಅನ್ಯಜ್ಞಾನಶಿಸ್ತುಗಳನ್ನು ಒಟ್ಟುಗೂಡಿಸಿ ಅಧ್ಯಯನಕ್ಕೆ ಒಳಪಡಿಸುವುದರಿಂದ ಹೊಸದೊಂದು ಒಳನೋಟದ ಚಿಂತನೆ ಮತ್ತು ಹೊಸ ಅಧ್ಯಯನಕ್ಕೆ ದಾರಿ ಮಾಡಿಕೊಡುವ ವಿಷಯವಸ್ತುವೊಂದು ನಮಗೆ ಲಭಿಸಬಹುದು ಎಂಬುದು ರಾಮಾನುಜನ್ ಅವರ ಅಭಿಪ್ರಾಯವಾಗಿದೆ. ಜನಪದ ಸಾಹಿತ್ಯದ ಅಧ್ಯಯನದಿಂದ ಜನಪದ ಎನ್ನುವುದು ಎಲ್ಲ ಕಾಲಕ್ಕೂ ಸಲ್ಲುವ, ನಿರಂತರವಾಗಿ ಚಲನಶೀಲವಾಗಿರುವ ಒಂದು ಸಂಸ್ಕೃತಿಯೇ ಹೊರತು ಯಾವುದೋ ಒಂದು ಕಾಲಘಟ್ಟಕ್ಕೆ ಸೀಮಿತವಾದುದಲ್ಲ ಎಂದು ಭಾವಿಸಿದ್ದಾರೆ.

೬.೧೦. ನಿರಾಡಂಬರ ಬುದ್ಧಿಜೀವಿ ಮತ್ತು ಭಾಷಾಶಾಸ್ತ್ರಜ್ಞರು ಎ.ಕೆ.ರಾಮಾನುಜನ್[೧೮]

ಈ ಪ್ರಬಂಧದಲ್ಲಿ ಪ್ರಮುಖ ಭಾಷಾಶಾಸ್ತ್ರಜ್ಞರಾದ ಚೇಕೂರಿ ರಾಮಾರಾವು ಅವರು ರಾಮಾನುಜನ್ ಅವರ ಪರಿಚಯವನ್ನು ಮತ್ತು ಭಾಷಾಶಾಸ್ತ್ರಕ್ಕೆ ನೀಡಿದ ಅವರ ಕೊಡುಗೆಯನ್ನು ಪರಿಶೀಲಿಸಿದ್ದಾರೆ. ಅಲ್ಲದೇ ರಾಮಾನುಜನ್ ಅವರ ಇಂಗ್ಲಿಷ್ ಪದ್ಯದ ಭಾಗಗಳನ್ನು ಕೊಟ್ಟು ತೆಲುಗಿನಲ್ಲಿ ಅನುವಾದಿಸಿ ಆ ಕವನಗಳ ವೈಶಿಷ್ಟ್ಯವನ್ನು ವಿವರಿಸಿದ್ದಾರೆ. ಚೇಕೂರಿ ರಾಮಾರಾವು ಅವರು ರಾಮಾನುಜನ್ ಅವರನ್ನು ಶಿಕಾಗೋ ಯೂನಿವರ್ಸಿಟಿ ನಡೆಸಿದ ಗ್ರೀಷ್ಮಕಾಲೀನ ಭಾಷಾಶಾಸ್ತ್ರದ ಕಮ್ಮಟದಲ್ಲಿ ೧೯೬೬ ಜೂನ್‌ನಲ್ಲಿ ಭೇಟಿ ಮಾಡಿದ್ದರು. ರಾಮಾರಾವು ಗುರುಗಳಾದ ಪ್ರೊ. ಜರಾಲ್ಡ್ ಕೆಲ್ಲಿ(೧೯೨೮-೮೭) ಇವರನ್ನು ರಾಮಾನುಜನ್ ಅವರಿಗೆ ಪರಿಚಯಿಸಿದರು. ತದನಂತರ ಇಬ್ಬರ ಮಧ್ಯೆ ಪರಿಚಯ ಗಾಢವಾಗಿ ಸ್ನೇಹರೂಪ ತಾಳಿತು. ರಾಮಾರಾವು ಅವರು ರಾಮಾನುಜನ್ ಅವರ ಭಾಷಾಶಾಸ್ತ್ರದ ಪಾಂಡಿತ್ಯಕ್ಕೆ ಮತ್ತು ಪರಿಶೀಲನೆಗೆ ಬಹಳ ಪ್ರಭಾವಿತರಾದರು. ೧೯೬೬ರಲ್ಲಿ ಪ್ರಕಟಿತವಾದ ರಾಮಾನುಜನ್ ಅವರ ಪ್ರಥಮ ಕವಿತಾ ಸಂಕಲನ 'ದಿ ಸ್ಟ್ರೈಡರ್ಸ್' ಓದಿ ಅದರ ಮಾಂತ್ರಿಕ ಪ್ರಭಾವಕ್ಕೆ ಒಳಗಾದರು. ಇವರು ರಾಮಾನುಜನ್ ಅವರನ್ನು ಭಾರತೀಯ ಆಂಗ್ಲ ಕವಿಗಳಲ್ಲಿ ಒಬ್ಬ 'ಮ್ಯಾಜಿಕಲ್ ನೇಮ್' ಅಂದು ನಂಬಿದ್ದರು. (ಸ್ಮೃತಿಕಿನಾಂಕಂ.ಪು.೧೪೭)

ರಾಮಾರಾವು ಅವರು ರಾಮಾನುಜನ್ ಅವರ ಅನುವಾದ ಕೃತಿಗಳಾದ The Interior Landscape, Poems of Love and War, Hyms for the Drowing ಮತ್ತು

Speaking of Siva ಈ ಕೃತಿಗಳ ಅನುವಾದಗಳನ್ನು ಓದಿ ಸಂತುಷ್ಟರಾದರು. ಮುಖ್ಯವಾಗಿ ಅವರಿಗೆ Speaking of Siva ಮೆಚ್ಚುಗೆ ಆಯಿತು. ಕನ್ನಡ ವಚನಗಳಲ್ಲಿ ಅನಿಬದ್ಧವಾದ ಸ್ಪಷ್ಟವಾದ ಲಯ ಇದೆಯೆಂದು ಅದಕ್ಕೆ ಮಾರುಹೋದರು(ಪು.೧೪೮). ರಾಮಾನುಜನ್ ಅವರ ಇಂಗ್ಲಿಷ್ ಕವನಗಳಲ್ಲಿ ಭಾಷಾನಿರ್ಮಾಣ ಗ್ರಹಿಕೆ ಪ್ರಧಾನವಾಗಿ ಇರುತ್ತವೆಂದು ಚೇರಾ ಭಾವಿಸಿದರು. ರಾಮಾನುಜನ್ ಅವರ A River ಪದ್ಯವನ್ನು ವಿಶ್ಲೇಷಿಸಿದರು. ಇಂಗ್ಲಿಷ್ ಭಾಷೆ ದಕ್ಷಿಣ ವಿಸ್ತರಣೆ(right branching) ಭಾಷೆಯೆಂದು ಅದರಲ್ಲಿ ವಿಶೇಷಣ ವಾಕ್ಯಗಳು ಎಡಗಡೆಗೆ ಬರುತ್ತವೆ. ಆದರೆ ದ್ರಾವಿಡ ಭಾಷೆಗಳು ವಾಮ ವಿಸ್ತರಣೆ(left branching) ಭಾಷೆಗಳು. ಆದ್ದರಿಂದ ವಾಕ್ಯದ ವಿಶೇಷಣಗಳು ಎಡಗಡೆಗೆ ಬರುತ್ತವೆಂದರು. ರಾಮಾನುಜನ್ ಅವರ ಕಾವ್ಯ ಅನುವಾದ ಮಾಡುವುದು ಬಹಳ ಕಷ್ಟ ಎಂದರು(ಆಯನ ಕವಿತ್ವಂ ಅನುವಾದಾನಿಕಿ ವಕಪಟ್ಟಾನ ಲೊಂಗದು–ಪು.೧೪೯).

City of Templesನಲ್ಲಿರುವ ಎರಡು ನಾಮಪದಗಳ ಸಂಬಂಧವನ್ನು ನಂತರದ ಪಾದದಲ್ಲಿ Cities and Temples ಎಂದು ಸಂಯೋಜನೆ ಮಾಡಿ ಓದುಗರಿಗೆ ಚಮತ್ಕಾರ ಉಂಟುಮಾಡಿದರು(ಪು.೧೪೯).

ರಾಮಾನುಜನ್ ಅವರ ಕಾವ್ಯದಲ್ಲಿ ಬಹಳ ಸುಕುಮಾರವಾದ ಅಭಿವ್ಯಂಜನೆ ಇರುತ್ತದೆ. ಅವರು ಯಾವ ವಿಷಯವನ್ನೂ ವಾಚ್ಯವಾಗಿ ಹೇಳುವುದಿಲ್ಲ. ಬಹಳಷ್ಟು ವಿಷಯಗಳನ್ನು ಓದುಗರ ಊಹೆಗೆ ಬಿಟ್ಟುಬಿಡುತ್ತಾರೆ.

> "The new poets still quoted
> the old poets but no one spoke in verse
> of the pregnant woman
> drowned with perhaps twins in her
> kicking at blank walls
> even before birth"

ಈ ಕವನದಲ್ಲಿ ಪ್ರಾಚೀನ ಮತ್ತು ನವೀನ ತಮಿಳು ಕವಿಗಳು ವೈಗೈ ನದಿಯ ಸೌಂದರ್ಯವನ್ನು ಬಣ್ಣಿಸಿದ್ದಾರೆ. ಆದರೆ ಯಾರೂ ಉದ್ಧೃತ ನದಿ ಪ್ರವಾಹಕ್ಕೆ ಆದ ಅನಾಹುತಗಳನ್ನು ಬಣ್ಣಿಸಲಿಲ್ಲ ಎಂದು ಹೇಳುತ್ತಾ The new poets still quoted the old poets ಎಂದು ಧ್ವನಿಗರ್ಭಿತವಾಗಿ ಹೇಳುತ್ತಾರೆ(ಪು.೧೪೯).

ರಾಮಾನುಜನ್ ಅವರು ಸ್ಪಾಂಟೇನಿಯಸ್ ಪೊಯೆಟ್ ಅಲ್ಲ. ಬಹಳ ಪ್ರಜ್ಞೆಯಿಂದ ಪದ್ಯದ ಶಿಲ್ಪವನ್ನು ಕೆತ್ತುತ್ತಾರೆ. ಅವರ ಕವನಗಳಲ್ಲಿ ದೃಶ್ಯಚಿತ್ರಣಕ್ಕೆ ಪ್ರಾಧಾನ್ಯ ಜಾಸ್ತಿ(ಪು.೧೫೦).

ಎ.ಕೆ.ರಾಮಾನುಜನ್ ದೊಡ್ಡ ಬುದ್ಧಿಜೀವಿಯಾದರೂ ಬಹಳ ಸರಳವಾದ ವ್ಯಕ್ತಿ. ಅವರ ವ್ಯಕ್ತಿತ್ವದ ವೈಶಿಷ್ಟ್ಯಗಳಲ್ಲಿ ಇದು ಒಂದು(ಪು.೧೫೨).

ರಾಮಾರಾವು ಅವರು ರಾಮಾಜುನ್ ಅವರನ್ನು ತೆಲುಗು ಸಾಹಿತ್ಯ ಜಗತ್ತಿಗೆ ಪರಿಚಯಿಸುವ ಅತ್ಯುತ್ತಮ ಲೇಖನ ಇದಾಗಿದೆ. ರಾಮಾನುಜನ್ ಅವರು ಭಾಷಾಶಾಸ್ತ್ರಜ್ಞರಾಗಿ, ಕವಿಯಾಗಿ, ಭಾಷಾಂತರಕಾರರಾಗಿ ಹೇಗೆ ಜಗತ್ತಿನಾದ್ಯಂತ ಪ್ರಸಿದ್ಧಿ ಪಡೆದಿದ್ದಾರೆ ಎಂದು ಸಂಕ್ಷಿಪ್ತವಾಗಿ ತೆಲುಗು ಸಾಹಿತ್ಯ ಕ್ಷೇತ್ರಕ್ಕೆ ಪರಿಚಯ ಮಾಡಿಕೊಡುವ ಈ ಒಂದು ಲೇಖನ ಬಹಳ ಪ್ರಮುಖವಾದದ್ದು.

೬.೧೧. ಹಳದಿ ಮೀನು(೧೯೬೬)

ಎ.ಕೆ.ರಾಮಾನುಜನ್ ಅವರು "ಶೌರಿ" ಎಂಬುವವರು ಇಂಗ್ಲಿಷ್‌ನಲ್ಲಿ ಬರೆದ ಕಾದಂಬರಿಯೊಂದನ್ನು "ಹಳದಿ ಮೀನು"(೧೯೬೬) ಎಂಬ ಹೆಸರಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಇದು ಒಂದು ಮುಖ್ಯ ನವ್ಯ ಕಾದಂಬರಿಯಾಗಿದೆ. ೫೦ ಮತ್ತು ೬೦ರ ದಶಕದಲ್ಲಿ ಕನ್ನಡ ನವ್ಯಕಾವ್ಯ ಹಾಗೂ ಕಥನಸಾಹಿತ್ಯ ಉತ್ತುಂಗ ಸ್ಥಿತಿಯಲ್ಲಿದ್ದ ಕಾಲ. ಈ ಅವಧಿಯಲ್ಲಿ ಲಂಕೇಶರ ಬಿರುಕು, ಶಾಂತಿನಾಥ ದೇಸಾಯಿ ಅವರ 'ಮುಕ್ತಿ', 'ವಿಕ್ಷೇಪ', ಗಿರಿ ಅವರ 'ಗತಿಸ್ಥಿತಿ', ಆರ್ಯರ 'ಗುರು' ಮುಂತಾದ ನವ್ಯ ಕಾದಂಬರಿಗಳ ಸಾಲಿನಲ್ಲಿ ಈ 'ಹಳದಿ ಮೀನು' ಸೇರುತ್ತದೆ. ಈ ಘಟ್ಟ ನವ್ಯ ಕಾದಂಬರಿಗಳಲ್ಲಿ ಅನಾಥಪ್ರಜ್ಞೆ, ಅಭದ್ರ ಭಾವನೆ, ತಬ್ಬಲಿತನ, ಒಂಟಿತನ, ರಾಜಕೀಯ ಹಾಗೂ ಸಾಮಾಜಿಕ ದ್ವಂದ್ವಗಳು, ಪರಂಪರೆಯ ಜೊತೆಗಿನ ಗುದ್ದಾಟಗಳು, ನಗರಜೀವನದ ಸಮಸ್ಯೆಗಳು ಹಾಗೂ ಆತಂಕಗಳನ್ನು ಸ್ಥಾಯಿಭಾವಗಳನ್ನಾಗಿ ಹೊಂದಿದ್ದ ಚಾರಿತ್ರಿಕ ಘಟ್ಟ.

'ಹಳದಿ ಮೀನು' ಕಾದಂಬರಿಯ ನಾಯಕ ಕೂಡ ಇಂತಹ ಸಾಲಿಗೆ ಸೇರಿದವನೇ ಆಗಿದ್ದಾನೆ. ಅವನು ಒಬ್ಬ ಅಸ್ತಿತ್ವವಾದಿ ಗುಂಪಿಗೆ ಸೇರಿದ ಬುದ್ಧಿಜೀವಿ. ವೃತ್ತಿಯಲ್ಲಿ ಆತ ಪರ್ತಕರ್ತ. ಆದರೆ ಅವನಿಗೆ ಹೆಸರಿಲ್ಲ. ಅವನ ಕಛೇರಿಗೆ ಪತ್ರಿಕೋದ್ಯಮ ತರಬೇತಿಗಾಗಿ ಬರುವವಳು ಕೂಡ ಹೆಸರಿಲ್ಲದವಳು. ಅವರಿಬ್ಬರ ಮೊದಲ ಪರಿಚಯದ ಹಂತದಲ್ಲಿಯೇ ಕಾಣಿಸಿಕೊಳ್ಳುವ ಆಕರ್ಷಣೆ ಇಬ್ಬರನ್ನೂ ಹತ್ತಿರ ಹತ್ತಿರ ತರುತ್ತದೆ. ಅವರಿಬ್ಬರೂ ತಮ್ಮ ವಿಚಾರ ಚಿಂತನೆಗಳಿಂದ ಪರಸ್ಪರ ಬೆರೆಯುತ್ತಾರೆ. ಆದರೆ ಅವನಿಗೆ ವಿವಾಹದಂತಹ ಸಾಮಾಜಿಕ ಸಂಸ್ಥೆಯಲ್ಲಿ ಸಿಕ್ಕಿಕೊಳ್ಳಲು ಇಷ್ಟವಿಲ್ಲ. ಅದಕ್ಕಾಗಿ ಅವನು ಅವಳೊಡನೆ ರಾಜಿಮಾಡಿಕೊಳ್ಳಲಾಗದೆ ಕೊನೆಗೆ ಒಂದು ದಿನ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

ಈ ಕಾದಂಬರಿ ಬದುಕುತ್ತಿರುವ ವಸ್ತು ಕೂಡ ಇಂದಿನ ಸಮಾಜಕ್ಕೆ ಸೇರಿದ್ದಾಗಿದೆ. ಇದು ಶೀರಾ ಸಮಕಾಲೀನವಾದ ಸಮಾಜ. ಆದರೆ ಸುತ್ತಲಿನ ಸಮಾಜದೊಂದಿಗೆ ಪರಿಸರದೊಂದಿಗೆ

ಅರ್ಥವತ್ತಾದ ಸಂಬಂಧ ಕಂಡುಕೊಳ್ಳಲಾಗದೇ ದುರಂತವನ್ನು ಕಾಣುವುದು ಈ ಕಾದಂಬರಿಯ ವಸ್ತು. ಯುರೋಪಿನ ಅಸ್ತಿತ್ವವಾದದ ಪ್ರಭಾವದಿಂದಾಗಿ ಈ ನಾಯಕ ತನ್ನ ಬದುಕನ್ನು ಭಾರತೀಯ ಪರಿಸರಕ್ಕೆ ಅನುಗುಣವಾಗಿ ಕಟ್ಟಿಕೊಳ್ಳಲಾಗದೆ ದುರಂತವನ್ನು ತಂದುಕೊಳ್ಳುವುದು ವ್ಯಂಗ್ಯವಾಗಿದೆ.

ಅವನು ಮತ್ತು ಅವಳ ನಡುವೆ ನಡೆಯುವ ಮನಸ್ಸಿನ ತುಮಲಗಳು, ವಿಚಾರ-ಪ್ರತಿವಿಚಾರಗಳು, ಪ್ರತಿಕ್ರಿಯೆಗಳು, ಇವುಗಳಲ್ಲಿ ಅವನದೇ ಪ್ರಧಾನ ಪಾತ್ರವಾಗಿದೆ. "ನಾನು ಒಂಟಿ, ನನಗೆ ಮನೆ ಇಲ್ಲ, ಅನಿಕೇತನ ನಾನು, ಇದನ್ನೆಲ್ಲಾ ನಾನೇನೂ ಸಂಕಟಪಟ್ಟು ನನ್ನ ಬಗೆಗೆ ನಾನೇ ಮರುಕ ಪಟ್ಟು ಹೇಳಿಕೊಳ್ಳುತ್ತಿಲ್ಲ" ಎಂಬ ಅವನ ಮನಸ್ಸಿನ ಪಾತಳಿ ಅವನ ವಿಕ್ಷಿಪ್ತ ವ್ಯಕ್ತಿತ್ವಕ್ಕೆ ಹಿಡಿದ ಸ್ವಗತದ ಕನ್ನಡಿಯಾಗಿದೆ. ಆತ ತನ್ನ ಮೊದಲ ಭೇಟಿಯಲ್ಲಿಯೇ ಅವಳು ಬರೆದ 'ಹಳದಿ ಮೀನು' ಎಂಬ ಕವನ ಕುರಿತು "ನೀವು ಬರೆದ ಪದ್ಯ ಹಳದಿ ಮೀನು ಓದಿದೆ, ಏನು ಬರೀ ಅದು ಪದಗಳ ಸರಣಿ ಎಂದ." ಹಳದಿ ಮೀನು ಯಾರು ಗೊತ್ತೆ, ನನಗೆ ತಿಳಿದ ಮನುಷ್ಯ ಒಬ್ಬ. ಅವನು ಅಸ್ತಿತ್ವವಾದಿ ಜಾತಿ ಎಂದು ಆಕೆ ಹೇಳುತ್ತಾಳೆ. ಆದರೆ ಅವನು ಹೀಗೆ ದೊಡ್ಡ ದೊಡ್ಡ ಪದ ಉಪಯೋಗಿಸಬೇಡ. ಅಸ್ತಿತ್ವವಾದ ಎಂದರೇನು ತಾಯೀ ಎಂದು ಪ್ರಶ್ನಿಸುತ್ತಾನೆ. ಆ ಮಾತನ್ನು ಕೇಳಿ ಆಕೆ ನಕ್ಕುಬಿಡುತ್ತಾಳೆ. ಆ ಚಕಮಕಿ ಇಬ್ಬರ ವಿಚಾರವಂತಿಕೆಗೆ ನಿದರ್ಶನವಾಗಿದೆ. ಹೀಗೆ ಇಡೀ ಕಾದಂಬರಿಯ ತುಂಬಾ ಅವರಿಬ್ಬರ ನಡುವೆ ನಡೆಯುವ ಚರ್ಚೆ, ವಿಚಾರ ಪ್ರಣಾಳಿಕೆ, ಮಾನಸಿಕ ತೊಳಲಾಟ ಇವೆಲ್ಲಾ ವಿಕ್ಷಿಪ್ತವಾಗಿ ಕಾಣುತ್ತವೆ. ಕಾದಂಬರಿಯ ಭಾಷೆ ಭಾವುಕವಾಗಿ ಅಭಿವ್ಯಕ್ತವಾಗುತ್ತದೆ. ಭೀತಿ, ಉದ್ರೇಕ, ವಾತ್ಸಲ್ಯವನ್ನೂ ಕೂಡ ಭಾಷೆ ಪ್ರಕಟಿಸುತ್ತದೆ. ಯುವಜನಾಂಗದ ದ್ವಂದ್ವಗಳನ್ನು, ಹೊಯ್ದಾಟಗಳನ್ನು, ಡೋಲಾಯಮಾನ ಸ್ಥಿತಿಯನ್ನು ಕಾದಂಬರಿಯು ಪ್ರಭಾವಪೂರ್ಣವಾಗಿ ಧ್ವನಿಸುತ್ತದೆ.

ಈ ಕಾದಂಬರಿಯನ್ನು ಕುರಿತು ಕೀರ್ತಿನಾಥ ಕುರ್ತಕೋಟಿ ಅವರು ಹೇಳುವ ಹಾಗೆ "ಗಂಡು ಹೆಣ್ಣುಗಳ ಆಕರ್ಷಣೆ ಒಂದು ಮನೋಧರ್ಮವಾಗಿ, ಅಭಿರುಚಿಯಾಗಿ ಮಾರ್ಪಟ್ಟಾಗ ಅದರಿಂದ ಉಂಟಾಗುವ ಸಮಸ್ಯೆಗಳ ಕುಶಲಚಿತ್ರಣ ಈ ಕೃತಿಯಲ್ಲಿದೆ. ಕತ್ತಲೆ ತುಂಬಿದ ಮನಸ್ಸಿನ ಓವರಿನಲ್ಲಿ ಈ ಬರವಣಿಗೆಯ ಬೆಳಕು ಬಿದ್ದು ಅಲ್ಲಿಯ ಶಿಲ್ಪ ಕಣ್ಣಿಗೆ ಬಿದ್ದಾಗ ಆಗುವ ಅನುಭವ ವಿಸ್ಮಯವನ್ನು ಹುಟ್ಟಿಸುತ್ತದೆ. ಕತೆ ಸಣ್ಣದೇ, ಆದರೆ ಒಂದು ಅಪರೂಪ ಪ್ರಜ್ಞೆ ಕತೆಯ ಸಾಮಗ್ರಿಯನ್ನು ರೂಪಿಸಿದೆ. ಬರವಣಿಗೆಯಲ್ಲಿ ಉಪಯೋಗಿಸಿದ ಭಾಷೆ ಕೇವಲ ಹೃದಯಂಗಮವಾಗಿರದೆ ವಚನಕಾರರ ಭಾಷೆಯಂತೆ ಸೂಕ್ಷ್ಮವಾದ ಧ್ವನ್ಯರ್ಥಗಳನ್ನು ಬೆಳಗಿಸುವ ಮಾಧ್ಯಮವಾಗಿದೆ. ಈ ಕೃತಿಯ ಭಾಷೆ ಅಕ್ಷರಶಃ 'ಸ್ಫಟಿಕದ ಶಲಾಕೆ'ಯಾಗಿದೆ; ಲೌಕಿಕ ಅಲೌಕಿಕಗಳೆರಡನ್ನೂ ಪ್ರತಿಬಿಂಬಿಸಿ ತಾನು ಅಲಿಪ್ತನಾಗಿಯೇ ಉಳಿಯುವ ಭಾಷೆ. ಕನ್ನಡದ

ಬರವಣಿಗೆಯ ಕಸುವು ಎಷ್ಟೆಂಬುದನ್ನು ತೋರಿಸಲು ಈ ಕುಶಲಪ್ರಯೋಗ ಒಂದು ಸಾಕ್ಷಿಯಾಗಿದೆ..."[೧೯]

ರಾಮಾನುಜನ್ ಅವರ ಭಾಷೆಯ ಪ್ರಭುತ್ವ ಈ ಕಾದಂಬರಿಯಲ್ಲಿ ಸಮರ್ಥವಾಗಿ ಅಭಿವ್ಯಕ್ತವಾಗಿದೆ. ಇದನ್ನು ಓದುತ್ತಿದ್ದರೆ ರಾಮಾನುಜನ್ ಅವರು ಅನುವಾದಿಸಿದ ಕಾದಂಬರಿ ಎಂದು ಅನ್ನಿಸುವುದಿಲ್ಲ. ನವ್ಯಕಾವ್ಯದ ರಚನೆಯ ಮುಂಚೂಣಿಯಲ್ಲಿದ್ದ ರಾಮಾನುಜನ್ ಅವರು ಭಾಷೆಯನ್ನು ಪಾರದರ್ಶಕವಾಗಿ ಬಳಸಿದವರು. ಅದರ ಪರಿಣಾಮ ಎಂಬಂತೆ ಈ ಕಾದಂಬರಿಯ ಭಾಷೆ ಕಂಡುಬರುತ್ತದೆ. ಇಲ್ಲಿಯ ನಾಯಕನ ಸಮಸ್ಯೆ ವ್ಯಕ್ತಿಗತವಾಗಿದ್ದರೂ ತುಂಬಾ ಸಂಕೀರ್ಣವಾಗಿದೆ. ನವ್ಯದ ಇತರೆ ಕಾದಂಬರಿಗಳ ನಾಯಕರಂತೆ ಆತ್ಮಹತ್ಯೆ ಮಾಡಿಕೊಂಡರೂ ಅದರಲ್ಲಿಯೂ ಸಾರ್ಥಕತೆಯನ್ನು ಕಾಣುತ್ತಾನೆ. ಅಪ್ರಕಟಿತ ಇಂಗ್ಲಿಷ್ ಮೂಲದಿಂದ ಅನುವಾದ ಮಾಡಿದ್ದೇನೆ ಎಂದು ಹೇಳಿಕೊಳ್ಳುವ ರಾಮಾನುಜನ್ ಅವರು ಈ ಕಾದಂಬರಿಯನ್ನು ಕುರಿತು ಹೀಗೆ ಹೇಳುತ್ತಾರೆ. "ಈ ಬರಹ ಒಂದು ಕೇಂದ್ರ ಪ್ರತೀಕದ ಸುತ್ತ ತಿರುಗುತ್ತದೆ. ಈ ಪ್ರತೀಕ ತಿರುಗುವ ಸ್ಫಟಿಕ. ಇಲ್ಲಿ ಕತೆ ಹೇಳುವ ಪ್ರಯತ್ನವಿಲ್ಲ. ಇಲ್ಲಿನ ಕಾರ್ಯ–ಕಾರಣ, ಕಾಲ–ಕಾಲಮಾನ, ಸಂಭವ–ಸಂಗತಿಗಳು ಇಲ್ಲಿನ ಉದ್ದೇಶಕ್ಕೆ ಹೊರಗು. ಇಲ್ಲಿನ ಪಾತ್ರ–ವಸ್ತು–ಸಂಭವ ಯಾವುದಕ್ಕೂ ನಾಯಕನ ಮನಸ್ಸಿನಿಂದಾಚೆ ಬೇರೆ ಅಸ್ತಿತ್ವವಿಲ್ಲ. ಮಾತೆಲ್ಲಾ ಕಪಿಗಳ ಅಪಶಬ್ದ, ಇಲ್ಲವೇ ಆತ್ಮರಕ್ಷಣೆ, 'ಅವನು', 'ಅವಳು' ಚದುರಂಗದಾಟ ಆಡುತ್ತಾರೆ. ಅವನು ಕಟ್ಟ ಕಡೆಯ ಕಾಯಿ ನಡೆಸಿ ಮುಗಿಸುತ್ತಾನೆ. 'ಅವಳು' ಎಂಬ ಹೆಂಗಸು ಇಲ್ಲಿ ಕುರುಡು ಗಿಳಿ"[೨೦] ಎನ್ನುವ ಅಭಿಪ್ರಾಯ ಸಹಜವಾಗಿದೆ. ಒಟ್ಟಾರೆ ಈ ಕಾದಂಬರಿಯ ರಚನೆಯ ಮೇಲೆ ಅಸ್ತಿತ್ವವಾದದ ಪ್ರಭಾವ ಮತ್ತು ಕಾಮುವಿನ ಪ್ರಭಾವ ದಟ್ಟವಾಗಿ ಎದ್ದು ಕಾಣುತ್ತದೆ. ಈ ಕಾದಂಬರಿಯ ವಸ್ತು ಪ್ರಸ್ತುತದಲ್ಲಿ ಜಾಗತಿಕ ಹಾಗೂ ಭಾರತೀಯ ಯುವಪೀಳಿಗೆ ಎದುರಿಸುತ್ತಿರುವ ಸಮಸ್ಯೆಗಳಿಗೆ ಪ್ರತಿಬಿಂಬದಂತಿದೆ.

ಅಡಿಟಿಪ್ಪಣಿ

೧. Benjamin Walter, 'The Task of the Translate', Tr. Harry Zohn, in Lawrence Venuti. ed., The Translation Studies Reader, London, New York, Routledge 2000. P.(15-26)

೨. A. K. Ramanujan, 'Preface to Sanskara: A Rite for a Dead Man' Delhi, OUP, 1976.

೩. A. K. Ramanunan, The Interior Landscape: Love Poems from a Classical Tamil Anthology, Bloomington, Indiana University, 1967. P.11

೪. Vinaya Dharwadkar, Ramanujan's Theory and practice, Ed. Susan Bassnett, Post Colonial Translation Theory and Practice, London, Routledge, 1999. P. 123.

೫. ಸಿ.ಎನ್. ರಾಮಚಂದ್ರನ್, ಭಾಷಾಂತರ: ಸೈದ್ಧಾಂತಿಕ ಹಾಗೂ ಆನ್ವಯಿಕ ನೆಲೆಗಳು, ಮನೋಹರ ಗ್ರಂಥಮಾನಾ, ಧಾರವಾಡ, ೨೦೧೫, ಪು. ೬೩.

೬. A.K.Ramanujan, Speaking of Siva, London, Penguin Books, 1973, P.12.

೭. ಸಿ.ಎನ್. ರಾಮಚಂದ್ರನ್, ಭಾಷಾಂತರ: ಸೈದ್ಧಾಂತಿಕ ಹಾಗೂ ಆನ್ವಯಿಕ ನೆಲೆಗಳು, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೫, ಪು. ೬೫.

೮. ಸಿ.ಎನ್. ರಾಮಚಂದ್ರನ್, ಭಾಷಾಂತರ: ಸೈದ್ಧಾಂತಿಕ ಹಾಗೂ ಆನ್ವಯಿಕ ನೆಲೆಗಳು, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೫, ಪು. ೬೫.

೯. ತಮಿಳು ಕಾವ್ಯಮೀಮಾಂಸೆ, ಡಾ.ಕಾರ್ಲೋಸ್, ಅನುವಾದ: ಎಸ್.ಸುಚಿತ್ರ ಲತ, ಎಲ್.ಜಿ.ಮೀರ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಪು. ೨೫.

೧೦. Tejaswini Niranjana, Siting Translation: History Post Structuralism, and the colonial context, Hyderabad, Orient Longman, Paper Back, 1992.

೧೧. Vinay Dharwadker, Ramanujan's Theory and practice, in ed: Susan Bassnett and Harish Trivedi, Post-colonial translation: Theory and practice, London, Routeledge, 1999.

೧೨. ಸಿ.ಎನ್. ರಾಮಚಂದ್ರನ್, ಭಾಷಾಂತರ: ಸೈದ್ಧಾಂತಿಕ ಹಾಗೂ ಆನ್ವಯಿಕ ನೆಲೆಗಳು, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೫, ಪು. ೭೪.

೧೩. ಎ.ಕೆ.ರಾಮಾನುಜನ್ ನೆನಪಿನ ಸಂಪುಟ, ಸಂ.ಟಿ.ಪಿ.ಅಶೋಕ, ಕರ್ನಾಟಕ ಸಂಘ, ಪುತ್ತೂರು, ದಕ್ಷಿಣ ಕನ್ನಡ, ೧೯೯೩, ಪು. ೧೩೫.

೧೪. ಎ.ಕೆ.ರಾಮಾನುಜನ್ ನೆನಪಿನ ಸಂಪುಟ, ಸಂ.ಟಿ.ಪಿ.ಅಶೋಕ, ಕರ್ನಾಟಕ ಸಂಘ, ಪುತ್ತೂರು, ದಕ್ಷಿಣ ಕನ್ನಡ, ೧೯೯೩, ಪು. ೧೩೩.

೧೫. ಎ.ಕೆ.ರಾಮಾನುಜನ್ ನೆನಪಿನ ಸಂಪುಟ, ಸಂ.ಟಿ.ಪಿ.ಅಶೋಕ, ಕರ್ನಾಟಕ ಸಂಘ, ಪುತ್ತೂರು, ದಕ್ಷಿಣ ಕನ್ನಡ, ೧೯೯೩, ಪು. ೧೩೪.

೧೬. ಭಾರತೀಯ ಜನಪದ ಕತೆಗಳು, ಅನು:ಮಹಾಬಲೇಶ್ವರ ರಾವ್, ಮೊದಲ ಮಾತು, ನ್ಯಾಷನಲ್ ಬುಕ್ ಟ್ರಸ್ಟ್, ೨೦೦೦, ಪು. ೧೧.

೧೭. ಕ್ಷೇತ್ರಯ್ಯ ಪದಮುಲು, ಸಂ.ವಿಸ್ಸಾ ಅಪ್ಪಾರಾವು, ಪೀಠಿಕೆ, ಪು. ೬.

೧೮. ನಿರಾಡಂಬರುಡೈನ ಮೇಧಾವಿ, ಭಾಷಾಸಾಹಿತ್ಯವೇತ್ತ ಎ.ಕೆ.ರಾಮಾನುಜನ್–೧೯೯೩ ಆಗಸ್ಟ್ ೧, ಆಂಧ್ರಜ್ಯೋತಿ ದಿನಪತ್ರಿಕೆ, ಚೇರಾತಲು ಎಂಬ ಕಾಲಂಗೆ ಬರೆದ ಲೇಖನ. Smriti Kinankam, A collection of essays on literature and literary personalities, ಸಂ.ಚೇಕೂರಿ ರಾಮಾರಾವು, ಚೇರಾ ಪಬ್ಲಿಷರ್ಸ್, ಹೈದರಾಬಾದ್–೭, ೨೦೦೦, ಪು. ೧೪೫–೧೫೨.

೧೯. ಹಳದಿ ಮೀನು, ಬೆನ್ನುಡಿಯಲ್ಲಿ, ಮನೋಹರ ಗ್ರಂಥಮಾಲಾ, ಧಾರವಾಡ, ೧೯೯೭, ಎರಡನೇ ಮುದ್ರಣ.

೨೦. ಹಳದಿ ಮೀನು, ಹಿನ್ನುಡಿಯಲ್ಲಿ, ಮನೋಹರ ಗ್ರಂಥಮಾಲಾ, ಧಾರವಾಡ. ೧೯೯೭, ಎರಡನೇ ಮುದ್ರಣ.

ಅಧ್ಯಾಯ : ಏಳು

ರಾಮಾನುಜನ್ ಅವರ ಇಂಗ್ಲಿಷ್ ಕಾವ್ಯ

೧. Striders
೨. Relations
೩. Second Sight
೪. The Black Hen

ಅಧ್ಯಾಯ : ಏಳು

ಎ.ಕೆ. ರಾಮಾನುಜನ್ ಅವರ ಇಂಗ್ಲಿಷ್ ಕಾವ್ಯ

ಕನ್ನಡದ ವಚನಗಳನ್ನು, ಕನ್ನಡ ಹಾಗೂ ಭಾರತದ ಬಹು ಭಾಷೆಗಳ ಪ್ರಾತಿನಿಧಿಕ ಜನಪದ ಕಥೆಗಳನ್ನು, ಕನ್ನಡದ ಕಾದಂಬರಿ ಕಥೆಗಳನ್ನು, ತಮಿಳಿನ ಸಂಗಂ ಸಾಹಿತ್ಯವನ್ನು, ಭಕ್ತಿ ಸಾಹಿತ್ಯವನ್ನು, ತೆಲುಗಿನ ಭಕ್ತಿಸಾಹಿತ್ಯವನ್ನು ಹೀಗೆ ಭಾರತೀಯ ಸಾಹಿತ್ಯವನ್ನು ರಾಮಾನುಜನ್ ಅವರು ಇಂಗ್ಲಿಷ್‌ಗೆ ಅನುವಾದ ಮಾಡಿದರು. ಅವರ ಉದ್ದೇಶ ಬರೀ ಅನುವಾದ ಮಾಡುವುದಾಗಿರಲಿಲ್ಲ. ಭಾರತೀಯ ಸಾಹಿತ್ಯವೆಂದರೆ, ಸಂಸ್ಕೃತ ಭಾಷೆಯಲ್ಲಿನ ಸಾಹಿತ್ಯವೆಂದು ಪಾಶ್ಚಾತ್ಯರು ನಂಬಿದ್ದ ಮತ್ತು ವಸಾಹತುಶಾಹಿ ಕಾಲಘಟ್ಟದಲ್ಲಿ ತಮ್ಮ ಸಾಮ್ರಾಜ್ಯಶಾಹಿ ಧೋರಣೆಗೆ ಅನುಗುಣವಾಗಿ ಸಂಸ್ಕೃತ ಭಾಷೆಯನ್ನು ಕಲಿತು ಸಂಸ್ಕೃತ ಭಾಷೆಯಲ್ಲಿನ ಸಾಹಿತ್ಯವನ್ನು ಇಂಗ್ಲಿಷ್‌ಗೆ ಅನುವಾದಿಸಿಕೊಂಡ ಓರಿಯಂಟಲಿಸ್ಟ್ ವಿದ್ವಾಂಸರಿಗೆ, ಭಾರತೀಯ ಸಾಹಿತ್ಯವೆಂದರೆ ಅದು ಬರೀ ಸಂಸ್ಕೃತ ಸಾಹಿತ್ಯವಲ್ಲ, ಭಾರತದ ಬಹುಭಾಷೆಗಳಲ್ಲಿ, ಬಹುಸಂಸ್ಕೃತಿಗಳಲ್ಲಿರುವ ಸಾಹಿತ್ಯ ಎಂದು ಪಾಶ್ಚಾತ್ಯಲೋಕಕ್ಕೆ ತಿಳಿಸುವ ಜರೂರು ರಾಮಾನುಜನ್ ಅವರಿಗೆ ಇತ್ತು. ಅದರಲ್ಲೂ ಮುಖ್ಯವಾಗಿ ಭಾರತದ ಪುರಾಣ ಕಾವ್ಯಗಳು, ಭಕ್ತಿಕಾವ್ಯಗಳು, ಅಭಿಜಾತ ಪರಂಪರೆಯ ಜೊತೆಗೆ 'ಜನವಾಣಿ ಬೇರು' ಎಂಬಂತಹ ಮೌಖಿಕ ಸಾಹಿತ್ಯ ಪರಂಪರೆಯೊಂದು ಬಹುತ್ವದ ನೆಲೆಯಲ್ಲಿ ಅಗಾಧವಾಗಿ ಮತ್ತು ಪಾರಂಪರಿಕವಾಗಿ ಇದೆ ಎಂಬುದನ್ನು ಪಾಶ್ಚಾತ್ಯರಿಗೆ ಮೊದಲು ತೋರಿಸಿಕೊಟ್ಟವರು ರಾಮಾನುಜನ್ ಅವರು. ಇದು ಅವರ ಅನುವಾದಗಳ ಹಿಂದಿನ ಬಹು ಮಹಾತ್ವಾಕಾಂಕ್ಷೆಯ ಆಶಯವಾಗಿತ್ತು.

ಆದರೆ ರಾಮಾನುಜನ್ ಅವರಿಗೆ ಭಾರತೀಯತೆಯ ಬಹುತ್ವವನ್ನು, ವೈವಿಧ್ಯತೆಯನ್ನು, ವಿಭಿನ್ನತೆಯನ್ನು ಈ ಹಲವಾರು ಆಭಿಜಾತ ಹಾಗೂ ಮೌಖಿಕ ಪರಂಪರೆಯ ಬರಹಗಳನ್ನು ಇಂಗ್ಲಿಷ್‌ಗೆ ಅನುವಾದ ಮಾಡಿ ಪಾಶ್ಚಾತ್ಯ ಜಗತ್ತಿಗೆ ಕೊಡಮಾಡಿದ್ದಷ್ಟಕ್ಕೆ ತೃಪ್ತಿ ಬಂದಂತೆ ಕಾಣಲಿಲ್ಲ ಅನ್ನಿಸುತ್ತದೆ. ಅಮೆರಿಕ ದೇಶದ ಶಿಕಾಗೋ ನಗರದ ವಿಶ್ವವಿದ್ಯಾಲಯವೊಂದರಲ್ಲಿ

ಅನೇಕ ವರ್ಷಗಳ ಕಾಲ ಇಂಗ್ಲಿಷ್ ಸಾಹಿತ್ಯ, ಭಾಷೆ, ಸಂಸ್ಕೃತಿಯನ್ನು ಬೋಧಿಸಿದ ಅವರು ತಮ್ಮ ಜೀವಿತದ ಕಾಲದುದ್ದಕ್ಕೂ ಚಿಂತಿಸಿದ್ದು, ಬರೆದದ್ದು ಭಾರತದ ಪರಂಪರೆ, ಸಾಹಿತ್ಯ, ಸಂಸ್ಕೃತಿಯ ಬಗ್ಗೆಯೇ. ಅವರು ಅಮೆರಿಕದಿಂದ ಭಾರತಕ್ಕೆ ಬಂದಾಗಲೆಲ್ಲಾ ಇಲ್ಲಿಯ ಜನಪದ ಕಥೆ, ಹಾಡು, ಪ್ರದರ್ಶನಗಳ ಬಗ್ಗೆ ಸ್ನೇಹಿತರೊಡಗೂಡಿ ಕ್ಷೇತ್ರಕಾರ್ಯ ಮಾಡಿದ್ದೇ ಹೆಚ್ಚು. ಇಲ್ಲಿ ಅನೇಕ ಕಡೆ ಉಪನ್ಯಾಸ, ಚರ್ಚೆ, ಸಂವಾದಗಳಲ್ಲಿ ಪಾಲ್ಗೊಂಡು ಅಲ್ಲೆಲ್ಲಾ ಭಾರತೀಯತೆಯ ಬಹುತ್ವದ ಬಗ್ಗೆ, ಮೌಖಿಕ ಪರಂಪರೆಯ ಬಗ್ಗೆ, ಕನ್ನಡ ಭಾಷೆಯ ಬಗ್ಗೆ ಮಾತನಾಡಿದ್ದೇ ವಿಶೇಷ.

ರಾಮಾನುಜನ್ ಯಾವ ಅನುಮಾನವೂ ಇಲ್ಲದೆ ನವ್ಯದ ತಾತ್ವಿಕತೆಯನ್ನು ಒಪ್ಪಿಕೊಂಡ ಕವಿ. ರಾಮಾನುಜನ್ ಅವರ ಕಾವ್ಯದ ವಸ್ತು, ಭಾಷೆ ಮತ್ತು ಶೈಲಿ ಎಲ್ಲದರಲ್ಲಿಯೂ ಅವರು ನವ್ಯರ 'ಕಾವ್ಯಶಿಲ್ಪದ' ಮಾದರಿಯನ್ನು ಒಪ್ಪಿಕೊಂಡ ಕವಿ. ಆದರೆ ಹೀಗೆ ಹೇಳುವುದು ರಾಮಾನುಜನ್ ಅವರ ಕಾವ್ಯದ ಒಟ್ಟೂ ಕಲ್ಪನೆಯನ್ನು ಸೀಮಿತಗೊಳಿಸಿದಂತಾಗುತ್ತದೆ ಎನ್ನುವುದೂ ನಿಜ. ಏಕೆಂದರೆ ತಮಿಳು ಮತ್ತು ಕನ್ನಡದ ಕಾವ್ಯದ ಅತ್ಯುತ್ತಮ ಕಾವ್ಯಶಿಲ್ಪದ ಮಾದರಿಗಳು ರಾಮಾನುಜನ್ ಅವರ ಮೇಲೆ ಪ್ರಭಾವ ಬೀರಿದ್ದವು. ವಚನಗಳಾಗಲೀ, ಸಂಗಂ ಕಾವ್ಯದ ಮಾದರಿಗಳಾಗಲೀ ಕಾವ್ಯಶಿಲ್ಪದ ಮಾದರಿಗಳೇ ಆಗಿವೆ. ಆದರೆ ರಾಮಾನುಜನ್ ಅವರ ಕಾವ್ಯದ ವಸ್ತು ಮಾತ್ರ ನಿಸ್ಸಂದೇಹವಾಗಿ ಆಧುನಿಕ ಮನುಷ್ಯನದ್ದು. ಏಕಾಂತ ಮತ್ತು ಲೋಕಾಂತಗಳ ನಡುವೆ ಹೊಯ್ದಾಡುವಂತಹದ್ದು. ಕೊನೆಗೂ ಏಕಾಂಗಿಯಾದ ವ್ಯಕ್ತಿಪ್ರಜ್ಞೆ ಸಮಷ್ಟಿಯ ಜೊತೆ ನಿರಂತರವಾಗಿ ನಡೆಸುವ ಸಂಘರ್ಷದ ಬದುಕು ಮತ್ತು ಸಂಬಂಧಗಳ ನಡುವೆ ತವಕ ತಲ್ಲಣಗಳಲ್ಲಿ, ಸಂಭ್ರಮ ದುಗುಡಗಳಲ್ಲಿ ತನ್ನ ಚಹರೆಯೊಂದನ್ನು ಕಟ್ಟಿಕೊಳ್ಳಲು ಹೆಣಗುವ ವ್ಯಕ್ತಿಚಿತ್ರಗಳಾಗಿ ಇವರ ಬಹುಪಾಲು ಕವಿತೆಗಳಿವೆ. ಇಷ್ಟೇ ಮಹತ್ವದ ಇನ್ನೊಂದು ಸಂಗತಿಯೆಂದರೆ ರಾಮಾನುಜನ್ ಅವರ ಕಾವ್ಯ ಸತತವಾಗಿ ಆತ್ಮಾವಲೋಕನಕ್ಕೆ ತನ್ನನ್ನು ಒಡ್ಡಿಕೊಳ್ಳಲು ಹವಣಿಸುವ ಕ್ರಮ.

ಆದರೆ ರಾಮಾನುಜನ್ ಅವರ ಪ್ರತಿಭೆ ಇಷ್ಟಕ್ಕೇ ತೃಪ್ತಿ ಕಾಣಲಿಲ್ಲ. ಸೃಜನಶೀಲ ಲೇಖಕರಾಗಿ, ಅನುವಾದಕರಾಗಿ, ಚಿಂತಕರಾಗಿ, ಬೋಧಕರಾಗಿದ್ದರೂ ಭಾರತೀಯ ಪರಂಪರೆಯ ಬಹುಸಂಸ್ಕೃತಿಯ ಅನನ್ಯತೆಗಳನ್ನು ಪಾಶ್ಚಾತ್ಯಲೋಕಕ್ಕೆ ತೋರಿಸಿಕೊಡಲು ಇಂಗ್ಲಿಷ್ ಮೂಲಕವೂ ಕವನಗಳನ್ನು ಬರೆಯಬೇಕಾಯಿತು. ಅವರು ಅಮೆರಿಕದಲ್ಲಿ ಕುಳಿತು ಪದ್ಯಗಳನ್ನು ಬರೆದರೂ ಅವುಗಳ ವಸ್ತು, ರೂಪಕ, ಪ್ರತಿಮೆ, ಅನುಭವ ಎಲ್ಲವೂ ಭಾರತೀಯ ಸಮಾಜದಿಂದಲೇ ಎದ್ದು ಬಂದವು. ಅಮೆರಿಕದ ಮುಕ್ತ ಸಮಾಜ ಹಾಗೂ ಏಕಸಂಸ್ಕೃತಿಯ ಜೊತೆ ಭಾರತದ ಬಹುಭಾಷೆ ಹಾಗೂ ಬಹುಸಂಸ್ಕೃತಿಯ ಅಸ್ಮಿತೆಗಳನ್ನು ಮುಖಾಮುಖಿ ಮಾಡಿ ಭಾರತೀಯ ಸಂಸ್ಕೃತಿಯ ಅಂತಃಸತ್ವವನ್ನು ಅನ್ವೇಷಿಸಿದರು. ಹೀಗಾಗಿ ಇವರ ಇಂಗ್ಲಿಷ್ ಕವನಗಳಲ್ಲಿ ಕೂಡ ಭಾರತದ ಬಹುರೂಪತೆಯ

ದಟ್ಟತೆ ಎದ್ದು ಕಾಣುತ್ತದೆ. ಈ ಹಿನ್ನೆಲೆಯಲ್ಲಿ ನೋಡಲು ಅವಕಾಶಗಳನ್ನು ಒದಗಿಸುವ ರಾಮಾನುಜನ್ ಅವರ ೧. Striders, ೨. Relations, ೩. Second Sight, ೪. The Black Hen ಇಂಗ್ಲಿಷ್ ಕವನ ಸಂಕಲನಗಳು ಇಂಗ್ಲಿಷ್ ಸಾಹಿತ್ಯದಲ್ಲಿ ಮಹತ್ವದ ಚಲನೆಯನ್ನುಂಟುಮಾಡಿವೆ.

౭.೧. Striders

ರಾಮಾನುಜನ್ ಅವರ ಮೊದಲನೆ ಕವನ ಸಂಕಲನದಲ್ಲಿ(Striders ೧೯೬೬) (Striders, Snakes, On a Delhi Sundial, Still Another for Mother, Looking for a Cousin on a Swing, Self-portrait, The Rickshow-wallah, Anxiety, A River, A Hindu to His Body, Images, The Fall) ಮುಂತಾದ ೪೧ ಕವಿತೆಗಳಿವೆ. ಈ ಕವಿತೆಗಳು ಪ್ರಧಾನವಾಗಿ ಕನ್ನಡ ನವ್ಯದ ಸಂದರ್ಭದಲ್ಲಿ ಬರೆದ ರಾಮಾನುಜನ್ ಅವರ ಇಂಗ್ಲಿಷ್ ಕವಿತೆಗಳಾಗಿವೆ. ಸಹಜವಾಗಿ ನವ್ಯದ ಗುಣವಾದ ರೂಪಕಪ್ರಧಾನವಾದ ಕವಿತೆಗಳು ಮತ್ತು ವ್ಯಕ್ತಿನಿಷ್ಠವಾದ ಕವಿತೆಗಳು ಇಲ್ಲಿವೆ. ಅವರ ಸ್ಟ್ರೈಡರ್‌ಸ ಕವಿತೆಯು ಒಂದು ರೂಪಕಪ್ರಧಾನವಾದ ಕವಿತೆಯಾಗಿದೆ:

The Striders

And search
for certain thin-
stemmed, bubble-eyed water bugs.
See them perch
on dry capillary legs
weightless
on the ripple skin
of a stream.

No, not only prophets
walk on water. This bug sits
on a landslide of lights
and drawns eye-
deep
into its tiny strip
of sky.[1]

ಮನುಷ್ಯನ ದೇಹ ಮತ್ತು ಮನಸ್ಸುಗಳ ಸಂಬಂಧವನ್ನು ಕೀಟದ ರೂಪಕದ ಮೂಲಕ ಧ್ವನಿಪೂರ್ಣವಾಗಿ ಕವಿತೆಯಲ್ಲಿ ಕಟ್ಟಿಕೊಡಲಾಗಿದೆ. ಬಹುಶಃ ಇದಕ್ಕೆ ರಾಮಾನುಜನ್ ಅವರಿಗೆ ಕನ್ನಡದ ವಚನಗಳ ಮತ್ತು ತೆಲುಗಿನ ಭಕ್ತಿಕಾವ್ಯದ ಪ್ರೇರಣೆ ಇರಬಹುದು. ಈ ಕವಿತೆಯಲ್ಲಿ ಇಗ್ಲೆಂಡ್ ದೇಶದಲ್ಲಿ ನೀರಿನಲ್ಲಿ ಇರುವ ಇಂದು ಸಣ್ಣ ಕೀಟದ ಬಗ್ಗೆ ಹೇಳುವ ಮಾತೇ ಆದರೂ ಇದು ಜಾಗತಿಕ ಮಟ್ಟದಲ್ಲಿ ಈ ರೀತಿ ಹೊಸ ಕೀಟಗಳ ಹುಟ್ಟಿನಿಂದ ಆಗಬಹುದಾದ ಪರಿಣಾಮವನ್ನು ಇಲ್ಲಿ ಗಮನಿಸಬಹುದಾಗಿದೆ.

'THE HINDOO: he doesn't hurt a fly or a spider either' ಈ ಕವಿತೆ ವ್ಯಕ್ತಿಯ ಧಾರ್ಮಿಕ ಭಿತ್ತಿಯನ್ನು, ವೈಚಾರಿಕ ಭಿತ್ತಿಯನ್ನು ಎದುರುಬದುರಾಗಿಸುತ್ತದೆ. ಜೀವ ಹಿಂಸೆಯನ್ನು ವಿರೋಧಿಸುವ, ನಿರಾಕರಿಸುವ, ಧಾರ್ಮಿಕ ಹಿನ್ನೆಲೆಯ ಆಧುನಿಕತೆಯನ್ನು ಬದುಕಿನ ಭಾಗವಾಗಿಸಿಕೊಳ್ಳುವ ಅನಿವಾರ್ಯತೆಯ ವ್ಯಕ್ತಿಯನ್ನು ಮುಖಾಮುಖಿಯಾಗುವ ಸನ್ನಿವೇಶ ಇಲ್ಲಿದೆ. ಇಲ್ಲಿನ ಪ್ರಶ್ನೆ ವ್ಯಕ್ತಿ ಮಾನವೀಯವಾಗುವುದು ಧರ್ಮದ ಹಕ್ಕೊತ್ತಾಯಕ್ಕೋ ಅಥವಾ ತನ್ನೊಳಗಿನ ಅಂತಃಕರಣದ ಬಲದಿಂದಲೋ. ಯಾವುದೋ ಒಂದು ಘಟ್ಟದಲ್ಲಿ ಈ ಎರಡೂ ಒಂದೇ ಆಗಿಬಿಡುವ ಸನ್ನಿವೇಶಗಳೂ ಇರುತ್ತವೆ. ಇದಕ್ಕಿಂತ ಹೆಚ್ಚಾಗಿ ಇವುಗಳನ್ನು ಬೇರೆ ಬೇರೆ ಮಾಡುವುದು ಅಸಾಧ್ಯ ಎನಿಸಿಬಿಡುವುದೂ ಉಂಟು. ಕವನದ ಶೀರ್ಷಿಕೆಯೇ ಯಾರು ಹಿಂದು? ಯಾರು ಅಲ್ಲ? ಎನ್ನುವ ಪ್ರಶ್ನೆಯನ್ನೂ ಎತ್ತುತ್ತದೆ. ಕೊನೆಗೂ ಎಲ್ಲಾ ಧರ್ಮಗಳೂ ಹೇಳುವುದೂ ಇದನ್ನೇ. ರಾಮಾನುಜನ್ ಅವರ ಈ ಕವಿತೆ ಹಿತ ಮಿತ ಪದಗಳ ಜೋಡಣೆಯಲ್ಲಿ ಅತ್ಯುತ್ತಮ ಕಾವ್ಯ ಶಿಲ್ಪವಾಗಿ ರೂಪುಗೊಂಡಿದೆ. ಅಹಿಂಸೆಯ ಬಗೆಗೆ, ಜೀವಕಾರುಣ್ಯದ ಬಗೆಗೆ ಎಷ್ಟೆಲ್ಲಾ ಮಾತನಾಡಿದರೂ ಕೊನೆಗೂ ಹಿಂಸೆಯ ಅದೆಷ್ಟು ಬಗೆಗಳು ನಮ್ಮ ಬದುಕಿನೊಳಗೆ ಹಾಸುಹೊಕ್ಕಾಗಿರುತ್ತವೆ. ನೊಣವನ್ನೋ, ಜೇಡರ ಹುಳುವನ್ನೋ ನೋಯಿಸುವುದಿಲ್ಲ, ಕೊಲ್ಲುವುದಿಲ್ಲ ಎಂದು ಹೇಳುವ ನಾಗರಿಕ ಮನುಷ್ಯರು ತಮ್ಮ ಬದುಕಿನ ಸಂಬಂಧಗಳಲ್ಲಿ ಅದೆಷ್ಟು ಬಗೆಯ ಹಿಂಸೆಗಳನ್ನು ಬೇರೆಯವರಿಗೆ ಕೊಡುತ್ತಿರುತ್ತಾರೆ ಮತ್ತು ಸ್ವತಃ ನೋಯುತ್ತಿರುತ್ತಾರೆ. ಈ ಹಿಂಸೆಯನ್ನು ಏನೆಂದು ಕರೆಯೋಣ?

> 'in murder, make love with hate,
> or simply stalk a local fly.'

ಇದೇ ಸಂಕಲನದ ಇನ್ನೊಂದು ಕವಿತೆ 'Small-Scale Reflections on a Great House' ಕವಿತೆ ಕೂಡ ಮನುಷ್ಯನ ಆಯ್ಕೆಯ ದ್ವಂದ್ವ ಮತ್ತು ಆತಂಕಗಳನ್ನು ಕುರಿತದ್ದಾಗಿದೆ. ರಾಮಾನುಜನ್ ಅವರ ಕಾಲಘಟ್ಟ ನಾಗರಿಕತೆಯನ್ನು ಮತ್ತು ನಾಗರಿಕತೆ ಈ ತನಕ ಪೋಷಿಸಿದ್ದ ಮೌಲ್ಯವ್ಯವಸ್ಥೆಯನ್ನು ಸಂಶಯದಿಂದ ನೋಡುವ ಅನಿವಾರ್ಯವಾದ ಕಾಲಘಟ್ಟ. ಮನುಷ್ಯನ ಮೇರೆ ಇಲ್ಲದ ಕ್ರೌರ್ಯವನ್ನು ೨ನೇ ಮಹಾಯುದ್ಧ ನಗ್ನಗೊಳಿಸಿದ್ದ ಕಾಲದ ನಂತರ ಮನುಷ್ಯನ

ಜೀವಕಾರುಣ್ಯದ ಬಗೆಗೆ ದಟ್ಟ ಅನುಮಾನಗಳು ಹುಟ್ಟಿದ್ದ ಹಿನ್ನೆಲೆಯಲ್ಲಿ ಒಂದು ಬಗೆಯ ಸಿನಿಕತನ ಮತ್ತು ನಿರಾಶಾವಾದಗಳು ಬೇಡವೆಂದರೂ ಮನೋವಿನ್ಯಾಸದೊಳಗೆ ನುಗ್ಗಿ ಬರುತ್ತಿದ್ದ ಒತ್ತಡದಿಂದ ರಾಮಾನುಜನ್ ಕೂಡ ಪೂರ್ತಿಯಾಗಿ ಪಾರಾದಂತೆ ಕಾಣಿಸುವುದಿಲ್ಲ. ಬದಲಾಗುತ್ತಿರುವ ಬದುಕಿನ ವಿನ್ಯಾಸ, ಅದಕ್ಕೆ ಹೊಂದಿಕೊಳ್ಳುವ ಹೊತ್ತಿನಲ್ಲಿ ಎದುರಾಗುವ ಸವಾಲುಗಳನ್ನು ಈ ಕವಿತೆ ಚಿತ್ರವತ್ತಾಗಿ ಹಿಡಿಯುತ್ತದೆ.

ಇಲ್ಲಿನ ಹೆಚ್ಚು ಪದ್ಯಗಳು ಭಾರತೀಯತೆ ಮತ್ತು ಕನ್ನಡ ಸಂಸ್ಕೃತಿಯೊಳಗಿನ ಚಿತ್ರಣವನ್ನು ಒಂದು ರೂಪಕವಾಗಿ ಚಿತ್ರಿಸಿರುವ ಪದ್ಯಗಳೇ ಆಗಿವೆ. ಕಾರಣ ಭಾರತದಲ್ಲಿದ್ದಾಗಲೇ ಅವರು ಇಂಗ್ಲಿಷ್‌ನಲ್ಲಿ ಬರೆಯಲು ಪ್ರಾರಂಭಿಸಿದ್ದರು. ಆದ ಕಾರಣ ಇವರ ಮೊದಲ ಕವನ ಸಂಕಲನದಲ್ಲಿ ಹೆಚ್ಚು ಕನ್ನಡ, ಮೈಸೂರು ಮತ್ತು ಸಂಬಂಧಗಳನ್ನು ಕುರಿತು ರಚಿತವಾದ ಪದ್ಯಗಳನ್ನೇ ನಾವು ಕಾಣಬಹುದಾಗಿದೆ. ಈ ಕವನ ಸಂಕಲನದಲ್ಲಿ ಬಹುಪಾಲು ಕವಿತೆಗಳ ವಸ್ತು ಕನ್ನಡ ಹಾಗೂ ಕನ್ನಡೇತರ ಸಂಸ್ಕತಿಗಳ ಚಿತ್ರಣವೇ ಆಗಿದೆ.

೭.೨. Relations

ರಾಮಾನುಜನ್ ಅವರ ೨ನೇ ಕವನ ಸಂಕಲನ Relations(೧೯೭೧). ಈ ಕವನ ಸಂಕಲನದಲ್ಲಿ– It Does not follow, but When in the Street, Man and Woman in Camera and Out, The Hindoo: He doesn't hurt a fly or a spider either, Time and Time Again, Some Indian Uses of Histroy on a RAiny Day, A Lapse of Memory, Eyes, Ears, Noses, and a Thing about Touch, The Hindoo: he reads his Gita and is calm at all events, Poona Train Window, The Hindoo: the only risk, Smalltown, South India, Some Relations, Old Indian belief, Obituary, Prayers to Lord Murugan ಮುಂತಾದ ೩೩ ಕವನಗಳಿವೆ. ರಾಮಾನುಜನ್ ಅವರು, ತಮ್ಮ Some Relations ಕವಿತೆಯಲ್ಲಿ ಮನುಷ್ಯರ ಸಂಬಂಧಗಳನ್ನು ಮನುಷ್ಯ– ಪ್ರಾಣಿ ಸಂಬಂಧಗಳನ್ನು, ಮನುಷ್ಯ ಮತ್ತು ಸಂಸ್ಕೃತಿಯ ಸಂಬಂಧಗಳನ್ನು ತಾವು ಕಂಡು ನೋಡಿದ ವಿಷಯಗಳ ಮೂಲಕ ಈ ಕವಿತೆಯಲ್ಲಿ ವರ್ಣಿಸುತ್ತಾರೆ. ವ್ಯಕ್ತಿ ಮತ್ತು ಪರಿಸರ, ವ್ಯಕ್ತಿ ಮತ್ತು ದೇಶ, ವ್ಯಕ್ತಿ ಮತ್ತು ಸಂಸ್ಕೃತಿಯ ಸಂಬಂಧವನ್ನು ಅಮೆರಿಕದಲ್ಲಿ ಕುಳಿತು ಬರೆಯುತ್ತಿದ್ದರೂ ಮಧುರೆಯ ದೇವಸ್ಥಾನವನ್ನೂ ಕವಿತೆಯ ಕಕ್ಷೆಯೊಳಗೆ ತಂದು ನೆನಪಿಸುತ್ತಾರೆ. ಅವರ ಮೊದಲ ಸಂಕಲನದಲ್ಲಿ ಬಹುಪಾಲು ಕವಿತೆಗಳು ರೂಪಕ ಪ್ರಧಾನವಾಗಿದ್ದರೆ, ಈ ಎರಡನೇ ಸಂಕಲನದ ಕವಿತೆಗಳು ವಿವರಣಾತ್ಮಕವಾಗಿದ್ದು ಪ್ರತಿಮಾ ವಿಧಾನದಲ್ಲಿ ಅನುಭವವನ್ನು ಕಟ್ಟಿಕೊಡುತ್ತವೆ.

ರಾಮಾನುಜನ್ ಅವರ ಕವಿತೆಗಳು ನೋಡುವ, ಕಾಣುವ ದೃಷ್ಟಿಯೇ ಪ್ರಧಾನ. ಅವರ ಕವಿತೆಗಳಲ್ಲಿ ಹುಡುಕುವ, ಶೋಧಿಸುವ ಅಂಶ ಗೌಣವೆನ್ನಬಹುದು. ಪ್ರಸ್ತುತ 'Some Relations' ಕವಿತೆಯನ್ನು ಇಲ್ಲಿ ಉದಾಹರಿಸಬಹುದಾಗಿದೆ.

Some Relations

1 nursery trutles

grounded here, carrying a daily cross
of window bars, an ordinary square
of sun, glowing and dimming with each cloud
up there:

my daughter's turtles try
to hibernate in the jar, very far
from the ocean, beginning to be confused
by the heat of this Chicago winter

2 kitten on tigerskin

not yet fully recovered
from birth,
blinking
blackwhite kitten yawn,
mew, make water
on a livingroom tigerskin
with green glass eyes
and shellac tongue

3 a praying mantis

a praying mantis, deathly still
on a yellow can of DDT
in the Madurai temple-

someone's cleaning out scorpions
from the many armpits of Shiva
on leg in the air

broken by time
or a passing Muslim
from Ghazni

4 in rem time

my finger grows a lizard face
your pubic hair is tornado grass

my daughter's daughter's unborn face
floats to the surface: it has the natural

piety of the praying mantis
after a kill, its own or a butterfly's-

all over me are greenish
soft underbellies of ancestral

crocodiles and tortoises
the silent thud of their bloodbeat

- yet I do not shudder
at the coldness of their blood [2]

ರಾಮಾನುಜನ್ ಅವರ ಸಮಗ್ರ ಇಂಗ್ಲಿಷ್ ಕಾವ್ಯ ಸಂಕಲನಕ್ಕೆ ವಿನಯ ಧಾರವಾಡಕರ್ ಅವರು ಪ್ರಸ್ತಾವನೆ ಬರೆಯುತ್ತಾ ಅವರ ಕಾವ್ಯದ ಬಗ್ಗೆ ಹೇಳುವ ಈ ಮಾತುಗಳು ಅರ್ಥವತ್ತಾಗಿವೆ:

> "Ramanujan's refusal to accept merely conventional measures of coherence was a part of his search for a different kind of integrity. In his poetry, this integrity injects a unique urgency into his negotiations between body and mind, nature and culture, and history and contemporaneity. It also results in the constant, unpredicatable movement of his poems in which structure articulates content, but connection thrives on disconnection; nature contains the body, but the body also contains nature; and the microcosm mirrors the macrocosm, but the whole finds its truest form in the fragment. Like his final vision of love, war, and death in 'Bosnia', his essential, life-long ideal of integrity could only be ironic."[3]

ಇಲ್ಲೇ ಗಮನಿಸಬಹುದಾದ ಇನ್ನೊಂದು ಕವಿತೆ 'Love Poem for a Wife, 1'. ಇದಂತೂ ನೂರಕ್ಕೆ ನೂರು ನವ್ಯಕವಿತೆ. ಹೆಂಡತಿಗೆ ಪ್ರೇಮಕವಿತೆಯನ್ನು ಬರೆಯುತ್ತಲೇ ಇದು ಹೆಂಡತಿಯ ಬಗೆಗೆ ಇರುವ ಪ್ರೀತಿಯದ್ದೋ, ಇದ್ದ ಪ್ರೀತಿಯದ್ದೋ, ಇರಬಹುದಾದ ಪ್ರೀತಿಯದ್ದೋ ಯಾವುದೂ ಈ ಕವಿತೆಯ ನಿರೂಪಕನಿಗೆ ಸ್ಪಷ್ಟವಿಲ್ಲ. ತಮ್ಮಿಬ್ಬರನ್ನೂ ಒಟ್ಟಿಗಿದ್ದೂ ದೂರ ಮಾಡುವ ಸಂಗತಿಗಳು ಯಾವುದೆಂದೂ ತಿಳಿಯುವುದಿಲ್ಲ. ದೂರವಿರುವಾಗಲೂ ಹೆಂಡತಿಯ ಬಗ್ಗೆ ಮೂಡುವ ಆಲೋಚನೆಗಳು ಆಕೆಯ ಬಗೆಗಿನ ಪ್ರೀತಿಯಿಂದ ಮೂಡಿದ್ದೋ? ಆಕೆಯ ಜೊತೆಗಿನ ಭಿನ್ನಾಭಿಪ್ರಾಯದಿಂದ ಮೂಡಿದ್ದೋ? ಈ ಪ್ರಶ್ನೆ ಬಗೆಹರಿಯುವುದೇ ಇಲ್ಲ. ಕಾಡುವ ಭೂತದಿಂದ ವರ್ತಮಾನದ ಸತ್ಯದೆಡೆಗೆ ಹೊರಳಿದಾಗಲೂ ಇದೇ ಎಂದು ಖಚಿತವಾಗಿ ಹೇಳಲಾಗದ ಅಮೂರ್ತತೆಯಲ್ಲಿ ಈ ಕವಿತೆ ಮುಕ್ತಾಯವಾಗುತ್ತದೆ.

'Love Poem for a Wife, 2' ಎನ್ನುವ ಕವಿತೆ ಕೂಡ ಇದನ್ನು ಬಗೆಹರಿಸಿಕೊಳ್ಳುವ ಇನ್ನೊಂದು ವ್ಯರ್ಥಪ್ರಯತ್ನವೇ ಹೊರತು ಇದನ್ನು ಸ್ಪಷ್ಟಪಡಿಸಿಕೊಳ್ಳಲು ಈ ಕವಿತೆಯಲ್ಲೂ ಸಾಧ್ಯವಾಗುವುದಿಲ್ಲ. ಈ ಎರಡೂ ಕವಿತೆಗಳು ರಾಮಾನುಜನ್ ಅವರ ಮುಖ್ಯವಾದ ಪದ್ಯಗಳು. ಬದಲಾದ ಕಾಲ ಮತ್ತು ಸನ್ನಿವೇಶಗಳಲ್ಲಿ ಗಂಡ–ಹೆಂಡತಿಯ ನಡುವಿನ ಸಂಬಂಧದ ಸ್ವರೂಪ ಮತ್ತು ಸಮೀಕರಣಗಳೆರಡೂ ಅನೂಹ್ಯವಾಗಿ ಬದಲಾಗಿವೆ, ಸಂಕೀರ್ಣವಾಗಿವೆ. ಒಂದು ಕಾಲದಲ್ಲಿದ್ದ ಗಂಡ ಹೆಂಡತಿಯ ನಡುವಿನ ಅಧಿಕಾರ ಸಂಬಂಧವು ಸಮಪಾತಳಿಯ ಕಡೆಗೆ ಚಲಿಸುತ್ತದೆ. ಆದರೆ ಈ ಚಲನೆ ಗಂಡು ಮತ್ತು ಹೆಣ್ಣು ಇಬ್ಬರಿಗೂ ಕತ್ತಿಯಂಚಿನ ಮೇಲಿನ ಚಲನೆ. ಕತ್ತಿಯ ಮೇಲಿನ ಈ ನಡಿಗೆಯು ಅಪಾರ ಎಚ್ಚರಿಕೆಯನ್ನು ಸಂಯಮವನ್ನು ಬೇಡುತ್ತದೆ. ಇದರ ಜೊತೆಗೆ ಈ ಸಂಬಂಧವನ್ನು ಇನ್ನೂ ಸಂಕೀರ್ಣವಾಗಿಸುವುದು ಸಂಬಂಧಗಳಲ್ಲಿ ಹಾಸುಹೊಕ್ಕಾಗಿರುವ ಅದೆಷ್ಟೋ ಅಸಂಗತ ಸಂಗತಿಗಳು ಭಾವಕ್ಕೆ ನಿಲುಕುವ ಆದರೆ, ಬುದ್ಧಿಯ ಅರಿವಿಗೆ ಬಾರದ ಎಷ್ಟೋ ಸಂಗತಿಗಳು ಗಂಡ ಹೆಂಡತಿಯರ ಸಂಬಂಧವನ್ನು ನಿರ್ದೇಶಿಸುತ್ತಿರುತ್ತವೆ. ಈ ಅಸಂಗತತೆಯ ಅಸ್ತಿತ್ವ ಮತ್ತು ಅರಿವು ಕವಿಯನ್ನು ಇನ್ನಷ್ಟು ಅಸ್ವಸ್ಥಗೊಳಿಸುತ್ತಾ ಹೋಗುವುದನ್ನು ನಾವಿಲ್ಲಿ ನೋಡಬಹುದು. ಎಷ್ಟೇ ಆಪ್ತ ಆರ್ದ್ರ ಸಂಬಂಧವೆಂದುಕೊಂಡಾಗಲೂ ಅದರೊಳಗೆ ಇಣುಕುವ ಅಪರಿಚಿತತೆ ಮತ್ತು ಪರಕೀಯ ಭಾವಗಳು ಸಂಬಂಧವನ್ನು ಅದ್ವೈತಗೊಳಿಸುವುದರಿಂದ ತುಸು ದೂರದಲ್ಲಿ ನಿಲ್ಲಿಸುತ್ತವೆ.

ರಾಮಾನುಜನ್ ಕನ್ನಡ ಕಂಡ ಅತ್ಯಂತ ಸೂಕ್ಷ್ಮ ಸಂವೇದನೆಯ ಕವಿ ಎನ್ನುವುದು ಈ ಕವಿತೆಗಳ ಓದಿನಿಂದ ಸಾಬೀತಾಗುತ್ತದೆ. ಅಚ್ಚರಿ ಹುಟ್ಟಿಸುವುದು ರಾಮಾನುಜನ್ ಅವರಿಗೆ ಇಂಗ್ಲಿಷ್ ಭಾಷೆಯ ಮೇಲಿರುವ ಅಸಾಧಾರಣ ಪ್ರಭುತ್ವ. ಅನುವಾದ ಬೇಡುವ ಭಾಷೆಯ ಪ್ರಭುತ್ವ ಮತ್ತು ತನ್ನ ಮಾತೃಭಾಷೆಯಲ್ಲದ ಭಾಷೆಯಲ್ಲಿ ಕಾವ್ಯರಚನೆ ಮಾಡುವ ಹೊತ್ತಿನಲ್ಲಿ

ಅದು ಅಪೇಕ್ಷಿಸಿರುವ ಭಾಷೆಯ ಮೇಲಿನ ಹಿಡಿತ ಎರಡೂ ಸ್ವಲ್ಪ ಬೇರೆಯೇ ಅಗಿರುತ್ತವೆ. ಆದರೆ ರಾಮಾನುಜನ್ ಅನುವಾದ ಮತ್ತು ಅವರದೇ ಇಂಗ್ಲಿಷ್ ಕಾವ್ಯ ಎರಡೂ ಅಭಿವ್ಯಕ್ತಿಗಳಲ್ಲಿ ತೋರುವ ಇಂಗ್ಲಿಷ್ ಭಾಷೆಯ ಮೇಲಿನ ಪ್ರಭುತ್ವ ಮತ್ತು ಸಿದ್ಧಿ ಅಪರೂಪದ್ದು. ಅಮೆರಿಕದಂತಹ ಆಧುನಿಕತೆಯನ್ನು ಆರಾಧಿಸುವ ಸಮುದಾಯದ ನಡುವೆ ಬಹು ದೀರ್ಘಕಾಲ ಇದ್ದ ರಾಮಾನುಜನ್ ಅಲ್ಲಿ ಕಟ್ಟಿ ಬೆಳೆಸಿಕೊಂಡ ಮನುಷ್ಯ ಸಂಬಂಧಗಳು, ಅವುಗಳೊಡನೆ ಇವರು ಉದ್ದಕ್ಕೂ ಕಟ್ಟಿಕೊಳ್ಳಲು ಯತ್ನಿಸಿದ ಅನುಬಂಧಗಳು, ಆ ಸಂದರ್ಭದಲ್ಲಿ ಇವರು ಎದುರಿಸಿರಬಹುದಾದ ಅದೆಷ್ಟೋ ದುಗುಡ ದುಮ್ಮಾನದ ಗಳಿಗೆಗಳು ಅಪ್ಪಟ ಕಾವ್ಯಗಳಾಗಿ ಅವರ ಉತ್ತರಾರ್ಧದ ಇಂಗ್ಲಿಷ್ ಕವಿತೆಗಳಲ್ಲಿ ಕಾಣಿಸಿಕೊಳ್ಳುತ್ತವೆ.

೭.೩. Second Sight

ರಾಮಾನುಜನ್ ಅವರ ೩ನೆಯ ಕವನ ಸಂಕಲನ Second Sight(೧೯೮೬). ಈ ಸಂಕಲನದಲ್ಲಿ(Elements of Composition, Ecology, In the Zoo, Astronomer, Death and the Good Citizen, Snakes and Ladders, A Poor Man's Riches 1, On the Death of a Poem, Saturdays, Son to Father to Son, Middle Age, Extended Family, Some people, Love poem for a Wife and Her Trees, Chicago Zen, Second Sight) ೩೬ ಕವಿತೆಗಳಿವೆ. ಮೊದಲ ಸಂಕಲನದ ನಂತರ ಸುಮಾರು ೨೦ ವರ್ಷಗಳ ನಂತರ ಬಂದ ರಾಮಾನುಜನ್ ಅವರ ಈ ಕವನ ಸಂಕಲನದ ಕವಿತೆಗಳಲ್ಲಿ ರಾಮಾನುಜನನ್ ಅವರ ಇಂಗ್ಲಿಷ್ ಕಾವ್ಯಸಿದ್ಧಿ ಎದ್ದು ಕಾಣುತ್ತದೆ. ಇದು ಜಾಗತಿಕ ಸಾಹಿತ್ಯ ಮಟ್ಟದಲ್ಲಿ ನಿಲ್ಲುವ ಒಂದು ಪ್ರಮುಖ ರಾಮಾನುಜನ್ ಅವರ ಇಂಗ್ಲಿಷ್ ಕವನ ಸಂಕಲನವಾಗಿದೆ. ಇಲ್ಲಿಯ ಕವಿತೆಗಳ ವಿಷಯಗಳ ವ್ಯಾಪ್ತಿ ವಿಶಿಷ್ಟವೂ, ಸಾರ್ವಕಾಲಿಕವೂ ವಿಶ್ವಾತ್ಮಕವಾದ ವಿಷಯಗಳಿಂದ ಕೂಡಿದೆ. ಹಿಂದಿನ ತಮ್ಮ ಕವಿತೆಗಳಲ್ಲಿ ಪ್ರಯೋಗದ ರೀತಿಯಲ್ಲಿ ಬಳಸುತ್ತಿದ್ದ ರೂಪಕ, ಪ್ರತಿಮೆ, ಭಾಷೆ ವಿನ್ಯಾಸ ಎಲ್ಲವೂ ಇಲ್ಲಿ ಪರಿಪಕ್ವತೆಯನ್ನು ಪಡೆದಿವೆ. ಪ್ರಸ್ತುತ ಅವರ ಈ ಸಂಕಲನದ ಬಹು ಮುಖ್ಯವಾದ Second Sight ಕವಿತೆಯನ್ನು ಉದಾಹರಿಸಬಹುದಾಗಿದೆ.

> In Pascal's endless queue,
> people pray, whistle, or make
> remarks. As we enter the dark,
> someone says from behind,
> 'You are Hindoo, aren't you?

You must have second sight.'
I fumble in my nine
pockets like the high-blind
son-in-law groping
in every room for his wife,
and strike a light to regain
at once my first, and only,
sight.[4]

ಅವರ ಮೂರನೆಯ ಈ ಕವನ ಸಂಕಲನ ಅವರ ಕಾವ್ಯದ ಪರಿಣತಿಯನ್ನು ಎತ್ತಿ ಹಿಡಿಯುವ ಸಂಕಲನವೆಂದೇ ಗುರುತಿಸಬಹುದು. ಈ ಸಂಕಲನದಲ್ಲೂ ಹೆಣ್ಣು ಮತ್ತು ಆಧುನಿಕತೆ ಹಾಗೂ ಪರಂಪರೆಯೊಂದಿಗಿನ ಸಂಘರ್ಷ ಮತ್ತು ಅನುಸಂಧಾನದ ನೆಲೆಗಳೇ ಪ್ರಧಾನವಾಗಿವೆ. ಆಶ್ಚರ್ಯಕರವೆನ್ನುವಂತೆ ಈ ಸಂಕಲನದಲ್ಲಿ ವರ್ಗದ ಪ್ರಶ್ನೆಗಳೂ ಪ್ರಧಾನವಾಗಿರುವಂತೆ ಕಾಣಿಸುತ್ತವೆ. ವರ್ಗ, ಲಿಂಗನ್ಯಾಯದ ಪ್ರಶ್ನೆಗಳು ರಾಮಾನುಜನ್ ಅವರನ್ನು ವಚನ ಸಾಹಿತ್ಯದ ಅನುವಾದದ ಸಂದರ್ಭದಿಂದಲೂ ಕಾಡುತ್ತಲೇ ಬಂದಿವೆ ಎನ್ನುವುದು ನಿಜವಾದರೂ ಅದು ಇವರ ಕಾವ್ಯದ ಪ್ರಧಾನ ವಸ್ತುವಾಗಿ ಕಾಣಿಸಿಕೊಂಡಿದ್ದು ಈ ಸಂಕಲನದಲ್ಲಿ. ಸೆಕೆಂಡ್ ಸೈಟ್ ಕವಿತೆಯು ಇಂತಹ ಅನೇಕ ಸಂಗತಿಗಳನ್ನು ಧ್ವನಿಸುತ್ತದೆ.

ರಾಮಾನುಜನ್ ಅವರ ಕನ್ನಡ ಮತ್ತು ಇಂಗ್ಲಿಷ್ ಕಾವ್ಯದ ಬಗ್ಗೆ ಶಾಂತಿನಾಥ ದೇಸಾಯಿ ಅವರು ಹೇಳುವ ಅಭಿಪ್ರಾಯವನ್ನು ಇಲ್ಲಿ ಉದಾಹರಿಸಬಹುದಾಗಿದೆ.

"If we take into consideration the entire body of Ramanujan's creative work, i.e., his Kannada poetry, his English poetry, his Kannda stories, his recent novel in Kannada, Mattobbana Atmacharite(Another's Autobiography) we cannot help coming to the conclusion that Ramanujan is essentially a modernist committed to an antihistorical, depoliticised, transnational consciousness and to stylistic experimentalism, like, say, Imagism and Expressionism. This perspective of modernism will, I hope, help remove the parallax and get a clearer understaning of Ramanujan's poetry in English than we have had so far. For instance, we will realise that his indian memory is but a peg to hang his modernism on and not his central concern."[5]

೭.೪. The Black Hen

ರಾಮಾನುಜನ್ ಅವರ ನಾಲ್ಕನೆಯ ಕವನ ಸಂಕಲನ'The Black Hen(೧೯೯೫)ನಲ್ಲಿ ೬೦ ಕವನಗಳಿವೆ. ರಾಮಾನುಜನ್ ಅವರ ನಿಧನದ ನಂತರ ಅವರ ಶ್ರೀಮತಿ ಮಾಲಿ ಡೇನಿಯಲ್ ರಾಮಾನುಜನ್ ಅವರು ರಾಮಾನುಜನ್ ಅವರು ಬರೆದ ಅಪ್ರಕಟಿತ ಹಲವಾರು ಕವಿತೆಗಳಿಂದ ಆಯ್ದು ಪ್ರಕಟಿಸಿದ ಸಂಕಲನ ಇದಾಗಿದೆ. ಇದಕ್ಕೆ ಅವರು ಮುನ್ನುಡಿ ಟಿಪ್ಪಣಿ, ಇತ್ಯಾದಿಗಳನ್ನು ಬರೆದು ಅಚ್ಚುಕಟ್ಟಾಗಿ ಸಂಪಾದಿಸಿದ್ದಾರೆ. ರಾಮಾನುಜನ್ ಅವರ ಇಮ್ಯಾಜಿನರಿ ಪೊಯಮ್ಸ್ ಇದರಲ್ಲಿ ಇವೆ. ಅವರ ಕಲ್ಪನೆ ಅಸಾಧಾರಣವಾಗಿ ಇಲ್ಲಿಯ ಕವಿತೆಗಳಲ್ಲಿ ಕನಸಾಗಿ ಪ್ರಕಟವಾಗಿವೆ. ಅವರ ಹಿಂದಿನ ಕವಿತೆಗಳಿಗಿಂತ ಭಿನ್ನವಾದ ಕ್ರೌರ್ಯ, ನಾಶ ಮಾಡುವಿಕೆ, ರಾಜಕಾರಣದ ಆಶಯಗಳು ಇಲ್ಲಿಯ ಕವಿತೆಗಳಲ್ಲಿ ಕಂಡುಬರುತ್ತವೆ. The Black Hen, Shadows, Fire, Fog, Three Dreams, Sonnet, Mythologies1, That Tree, A Meditation, Poetry and Our City, Poverty, Museum, Images, Elegy Pain. ಮುಂತಾದ ಕವಿತೆಗಳು ಬಹು ಮುಖ್ಯವಾಗಿವೆ. ಇಲ್ಲಿಯ ಕವಿತೆಗಳು ಸರಳವಾಗಿಲ್ಲ. ಬದುಕಿನ ಗಹನತೆ ಮತ್ತು ನಿಗೂಢತೆಯನ್ನು ಒಳಗೊಂಡಿವೆ. ಆದರೆ ಸಣ್ಣ ಕವಿತೆಯಿಂದ ಹಿಡಿದು ವಿವರಣಾತ್ಮಕವಾದ ಕವಿತೆಯವರೆಗೂ ಇಲ್ಲಿಯ ಕವಿತೆಗಳಿವೆ. The Black Hen ಕವಿತೆಯ ಕವಿ ಒಬ್ಬ ನಿರ್ಮಾಪಕ. ಅವನು ನಿರ್ಮಿಸುವ ಜಗತ್ತು ಭಯಾನಕವಾಗಿದೆ.

The Black Hen

It must come as leaves
to a tree
or not at all

yet it comes sometimes
as the black hen
with the red round eye

on the embroidery
stich by stitch
dropped and found again

and when it's all there
the black hen stares
with its round red eye

and you're afraid [6]

ಈ ಭಯಾನಕತೆ ಇಲ್ಲಿನ ಅವರ ಮತ್ತೊಂದು 'ಮ್ಯೂಸಿಯಂ' ಕವಿತೆಯಲ್ಲಿ ಮುಂದುವರಿದಿದೆ. ಇಲಿ ಕುದುರೆ ಮತ್ತು ಕಲಾಕೃತಿ ನಡುವೆ, ಹೂವು ಮತ್ತು ಅಧಿಕಾರದ ನಡುವೆ, ಹಗಲು ರಾತ್ರಿಗಳ ವ್ಯತ್ಯಾಸವಿಲ್ಲದೆ ನಡೆಯುವ ಬದುಕಿನ ಭಯಾನಕತೆಯ ವಿನ್ಯಾಸದ ಎಳೆಯೊಂದು ಧ್ವನಿಪೂರ್ಣವಾಗಿದೆ. ಇಲ್ಲಿ ಕವಿಯ ಸೃಜನಾತ್ಮಕತೆ ನೋಟಯ ಎದ್ದು ಕಾಣುತ್ತದೆ.

Museum

As people who appear in dreams
are not themselves, the horses
are not horses in the Chinese painting
that prance out of the walls
to trample the flowers
in the emperor's gardens
night after night.[7]

ಕೆಲವು ಕವಿತೆಗಳಲ್ಲಿ ರಾಮಾನುಜನ್ ಅವರು ತಮ್ಮ ಬದುಕಿನ ಅನುಭವಗಳನ್ನು ಕವಿತೆಯ ಜೊತೆ ಸಮೀಕರಿಸುವುದೂ ಕಂಡುಬರುತ್ತದೆ. ಈ ಸಂಕಲನದ ಮುನ್ನುಡಿಯಲ್ಲಿ ಮಾಲಿ ಡೇನಿಯಲ್ ಅವರು ಮೇಲಿನ ಎರಡು ಕವಿತೆಗಳಿಗೆ ಹೇಳುವ ಅಭಿಪ್ರಾಯದ ಹಿನ್ನೆಲೆಯಲ್ಲಿ ನೋಡಿದಾಗಿ ಇಲ್ಲಿನ ಬಹುಪಾಲು ಕವಿತೆಗಳಲ್ಲಿ ಈ ಮೇಲೆ ಹೇಳಿದ ಭಾವಗಳು ಕಂಡುಬರುತ್ತವೆ.

> "However, in the action of the poem, by destroying the flowers night after night, shouldn't we assume that it is happening not in the actual world of power and politics, but somewhere in the same region as where dreams exists? But since more words are used for the painting than for the dream, the poem is saying something about art and life"[8]

ಈ ಸಂಕಲನದ ಉಳಿದ ಕವಿತೆಗಳಲ್ಲಿಯೂ ಕೂಡ ಇದೇ ಭಾವ ವ್ಯಕ್ತವಾಗುವುದನ್ನು ಕಾಣಬಹುದಾಗಿದೆ. ರಾಮಾನುಜನ್ ಅವರು ಇಂಗ್ಲಿಷ್ ಭಾಷೆಯಲ್ಲಿ ಬರೆದ ಕಾವ್ಯ ಉನ್ನತ ಮಟ್ಟದ ಚರ್ಚೆಗೆ ಒಳಗಾಗಿದೆ. ಇಂಗ್ಲಿಷ್‌ನಲ್ಲಿ ಬರೆಯುವ ಭಾರತೀಯ ಕವಿಗಳಲ್ಲಿ ರಾಮಾನುಜನ್ ಅವರು ತುಂಬಾ ಮುಖ್ಯ ಮತ್ತು ಭಿನ್ನ ಎಂಬುದನ್ನು ವಿದ್ವಾಂಸರು ಈಗಾಗಲೇ ಒಪ್ಪಿಕೊಂಡಿದ್ದಾರೆ. ಈ ಮೂಲಕ ರಾಮಾನುಜನ್ ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿದ ಸಾಹಿತಿ ಎಂಬುದು ತಿಳಿದ ವಿಷಯ. ರಾಮಾನುಜನ್ ಅವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಒಬ್ಬ ಸೃಜನಶೀಲ ಚಿಂತಕ ಎಂಬುದನ್ನು ಸಾಬೀತುಪಡಿಸಿದಂತೆ, ಪಾಶ್ಚಾತ್ಯ ಜಗತ್ತಿಗೆ ಇವರೊಬ್ಬ ಸೃಜನಶೀಲ

ಬರಹಗಾರ ಎಂಬುದು ತಿಳಿದದ್ದು ಇವರ ಇಂಗ್ಲಿಷ್ ಬರಹಗಳ ಮೂಲಕ. ಜಾಗತಿಕವಾಗಿ ಇವರು ತಮ್ಮ ಅನುವಾದಗಳ ಮೂಲಕ ಹೆಚ್ಚು ಹೆಸರು ಮಾಡಿದವರಾದರೂ ಅದಕ್ಕಿಂತಲೂ ಮಿಗಿಲಾಗಿ ಇವರ ಇಂಗ್ಲಿಷ್ ಕಾವ್ಯ ಮತ್ತು ಪ್ರಬಂಧಗಳ ಮೂಲಕ ಜಗತ್ತಿನಾದ್ಯಂತ ಹೆಸರು ಗಳಿಸಿದವರಾಗಿದ್ದಾರೆ. ಇವರು ಇಂಗ್ಲಿಷ್‌ನಲ್ಲಿ ಕಾವ್ಯ ರಚಿಸಿದರೂ ಕೂಡ ಅದರಲ್ಲಿನ ವಸ್ತುವಿಷಯಗಳು ಆಳವಾಗಿ ಭಾರತೀಯ ಹಾಗೂ ಕನ್ನಡದ ಸಾಂಸ್ಕೃತಿಕ, ಸಾಮಾಜಿಕ ಹಾಗೂ ರಾಜಕೀಯ ನೆಲೆಯನ್ನು ಒಳಗೊಂಡಿರುವಂತಹದ್ದೇ ಆಗಿವೆ.

ರಾಮಾನುಜನ್ ಭಾರತೀಯ ಇಂಗ್ಲಿಷ್ ಕವಿಗಳಲ್ಲೇ ಮುಖ್ಯವಾದ ಸ್ಥಾನವನ್ನು ಪಡೆದಿದ್ದಾರೆ. ಕಾವ್ಯದ ಅಸಲು ಕಸುಬನ್ನು ಸಿದ್ಧಿಸಿಕೊಂಡಿರುವ ಪರಿಣತ ಕವಿ. ಅನೇಕ ಸಂದರ್ಭಗಳಲ್ಲಿ ಭಾರತೀಯ ಇಂಗ್ಲಿಷ್ ಬರಹಗಾರರನ್ನು ಬೇರೆ ಬೇರೆ ಮೀಸಲಾತಿಯ ಚೌಕಟ್ಟುಗಳಲ್ಲಿ ಇಟ್ಟು ಬೆಲೆ ಕಟ್ಟುವ ಪ್ರಯತ್ನ ಮಾಡಲಾಗುತ್ತದೆ. ಆದರೆ ಮೀಸಲಾತಿಯ ಹಂಗೇ ಇಲ್ಲದೆ ತನ್ನ ಪ್ರಥಮದರ್ಜೆಯ ಕವಿ ಎನ್ನುವ ಸ್ಥಾನವನ್ನು ಉಳಿಸಿಕೊಂಡು ಬಂದಿರುವುದು ರಾಮಾನುಜನ್ ಅವರ ಇಂಗ್ಲಿಷ್ ಕಾವ್ಯದ ಹೆಗ್ಗಳಿಕೆಯಾಗಿದೆ.

ಅಡಿಟಿಪ್ಪಣಿ

1. The Oxford India Ramanujan, Ed.by Molly Daniels-Ramanujan, Oxford University Press, New Delhi, 2004, P. 3.
2. The Oxford India Ramanujan, Ed.by Molly Daniels-Ramanujan, Oxford University Press, New Delhi, 2004, P. 101-102 .
3. The Oxford India Ramanujan, Ed.by Molly dalies-Ramanujan, Introduction by Vinay Dharwadker, Oxford University Press, 2004,
4. The Oxford India Ramanujan, Ed.by Molly Daniels-Ramanujan, Oxford University Press, New Delhi, 2004, P. 191.
5. ಎ.ಕೆ.ರಾಮಾನುಜನ್ ನೆನಪಿನ ಸಂಪುಟ, ಸಂ.ಟಿ.ಪಿ.ಅಶೋಕ, ಕರ್ನಾಟಕ ಸಂಘ, ಪುತ್ತೂರು, ೧೯೯೩, ಪು. ೧೬೦.
6. The Oxford India Ramanujan, Ed.by Molly Daniels-Ramanujan, Oxford University Press, New Delhi, 2004, P. 195.
7. The Oxford India Ramanujan, Ed.by Molly Daniels-Ramanujan, Oxford University Press, New Delhi, 2004, P. 256.
8. The Oxford Indian Ramanujan, Ed.by: Molly Daniels-Ramanujan, Oxford University Press, 2004, P. 280.

ಅಧ್ಯಾಯ : ಎಂಟು

ಸಮಾರೋಪ

ಭಿನ್ನ ಭಾಷೆಗಳಲ್ಲಿ ಹಾಗೂ ಭಿನ್ನ ಕ್ಷೇತ್ರಗಳಲ್ಲಿ ಎ.ಕೆ. ರಾಮಾನುಜನ್ ಅವರು ಒಟ್ಟು ಕನ್ನಡದಲ್ಲಿ ೧೦ ಕೃತಿಗಳನ್ನು ಮತ್ತು ಇಂಗ್ಲಿಷ್‌ನಲ್ಲಿ ೧೧ ಕೃತಿಗಳನ್ನು ರಚಿಸಿದ್ದಾರೆ. ಅವರು ಕಾವ್ಯವನ್ನು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ರಚಿಸಿದರು, ಸಣ್ಣಕತೆ, ಕಿರು ಕಾದಂಬರಿ ಮತ್ತು ರೇಡಿಯೋ ನಾಟಕಗಳನ್ನು ಕನ್ನಡದಲ್ಲಿ ಬರೆದಿದ್ದಾರೆ. ವೈಚಾರಿಕ ಹಾಗೂ ವಿಮರ್ಶಾತ್ಮಕ ಪ್ರಬಂಧಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಬರೆದಿದ್ದಾರೆ ಹಾಗೂ ತಮಿಳು, ತೆಲುಗು ಮತ್ತು ಕನ್ನಡ ಭಾಷೆಗಳಿಂದ ಇಂಗ್ಲಿಷ್ ಭಾಷೆಗೆ ಅನುವಾದಗಳನ್ನು ಮಾಡಿದ್ದಾರೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಎರಡು ಭಾಷೆಗಳ (ಕನ್ನಡ/ತಮಿಳು–ಇಂಗ್ಲಿಷ್), ಎರಡು ಅಧ್ಯಯನ ಕ್ಷೇತ್ರಗಳ (ಸಾಹಿತ್ಯ–ಭಾಷಾಶಾಸ್ತ್ರ), ಎರಡು ಪರಂಪರೆಗಳ (ಶಿಷ್ಟ–ಜಾನಪದ ಅಥವಾ ಅಭಿಜಾತ–ಮೌಖಿಕ) ಮತ್ತು ಎರಡು ಸಂಸ್ಕೃತಿಗಳ (ಭಾರತೀಯ–ಅಮೆರಿಕನ್) ನಡುವೆ **'ಕೂಡುಗೆರೆ'** ('The hyphen in Indo-American' ಎಂದು ರಾಮಾನುಜನ್ ಅವರೇ ತಮ್ಮನ್ನು ಕರೆದುಕೊಳ್ಳುತ್ತಿದ್ದರ ಬಗ್ಗೆ ಇಂಡಾಲಜಿಸ್ಟ್ ವೆಂಡಿ ಡೋನಿಜರ್ ಅವರು ರಾಮಾನುಜನ್ ಅವರ ಸಮಗ್ರ ಲೇಖನಗಳ (ಇಂಗ್ಲಿಷ್) ಪುಸ್ತಕದ ಮುನ್ನುಡಿಯಲ್ಲಿ ದಾಖಲಿಸಿರುತ್ತಾರೆ.) ಯಂತೆ ತಮ್ಮ ಬದುಕಿನುದ್ದಕ್ಕೂ ರಾಮಾನುಜನ್ ಅವರು ಅಸಾಧಾರಣ ಸಾಧನೆಯನ್ನು ಮಾಡಿದವರು. ಅವರ ಒಟ್ಟು ಸಾಹಿತ್ಯದ ಅಧ್ಯಯನದ ಫಲಿತಗಳ ಕೆಲವು ಮುಖ್ಯ ಅಂಶಗಳನ್ನು ಈ ಹಿನ್ನೆಲೆಯಲ್ಲಿ ಇಲ್ಲಿ ಪ್ರಸ್ತಾಪಿಸಬಹುದಾಗಿದೆ.

ರಾಮಾನುಜನ್ ಅವರ ಕಾವ್ಯ: 'ಹೊಕ್ಕುಳಲ್ಲಿ ಹೂವಿಲ್ಲ', '...ಮತ್ತು ಇತರ ಪದ್ಯಗಳು', 'ಕುಂಟೋಬಿಲ್ಲೆ' ಇವು ರಾಮಾನುಜನ್ ಅವರ ಮೂರು ಮುಖ್ಯ ಕವನ ಸಂಕಲನಗಳು. ಈ ಕವಿತೆಗಳಲ್ಲಿ ಕಂಡುಬರುವ ಪ್ರಮುಖ ಲಕ್ಷಣಗಳಾದ ಗೇಯತೆ, ಕಾವ್ಯಾತ್ಮಕಭಾಷೆ, ಅಮೂರ್ತ ವಿಷಯಗಳ ಚಿಂತನೆ ಮುಂತಾದ ಅಂಶಗಳನ್ನು ಗುರ್ತಿಸಲಾಗಿದೆ. ಜೊತೆಗೆ ಇಂದ್ರಿಯ ಗ್ರಾಹ್ಯವಾದ

ಲಕ್ಷ್ಯ, ಶಾಬ್ದಿಕ ಕಾರ್ಪಣ್ಯ, ಮೆಲುದನಿಯ ಶೈಲಿ, ವಾಚ್ಯಾರ್ಥ, ರೋಚಕ ರೂಪಕಗಳನ್ನು ಗುರುತಿಸಲಾಗಿದೆ. ರಾಮಾನುಜನ್ ಅವರು ಬಳಸುವ ವಿರುದ್ಧಾರ್ಥ ಪದಗಳ, ಭಾವನೆಗಳ ಮತ್ತು ಅನುಭವಗಳ ಜೋಡಣೆಯನ್ನು ಗುರುತಿಸಲಾಗಿದೆ. ರಾಮಾನುಜನ್ ಅವರು ೨೦ನೇ ಶತಮಾನದ ಆರಂಭದ ದಶಕಗಳಲ್ಲಿ ಇಂಗ್ಲೆಂಡ್ ಮತ್ತು ಯುರೋಪಿನಲ್ಲಿ ಕ್ಷಣಕಾಲ ಜನಪ್ರಿಯವಾಗಿದ್ದ 'Imagist Poetry'(ಪ್ರತಿಮಾಬದ್ಧ ಕಾವ್ಯ) ಯಂತೆ ಕಾಣುವ ರಾಮಾನುಜನ್ ಕಾವ್ಯ ಅಡಿಗರ ನವ್ಯಕಾವ್ಯದ ಮಾದರಿಗಿಂತ ಭಿನ್ನವಾದುದು. ಆದರೆ ರಾಮಾನುಜನ್ ಅವರ ಈ ಕಾವ್ಯವನ್ನು ಕನ್ನಡ ವಿಮರ್ಶಾ ವಲಯ ಯಾಕೋ ಏನೋ ಅಷ್ಟಾಗಿ ಸರಿಯಾಗಿ ಗುರುತಿಸಲಿಲ್ಲ.

ರಾಮಾನುಜನ್ ಅವರ ಇಂಗ್ಲಿಷ್ ಕವನಗಳನ್ನು ಕುರಿತು ಇಂಗ್ಲಿಷ್-ಅಮೆರಿಕನ್ ವಿಮರ್ಶಕರು 'ಅವು ಅನಿವಾಸಿಯ ಆತಂಕ-ಆಕಾಂಕ್ಷೆಗಳ ಕಾವ್ಯ' ಮತ್ತು 'ಅನಿವಾಸಿ ಭಾರತೀಯನ ಭಾರತೀಯತೆಯ ಅಭಿವ್ಯಕ್ತಿ' ಎಂಬ ನೆಲೆಗಳಲ್ಲಿ ಅರ್ಥೈಸಿದರು. ಆದರೆ 'ಇಮಿಜಿಸ್ಟ್ ಮೂವ್‌ಮೆಂಟ್' ಚಳುವಳಿಯ ಕವಿಗಳಲ್ಲಿ ತುಂಬಾ ಪ್ರಸಿದ್ಧನಾಗಿದ್ದ ಎಜ್ರಾ ಪೌಂಡ್ ನಂತರ ೫೦ರ ದಶಕದಿಂದ ವಾಲೆಸ್ ಸ್ಟೀವನ್ಸ್, ವಿಲಿಯಂ ಕಾರ್ಲೋಸ್ ವಿಲಿಯಮ್ಸ್ ಮುಂತಾದ ಕವಿಗಳು ಇದೇ ಬಗೆಯ ಕಾವ್ಯಧಾರೆಯಿಂದ ಪ್ರಸಿದ್ಧರಾಗಿದ್ದರು. ಆದರೆ ಇವರೆಲ್ಲರಿಗಿಂತ ರಾಮಾನುಜನ್ ಅವರ ಕಾವ್ಯ ಭಿನ್ನವಾದುದು ಅದರ 'ಭಾರತೀಯತೆ' ವಸ್ತುವಿನಿಂದಾಗಿ. ಹೀಗೆ ಭಿನ್ನ ಕಾರಣಗಳಿಗಾಗಿ ಕನ್ನಡದಲ್ಲಿ ಮತ್ತು ಇಂಗ್ಲಿಷ್‌ನಲ್ಲಿ ರಾಮಾನುಜನ್ ಅವರ ಕಾವ್ಯ ವಿಶಿಷ್ಟವಾದುದು.

'ಭಾರತೀಯ ಚಿಂತನಾಕ್ರಮ ಎನ್ನುವುದು ಇದೆಯೇ?' ಇದು ರಾಮಾನುಜನ್ ಅವರ ಮಹತ್ವದ ಲೇಖನಗಳಲ್ಲಿ ಒಂದು. ಈ ಲೇಖನದಲ್ಲಿ ಭಾರತೀಯ ಚಿಂತನಾಕ್ರಮ 'ಸಂದರ್ಭನಿಷ್ಠ' ಹಾಗೂ ಪಾಶ್ಚಾತ್ಯ ಚಿಂತನಾಕ್ರಮ 'ಸಂದರ್ಭ ಮುಕ್ತ' (Context Sensitive and Context Free) ಎಂದು ರಾಮಾನುಜನ್ ಅವರು ವಾದಿಸುತ್ತಾರೆ. ಈ ವಾದದ ಸಾರಾಂಶವನ್ನು ವಿಮರ್ಶಕರಾದ ಸಿ.ಎನ್. ರಾಮಚಂದ್ರನ್ ಅವರು ತಮ್ಮ ಒಂದು ಅಪ್ರಕಟಿತ ಲೇಖನದಲ್ಲಿ ಹೀಗೆ ಸಂಗ್ರಹಿಸುತ್ತಾರೆ

> "೧೯ನೇ ಶತಮಾನದವರೆಗೆ ಯಾವ ಭಾರತೀಯ ಪಠ್ಯವೂ 'ಆವರಣ'ವಿಲ್ಲದೆ ಇರುತ್ತಿರಲಿಲ್ಲ (ಯಾರು, ಯಾರಿಗೆ, ಯಾವ ಸಂದರ್ಭದಲ್ಲಿ ಏನನ್ನು ಹೇಳಿದರು; ಫಲಶೃತಿ, ಇತ್ಯಾದಿ ವಿವರಗಳು ಆ ಪಠ್ಯದ ಆವರಣವನ್ನು ಕಟ್ಟಿಕೊಡುತ್ತವೆ). ಧಾರ್ಮಿಕ ಚಿಂತನೆ, ದಂಡಸಂಹಿತೆ ಇತ್ಯಾದಿಗಳೂ ಸಂದರ್ಭಮುಕ್ತವಾಗಿಲ್ಲ; 'ಬ್ರಾಹ್ಮಣನು ವ್ಯಾಪಾರ ಮಾಡಕೂಡದು; ವ್ಯಾಪಾರ ಮಾಡಿದರೂ ಎಳ್ಳಿನ ವ್ಯಾಪಾರ ಮಾಡಕೂಡದು; ಅಪರಾಧಗಳಿಗೆ ಸಮಾನ ಶಿಕ್ಷೆಯಿಲ್ಲ (ಬ್ರಾಹ್ಮಣನನ್ನು ಕ್ಷತ್ರಿಯನು ಅವಮಾನಿಸಿದರೆ ಅವನಿಗೆ ನೂರು ಪಣಗಳ ಜುಲ್ಮಾನೆ; ವೈಶ್ಯನು ಅವಮಾನಿಸಿದರೆ ನೂರೈವತ್ತು ಅಥವಾ ಇನ್ನೂರು; ಶೂದ್ರನು ಅವಮಾನಿಸಿದರೆ ಅವನಿಗೆ ದೈಹಿಕ ಶಿಕ್ಷೆಯಾಗಬೇಕು); ಇತ್ಯಾದಿ ಮನುಧರ್ಮಶಾಸ್ತ್ರವು

ಹೇಳುತ್ತದೆ. ಹಾಗೆಯೇ ಸ್ತ್ರೀಯರಲ್ಲಿ ನಾಲ್ಕುಬಗೆಗಳಿವೆ, ಪ್ರತಿಯೊಂದು ಬಗೆಗೂ ಭಿನ್ನ ಆಹಾರ-ಕಾಮತೃಪ್ತಿ ಇವುಗಳನ್ನು ಕಾಮಶಾಸ್ತ್ರ ವಿವರಿಸುತ್ತದೆ; ಸಂಗೀತ ಕ್ಷೇತ್ರದಲ್ಲಿರುವ ಯಾವ ರಾಗಗಳನ್ನು ಯಾವಾಗ ಹಾಡಬೇಕು; ಯಾವ ಜಾತಿಯವರು ಯಾವ ಬಗೆಯ ಆಹಾರಪದ್ಧತಿಯನ್ನು ಅಳವಡಿಸಿಕೊಳ್ಳಬೇಕು, ಇತ್ಯಾದಿ ಪ್ರತಿಯೊಂದು ವಿಷಯದಲ್ಲಿಯೂ ಭಾರತೀಯ ಚಿಂತನೆ ವ್ಯಕ್ತಿ-ಸಂದರ್ಭ ನಿಷ್ಠವಾಗಿದೆ. ಇದಕ್ಕೆ ವಿರುದ್ಧವಾಗಿ ಪಾಶ್ಚಾತ್ಯ ಚಿಂತನಾಕ್ರಮದಲ್ಲಿ, ಎಲ್ಲವೂ ಸಾಮಾನ್ಯೀಕರಣಗೊಳಿಸಲ್ಪಟ್ಟಿವೆ; ಆಹಾರ-ನ್ಯಾಯಪದ್ಧತಿ-ವೃತ್ತಿ ಇತ್ಯಾದಿ ಪ್ರತಿಯೊಂದು ಪ್ರತಿಯೊಬ್ಬರಿಗೂ ಸಮಾನ. ಈ ಕಾರಣದಿಂದಲೇ ಭಾರತದಲ್ಲಿ ಪ್ರತಿರೋಧಾತ್ಮಕ ಚಳುವಳಿಗಳ ಗುರಿ ಸಮಾನತೆಯತ್ತ ಇದ್ದರೆ (ಈ ಚಳುವಳಿಯ ಅತ್ಯುತ್ತಮ ನಿದರ್ಶನ ಸ್ವತಂತ್ರ ಭಾರತದ ಸಂವಿಧಾನ), ಪಾಶ್ಚಿಮಾತ್ಯ ದೇಶದಗಳಲ್ಲಿ ಅಂತಹ ಚಳುವಳಿಗಳ ಉದ್ದೇಶ ವ್ಯಕ್ತಿ ನಿಷ್ಠತೆಯಾಗಿರುತ್ತದೆ ('ಸಿಂಹಕ್ಕೂ ಗೋವಿಗೂ ಒಂದೇ ಕಾಯಿದೆ ಎಂಬುದು ಶೋಷಣೆ'; 'ಚಿಕ್ಕದು ಸುಂದರ'- ಇತ್ಯಾದಿ ಚಳುವಳಿಗಳು)

ಹೀಗೆ ಚಿಂತನಾಕ್ರಮಗಳ 'ಮುಕ್ತ' ತೌಲನಿಕ ಅಧ್ಯಯನ ಎಂದು ರಾಮಾನುಜನ್ ಅವರ ಈ ಲೇಖನ ಕಂಡರೂ, 'ಭಾರತೀಯ ಚಿಂತನೆ ಸಂದರ್ಭನಿಷ್ಠ' ಎಂದು ವಾದಿಸುವುದೇ ಅದರ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯ ಸಮರ್ಥನೆಯಾಗಿಬಿಡಬಹುದು – ಇಂದು ಅನೇಕ ವಸಾಹತೋತ್ತರ ಚಿಂತಕರು ಈ ವಾದವನ್ನು 'ಪಶ್ಚಿಮ'ವನ್ನು ಎದುರಿಸಲು ದುಡಿಸಿಕೊಳ್ಳುವಂತೆ."

ಈ ಲೇಖನದಲ್ಲಿ ಬರುವ ರಾಮಾನುಜನ್ ಅವರ ವಿಚಾರಗಳನ್ನು ಕುರಿತು ಪ್ರಸ್ತುತ ಅಧ್ಯಾಯ ೫.೧ರಲ್ಲಿ ಸುದೀರ್ಘವಾಗಿ ಚರ್ಚಿಸಲಾಗಿದೆ.

ಅನುವಾದಗಳು: ರಾಮಾನುಜನ್ ಅವರ ಅನುವಾದಗಳು ಅನೇಕ ನೆಲೆಗಳಲ್ಲಿ ವಿಶಿಷ್ಟವಾಗಿವೆ. ಭಾರತೀಯ ಭಾಷೆಗಳಿಂದ ಮುಖ್ಯವಾಗಿ ಸಂಸ್ಕೃತದಿಂದ ಇಂಗ್ಲಿಷ್ ಮತ್ತು ಇತರ ಯುರೋಪಿನ್ ಭಾಷೆಗಳಿಗೆ ವೇದಗಳೂ ಸೇರಿದಂತೆ ಸಂಸ್ಕೃತ ಕಾವ್ಯಗಳು, ಸ್ಮೃತಿಗಳು ಸಾಕಷ್ಟು ಪ್ರಮಾಣದಲ್ಲಿ ಅನುವಾದವಾಗಿವೆ. ಈ ಅನುವಾದ ಕಾರ್ಯ ೧೯ನೇ ಶತಮಾನದಿಂದ ತುಂಬಾ ಗಂಭೀರವಾಗಿಯೇ ನಡೆದಿದೆ. ಆದರೆ ಅವೆಲ್ಲವೂ ಶಿಷ್ಟ ಸಾಹಿತ್ಯಕ ಕೃತಿಗಳಾಗಿದ್ದವು ಮತ್ತು ಸ್ಮೃತಿ-ಪುರಾಣಗಳಾಗಿದ್ದವು. ಸಿ.ಎನ್. ರಾಮಾಚಂದ್ರನ್ ಹೇಳುವಂತೆ "ಭಾರತೀಯ ಭಾಷೆಗಳಿಂದ ಮೌಖಿಕ ಪರಂಪರೆಯ ಕತೆ-ಕವನಗಳನ್ನು ಮೊದಲ ಬಾರಿಗೆ ಯಶಸ್ವಿಯಾಗಿ ಅನುವಾದಿಸಿ, ಭಾರತೀಯ ಮೌಖಿಕ ಪರಂಪರೆಯನ್ನು ಪಾಶ್ಚಿಮಾತ್ಯ ಜಗತ್ತಿಗೆ ಪರಿಚಯಿಸಿದವರು ರಾಮಾನುಜನ್, ಇಷ್ಟೇ ಮುಖ್ಯವಾದ ಮತ್ತೊಂದು ಸಂಗತಿಯೆಂದರೆ, ಅನುವಾದ ಪ್ರಕ್ರಿಯೆಯ ಬಗ್ಗೆ ಗಾಢವಾಗಿ ಚಿಂತಿಸಿದ ರಾಮಾನುಜನ್ ಅವರು ಅನುವಾದ ಕ್ಷೇತ್ರದಲ್ಲಿ ಅತ್ಯಂತ ಉಪಯುಕ್ತವಾದ 'ಅನುವಾದದ ಓದುಗನನ್ನು ಅನುವಾದಿಸುವುದು' (Translating the Reader) ಎಂಬ ಪರಿಕಲ್ಪನೆಯನ್ನು ಸೃಜಿಸಿದರು." ತನ್ನದೇ ಭಾಷೆಯ ಯಾವುದಾದರೂ ಕೃತಿಯೊಂದನ್ನು ಓದುವಾಗ ಓದುಗನಿಗೆ ತಾನು ಅದುವರೆಗೆ

ಓದಿ ಅಂತರಂಗೀಕಸರಿಸಿಕೊಂಡ ಸಮಾನ ಕೃತಿಗಳು–ಆಶಯಗಳು, ಪದಪುಂಜಗಳು. ಇತ್ಯಾದಿ ಆ ಕೃತಿಯ ಅರ್ಥೈಸುವಿಕೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಎಂಬ ರಾಮಾನುಜನ್ ಅವರ ಈ ಪರಿಕಲ್ಪನೆ ಮಹತ್ವವಾದುದು. ಈ ಪ್ರಕ್ರಿಯೆಯನ್ನು ರಾಮಾನುಜನ್ ಅವರು 'ಅನುವಾದದ ಓದುಗನನ್ನೂ ಅನುವಾದಿಸುವುದು' ಎಂದು ಕರೆಯುತ್ತಾರೆ. ಮತ್ತು ತಮ್ಮ ಎಲ್ಲಾ ಅನುವಾದಗಳನ್ನೂ ಇಂತಹ ಆವರಣದೊಳಗೇ ಇಡುತ್ತಾರೆ. ('ಆವರಣ'ದ ಕಲ್ಪನೆಯೆಂದರೆ ದೀರ್ಘ ಹಾಗೂ ವಿಮರ್ಶಾತ್ಮಕ ಮುನ್ನುಡಿ, ಲೇಖಕನ ಹಾಗೂ ಕೃತಿಯ ವಿಸ್ತೃತ ಪರಿಚಯ, ಸಮಾಸ ಪದಗಳ ಹಾಗೂ ಸಮಾನ ಪದಗಳ ಅರ್ಥವನ್ನು ಕೊಡುವ ಪದಗಳ ವಾಚ್ಯಾರ್ಥ, ಅಡಿ ಟಿಪ್ಪಣಿಗಳು ಮತ್ತು ಪದಕೋಶ, ಮೂಲನಿಷ್ಠೆ ಮತ್ತು ಓದುಗನಿಷ್ಠೆ ಇವುಗಳನ್ನೆಲ್ಲಾ ಒಳಗೊಳ್ಳಬೇಕೆಂಬುದು ಅವರ ಕಲ್ಪನೆಯಾಗಿದೆ.) ರಾಮಾನುಜನ್ ಅವರು ಭಾಷಾಂತರದ ಈ ಪರಿಕಲ್ಪನೆಗಳನ್ನು ಪ್ರಸ್ತುತ ಅಧ್ಯಾಯ ೬ರಲ್ಲಿ ಸುದೀರ್ಘವಾಗಿ ಚರ್ಚಿಸಲಾಗಿದೆ. ಆದರೆ ರಾಮಾನುಜನ್ ಅವರ ಈ ಪರಿಕಲ್ಪನೆಯನ್ನು ಕನ್ನಡದ ಓದುಗ ಅಥವಾ ವಿಮರ್ಶಾ ವಲಯ ಗಂಭೀರವಾಗಿ ಚರ್ಚಿಸಿದಂತೆ ಕಾಣುವುದಿಲ್ಲ.

ಮುನ್ನೂರು ರಾಮಾಯಣಗಳು: ನೂರಾರು ರಾಮಾಯಣಗಳ ಭಿನ್ನತೆಗಳಲ್ಲಿರಬಹುದಾದ ವಿನ್ಯಾಸ ಗುರ್ತಿಸುವಿಕೆಯನ್ನು ರಾಮಾನುಜನ್ ಅವರು ತಮ್ಮ ಈ ಲೇಖನದಲ್ಲಿ ಮಾಡಿದ್ದಾರೆ. ಈ ದೀರ್ಘ ಲೇಖನದಲ್ಲಿ ವಾಲ್ಮೀಕಿ ಮತ್ತು ಕಂಬನ್, ಜೈನ ರಾಮಾಯಣಗಳು, ಲಿಖಿತ–ಮೌಖಿಕ ಕಥನಗಳು, ದಕ್ಷಿಣ ಏಷ್ಯಾದ ಒಂದು ರಾಮಕಥೆ, ಭಿನ್ನತೆಗಳ ವಿನ್ಯಾಸ, ರಾಮಾಯಣಗಳ ಭಾಷಾಂತರಗಳ ಸ್ವರೂಪ ಮತ್ತು ರಾಮಾಯಣದ ಶ್ರವಣದ ಪರಿಣಾಮ (ಉದಾ: ಒಂದು ಜನಪದ ಕತೆ) ಇವುಗಳನ್ನು ಕುರಿತು ವಿಸ್ತಾರವಾಗಿ ಚರ್ಚಿಸಿದ್ದಾರೆ. ಒಂದು ಜಾನಪದ ಕತೆಯ ಮೂಲಕ ಭಾರತದಲ್ಲಿ ಮತ್ತು ಇತರ ದೇಶಗಳಲ್ಲಿ ಮೌಖಿಕ ಹಾಗೂ ಲಿಖಿತ ಪರಂಪರೆಗಳಲ್ಲಿ ಅನೇಕ ರಾಮಾಯಣಗಳು ಇರುವುದನ್ನು ಈ ಲೇಖನದ ಪೀಠಿಕೆಯ ಭಾಗದಲ್ಲಿ ಅವರು ದಾಖಲಿಸಿದ್ದಾರೆ. ಅವರೇ ಈ ಲೇಖನದಲ್ಲಿ ಹೇಳುವಂತೆ "ಈ ಬಗೆಯ ನೂರಾರು ರಾಮಾಯಣಗಳ ಭಿನ್ನತೆಯಲ್ಲಿರಬಹುದಾದ 'ವಿನ್ಯಾಸ'ವನ್ನು ಗುರುತಿಸುವುದು" ಎಂದು ಹೇಳಿದ್ದಾರೆ. ಅನಂತರ ದೊರೆಯುವ ಎಲ್ಲಾ ರಾಮಾಯಣಗಳನ್ನು ತೆಗೆದುಕೊಂಡು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಈ ವಿಚಾರಗಳನ್ನು ಪ್ರಸ್ತುತ ಅಧ್ಯಾಯ ೬ರಲ್ಲಿ ಸುದೀರ್ಘವಾಗಿ ಚರ್ಚಿಸಲಾಗಿದೆ.

ಈ ಲೇಖನದಲ್ಲಿ ವೈದಿಕ ಪರಂಪರೆಯ ರಾಮಾಯಣಗಳು, ಜೈನ ಪರಂಪರೆಯ ಹಾಗೂ ಮೌಖಿಕ ಪರಂಪರೆಯ ರಾಮಾಯಣಗಳು ಮತ್ತು ಆಗ್ನೇಯ ಏಷ್ಯಾದ ರಾಮಾಯಣಗಳು ಇವುಗಳ ನಡುವಿನ ಸಮಾನತೆ–ಭಿನ್ನತೆಗಳನ್ನು ರಾಮಾನುಜನ್ ಅವರು ಗುರುತಿಸಿದ ನಂತರ ಈ ಲೇಖನದ ೨ನೇ ಭಾಗ 'ಭಿನ್ನತೆಗಳ ವಿನ್ಯಾಸ' ಎಂಬ ಭಾಗದಲ್ಲಿ ಹೇಗೆ ಈ ಪರಂಪರೆಗಳಲ್ಲಿ

ಎರಡು ಭಿನ್ನ ಮುಕ್ತಾಯಗಳ (ಪಟ್ಟಾಭಿಷೇಕ / ಲವ-ಕುಶ ಜನನ) ಹಾಗೂ ಎರಡು ಭಿನ್ನ ಪ್ರಾರಂಭಗಳ ರಾಮಾಯಣಗಳಿವೆ; ಮತ್ತು ಇವುಗಳು ಆಳದಲ್ಲಿ (ಮುಖ್ಯವಾಗಿ ಸೀತೆ) ಫಲವಂತಿಕೆಯ ಮತ್ತು ನಿಸರ್ಗ-ಮಾನವ ಸಂಬಂಧಗಳ ರೂಪಕಗಳು ಎಂದು ರಾಮಾನುಜನ್ ವಿವರಿಸುತ್ತಾರೆ. ಹಾಗೆಯೇ, ಪ್ರತಿಯೊಂದು ರಾಮಾಯಣವನ್ನೂ ಅದರ 'ಸಂದರ್ಭ', ಎಂದರೆ, ಆ ಕೃತಿ ರಚನೆಯಾದ ಭಾಷಿಕ ಸಂದರ್ಭ, ಪ್ರಾದೇಶಿಕ ಪರಂಪರೆ, ಆ ಸಮುದಾಯದ / ಲೇಖಕನ ಧಾರ್ಮಿಕ ನಂಬಿಕೆ ಹಾಗೂ ಸಾಮಾಜಿಕ ಮೌಲ್ಯಗಳು, ಇತ್ಯಾದಿ ರೂಪಿಸುತ್ತವೆ ಎಂಬ ತೀರ್ಮಾನಕ್ಕೆ ಬರುತ್ತಾರೆ. ಈ ಸಂದರ್ಭದಲ್ಲಿಯೇ ಅವರ ಪ್ರಖ್ಯಾತ ಹೇಳಿಕೆ ಬರುತ್ತದೆ 'ರಾಮಾಯಣವೆಂದರೆ ಭಾರತದ ಎರಡನೆಯ ಭಾಷೆ'

ಈ ಲೇಖನದ ಮುಂದಿನ ಭಾಗದಲ್ಲಿ ರಾಮಾನುಜನ್ ಅವರು ಚಿಂತಿಸುತ್ತಾ ರಾಮಕಥೆಯ ಈ ಬಗೆಯ ಅನೇಕ ವಿನ್ಯಾಸ ಹಾಗೂ ಭಿನ್ನರೂಪಗಳನ್ನು ಅನುವಾದಗಳೆಂದು ಕರೆಯುತ್ತಾರೆ. ಇದನ್ನು ಅವರು ಮೂರು ಬಗೆಯ ಅನುವಾದ ಮಾರ್ಗಗಳಲ್ಲಿ ವಿವರಿಸುತ್ತಾರೆ ಅಂದರೆ. Iconic - Indexical - Symbolic ಎಂಬ ಪರಿಕಲ್ಪನೆಯ ನೆಲೆಗಳಲ್ಲಿ ಇದನ್ನು ವಿವರಿಸುತ್ತಾರೆ. ಕೊನೆಗೆ ಎಲ್ಲಾ ರಾಮಾಯಣಗಳನ್ನು ಒಳಗೊಳ್ಳುವ ಒಂದು ಸೋಪಜ್ಞ (Seminal) ವಿಮರ್ಶಾತ್ಮಕ ಚೌಕಟ್ಟನ್ನು ಒಂದು ರೂಪಕದಲ್ಲಿ ರಾಮಾನುಜನ್ ಅವರು ಹೀಗೆ ಗಟ್ಟಿಗೊಳಿಸುತ್ತಾರೆ "ನಿಯತವಾಗಿ, ಮತ್ತೆ ಮತ್ತೆ ರಾಮಾಯಣಗಳು ಸೃಷ್ಟಿಯಾದ ಸಾಂಸ್ಕೃತಿಕ ಪ್ರದೇಶವನ್ನು ಬಗೆಬಗೆಯ ಸೂಚಕಗಳಿಂದ ತುಂಬಿರುವ ಒಂದು ಅಗಾಧ ಸರೋವರದಂತೆ ನೋಡಬಹುದು. ಈ ಸೂಚಕಗಳೆಂದರೆ, ಕಥನ ಚೌಕಟ್ಟುಗಳು, ಪಾತ್ರಗಳು, ಹೆಸರುಗಳು, ಭೂಗೋಳ, ಘಟನೆಗಳು ಮತ್ತು ಸಂಬಂಧಗಳು, ಇತ್ಯಾದಿ... ಪ್ರತಿಯೊಬ್ಬ ಭಾರತೀಯ ಲೇಖಕನೂ ಈ ಸರೋವರದಲ್ಲಿ ಮುಳುಗಿ ತನ್ನದೇ ಆದ ಒಂದು ವಿಶಿಷ್ಟ ಪಠ್ಯವನ್ನು ಹೊರತೆಗೆಯುತ್ತಾನೆ... ಈ ಅರ್ಥದಲ್ಲಿ (ರಾಮಾಯಣದ) ಯಾವ ಪಠ್ಯವೂ ಮೂಲವಲ್ಲ, ಆದರೆ ಯಾವ ಕಥನವೂ ಕೇವಲ ಮರುಕಥನವಲ್ಲ; ಮತ್ತು ಈ ಕತೆಗೆ ಕೊನೆಯಿಲ್ಲ, ಆದರೆ ಪ್ರತಿಯೊಂದು ಪಠ್ಯವೂ ಸ್ವಯಂ ಪೂರ್ಣವಾಗಿರುತ್ತದೆ" (Three Hundred Ramayanas: Five Examples and Three Thoughts on Translation ಪು.೧೫೮)

ಕಳೆದ ಎರಡು ದಶಕಗಳಲ್ಲಿ ಅಂತಾರಾಷ್ಟ್ರೀಯ ವಿದ್ವತ್‌ಮನ್ನಣೆಯನ್ನು ಗಳಿಸಿರುವ ಮತ್ತು ಸಾಂಸ್ಕೃತಿಕ ತೌಲನಿಕ ವಿಮರ್ಶೆಯ ಒಂದು ಪ್ರಮುಖ ಮಾದರಿಯಾಗಿರುವ ರಾಮಾನುಜನ್ ಅವರ ಈ 'ಮುನ್ನೂರು ರಾಮಾಯಣಗಳು' ಎಂಬ ಲೇಖನ ೨೦೦೬ರಲ್ಲಿ ದೆಹಲಿ ವಿಶ್ವವಿದ್ಯಾಲಯದಲ್ಲಿ ವಾದ-ವಿವಾದಗಳಿಗೆ ಗುರಿಯಾಗಿ ಕೊನೆಗೆ ಅದನ್ನು ಪಠ್ಯಕ್ರಮದಿಂದ ತೆಗೆದು ಹಾಕಿದ ವಿಷಯ ಭಾರತದಾದ್ಯಂತ ಚರ್ಚೆಯನ್ನು ಹುಟ್ಟುಹಾಕಿತು. ೨೦೦೬ರಲ್ಲಿ ಈ ಲೇಖನ ಬಿ.ಎ. ಆನರ್ಸ್ 'ಕಲ್ಚರಲ್ ಹಿಸ್ಟರಿ' ಪಠ್ಯಕ್ರಮದಲ್ಲಿ ಸೇರಿಸಲ್ಪಟ್ಟಿತ್ತು; ೨೦೦೮ರಲ್ಲಿಯೇ

ಎಬಿವಿಪಿ ಕಾರ್ಯಕರ್ತರು ಈ ಲೇಖನದ ವಿರುದ್ಧ ಗಲಭೆ ಮಾಡಿ, ಇತಿಹಾಸ ವಿಭಾಗಕ್ಕೆ ನುಗ್ಗಿ, ಅಲ್ಲಿನ ಪೀಠೋಪಕರಣಗಳನ್ನು ಧ್ವಂಸ ಮಾಡಿದ್ದರು; ಆನಂತರ, ಈ ವಿಷಯ ಸುಪ್ರೀಮ್ ಕೋರ್ಟ್‌ಗೆ ಹೋಗಿ, ಅದರ ಆದೇಶದಂತೆ ರಚಿಸಲ್ಪಟ್ಟ ನಾಲ್ಕು ಜನ ತಜ್ಞರ ಸಮಿತಿಯಲ್ಲಿ ಮೂವರು 'ಇದು ಮೌಲಿಕ ಸಂಶೋಧನೆಯನ್ನು ಒಳಗೊಂಡಿದೆ' ಎಂದು ತಮ್ಮ ಅಭಿಪ್ರಾಯವನ್ನು ದಾಖಲಿಸಿದರು; ಆದರೆ, ನಾಲ್ಕನೆಯವರು 'ಈ ಲೇಖನವನ್ನು ಹಿಂದುಗಳಲ್ಲದವರು ಪಾಠ ಮಾಡಲು ಅಸಾಧ್ಯ; ಮತ್ತು ಇದನ್ನು ಅರ್ಥಮಾಡಿಕೊಳ್ಳಲು ಕಿಶೋರಾವಸ್ಥೆಯ ವಿದ್ಯಾರ್ಥಿಗಳಿಗೆ ಸಾಧ್ಯವಿಲ್ಲ; ಆದುದರಿಂದ ಇದನ್ನು ಪಠ್ಯಾವಳಿಯಿಂದ ತೆಗೆಯಬೇಕು' ಎಂದು ತಮ್ಮ ಅಭಿಪ್ರಾಯವನ್ನು ದಾಖಲಿಸಿದರು. ನಂತರ ಈ ಒಬ್ಬರ ವಾದವನ್ನು ಒಪ್ಪಿ, ದೆಹಲಿ ವಿಶ್ವವಿದ್ಯಾಲಯದ ಅಕಡೆಮಿಕ್ ಕೌನ್ಸಿಲ್ ಈ ಲೇಖನವನ್ನು ಪಠ್ಯಾವಳಿಯಿಂದ ತೆಗೆದು ಹಾಕಿತು.

ಎಬಿವಿಪಿ ಮತ್ತು ಇತರ ಬಲಪಂಥೀಯರು ಈ ಲೇಖನವನ್ನು ವಿರೋಧಿಸುವ ಕಾರಣಗಳು (ಪತ್ರಿಕೆಗಳಲ್ಲಿ ಬಂದಂತೆ) ಮೂರು: ಕೆಲವು ರಾಮಾಯಣಗಳು ಸೀತೆ ರಾವಣನ ಮಗಳೆಂದು ನಿರೂಪಿಸುತ್ತವೆ ಎಂಬುದನ್ನು ಈ ಲೇಖನ ಪ್ರಸ್ತಾಪಿಸುತ್ತದೆ; ಅವತಾರ ಪುರುಷನಾದ ರಾಮನನ್ನು ಮಾನವನೆಂದು ಕೆಲವು ರಾಮಾಯಣಗಳು ನಿರೂಪಿಸುವುದನ್ನು ರಾಮಾನುಜನ್ ದಾಖಲಿಸುತ್ತಾರೆ; ಮತ್ತು ಈ ಬಗೆಯ ಚರ್ಚೆ 'ಹಿಂದುಗಳ ಭಾವನೆಗಳಿಗೆ ನೋವುಂಟು ಮಾಡುತ್ತದೆ'. ಆದರೆ ಮುಖ್ಯವಾಗಿ ಈ ಲೇಖನದಲ್ಲಿ ಗಮನಿಸಬೇಕಾದದ್ದು ರಾಮಾನುಜನ್ ಅವರ ವಿಮರ್ಶಾತ್ಮಕ ನಿಲುವು ಮತ್ತು ತೌಲನಿಕ ವಿಮರ್ಶೆಯನ್ನು. ರಾಮಾನುಜನ್ ಅವರು ತಮಗೆ ದೊರೆಯುವ ರಾಮಾಯಣದ ಕತೆಯ ಭಿನ್ನ ವಿನ್ಯಾಸವನ್ನು, ಕಥೆಯ ಸ್ವರೂಪವನ್ನು ವಿವರಿಸುತ್ತಾರೆಯೇ ಹೊರತು ಇದು ಸರಿ, ಇದು ತಪ್ಪು ಎಂಬಂತಹ ತಮ್ಮ ನಿಲುವನ್ನು ಇದರಲ್ಲಿ ಎಲ್ಲೂ ಪ್ರಕಟಿಸುವುದಿಲ್ಲ. ರಾಮಾಯಣಗಳ ವಿವರಣೆ ಮತ್ತು ಸಾಂಸ್ಕೃತಿಕ ವ್ಯಾಖ್ಯಾನ ಮಾತ್ರ ಅವರ ಗುರಿಯಾಗಿತ್ತು. ರಾಮಾನುಜನ್ ಅವರದು ಈ ಬಗೆಯ ವಸ್ತುನಿಷ್ಠ ತೌಲನಿಕ ವ್ಯಾಖ್ಯಾನವೇ ಹೊರತು ಯಾವುದೇ ಬಗೆಯ ಪೂರ್ವಾಗ್ರಹ ಇದರಲ್ಲಿ ಇಲ್ಲ. ಹೀಗೆ ರಾಮಾನುಜನ್ ಅವರು ಅವರ Speaking of Siva, Hymns for the Drowning, Poems of Love and War ಮುಂತಾದ ಅನುವಾದಿತ ಕೃತಿಗಳ ಮೂಲಕ ಮತ್ತು ಸ್ವೋಪಜ್ಞ ವಿಮರ್ಶಾತ್ಮಕ ಪ್ರಬಂಧಗಳ ಮೂಲಕ ಅವರು ಭಾರತದ ಪ್ರಾಂತೀಯ ಭಾಷೆಗಳ ಸಾಹಿತ್ಯ-ಸಂಸ್ಕೃತಿಗಳನ್ನು ಹೊರ ಜಗತ್ತಿಗೆ ಪರಿಚಯಿಸುತ್ತಾರೆ. ಆ ಮೂಲಕ 'ಓರಿಯಂಟಲಿಸ್ಟ್' ಚಿಂತನೆಗೆ ವಸಾಹತ್ತೋತ್ತರ ರೂಪವನ್ನು ಕೊಡುವಲ್ಲಿ ಮಹತ್ತರ ಪಾತ್ರ ವಹಿಸುತ್ತಾರೆ. ಇಂತಹ ಭಾರತೀಯ ವಿದ್ವಾಂಸನ ಪ್ರಬುದ್ಧ ಸಂಶೋಧನಾ ಲೇಖನವನ್ನು ಕುರಿತ ಪ್ರತಿಭಟನೆ ಅತೀವ ದುರದೃಷ್ಟಕರ.

ಹೀಗೆ ಎ.ಕೆ.ರಾಮಾನುಜನ್ ಭಾರತ ಮಾತ್ರವಲ್ಲ, ಜಾಗತಿಕ ವಿದ್ವತ್‌ಲೋಕವು ಸಕಾರಣವಾಗಿ ಮೆಚ್ಚಿ ಗೌರವಿಸುವ ಬರಹಗಾರ. ತಮ್ಮ ಕಾವ್ಯ, ಕತೆಗಳು ಮಾತ್ರವಲ್ಲದೆ ಅನುವಾದ ಮತ್ತು ವಿಮರ್ಶೆಗಳಿಂದಲೂ ಪ್ರಖ್ಯಾತರಾದವರು ಇವರು. ಅಪರೂಪದ ಒಳನೋಟಗಳು, ಸಾಟಿ ಇಲ್ಲದ ವಿದ್ವತ್ತು, ಗಾಢವಾದ ಪರಂಪರಾಪ್ರಜ್ಞೆಯಿಂದಾಗಿ ರಾಮಾನುಜನ್ ಅವರ ಚಿಂತನೆಗಳು ದಿನದಿಂದ ದಿನಕ್ಕೆ ತಮ್ಮ ಪ್ರಸ್ತುತತೆ ಮತ್ತು ಮಹತ್ವವನ್ನು ಹೆಚ್ಚಿಸುತ್ತಲೇ ಹೋಗುತ್ತಿವೆ ಎನ್ನುವುದೊಂದು ಮಹತ್ವದ ಸಂಗತಿ. ಈ ಚಿಂತನೆಗಳನ್ನು ಪ್ರಸ್ತುತ ನೆಲೆಯಲ್ಲಿ ಪರಿಶೀಲಿಸುವುದು ಅಗತ್ಯವಾಗಿದೆ.

ರಾಮಾನುಜನ್ ಇಡೀ ಭಾರತೀಯ ಸಾಹಿತ್ಯ ಪರಂಪರೆ ಮತ್ತು ಸಾಂಸ್ಕೃತಿಕ ಪರಂಪರೆಗಳನ್ನು ಮುರಿದು ಕಟ್ಟಿದವರಲ್ಲಿ ಪ್ರಮುಖರು. ಸರಳವಾಗಿ ಹೇಳಬೇಕೆಂದರೆ ರಾಮಾನುಜನ್ ಜಾಗತಿಕ ಮಟ್ಟದಲ್ಲಿ ಭಾರತೀಯ ಸಾಹಿತ್ಯ ಪರಂಪರೆಯ ಹೊಸ ಮತ್ತು ಶಕ್ತ ನಕಾಶೆಯೊಂದನ್ನು ರಚಿಸುವುದರಲ್ಲಿ ಯಶಸ್ವಿಯಾದವರು. ಇವರು ಕನ್ನಡ, ತೆಲುಗು ಮತ್ತು ತಮಿಳಿನ ಅನನ್ಯ ಸಾಹಿತ್ಯ ಪಠ್ಯಗಳನ್ನು ತಮ್ಮ ಇಂಗ್ಲಿಷ್ ಅನುವಾದಗಳ ಮೂಲಕ ಜಾಗತಿಕ ಓದುಗರಿಗೆ ಪ್ರಸ್ತುತಪಡಿಸಿದರು; ಈ ಪ್ರಸ್ತುತಿಗಳು ಕೇವಲ ಭಾರತೀಯ ಸಾಹಿತ್ಯ ಪರಂಪರೆಯ ವಿಶಿಷ್ಟ ಕೃತಿಗಳನ್ನು ಮಾತ್ರ ಪರಿಚಯಿಸಿದ್ದಲ್ಲ. ಬದಲಿಗೆ ಇವು ಭಾರತೀಯ ಆಲೋಚನಾಕ್ರಮದ ಅನನ್ಯತೆಯನ್ನು ಪಾಶ್ಚಾತ್ಯರಿಗೆ ಎತ್ತಿ ಹಿಡಿದವು. ಈ ಮೂಲಕ ಈಗಾಗಲೇ ಸ್ಥಾಪಿತವಾಗಿದ್ದ 'ಭಾರತೀಯ ದೃಷ್ಟಿಕೋನ'ವನ್ನು ಪಲ್ಲಟಗೊಳಿಸುವಲ್ಲಿ, ರೂಪ ಪರಿವರ್ತನೆಗೊಳಿಸುವಲ್ಲಿ ಈ ಅನುವಾದಗಳ ಪಾತ್ರ ನಿರ್ಣಾಯಕವಾದುದು.

ಜಡ, ಮುಚ್ಚಿದ ಮತ್ತು ಕುಬ್ಜ, ಕರ್ಮಠವೆಂದು ತಿಳಿಯಲಾಗಿದ್ದ ಭಾರತೀಯ ಚಿಂತನಾಕ್ರಮವು ನಿಜದಲ್ಲಿ ಎಷ್ಟು ಮುಕ್ತವಾದುದು, ಮಾನವೀಯವಾದುದು ಎನ್ನುವುದನ್ನು ಸಾಬೀತುಪಡಿಸುವಲ್ಲಿ ಈ ಅನುವಾದಗಳು ಯಶಸ್ವಿಯಾದವು. ಇದಕ್ಕೆ ಪೂರಕವೆನ್ನುವಂತೆ ರಾಮಾನುಜನ್ ಅವರು ಬರೆದ ಇನ್ನೆಷ್ಟೋ ಸಂಶೋಧನ ಪ್ರಬಂಧಗಳು ಮತ್ತು ಸಾಹಿತ್ಯಿಕ ಬರಹಗಳು ಇತರರಿಗಿರಲಿ, ಸ್ವತಃ ಭಾರತೀಯರಿಗೇ ಭಾರತದ ಸಾಹಿತ್ಯ ಪರಂಪರೆಯ 'ನವದರ್ಶನ'ವನ್ನು ಮಾಡಿಸುವಲ್ಲಿ ಯಶಸ್ವಿಯಾದವು.

ಮೂಲತಃ ನವ್ಯ ಸಾಹಿತ್ಯದ ನಿಷ್ಠಾವಂತ ವಿದ್ಯಾರ್ಥಿಯಾಗಿದ್ದವರು ರಾಮಾನುಜನ್. ಅವರ ಮೊದಲ ಕವನ ಸಂಕಲನ 'ಹೊಕ್ಕುಳಲ್ಲಿ ಹೂವಿಲ್ಲ' ಇದಕ್ಕೆ ಸ್ಪಷ್ಟವಾದ ಪುರಾವೆ. ಆಶ್ಚರ್ಯಕರವೆನ್ನುವಂತೆ ನವ್ಯ ಸಾಹಿತ್ಯದ ಅಭ್ಯಾಸಿಯಾಗಿದ್ದೂ ರಾಮಾನುಜನ್ ಪರಂಪರೆಯ ಕಡೆಗೆ ಹೊರಳಿದವರು. ಹಾಗೆ ನೋಡಿದರೆ ಇವರ ಸಮಕಾಲೀನ ಬರಹಗಾರರು ಯಾರೂ ಪರಂಪರೆಯ ಜೊತೆಗೆ ಜೀವಂತವಾದ ಅನುಸಂಧಾನವನ್ನು ಏರ್ಪಡಿಸಿಕೊಂಡವರೇ ಅಲ್ಲ. ಅಡಿಗ, ಭೈರಪ್ಪನವರನ್ನು ಬಿಟ್ಟರೆ ಬಹುಪಾಲು ಆ ಲೇಖಕರೆಲ್ಲ ಪರಂಪರೆಗೆ ಪ್ರತಿರೋಧ ತೋರಿದವರೇ

ಆಗಿದ್ದಾರೆ. ಅವರೆಲ್ಲ ಬಹುಮಟ್ಟಿಗೆ ಪರಂಪರೆಯನ್ನು ನಿರಾಕರಿಸುತ್ತಲೋ, ಏಕಮುಖಿಯಾದ ಪ್ರಶ್ನೆಗಳಿಂದ ಅದನ್ನು ಎದುರಾಗುತ್ತಲೋ ಇದ್ದಾಗ ರಾಮಾನುಜನ್ ಮಾತ್ರ ಪರಂಪರೆಯೊಂದಿಗೆ ಸಾವಯವ ಸಖ್ಯವೊಂದನ್ನು ಕಟ್ಟಿಕೊಂಡರು. ಯು.ಆರ್.ಅನಂತಮೂರ್ತಿ, ಬಿ.ಸಿ.ರಾಮಚಂದ್ರಶರ್ಮ, ಶಾಂತಿನಾಥ ದೇಸಾಯಿ, ಪಿ.ಲಂಕೇಶ್, ಚಿತ್ತಾಲ, ತೇಜಸ್ವಿ ಇವರಾರಿಗೂ ಸಾಧ್ಯವೇ ಆಗದ ಸ್ವರೂಪದಲ್ಲಿ ಮತ್ತು ಪ್ರಮಾಣದಲ್ಲಿ ರಾಮಾನುಜನ್ ಪರಂಪರೆಯನ್ನು ಎದುರಾದರು ಮತ್ತು ಪರಂಪರೆ, ಪುರಾಣ, ಜನಪದದ ಜೊತೆ ನಿರಂತರವಾಗಿ ಅನುಸಂಧಾನ ನಡೆಸಿದರು.

ಶಿಕಾಗೋ ವಿಶ್ವವಿದ್ಯಾಲಯದಲ್ಲಿ ಕನ್ನಡ ಮತ್ತು ಭಾರತೀಯ ಸಾಹಿತ್ಯವನ್ನು ನಿರೂಪಿಸಬೇಕಾದ ಅನಿವಾರ್ಯತೆಯಲ್ಲಿ ರಾಮಾನುಜನ್ ಅನುವಾದಗಳನ್ನು ಕೈಗೊತ್ತಿಕೊಂಡದ್ದು ನಿಜ. ಆದರೆ ಈ ಆರಂಭವು ಬಹುಶಃ ರಾಮಾನುಜನ್ ಅವರೇ ಊಹಿಸದ ರೀತಿಯಲ್ಲಿ ಮುಂದೆ ಚಾಲನೆಯನ್ನು ಪಡೆದುಕೊಂಡಿತು. ಯಾವ ಪರಂಪರೆಯು ಸಾಂಪ್ರದಾಯಿಕ ವಸ್ತುಗಳನ್ನು, ಸಾಂಪ್ರದಾಯಿಕ ದೃಷ್ಟಿಕೋನದಲ್ಲಿ ನಿರ್ವಹಿಸಿದೆ ಎಂದು ಇವರೆಲ್ಲ ತಿಳಿದಿದ್ದರೋ ಅದಕ್ಕೆ ವಿರುದ್ಧ ಎನ್ನುವಂತೆ ಸಾಹಿತ್ಯ ಪರಂಪರೆಯಲ್ಲಿನ ಕೆಲವು ಕಾಲಘಟ್ಟಗಳಲ್ಲಿ ಇರುವ ಸತ್ವವು ಇವರನ್ನು ದಂಗುಬಡಿಸಿತು. ಅಪಾರ ಗೌರವ ಮತ್ತು ಪ್ರೀತಿಯಲ್ಲಿ ಆ ಪರಂಪರೆಯನ್ನು ಪುನರ್ ನಿರ್ಮಿಸಿಕೊಳ್ಳಬೇಕಾದ, ಪರಿಷ್ಕಾರಗೊಳಿಸಿಕೊಳ್ಳಬೇಕಾದ ಮತ್ತು ಅನಾವರಣ ಮಾಡಿಕೊಳ್ಳಬೇಕಾದ ಅಗತ್ಯವನ್ನು ರಾಮಾನುಜನ್ ಅವರು ಮನಗಂಡರು. ಇವರ ಅನುವಾದಗಳ ತೀವ್ರತೆ ಮತ್ತು ಗಾಂಭೀರ್ಯತೆಗಳು ಇದನ್ನು ಸೂಚಿಸುತ್ತವೆ. ಅವು ಕೇವಲ ಅನುವಾದಗಳು ಮಾತ್ರವಾಗದೇ, ಭಾರತೀಯ ಅಭಿವ್ಯಕ್ತಿ ಮತ್ತು ಆಲೋಚನಾಕ್ರಮದ ಪ್ರಾತಿನಿಧಿಕ ಕೃತಿಗಳು ಎನ್ನುವ ಅರಿವು ಈ ಅನುವಾದಗಳಲ್ಲಿ ರಾಮಾನುಜನ್ ಅವರು ಇನ್ನಿಲ್ಲದ ಬದ್ಧತೆ ಮತ್ತು ಶ್ರದ್ಧೆಯಲ್ಲಿ ತೊಡಗಿಕೊಳ್ಳುವಂತೆ ಮಾಡಿದವು.

ರಾಮಾನುಜನ್ ಅವರ ಈ ಪರಂಪರೆಯ 'ಪುನರ್‌ನಿರ್ಮಿತಿಯ' ಐತಿಹಾಸಿಕ ಪ್ರಕ್ರಿಯೆಯನ್ನು ನಾವು ಭಾರತೀಯ ನವೋದಯದ 'ಪರಂಪರೆಯ ದರ್ಶನ'ದ ಜೊತೆ ಹೋಲಿಸಬಹುದು. ಯಾವ ಅನುಮಾನವೂ ಇಲ್ಲದೆ ರಾಮಾನುಜನ್ ಅವರ ಈ ಅನುವಾದ ಕ್ರಿಯೆಯು ಅಷ್ಟೇ ಐತಿಹಾಸಿಕವಾದುದು. ನವೋದಯದ ಸಂದರ್ಭದಲ್ಲಿ ಅದೊಂದು ಸಾಮೂಹಿಕ ಕ್ರಿಯೆಯಾಗಿ, ಗೆಳೆಯರ ಗುಂಪು ನಿಭಾಯಿಸಿದ್ದಾದರೆ ಇಲ್ಲಿ ರಾಮಾನುಜನ್ ಅವರು ಏಕಾಂಗಿಯಾಗಿ ಅದನ್ನು ನಿಭಾಯಿಸಿದಂತೆ ಕಾಣುತ್ತದೆ. ವಸಾಹತು ಸಾಹಿತ್ಯಕ್ಕೆ ಪ್ರತಿರೋಧವೆನ್ನುವನಂತೆ ಭಾರತೀಯ ನವೋದಯವು ಇಡೀ ಭಾರತವನ್ನು ಹೊಸ ಕಾಣ್ಕೆಯಲ್ಲಿ ಕಂಡುಕೊಂಡಿದೆಯಷ್ಟೇ. ಆದರೆ ರಾಮಾನುಜನ್ ಅವರ ಈ ಪ್ರಯತ್ನಗಳು ಆಧುನಿಕತೆಯ ಸವಾಲನ್ನು ಭಾರತವು ಎದುರಿಸುವುದಕ್ಕೆ ನಡೆಸಿದ ಸನ್ನಾಹಗಳಂತೆ ಕಾಣಿಸುತ್ತವೆ. ದುರಂತವೆಂದರೆ ನಾಡಿನ ಉದ್ದಗಲಕ್ಕೂ ರಾಮಾನುಜನ್ ಅವರ ಬಗೆಗೆ ಅಪಾರ ಗೌರವದ ಮಾತುಗಳು ಕೇಳಿಬರುತ್ತಲೇ ಇರುವಾಗಲೂ ಅವರ

ಕೊಡುಗೆಯ ಐತಿಹಾಸಿಕ ಮಹತ್ವವನ್ನು ಅದರ ಸಮಗ್ರತೆಯಲ್ಲಿ ಇನ್ನೂ ಹಿಡಿಯಲಾಗಿಲ್ಲ ಎನ್ನುವುದು. ಬಿಡಿ ಬಿಡಿಯಾಗಿ ಅವರನ್ನು ಕುರಿತ ಅಧ್ಯಯನಗಳಿದ್ದರೂ ರಾಮಾನುಜನ್ ಅವರ ಒಟ್ಟು ನಿಲುವು, ಅದರ ಬಹುಮುಖತೆಯನ್ನು ಹಿಡಿದಿಟ್ಟಿರುವ ಅಧ್ಯಯನ ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ.

ರಾಮಾನುಜನ್ ತಮ್ಮ ಅನುವಾದಕ್ಕಾಗಿ ಆರಿಸಿಕೊಂಡ ತಮಿಳಿನ 'ಸಂಗಂ' ಮತ್ತು ಕನ್ನಡದ 'ವಚನ ಸಾಹಿತ್ಯ'ಗಳು ಮೂಲತಃ ಏನನ್ನು ಪ್ರತಿನಿಧಿಸುತ್ತವೆ? ನಿಜವೆಂದರೆ ರಾಮಾನುಜನ್ ಈ ಎರಡೂ ಸಾಹಿತ್ಯಘಟ್ಟಗಳನ್ನು ಕೇಂದ್ರವಾಗಿಟ್ಟುಕೊಂಡು ಒಟ್ಟೂ ಭಾರತೀಯ ಸಾಹಿತ್ಯ ಪರಂಪರೆಯನ್ನು ನೋಡಬಹುದಾದ ಹೊಸ ಆಕೃತಿಗಳನ್ನೇ, ಕೇಂದ್ರಗಳನ್ನೇ ಸ್ಥಾಪಿಸಿದರು ಎನಿಸುತ್ತದೆ. ಮೇಲ್ನೋಟಕ್ಕೆ ಇದು ಉತ್ಪ್ರೇಕ್ಷೆಯಾಗಿ ಕಂಡರೂ ಕಾಲದ ಅಂತರದಲ್ಲಿ ಹಿಂದಿರುಗಿ ನೋಡಿದಾಗ ಅದು ವಾಸ್ತವವಾಗಿಯೇ ಕಾಣಿಸುತ್ತದೆ. ಕೊನೆಗೂ ಸಾಹಿತ್ಯವೆನ್ನುವುದು 'ಜನದನಿ'ಯಾಗಬೇಕು ಎನ್ನುವುದನ್ನು ಸಾಹಿತ್ಯದ ಅತ್ಯಾಧುನಿಕ ವ್ಯಾಖ್ಯೆ ಎಂದು ತಿಳಿಯಲಾಗುತ್ತದೆ ಅಷ್ಟೇ. ಯಾವ ಭಾಷೆಯ ಸಾಹಿತ್ಯ ಪರಂಪರೆಯಲ್ಲೂ ಮೊದಲ ಘಟ್ಟದಲ್ಲಿ ಕಾಣಿಸಿಕೊಳ್ಳುವ ಅಭಿಜಾತ, ಶಿಷ್ಟಪರಂಪರೆ ಕನ್ನಡ ಮತ್ತು ತಮಿಳಿನಲ್ಲೂ ಕಾಣಿಸಿಕೊಂಡಿತು ಎನ್ನುವುದು ನಿಜ. ಆದರೆ ಅಭೂತಪೂರ್ವವೆನಿಸುವ ಬೆಳವಣಿಗೆಯೊಂದರಲ್ಲಿ ಈ ಭಾಷಿಕ ಸಾಹಿತ್ಯಗಳು ವಿರುದ್ಧ ದಿಕ್ಕಿನೆಡೆಗೆ ಚಲಿಸಿ, ಜನರಿಂದ, ಜನರಿಗಾಗಿ, ಜನರೇ ಬರೆಯುವ ಸಾಹಿತ್ಯವನ್ನು ಎತ್ತಿ ಹಿಡಿದವರು.

ಹತ್ತರಿಂದ ಹನ್ನೆರಡನೇ ಶತಮಾನದ ಈ ಅವಧಿಯಲ್ಲಿ ಲೋಕೋತ್ತರವೆಂಬಂತೆ ಸಂಭವಿಸಿದ ಈ ಅಪೂರ್ವ ಸಾಹಿತ್ಯ ಚಳುವಳಿಗಳು ಹಲವು ಸಂಗತಿಗಳನ್ನು ಸಂಕೇತಿಸುತ್ತವೆ. ಜನಸಾಮಾನ್ಯರ ಹೋರಾಟವೆನ್ನುವುದು ಎಲ್ಲ ಕಾಲಕ್ಕೂ ಗುಪ್ತಗಾಮಿನಿಯಾಗಿ ಹರಿಯುತ್ತಲೇ ಇರುತ್ತದೆ. ಅದು ಒಂದು ಸಂದರ್ಭಕ್ಕಾಗಿ ಕಾಯುತ್ತಾ ಸರ್ವ ಸನ್ನದ್ಧ ಸ್ಥಿತಿಯನ್ನು ಕಾಪಾಡಿಕೊಂಡೇ ಇರುತ್ತದೆ. ಸಿಕ್ಕ ಸಿಕ್ಕ ಸಣ್ಣ ಅವಕಾಶವೊಂದನ್ನು ಬಳಸಿಕೊಂಡು ಅದು ಸ್ಫೋಟವಾಗುತ್ತದೆ. ಸಂಗಂ ಮತ್ತು ವಚನ ಸಾಹಿತ್ಯಗಳು ಅಂತಹ ಜನದನಿಯ ಸ್ಫೋಟಗಳು; ಈ ಎರಡೂ ಸಾಹಿತ್ಯಘಟ್ಟಗಳು ಸಾಹಿತ್ಯದ ಹೊಚ್ಚಹೊಸ ಮತ್ತು ಶಾಶ್ವತ ಮಾದರಿಗಳನ್ನು ಮಾತ್ರ ಪ್ರತಿಬಿಂಬಿಸುತ್ತಿಲ್ಲ; ಬದಲಿಗೆ ಅವು ದಮನಿತ ವರ್ಗಗಳು ತಮ್ಮ ಬದುಕಿನ ಮತ್ತು ಅಭಿವ್ಯಕ್ತಿಯ ಸಂದರ್ಭಗಳಿಗಾಗಿ ನಿರಂತರವಾಗಿ ನಡೆಸುವ ಹೋರಾಟಗಳ ಸಂಗತಿಗಳಾಗಿವೆ. ಎಲ್ಲ ಬಗೆಯ ಪ್ರಭುತ್ವಗಳು ಮತ್ತು ಅವುಗಳ ಹಿಡಿತದಿಂದ ತಪ್ಪಿಸಿಕೊಳ್ಳಲು ಜನವರ್ಗವೊಂದು ಸತತವಾಗಿ ನಡೆಸುವ ಪ್ರಯತ್ನಗಳಿಗೆ ಇವು ಪ್ರಮುಖ ಸಾಕ್ಷಿಗಳಾಗಿವೆ.

ಆಧುನಿಕತೆಯು ಸರ್ವವ್ಯಾಪಿಯಾಗಲು ಹವಣಿಸುತ್ತಿದ್ದ ಮೊದಲಘಟ್ಟದಲ್ಲಿದ್ದ ರಾಮಾನುಜನ್ ಇವುಗಳನ್ನು ಆರಿಸಿಕೊಳ್ಳಲು ಅವು ಅತ್ಯುತ್ತಮ ಸಾಹಿತ್ಯ ಪಠ್ಯಗಳು ಎನ್ನುವುದರ ಆಚೆಗಿನ

ಕಾರಣಗಳು ಯಾವೆಲ್ಲಾ ಆಗಿರಬಹುದು. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒಪ್ಪಿಕೊಂಡ ಭಾರತ ಎದುರಿಸುತ್ತಿದ್ದ ವಿಲಕ್ಷಣ ಸವಾಲುಗಳು ಒಂದು ಕಡೆ, ಬಂಡವಾಳಶಾಹಿ ಹಿಡಿತಕ್ಕೆ ಸಿಲುಕಿ ವಿಶ್ವವನ್ನೇ ನುಂಗಿ ನೊಣೆಯಲು ದಾಪುಗಾಲು ಹಾಕುತ್ತಿದ್ದ ಅಮೆರಿಕಾ ಇನ್ನೊಂದು ಕಡೆ; ಈ ಸನ್ನಿವೇಶದಲ್ಲಿ ರಾಮಾನುಜನ್ ಅವರು ಈ 'ಎರಡನ್ನೂ' ಆರಿಸಿಕೊಂಡದ್ದು ಕುತೂಹಲಕರವಾಗಿದೆ. ಅವರ ಆಯ್ಕೆಯ ಹಿಂದಿನ ಕಾರಣಗಳು ಏನೇ ಅಗಿದ್ದರೂ ಈ ಕಾಲಘಟ್ಟದಲ್ಲಿ ರಾಮಾನುಜನ್ ಅವರನ್ನು ಅಧ್ಯಯನ ಮಾಡಲು ಹೊರಟವರಿಗೆ ಇದರ ಬಗೆಗೆ ಕುತೂಹಲ ಮಾತ್ರವಲ್ಲ, ಸಕಾರಣವಾದ ಹೆಮ್ಮೆಯೂ ಹುಟ್ಟಿತ್ತದೆ.

'ದೇಶೀವಾದ'ವು ಇನ್ನೂ ಒಂದು ತಾತ್ವಿಕತೆಯಾಗಿ ಮತ್ತು ಶೈಕ್ಷಣಿಕ ಅಧ್ಯಯನ ಕ್ರಮವಾಗಿ ರೂಪುಗೊಳ್ಳದೇ ಇದ್ದ ಕಾಲಘಟ್ಟದಲ್ಲಿ ರಾಮಾನುಜನ್ ನಡೆಸಿದ ಈ ಪ್ರಯತ್ನಗಳು ಆಶ್ಚರ್ಯ ಹುಟ್ಟಿಸುತ್ತವೆ. ಈ ಅನುವಾದಗಳ ಜೊತೆಗೆ ಮೇಲೆ ಗಮನಿಸಿದಂತೆ ಇವರ ಅನೇಕ ಮಹತ್ವದ ಪ್ರಬಂಧಗಳು ಭಾರತೀಯ ಚಿಂತನಾಕ್ರಮದ ಬಹುತ್ವವನ್ನು(Plurality) ಗುರುತಿಸುತ್ತಲೇ ಅವುಗಳನ್ನು ಒಂದು ಸಮಾನಪಾತಳಿಗೆ ತರಲು ನಡೆಸಿದ ಪ್ರಯತ್ನಗಳಾಗಿ ಕಾಣಿಸುತ್ತವೆ. ಉದಾಹರಣೆಗೆ ಇವರ 'ಮುನ್ನೂರು ರಾಮಾಯಣಗಳು' ಲೇಖನದ ಆಶಯವಾದರೂ ಏನು? ಯಾವ ರಾಮಾಯಣವನ್ನು ಭಾರತದ ರಾಷ್ಟ್ರೀಯ ಕಾವ್ಯ ಎಂದು ಹೆಮ್ಮೆಯಿಂದ ಘೋಷಿಸಲಾಗುತ್ತದೆಯೋ ಆ ಶಿಷ್ಟಕಾವ್ಯದ ಅಸ್ತಿತ್ವವನ್ನೇ ನಗಣ್ಯಗೊಳಿಸುವ ಮಟ್ಟಿಗೆ ರಾಮಾನುಜನ್ ಭಾರತದ ಎಲ್ಲಾ ಭಾಗಗಳಲ್ಲೂ ಹರಡಿರುವ ಮೌಖಿಕ ಮತ್ತು ಲಿಖಿತ ರಾಮಾಯಣಗಳನ್ನು ಅವುಗಳ ಎಲ್ಲಾ ವೈವಿಧ್ಯತೆಯಲ್ಲಿ ನಮ್ಮೆದುರಿಗೆ ಮಂಡಿಸುತ್ತಾರೆ. ಹೀಗೆ ಮಂಡಿಸುವಾಗಿನ ಅವರ ಉತ್ಸಾಹ ಮತ್ತು ಶ್ರದ್ಧೆ ವಿಶೇಷ ಉಲ್ಲೇಖಕ್ಕೆ ಅರ್ಹವಾಗುತ್ತವೆ.

ಸಾಮಾನ್ಯಾತಿಸಾಮಾನ್ಯರಿಂದ, ದಲಿತರಿಂದ ಹಾಗೂ ಮಹಿಳೆಯರಿಂದ ನಿರೂಪಿತವಾಗಿರಬಹುದಾದ ಈ ರಾಮಾಯಣಗಳೇ ಅಧಿಕೃತ ರಾಮಾಯಣಗಳು ಎನ್ನುವ ರಾಮಾನುಜನ್ ಅವರ ಉತ್ಸಾಹದ ಮೂಲ ಯಾವುದು? ಲೋಕಪ್ರಸಿದ್ಧವಾದ ವಾಲ್ಮೀಕಿ ವಿರಚಿತ ರಾಮಾಯಣಕ್ಕೆ ಸಿಗುವಷ್ಟೇ ಸ್ಥಾನಮಾನಗಳು ಈ ಜನಜನಿತ, ಜನಲಿಖಿತ ಹಾಗೂ ಜನನಿರೂಪಿತ ರಾಮಾಯಣಗಳಿಗೂ ಸಿಗಬೇಕು ಎನ್ನುವ ರಾಮಾನುಜನ್ ಅವರ ಧ್ವನಿ ಈ ಪ್ರಬಂಧದಲ್ಲಿದೆ. ಎಂದರೆ ರಾಮಾನುಜನ್ ಅನೇಕ ಭಾರತಗಳನ್ನು ಒಟ್ಟಿಗೇ ಮತ್ತು ಸಮಾನವಾಗಿ ಗುರುತಿಸುವುದರಲ್ಲಿ ಆಸಕ್ತರಾಗಿದ್ದರು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಇದರಿಂದ ಸಾಧಿತವಾಗುವ ಇನ್ನೆರಡು ಮಹತ್ವದ ಸಂಗತಿಗಳೆಂದರೆ ಒಂದು ಭಾರತದ ಶ್ರೀಮಂತ ಅಭಿವ್ಯಕ್ತಿಯ ಶಿಷ್ಟಪರಂಪರೆ ಮತ್ತು ಅಷ್ಟೇ ಸಮೃದ್ಧವಾದ ಮೌಖಿಕ ಪರಂಪರೆ. ಈ ಎರಡನ್ನೂ ಗುರುತಿಸುವುದರಲ್ಲಿ ರಾಮಾನುಜನ್ ಅವರು ಸಂಪೂರ್ಣ ಯಶಸ್ವಿಯಾಗುತ್ತಾರೆ. ಮಾತ್ರವಲ್ಲದೆ, ಈ ತನಕ ನೇಪಥ್ಯದಲ್ಲಿದ್ದು

ಅವಗಣನೆಗೆ ಒಳಗಾಗಿದ್ದ ಆ ಅಭಿವ್ಯಕ್ತಿ ಪರಂಪರೆಗೆ ರಾಜಕೀಯ ಅಧಿಕೃತತೆಯನ್ನು ತಂದುಕೊಡುವುದರಲ್ಲಿಯೂ ಇವರು ಯಶಸ್ವಿಯಾಗುತ್ತಾರೆ.

ಇದರ ಮುಂದುವರಿಕೆಯಾಗಿ ನಾವು ನೋಡಬಹುದಾದ ಇನ್ನೊಂದು ಮಹತ್ವದ ಪ್ರಬಂಧವೆಂದರೆ, 'ಭಾರತೀಯ ಚಿಂತನಾಕ್ರಮ ಎಂಬುದೊಂದು ಇದೆಯೇ?' ಎಂಬುದು. ಈ ತನಕ ಭಾರತೀಯ ವಿದ್ವತ್‌ಲೋಕ ಎದುರಿಸಲು ಕೊಂಚ ಹಿಂಜರಿಯುತ್ತಿದ್ದ ಬಹುದೊಡ್ಡ ಸಂಗತಿಯನ್ನು ರಾಮಾನುಜನ್ ಅವರು ಮುಕ್ತ ಮನಸ್ಸಿನಿಂದ ಇಲ್ಲಿ ಚರ್ಚೆಗೆ ಎತ್ತಿಕೊಳ್ಳುತ್ತಾರೆ. ಭಾರತೀಯ ಎನ್ನುವ ಏಕ ಅಸ್ಮಿತೆಯೊಳಗೆ ಒಂದು ಚಿಂತನಾಕ್ರಮವನ್ನು ಗುರುತಿಸುವುದನ್ನು ರಾಮಾನುಜನ್ ಅವರು ಒಪ್ಪುವುದಿಲ್ಲ. ಬಹುತ್ವಗಳನ್ನು ಬಹುತ್ವಗಳೆಂದೇ ಸ್ವೀಕರಿಸಬೇಕು ಎಂದು ಹೇಳುತ್ತಾ ಹೀಗೆ ಬಹುತ್ವಗಳನ್ನು ಒಳಗೊಳ್ಳುವ, ಒಳಗೊಂಡು ತಮ್ಮ ಅನನ್ಯತೆಯನ್ನೂ ಏಕತ್ವವನ್ನೂ ಉಳಿಸಿಕೊಳ್ಳಬಲ್ಲ ಮನೋವಿನ್ಯಾಸ ಮತ್ತು ಬೌದ್ಧಿಕ ಸ್ಪಷ್ಟತೆಯನ್ನು ಬೇಕಾದರೆ ನಾವು ಭಾರತೀಯ ಎಂದು ಕರೆಯಬಹುದು ಎನ್ನುತ್ತಾರೆ ರಾಮಾನುಜನ್. ಈ ನಿಲುವು ಒಮ್ಮೊಮ್ಮೆ 'ಬಹುರತ್ನಾ ವಸುಂಧರಾ' ಎನ್ನುವ ಆರ್ಷೇಯ ನಿಲುವಿನ ಪ್ರತಿಪಾದನೆಯೇ ಆಗಿ ಕಂಡುಬಿಡುವ ಅಪಾಯವಿದೆ. ಆದರೆ ವೈದಿಕ ಪರಂಪರೆಯು 'ಬಹುರತ್ನಾ' ಎಂದು ಕರೆಯುತ್ತಲೇ ಅವುಗಳನ್ನು ಶ್ರೇಣೀಕರಣಕ್ಕೆ ಒಳಗುಮಾಡಿದೆ.

ಪ್ರಸ್ತುತ ಮಹಾಪ್ರಬಂಧದಲ್ಲಿ ಏಳು ಅಧ್ಯಾಯಗಳಲ್ಲಿ ಎ.ಕೆ.ರಾಮಾನುಜನ್ ಅವರ ಸಮಗ್ರ ಕೃತಿಗಳನ್ನು ತೆಗೆದುಕೊಂಡು ವಿವಿಧ ದೃಷ್ಟಿಕೋನಗಳಿಂದ ಅವುಗಳನ್ನು ಪರೀಕ್ಷಿಸಿ, ಅವುಗಳ ಅಂತಃಸತ್ವಗಳನ್ನು, ಸತ್ಯಸ್ವಾರಸ್ಯಗಳನ್ನು ವಿವರಿಸುವ, ವಿಶ್ಲೇಷಿಸುವ, ದಿಗ್ದರ್ಶನ ಮೂಡಿಸುವ ಕೆಲಸವನ್ನು ಮಾಡಲಾಗಿದೆ. ಇಂದಿನ ಕನ್ನಡ ಸಂಸ್ಕೃತಿ, ಸಾಹಿತ್ಯದ ಸಂದರ್ಭದಲ್ಲಿ ಈ ಬಗೆಯ ಅಧ್ಯಯನ ಅತ್ಯಗತ್ಯವೆಂದು ತಿಳಿಯಲಾಗಿದೆ. ಈ ಅಧ್ಯಯನದ ಮೂಲಕ ರಾಮಾನುಜನ್ ಅವರ ವ್ಯಕ್ತಿತ್ವ ಹಾಗೂ ವಿಚಾರ ಚಿಂತನೆಗಳ ಪರಿಶೀಲನೆಯು ಅವಶ್ಯವೆಂದು ತಿಳಿದು ಇಲ್ಲಿ ಚರ್ಚಿಸಲಾಗಿದೆ. ಯಾಕೆಂದರೆ ಈ ಎರಡರಲ್ಲಿ ಅಭಿನ್ನ ಎನಿಸುವಷ್ಟು ಏಕರೂಪತೆ ಇದೆ. ರಾಮಾನುಜನ್ ಅವರ ಕೃತಿಗಳನ್ನು 'ಸಂಸ್ಕೃತಿಕೇಂದ್ರಿತ' ಸೃಷ್ಟಿಯ ಕೃತಿಗಳೆಂದು ಪರಿಭಾವಿಸಿ ಅವುಗಳ ಬಹುಮುಖಿ ಆಯಾಮಗಳನ್ನು ಪರಿಚಯ, ವಿಶ್ಲೇಷಣೆ ಮತ್ತು ಮೌಲ್ಯನಿರ್ಣಯದ ಹಂತದವರೆಗೂ ಎಳೆದು ಅರ್ಥೈಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಅವರ ಗದ್ಯ ಮತ್ತು ಪದ್ಯಗಳೆರಡರಲ್ಲೂ ಕ್ರಿಯೆ-ಪ್ರಕ್ರಿಯೆಗಳ ಘರ ಹಾಗೂ ವಿರುದ್ಧ ಧ್ರುವಗಳ ಅಂತಃಸತ್ವಗಳನ್ನು ವಸ್ತುನಿಷ್ಠವಾಗಿ ಗುರುತಿಸಲು ಇಲ್ಲಿ ಯತ್ನಿಸಲಾಗಿದೆ.

ಧಾರ್ಮಿಕ ಅಸ್ಮಿತೆ, ಬಹುಸಂಖ್ಯಾತ ಧಾರ್ಮಿಕತೆ, ಈ ಎಲ್ಲವೂ ರಾಮಾನುಜನ್ ಅವರ ಪ್ರಜ್ಞಾವಿನ್ಯಾಸದ ಮೂಲಧಾತುಗಳಲ್ಲಿ ಒಂದನ್ನು ರೂಪಿಸಿದೆ. ವ್ಯಕ್ತಿ ಮತ್ತು ಸಮುದಾಯದ

ಬದುಕಿನಲ್ಲಿ ಧಾರ್ಮಿಕತೆಯ ಪಾತ್ರವೇನು ಎನ್ನುವ ಪ್ರಶ್ನೆ ರಾಮಾನುಜನ್ ಅವರನ್ನು ಉದ್ದಕ್ಕೂ ಕಾಡಿದೆ. ವೈಚಾರಿಕತೆ ಮತ್ತು ಧಾರ್ಮಿಕತೆಯ ನಡುವಿನ ಸಂಘರ್ಷ ಮತ್ತು ಸಾಮರಸ್ಯವು ಇವರನ್ನು ಉದ್ದಕ್ಕೂ ಹಿಂಬಾಲಿಸಿದೆ. ಧಾರ್ಮಿಕತೆ ಮತ್ತು ವೈಚಾರಿಕತೆಗಳು ಒಂದಕ್ಕೊಂದು ವಿರುದ್ಧವೇ, ಪೂರಕವೇ ಎನ್ನುವ ಬಗೆಹರಿಯದ ಪ್ರಶ್ನೆಯನ್ನು ರಾಮಾನುಜನ್ ಧೀರೋದಾತ್ತವಾಗಿ ಎದುರು ಹಾಕಿಕೊಂಡಿದ್ದಾರೆ. ನಿರಂತರವಾಗಿ ಇದರೊಂದಿಗೆ ಸೆಣಸಾಡಿದ್ದಾರೆ. ಭಾರತೀಯನೊಬ್ಬನ ಗ್ರಹಿಕೆ ಮತ್ತು ಸಂವೇದನೆಗಳ ಒಂದು ಭಾಗವೇ ಆಗಿರುವ ಮಿಥ್‌ಗಳು ಪುರಾಣಗಳು ಇವುಗಳನ್ನು ಹೇಗೆ ನಿಭಾಯಿಸಬೇಕು. ಇವುಗಳಿಂದ ಹೊರಬರುವುದು ಸಾಧ್ಯವೇ? ಅವಶ್ಯಕವೇ? ಆಧುನಿಕರಾಗುವುದೆಂದರೆ ಈ ಎಲ್ಲದರಿಂದ ಬಿಡುಗಡೆ ಪಡೆಯುವುದೇ ಅಥವಾ ಇವುಗಳ ಜೊತೆ ಒಂದು ಅಂತರವನ್ನು ಕಾಪಾಡಿಕೊಳ್ಳುವುದೇ ಅಥವಾ ಇವುಗಳ ಮರುನಿರೂಪಣೆಯೇ? ಸ್ಮೃತಿಕೋಶದಲ್ಲಿ ಸೇರಿಹೋಗಿರುವ ಇವುಗಳನ್ನು ಹೇಗೆ ಬೇರ್ಪಡಿಸಿಕೊಳ್ಳುವುದು? ಕೊನೆಯಿಲ್ಲದ ತರತಮಗಳ ಸ್ಪೃಶ್ಯ ಅಸ್ಪೃಶ್ಯತೆಗಳ ಕ್ರೂರವ್ಯವಸ್ಥೆಗೂ ಇವುಗಳಿಗೂ ಇರುವ ಸಂಬಂಧವನ್ನು ಭಾರತೀಯ ಸಮಾಜ ಕಳಚಿಕೊಳ್ಳಲೇಬೇಕು ಎನ್ನುವುದು ನಿಜ. ಕಳಚಿಕೊಳ್ಳುವುದೆಂದರೆ ಇವುಗಳ ಸಂಪೂರ್ಣ ನಿರಾಕರಣೆಯೇ? ಅಮಾನವೀಯವಾಗಿರುವ ವ್ಯವಸ್ಥೆಯನ್ನು ಮಾನವೀಯಗೊಳಿಸುವ ಇನ್ನಾವ ದಾರಿ ಇದೆ ನಮಗೆ? ಈ ಎಲ್ಲಾ ಪ್ರಶ್ನೆಗಳು ಹಿಂದೂ ಎನ್ನುವ ಪರಿಕಲ್ಪನೆಯ ಜೊತೆಯಲ್ಲಿ ರಾಮಾನುಜನ್ ನಡೆಸುವ ಕೊನೆಯಿಲ್ಲದ ಗುದ್ದಾಟದಲ್ಲಿ ನಮಗೆ ಕಾಣಿಸುತ್ತದೆ. ಹಿಂದುತ್ವದ ಪ್ರಶ್ನೆಯು ಇಂದು ಮತ್ತೆ ಗಂಭೀರವಾದ ಚರ್ಚೆಗಳಿಗೆ ಒಳಗಾಗುತ್ತಿರುವ ಈ ದಿನಮಾನಗಳಲ್ಲಿ ರಾಮಾನುಜನ್ ನಡೆಸುವ ಈ ಪ್ರಾಮಾಣಿಕ ಆತ್ಮವಿಮರ್ಶೆಯ ನೆಲೆಗಳು ಬಹುಮುಖ್ಯ ಎನಿಸುತ್ತದೆ. ರಾಮಾನುಜನ್ ಎತ್ತುವ ಈ ಪ್ರಶ್ನೆಗಳು ಆಧುನಿಕ ಭಾರತದ ಸಂದರ್ಭದಲ್ಲಿ ಎಲ್ಲಾ ಪ್ರಜ್ಞಾವಂತ ಭಾರತೀಯರು ಹಾಕಿಕೊಳ್ಳುತ್ತಿರುವ ಪ್ರಶ್ನೆಗಳೇ ಆಗಿವೆ, ನಡೆಸುತ್ತಿರುವ ಶೋಧಗಳೇ ಆಗಿವೆ, ಆತ್ಮವಂಚನೆ ಇಲ್ಲದೆ ಇಂತಹ ಪ್ರಶ್ನೆಗಳನ್ನು ಎದುರಾಗಲು ಅಪಾರ ಆತ್ಮಸ್ಥೈರ್ಯ ಮತ್ತು ಪ್ರಾಮಾಣಿಕತೆ ಬೇಕು. ರಾಮಾನುಜನ್ ಅವರಿಗೆ ಈ ಎರಡೂ ಇವೆ ಎಂದೇ ಅವರು ನಮ್ಮ ನಡುವಿನ ಬಹುಮುಖ್ಯವಾದ ವ್ಯಕ್ತಿತ್ವ. ಇಂತಹ ಧೀಮಂತಿಕೆಯ ಕಾರಣಕ್ಕಾಗಿ ರಾಮಾನುಜನ್ ಅವರ ಸಾಹಿತ್ಯ ನಮಗೆ ಪ್ರಸ್ತುತವಾಗುತ್ತದೆ.

* * * * *

ಅನುಬಂಧ

೧. Chronology of Books and Essays by A.K.Ramanujan

1955 a. Publication of *Proverbs*, a collection of proverbs in Kannada.

b. Fieldwork on folktales and proverbs; drafts of 'Some Folktales from India' and 'The Clay Mother-in-Law'.

1956 a. June: Publication of *'Some Folktales from India'* in *Southern Folklore Quarterly.*

b. September: Publication of *'The Clay Mother-in-Law'* in Southern Folklore Quarterly.

1966 a. Publication of *The Striders*, book of poems in English.

b. Publication of *Haladi Meenu*, Ramanujan's Kannada translation of an English novel.

1967 a. Publication of *The Interior Landscape*, a book of translation of classical Tamil poems.

b. Publication of *'Varieties of Bhakti'* in The Yearbook of Comperative Literature.

1998 a. Publication of *'Language and Social Change'* in Problemf of Modernization in South India, ed. Robert Drake.

b. Paper on 'The Ahalya Episode in Two Ramayanas (Valmiki and Kampan)' presented at Association for Asian Studies Conference, Boston, which was incorporated in 'Three Hundred Ramayanas' in 1985-91.

c. Paper entitled 'Towards a Structural Analysis of the Mahabharata' presented at Victor Turner's seminar, University of Chicago; incorporated in 'Repetition in the Mahabharata' in 1988-91.

d. Paper on 'The Mahabharata and the Ramayana: Some Contrasts' delivered at the University of Chicago; probably incorporated in 'Repetition in the Mahabharata' in 1988-91.

e. Paper entitled 'On Translating an Indian Poem' delivered as a lecture at New York University; incorporated in 'On Translating a Tamil Poem' in mid-to-late 1980s.

1969 a. Publication of *Hokkulalli Huvilla*, a book of Kannada poems.

1970 a. Publication of *'Towards a Anthology of City Images'* inUrban India: Society, Space and Image, ed.R.G.Fox.

1971 a. Publication of *Relations*, a book of poems in English.

b. Publication of *'Form in Classical Tamil poetry'* in Symposium on Dravidian Civilization, ed. Andree F. Sjoberg.

c. Publication of first version of *'The Indian Oedipus'* in Seminar on Indian Literature, ed. A. Potdar; revised and expanded for republication under the same title in 1983.

1973 a. Publication of *Speaking of Siva*, a book of translations of Kannada Bhakti poems.

1974 a. Publication of *The Literatures of India*, co-authored with Edward C. Dimock, Jr., and others.

1976 a. Publication of *Selected Poems in English.*

b. Publication of translation of *Samskara*, a contemporary Kannda novel by U.R.Anantha Murthy.

c. Lecture on 'Men, Women and Saints' delivered at Harvard University; incorporated in both 'On Women Saints', published in 1982, and 'Men, Women and Saints'.

1977 a. Publication of *Mattu Itara Padyagalu*, a book of Kannda poems.

1978 a. Publication of *Mottobbana Atmakate*, A Kannada novella.

1979 a. Draft of 'Tale and Teller in South India', delivered as a paper at the Sixth Meeting of the International Association for the Study of Folk-narratives. Edinburgh; incorporated later in 'Telling Tales' in 1989 and 'Tell It to the Walls' in 1992.

1980 a. Draft of 'Is There an Indian Way of Thinking?' as a paper for a 'Workshop on the Hindu Person', University of Chicago.

1981 a. Publication of *Hymns for the Drowning*, a book of translations of Tamil Bhakti poems.

b. July: Revised version of 'Is There an Indian Way of Thinking?'; typescript in circulation.

c. Paper on 'The Myths of Bhakti' delivered at aconference on 'The Manifestations of Siva', University of Pennsylvania.

d. Paper on 'Three Cindrerellas' delivered as a lecture at the Centre for Psychosocial Studies, Chicago; incorporated in 'Hanchi: A Kannada Cinderella's in 1982.

1982 a. Publication of *'On Women Saints'* in The Divine Consort, ed. John S. Hawley and Donna M. Wulf.

b. Publication of *'Hanchi: A Kannada Cinderella' in Cinderella*: A folklore Casebook, ed. Alan Dundes.

1983. a. Draft of 'Bharati and His prose Poems'.

b. Publication of the second (revised and expanded) version of *'The Indian Oedipus'* in Oedipus: A Folklore Casebook, ed. Alan Dundes and Lowell Edmunds.

1984. a. Publication of *'The Myths of Bhakthi'* in Discourses on Siva. ed. Michael W.Meister.

b. Draft of portions of 'Food for Thought' presented as a paper at the Sixth International Conference on Semiotics and Structural Studies, Central Institute of Indian Languages, Mysore.

1985. a. Publication of *Poems of Love and War*, a book of translation of classical Tamil poems.

b. Drafts of some portions of 'Where Mirrors Are Windows'.

c. Drafts of 'Three Hundred Ramayanas'; delivered as a lecture at the Workshop on South Asia, University of Chicago.

1986. a. Publication of *Second Sight*, a book of poems in English.

b. Publication of *Another Harmony*, a book of essays on folklore co-edited with Stuart Blackburn.

c. Publication of *'The Prince Who Married His Own Left Half'* in Aspects of India: Essays in Honor of Edward Cameron Dimock, Jr., ed. Margaret Case and N.Gerald Barrier.

1988 a. Revised version of 'Food for Thought' for a book edited by Ravinder Khare.

b. Revised version of 'Where Mirrors Are Windows', delivered in May as a lecture at All Souls' College, Oxford University.

c. Publication of *'Classics Lost and Found'* in Contemporary India: Essays on the Use of Tradition, ed. Carla Borden.

d. Draft of 'Who Needs Folklore?'; delivered in March as the First Rama Watumull Distinguished Lecture on India, University of Hawaii.

1989 a. February: Publication of 'Where Mirrors Are Windows' in History of Religions.

b. Publication of *'Is There an Indian Way of Thinking?'* in Contributions to Indian Sociology; and in India through Hindu Categories, ed.McKin Marriott.

1990 a. Publication of *Kuntobille*, a book of Kannda Poems.

b. Publication of *'Who Needs Folklore?'* in South Asia Occasional Paper Series, University of Hawaii.

1991 a. Publication of *Folktales from India*, a book of folktales retold and tralslated from twenty-two Indian languages.

b. Draft of 'Some Thoughts on "Non-Western" Classics' (published posthumously).

c. Publication of *'Three Hundred Ramayanas'* in Many Ramayanas: The Diversity of a Narrative Tradition in South Asia, ed. Paula Richman.

d. Publication of *'Towards a Counter-System: Women's Tales'* in Gender, Genre, and Power in South Asican Expressive Traditions, ed. Arjun Appadurai, Frank Korom, and Margaret Mills.

1993 a. Draft of 'Why an Allama Poem Is not a Riddle'.

b. Publication of *'On Folk Mythologies and Folk Puranas'* in Purana Perennis: Reciprocity and Transformation in Hindu Na Jaina Texts, ed. Wendy Doniger.

1994 a. Porthumous publication of *When God is a Customer*, a book of Telugu bhakti poems translated with V. Narayana Rao and David Shulman.

b. Posthumous publication of *'Some Thoughts on 'Non-Western' Classics'* in World Literature Today.

c. Posthumous publication of The Oxford *Anthology of Modern Indian Poetry*, co-edited with Vinay Dharwadker.

1995. a. Publication of *Collected Poems in English*, including The Black Hen (posthumous collection of last poems).

(Source : The Collected Essays of A.K.Ramanujan, General Editor : Vinay Dharwadker, Oxford University Press, New Delhi, 1999. P.597-600)

೨. ರಾಮಾನುಜನ್ ಅವರ ಕನ್ನಡ ಕೃತಿಗಳು

೧. ಗಾದೆಗಳು (೧೯೫೫)

೨. ಹಳದಿ ಮೀನು (೧೯೬೬) – 'ಶೌರಿ' ಅವರ ಇಂಗ್ಲಿಷ್ ಕಾದಂಬರಿ ಅನುವಾದ

೩. ಹೊಕ್ಕುಳಲ್ಲಿ ಹೂವಿಲ್ಲ (೧೯೬೯) ಕವನ ಸಂಕಲನ

೪. ಮತ್ತು ಇತರ ಪದ್ಯಗಳು (೧೯೭೭) ಕವನ ಸಂಕಲನ

೫. ಮತ್ತೊಬ್ಬನ ಆತ್ಮಕಥೆ (೧೯೭೮) ಕಾದಂಬರಿ

೬. ಕುಂಟೋಬಿಲ್ಲೆ (೧೯೯೦) ಕವನ ಸಂಕಲನ

೭. ಮಧುರೆಯಲ್ಲಿ ಕಂಡ ತಲೆ (೧೯೬೫) ಬಿಡಿ ಸಣ್ಣಕತೆ

೮. ಅಣ್ಣಯ್ಯನ ಮಾನವಶಾಸ್ತ್ರ (೧೯೭೪) ಬಿಡಿ ಸಣ್ಣಕತೆ

೯. ನಾದಬಿಂದು (೧೯೫೯) ರೇಡಿಯೋ ನಾಟಕ

೧೦. ನಾಗಪ್ರಿಯ (೧೯೫೯) ರೇಡಿಯೋ ನಾಟಕ

೩. ಪರಾಮರ್ಶನ ಗ್ರಂಥಗಳು : ಕನ್ನಡ

೧. ಅಮರೇಶ ನುಗಡೋಣಿ, (ಸಂ.), ೨೦೧೧, ಕನ್ನಡ ಸಂಶೋಧನೆಯ ವೈದಾನಿಕತೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಆಶಾದೇವಿ ಎಂ.ಎಸ್., ೨೦೧೬, ಬೆಳಕಿಗಿಂತ ಬೆಳ್ಳಗೆ, ಸಾಹಿತ್ಯ ಅಕಾದೆಮಿ, ನವ ದೆಹಲಿ.

೩. ಅಶೋಕ ಟಿ.ಪಿ. (ಸಂ), ಕಾವ್ಯ ಪ್ರೀತಿ, – ಕನ್ನಡ ಕವಿತೆಗಳನ್ನು ಕುರಿತ ಐವತ್ತು ಲೇಖನಗಳ ಸಂಕಲನ,

೪. ಅಶೋಕ ಟಿ.ಪಿ., ೨೦೧೧, ಪುಸ್ತಕ ಸಮಯ, ಅಕ್ಷರ ಪ್ರಕಾಶನ, ಹೆಗ್ಗೋಡು, .

೫. ಅಶೋಕ ಟಿ.ಪಿ. (ಸಂ), ೨೦೧೦, ಪುಸ್ತಕ ಪ್ರೀತಿ–ಎಂಬತ್ತೇಳು ಪುಸ್ತಕಗಳ ಅವಲೋಕನ, ವಸಂತ ಪ್ರಕಾಶನ, ಬೆಂಗಳೂರು.

೬. ಅಶೋಕ ಟಿ.ಪಿ.(ಸಂ), ೧೯೯೩, ಎ.ಕೆ.ರಾಮಾನುಜನ್ ನೆನಪಿನ ಸಂಪುಟ, ಕರ್ನಾಟಕ ಸಂಘ, ಪುತ್ತೂರು.

೭. ಎ.ಕೆ.ರಾಮಾನುಜನ್ ಅವರ ಆಯ್ದ ಬರಹಗಳು, ೨೦೦೯, ಕೆ.ವಿ.ಸುಬ್ಬಣ್ಣ ನೆನಪಿನ 'ಮೊದಲ ಓದು' ಮಾಲಿಕೆ, ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ), ಕರ್ನಾಟಕ.

೮. ಕರೀಗೌಡ ಬೀಚನಹಳ್ಳಿ, (ಸಂ.), ೨೦೦೯, ಭಾಷಾಂತರದ ಸಾಂಸ್ಕೃತಿಕ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ಕರೀಗೌಡ ಬೀಚನಹಳ್ಳಿ, ೨೦೦೭, ವ್ಯಷ್ಟಿ ಸಮಷ್ಟಿ, ಅಜಂತ ಪ್ರಕಾಶನ, ಬೆಂಗಳೂರು.

೧೦. ಕರೀಗೌಡ ಬೀಚನಹಳ್ಳಿ, ೨೦೧೧, ಶತಮಾನದ ಸಣ್ಣಕಥೆಗಳ ಸಮೀಕ್ಷೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೧. ಕರೀಗೌಡ ಬೀಚನಹಳ್ಳಿ,(ಅನು) ೨೦೦೩, ಕಥೆ ಮತ್ತು ಹಾಡು, ಇಂಗ್ಲಿಷ್ ಸಂಗ್ರಹ ಮತ್ತು ಸಂಪಾದನೆ: ಎ.ಕೆ.ರಾಮಾನುಜನ್, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨. ಕಾರ್ಲೋಸ್ ಎಸ್.(ತಮಿಳವನ್) (ಸಂ.), ೨೦೧೫, ನಿಚ್ಚಂ ಪೊಸತು, ಆಯ್ದ ಸಂಗಂ ಕವಿತೆಗಳು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.

೧೩. ಕಾರ್ಲೋಸ್ ಎಸ್, ೧೯೯೩, ತಮಿಳು ಕಾವ್ಯಮೀಮಾಂಸೆ, ಅನು. ಎಸ್.ಸುಚಿತ್ರ ಲತ, ಎಲ್.ಜಿ.ಮೀರ, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ.

೧೪. ಕೀರ್ತಿನಾಥ ಕುರ್ತಕೋಟಿ (ಸಂ), ೧೯೯೮, ನೂರು ಮರ, ನೂರು ಸ್ವರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫. ಕೀರ್ತಿನಾಥ ಕುರ್ತಕೋಟಿ, (ಸಂ), ೨೦೦೮, ಭಾಷೆ ಮತ್ತು ಸಂಸ್ಕೃತಿ, ಕುರ್ತುಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ.

೧೬. ಕೃಷ್ಣಶಾಸ್ತ್ರಿ ಬೆಳಗೆರೆ, ೨೦೦೭, ಮರೆಯಲಾದೀತೆ?..., ಅಭಿನವ ಪ್ರಾಕಾಶನ, ಬೆಂಗಳೂರು.

೧೭. ಗಣೇಶ್ ಮೊಗಳ್ಳಿ, ೨೦೧೪, ಆದಿಮ ಜಾನಪದ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.

೧೮. ಗೀತಾಚಾರ್ಯ ನಾ (ಸಂ), ಅಂತರಶಿಸ್ತೀಯ ಸಂಶೋಧನ ವಿಧಿವಿಧಾನಗಳು, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

೧೯. ಗಿರೀಶ ಕಾರ್ನಾಡ್, ೨೦೧೧, ಆಡಾಡತ ಆಯುಷ್ಯ, ಮನೋಹರ ಗ್ರಂಥಮಾಲಾ, ಧಾರವಾಡ.

೨೦. ಗಿರೀಶ್ ಕಾರ್ನಾಡ್, ೧೯೮೯, ನಾಗಮಂಡಲ, ಮನೋಹರ ಗ್ರಂಥಮಾಲಾ, ಧಾರವಾಡ.

೨೧. ಚಂದ್ರಶೇಖರ ಕಂಬಾರ, ೨೦೧೦, ಸಿರಿಸಂಪಿಗೆ, ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು.

೨೨. ಚಂದ್ರಶೇಖರ ಕಂಬಾರ, ೨೦೧೧, ಸಿಂಗಾರೆವ್ವ ಮತ್ತು ಅರಮನೆ, ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು.

೨೩. ಚೇಕೂರಿ ರಾಮಾರಾವು (ಸಂ.) ೨೦೦೦, ನಿರಾಡಂಬರುಡೈನಾ ಮೇಧಾವಿ, ಭಾಷಾಸಾಹಿತ್ಯವೇತ್ತ ಎ.ಕೆ.ರಾಮಾನುಜನ್-೧೯೯೩ ಆಗಸ್ಟ್ ೧, ಆಂಧ್ರಜ್ಯೋತಿ ದಿನಪತ್ರಿಕೆ, ಚೇರಾತಲು ಎಂಬ ಕಾಲಂಗೆ ಬರೆದ ಲೇಖನ) Smrti Kinankam, A collection of essays on literature and literary personalities, ಚೇರಾ ಪಬ್ಲಿಷರ್ಸ್, ಹೈದರಾಬದ್-೭.

೨೪. ದಿವಾಕರ್ ಎಸ್., ೨೦೧೫, ಪ್ರಧಾನಸಂಪಾದಕರ ಮಾತು, ಕೆ.ವಿ.ಸುಬ್ಬಣ್ಣ ಅವರ ಬೆಲೆಬಾಳುವ ಬರಹಗಳು, ಸಂ.ಟಿ.ಪಿ.ಅಶೋಕ, ವಸಂತ ಪ್ರಕಾಶನ, ಬೆಂಗಳೂರು

೨೫. ನಿರುಪಮಾ, ೨೦೦೨, ಸಂಶೋಧನಾ ವಿಧಾನಗಳು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.

೨೬. ನಾಗಭೂಷಣಸ್ವಾಮಿ ಓ.ಎಲ್. (ಸಂ), ೨೦೧೨, ಎ.ಕೆ.ರಾಮಾನುಜನ್ ಆಯ್ದ ಪ್ರಬಂಧಗಳು, ಮನೋಹರ ಗ್ರಂಥಮಾಲ, ಧಾರವಾಡ.

೨೭. ನಾಗಭೂಷಣಸ್ವಾಮಿ ಓ.ಎಲ್., ೧೯೯೩, ಭಾಷಾಂತರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೮. ನಾಗಭೂಷಣಸ್ವಾಮಿ ಓ.ಎಲ್., ೧೯೯೮, ವಿಮರ್ಶೆಯ ಪರಿಭಾಷೆ, ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು.

೨೯. ನಾಯಕ ಜಿ.ಎಚ್. (ಸಂ), ೧೯೮೫, ಹೊಸಗನ್ನಡ ಕವಿತೆ, ಕನ್ನಡ ಸಾಹಿತ್ಯ ಪರಿಷತ್. ಬೆಂಗಳೂರು.

೩೦. ನಾಯಕ ಜಿ.ಎಚ್., ೧೯೮೦, ಅನಿವಾರ್ಯ, ಸಾಹಿತ್ಯ ವಿಮರ್ಶೆ, ಅಕ್ಷರ ಪ್ರಕಾಶನ, ಸಾಗರ.

೩೧. ನಾಯಕ್ ಎಂ.ಕೆ., ೨೦೦೫, ಬಸವರಾಜ ನಾಯ್ಕರ (ಅನು), ಭಾರತೀಯ ಇಂಗ್ಲೀಷ್ ಸಾಹಿತ್ಯ ಚರಿತ್ರೆ, ಸಾಹಿತ್ಯ ಅಕಾದೆಮಿ.

೩೨. ನಾಯಕ್ ಜಿ.ಎಚ್. (ಸಂ), ೧೯೯೧, ಕನ್ನಡ ಸಣ್ಣ ಕಥೆಗಳು, ನ್ಯಾಷನಲ್ ಬುಕ್ ಟ್ರಸ್ಟ್, ಹೊಸ ದೆಹಲಿ.

೩೩. ಪ್ರಹ್ಲಾದ್ ಡಿ.ವಿ.(ಸಂ), ೧೯೯೩, ಎ.ಕೆ.ರಾಮಾನುಜನ್ ಹೆಜ್ಜೆಗುರುತು, ಬೆಂಗಳೂರು.

೩೪. ಪ್ರತಿಭಾನಂದಕುಮಾರ್ ಅವರ ಆಯ್ದ ಕವಿತೆಗಳು, ೨೦೦೭, ಅಕ್ಷರ ಪ್ರಕಾಶನ, ಹೆಗ್ಗೋಡು

೩೫. ಮಂಜುನಾಥ ಬೇವಿನಕಟ್ಟಿ, (ಸಂ), ೨೦೧೬, ಜಾನಪದ ಕರ್ನಾಟಕ, ಸಂಪುಟ ೮, ಸಂಚಿಕೆ ೨, ಜನವರಿ–ಜೂನ್ ೨೦೧೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೬. ಮಾಲತಿ ನಾಡಿಗ್, (ಸಂ.), ೨೦೧೦, ನಾಡಿಗರ ಕಾವ್ಯ ಜಗತ್ತು, ಸಪ್ನ ಬುಕ್ ಹೌಸ್ ಪ್ರೈ.ಲಿ., ಬೆಂಗಳೂರು.

೩೭. ಮಹಾಬಲೇಶ್ವರ ರಾವು (ಅನು), ೨೦೦೦, ಭಾರತೀಯ ಜನಪದ ಕತೆಗಳು, ನ್ಯಾಷನಲ್ ಬುಕ್ ಟ್ರಸ್ಟ್, ಹೊಸ ದೆಹಲಿ.

೩೮. ಮೋಹನ ಕುಂಟಾರ್, ೨೦೧೫, ಭಾಷಾಂತರ ಪ್ರಕ್ರಿಯೆ ಪ್ರೇರಣೆ–ಪ್ರಭಾವ, ಯಾಜಿ ಪ್ರಕಾಶನ, ಹೊಸಪೇಟೆ.

೩೯. ರವೀಂದ್ರನಾಥ ಕೆ, (ಸಂ), ೨೦೧೧, ಅಧ್ಯಯನದ ವಿಧಿವಿಧಾನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೦. ರಮಾಕಾಂತ ಜೋಶಿ, ದಿವಾಕರ್ ಎಸ್.,(ಸಂ), ೨೦೧೧, ಎ.ಕೆ.ರಾಮಾನುಜನ್ ಸಮಗ್ರ, ಮನೋಹರ ಗ್ರಂಥ ಮಾಲಾ, ಧಾರವಾಡ.

೪೧. ರಾಘವೇಂದ್ರ ರಾವ್ ಎಚ್.ಎಸ್., ೨೦೧೩, ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ : ಸಂಪುಟ–೨, ಭಾಗ–೨, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.

೪೨. ರಾಘವೇಂದ್ರ ರಾವ್ ಎಚ್.ಎಸ್., ೧೯೮೯, ನಿಲುವು, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು.

೪೩. ರಾಮಚಂದ್ರನ್ ಸಿ.ಎನ್., ೨೦೧೫, ಭಾಷಾಂತರಃ ಸೈದ್ಧಾಂತಿಕ ಹಾಗೂ ಅನ್ವಯಿಕ ನೆಲೆಗಳು, ಮನೋಹರ ಗ್ರಂಥಮಾಲಾ, ಧಾರವಾಡ.

೪೪. ರಾಮಾನುಜನ್ ಎ.ಕೆ. (ಅನು.) ೧೯೯೭, ಹಳದಿ ಮೀನು, ಮನೋಹರ ಗ್ರಂಥಮಾಲ, ಧಾರವಾಡ.

೪೫. ರಾಮಾನುಜನ್ ಎ.ಕೆ., ೧೯೫೫, ಗಾದೆಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪೬. ರಾಮಾನುಜನ್ ಎ.ಕೆ., ೧೯೬೯, ಹೊಕ್ಕುಳಲ್ಲಿ ಹೂವಿಲ್ಲ, ಮನೋಹರ ಗ್ರಂಥ ಪ್ರಕಾಶನ, ಧಾರವಾಡ.

೪೭. ರಾಮಾನುಜನ್ ಎ.ಕೆ., ೧೯೭೭, ... ಮತ್ತು ಇತರ ಪದ್ಯಗಳು, ಮನೋಹರ ಗ್ರಂಥಮಾಲಾ, ಧಾರವಾಡ.

೪೮. ರಾಮಾನುಜನ್ ಎ.ಕೆ., ೧೯೭೮, ಮತ್ತೊಬ್ಬನ ಆತ್ಮ ಚರಿತ್ರೆ, ಮನೋಹರ ಗ್ರಂಥಮಾಲ, ಧಾರವಾಡ,

೪೯. ರಾಮಾನುಜನ್ ಎ.ಕೆ., ೧೯೯೭, ಕುಂಟೋಬಿಲ್ಲೆ, ಮನೋಹರ ಗ್ರಂಥಮಾಲಾ, ಧಾರವಾಡ. (ದ್ವಿ.ಮು).

೫೦. ಲಕ್ಷ್ಮೀನಾರಾಯಣ ಭಟ್ಟ ಎನ್.ಎಸ್. (ಸಂ), ಕನ್ನಡ ಸಾಹಿತ್ಯ ಪ್ರತಿಭೆಯ ಸ್ವರೂಪ–ಒಂದು ತೌಲನಿಕ ಚಿಂತನೆ, ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ.

೫೧. ಲಂಕೇಶ್ ಪಿ. (ಸಂ), ೧೯೭೨, ಅಕ್ಷರ ಹೊಸ ಕಾವ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು.

೫೨. ಸುಮತೀಂದ್ರ ನಾಡಿಗ, ೨೦೧೨, ಆರು ಕವನ ಸಂಕಲನಗಳು, ಸಪ್ನ ಬುಕ್ ಹೌಸ್, ಬೆಂಗಳೂರು.

೫೩. ಸುಮತೀದ್ರ ನಾಡಿಗ್, ೧೯೯೯, ಇನ್ನೊಂದು ಸಾಹಿತ್ಯ ಚರಿತ್ರೆ, ಕರ್ನಾಟಕ ಬುಕ್ ಏಜೆನ್ಸಿ, ಗಾಂಧಿನಗರ, ಬೆಂಗಳೂರು

೫೪. ಸುಂದರಂ ಆರ್.ವಿ.ಎಸ್., 'ಅಂತರ್ ವಿಭಾಗೀಯ ಸಂಶೋಧನೆ'–ಶ್ರೀಮುಖ

೫೫. ವೀರಭದ್ರಗೌಡ ಜಿ. (ಅನು), ೨೦೧೨, ಓಲ್ಗಾ, ವಿಮುಕ್ತ, ತೆಲುಗು ಕಥಾ ಜಗತ್ತಿನ ಜೊತೆಗೊಂದು ಮಾತುಕಥೆ, ಅಭಿನವ, ಬೆಂಗಳೂರು.

೫೬. ವೆಂಕಟೇಶಮೂರ್ತಿ ಎಚ್.ಎಸ್. (ಸಂ), ೨೦೦೧, ಶತಮಾನದ ಕಾವ್ಯ, ಕನಾಟಕ ಸಾಹಿತ್ಯ ಅಕಾದೆಮಿ.

೫೭. ವಿಶ್ವನಾಥ ಬಡಿಕಾನ, ೧೯೯೫, ಡಾ.ಎ.ಕೆ.ರಾಮಾನುಜನ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೮. ವಿಸ್ಸಾ ಅಪ್ಪಾರಾವು (ಸಂ.), ಕ್ಷೇತ್ರಯ್ಯ ಪದಮುಲು,

೫೯. ಶಿವಪ್ರಕಾಶ್ ಎಚ್.ಎಸ್., ೧೯೯೫, ಮೊದಲ ಕಟ್ಟಿನ ಗದ್ಯ, ಅಭಿನವ, ರಾಜಾಜಿನಗರ, ಬೆಂಗಳೂರು.

೬೦. ಶಿವಶಂಕರ ಚಕ್ಕೆರೆ, ಅಬ್ದುಲ್ ಬಷೀರ್ ಜಿ. (ಸಂ), ೨೦೦೩, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ ೮೧, ಸಂಚಿಕೆ ೧: ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೬೧. ೪೩ ಕವನಗಳು, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ.

ಪತ್ರಿಕೆಗಳು

೧. ಈನಾಡು ಪತ್ರಿಕೆ, ಕನ್ನಡ ಎಡಿಶನ್, ದಿನಾಂಕ : ಸೆಪ್ಟಂಬರ್ ೪, ೧೯೯೨ (ಭಾರತೀಯತಕು ಅದ್ದಂ ಜಾನಪದ ಸಾಹಿತ್ಯಂ' ಎಂಬ ಶೀರ್ಷಿಕೆಯಡಿಯಲ್ಲಿ ಪ್ರೊ. ಘಟ್ಟಮರಾಜು ಅಶ್ವತ್ಥನಾರಾಯಣ ಅವರು ಎ.ಕೆ.ರಾಮಾನುಜನ್ ಅವರನ್ನು ಸಂದರ್ಶನ ಮಾಡಿದ್ದಾರೆ.)

೨. ಪ್ರಜಾವಾಣಿ, ಮೆಟ್ರೋ, ದಿನಾಂಕ : ಬುದವಾರ, ಜುಲೈ ೧೩, ೨೦೧೬ (ಎ.ಕೆ.ರಾಮಾನುಜನ್ ಅವರ ಕವಿತೆಗಳಿಗೆ ರಚಿಸಿದ ಕಲಾಕೃತಿಗಳ ಪ್ರದರ್ಶನ. ಕಲಾವಿದ ಎಸ್.ಜಿ.ವಾಸುದೇವ್ ಅವರ ಸಂದರ್ಶನ – ಸಂದರ್ಶಕರು : ಶ್ರೀ ಪದ್ಮನಾಭ ಭಟ್)

೩. ಪ್ರಜಾವಾಣಿ, ಮುಕ್ತಛಂದ, ದಿನಾಂಕ : ಭಾನುವಾರ, ಫೆಬ್ರವರಿ ೫, ೨೦೧೭ (ಡಾ.ಚಂದ್ರಶೇಖರ ಕಂಬಾರ ಅವರ ಸಂದರ್ಶನ – ಸಂದರ್ಶಕರು ಡಾ. ಎಂ.ಎಸ್. ಆಶಾದೇವಿ)

ಉಪನ್ಯಾಸಗಳು

೧. ದಿನಾಂಕ.೧೭.೮.೨೦೧೩ರಲ್ಲಿ ಸುಚಿತ್ರಾ ಸಿನೆಮಾ ಅಕಾಡೆಮಿ ನಡೆಸಿದ 'ಸಾಹಿತ್ಯ ಸಂಜೆ' ಕಾರ್ಯಕ್ರಮದಲ್ಲಿ ಪ್ರೊ.ಓ.ಎಲ್.ನಾಗಭೂಷಣಸ್ವಾಮಿ ಅವರು ಎ.ಕೆ.ರಾಮಾನುಜನ್ ಅವರನ್ನು ಕುರಿತ ಉಪನ್ಯಾಸವನ್ನು ನೀಡಿದರು.

୭. Reference Books : English

1. Benjamin Walter: 'The Task of the Translate' Tr. Harry Zohn, in Lawrence Venuti. ed., 2000, The Translation Studies Reader, London, New York, Routledge.
2. Bijay Kumar Das, 2013, Perspectives on the Poetry of A.K.Ramanujan, Doaba House Booksellers and Publishers, Naik Sarak, Delhi.
3. Bruce King, Ed., 1989, Modern Indian Poetry in English, Oxford Universitry Press, New Delhi.
4. Girish Kharnad, A.K.Ramanujan Memorial Lecture, Ramjas College, University of Delhi, on 21st March 2012
5. Guillermo Rodrigues, 2016, When Mirrors are Windows-A View of A.K.Ramanujan's Poetics, Oxford University Press, New Delhi.
6. Indian Literature, Bi-Monthly Journal (254), Sahitya Akademi, November/December 2009,
7. Oxford Indian Ramanujan: Edited Molly Daniels - Ramanujan, 2004, Oxford University Press, New Delhi.
8. Ramanujan A. K., Velcheru Narayana Rao and David Shulman, (Tr.) 1995, When God is a Customer - Telugu Courtesan Songs by Ksetrayya and other, Oxford University Press, New Delhi.
9. Ramanujan A. K., 1976, 'Sanskara : A Rite for a Dead Man' Oxford University Press, New Delhi.

10. Ramanujan A.K., (Tr.), 2005, Hymns for the Drowning: Poems for Visnu by Nammalvar, Penguin India, New Delhi.

11. Ramanujan A.K., (Sel. Tr.) 1985, Poems of Love and War- from the Eight Antholofies and the Ten Long Poems of Classical Tamil, Oxford University Press, New Delhi.

12. Ramanujan A.K., 1973, Speaking of Siva, Penguin Books, London.

13. Ramanujan A.K., Edited with a Preface by - Stuart Blackburn and Alan Dundes, 1997, A Flowering Tree - And other oral tales from India : Penguin Books, New Delhi.

14. Ramanujan A.K., Selected and Edited, 2009, Folktales from India- A selection of Oral Tales from Twenty-two Langueages, Penguin Books, New Delhi.

15. Ramanunan A.K., 1967, The Interior Landscape: Love Poems from a Classical Tamil Anthology, Bloomington, Indiana University.

16. Tejaswini Niranjana, 1992, Siting Translation: History Post Structuralism, and the Colonial Context, Orient Longman, Paper Back, Hyderabad.

17. Tonse N.K.Raju and Shouri Daniels-Ramanujan, Advisory Editor, Prithvi Datta Chandra Shobhi, 2006, A.K.Ramanujan Poems and a Novella, Oxford University Press, New Delhi.

18. Uncollected Poems and Prose A.K.Ramanujan, Ed.by Molly Daniels-Ramanujan and Keith Harrison, Oxford University Press, New Delhi.2001

19. Vasant A Shahane, M.Sivaramakrishna, Ed., 1980, Indian Poetry in English-A Critical Assessment, The Macmillan Company of Indian Limited, New Delhi.

20. Vasudev S.G., Tribute to Ramanujan, July-Aug 9, 2016, Galerie De'Arts, Bangalore.

21. Vinay Dharwadker (Gn.Ed.), 1999, The Collected Essays of A.K.Ramanujan, Oxford University Press, New Delhi.

22. Vinay Dharwadker : Ramanujan's Theory and practice, Ed. Susan Bassnett, 1999, Post-Colonial Translation Theory and Practice, Routledge, London.


23. Vinay Dharwadker, (Intro.) 1995, The Collected Poems of A.K. Ramanujan, Oxford University Press, New Delhi.

24. Vinay Dharwadker, 1999, Ramanujan's Theory and practice, in ed: Susan Bassnett and Harish Trivedi, Post-colonial translation: Theory and Practice, Routeledge, London.


ಎ.ಕೆ. ರಾಮಾನುಜನ್, ಮೈಸೂರಿನ ಮನೆಯಲ್ಲಿ ರೇಡಿಯೋ ಆಲಿಸುತ್ತಿರುವುದು – 1947


ಎ.ಕೆ. ರಾಮಾನುಜನ್ ತಮ್ಮ ಸಹೋದರಿ ಸರೋಜ ಅವರ ಜೊತೆ ಮೈಸೂರಿನ ಮನೆಯಲ್ಲಿ – 1947


ಎ.ಕೆ. ರಾಮಾನುಜನ್ ಅವರು ಸಂಶೋಧಕ ಪ್ರೊ. ಟಿ.ವಿ. ವೆಂಕಟಾಚಲಶಾಸ್ತ್ರಿ ಅವರ ಜೊತೆ



ಎ.ಕೆ. ರಾಮಾನುಜನ್ ಉಪನ್ಯಾಸವೊಂದರಲ್ಲಿ – 1983



ಎ.ಕೆ. ರಾಮಾನುಜನ್ ಮತ್ತು ಅವರ ಸಹೋದರರು



ಎ.ಕೆ. ರಾಮಾನುಜನ್ ಅವರು ಖ್ಯಾತ ಲೇಖಕರಾದ ಡಾ. ಯು.ಆರ್. ಅನಂತಮೂರ್ತಿ ಅವರ ಜೊತೆ – 1976




ಖ್ಯಾತ ನಾಟಕಕಾರರಾದ ಡಾ. ಗಿರೀಶ್ ಕಾರ್ನಾಡ್ ಅವರು ಎ.ಕೆ. ರಾಮಾನುಜನ್
ಕುರಿತ ಉಪನ್ಯಾಸವೊಂದರಲ್ಲಿ – 2012, ನವದೆಹಲಿ



ಎ.ಕೆ. ರಾಮಾನುಜನ್ ಅವರ ಸ್ಮರಣಾರ್ಥ ಖ್ಯಾತ ಕಲಾವಿದ ಎಸ್.ಜಿ. ವಾಸುದೇವ್ ಅವರು ಆಯೋಜಿಸಿದ
'ರಾಮಾನುಜನ್ ಅವರ ಕವನ–ಚಿತ್ರ ಪ್ರದರ್ಶನ' ಉದ್ಘಾಟನಾ ಕಾರ್ಯಕ್ರಮ, ಬೆಂಗಳೂರು – 13, ಜುಲೈ, 2016




ಎ.ಕೆ. ರಾಮಾನುಜನ್ ಅವರು ತಮ್ಮ ಪತ್ನಿ ಶ್ರೀಮತಿ ಮಾಲಿ ಡ್ಯಾನಿಯಲ್ ಅವರ ಜೊತೆ.
ಪಕ್ಕದಲ್ಲಿ ಅಮೆರಿಕಾದ ಪ್ರಸಿದ್ಧ ಲೇಖಕರಾದ ಸ್ಮಿತ್ ಇದ್ದಾರೆ – 1962



ಎ.ಕೆ. ರಾಮಾನುಜನ್ ದೆಹಲಿ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ
ಉಪನ್ಯಾಸ ನೀಡುತ್ತಿರುವುದು – 1983



ಎ.ಕೆ. ರಾಮಾನುಜನ್ ಖ್ಯಾತ ಕಾದಂಬರಿಕಾರ ಆರ್.ಕೆ. ನಾರಾಯಣ್ ಮತ್ತು ಕವಿ
ಶಾ. ಬಾಲುರಾವ್ ಅವರ ಜೊತೆ – 1992




Self-Portrait

I resemble everyone
but myself, and sometimes see
in shopwindows,
despite the well-known laws
of optics,
the portrait of a stranger,
date unknown,
often signed in a corner
by my father.


A.K. Ramanujan, handwritten draft of
'Self-Portrait' from *The Striders**



ಎ.ಕೆ. ರಾಮಾನುಜನ್ ಅವರು ಮೈಸೂರಿನ ತಮ್ಮ ಮನೆಯ
ಮಹಡಿಯ ಮೇಲೆ ನಿಂತಿರುವುದು – 1949




ಎ.ಕೆ. ರಾಮಾನುಜನ್ ಚಿಕಾಗೋ ವಿಶ್ವವಿದ್ಯಾಲಯ, ಅಮೆರಿಕಾ – 1981



ಎ.ಕೆ. ರಾಮಾನುಜನ್ – 1966




ಎ.ಕೆ. ರಾಮಾನುಜನ್ ದೆಹಲಿ ವಿಶ್ವವಿದ್ಯಾಲಯ – 1983




ಎ.ಕೆ. ರಾಮಾನುಜನ್ – 1980


ಎ.ಕೆ. ರಾಮಾನುಜನ್ ಅವರ ಕೆಲವು ಮುಖ್ಯ ಇಂಗ್ಲಿಷ್ ಪುಸ್ತಕಗಳು





ಎ.ಕೆ. ರಾಮಾನುಜನ್ ಅವರ ಕೆಲವು ಮುಖ್ಯ ಕನ್ನಡ ಪುಸ್ತಕಗಳು






















ಎ.ಕೆ. ರಾಮಾನುಜನ್ ಅವರ
Folk Tales from India
ಕೃತಿಯ ಕನ್ನಡ ಅನುವಾದಿತ ಜನಪದ ಕಥೆಗಳು



ಎ.ಕೆ. ರಾಮಾನುಜನ್ ಅವರ
A Flowering Tree and Other Stories
(Folk Tales from Karnataka)
ಕೃತಿಯ ಕನ್ನಡ ಅನುವಾದಿತ ಜನಪದ ಕಥೆಗಳು

ಭಾಷಾಂತರ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ